ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 2—7—1948 [ಸಂಚಿಕೆ 26]

ಯುರೋಪದ ಕಡೆಯಿಂದ ಶುಭ ವರ್ತಮಾನ

ಭೀಕರ ಯುದ್ಧ ದೆಸೆಯಿಂದ ತಲೆಯೆತ್ತುತ್ತಿದೆ

ಜರ್ಮನ್ ಕೈಗಾರಿಗೆಯು ಪುನರುದ್ಧಾರ

ಯುರೋಪಿನ ಕಷ್ಟ ಸಂಕಷ್ಟಗಳ ಕುರಿತು ಅಮೇರಿಕನ್ ಪತ್ರಿಕೆಗಳಲ್ಲಿ ದಪ್ಪದ ಶಿರೋನಾಮೆಗಳು ಪ್ರಕಟವಾಗುತ್ತವೆ ಮುಷ್ಕರಗಳು ಬೆಲೆ ಏರಿತ ಹಸಿವು ರಾಜಕೀಯ ಸ್ಥಿತ್ಯಂತರಗಳು, ಕೊಮ್ಯುನಿಸ್ಟ ಒಳಸಂಚುಗಳು ಆದರೆ ಇವುಗಳಿಗಿಂತಲೂ ಹೆಚ್ಚು ಗಣನೀಯವಾದ ಆದರೆ ಇನ್ನೂ ಹೆಚ್ಚಿನವರಿಂದ ಗಮನಿಸಲ್ಪಡದ ಇತರ ಹೃದಯಂಗಮ ಸಂಗತಿಗಳು ಹಿರವೆ

ಅತ್ಯಂತ ವಿನಾಶಕಾರಿಯಾದ ಯುದ್ಧದ ಮೂರು ವರ್ಷಗಳ ನಂತರ ಯುರೋಪು ಆರ್ಥಿಕವಾಗಿ ಪುನಃ ಚೇತರಿಸಿಕೊಳ್ಳುತ್ತಿದೆ ತನ್ನಲ್ಲಿನ್ನು ಶಕ್ತಿ ನಿರ್ಧಾರಗಳು ಇವೆಯೆಂದು ಅಲ್ಲಿನ ಜನರು ಪ್ರದರ್ಶಿಸಿರುವರು ನಿರ್ಧಾರಯುಕ್ತವಾದ ಯುರೋಪು ವಿಕಾಸಗೊಂಡ ಸಮರಸವಾದ ಆರ್ಥಿಕ ಯೋಜನೆಯಿಂದ ಮುಂದುವರಿಯುತ್ತಿದೆ

ಈ ಸಂಗತಿಗಳನ್ನು ಅಭ್ಯಸಿಸಿದ ಸಂಯುಕ್ತ ಅಮೇರಿಕದ ಪ್ರತಿನಿಧಿ ಕ್ರಿಶ್ಚಿನ್ ಹರ್ಟರರು "ನಾವು ಹೆಚ್ಚಿನ ಸಹಾಯ ನೀಡಬೇಕಾದುದು ಯುರೋಪನ್ನು ರಕ್ಷಿಸ[illegible] ಆದರೆ ಯುರೋಪು ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಕೆಲಸದಲ್ಲಿ ಸಹಾಯ ಮಾಡಲು ಈ ಹೆಚ್ಚಿನ ಸಹಾಯವು ಕೊಡಲ್ಪಡುವುದು" ಎಂದು ವಿವರಿಸಿದರು.

ಚಮತ್ಕಾರ ಘಟನೆ

ಈ ಮೂರು ವರ್ಷಗಳಲ್ಲಿ ಯುರೋಪಿನ ಕಾರ್ಖಾನೆಗಳಲ್ಲಿ ನಡೆದ, ಚಮತ್ಕಾರಿಕ ಪ್ರಗತಿಯನ್ನು ಪರಿಶೀಲಿಸೋಣ ಬ್ರಿಟನ್, ಡೆನ್ಮಾರ್ಕ, ಬೆಲ್ಜಿಯಂ, ನೊರ್ವೆ ಮತ್ತು ಸ್ವೀಡನುಗಳಲ್ಲಿ ಯುದ್ಧ ಮುಂಚಿನ ವರ್ಷಕ್ಕಿಂತ ಹೆಚ್ಚು ವಸ್ತುಗಳು ತಯಾರಾಗಿವೆ. ೧೯೪೭ರಲ್ಲಿ ಫ್ರಾನ್ಸಿನ ಯುದ್ಧ ಜರ್ಝರಿತ ಕಾರ್ಖಾನೆಗಳು ಯುದ್ಧ ಮುಂಚಿನ ವರ್ಷದ ೯೯ರಷ್ಟು ವಸ್ತುಗಳನ್ನು ತಯಾರಿಸಿದವು. ಹೆಚ್ಚಿನ ಅಮೇರಿಕನ್ ಯಂತ್ರಗಳ ಸಹಾಯದಿಂದ ಅಲ್ಲಿನ ಕಾರ್ಖಾನೆಗಳು ದುರಸ್ತಿ ಮಾಡಲ್ಪಟ್ಟು ಸುವ್ಯವಸ್ಥಿತಗೊಳಿಸಲ್ಪಟ್ಟ ಪರಿಣಾಮವಾಗಿ ಈಗವು ಶೇಕಡಾ ೧೧೫ರಷ್ಟು ಉತ್ಪತ್ತಿಗಳನ್ನು ಮಾಡುತ್ತಿವೆ.

೧೯೪೫ರ ಸುಮಾರಿಗೆ ಇಟಲಿಯ ಕೈಗಾರಿಕೆಗಳು ಸಂಪೂರ್ಣ ಸ್ತಬ್ಧವಾದ್ದವು. ಯುದ್ಧಪೂರ್ವದ ಕೇವಲ ಶೇಕಡಾ ೨೦ರಷ್ಟು ಪ್ರಮಾಣಕ್ಕೆ ಅಲ್ಲಿನ ತಯಾರಿಗಳು ಇಳಿದಿದ್ದವು ಈಗ ಇಟಲಿಯ ಕಾರ್ಖಾನೆಗಳು ಯುದ್ಧಪೂರ್ವದ ಶೇಕಡಾ ೭೦ರಷ್ಟು ಉತ್ಪತ್ತಿಸುತ್ತವೆ

ಹೊಲೆಂಡಿನಲ್ಲಿ ಯುದ್ಧ ಮುಗಿದಾಗ ಅಲ್ಲಿನ ಕಾರ್ಖಾನೆಗಳಲ್ಲಿನ ಪ್ರತಿ ಮೂರು ಯಂತ್ರಗಳಲ್ಲಿ ಒಂದರಂತೆ ನಾಶವಾಗಿದ್ದವು ಇಲ್ಲವೆ ಕಳವಾಗಿದ್ದವು ಅಲ್ಲಿನ ಕೈಗಾರಿಕೆ ಉತ್ಪತ್ತಿ ೧೯೪೫ರ ಒಟ್ಟು ಮೊತ್ತದ ಶೇಕಡಾ ೩೦ರಷ್ಟಕ್ಕೆ ಕಡಿಮೆಯಾಗಿದ್ದವು, ಅಮೇರಿಕನ್ ಸಹಾಯದ ಫಲವಾಗಿ ಈಗ ಅಲ್ಲಿನ ಕಾರ್ಖಾನೆ ಉತ್ಪತ್ತಿಯು ಯುದ್ಧಪೂರ್ವದ ಶೇಕಡಾ ೧೦೫ರಷ್ಟು ಹೆಚ್ಚಿದೆ. ಅದೇ ರೀತಿ ಬೆಲ್ಜಿಯಮಿನ ೧೩ ಮುಖ್ಯ ಕೈಗಾರಿಕೆಗಳ ಉತ್ಪತ್ತಿ ಪ್ರಮಾಣವು ೧೯೪೭ರ ಅಂತ್ಯಕ್ಕೆ ಯುದ್ಧದ ಪೂರ್ವಕ್ಕಿಂತ ಶೇಕಡಾ ೭೫ರಷ್ಟು ಹೆಚ್ಚಿದುವು

ಮಾರ್ಶೆಲ್ ಯೋಜನೆಯ ಉದ್ದೇಶ

ಇಂದು ಮಾರ್ಶಲ್ ಯೋಜನೆಯನ್ನು ಸಹಾಯ ಪಡೆಯಲು ಚುನಾಯಿತವಾದ ಯುರೋಪಿನ ಹಡಗು ತಯಾರಿ ಕೇಂದ್ರಗಳು ಯುದ್ಧ ಕಾಲದಲ್ಲಿ ಜರ್ಮನ್ ಬಾಂಬುಗಳ ಪ್ರಮುಖ ಗುರಿಯಾಗಿದ್ದವು. ಆದರೆ ಇವುಗಳ ಪುನರ್ಚೇತನ ಕಾರ್ಯವು ಅದೆಷ್ಟು ಭರದಿಂದ ಸಾಗಿತೆಂದರೆ ೧೯೪೭ರ ಅಂತ್ಯಕ್ಕೆ ಇವು ೧೯೩೮ರಲ್ಲಿ ೧೩೦ ಕೋಟಿ ಕಿಲೊವೆಟ್ ಶಕ್ತಿಯನ್ನುತ್ಪಾದಿಸಿದ್ದವು. ಕಳೆದ ವರ್ಷ ಇವು ೧೬೦ ಕೋಟಿ ಕಿಲೊ ವೆಟ್ ಶಕ್ತಿಯನ್ನು ಉತ್ಪಾದಿಸಿವೆ.

೧೯೪೫ರಲ್ಲಿ ಯುರೋಪಿನ (ಬ್ರಿಟನನ್ನು ಬಿಟ್ಟು) ಕಲ್ಲಿದ್ದಲು ಉತ್ಪತ್ತಿಯು ಯುದ್ಧಪೂರ್ವದ ಶೇಕಡಾ ೪೧ರಷ್ಟಕ್ಕೆ ಕಡಿಮೆಯಾಗಿತ್ತು. ಈಗದು ಪುನಃ ಶೇಕಡಾ ೯೦ರಷ್ಟು ಮೇಲೇರಿದೆ.

[illegible] ಯುರೋಪಿನ ರೈಲು ಮಾರ್ಗ ವ್ಯವಸ್ಥೆಗಾದಷ್ಟು ಹಾನಿ ಯುರೋಪಿನ ಯಾವ ಕೈಗಾರಿಕೆಗಳಿಗೂ ಆಗಲಿಲ್ಲ ಫ್ರಾನ್ಸಿನ ರೈಲು ವ್ಯವಸ್ಥೆಯು ಶೇಕಡಾ [illegible]ರಷ್ಟು ಸಂಪೂರ್ಣ ವಿನಾಶಕ್ಕೊಳಗಾಗಿತ್ತು ಇಟಲಿಯಲ್ಲಿ ಶೇಕಡಾ [illegible]ರಷ್ಟು ಹೊಲೆಂಡಿನಲ್ಲಿ ಶೇಕಡಾ [illegible]ರಷ್ಟು ಬೆಲ್ಜಿಯಮಿನಲ್ಲಿ ಶೇಕಡಾ [illegible]ರಷ್ಟು ರೈಲು ವ್ಯವಸ್ಥೆ ಹಾನಿಗೀಡಾಗಿತ್ತು ಕಳೆದ ವರ್ಷ ಅಮೇರಿಕನ್ ಸಹಾಯದಿಂದ ಈ ರೈಲು ಮಾರ್ಗಗಳನ್ನು ದುರಸ್ತಿಮಾಡುವುದರ ಮತ್ತು ಹಳೆಯದನ್ನು ಪುನರ್ವ್ಯವಸ್ಥಿತಗೊಳಿಸುವುದರ ಮೂಲಕ ಈ ರೈಲು ಮಾರ್ಗಗಳು ೧೯೩೮ರಲ್ಲಿ ಹೊತ್ತು ಓಡಿದ ಹೆಚ್ಚಿನ ಪ್ರಯಾಣದ ಜನರನ್ನು ಸರಕನ್ನು ಒಯ್ದಿವೆ

ಜರ್ಮನರ ಕಾರ್ಯ

ಹೊಲೆಂಡಿನ ಮುಖ್ಯ ಉದ್ಯಮ ಹಡಗು ಸಾಗಾಟ ಅಲ್ಲಿನ ಮುಖ್ಯ ಬಂದರು ರೊಟರ್ಡೇಮು ಯುದ್ಧಕ್ಕೆ ಮುಂಚೆ ಯುರೋಪುಖಂಡ ಭಾಗದಲ್ಲಿ ಇದು ಅತೀ ದೊಡ್ಡದು. ಜರ್ಮನರು ಹಿಂದೆ ಸರಿಯುವಾಗ ಇದನ್ನು ಸ್ಫೋಟಕ್ಕೊಳಮಾಡಿದರು. ಪರಿಣಾಮ ಅಲ್ಲಿ ಹಡಗು ಸಾಗಿಸುವಿಕೆಯ ಶೇಕಡಾ ೮೦ರಷ್ಟು ಸೌಕರ್ಯಗಳು ನಾಶವಾದುವು. ಆದರೆ ಡಚ್ ಜನರ ನಿರ್ಧಾರವು ಅಜೇಯವಾದುದು. ನಿರೀಕ್ಷಕರಿಂದ ನಿರುಪಯುಕ್ತವಾಯಿತೆಂದು ಪರಿಗಣಿಸಲ್ಪಟ್ಟ ರೊಟರ್ಡೇಮು ಇಂದು ಯುದ್ಧಪೂರ್ವದಷ್ಟೇ ಕಾಳು ಮತ್ತು ಎಣ್ಣೆ ಸಂಗ್ರಹಾಲಯಗಳಿಂದಲೂ, ಯುದ್ಧಪೂರ್ವದ ಅದರ ಹಡಗು ದುರಸ್ತಿ ಕಾರ್ಯವು ಶೇಕಡಾ ೯೪ರಷ್ಟು, ಶೇಕಡಾ ೫೦ರಷ್ಟು ನಾಶಹೊಂದಿದ ಆ ದೇಶದ ವಾಣಿಜ್ಯ ಹಡಗುಗಳು ಈಗ ಶೇಕಡಾ ೮೩ರಷ್ಟು ಆಗಿವೆ

ಕೃಷಿ ಉತ್ಪಾದನೆ

ಕೈಗಾರಿಕೆಯಂತೆ ಯುರೋಪಿನ ಕೃಷಿಗಾರಿಕೆಯೂ ಅಭಿವೃದ್ಧಿಹೊಂದಿದೆ ಕಳೆದ ವರ್ಷದ ಬೇಸಿಗೆಯಲ್ಲಿ ಬೀಸಿದ [illegible] ಬೆಳೆಗಳಿಗೆ ಸ್ವಲ್ಪ ಕೊರತೆತಟ್ಟಿರುವುದು ಈ ಸಲದ ಬೆಳೆಗಾಲದಲ್ಲಿ ಫ್ರಾನ್ಸ್ ಯುದ್ಧಪೂರ್ವಕ್ಕಿಂತ ಶೇಕಡಾ ೧೦ರಷ್ಟು ಹೆಚ್ಚು ಗೋಧಿ ಉತ್ಪಾದನೆಯಾಗಿದೆ ಹೊಲೆಂಡಿನ ಕೃಷಿ ಉತ್ಪತ್ತಿಗಳು ಯುದ್ಧಪೂರ್ವದ ಶೇಕಡಾ ೭೫ರಷ್ಟು ಸುಧಾರಿಸಿವೆ ಇಟಲಿಯು ಯುದ್ಧಪೂರ್ವದ ೭೦ರಷ್ಟರ ಮಟ್ಟಕ್ಕೆ ಬಂದಿದೆ ನಾರ್ವೆಯು ಸಂಪೂರ್ಣ ಆಹಾರ ಸ್ವಾವಲಂಬಿನಿಯಾಗಿದೆಂದೂ, ತನಗೆ ಆಹಾರ ವಸ್ತುಗಳನ್ನು ಕಳುಹಿಸುವುದು ಅವಶ್ಯವಿಲ್ಲವೆಂದೂ ಅವರು ಅಮೇರಿಕನ್ನರಿಗೆ ತಿಳಿಸಿದರು.

ಐರೋಪ್ಯರ ಆದರ್ಶ

ಈ ಬೃಹತ್ತಾದ ಪುನರ್ನಿರ್ಮಾಣಕ್ಕೆ ಟೊಂಕಕಟ್ಟಿ ಕಾರ್ಯತತ್ಪರಗಿದ ಐರೋಪ್ಯರ ಆಸಕ್ತಿಯು ಆದರ್ಶಪ್ರಾಯ ಫ್ರಾನ್ಸಿನ ಕೆಲಸಗಾರನಿಗೆ ಇಂದು ಯುದ್ಧಪೂರ್ವದ ಅರ್ಧಾಂಶ ಮಾಂಸ ಸಿಗುತ್ತದೆ ಅವನಿಗೆ ಸಿಗುವ ಬ್ರೆಡ್ಡು ಜರ್ಮನ್ ಆಕ್ರಮಣದ ಕಾಲದಲ್ಲಿ ಅವನಿಗೆ ದೊರೆಯುತ್ತಿದ್ದುದಕ್ಕಿಂತ ಕಡಿಮೆ ಆದರೂ ಅವನು ತನ್ನ ವಾರದ ಕೆಲಸ ಪ್ರಹರಗಳನ್ನು ೪೦ ಗಂಟೆಯಿಂದ ಈಗ ೪೫ ಗಂಟೆಗೆ ಹೆಚ್ಚಿಸಿಕೊಳ್ಳಲು ಒಪ್ಪಿದ್ದಾನೆ ಸಾಕಷ್ಟು ಕಚ್ಚಾ ವಸ್ತುಗಳು ದೊರೆಯುವಂತಾದರೆ ಅವನು ೪೮ ಗಂಟೆ ವಾರಕ್ಕೂ ಒಪ್ಪಲು ಸಿದ್ಧ

ಇದರಿಂದ ಆ ಕಡೆಯ ಜನಾಂಗಗಳು ಗಂಡಾಂತರ ಪರಿಸ್ಥಿತಿಯಲ್ಲಿ ಹೇಗೆ ವರ್ತಿಸುತ್ತವೆ ಯಾವ ರಾಜಕೀಯ ಪ್ರತಿಭಟನೆಯನ್ನು ಲಕ್ಷಿಸದೆ ದುಡಲು ಅವರು ತಮ್ಮ ರಾಷ್ಟ್ರದ ಶ್ರೇಯಸ್ಸನ್ನು ಹೇಗೆ ಉಂಟುಮಾಡಿಕೊಳ್ಳುತ್ತಾರೆ ಎಂಬ ಸಂಗತಿಯು ಪ್ರತಿಯೊಂದು ಜನಾಂಗಕ್ಕೆ ಮುಖ್ಯವಾಗಿ ಕೈಗಾರಿಕೆಗಳಲ್ಲಿ ಹಿಂದೆ ಬಿದ್ದ ನಮ್ಮ ದೇಶಕ್ಕೆ ಆದರ್ಶವಾಗಿದೆ

ಉಷ್ಣವಲಯದ ವ್ಯಾಧಿಗಳ ಮೇಲೆ ಯುದ್ಧ

ಅಮೇರಿಕದಲ್ಲಿ ಕಾಯಕಲ್ಪ ಚಿಕಿತ್ಸೆ

ಆನೆಕಾಲಿಗೆ ಪರಿಣಾಮಕಾರಿ ಔಷಧಿ ಇದೆ

ವಾಷಿಂಗ್ಟನ್ನಿನ ಸರಕಾರಿ ಭವನದಲ್ಲಿ ಕೆಲ ವಾರಗಳ ಹಿಂದೆ 41 ಜನಾಂಗದ 2000 ವೈದ್ಯರೂ ವಿಜ್ಞಾನಿಗಳೂ ಸೇರಿ ಉಷ್ಣವಲಯದ ವ್ಯಾಧಿಗಳ ಮೇಲೆ ಹೇಗೆ ಯುದ್ಧ ಹೂಡಬಹುದೆಂದು ಪರ್ಯಾಲೋಚಿಸಿದರು. ಸಭೆಯಲ್ಲಿ ಒಂದೇ ಒಂದು ರಾಜಕೀಯ ಅಣು ಕೂಡ ಇರಲಿಲ್ಲ. ಆದರೆ ಈ ಪರಿಷತ್ತಿನ ಉದ್ಘಾಟಕರಾದ ಅಮೇರಿಕದ ರಾಜ್ಯಾಂಗ ಮಂತ್ರಿ ಜೋರ್ಜ್ ಮಾರ್ಶಲ್ಲರು ತಮ್ಮ ಭಾಷಣದಲ್ಲಿ "ಜಗತ್ತಿನಲ್ಲಿ ಒಳಿತನ್ನೇ ಮಾಡುವ ಉದ್ದೇಶದವರಿಲ್ಲಿ ಸೇರಿದುದು ದೊಡ್ಡ ದೈವ ಕೃಪೆ" ಎಂದರು.

ನಮ್ಮದು ಉಷ್ಣವಲಯ. ಇಲ್ಲಿಯ ನಿವಾಸಿಗಳ ಪ್ರಥಮ ಶತ್ರುವೆಂದರೆ ಮಲೇರಿಯಾ. ಇದು ವರ್ಷಂಪ್ರತಿ 30 ಕೋಟಿ ಜನರಿಗೆ ತಗಲುತ್ತದೆ, 30 ಲಕ್ಷ ಜನರನ್ನು ಆಹುತಿ ತೆಗೆದುಕೊಳ್ಳುತ್ತದೆ. ಆದರೆ ಸಾಮಾನ್ಯ ಮನೆಮಾರುಗಳಲ್ಲಿ ಸೀಡಿಸಲ್ಪಡಬಹುದಾದ ಡಿ. ಡಿ. ಟಿ ಜಂತುನಾಶಕ ಔಷಧಿಯಿಂದ ಮುಂದಿನ ಹತ್ತು ವರ್ಷಗಳಲ್ಲಿ ಜಗತ್ತಿನ ಶೇಕಡಾ 90ರಷ್ಟು ಮಲೇರಿಯಾವನ್ನು ನಿರ್ಮೂಲಿಸಬಹುದೆಂದು ಈ ವೈದ್ಯ ವಿದ್ವಜ್ಜರು ಒಮ್ಮತದ ಅಭಿಪ್ರಾಯ ಸೂಚಿಸಿದರು.

ಉಷ್ಣವಲಯದಲ್ಲಿ ಈ ರೀತಿ ಮಲೇರಿಯವನ್ನು ನಿರ್ಮೂಲಿಸಲು 280 ಮಿಲಿಯ ಡೊಲರುಗಳ ಖರ್ಚು ಬೇಕಾಗುವುದು ಮಾತ್ರವಲ್ಲ ಅಲ್ಲಿನ ಸರಕಾರಗಳು ಪ್ರತ್ಯೇಕ ಹೆಚ್ಚಿನ ಖರ್ಚನ್ನು ಮಾಡಬೇಕು ಆದರೆ ಈ ಸಂಬಂಧ ಒಂದು ಗಂಡಾಂತರವಿದೆ ಒಂದು ಮಲೇರಿಯಾ ನಿರ್ಮೂಲನ ಚಳವಳವನ್ನು ಪ್ರಾರಂಭಿಸುವುದು ಮತ್ತೆ ಹಣದ ಕೊರತೆಯಾಗಿ ಅದನ್ನು ನಿಲ್ಲಿಸುವುದು "ನಿರ್ಮೂಲನ ಕಾರ್ಯ ಅಲ್ಪ ಅವಧಿಯ ತನಕ ನಿಲ್ಲಿಸಿದರೂ ಮಲೇರಿಯಾ ವಾಹಕಗಳು (ಸೊಳ್ಳೆಗಳು) ಪುನರ್ ಪ್ರಾಪ್ತಿಯಾಗುವವು."

ಇನ್ನೊಂದು ಶತ್ರು

ಹೊಟ್ಟೆ ಹುಳಗಳು ಮಾನವಕೋಟಿಯ ಇನ್ನೊಂದು ಶತ್ರು ಜಗತ್ತಿನಲ್ಲಿ ಈ ಹುಳ ಬಾಧೆಯಿಂದ 200 ಕೋಟಿ ಜನರು ನರಳುತ್ತಾರೆ ಅರ್ಧ ಮಾನವಕೋಟಿಯು ವಸಾಹತಾಗಿರುವ ಉಷ್ಣವಲಯದಲ್ಲೇ ಇದರ ಹಾವಳಿ ಅತೀ ಹೆಚ್ಚು ಆ ಪ್ರದೇಶವು ಜಗತ್ತಿನ ಇತರ ಭಾಗಗಳಿಗೆ ಆಹಾರ ಮತ್ತು ಕಚ್ಚಾಪದಾರ್ಥಗಳನ್ನು ಪೂರೈಸುವ ದೊಡ್ಡ ಸಂಗ್ರಹ ಸ್ಥಾನವೂ ಆಗಿದೆ

ಆನೆಕಾಲು

ಪೆಸಿಫಿಕ್ ದ್ವೀಪ ಸ್ತೋಮಗಳಿಂದ ಆಗ್ನೇಯ ಆಸ್ಯದ ತನಕ ಇರುವ ಭೂಮಧ್ಯ ಆಫ್ರಿಕಾ, ದ. ಅಮೇರಿಕದ ಈಶಾನ್ಯ ಭಾಗದ ವರೆಗಿನ ಪ್ರದೇಶಗಳಲ್ಲಿ ಸುಮಾರು 19 ಕೋಟಿ ಜನರು ಫ್ಯಾಲೆರಿಯಾ ಎಂಬ ಮಾಂಸಖಂಡಗಳು ದೊಡ್ಡದಾಗುವ ಒಂದು ವ್ಯಾಧಿಯಿಂದ ನರಳುತಿದ್ದಾರೆ ಮತ್ತೆ 2 ಕೋಟಿ ಈ ಕಡೆಯ ಜನರಿಗೆ ದೃಷ್ಟಿಕ್ಷೀಣತೆಯನ್ನುಂಟುಮಾಡುವ ಒಂದು ತರದ ವ್ಯಾಧಿಯು ಹಾನಿಗೈಯುತ್ತದೆ ಫ್ಯಾಲೇರಿಯಾ ವ್ಯಾಧಿಗೆ ನಿಯೋಸ್ಟಿಬೊಸನ್ ಎಂಬೊಂದು ರಸಾಯನಿಕ ಮಿಶ್ರಣವು ಬಹಳ ಪರಿಣಾಮಕಾರಿ ಔಷಧಿಯೆಂದು ಸಿದ್ಧಾಂತ ಮಾಡಿ ತೋರಿಸಲಾಗಿದೆ.

ಒಂದು ತರದ ಪಿತ್ತಕೋಶ ವ್ಯಾಧಿಯೂ ಉಷ್ಣವಲಯದ ಜನರನ್ನು ಬಾಧಿಸುತ್ತದೆ. ಸುಮಾರು 11 ಕೋಟಿ ಜನರು ಇದರಿಂದ ವರ್ಷಂಪ್ರತಿ ಸಂಕಷ್ಟ ಪಡುತಿದ್ದಾರೆ ಜಗತ್ತಿನಲ್ಲಿ ಕೊಕ್ಕ ಹುಳ (ಜಂತು ಹುಳ)ದ ಬಾಧೆಯಿಂದ ಸುಮಾರು 46 ಕೋಟಿ ಜನರು ನರಳುವರು. 10 ಲಕ್ಷದಷ್ಟು ಇಂತಹ ರೋಗಿಗಳು ಸಂಯುಕ್ತ ಅಮೇರಿಕದಲ್ಲೇ ಇರುವರು ಮೇಲಿಂದ ಮೇಲೆ ತೀವ್ರವಾದ ಹೊಟ್ಟೆ ನೋವುವುಂಟಾಗುವುದು ಇದರ ಒಂದು ಸಹನಾತೀತವಾದ ಲಕ್ಷಣ. ಇದಕ್ಕೆ ರಾಮಬಾಣದಂತಿರುವ ಮದ್ದು ಇದುತನಕ ಯಾವುದೂ ಕಂಡುಹಿಡಿಯಲ್ಪಟ್ಟಿಲ್ಲ

★

ತರುಣರಾಗಿ ಬೆಳೆಯುವುದು ಹೇಗೆ?

ಈಗ ವೈದ್ಯರು ಮನುಷ್ಯರ ಜೀವನಾವಧಿಯನ್ನು ಹೆಚ್ಚಿಸುವ ವಿಧಾನಗಳನ್ನು ಕಂಡುಹಿಡಿದ್ದಾರಾದರೂ, ವೃದ್ಧಾಪ್ಯವು ಸುಖಪ್ರದವಾಗಿರುವಂತೆ ಮಾಡುವ ಪ್ರಯತ್ನಗಳಲ್ಲವರು ಇನ್ನೂ ಸಾಕಷ್ಟು ಯಶಸ್ಸು ಸಂಪಾದಿಸಿಲ್ಲ ಡಾ। ಪಿ. ವಾರ್ಡ್ ಕ್ರೆಂಪ್ಸನ್ ಎಂಬ ನ್ಯೂಯೋರ್ಕಿನ ಪ್ರಖ್ಯಾತ ವೈದ್ಯರೊಬ್ಬರು ಈ ಕುರಿತಾಗಿ ಕೆಲವು ಉಪಯುಕ್ತ ಸಲಹೆಗಳನ್ನು ಕೊಡುತ್ತಾರೆ

ಅವರ ಅಭಿಪ್ರಾಯದಲ್ಲಿ: ಮನುಷ್ಯನು ಒಂದೇ ಸವನೆ ವೃದ್ಧನಾಗುವುದಿಲ್ಲ, 65 ವರ್ಷದ ಮನುಷ್ಯನೊಬ್ಬನ ಹೃತ್ಕೋಶ 40 ವರ್ಷದವನಂತಿರಬಹುದು ಅವನ ಮೂತ್ರಕೋಶಗಳು 50 ವರ್ಷದವನದ್ದಂತಿರಬಹುದು. ಇಲ್ಲವೆ ಅವನ ಪಿತ್ತಕೋಶವು 80 ವರ್ಷದವನದ್ದಂತಿರಬಹುದು. ವೈದ್ಯತಜ್ಞನು ಓರ್ವ ವೃದ್ಧನ ಅತೀ ಮುದಿಯಾದ ಭಾಗ ಯಾವುದೆಂದು ಮೊದಲು ಕಂಡುಹಿಡಿಯಬೇಕು. ಮಾತ್ರವಲ್ಲ ಅವನ ಶರೀರೇಂದ್ರಿಯಗಳಲ್ಲಿ ಯಾವುವು ಧಕ್ಕೆಗೊಳಗಾಗಿವೆಯೆಂದೂ, ಅವನು ಯಾವ ತರದ ವ್ಯಥೆ, ಕಳವಳಗಳಿಂದ ಕಷ್ಟಪಡುತ್ತಿರುವನೆಂಬುದನ್ನೂ ಕಂಡುಹಿಡಿಯಬೇಕು ಅನಂತರ ವೃದ್ಧಾಪ್ಯ ವಿರುದ್ಧ ಪಥ್ಯಗಳನ್ನು ವೈದ್ಯನು ಸೂಚಿಸಬೇಕು ಉದಾ ಆಹಾರ ಸೇವನೆಯ ಕ್ರಮ ಹೇಗಿರಬೇಕು? ಎಂದರೆ 60 ಪ್ರಾಯದಲ್ಲಿ ಹೆಚ್ಚಿನವರಿಗೆ ಸಸಾರಜನಕ (protein)ಗಳು, ಕೆಲ್ಸಿಯಂ, ಮತ್ತು ಕಬ್ಬಿಣ ಸತ್ವಗಳು ಹೆಚ್ಚಾಗಿ ಬೇಕಾಗುತ್ತವೆ. ಅವರು ಕೊಬ್ಬಿನ (fat) ಪದಾರ್ಥಗಳನ್ನು ಅತೀ ಕಡಿಮೆ ತಿನ್ನಬೇಕು

ಇತರ ಸೂಚನೆಗಳು: ತಲೆಯೆತ್ತಿ ನಡೆಯಲು ಸಾಧ್ಯವಾಗುವ, ಹೊಟ್ಟೆ ಸಮತಟ್ಟಾಗಿರುವಂತಹ ಮತ್ತು ಶಕ್ತಿಯುಕ್ತವಾದ ಹೃತ್ಕೋಶವನ್ನುಂಟುಮಾಡುವಂತಹ ವ್ಯಾಯಾಮವು ಅತ್ಯಾವಶ್ಯಕ ಸ್ಪಷ್ಟವು ಮದ್ಯ ಸೇವನೆಯನ್ನು ತ್ಯಜಿಸುವುದ ಶ್ರೇಯಸ್ಕರ "ಮಾದಕ ಪದಾರ್ಥ ಮನುಷ್ಯನ ಹಿತ ಪರಿಚಯಸ್ಥನೂ, ಸಹಾಯಕಾ ಸ್ನೇಹಿತನೂ ಆಗಿರುವಂತೆ ಅದು ಅವನ [illegible] ಯಕಾರಕ ಶತ್ರುವೂ ಆಗಿದ್ದಾನೆ [illegible] ಡಾ। ಕ್ರೆಂಪ್ಸನ್ನರು ತಿಳಿಸುತ್ತಾರೆ ವಿಷ[illegible] ಸೇವನೆ ಮತ್ತು ರಕ್ತನಾಡಿಗಳು [illegible] [illegible] ಅತಿ ಭಾರದ [illegible] [illegible] ವಿಕ[illegible] ವೃದ್ಧಾಪ್ಯದ ಸವ ಸ್ಥಿತಿ [illegible] [illegible] ಅ ಪುಸ್ಸಿನ ತನ[illegible] ಬಹುಕಾಲದೇ ದುರ್ಬ[illegible]

ಜನಾಂಗಗಳ ವೃದ್ಧಾಪ್ಯ ವ್ಯಾಧಿಗಳ ಪರಿಹಾರವನ್ನು ಪರಿಶೋಧಿಸಲು ಹೆಚ್ಚು ಹಣ ಖರ್ಚು ಮಾಡಬೇಕು ಸಂಯುಕ್ತ ಅಮೇರಿಕದಲ್ಲಿ ಕೆನ್ಸರ್ ರೋಗದಿಂದ ಸಾಯುವವರ ಪ್ರತಿಯೊಬ್ಬರಿಗೆಂಬಂತೆ ಡಾಲರುಗಳಂತೆ ಅಲ್ಲಿ ವ್ಯಯಿಸಲಾಗುವುದು. ಬಾಲ್ಯವಾತದಿಂದ ಸಾಯುವವರ ಮೇಲೆ ತಲಾ 13 ಸಾವಿರ ಡೊಲರುಗಳಷ್ಟು ವ್ಯಯಿಸಲಾಗುವುದು ಆದರೆ ಸರ್ವಸಾಮಾನ್ಯವೂ ಹೆಚ್ಚು ಜನರನ್ನು ಬಲಿ ತೆಗೆದುಕೊಳ್ಳುವಂತಹುದೂ ಆದ ಹೃತ್ಕೋಶದ ವ್ಯಾಧಿಯ ಕುರಿತು ಅಮೇರಿಕನ್ ಸರಕಾರವು ತಲಾ ಕೆಲವೇ ಪೆಣಿಗಳನ್ನು ಮಾತ್ರ ವ್ಯಯಿಸುತ್ತಿರುವುದು ಖೇದದ ಸಂಗತಿಯೆಂದು ಡಾ। ಕ್ರೆಂಪ್ಸನ್ನರು ತಿಳಿಸುತ್ತಾರೆ

ಮುದುಕರು ಒಳ್ಳೇ ಆರೋಗ್ಯವಂತರಾಗಿರುತ್ತಾರೆ, ಇಲ್ಲವೆ ಅತೀ ಅನಾರೋಗ್ಯವಂತರಿರುತ್ತಾರೆ ಇದರ ಮಧ್ಯವರ್ತಿ ಆರೋಗ್ಯ ಪ್ರಮಾಣದವರು ವಯಸ್ಸು ಹೋದವರಲ್ಲಿ ಅತೀ ಕಡಿಮೆ ಸಂಖ್ಯೆಯವರೆಂದು ಈ ಕುರಿತು 477 ವೃದ್ಧರನ್ನು ಪರಿಶೀಲನೆಗೊಳ ಮಾಡಿ ನೋಡಿದ ಇಂಗ್ಲೆಂಡಿನ ಡಾ। ಶೆಲ್ಡನ್ ಎಂಬವರು ತಿಳಿಸುತ್ತಾರೆ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆ, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟದೆ ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಒಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ ದೊರೆವುದು

CANARA BANK, LIMITED.

ESTD: 1906



ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ, ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕಪುಟ್ಟ ಎಲ್ಲಾ ಚರ್ಮ ತೊಂದರೆಗಳ ಬೇನೆಯನ್ನು ಹಗಿಸುತ್ತದೆ. ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

557

ಕುಟಿಕೂರಾ ಮುಲಾಮು

CUTICURA OINTMENT

ಬ್ರಿಟಿಷ್ ಸಾಮ್ರಾಜ್ಯವು ಮುಳುಗುತ್ತದೆ!

ಅರಸರು ಸಾರ್ವಭೌಮತ್ವವನ್ನು ತ್ಯಜಿಸಿದ್ದು ವಿಷಾದಕರ ಸಂಗತಿ

ವಿನಸ್ಟನ್ ಚರ್ಚಿಲ್ಲರ ಅರಣ್ಯರೋಧನ

ಲ್ಯೂಟಿನದಲ್ಲಿ ಸೇರಿದ ಕನ್ಸರವೇಟಿವ್ ಪಕ್ಷದ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಚರ್ಚಿಲ್ಲರು ೬ನೇ ಜಾರ್ಜ ಅರಸರು ಹಿಂದೂಸ್ಥಾನದ ಸಾರ್ವಭೌಮತ್ವದ ಬಿರುದನ್ನು ತ್ಯಜಿಸಿದ್ದು ಒಳ್ಳೇ ವಿಷಾದಕರ ಸಂಗತಿಯೆಂದರು ಅವರು ಮತ್ತು ಹೇಳಿದ್ದೇನೆಂದರೆ

"ಭಾರತದಲ್ಲಿಯ ಬ್ರಿಟಿಷ್ ಸಾಮ್ರಾಜ್ಯವನ್ನು ಹಿಂತೆಗೆದುಕೊಳ್ಳಬೇಕಾದರೆ ಈಗಾಗಲೇ ಸುಮಾರು ೫೦ ಲಕ್ಷ ಹಿಂದಿಯರು ತಮ್ಮ ಪ್ರಾಣಗಳಿಗೆ ಎರವಾಗಬೇಕಾಯಿತು ಹಿಂದೂಸ್ಥಾನದಲ್ಲಿ ಇನ್ನೂ ಎಷ್ಟೋ ಜನರು ಅನೇಕ ದುಃಖ ಕಷ್ಟಗಳಿಗೀಡಾಗಿದ್ದಾರೆ ಈ ಎಲ್ಲ ಅಪರಾಧಗಳಿಗೂ ಒಂದೇ ಪಕ್ಷವು ಹೊಣೆಗಾರವೆಂದು ಹೇಳಲಿಕ್ಕಾಗುವುದು ಆದರೆ ನಾವು ಎಷ್ಟೋ ಪರಿಶ್ರಮದಿಂದ ಸಾಮ್ರಾಜ್ಯವನ್ನು ಸೋಶಲಿಸ್ಟರು ಅಧಿಕಾರದಲ್ಲಿ ಬಂದ ಕೂಡಲೇ ಅದನ್ನು ವಿಸರ್ಜಿಸುವುದರಲ್ಲಿಯೇ ಉದ್ಯುಕ್ತರಾದರು ಮತ್ತು ಇದರಿಂದ ಅವರು ಹಿಂದೀ ಜನತೆಯ ಮೇಲೆ ಅವರ್ಣನೀಯ ಹಾಗು ಅಸಹನೀಯ ದುಃಖ ಪರಂಪರೆಗಳನ್ನೆ ತಂದೊಡ್ಡಿದ್ದಾರೆ

ರಾಷ್ಟ್ರದಾಡಳಿತ ಹೊಣೆಯನ್ನು ಒಂದೇ ಪಕ್ಷದ ಕೈಯಲ್ಲಿ ಕೊಟ್ಟುಬಿಡಲಾಗಿದೆ. ಇಷ್ಟು ದಿನಗಳ ವರೆಗೆ ಬ್ರಿಟಿಷ ಅರಸರ ಸಂರಂಕ್ಷಣೆಯಲ್ಲಿದ್ದಂಥ ೪೦ ಕೋಟಿ ಜನಸಂಖ್ಯೆಯ ಬೆಂಬಲವು ಈ ಪಕ್ಷಕ್ಕೆ ಎಳ್ಳಷ್ಟು ಇರುವುದಿಲ್ಲ ಈಗಾಗಲೇ ಭಾರತದ ಆಂತರಿಕ ಆಡಳಿತೆಯು ಕುಸಿದು ಬಿದಿದ್ದು ಜಾತೀಯ ದಂಗೆಗಳು ಬೇಗನೆ ಸಂಭವಿಸಬಹುದು ನಾಲ್ಕೈದಂಶದಷ್ಟು ಜನಸಂಖ್ಯೆಯು ಮುಸಲ್ಮಾನರಿದ್ದ ಕಾಶ್ಮೀರದ ಮೇಲೆ ನೆಹರೂರವರ ಹಿಂದು ಸರಕಾರವು ಮಾಡಿದ ಹಿಂಸಾತ್ಮಕ ದಾಳಿಯನ್ನು ನಾವು ಕಂಡಿರುವೆವು. ನಾವು ಭಾರತದಲ್ಲಿ ಬಿಟ್ಟು ಬಂದಂಥ ಸೈನಿಕ ಶಸ್ತ್ರಾಸ್ತ್ರಗಳ ದುರುಪಯೋಗ ಮಾಡಿಕೊಂಡು ಇನ್ನು ಮೇಲೆ ಈ ಸರಕಾರವು ಪುರಾತನ ರಾಷ್ಟ್ರವಾದ ಹೈದರಾಬಾದದ ಮೇಲೆ ದಾಳಿ ನಡೆಸಿ ಉಚ್ಚಾಟನೆಯನ್ನು ಮಾಡಬಹುದು/ ಬ್ರಹ್ಮದೇಶದಲ್ಲಿ ಸಹ ಆಂತರಿಕ ಕೊಲೆ ಸುಲಿಗೆಗಳು ನಿತ್ಯದ ಮಾತುಗಳಾಗಿದ್ದು ಅಲ್ಲಿ ರಶ್ಯನರ ಪ್ರಭಾವ ದಿನದಿನಕ್ಕೂ ಬೆಳೆಯುತ್ತಿದೆ. ಮಲಯಾದಲ್ಲಿ ಕಮ್ಯೂನಿಸ್ಟರ ಕೈವಾಡದಿಂದ ಬ್ರಿಟಿಷರ ಕೊಲೆಯು ಅನಿರ್ಬಂಧವಾಗಿ ಸಾಗಿದೆ ಈ ರೀತಿ ಇಡೀ ಜಗತ್ತಿನಲ್ಲಿಯೇ ಬ್ರಿಟಿಷ್ ಸರಕಾರದ ಮಾನಗೌರವಗಳು ಅಧೋಮುಖವಾಗಿದೆ.

ಚಿಲಿ ಮತ್ತು ಅರ್ಜೆಂಟೀನ ಸರಕಾರಗಳು ನಮ್ಮ ಶಕ್ತಿಹ್ರಾಸವನ್ನು ಕಂಡು ನಮ್ಮ ಪ್ರದೇಶದ ಮೇಲೆ ದಾಳಿ ನಡೆಸಿವೆ. ಇಂಥ ಸಂದರ್ಭದಲ್ಲಿ ನಮ್ಮ ನೌಕಾ ಪಡೆಯವರು ಅಜೆಕ್ಸ್ ಯುದ್ಧನೌಕೆಯನ್ನು ಚಿಲಿ ಸರಕಾರಕ್ಕೆ ಮಾರಲು ಸಿದ್ಧವಾಗಿದ್ದಾರೆ. ಕೆಲ ಡಾಲರುಗಳ ಆಶೆಗಾಗಿ ನಮ್ಮ ಸುಪ್ರಸಿದ್ಧ ಹಡಗವನ್ನು ನಮ್ಮ ವೈರಿಗಳಿಗೇ ಮಾರುವದು ಲಾಂಛನಾಸ್ಪದವಾದದ್ದು. ಸೋಶಲಿಸ್ಟರು ದೇಶದಾಡಳಿತೆಯಲ್ಲಿ ನಡೆಸಿರುವ ತಮ್ಮ ಪ್ರಯೋಗಗಳಿಂದ ನಮ್ಮ ದೇಶದ ಆರ್ಥ ಅವನತಿಯನ್ನು ಕಟ್ಟಿಟ್ಟರು ಜರ್ಮನಿ ಈಗಾಗಲೇ ರಶ್ಯನರು ಮಿತ್ರ ರಾಷ್ಟ್ರಗಳನ್ನು ಅಲ್ಲಿಂದ ಹೊರಗೆಹಾಕುವ ಹೊಂಚು ನಡಸಿದ್ದಾರೆ ಈಗ ಹತ್ತು ವರ್ಷಗಳ ಹಿಂದೆ ಮ್ಯುನಿಕ್ ಬಿಕ್ಕಟ್ಟಿಂಟಾದಾಗಿನ ಗಂಭೀರ ಪರಿಸ್ಥಿತಿಯೇ ಈಗಲೂ ಬಂದೊದಗಿದೆ

ನಾವು ಮೂರನೇ ಜಾಗತಿಕ ಯುದ್ಧವನ್ನು ತಡೆಗಟ್ಟಬೇಕಾದರೆ ನಮ್ಮ ಶಕ್ತಿಯನ್ನು ಸಂಘಟಿಸಿ ಬಲಪಡಿಸಿಕೊಳ್ಳುವದೊಂದೇ ಮಾರ್ಗ" ಎಂದರು

ಈ ಸಭೆಯಲ್ಲಿ ಕನಿಷ್ಟ ೧ ಲಕ್ಷ ಜನರು ಚರ್ಚಿಲ್ಲರ ಭಾಷಣವನ್ನು ಏಕಾಗ್ರತೆಯಿಂದ ಕೇಳುತ್ತ ಕುಳಿತ್ತಿದ್ದರು

ಮಲಯಾದಲ್ಲಿ ಅಶಾಂತಿ

ಒಂದೇ ದಿನದಲ್ಲಿ ೯ ರಾಜಕೀಯ ಕೊಲೆಗಳು

ಮಲಯಾದಲ್ಲಿ ತಾ ...ರಂದು ಒಟ್ಟು ೯ ರಾಜಕೀಯ ಕೊಲೆಗಳು ಸಂಭವಿಸಿದ್ದು ಇಲ್ಲಿ ಅಶಾಂತಿಯು ಪ್ರಾರಂಭವಾದಂದಿನಿಂದ ಇಷ್ಟು ಕೊಲೆಗಳೆಂದೂ ಸಂಭವಿಸಿರಲಿಲ್ಲ ಏಳು ಜನ ಸಶಸ್ತ್ರ ಚೀನಿಗಳು ೩೩ ವರ್ಷದ ಒಬ್ಬ ಕೋಮಿಂಟಾಂಗ ಅಧಿಕಾರಿಯನ್ನು ಗುಂಡಿಕ್ಕಿ ಕೊಂದರು. ಅವನ ಮೃತ ಶರೀರದ ಮೇಲೆ ಒಂದು ಹಲಿಗೆಯನ್ನು ಮುಚ್ಚಿಟ್ಟು ಅದರ ಮೇಲೆ "ಜನತೆಯ ಹಕ್ಕುಗಳನ್ನು ಮಾರಿ ಬ್ರಿಟಿಷರೊಡನೆ ಸಹಕರಿಸಿದಕ್ಕೆ "ಪ್ರತಿಫಲ" ಎಂದ ಬರೆದಿತ್ತು

ಬರ್ಲಿನದಲ್ಲಿ ರಶ್ಯನ್ ಸೇನಾಪತಿಗೆ ತಡೆ

ಅಮೇರಿಕನ್ ಸೈನಿಕರಿಂದ

ಜರ್ಮನಿಯಲ್ಲಿರುವ ರಶ್ಯನ್ ಸೇನಾಪತಿಯಾದ ಮಾರ್ಶಲ್ ವ್ಯಾಸಿಲಿ ಸೋಕೊಲೋವಸ್ಕಿಯು ಬರ್ಲಿನದ ಅಮೇರಿಕನ್ ವಿಭಾಗದಲ್ಲಿ ತನ್ನ ಕಾರಿನಲ್ಲಿ ಹೋಗುತ್ತಿದ್ದನ್ನು ಕಂಡು ಅಮೇರಿಕನ್ ಗಸ್ತಿ ದಳದವರು ಅವರನ್ನು ತಡದು ನಿಲ್ಲಿಸಿ ಸಮೀಪದ ಸೈನ್ಯ ಠಾಣ್ಯೆಗೆ ಕರೆದುಕೊಂಡು ಹೋದರು ಆ ಠಾಣೆಯಲ್ಲಿದ್ದ ಅಮೇರಿಕನ್ ಕರ್ನಲನು ಜನರಲ್ ಲೂಸಿಯಸ್ ಕ್ಲೇ ಅವರಿಗೆ ಈ ಸಂಗತಿಯನ್ನು ತಿಳಿಸಲು ಅವರು ರಶಿಯನ್ ಸೇನಾಪತಿಯನ್ನು ಬಿಡುಗಡೆ ಮಾಡಬೇಕೆಂದು ಆಜ್ಞೆ ಕೊಟ್ಟರು.

ಮಾರ್ಶಲ ವ್ಯಾಸಿಲಿ ಸೋಕೊಲೋವಸ್ಕಿಯು ತನ್ನ ಶಿಬಿರದಿಂದ ಪಾಟ್ಸಡಾಮದ ಕಡೆಗೆ ಹೊರಟ್ಟಿದ್ದನು, ಅವನನ್ನು ಅರ್ಧ ಗಂಟೆ ೯ ಅಮೇರಿಕನ್ ಸೈನಿಕರು ತಡೆದು ನಿಲ್ಲಿಸಿದರು. ಬರ್ಲಿನದ ಅಮೇರಿಕನ್ ವಿಭಾಗದಲ್ಲಿ ರಶಿಯನ್ ಸೈನಿಕರಾರೂ ಕಂಡು ಬಂದರೆ ಅವರನ್ನು ಕೂಡಲೇ ಸಮೀಪದ ಠಾಣೆಗೆ ಕರದುಕೊಂಡು ಹೋಗಬೇಕೆಂದು ಅಮೇರಿಕನ್ ಸೈನಿಕರಿಗೆ ಆಜ್ಞೆಯಾಗಿದೆ.

ಹಣ್ಣು ತಿಂದು ಆರೋಗ್ಯವಂತರಾಗಿರಿ

ಫಲ ವಸ್ತುಗಳ ರೋಗನಾಶಕ ಶಕ್ತಿ

ಶರೀರದಲ್ಲಿ ಆಮ್ಲರಸಗಳು (Acids) ಮಿತಿಮಿಕ್ಕಿದರೆ ಹಲ್ಲು ವಸಡು ಕೊಳೆಯುವ ರೋಗ (Pyorrhoea) ಕ್ಕೆ ಕಾರಣವಾಗುವುದು. ಮಾಂಸ, ಮೀನು, ಕೋಳಿ, ಬೆಣ್ಣೆ, ಮೊಟ್ಟೆ, ಕಾಯಿಗಳು (ಗೇರುಬೀಜ, ನೆಲಗಡಲೆ ಇತ್ಯಾದಿ), ಬ್ರೆಡ್ಡುಗಳು ಇತ್ಯಾದಿಗಳು ಆಮ್ಲರಸವನ್ನು ಹೆಚ್ಚಿಸುವಂತವು ಆದರೆ ಎಲೆಯ ತರಕಾರಿಗಳು, ಹಣ್ಣುಹಂಪಲುಗಳು, ಹಾಲು ಇವು ಆಮ್ಲವನ್ನು ಕಡಿಮೆಮಾಡುವ ಕ್ಷಾರ ಲವಣಗಳನ್ನುಂಟು ಮಾಡುತ್ತವೆ ಇಂತಹ ವಸ್ತುಗಳು ಪ್ರತಿಯೊಬ್ಬನ ಆಹಾರದಲ್ಲಿ ಹೆಚ್ಚಾಗಿರಬೇಕು, ಮುಖ್ಯವಾಗಿ ಹಲ್ಲು ಕೊಳೆಯುವ ವ್ಯಾಧಿ ಇದ್ದವರಂತೂ ಇದನ್ನೇ ಹೆಚ್ಚಾಗಿ ಬಳಸಬೇಕು" ಹೀಗೆಂದು ಶ್ರೀ ವಿ ಬಿ ಧ್ರುವರ್ ಎಂ ಎಸ್ ಸಿ ಅವರು ಒಂದು ಲೇಖನದಲ್ಲಿ ತಿಳಿಸುತ್ತಾರೆ. ಹಣ್ಣುಹಂಪಲು ಆಹಾರದ ಕುರಿತು ಅವರ ಸೂಚನೆಗಳು ಹೀಗಿವೆ

ಪ್ರಾಣಿಗಳ ಮೇಲೆ ನಡೆಸಿ ನೋಡಿದ ಪ್ರಯೋಗಗಳ ಆಧಾರದಿಂದ ಕೇವಲ ಆಹಾರವು ಸಿಹಿಮೂತ್ರಕ್ಕ (Diabetes) ಉತ್ತಮ ಪರಿಹಾರಕವೆಂದು ರುಜುವಾತಾಗಿದೆ

ಕಿತ್ತಳೆ ಹಣ್ಣುಗಳು ವಿಷಮಜ್ವರವನ್ನು ದೂರವಿರಿಸುತ್ತವೆ ಕಿತ್ತಳೆ ಹಣ್ಣಿನ ರಸವು ರಕ್ತದ ಒತ್ತಡವನ್ನು (Blood pressure) ಕಡಿಮೆ ಮಾಡಲು ಸಹಾಯ ಮಾಡುತ್ತದೆ ಉನ್ನತ ರಕ್ತವೊತ್ತಡವಿದ್ದವರು ೨-೩ ದಿನಗಳ ಉಪವಾಸ ಮಾಡಿ ಈ ಅವಧಿಯಲ್ಲಿ ... ಕಿತ್ತಳೆ ಹಣ್ಣಿನ ರಸವನ್ನು ... ಸೇವಿಸಬೇಕು. "ಗಿಂದಾಗ್ಗ ಹಣ್ಣು ... ಹೊಟ್ಟೆಯ ಅವ್ಯವಸ್ಥೆಯನ್ನು ... ಸರಿಪಡಿಸಬಹುದಾಗಿದೆ

ಸಿಹಿಮೂತ್ರಕ್ಕೆ

ದ್ರಾಕ್ಷೆಹಣ್ಣಿನಲ್ಲಿ ವಿಟಮಿನ್ ಸಿ ... ಧಾತುಗಳು ಹೇರಳ ಪ್ರಮಾಣದಲ್ಲಿರುವುದರಿಂದ ಸ್ಕರ್ವಿ ... ಚರ್ಮ ವ್ಯಾಧಿಗೆ ರಾಮಬಾಣವಾಗಿದೆ ಮಾತ್ರವಲ್ಲ ..., ಮಾನಸಿಕ ಅವ್ಯವಸ್ಥೆ ಕ್ಷಯಸಂಬಂಧ ವ್ಯಾಧಿಗಳು, ಶ್ವಾಸಬಾಧ ಮೊದಲಾದ ಸಂಕಷ್ಟವಿದ್ದವರಿಗೂ ಇದರಿಂದ ಪರಿಹಾರ ಸಿಗುತ್ತದೆ ದ್ರಾಕ್ಷೆಯಲ್ಲಿ ಸಕ್ಕರೆಯ ಅಂಶವಿದ್ದರೂ ಶಕ್ತಿ ಚೇತನೋತ್ಪಾದಕ ಅದರ ಗುಣಗಳು ಸಕ್ಕರೆಯ ದುಷ್ಪರಿಣಾಮವನ್ನು ತೊಡೆದುಹಾಕುವುದರಿಂದ ಸಿಹಿಮೂತ್ರ ವ್ಯಾಧಿಯವರೂ ಇದನ್ನುಪಯೋಗಿಸಬಹುದು ದ್ರಾಕ್ಷಿ ರುಚಿಗೆ ಆಮ್ಲತರವಾಗಿ ತೋರಿದರೂ ರಕ್ತವನ್ನು ಸೇರುತ್ತಲೇ ಅದು ಕ್ಷಾರ (Alakaline) ವಾಗಿ ಪರಿವರ್ತನವಾಗುತ್ತದೆ. ರಕ್ತದಲ್ಲಿದು ಕ್ಷಾರ ಲವಣವನ್ನುಂಟುಮಾಡುತ್ತದೆ.

ಅಮೇರಿಕದಲ್ಲಿ ದ್ರಾಕ್ಷೆಹಣ್ಣಿನ ಶ್ರೇಷ್ಟ ಗುಣವು ಅದೆಷ್ಟು ಖಚಿತವಾಗಿದೆಯೆಂದರೆ ಈಗದನ್ನು ಫಲಹಾರ ಮಂದಿರದಲ್ಲೂ, ಆಸತ್ರೆಗಳಲ್ಲೂ, ಮಾತ್ರವಲ್ಲ ಜೈಲು ಚಿಕಿತ್ಸಾಲಯಗಳಲ್ಲೂ ವಿಪುಲವಾಗಿ ಅದನ್ನು ಉಪಯೋಗಿಸುತ್ತಾರೆ. ದ್ರಾಕ್ಷೆಯನ್ನು ನಮ್ಮ ದೇಶದಲ್ಲಿ ಇತ್ತೀಚೆಗೆ ಬೆಳೆಸಲು ಪ್ರಾರಂಭಿಸಿದ್ದಾರೆ. ಅದು ನಮ್ಮ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುವುದೆಂದೂ ಕಂಡು ಬಂದಿದೆ.

ಚರ್ಮ ಆರೋಗ್ಯ

ಲಿಂಬೆಹಣ್ಣು ತಲೆನೋವು, ವಾಕರಿಕೆ, ಗಂಟಲುನೋವು, ತುರಿಕಜ್ಜಿ, ಅಜೀರ್ಣ, ಮತ್ತು ಶರೀರಕಾಂತಿ ನಷ್ಟವಾದುದಕ್ಕೆ ಅತ್ಯುಪಯುಕ್ತವಾದುದು.

ಕಣ್ಣುವ್ಯಾಧಿಯಿಂದ ನರಳುವವರು ದಾಳಿಂಬ ಹಣ್ಣನ್ನು ತಿನ್ನುವುದೊಳಿತು. ಅಂಧವರು ನಿದ್ದೆ ಮಾಡುವ ಮೊದಲು ಮತ್ತು ಪ್ರಾತಃಕಾಲ ಎದ್ದ ಕೂಡಲೆ ದಾಳಿಂಬ ಹಣ್ಣಿನ ರಸವನ್ನು ಕುಡಿಯಬೇಕು

ಅನನಾಸು ಜ್ಞಾನೇಂದ್ರಿಯಗಳಿಗೆ ಶ್ರೇಷ್ಟ ಶಕ್ತಿವರ್ಧಕವಾಗಿದೆ ಊಟವಾಡುವ ಮುಂಚೆ ಆಗಲೇ ಕಡಿದ ಅನನಾಸಿನ ಒಂದು ತುಂಡು ಇಲ್ಲವೆ ಅದರ ರಸವು ಜ್ಞಾನೇಂದ್ರಿಯಗಳನ್ನು ಕ್ರಮದಲ್ಲಿರಿಸುತ್ತದೆ

ಚಿಂತೆಯೇ ವ್ಯಾಧಿ, ಅತೀ ಮೃತ್ಯು

ಭಯ, ಕೋಪಗಳ ದುಷ್ಪರಿಣಾಮ

"ದಿನನಿತ್ಯದ ಜೀವನದಲ್ಲಿನ ಅನೇಕ ಕಷ್ಟಗಳು ಚಿಂತೆ ಕಳವಳಗಳಿಂದಲೇ ಉದ್ಭವಿಸುತ್ತವೆ ಕಳವಳ ಮತ್ತದರ ಪರಿಣಾಮವಾದ ಆರೋಗ್ಯಕ್ಕೆ ತುಂಬಾ ಧಕ್ಕೆ ತಗಲುತ್ತದೆ ಮಾತ್ರವಲ್ಲ ವ್ಯಕ್ತಿಯೊರ್ವನ ಶೀಘ್ರ ಮೃತ್ಯುವಿಗೂ ಅದು ಕಾರಣವಾಗುತ್ತದೆ." ಹೀಗೆಂದು ವೊಶಿಂಗ್ಟನ್ನಿನ ಪ್ರಖ್ಯಾತ ಮನೋವ್ಯಾಧಿ ವೈದ್ಯರಾದ ಡಾ॥ ಹೆರಿಸ್ಟನ್ ಸಲಿವಾನರು ಒಂದು ವೃದ್ಯ ಪಿಷ್ಟ್ಟರ ಸಭೆಯಲ್ಲಿ ತಿಳಿಸಿದರು.

ಮನುಷ್ಯನಿಗೆ ಯೋಗ್ಯವಾದ ಜೀವನ ಭದ್ರತೆ ದೊರಕದಿದ್ದರೆ ಅವನಿಗ ನಿತ್ಯ ಕಳವಳವುಂಟಾಗುತ್ತದೆ ಇದರಿಂದ ಸ್ವತ್ವನಾಶದ ಸ್ಥಿತಿ ಸಂಭವಿಸುತ್ತದೆ

ಈ ಕಳವಳವು ಚಿಕ್ಕಂದಿನಿಂದ ತರುವಾಯ ಒಂದು ಮಾನಸಿಕ ಅವಸ್ಥೆ ನಮ್ಮ ವಿವಿಧ ವಿಚಾರ, ಕಾರ್ಯಗಳನ್ನು ಇತರ ಗಣಿಸಿಯಾರು ಎಂದು ... ದೆಂದು ... ಪ್ರಜ್ಞೆಯು ... ನಮ್ಮಲ್ಲಿ ... ಮಕ್ಕಂದಿನಿಂದ ನಮ್ಮ ಮೇಲೆ ಪ್ರಭಾವ ಬೀರಲು ಸಮರ್ಥರಿರುವ ವ್ಯಕ್ತಿಗಳೇ ಈ ಗಣಿಸೀಯ ಜನರಾಗಿರಬಹುದು

ಕೆಟ್ಟ ಕೋಪ

ತಿರಸ್ಕಾರವು ಕಳವಳವನ್ನು ಮುಚ್ಚುವ ಒಂದು ಮನೋಭಾವ

ನಾವು ಯೋಗ್ಯರೆಂದೂ, ಮರ್ಯಾದಸ್ಥರೆಂದೂ ನಮ್ಮಲ್ಲೊಂದು ಭಾವನೆಯಿರುತ್ತದೆ ಇದಕ್ಕೆ 'ಸಿಜವಾದ' ಹಾನಿಬರುತ್ತದೆಂದು ಭಾವಿಸಿಕೊಂಡಾಗಲೇ ನಮಗೆ ಸಿಸಿರು, ಅತಿಕ್ರೋಧ ಮತ್ತು ಉಗ್ರಕೋಪಗಳು ಬರುತ್ತವೆ. ಇದರಿಂದ ನಮ್ಮ ಭೌತಿಕ ಶರೀರಕ್ಕೆ ಗಂಡಾಂತರವಿಲ್ಲವೆಂದೂ ನಮಗೆ ಆಗ ಗೊತ್ತಿರುತ್ತದೆ. ಈ ಭಾವನೆಗಳ ಮೂಲವನ್ನರಿತುಕೊಂಡು ಅವನ್ನು ಬದಲಾಯಿಸುವುದು ಮುಖ್ಯವಾದುದು. ಹೀಗೆ ಮಾಡುವುದರ ಮೂಲಕವೇ ನಾವು ಹೆಚ್ಚು ಸ್ವೇಚ್ಛೆಯ ಮತ್ತು ಪರಿಣಾಮಕಾರಿಯಾದ ಜೀವನವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ.

ಸ್ವದೇಶಾಭಿಮಾನಿ

ತಾರೀಕು 2—7—1948

ಸರ್ದಾರ ಪಟೇಲರ ವಿನಂತಿ

ಸಂಯುಕ್ತ ಪ್ರಾಂತದಲ್ಲಿ ಶಾಸನ ಸಭೆಯ ಕೆಲವು ಸ್ಥಾನಗಳಿಗೆ ಉಪಚುನಾವಣೆಗಳು ನಡೆಯುತ್ತಿವೆ. ಕಾಂಗ್ರೆಸ್ ಉಮೇದ್ವಾರರಿಗೆ ಬೆಂಬಲಕೊಡಬೇಕೆಂದು ಮತದಾರರಿಗೆ ಭಾರತ ಸರಕಾರದ ಉಪ ಪ್ರಧಾನ ಮಂತ್ರಿಯವರಾದ ಸರ್ದಾರ ವಲ್ಲಭಭಾಯಿ ಪಟೇಲರು ಡೆಹರಾಡೂನಿನಿಂದ ಒಂದು ವಿನಂತಿಯನ್ನು ಕಳುಹಿಸಿದ್ದಾರೆ ಈ ವಿನಂತಿಯಲ್ಲಿಯ ವಿಚಾರಗಳು ಅಖಿಲ ಭಾರತವು ಮನಸ್ಸಿಗೆ ತೆಗೆದುಕೊಂಡು ಯೋಚಿಸತಕ್ಕಂತಿವೆ

ಕಾಂಗ್ರೆಸ್ ಸಂಸ್ಥೆ ಈ ದೇಶದ ಭಗ್ಗೆ ಹಲವು ವರ್ಷಗಳಿಂದ ದುಡಿದು ದೇಶದ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ಜನರ ವಿಶ್ವಾಸಕ್ಕೆ ಪಾತ್ರವಾದ ಸಂಸ್ಥೆ ಕಾಂಗ್ರೆಸಿನವರು ದೇಶದ ಆಡಳಿತೆ ವಹಿಸಿದಂದಿನಿಂದ ದೇಶವು ಅನಿರೀಕ್ಷಿತ ಆಪತ್ತುಗಳನ್ನು ಮೇಲಿಂದ ಮೇಲೆ ಎದುರಿಸಬೇಕಾದ ಪ್ರಸಂಗಗಳು ಬಂದೊದಗಿದವು ಮಿಲಿಯಗಟ್ಟಲೆ ಜನರು ನಿರಾಶ್ರಿತರಾಗುವ ಇಂಥ ದುರ್ಘಟನೆಯನ್ನು ಸುಧಾರಿಸುವುದು ಸುಲಭದ ಕೆಲಸವಲ್ಲ ಯಾವ ದೇಶದ ಸರಕಾರವಾದರೂ ಇಂಥ ವಿಪತ್ತಿನ ಎದುರು ತಲ್ಲಣಿಸುತ್ತಿತ್ತು ಕಾಂಗ್ರೆಸ್ ಸರಕಾರವು ಅತ್ಯಂತ ದಕ್ಷತೆಯಿಂದ ಪರಿಸ್ಥಿತಿಯನ್ನು ಸುಧಾರಿಸಲು ಹೋರಾಡಿರುತ್ತದೆ

ಆಹಾರದ ತುಟ್ಟಿ ಹಾಗೂ ಇತರ ಆವಶ್ಯಕ ವಸ್ತುಗಳ ಅಭಾವವೂ ಇದೇ ಬಗೆಯ ಮಹತ್ತರದ ಗಂಡಾಂತರವಿತ್ತು. ಅಖಿಲ ಭಾರತದಲ್ಲಿ ಬಂಗಾಲ ಬರಗಾಲದ ಸ್ಥಿತಿ ಒದಗಬಹುದೆಂಬ ಭೀತಿ ಇತ್ತು. ಇದನ್ನೆದುರಿಸುವುದೂ ಬಹಳ ಕಷ್ಟದ ಕೆಲಸವಿತ್ತು ಕಾಂಗ್ರೆಸ್ ಸರಕಾರವು ಇದರಿಂದಲೂ ಎದೆಗೆಡದೆ ಧೈರ್ಯದಿಂದ ದುಡಿದಿರುತ್ತದೆ

ಬ್ರಿಟಿಷರು ಹೋಗುವಾಗ ಸಂಸ್ಥಾನಗಳನ್ನೆಲ್ಲ ಯಾವ ವ್ಯವಸ್ಥೆಗೂ ಒಳಪಡಿಸದೆ ಬಿಟ್ಟುದರಿಂದ ದೇಶದಲ್ಲಿ ಪ್ರತಿಯೊಂದು ಸಂಸ್ಥಾನವೂ ತನ್ನ ತನ್ನ ಹಾದಿಹಿಡಿದ್ದು ಭಯಂಕರ ಅವ್ಯವಸ್ಥೆ ತಲೆದೋರುವ ಸಂಭವವಿತ್ತು ಈ ಪ್ರಶ್ನೆಯನ್ನು ಕಾಂಗ್ರೆಸ್ ಸರಕಾರವು ಬಿಡಿಸಿದ ರೀತಿಯನ್ನು ಅಖಿಲ ಜಗತ್ತೇ ಮೆಚ್ಚುವಂತದೆ

ಜಾತ್ಯಾಭಿಮಾನವು ಮಹಾತ್ಮಾ ಗಾಂಧಿಯವರಂಥ ವ್ಯಕ್ತಿಯನ್ನು ಬಲಿಗೊಂಡು ಅಖಿಲ ಭಾರತವನ್ನು ದಹಿಸುತ್ತದೆಯೊ ಎಂಬ ಭೀತಿಯನ್ನು ಕಾಂಗ್ರೆಸಿಗರು ನಿರ್ಭೀತಿಯಿಂದ ಎದುರಿಸಿರುವರೆಂಬುದನ್ನು ಯಾರು ಅಲ್ಲಗಳೆಯುವರು?

ಸರಕಾರವು ಕೈಗೆ ಬಂದೊಡನೆ ಇಂಥ ಅನೇಕ ಆಪತ್ತುಗಳನ್ನು ಅತ್ಯಂತ ದಕ್ಷತೆಯಿಂದ ಎದುರಿಸಿರುವುದು ನಿಜವಿದ್ದರೂ ಇನ್ನೂ ದೇಶವು ಗಂಡಾಂತರಗಳಿಂದ ಪಾರಾಗಿಲ್ಲವೆಂಬುದೂ ಅಷ್ಟೇ ಸತ್ಯವಿರುತ್ತದೆ. ಕಾಶ್ಮೀರದ ಪ್ರಶ್ನೆ ಪೂರ್ಣ ತೀರ್ಮಾನವಾಗಿಲ್ಲ. ಹೈದರಾಬಾದಿನ ಉಪಟಳ ಯಾವ ಪರಿಣಾಮವನ್ನು ತಂದೊಡ್ಡುತ್ತಿದೆಯೋ ಹೇಳಲಸಾಧ್ಯ ಆವಶ್ಯಕ ವಸ್ತುಗಳು ಇನ್ನೂ ಸರಿಯಾಗಿ ದೊರೆಯುತ್ತಿಲ್ಲ. ಕ್ರಯಗಳು ಕೆಳಕ್ಕೆ ಇಳಿಯುವ ಬದಲು ಇನ್ನೂ ಏರುವ ಲಕ್ಷಣಗಳೇ ಕಾಣುತ್ತಿವೆ. ಆಹಾರದ ಪ್ರಶ್ನೆ ಇನ್ನೂ ತೃಪ್ತಿಕರವಾಗಿ ಪರಿಹರಿಸಲ್ಪಟ್ಟಿರುತ್ತದೆಂದು ಹೇಳುವಂತಿಲ್ಲ. ಕೈಗಾರಿಕೆಗಳಲ್ಲಿ ಮುಷ್ಕರಗಳ ತೊಂದರೆ ಇನ್ನೂ ನಿವಾರಿಸಲ್ಪಟ್ಟಿಲ್ಲ ಜಾತ್ಯಾಭಿಮಾನ, ಪ್ರಾಂತ್ಯಾಭಿಮಾನ ಮೊದಲಾದ ಸಂಕುಚಿತ ಭಾವಗಳು ತಲೆ ಎತ್ತುತ್ತಲೇ ಇವೆ ಕಮ್ಯೂನಿಸ್ಟರು ಹಿಂಸಾತ್ಮಕ ಚಳವಳದ ಹಾದಿಯನ್ನೇ ಮುಂದೊತ್ತುತ್ತಿದ್ದಾರೆ. ನಮ್ಮ ರಾಷ್ಟ್ರವೂ ಇನ್ನೂ ಬಲವಾಗಿ ಬೇರೂರಿ ದೇಶದಲ್ಲಿ ಶಾಂತಿ ಸ್ಥಾಪಿಸಲ್ಪಟ್ಟಿಲ್ಲವೆಂಬ ಸತ್ಯ ಸ್ಥಿತಿಯನ್ನು ಯಾರೂ ಮರೆಯಲಾಗದು

ಇಂಥ ನಾಜೂಕಿನ ಪರಿಸ್ಥಿತಿಯಲ್ಲಿ ದೇಶದ ಆಡಳಿತೆಯನ್ನು ಜನರ ವಿಶ್ವಾಸವನ್ನು ಅವಿಶ್ರಾಂತ ಶ್ರಮದಿಂದ ದುಡಿದು ಪಡೆದಿರುವ ಕಾಂಗ್ರೆಸಿಗರ ಕೈಯಲ್ಲಿರಿಸುವುದೇ ಜಾಣತನವೆಂಬ ಬಗ್ಗೆ ಸಂಶಯವಿಲ್ಲ

ಕಾಂಗ್ರೆಸ್ ಸರಕಾರದ ಕುಂದುಕೊರತೆಗಳನ್ನು ಎತ್ತಿತೋರಿಸಿ ಟೀಕೆ ಮಾಡುವುದಾದರೆ ದೊಡ್ಡ ಕೆಲಸವಲ್ಲ ಟೀಕೆ ಇರಬಾರದೆಂದಲ್ಲ ಪರಿಸ್ಥಿತಿ ಸುಧಾರಿಸುವ ಉದ್ದೇಶದಿಂದ ಕೆಲಸಕ್ಕೆ ಸಹಾಯ ಮಾಡುವ ಬುದ್ಧಿಯಿಂದ ವಿಧಾಯಕ ರೀತಿಯ ಟೀಕೆಗಳಿಂದ ತುಂಬಾ ಪ್ರಯೋಜನವಿರುತ್ತದೆ ಕಾಂಗ್ರೆಸ್ ಸಂಸ್ಥೆಯನ್ನು ಅಡಿಗೊತ್ತಬೇಕು ತಾವು ಮುಂದೆ ಬರಬೇಕು ಎಂಬ ತಮ್ಮ ಸ್ವಂತ ಸ್ವಾರ್ಥದ ದೃಷ್ಟಿಯಿಂದ ಕಾಂಗ್ರೆಸ್ ಸಂಸ್ಥೆಯನ್ನು ನಿಂದೆಗೊಳಪಡಿಸುವವರು ದೇಶಕ್ಕೆ ಉಪಕಾರ ಮಾಡುವ ಬದಲು ಭಯಂಕರ ಹಾನಿಯನ್ನೇ ತಂದೊಡ್ಡುತ್ತಿರುವರು

ಸರ್ದಾರ ಪಟೇಲರು ಸಾಮ್ಯವಾದಿ ಪಕ್ಷದ ಕುರಿತು ಪ್ರತ್ಯೇಕವಾಗಿ ಎತ್ತಿಹೇಳಿರುವರು. ಇವರು ತಮ್ಮ ಭಿನ್ನಾಭಿಪ್ರಾಯಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಿ ಆವಶ್ಯವುಳ್ಳ ಟೀಕೆಗಳನ್ನು ಕಾಂಗ್ರೆಸ್ ಸಂಸ್ಥೆಯ ಒಳಗಿನಿಂದಲೇ ಮುಂದೊತ್ತುವುದು ಯುಕ್ತವಿತ್ತು. ಇದು ತಮ್ಮ ತಮ್ಮ ಪಕ್ಷಗಳನ್ನು ಬಲಪಡಿಸುವ ಸಮಯವಲ್ಲ. ಎಲ್ಲರೂ ಒಟ್ಟು ಸೇರಿ ರಾಷ್ಟ್ರವನ್ನು ಆಪತ್ತಿನಿಂದ ರಕ್ಷಿಸಿ ಬಲಪಡಿಸಬೇಕಾದುದೇ ಈಗಿನ ಆವಶ್ಯಕತೆ ಈಗಿನ ಆಪತ್ತಿನ ಅರಿವಿಲ್ಲದಂತೆ ವರ್ತಿಸಿದರೆ ಅದು ಸತ್ಪರಿಣಾಮಕಾರಿಯಾಗಲಾರದು.

ಸಾಮ್ಯವಾದ ಮೊದಲಾದ ಬಗೆಯ ಹೊಸ ಪ್ರಯೋಗಗಳನ್ನು ಈ ದೇಶದಲ್ಲಿ ಮಾಡಿ ನೋಡಬಾರದೆಂಬುದು ಇದರ ಅಭಿಪ್ರಾಯವಲ್ಲ ನಮ್ಮ ರಾಷ್ಟ್ರವು ಬಲಿಷ್ಠವಾಗಿ ಸ್ಥಿರವಾಗಿ ನಿಂತ ಬಳಿಕ ಇಂಥ ಪ್ರಯೋಗಗಳಲ್ಲಿರಬಹುದಾದ ತೊಂದರೆಗಳನ್ನು ಸಹಿಸಿಕೊಳ್ಳಲು ಸಮರ್ಥವಾದಾಗ ಇಂಥ ವಿವಿಧ ಪ್ರಯೋಗಗಳನ್ನು ನಮ್ಮಲ್ಲಿಯೂ ಮಾಡಿ ನೋಡಬಹುದು ಅದಕ್ಕೆ ಈಗಿನ ಪರಿಸ್ಥಿತಿಯು ಹೇಳಿಸಿದ್ದಲ್ಲ

ದೇಶವನ್ನು ಈಗಿನ ಸ್ಥಿತಿಯಿಂದ ಮೇಲೆತ್ತಿ ಭದ್ರವಾದ ರಾಷ್ಟ್ರವನ್ನು ನೆಲೆನಿಲ್ಲಿಸುವ ಕಾರ್ಯವನ್ನು ಕಾಂಗ್ರೆಸ್ ಸಂಸ್ಥೆಯ ಮೂಲಕವಲ್ಲದೆ ಬೇರಾವ ಸಂಸ್ಥೆಯ ಮೂಲಕವೂ ಸಾಧ್ಯವಾಗುವಂತಿಲ್ಲ ಆದುದರಿಂದ ಎಲ್ಲ ಪ್ರಜೆಗಳೂ ಕಾಂಗ್ರೆಸಿಗೇನೇ ಬೆಂಬಲಕೊಡಬೇಕು

ಸರ್ದಾರ ಪಟೇಲರ ಈ ವಿನಂತಿಯನ್ನು ಎಲ್ಲರೂ ಮನನ ಮಾಡಬೇಕು ಇಲ್ಲಿ ಚುನಾವಣೆಗಳು ಈಗ ನಡೆಯುತ್ತ ಇಲ್ಲ ಆದರೆ ಅವು ಬರಲಿಕ್ಕೆ ಬಹಳ ದೂರವೂ ಇಲ್ಲ ಕಾಂಗ್ರೆಸ್ಸಿಗೆ ಎಷ್ಟರ ಮಟ್ಟಿಗೆ ಬೆಂಬಲಕೊಡುವುದು ಅಗತ್ಯವೆಂಬ ಪ್ರಶ್ನೆಯನ್ನು ಈಗಿನಿಂದಲೇ ವಿಚಾರಿಸುವುದು ಒಳ್ಳೆಯದು

ಕಾಂಗ್ರೆಸ್ ಸಂಸ್ಥೆಯ ಮೇಲಿದ್ದ ಜನರ ವಿಶ್ವಾಸ ಶಿಥಿಲವಾಗುವಂತೆ ಕಾಂಗ್ರೆಸಿಗರೇ ಮಾಡಿದರೆ ಅದು ಅಕ್ಷಮ್ಯ ಅಪರಾಧವೆಂಬ ಒಂದು ಮಾತನ್ನು ನಾವು ಇದಕ್ಕೆ ಸೇರಿಸುವುದು ಅಗತ್ಯ.

ಟೀಕೆ-ಟಿಪ್ಪಣಿಗಳು

ಜಗತ್ತಿನಲ್ಲಿ ಆಹಾರದ ಅಭಾವ

ಜಗತ್ತಿನ ಆಹಾರ ಮತ್ತು ಕೃಷಿ ಸಂಬಂಧದ ಸಂಸ್ಥೆಯೊಂದು ಈಗ ಜಗತ್ತಿನಲ್ಲಿ ಬೆಳೆಯುವ ಆಹಾರ ಜಗತ್ತಿನ ಜನರಿಗೆ ಸಾಕಷ್ಟಿಲ್ಲವೆಂದು ಎಚ್ಚರಿಸಿರುತ್ತದೆ. ಆಹಾರದ ಬೆಳೆ ಹೆಚ್ಚಿಸುವುದು ಅತ್ಯಾವಶ್ಯಕವೆಂದು ತೋರಿಸಿರುತ್ತದೆ. ಜಗತ್ತಿನಲ್ಲಿ ಒಂದೆಡೆ ಸಮೃದ್ಧಿಯಾದ ಬೆಳೆ ಇದ್ದು ಬೇರೆ ಕಡೆ ಸ್ವಲ್ಪ ಅಭಾವ ಕಂಡರೆ ಅದನ್ನು ಹೇಗೂ ಸುಧಾರಿಸಬಹುದು ಒಟ್ಟಾರೆ ಬೆಳೆಯೇ ಕಡಮೆಯೆಂದಾದರೆ ಬೆಳೆ ಹೆಚ್ಚಿಸುವುದೊಂದೇ ದಾರಿ ಇರುತ್ತದೆ

ಬೆಳೆ ಹೆಚ್ಚಿಸಲು ರಾಸಾಯನಿಕ ಗೊಬ್ಬರಗಳನ್ನುಪಯೋಗಿಸಿದರೆ ಮಣ್ಣಿನ ಸಾರ ಕೆಲವು ಸಮಯದ ಬಳಿಕ ನಷ್ಟವಾಗಿ ಗಂಡಾಂತರ ಬರುವ ಸಂಭವವಿದೆಯೆಂದು ಬೌತ ಶಾಸ್ತ್ರ ವಿಜ್ಞಾನಿ ಪ್ರೊಫೆಸರ್ ಎಯಿನ್‌ಸ್ಟನರು ಇತ್ತೀಚೆಗೆ ಎಚ್ಚರಿಸಿರುವರು ಆದರೆ ಏಶಿಯಾ ಮತ್ತು ಪೌರ್ವಾತ್ಯ ರಾಷ್ಟ್ರಗಳ ಆರ್ಥಿಕ ಪರಿಷತ್ತಿಗೆ ಬಂದ ರಷ್ಯದ ಪ್ರತಿನಿಧಿಯೊಬ್ಬರು ಈ ಅಭಿಪ್ರಾಯ ಸರಿಯಲ್ಲವೆಂದು ವಾದಿಸಿರುವರು. ಅಂತೂ ಭೂಮಿಗೆ ಉತ್ಕೃಷ್ಟ ಗೊಬ್ಬರ ಒದಗಿಸುವುದೇನೋ ಅಗತ್ಯವೆಂಬುದು ನಿರ್ವಿವಾದ. ಸಂಶಯವಿಲ್ಲದ ಬಗೆಯ ಗೊಬ್ಬರಗಳನ್ನು ಉಪಯೋಗಿಸಿ ಉತ್ತಮ ತೆರದ ಬೀಜಗಳನ್ನೆ ಹಾಕಿ ಸರ್ವತ್ರ ಬೆಳೆ ಹೆಚ್ಚುವಂತೆ ಎಲ್ಲೆಲ್ಲಿಯೂ ಪ್ರಯತ್ನ ಬಲವತ್ತರವಾಗಿ ಮುಂದರಿಯಬೇಕಾಗಿದೆ.

ಆಹಾರ ಮಂತ್ರಿಯ ಉಪವಾಸ

ಅಸ್ಸಾಮು ಪ್ರಾಂತ್ಯದಲ್ಲಿ ಆಹಾರದ ಪರಿಸ್ಥಿತಿ ಬಹಳ ಮಟ್ಟಿಗೆ ಕೆಟ್ಟು ಹೋಗಿ ಜನರು ಒಂದೂಟ ಕೂಡಾ ಮಾಡುವುದು ಕಷ್ಟವಾಗಿ ಬಂತು ಅಲ್ಲಿಯ ಸರಕಾರದ ಆಹಾರ ಖಾತೆಯ ಮಂತ್ರಿಯವರು ಜನರು ಈ ರೀತಿ ಸಂಕಷ್ಟದಲ್ಲಿರುವಾಗ ಅವರ ಉಪವಾಸದಲ್ಲಿ ತಾನೂ ಭಾಗಿಯಾಗುವುದು ಯುಕ್ತವೆಂದು ತಾನೂ ಉಪವಾಸವನ್ನೇ ಕೈಕೊಂಡರು ಆರು ದಿನಗಳ ಉಪವಾಸದ ಬಳಿಕ ಪ್ರಾಂತ್ಯದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿರುವುದಾಗಿ ತಿಳಿದು ಮತ್ತೆ ಉಪವಾಸದ ಮುಕ್ತಾಯವಾಯಿತು ಆಹಾರವನ್ನು ಎಲ್ಲ ಕಂಟ್ರೋಲುಗಳಿಂದ ಮುಕ್ತ ಮಾಡಿದರು ಅದನ್ನು ಒಂದೆಡೆಯಿಂದ ಬೇರೆಡೆಗೆ ಸಾಗಿಸಲು ಕಮ್ಯೂನಿಸ್ಟರು ಅಡ್ಡಿ ಮಾಡುತ್ತಿರುವರಂತೆ ಅವಶ್ಯವುಳ್ಳ ಅಧಿಕಾರ ಪಡೆದು ಸರಕಾರದ ನಿವಾರಣೋಪಾಯ ಜಾರಿ ಮಾಡಲು ನಿರ್ಧರಿಸಿಯದೆ

ಕರ್ನಾಟಕ ವಿಧಾಯಕ ಕಾರ್ಯಕರ್ತರ ಪರಿಷತ್ತು

ಕರ್ನಾಟಕ ವಿಧಾಯಕ ಕಾರ್ಯಕರ್ತರ ಪರಿಷತ್ತೊಂದು ಹುಬ್ಬಳ್ಳಿಯಲ್ಲಿ ಧೀರೇಂದ್ರಲಾಲ ಮುಜುಮದಾರರ ಅಧ್ಯಕ್ಷತೆಯಲ್ಲಿ ಸೇರಿತು ಭಾರತ ಚರಖಾ ಸಂಘದ ಕರ್ನಾಟಕ ಶಾಖೆಯವರು ಇದನ್ನು ವ್ಯವಸ್ಥೆಗೊಳಿಸಿದವರು ಶ್ರೀ ವೀರಣ್ಣ ಗೌಡರು ಅತಿಥಿ ಅಭ್ಯಾಗತರನ್ನು ಸ್ವಾಗತೀಕರಿಸಿದ ಬಳಿಕ ಶ್ರೀ ಲಿಂಗಪ್ಪನವರು ಪರಿಷತ್ತನ್ನು ತೆರೆಯುವ ಸಮಾರಂಭ ಜರಗಿಸುತ್ತ ಗಾಂಧೀವಾದ ತಮ್ಮ ಹಕ್ಕಿನದೆಂದು ಇವರು ಭಾವಿಸಬಾರದೆಂದು ತೀವ್ರ ಟೀಕೆಗೊಳಪಡತಕ್ಕವರಲ್ಲವೆಂದು ತಿಳಿಯಲಾಗದೆಂದೂ ಹೇಳಿದರು

ಆಚಾರ್ಯ ವಿನೋಬಾ ಭಾವೆ ಮತ್ತು ಮಶ್ರೂವಾಲರ ಸಂದೇಶಗಳಿದ್ದುವು ಮಶ್ರೂವಾಲರು ಪರಿಷತ್ತುಗಳನ್ನು ಮಾಡಿ ಅಂದ ಶಬ್ದಗಳ ನಿರ್ಣಯ ಮಾಡಿದ ಮಾತ್ರಕ್ಕೆ ಕೆಲಸದ ಜವಾಬ್ದಾರಿ ತೀರಿತೆಂದು ತಿಳಿಯಬಾರದೆಂದೂ ಪ್ರತಿಯೊಂದಕ್ಕೂ ಸರಕಾರದ ಮೋರೆ ನೋಡಬಾರದೆಂದೂ ಸೂಚಿಸಿದ್ದರು

ಅಧ್ಯಕ್ಷ ಮುಜುಮದಾರರು ಕಿಸಾನ್ ರಾಜ್ಯ, ಮಜ್ದೂರ್ ರಾಜ್ಯ ಎಂಬ ಘೋಷಣೆಗಳಿಂದ ಮೋಸ ಹೋಗಬಾರದೆಂದೂ ಸರಕಾರದ ಕೇಂದ್ರದಲ್ಲಿಯಲ್ಲಿರುವಂತೆ ಪ್ರತಿಯೊಂದೂ ಹಳ್ಳಿಯಲ್ಲಿಯೂ ಅಲ್ಲಲ್ಲಿಯ ವ್ಯವಸ್ಥೆಯ ಅಧಿಕಾರ ಜನರಲ್ಲಿರುವಂತೆ ಸಾಧಿಸಬೇಕೆಂದೂ ಉಪದೇಶಿಸಿದರು.

ಅಂತೂ ಪರಿಷತ್ತು ಯಶಸ್ವಿಯಾಗಿ ಜರಗಿತು ಆ ಮೇಲೇನು ನೋಡಲಿಕ್ಕಿದೆ

ಜಪಾನಿನಲ್ಲಿ ಭೂಕಂಪದ ಅವಘಡ

ಜಪಾನಿನಲ್ಲಿ ದೊಡ್ಡ ಭೂಕಂಪವಾಗಿ ಫುಕುಲ್ ಎಂಬ 85 ಸಾವಿರ ಜನಸಂಖ್ಯೆಯುಳ್ಳ ಪಟ್ಟಣದಲ್ಲಿ ಐದರಲ್ಲಿ ನಾಲ್ಕು

ದಕ್ಷಿಣ ಕನ್ನಡ ಜಿಲ್ಲಾ ವಾಣಿಜ್ಯ ಸಂಘ

ಇದೇ ತಾರೀಖು ೨೦ನೇ ದಿನ ಜಿಲ್ಲಾ ವಾಣಿಜ್ಯ ಸಂಘದ ಎಂಟನೇ ವಾರ್ಷಿಕ ಮಹಾಸಭೆಯು ಸಂಘದ ಆಫೀಸಿನಲ್ಲಿ ಅದರ ಅಧ್ಯಕ್ಷರಾದ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು

ಸಂಘದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನೂ ವಾರ್ಷಿಕ ವರದಿಯನ್ನೂ ಸಭೆಯ ಮುಂದಿಟ್ಟು ಅವು ಅಂಗೀಕರಿಸಲ್ಪಟ್ಟವು.

ವಾರ್ಷಿಕ ವರದಿಯಲ್ಲಿ ಸಂಘವು ಈ ವರ್ಷ ಮಾಡಿರುವ ಕೆಲಸಗಳನ್ನು ವಿವರವಾಗಿ ಕೊಡಲಾಗಿದೆ ಇದನ್ನು ಸಭಿಕರ ಮುಂದಿರಿಸುತ್ತ ಶ್ರೀ ವಿ ಎಸ್ ಕುಡ್ವರು ಮಂಗಳೂರು ಬಂದರನ್ನು ಪಶ್ಚಿಮ ಕರಾವಳಿಯ ದೊಡ್ಡ ಬಂದರವನ್ನಾಗಿ ಮಾಡಬೇಕೆಂಬ ಬಗ್ಗೆ ಈ ವಾಣಿಜ್ಯ ಸಂಘದವರು ನಡೆಸಿದ ಚಳವಳದ ಪ್ರಸ್ತಾಪವನ್ನು ಪ್ರತ್ಯೇಕವಾಗಿ ಎತ್ತಿ ಹೇಳಿದರು ಈ ಪ್ರಯತ್ನಗಳು ಯಶಸ್ವಿಯಾಗುವ ಲಕ್ಷಣಗಳಿವೆಯೆಂದೂ ಹೇಳಿದರು ಈ ಕಾರ್ಯದಲ್ಲಿ ವಾಣಿಜ್ಯ ಸಂಘಕ್ಕೆ ಇಲ್ಲಿಯ ಇಂಪೀರಿಯಲ್ ಬ್ಯಾಂಕಿನ ಏಜಂಟರಾದ ಕಾರ್ಲೈಲ್‌ರೂ ಇಲ್ಲಿಯ ಪೋರ್ಟ್ ಆಫೀಸರರಾದ ಯೆಟ್ಸ್‌ಯವರೂ ಮಾಡಿರುವ ಸಹಾಯವನ್ನು ಸ್ಮರಿಸಿ ಅವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರು

ಆ ಮೇಲೆ ನಡೆಯಲಿದ್ದ ಕಾರ್ಯಕ್ರಮವೆಂದರೆ ಮುಂದಿನ ವರ್ಷಕ್ಕೆ ಬೇಕಾದ ಕಾರ್ಯಕಾರೀ ಕಮಿಟಿ ಹಾಗೂ ಅಧಿಕಾರಿಗಳ ಚುನಾವಣೆಗಳು. ಈಗಿನ ಕಾರ್ಯಕರ್ತರು ಬಂದರದ ಕುರಿತು ಚಳವಳದ ಮಾಹಿತಿ ಇದ್ದವರು ಈ ಪ್ರಶ್ನೆಯ ತೀರ್ಮಾನವಾಗುವವರೆಗೆ ಇವರೇ ಮುಂದರಿಸುವುದು ಯುಕ್ತವೆಂದು ಸಭಿಕರು ಅಭಿಪ್ರಾಯಪಟ್ಟುದರಿಂದ ಚುನಾವಣೆಗಳನ್ನು ಪ್ರಕೃತ ನವಸದಿ ದಶಂಬರದ ತನಕ ಮುಂದರಿಸಬಹುದೆಂದು ತೀರ್ಮಾನವಾಯಿತು.

ವಾಣಿಜ್ಯ ಸಂಘಕ್ಕೆ ತನ್ನ ಸ್ವಂತ ಕಟ್ಟಡವಿರುವುದು ಯೋಗ್ಯವೆಂದು ಕೆಲವು ಸದಸ್ಯರು ಸೂಚಿಸಿದರು ಈ ಬಗ್ಗೆ ವಂತಿಗೆ ಯಿಂದ ರೂಪಾಯಿ ೨೫,೦೦೦ಕ್ಕೆ ಕಡಿಮೆಯಾಗದ ನಿಧಿ ಸಂಗ್ರಹಿಸಬೇಕೆಂದು ನಿರ್ಣಯವಾಗಿ ವಂತಿಗೆ ಪಟ್ಟಿಯೂ ತಯಾರಾಯಿತು

ಇಷ್ಟೆಲ್ಲ ಕಾರ್ಯಕಲಾಪಗಳು ಅರ್ಧಗಂಟೆಯೊಳಗೆ ಮುಗಿದವು ಇದು ವರ್ತಕ ಸಂಘದ ವ್ಯವಹಾರ ಕುಶಲತೆಯನ್ನು ತೋರಿಸುತ್ತದೆಂದು ಹೇಳಬೇಕಾಗಿದೆ

ಜೋಗಿನಿಂದ ವಿದ್ಯುತ್‌ಶಕ್ತಿಯನ್ನು ಈ ಜಿಲ್ಲೆಗೆ ಒದಗಿಸುವುದು ಇತ್ಯಾದಿ ಹಲವು ವಿಷಯಗಳಲ್ಲಿ ವಾಣಿಜ್ಯ ಸಂಘವು ಜಿಲ್ಲೆಗೆ ತುಂಬಾ ಉಪಕಾರ ಮಾಡಿರುತ್ತದೆ. ನಾನಾ ವಿಧದ ಕಂಟ್ರೋಲ್ ಕಾನೂನುಗಳ ಜಾರಿಯಿಂದ ವರ್ತಕವರ್ಗಕ್ಕಾದ ತೊಂದರೆಗಳ ನಿವಾರಣೆ ಬಗ್ಗೆ ಈ ಸಂಘವು ಚೆನ್ನಾಗಿ ಕೆಲಸ ಮಾಡಿರುತ್ತದೆ. ಹೀಗೆ ಮಹಾ ಜನರಿಗೂ ವರ್ತಕ ವರ್ಗಕ್ಕೂ ಉಪಯುಕ್ತವಾದ ಈ ಸಂಸ್ಥೆ ಇನ್ನಷ್ಟು ಅಭಿವೃದ್ಧಿಹೊಂದಲೆಂದು ಆಶಿಸುತ್ತೇವೆ.

ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯ ಮಾತನ್ನು ನಾವು ಹೇಳಬೇಕಾಗಿದೆ. ಸಭೆ ನಡೆಯುತ್ತಿರುವ ನಡುವೆ. ಶ್ರೀ ಎ. ವಿ. ರಾಮರಾಯರು ಮಹಾತ್ಮಾಗಾಂಧೀ ರಾಷ್ಟ್ರೀಯ ಸ್ಮಾರಕನಿಧಿಯ ಕುರಿತೊಂದು ಪ್ರಸ್ತಾಪವೆತ್ತಿದರು. ಈ ಬಗ್ಗೆ ನೇಮಿಸಲ್ಪಟ್ಟಿರುವ ಸಾರ್ವಜನಿಕ ಸಮಿತಿಯವರು ವಂತಿಗೆ ಕೇಳ ಹೋಗುವಾಗ ವರ್ತಕ ವರ್ಗದವರು ನಮ್ಮ ವಾಣಿಜ್ಯ ಸಂಘದವರು ಈ ಬಗ್ಗೆ ಪ್ರತ್ಯೇಕವಾಗಿ ಧನ ಸಂಗ್ರಹ ಮಾಡುವರೆಂದು ಹೇಳುತ್ತಿರುವರಂತೆ. ಇದು ಎಷ್ಟರ ಮಟ್ಟಿಗೆ ಸರಿಯೆಂಬುದು ಅಂದಿನ ಸಭೆಯಲ್ಲಿ ಸ್ಪಷ್ಟವಾಗಲಿಲ್ಲ ಯಾಕೆಂದರೆ ಅದು ಸಭೆಯ ಮುಂದಿದ್ದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವಿರಲಿಲ್ಲ

ಅಂತೂ ಮೇಲಿನ ಪ್ರಸ್ತಾಪದಲ್ಲಿ ಕಂಡು ಬರುವ ಒಂದು ಭಾವನೆಯ ಕಡೆಗೆ ಲಕ್ಷ್ಯ ಕೊಡುವುದು ಅಗ್ಯತದ ವಿಚಾರವೆಂಬುದರಿಂದ ಮಾತ್ರ ನಾವು ಈ ಪ್ರಸ್ತಾಪವನ್ನೆತ್ತಿಕೊಳ್ಳಬೇಕಾಗಿರುತ್ತದೆ ಗಾಂಧೀ ಸ್ಮಾರಕ ನಿಧಿಯ ವಿಚಾರವೇ ಎಂದಲ್ಲ ಯಾವ ಸಾರ್ವಜನಿಕ ಕಾರ್ಯಕ್ರಮದ ವಿಷಯದಲ್ಲೇ ಆಗಲಿ ವರ್ತಕ ವರ್ಗದ ಪರವಾಗಿ ವಾಣಿಜ್ಯ ಸಂಘದವರೇ ಪ್ರಾತಿನಿಧ್ಯ ಹೊರತಕ್ಕದ್ದೆಂಬ ಭಾವನೆಯು ಸರಿಯಾದುದಲ್ಲ ವಾಣಿಜ್ಯ ಸಂಘಕ್ಕೆ ನಿರ್ದಿಷ್ಟ ಉದ್ದೇಶಗಳಿವೆ ಆ ಕುರಿತು ಮಾತ್ರ ಅದು ದುಡಿಯುವುದು ಯೋಗ್ಯ ಯಾವ ಸಂಸ್ಥೆಯೇ ಆಗಲಿ ತನ್ನ ಕಾರ್ಯಕಲಾಪಗಳ ಮಿತಿಗಳನ್ನು ಸರಿಯಾಗಿ ನಿರ್ಧರಿಸಿಕೊಂಡು ಆ ಮಿತಿಗಳ ಒಳಗೆ ದುಡಿದರೆ ಕಾರ್ಯದಕ್ಷತೆಯಿಂದ ನಡೆಯುವುದು.

ಇದಕ್ಕೆ ಬದಲು ವಾಣಿಜ್ಯ ಸಂಘವು ವರ್ತಕ ವರ್ಗದ ಪರವಾಗಿ ಪ್ರತಿಯೊಂದು ಬಗೆಯ ಕಾರ್ಯವನ್ನು ತಾವೇ ಜರಗಿಸಲು ಹೋಗುವುದು ಒಂದು ಸಂಕುಚಿತ ಭಾವನೆಯಾಗಿ ಮಾರ್ಪಾಟು ಹೊಂದಿ ವರ್ತಕ ವರ್ಗವು ಸಾರ್ವಜನಿಕರಿಂದ ಪ್ರತ್ಯೇಕವೆಂಬಂತಾದರೆ ಇದರ ಪರಿಣಾಮ ಸಾರ್ವಜನಿಕ ಹಾಗೂ ವರ್ತಕ ವರ್ಗ ಇವರಿಬ್ಬರ ದೃಷ್ಟಿಯಿಂದಲೂ ಹಿತಕಾರಿಯಾಗಲಾರದು

ಗಾಂಧೀ ಸ್ಮಾರಕ ನಿಧಿಯ ಕುರಿತು ವಾಣಿಜ್ಯ ಸಂಘದವರು ತಾವೇ ಪ್ರತ್ಯೇಕವಾಗಿ ನಿಧಿ ಸಂಗ್ರಹ ಕಾರ್ಯ ಕೈಕೊಳ್ಳುವ ಯೋಚನೆ ಮಾಡಿದ್ದರೆ ಅವನ್ನು ಬಿಟ್ಟುಕೊಡಬೇಕಾಗಿ ನಾವು ಆಗ್ರಹ ಪೂರ್ವಕ ವಿನಂತಿ ಮಾಡಿಕೊಳ್ಳಬೇಕಾಗಿದೆ

ಪಾಲಷ್ಟು ನಾಶವಾಗಿದೆ ಎಂದು ವಾರ್ತೆ ಬಂದಿರುತ್ತದೆ ಇದು ಕರಾವಳಿ ಪಟ್ಟಣವಿದ್ದು ಸಮುದ್ರ ನೀರು ಉಕ್ಕಿ ಬಂತೆಂದೂ ಇನ್ನೊಂದೆಡೆಯಿಂದ ಬೆಂಕಿಯಿಂದ ಪಟ್ಟಣವು ಸುಟ್ಟು ಹೋಯಿತೆಂದೂ ತಿಳಿದು ಬರುತ್ತದೆ. ಈ ಪಟ್ಟಣವಲ್ಲದೆ ಇನ್ನು ಆರು ಪಟ್ಟಣಗಳು ನಾಶವಾಗಿವೆಯಂತೆ ಸಾವಿರಾರು ಜನರು ಮೃತರಾಗಿರುವರು ಭೂಕಂಪವು ರಾತ್ರೆ ಕಾಲದಲ್ಲಿ ಸಂಭವಿಸಿತು ಜಪಾನಿನಲ್ಲಿ ಆಗಾಗ ಭೂಕಂಪಗಳಾಗುತ್ತಿದ್ದರೂ ಈ ಬಾರಿಯ ಭೂಕಂಪವು ಬಹಳ ಹಾವಳಿ ಮಾಡಿರುತ್ತದೆ

ಮೊದಲೇ ಆಹಾರ ಇತ್ಯಾದಿಗಳಿಂದ ಕಂಗೆಟ್ಟಿರುವ ಈ ಜನರು ಇಂಥ ಆಪತ್ತಿಗೊಳಗಾದಾಗ ಅಖಿಲ ಜಗತ್ತು ಅವರೆಡೆಗೆ ಸಹಾನುಭೂತಿ ತೋರಿಸಿ ಅವಶ್ಯವುಳ್ಳ ಸಹಾನುಭೂತಿ ತೋರಿಸುವರೆಂದು ಆಶಿಸುತ್ತೇವೆ

ಶ್ರೀ ಮುಲ್ಕಿ ಸುಬ್ಬರಾಯರ ನಿಧನ

ನಿವೃತ್ತ ತಹಸೀಲ್‌ದಾರರಾದ ಶ್ರೀ ಮುಲ್ಕಿ ಸುಬ್ಬರಾಯರು ಇತ್ತೀಚೆಗೆ ನಿಧನರಾದ ವಾರ್ತೆ ಪ್ರಕಟಿಸಲು ವಿಷಾದಿಸುತ್ತೇವೆ

ಮುಲ್ಕಿ ಸುಬ್ಬರಾಯರ ಪರಿಚಯವಿಲ್ಲದವರು ಅಪರೂಪ ಇವರು ಸನಾತನ ಧರ್ಮದ ಮೇಲೆ ವಿಶೇಷ ಪ್ರೇಮ ಹಾಗೂ ಆಸಕ್ತಿಯುಳ್ಳವರಿದ್ದರು ಭಗವದ್ಗೀತೆ ಮೊದಲಾದ ಧಾರ್ಮಿಕ ಗ್ರಂಥಗಳ ಪರಿಚಯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿಯೂ ಸ್ತ್ರೀ ಪುರುಷ ಜನರಲ್ಲಿಯೂ ಪ್ರಚಾರಪಡಿಸಲು ಹೆಚ್ಚಿನ ಪ್ರಯತ್ನ ಮಾಡುತ್ತಿದ್ದರು ಇವರ ಧಾರ್ಮಿಕ ಭಾವನೆ ಇಷ್ಟರಲ್ಲೇ ಮುಗಿಯದೆ ಕಾರ್ಯ ರೂಪದಲ್ಲಿಯೂ ಇತ್ತು ನಿವೃತ್ತರಾದ ಇವರು ಸುಮ್ಮನೆ ವಿಶ್ರಾಂತಿ ಪಡೆಯುತ್ತ ಇರಲು ಒಪ್ಪದೆ ಸಾರ್ವಜನಿಕರ ಬಗ್ಗೆ ಆಸಕ್ತಿಯಿಂದ ದುಡಿಯುತ್ತಿದ್ದರು. ಅನಾಥ ಬಾಲಕಾಶ್ರಮ-ಬಾಲಿಕಾಶ್ರಮ ಇವುಗಳ ಬಗ್ಗೆ ವಿಶೇಷ ಚಟುವಟಿಕೆಯಿಂದ ದುಡಿಯುತ್ತಿದ್ದರು ಇವರ ನಿಧನವು ಸಮಾಜಕ್ಕೊಂದು ನಷ್ಟವೆಂಬ ಬಗ್ಗೆ ಸಂಶಯವಿಲ್ಲ.

ಸುಬ್ಬರಾಯರು ಸ್ವದೇಶಾಭಿಮಾನಿಯ ಸ್ಥಾಪಕರ ಬಹಳ ಮಿತ್ರರಿದ್ದು ಆಗಾಗ ಈ ಪತ್ರಿಕೆಗೆ ಬರೆಯುತ್ತಿದ್ದರು

ಇವರ ಕುಟುಂಬದವರ ಹಾಗೂ ಅನೇಕ ಸ್ನೇಹಿತರ ದುಃಖದಲ್ಲಿ ನಾವು ನಮ್ಮ ಸಹಸಂತಾಪವನ್ನು ಸೂಚಿಸಲು ಬಯಸುತ್ತೇವೆ.

ಕಾಶೀ ಮಠಾಧೀಶರು

ಈಗ ಕೊಚ್ಚಿನ್ ಸಂಸ್ಥಾನದಲ್ಲಿರುವ ಶ್ರೀ ಕಾಶೀ ಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರು ಸದ್ಯದಲ್ಲಿ ರಾಮೇಶ್ವರ ಕ್ಷೇತ್ರಕ್ಕೆ ಶಿಷ್ಯ ಸಮೇತರಾಗಿ ಹೋಗಲಿರುವರೆಂದು ವದಂತಿಯಿದೆ.

'ಜಪಾನಿ ಚಕ್ರವರ್ತಿ ಹಿಂದೂ ವಂಶದವನು

ಒಂದು ಹೊಸ ಸಿದ್ಧಾಂತ

"ರಾಜಾ ಪ್ರತ್ಯಕ್ಷ ದೇವತಾ" ಎಂಬುದೊಂದು ಪ್ರಾಚೀನ ಭಾರತೀಯ ನಿರೂಪ. ಹಿಂದೂ ಅರಸರ ಸಂಸ್ಕೃತಿ ಸಾಂಪ್ರದಾಯಗಳು ಇದೇ ನಿರೂಪಕ್ಕನುಸಾರ ಅನುಸರಿಸಲ್ಪಡುತ್ತಿದ್ದುವು ಜಪಾನಿಯರಿಗೆ ತಮ್ಮ ಅರಸನು ಪ್ರತ್ಯಕ್ಷ ದೇವರಿಗೆ ಸಮಾನನು. ದೇವರಿಂದಲೇ ಸಹಸ್ರಾರು ವರ್ಷಗಳ ಹಿಂದೆ ಜಪಾನಿ ರಾಜವಂಶವು ಸೃಷ್ಟಿಸಲ್ಪಟ್ಟಿತೆಂದು ಆ ಜನರು ನಂಬುತ್ತಾರೆ

ಈಗ ಟೋಕಿಯೊದಲ್ಲಿರುವ ಓರ್ವ ಭಾರತೀಯ ವಿದ್ವಜ್ಜರೂ ಪತ್ರಿಕೋದ್ಯಮಿಗಳೂ ಆಗಿರುವ ಚಮನ್‌ಲಾಲ್ ಎಂಬವರು ಜಪಾನಿ ಚಕ್ರವರ್ತಿಗಳ ಮೂಲಪುರುಷರು ಹಿಂದುಗಳಾಗಿದ್ದರೆಂಬ ಸಿದ್ಧಾಂತವೊಂದನ್ನು ರೂಪುಗೊಳಿಸಿರುವರು

ಜಪಾನಿ ಚಕ್ರವರ್ತಿ ಮಿಕಾಡೊನ ಕಿವಿಗಳಾಕೃತಿಯು ಬುದ್ಧನ ಕಿವಿಗಳಂತಿದೆ. ಮಾತ್ರವಲ್ಲ ಹಿಂದೆ ಶಕವಂಶಸ್ಥರ ಕಿವಿಗಳಂತೆ ಅವು ಕಣ್ಣಿನ ರೇಖೆಯ ಕೆಳಗೆ ಇವೆ. ಈ ಕಿವಿ ಸಿದ್ಧಾಂತವು ಚಮನ್‌ಲಾಲರದಲ್ಲ ರಿಂಟಾರೊ ನಾಗಸಾವಾ ಎಂಬ ಜಪಾನಿ ವಿದ್ವಜ್ಜನು ಇದರ ಮೂಲ ನಿರೂಪಕನು

ಚಕ್ರವರ್ತಿಗೆ ಅಪಮಾನ

ಈ ವಿಷಯದ ಕುರಿತು ನಾಗಾಸಾವರವರು ಒಂದು ಚಿಕ್ಕ ಹಸ್ತಪತ್ರಿಕೆಯನ್ನೂ ಪ್ರಕಟಿಸಿದ್ದರು "ನಮ್ಮ ಜಪಾನ್ ಚಕ್ರವರ್ತಿ ಕುಟುಂಬಕ್ಕೆ ಇದೊಂದು ಅಗೌರವದ ಕೆಲಸವೆಂದು ನನ್ನನ್ನು ಅವಮಾನಿಸಲಾಯಿತು ಹೀಗೆಂದು ಅವರು ತಿಳಿಸುತ್ತಾರೆ. ಅವರನ್ನು ಜೈಲಿನ ತನಕವೂ ಕಳುಹಿಸಲಾಗಿತ್ತೆಂದೂ ತಿಳಿದು ಬರುತ್ತದೆ. ಇಷ್ಟಾಗಿ ಈಗ ೬೧ ವರ್ಷದವರಾದ ನಾಗಾಸಾವಾರವರು ಚಕ್ರವರ್ತಿ ಹಿರೊಹಿಟೊರವರ ಕಿವಿಗಳ ವಿಷಯ ಇನ್ನೂ ತುಂಬಾ ಆಕರ್ಷಿತರಾಗಿದ್ದಾರೆ

ಚೀನಾ ಮಾರ್ಗ

ಜಪಾನಿ ಚಕ್ರವರ್ತಿ ಕುಟುಂಬದವರ ಕಿವಿಗಳ ಆಕೃತಿಯನ್ನೇ ಹೋಲುವ ಒಂದು ಗುಡ್ಡಗಾಡು ಪಂಗಡವು ದಕ್ಷಿಣ ಜಪಾನಿನ ಕಾಗೊಶಿಮಾ ಬಳಿಯಿದೆಯಂತೆ. ಈ ಪಂಗಡದ ಜನರ ಮೂಲವು ಹಿಂದೂ ಜನರದಿರಬೇಕೆಂಬ ಊಹೆಗೆ ಬಲವಾದ ಆಧಾರಗಳಿವೆ.

ಹಿರೊಹಿಟೊವಿನ ವಂಶದ ಮೂಲಪುರುಷರಾದ ಹಿಂದುಗಳು ಚೀನದ ಮೂಲಕ ಜಪಾನಿನ ಕಡೆ ಬಂದಿರಬೇಕೆಂದು ನಾಗಾಸಾವಾ ಮತ್ತು ಚಮನ್‌ಲಾಲರಿರ್ವರೂ ಈಗ ಕಂಡುಹಿಡಿದಿರುವರು ಅವರ ಕೊನೆಯ ನೆಲೆ ಚೀನದ ಅತಿ ಪೂರ್ವದ ಭಾಗವಾದ ಫ್ಯುಕಿನ್ ಪ್ರದೇಶವಾಗಿದೆಂದು ನಾಗಸಾವಾರವರು ಹೇಳುತ್ತಾರೆ ಅಲ್ಲಿಂದವರು ಜಪಾನಿನ ಕ್ಯೂಸು ದ್ವೀಪಕ್ಕೆ ಜಲ ಪ್ರಯಾಣದ ಮೂಲಕ ಹೋದರೆಂದೂ, ಈ ಪಂಗಡದ ಜನರಿಗೆ ಓರ್ವ ಸ್ತ್ರೀಯು ಮುಖಂಡೆಯಾಗಿದ್ದಳೆಂದೂ ಇಸೆ ಎಂಬಲ್ಲಿ ಅವಳ ಸಮಾಧಿ ಇಂದಿಗೂ ಇದೆಯೆಂದೂ ಅವರು ತಿಳಿಸುತ್ತಾರೆ. ಕೆಲವು ಜಪಾನಿ ದೇವ ಮಂದಿರಗಳಲ್ಲಿ ಹಿಂದೂ ದೇವತೆಗಳು ಆರಾಧಿಸಲ್ಪಡುವುದು ಆ ದೇಶಕ್ಕೂ ಬೌದ್ಧ ಧರ್ಮಕ್ಕೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತದೆಂದು ಚಮನ್‌ಲಾಲರು ತಿಳಿಸುತ್ತಾರೆ.

ಸ್ವದೇಶಾಭಿಮಾನಿ

ತಾರೀಕು 2—7—1948

ಸರ್ದಾರ ಪಟೇಲರ ವಿನಂತಿ

ಸಂಯುಕ್ತ ಪ್ರಾಂತದಲ್ಲಿ ಶಾಸನ ಸಭೆಯ ಕೆಲವು ಸ್ಥಾನಗಳಿಗೆ ಉಪ ಚುನಾವಣೆಗಳು ನಡೆಯುತ್ತಿವೆ. ಕಾಂಗ್ರೆಸ್ ಉಮೇದ್ವಾರರಿಗೆ ಬೆಂಬಲಕೊಡಬೇಕೆಂದು ಮತದಾರರಿಗೆ ಭಾರತ ಸರಕಾರದ ಉಪ ಪ್ರಧಾನ ಮಂತ್ರಿಯವರಾದ ಸರ್ದಾರ ವಲ್ಲಭಾಯಿ ಪಟೇಲರು ಡೆಹರಾಡೂನಿನಿಂದ ಒಂದು ವಿನಂತಿಯನ್ನು ಕಳುಹಿಸಿದ್ದಾರೆ ಈ ವಿನಂತಿಯಲ್ಲಿಯ ವಿಚಾರಗಳು ಅಖಿಲ ಭಾರತವು ಮನಸ್ಸಿಗೆ ತಗೆದುಕೊಂಡು ಯೋಚಿಸತಕ್ಕಂತಿವೆ

ಕಾಂಗ್ರೆಸ್ ಸಂಸ್ಥೆ ಈ ದೇಶದ ಬಗ್ಗೆ ಹಲವು ವರ್ಷಗಳಿಂದ ದುಡಿದು ದೇಶದ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ಜನರ ವಿಶ್ವಾಸಕ್ಕೆ ಪಾತ್ರವಾದ ಸಂಸ್ಥೆ ಕಾಂಗ್ರೆಸಿನವರು ದೇಶದ ಆಡಳಿತೆ ವಹಿಸಿದಂದಿನಿಂದ ದೇಶವು ಅನಿರೀಕ್ಷಿತ ಆಪತ್ತುಗಳನ್ನು ಮೇಲಿಂದ ಮೇಲ ಎದುರಿಸಬೇಕಾದ ಪ್ರಸಂಗಗಳು ಬಂದೊದಗಿದವು ಮಿಲಿಯಗಟ್ಟಲೆ ಜನರು ನಿರಾಶ್ರಿತರಾಗುವ ಇಂಥ ಪರ್ಯಟನೆಯನ್ನು ಸುಧಾರಿಸುವುದು ಸುಲಭದ ಕೆಲಸವಲ್ಲ ಯಾವ ದೇಶದ ಸರಕಾರವಾದರೂ ಇಂಥ ವಿಪತ್ತಿನ ಎದುರು ತಲ್ಲಣಿಸುತ್ತಿತ್ತು ಕಾಂಗ್ರೆಸ್ ಸರಕಾರವು ಅತ್ಯಂತ ದಕ್ಷತೆಯಿಂದ ಪರಿಸ್ಥಿತಿಯನ್ನು ಸುಧಾರಿಸಲು ಹೋರಾಡಿರುತ್ತದೆ

ಆಹಾರದ ತುಟ್ಟಿ ಹಾಗೂ ಇತರ ಅವಶ್ಯಕ ವಸ್ತುಗಳ ಅಭಾವವು ಇದೇ ಬಗೆಯ ಮಹತ್ತರದ ಗಂಡಾಂತರವಿತ್ತು. ಅಖಿಲ ಭಾರತದಲ್ಲಿ ಬಂಗಾಲ ಬರಗಾಲದ ಸ್ಥಿತಿ ಒದಗಬಹುದೆಂಬ ಭೀತಿ ಇತ್ತು. ~~ಇದನ್ನೆದುರಿಸುವುದೂ ಬಹಳ ಕಷ್ಟದ ಕೆಲಸ~~ವಿತ್ತು ಕಾಂಗ್ರೆಸ್ ಸರಕಾರವು ಇದರಿಂದಲೂ ಎದೆಗಡದೆ ಧೈರ್ಯದಿಂದ ದುಡಿದಿರುತ್ತದೆ

ಬ್ರಿಟಿಷರು ಹೋಗುವಾಗ ಸಂಸ್ಥಾನಗಳನ್ನೆಲ್ಲ ಯಾವ ವ್ಯವಸ್ಥೆಗೂ ಒಳಪಡಿಸದೆ ಬಿಟ್ಟುದರಿಂದ ದೇಶದಲ್ಲಿ ಪ್ರತಿಯೊಂದು ಸಂಸ್ಥಾನವೂ ತನ್ನ ತನ್ನ ಹಾದಿಹಿಡಿದ್ದು ಭಯಂಕರ ಅವ್ಯವಸ್ಥೆ ತಲೆದೋರುವ ಸಂಭವವಿತ್ತು ಈ ಪ್ರಶ್ನೆಯನ್ನು ಕಾಂಗ್ರೆಸ್ ಸರಕಾರವು ಬಿಡಿಸಿದ ರೀತಿಯನ್ನು ಅಖಿಲ ಜಗತ್ತೇ ಮೆಚ್ಚಿದಂತಿದೆ

ಜಾತ್ಯಭಿಮಾನವು ಮಹಾತ್ಮಾ ಗಾಂಧಿಯವರಂಥ ವ್ಯಕ್ತಿಯನ್ನು ಬಲಿಗೊಂಡು ಅಖಿಲ ಭಾರತವನ್ನು ದಹಿಸುತ್ತದೆಯೊ ಎಂಬ ಭೀತಿಯನ್ನು ಕಾಂಗ್ರೆಸಿಗರು ನಿರ್ಭೀತಿಯಿಂದ ಎದುರಿಸಿರುವರೆಂಬುದನ್ನು ಯಾರು ಅಲ್ಲಗಳೆಯುವರು?

ಸರಕಾರವು ಕೈಗೆ ಬಂದೊಡನೆ ಇಂಥ ಅನೇಕ ಆಪತ್ತುಗಳನ್ನು ಅತ್ಯಂತ ದಕ್ಷತೆಯಿಂದ ಎದುರಿಸಿರುವುದು ನಿಜವಿದ್ದರೂ ಇನ್ನೂ ದೇಶವು ಗಂಡಾಂತರಗಳಿಂದ ಪಾರಾಗಿಲ್ಲವೆಂಬುದೂ ಅಷ್ಟೇ ಸತ್ಯವಿರುತ್ತದೆ. ಕಾಶ್ಮೀರದ ಪ್ರಶ್ನೆ ಪೂರ್ಣ ತೀರ್ಮಾನವಾಗಿಲ್ಲ. ಹೈದರಾಬಾದಿನ ಉಪಟಳ ಯಾವ ಪರಿಣಾಮವನ್ನು ತಂದೊಡ್ಡುತಿದೆಯೋ ಹೇಳಲಸಾಧ್ಯ ಆವಶ್ಯಕ ವಸ್ತುಗಳು ಇನ್ನೂ ಸರಿಯಾಗಿ ದೊರೆಯುತ್ತಿಲ್ಲ. ಕ್ರಯಗಳು ಕೆಳಕ್ಕೆ ಇಳಿಯುವ ಬದಲು ಇನ್ನೂ ಏರುವ ಲಕ್ಷಣಗಳೇ ಕಾಣುತ್ತಿವೆ ಆಹಾರದ ಪ್ರಶ್ನೆ ಇನ್ನೂ ತೃಪ್ತಿಕರವಾಗಿ ಪರಿಹರಿಸಲ್ಪಟ್ಟಿರುತ್ತದೆಂದು ಹೇಳುವಂತಿಲ್ಲ. ಕೈಗಾರಿಕೆಗಳಲ್ಲಿ ಮುಷ್ಕರಗಳ ತೊಂದರೆ ಇನ್ನೂ ನಿವಾರಿಸಲ್ಪಟ್ಟಿಲ್ಲ ಜಾತ್ಯಭಿಮಾನ, ಪ್ರಾಂತ್ಯಾಭಿಮಾನ ಮೊದಲಾದ ಸಂಕುಚಿತ ಭಾವನೆಗಳು ತಲೆ ಎತ್ತುತ್ತಲೇ ಇವೆ ಕಮ್ಯೂನಿಸ್ಟರು ಹಿಂಸಾತ್ಮಕ ಚಳವಳದ ಹಾದಿಯನ್ನೇ ಮುಂದೊತ್ತುತ್ತಿದ್ದಾರೆ. ನಮ್ಮ ರಾಷ್ಟ್ರವೂ ಇನ್ನೂ ಬಲವಾಗಿ ಬೇರೂರಿ ದೇಶದಲ್ಲಿ ಶಾಂತಿ ಸ್ಥಾಪಿಸಲ್ಪಟ್ಟಿಲ್ಲವೆಂಬ ಸತ್ಯ ಸ್ಥಿತಿಯನ್ನು ಯಾರೂ ಮರೆಯಲಾಗದು

ಇಂಥ ನಾಜೂಕಿನ ಪರಿಸ್ಥಿತಿಯಲ್ಲಿ ದೇಶದ ಆಡಳಿತೆಯನ್ನು ಜನರ ವಿಶ್ವಾಸವನ್ನು ಅವಿಶ್ರಾಂತ ಶ್ರಮದಿಂದ ದುಡಿದು ಪಡೆದಿರುವ ಕಾಂಗ್ರೆಸಿಗರ ಕೈಯಲ್ಲಿರಿಸುವುದೇ ಜಾಣತನವೆಂಬ ಬಗ್ಗೆ ಸಂಶಯವಿಲ್ಲ

ಕಾಂಗ್ರೆಸ್ ಸರಕಾರದ ಕುಂದುಕೊರತೆಗಳನ್ನು ಎತ್ತಿತೋರಿಸಿ ಟೀಕೆ ಮಾಡುವುದಾದರೂ ದೊಡ್ಡ ಕೆಲಸವಲ್ಲ ಟೀಕೆ ಇರಬಾರದೆಂದಲ್ಲ ಪರಿಸ್ಥಿತಿ ಸುಧಾರಿಸುವ ಉದ್ದೇಶದಿಂದ ಕೆಲಸ [illegible] ಸಹಾಯ ಮಾಡುವ ಉದ್ದೇಶದಿಂದ ವಿಧಾಯಕ [illegible] ಟೀಕೆಗಳಿಂದ [illegible] ಪ್ರಯೋಜನವಿರುತ್ತದೆ ಕಾಂಗ್ರೆಸ್ ಸಂಸ್ಥೆಯನ್ನು ಅಧಿಕಾರದಿಂದ ಇಳಿಸಬೇಕು ತಾವು ಮುಂಚೆ ಬರಬೇಕು ಎಂಬ ತಮ್ಮ ಸ್ವಂತ ಸ್ವಾರ್ಥದ ದೃಷ್ಟಿಯಿಂದ ಕಾಂಗ್ರೆಸ್ ಸಂಸ್ಥೆಯನ್ನು ಸಿಂದಿಗೊಳಪಡಿಸುವವರು ದೇಶಕ್ಕೆ ಉಪಕಾರ ಮಾಡುವ ಬದಲು ಭಯಂಕರ ಹಾನಿಯನ್ನೇ ತಂದೊಡ್ಡುತ್ತಿರುವರು

ಸರ್ದಾರ ಪಟೇಲರು ಸಾಮ್ಯವಾದಿ ಪಕ್ಷದ ಕುರಿತು ಪ್ರತ್ಯೇಕವಾಗಿ ಎತ್ತಿಹೇಳಿರುವರು ಇವರು ತಮ್ಮ ಭಿನ್ನಾಭಿಪ್ರಾಯಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಿ ಅವಶ್ಯವುಳ್ಳ ಟೀಕೆಗಳನ್ನು ಕಾಂಗ್ರೆಸ್ ಸಂಸ್ಥೆಯ ಒಳಗಿನಿಂದಲೇ ಮುಂದೊತ್ತುವುದು ಯುಕ್ತವಿತ್ತು ಇದು ತಮ್ಮ ತಮ್ಮ ಪಕ್ಷಗಳನ್ನು ಬಲಪಡಿಸುವ ಸಮಯವಲ್ಲ. ಎಲ್ಲರೂ ಒಟ್ಟು ಸೇರಿ ರಾಷ್ಟ್ರವನ್ನು ಆಪತ್ತಿನಿಂದ ರಕ್ಷಿಸಿ ಬಲಪಡಿಸಬೇಕಾದುದೇ ಈಗಿನ ಆವಶ್ಯಕತೆ. ಈಗಿನ ಆಪತ್ತಿನ ಅರಿವಿಲ್ಲದಂತೆ ವರ್ತಿಸಿದರೆ ಅದು ಸತ್ಪರಿಣಾಮಕಾರಿಯಾಗಲಾರದು.

ಸಾಮ್ಯವಾದ ಮೊದಲಾದ ಬಗೆಯ ಹೊಸ ಪ್ರಯೋಗಗಳನ್ನು ಈ ದೇಶದಲ್ಲಿ ಮಾಡಿ ನೋಡಬಾರದೆಂಬುದು ಇದರ ಅಭಿಪ್ರಾಯವಲ್ಲ ನಮ್ಮ ರಾಷ್ಟ್ರವು ಬಲಿಷ್ಠವಾಗಿ ಸ್ಥಿರವಾಗಿ ನಿಂತ ಬಳಿಕ ಇಂಥ ಪ್ರಯೋಗಗಳನ್ನೆಲ್ಲ [illegible] ಗಳನ್ನು ಸಹಿಸಿಕೊಳ್ಳಲು ನಮ್ಮ [illegible] ಇಂಥ ವಿವಿಧ ಯೋಜನೆಗಳನ್ನು ನಮ್ಮಲ್ಲಿಯೂ ಮಾಡಿ ನೋಡಬಹುದು. ಅದಕ್ಕೆ ಈಗಿನ ಪರಿಸ್ಥಿತಿಯು ಹೇಳಿಸಿದ್ದಲ್ಲ

ದೇಶವನ್ನು ಈಗಿನ ಸ್ಥಿತಿಯಿಂದ ಮುಂದೆ ಶಕ್ತಿ ಬದ್ಧವಾದ ರಾಷ್ಟ್ರವನ್ನು ನಲೆಸಿಲ್ಲಿಸುವ ಕಾರ್ಯವನ್ನು ಕಾಂಗ್ರೆಸ್ ಸಂಸ್ಥೆಯ ಮೂಲಕವಲ್ಲದೆ ಬೇರಾವ ಸಂಸ್ಥೆಯ ಮೂಲಕವೂ ಸಾಧ್ಯವಾಗುವಂತಿಲ್ಲ ಆದುದರಿಂದ ಎಲ್ಲ ಪ್ರಜೆಗಳೂ ಕಾಂಗ್ರೆಸಿಗೇನೇ ಬೆಂಬಲಕೊಡಬೇಕು

ಸರ್ದಾರ ಪಟೇಲರ ಈ ವಿನಂತಿಯನ್ನು ಎಲ್ಲರೂ ಮನನ ಮಾಡಬೇಕು ಇಲ್ಲಿ ಚುನಾವಣೆಗಳು ಈಗ ನಡಯುತ್ತ ಇಲ್ಲ ಆದರೆ ಅವು ಬರಲಿಕ್ಕೆ ಬಹಳ ದೂರವೂ ಇಲ್ಲ ಕಾಂಗ್ರೆಸ್ಸಿಗೆ ಎಷ್ಟರ ಮಟ್ಟಿಗೆ ಬೆಂಬಲಕೊಡುವುದು ಅಗತ್ಯವೆಂಬ ಪ್ರಶ್ನೆಯನ್ನು ಈಗಿನಿಂದಲೇ ವಿಚಾರಿಸುವುದು ಒಳ್ಳೆಯದು

ಕಾಂಗ್ರೆಸ್ ಸಂಸ್ಥೆಯ ಮೇಲಿದ್ದ ಜನರ ವಿಶ್ವಾಸ ಶಿಥಿಲವಾಗುವಂತೆ ಕಾಂಗ್ರೆಸಿಗರೇ ಮಾಡಿದರೆ ಅದು ಅಕ್ಷಮ್ಯ ಅಪರಾಧವೆಂಬ ಒಂದು ಮಾತನ್ನು ನಾವು ಇದಕ್ಕೆ ಸೇರಿಸುವುದು ಅಗತ್ಯ.

ಟೀಕೆ-ಟಿಪ್ಪಣಿಗಳು

ಜಗತ್ತಿನಲ್ಲಿ ಆಹಾರದ ಅಭಾವ

ಜಗತ್ತಿನ ಆಹಾರ ಮತ್ತು ಕೃಷಿ ಸಂಬಂಧದ ಸಂಸ್ಥೆಯೊಂದು ಈಗ ಜಗತ್ತಿನಲ್ಲಿ ಬೆಳೆಯುವ ಆಹಾರ ಜಗತ್ತಿನ ಜನರಿಗೆ ಸಾಕಷ್ಟಿಲ್ಲವೆಂದು ಎಚ್ಚರಿಸಿರುತ್ತದೆ ಆಹಾರದ ಬೆಳೆ ಹೆಚ್ಚಿಸುವುದು ಅತ್ಯಾವಶ್ಯಕವೆಂದು ತೋರಿಸಿರುತ್ತದೆ. ಜಗತ್ತಿನಲ್ಲಿ ಒಂದೆಡೆ ಸಮೃದ್ಧಿಯಾದ ಬೆಳೆ ಇದ್ದು ಬೇರೆಕಡೆ ಸ್ವಲ್ಪ ಅಭಾವ ಕಂಡರೆ ಅದನ್ನು ಹೇಗೂ ಸುಧಾರಿಸಬಹುದು. ಒಟ್ಟಾರೆ ಬೆಳೆಯೇ ಕಡಮೆಯೆಂದಾದರೆ ಬೆಳೆ ಹೆಚ್ಚಿಸುವುದೊಂದೇ ದಾರಿ ಇರುತ್ತದೆ,

ಬೆಳೆ ಹೆಚ್ಚಿಸಲು ರಾಸಾಯನಿಕ ಗೊಬ್ಬರಗಳನ್ನುಪಯೋಗಿಸಿದರೆ ಮಣ್ಣಿನ ಸಾರ ಕೆಲವು ಸಮಯದ ಬಳಿಕ ನಷ್ಟವಾಗಿ ಗಂಡಾಂತರ ಬರುವ ಸಂಭವವಿದೆಯೆಂದು ಬೌತ ಶಾಸ್ತ್ರ ವಿಜ್ಞಾನಿ ಪ್ರೊಫೆಸರ್ ಎಯಿನ್‌ಸ್ಟನರು ಇತ್ತೀಚೆಗೆ ಎಚ್ಚರಿಸಿರುವರು ಆದರೆ ಏಸಿಯಾ ಮತ್ತು ಪೌರ್ವಾತ್ಯ ರಾಷ್ಟ್ರಗಳ ಆರ್ಥಿಕ ಪರಿಷತ್ತಿಗೆ ಬಂದ ರಷ್ಯದ ಪ್ರತಿನಿಧಿಯೊಬ್ಬರು ಈ ಅಭಿಪ್ರಾಯ ಸರಿಯಲ್ಲವೆಂದು ವಾದಿಸಿರುವರು ಅಂತೂ ಭೂಮಿಗೆ [illegible] ಗೊಬ್ಬರ ಒದಗಿಸುವುದೇನೋ ಅಗತ್ಯವೆಂಬುದು ನಿರ್ವಿವಾದ. ಸಂಶಯವಿಲ್ಲದ [illegible] ಗೊಬ್ಬರಗಳನ್ನು ಉಪಯೋಗಿಸಿ, ಉತ್ತಮ ತರದ ಬೀಜಗಳನ್ನೆ ಹಾಕಿ ಸರ್ವತ್ರ ಬೆಳೆ ಹೆಚ್ಚುವಂತೆ ಎಲ್ಲೆಲ್ಲಿಯೂ ಪ್ರಯತ್ನ ಬಲವತ್ತರವಾಗಿ ಮುಂದರಿಯಬೇಕಾಗಿದೆ

ಆಹಾರ ಮಂತ್ರಿಯ ಉಪವಾಸ

ಅಸ್ಸಾಮ ಪ್ರಾಂತ್ಯದಲ್ಲಿ ಆಹಾರದ ಪರಿಸ್ಥಿತಿ ಬಹಳ ಮಟ್ಟಿಗೆ ಕೆಟ್ಟು ಹೋಗಿ ಜನರು ಒಂದೂಟ ಕೂಡಾ ಮಾಡುವುದು ಕಷ್ಟವಾಗಿ ಬಂತು ಅಲ್ಲಿಯ ಸರಕಾರದ ಆಹಾರ ಖಾತೆಯ ಮಂತ್ರಿಯವರು ಜನರು ಈ ರೀತಿ ಸಂಕಷ್ಟದಲ್ಲಿರುವಾಗ ಅವರ ಉಪವಾಸದಲ್ಲಿ ತಾನೂ ಭಾಗಿಯಾಗುವುದು ಯುಕ್ತವೆಂದು ತಾನೂ ಉಪವಾಸವನ್ನೇ ಕೈಕೊಂಡರು ಆರು ದಿನಗಳ ಉಪವಾಸದ ಬಳಿಕ ಪ್ರಾಂತ್ಯದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿರುವುದಾಗಿ ತಿಳಿದು ಮತ್ತೆ ಉಪವಾಸದ ಮುಕ್ತಾಯವಾಯಿತು ಆಹಾರವನ್ನು ಎಲ್ಲ ಕಂಟ್ರೋಲುಗಳಿಂದ ಮುಕ್ತ ಮಾಡಿದರು ಅದನ್ನು ಒಂದೆಡೆಯಿಂದ ಬೇರೆಡೆಗೆ ಸಾಗಿಸಲು ಕಮ್ಯೂನಿಸ್ಟರು ಅಡ್ಡಿ ಮಾಡುತ್ತಿರುವರಂತೆ ಅವಶ್ಯವುಳ್ಳ ಅಧಿಕಾರ ಪಡೆದು ಸರಕಾರದ [illegible] ಘೋಷಿಸಿದೆ

ಕರ್ನಾಟಕ ವಿಧಾಯಕ ಕಾರ್ಯ ಕರ್ತರ ಪರಿಷತ್ತು

ಕರ್ನಾಟಕ ವಿಧಾಯಕ ಕಾರ್ಯಕರ್ತರ ಪರಿಷತ್ತು [illegible] ದೇವೇಂದ್ರಲಾಲ ಮಜುಮದಾರರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ವ್ಯವಸ್ಥೆಗೆ [illegible] ಮೊದಲಾದ [illegible] ಸ್ವಾತಂತ್ರ್ಯ [illegible] ಗಳನ್ನು [illegible] ಇನ್ನು [illegible] ಹೇಳಿದರು

ಆಚಾರ್ಯ ವಿನೋಬಾ ಭಾವೆ ಮತ್ತು ಮಶ್ರೂವಾಲಾ ಇವರ ಸಂದೇಶಗಳು [illegible] ಅಂದ ಶಬ್ದಗಳ ನಿರ್ಣಯ ಮಾಡಿದ ಮಾತ್ರಕ್ಕೆ ಕೆಲಸದ ಜವಾಬ್ದಾರಿ ತೀರಿತೆಂದು ತಿಳಿಯಬಾರದೆಂದೂ ಪ್ರತಿಯೊಂದಕ್ಕೂ ಸರಕಾರದ ಮೋರೆ ನೋಡಬಾರದೆಂದೂ ಸೂಚಿಸಿದ್ದರು

ಅಧ್ಯಕ್ಷ ಮುಜುಮದಾರರು ಕಿಸಾನ್ ರಾಜ್ಯ, ಮಜ್ದೂರ್ ರಾಜ್ಯ ಎಂಬ ಘೋಷಣೆಗಳಿಂದ ಮೋಸ ಹೋಗಬಾರದೆಂದೂ ಸರಕಾರದ ಕೇಂದ್ರ ಡೆಲ್ಲಿಯಲ್ಲಿರುವಂತೆ ಪ್ರತಿಯೊಂದೂ ಹಳ್ಳಿಯಲ್ಲಿಯೂ ಅಲ್ಲಲ್ಲಿಯ ವ್ಯವಸ್ಥೆಯ ಅಧಿಕಾರ ಜನರಲ್ಲಿರುವಂತೆ ಸಾಧಿಸಬೇಕೆಂದೂ ಉಪದೇಶಿಸಿದರು.

ಅಂತೂ ಪರಿಷತ್ತು ಯಶಸ್ವಿಯಾಗಿ ಜರಗಿತು ಆ ಮೇಲೇನು ನೋಡಲಿಕ್ಕಿದೆ

ಜಪಾನಿನಲ್ಲಿ ಭೂಕಂಪದ ಅವಘಡ

ಜಪಾನಿನಲ್ಲಿ ದೊಡ್ಡ ಭೂಕಂಪವಾಗಿ ಫುಕುಲ್ ಎಂಬ 85 ಸಾವಿರ ಜನಸಂಖ್ಯೆಯುಳ್ಳ ಪಟ್ಟಣದಲ್ಲಿ ಐದರಲ್ಲಿ ನಾಲು

ದಕ್ಷಿಣ ಕನ್ನಡ ಜಿಲ್ಲಾ ವಾಣಿಜ್ಯ ಸಂಘ

ಇದೇ ತಾರೀಕು ೨೮ನೇ ದಿನ ಜಿಲ್ಲಾ ವಾಣಿಜ್ಯ ಸಂಘದ ಎಂಟನೇ ವಾರ್ಷಿಕ ಮಹಾಸಭೆಯು ಸಂಘದ ಆಫೀಸಿನಲ್ಲಿ ಅದರ ಅಧ್ಯಕ್ಷರಾದ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು

ಸಂಘದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನೂ ವಾರ್ಷಿಕ ವರದಿಯನ್ನೂ ಸಭೆಯ ಮುಂದಿಟ್ಟು ಅವು ಅಂಗೀಕರಿಸಲ್ಪಟ್ಟವು.

ವಾರ್ಷಿಕ ವರದಿಯಲ್ಲಿ ಸಂಘವು ಈ ವರ್ಷ ಮಾಡಿರುವ ಕೆಲಸಗಳನ್ನು ವಿವರವಾಗಿ ಕೊಡಲಾಗಿದೆ. ಇದನ್ನು ಸಭಿಕರ ಮುಂದಿರಿಸುತ್ತ ಶ್ರೀ ವಿ ಎಸ್ ಕುಡ್ವರು ಮಂಗಳೂರು ಬಂದರನ್ನು ಪಶ್ಚಿಮ ಕರಾವಳಿಯ ದೊಡ್ಡ ಬಂದರವನ್ನಾಗಿ ಮಾಡಬೇಕೆಂಬ ಬಗ್ಗೆ ಈ ವಾಣಿಜ್ಯ ಸಂಘದವರು ನಡೆಸಿದ ಚಳವಳದ ವೃತ್ತಾಂತವನ್ನು ಪ್ರತ್ಯೇಕವಾಗಿ ಎತ್ತಿ ಹೇಳಿದರು. ಈ ಪ್ರಯತ್ನಗಳು ಯಶಸ್ವಿಯಾಗುವ ಲಕ್ಷಣಗಳಿವೆಯೆಂದೂ ಹೇಳಿದರು. ಈ ಕಾರ್ಯದಲ್ಲಿ ವಾಣಿಜ್ಯ ಸಂಘಕ್ಕೆ ಇಲ್ಲಿಯ [illegible] ಪೋರ್ಟ್ ಆಫೀಸರರಾದ [illegible] ಮಾಡಿರುವ ಸಹಾಯವನ್ನು [illegible] ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

ಆ ಮೇಲೆ [illegible] ಮುಂದಿನ ವರ್ಷಕ್ಕೆ [illegible] ಕಾರ್ಯಕಾರಿ ಕಮಿಟಿ [illegible] [illegible]

ವಾಣಿಜ್ಯ ಸಂಘಕ್ಕೆ [illegible] ವಿಧವೂ [illegible] ಈ ಬಗ್ಗೆ [illegible] ಯಾಗದ ನಿಧಿ ಸಂಗ್ರಹಿಸಬೇಕೆಂದು [illegible] ಯಿತು.

ಇಷ್ಟೆಲ್ಲ ಕಾರ್ಯಕಲಾಪಗಳು ಅರ್ಧ ಗಂಟೆಯೊಳಗೆ ಮುಗಿದವು. ಇದು ವರ್ತಕ ಸಂಘದ ವ್ಯವಹಾರ ಕುಶಲತೆಯನ್ನು ತೋರಿಸುತ್ತದೆಂದು ಹೇಳಬೇಕಾಗಿದೆ

ಜೋಗಿನಿಂದ ವಿದ್ಯುತ್ ಶಕ್ತಿಯನ್ನು ಈ ಜಿಲ್ಲೆಗೆ ಒದಗಿಸುವುದು ಇತ್ಯಾದಿ ಹಲವು ವಿಷಯಗಳಲ್ಲಿ ವಾಣಿಜ್ಯ ಸಂಘವು ಜಿಲ್ಲೆಗೆ ತುಂಬಾ ಉಪಕಾರ ಮಾಡಿರುತ್ತದೆ. ನಾನಾ ವಿಧದ ಕಂಟ್ರೋಲ್ ಕಾನೂನುಗಳ ಜಾರಿಯಿಂದ ವರ್ತಕವರ್ಗಕ್ಕಾದ ತೊಂದರೆಗಳ ನಿವಾರಣೆ ಬಗ್ಗೆ ಈ ಸಂಘವು ಚೆನ್ನಾಗಿ ಕೆಲಸ ಮಾಡಿರುತ್ತದೆ. ಹೀಗೆ ಮಹಾ ಜನರಿಗೂ ವರ್ತಕ ವರ್ಗಕ್ಕೂ ಉಪಯುಕ್ತವಾದ ಈ ಸಂಸ್ಥೆ ಇನ್ನಷ್ಟು ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇವೆ.

ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯ ಮಾತನ್ನು ನಾವು ಹೇಳಬೇಕಾಗಿದೆ. ಸಭೆ ನಡೆಯುತ್ತಿರುವ ನಡುವೆ ಶ್ರೀ ಐ. ವಿ. ರಾಮರಾಯರು ಮಹಾತ್ಮಾಗಾಂಧೀ ರಾಷ್ಟ್ರೀಯ ಸ್ಮಾರಕನಿಧಿಯ ಕುರಿತೊಂದು ಪ್ರಸ್ತಾಪವೆತ್ತಿದರು. ಈ ಬಗ್ಗೆ ನೇಮಿಸಲ್ಪಟ್ಟಿರುವ ಸಾರ್ವಜನಿಕ ಸಮಿತಿಯವರು ವಂತಿಗೆ ಕೇಳ ಹೋಗುವಾಗ ವರ್ತಕ ವರ್ಗದವರು ನಮ್ಮ ವಾಣಿಜ್ಯ ಸಂಘದವರು ಈ ಬಗ್ಗೆ ಪ್ರತ್ಯೇಕವಾಗಿ ಧನ ಸಂಗ್ರಹ ಮಾಡುವರೆಂದು ಹೇಳುತ್ತಿರುವರಂತೆ. ಇದು ಎಷ್ಟರ ಮಟ್ಟಿಗೆ ಸರಿಯೆಂಬುದು ಅಂದಿನ ಸಭೆಯಲ್ಲಿ ಸ್ಪಷ್ಟವಾಗಲಿಲ್ಲ. ಯಾಕೆಂದರೆ ಅದು ಸಭೆಯ ಮುಂದಿದ್ದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವಿರಲಿಲ್ಲ

ಅಂದೂ ಮೇಲಿನ ಪ್ರಸ್ತಾಪದಲ್ಲಿ ಕಂಡು ಬರುವ ಒಂದು ಭಾವನೆಯು ಕಡೆಗೆ [illegible] ಕೊಡುವುದು ಅಗತ್ಯದ ವಿಚಾರವೆಂಬುದರಿಂದ ಮಾತ್ರ ನಾವು ಈ ಪ್ರಸ್ತಾಪವನ್ನೆತ್ತಿ [illegible] ಗಾಂಧಿ ಸ್ಮಾರಕ ನಿಧಿಯು ವಿಚಾರದ ಎಂದಿಲ್ಲ [illegible] ಸಾರ್ವಜನಿಕ ಕಾರ್ಯಕ್ರಮದ ವಿಷಯ [illegible] ವರ್ತಕ ವರ್ಗದ ಪರವಾಗಿ [illegible] [illegible]

[illegible] ವ್ಯಕ್ತವಾಯಿಂದ [illegible]

[illegible] ವಾಣಿಜ್ಯ [illegible] ವರ್ತಕ ವರ್ಗದ [illegible] ಒಗ್ಗಟ್ಟು ಕಾರ್ಯವನ್ನು [illegible] ಜರಗಿಸಲು ಹೋಗುವುದು ಒಂದು ಸಂಕುಚಿತ ಭಾವನೆಯಾಗಿ ಪರಿಣಮಿಸಿ ವರ್ತಕ ವರ್ಗವು ಸಾರ್ವಜನಿಕರಿಂದ ಪ್ರತ್ಯೇಕವೆಂಬಂತಾದರೆ ಇದರ ಪರಿಣಾಮ ಸಾರ್ವಜನಿಕ ಹಾಗೂ ವರ್ತಕ ವರ್ಗ ಇವರಿಬ್ಬರ ದೃಷ್ಟಿಯಿಂದಲೂ ಹಿತಕಾರಿಯಾಗಲಾರದು

ಗಾಂಧೀ ಸ್ಮಾರಕ ನಿಧಿಯ ಕುರಿತು ವಾಣಿಜ್ಯ ಸಂಘದವರು ತಾವೇ ಪ್ರತ್ಯೇಕವಾಗಿ ನಿಧಿ ಸಂಗ್ರಹ ಕಾರ್ಯಕ್ಕೆ ಕೈಕೊಳ್ಳುವ ಯೋಚನೆ ಮಾಡಿದ್ದರೆ ಅದನ್ನು ಬಿಟ್ಟು ಕೊಡಬೇಕಾಗಿ ನಾವು ಆಗ್ರಹ ಪೂರ್ವಕ ವಿನಂತಿ ಮಾಡಿಕೊಳ್ಳಬೇಕಾಗಿದೆ.

ವಾಲಷ್ಟು ನಾಶವಾಗಿದೆ ಎಂದು ವಾರ್ತೆ ಬಂದಿರುತ್ತದೆ. ಇದು ಕರಾವಳಿ ಪಟ್ಟಣವಿದ್ದು ಸಮುದ್ರ ನೀರು ಉಕ್ಕಿ ಬಂತೆಂದೂ ಇನ್ನೊಂದೆಡೆಯಿಂದ ಬೆಂಕಿಯಿಂದ ಪಟ್ಟಣವು ಸುಟ್ಟು ಹೋಯಿತೆಂದೂ ತಿಳಿದು ಬರುತ್ತದೆ. ಈ ಪಟ್ಟಣವಲ್ಲದೆ ಇನ್ನು ಆರು ಪಟ್ಟಣಗಳು ನಾಶವಾಗಿವೆಯಂತೆ. ಸಾವಿರಾರು ಜನರು ಮೃತರಾಗಿರುವರು. ಭೂಕಂಪವು ರಾತ್ರೆ ಕಾಲದಲ್ಲಿ ಸಂಭವಿಸಿತು. ಜಪಾನಿನಲ್ಲಿ ಆಗಾಗ ಭೂಕಂಪಗಳಾಗುತ್ತಿರುವುದಾದರೂ ಈ ಬಾರಿಯ ಭೂಕಂಪವು ಬಹಳ ಹಾವಳಿ ಮಾಡಿರುತ್ತದೆ

ಮೊದಲೇ ಆ ಹಾರ [illegible] ಇತ್ಯಾದಿಗಳಿಂದ ಕಂಗೆಟ್ಟಿರುವ ಈ ಜನರು [illegible] ಆಪತ್ತಿಗೆ [illegible] ಜಗತ್ತು ಅವರ [illegible] [illegible]

(ಶ್ರೀ) ಮುಲ್ಕಿ ಸುಬ್ಬರಾಯರ ನಿಧನ

[illegible]

[illegible] ವರ್ಷದ ಮೇಲೆ [illegible] ಆಸಕ್ತಿಯುಳ್ಳವರಿದ್ದರು. ಭಗವದ್ಗೀತೆ ಮೊದಲಾದ ಧಾರ್ಮಿಕ ಗ್ರಂಥಗಳ ಪರಿಚಯ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿಯೂ [illegible] ಜನರಲ್ಲಿಯೂ ಪ್ರಚಾರ [illegible] ಪ್ರಯತ್ನ [illegible] ದ್ದರು. ಇವರ ಧಾರ್ಮಿಕ ಭಾವನೆ ಇಷ್ಟರಲ್ಲೆ ಮುಗಿಯದೆ ಕಾರ್ಯ ರೂಪದಲ್ಲಿಯೂ ಇತ್ತು. ನಿವೃತ್ತರಾದ ಇವರು ಸುಮ್ಮನೆ ವಿಶ್ರಾಂತಿ ಪಡೆಯುತ್ತ ಇರಲು ಒಪ್ಪದೆ ಸಾರ್ವಜನಿಕರ ಬಗ್ಗೆ ಆಸಕ್ತಿಯಿಂದ ದುಡಿಯುತ್ತಿದ್ದರು. ಅನಾಥ ಬಾಲಕಾಶ್ರಮ ಬಾಲಿಕಾಶ್ರಮ ಇವುಗಳ ಬಗ್ಗೆ ವಿಶೇಷ ಚಟುವಟಿಕೆಯಿಂದ ದುಡಿಯುತ್ತಿದ್ದರು. ಇವರ ನಿಧನವು ಸಮಾಜಕ್ಕೊಂದು ನಷ್ಟವೆಂಬ ಬಗ್ಗೆ ಸಂಶಯವಿಲ್ಲ.

ಸುಬ್ಬರಾಯರು ಸ್ವದೇಶಾಭಿಮಾನಿಯ ಸ್ಥಾಪಕರ ಬಹಳ ಮಿತ್ರರಿದ್ದು ಆಗಾಗ ಈ ಪತ್ರಿಕೆಗೆ ಬರೆಯುತ್ತಿದ್ದರು

ಇವರ ಕುಟುಂಬದವರ ಹಾಗೂ ಅನೇಕ ಸ್ನೇಹಿತರ ದುಃಖದಲ್ಲಿ ನಾವು ನಮ್ಮ ಸಹ ಸಂತಾಪವನ್ನು ಸೂಚಿಸಲು ಬಯಸುತ್ತೇವೆ

ಕಾಶೀ ಮಠಾಧೀಶರು

ಈಗ ಕೊಚ್ಚಿನ್ ಸಂಸ್ಥಾನದಲ್ಲಿರುವ ಶ್ರೀ ಕಾಶೀ ಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರು ಸದ್ಯದಲ್ಲಿ ರಾಮೇಶ್ವರ ಕ್ಷೇತ್ರಕ್ಕೆ ಶಿಷ್ಯ ಸಮೇತರಾಗಿ ಹೋಗಲಿರುವರೆಂದು ವದಂತಿಯಿದೆ.

ಜಪಾನಿ ಚಕ್ರವರ್ತಿ ಹಿಂದೂ ವಂಶದವನು

ಒಂದು ಹೊಸ ಸಿದ್ಧಾಂತ

"ರಾಜಾ ಪ್ರತ್ಯಕ್ಷ ದೇವತಾ" ಎಂಬುದೊಂದು ಪ್ರಾಚೀನ ಭಾರತೀಯ ನಿರೂಪ. ಹಿಂದೂ ಅರಸರ ಸಂಸ್ಕೃತಿ ಸಾಂಪ್ರದಾಯಗಳು ಇದೇ ನಿರೂಪಕ್ಕನುಸಾರ ಅನುಸರಿಸಲ್ಪಡುತ್ತಿದ್ದುವು. ಜಪಾನಿಯರಿಗೆ ತಮ್ಮ ಅರಸನು ಪ್ರತ್ಯಕ್ಷ ದೇವರಿಗೆ ಸಮಾನನು. ದೇವರಿಂದಲೇ ಸಹಸ್ರಾರು ವರ್ಷಗಳ ಹಿಂದೆ ಜಪಾನಿ ರಾಜವಂಶವು ಸೃಷ್ಟಿಸಲ್ಪಟ್ಟಿತೆಂದು ಆ ಜನರು ನಂಬುತ್ತಾರೆ

ಈಗ ಟೋಕಿಯೋದಲ್ಲಿರುವ ಓರ್ವ ಭಾರತೀಯ ವಿದ್ವಜ್ಞರೂ ಪತ್ರಿಕೋದ್ಯಮಿಗಳೂ ಆಗಿರುವ ಚಮನ್‌ಲಾಲ್ ಎಂಬವರು ಜಪಾನಿ ಚಕ್ರವರ್ತಿಗಳ ಮೂಲಪುರುಷರು ಹಿಂದುಗಳಾಗಿದ್ದರೆಂಬ ಸಿದ್ಧಾಂತವೊಂದನ್ನು ರೂಪುಗೊಳಿಸಿರುವರು.

ಜಪಾನಿ ಚಕ್ರವರ್ತಿ [illegible] ಗಳಾಕೃತಿಯು [illegible] ಲಿಪಿಗಳಂತಿದೆ. ಮಾತ್ರವಲ್ಲ ಹಿಂದೆ [illegible] ಲಿಪಿಗಳಂತೆ ಅವು ಕಣ್ಣಿನ [illegible] ಇವೆ. ಈ ಲಿಪಿ ಸಿದ್ಧಾಂತವು ಚಮನ್ ಲಾಲರದಲ್ಲ. [illegible] ನಾಗಸಾವಾ ಎಂಬ ಜಪಾನಿ ವಿದ್ವಜ್ಞನು ಇದರ ಮೂಲ ನಿರೂಪಕನು.

ಚಕ್ರವರ್ತಿಗೆ ಅವಮಾನ

ಈ ವಿಷಯದ ಕುರಿತು ನಾಗಾಸಾವರವರು ಒಂದು ಪತ್ರಿಕೆಯನ್ನು ಪ್ರಕಟಿಸಿದ್ದರು. "ನನ್ನ ಜಪಾನಿ ಚಕ್ರವರ್ತಿ [illegible] ಹಿಂದೂ [illegible] [illegible]

ಚೀನಾ ಮಾರ್ಗ

[illegible] ಚಕ್ರವರ್ತಿ [illegible] ಗಳಾಗಿ [illegible] ಜಪಾನ [illegible] ಪಂಗಡದ ಜನರ ಮೂಲವು ಹಿಂದೂ ಜನರದಿರಬೇಕೆಂಬ [illegible] ಆಧಾರಗಳಿವೆ.

ಹಿರೋಹಿಟೋವಿನ [illegible] ವಂಶದ ಮೂಲಪುರುಷರಾದ ಹಿಂದುಗಳು ಚೀನದ ಮೂಲಕ ಜಪಾನಿನ ಕಡೆ ಬಂದಿರಬೇಕೆಂದು ನಾಗಾಸಾವಾ ಮತ್ತು ಚಮನ್‌ಲಾಲರವರೂ ಈಗ ಕಂಡುಹಿಡಿದಿರುವರು. ಅವರ ಕೊನೆಯ ನೆಲೆ ಚೀನದ ಅತಿ ಪೂರ್ವದ ಭಾಗವಾದ ನ್ಯಾಕಿನ್ ಪ್ರದೇಶವಾಗಿದೆಂದು ನಾಗಸಾವಾರವರು ಹೇಳುತ್ತಾರೆ. ಅಲ್ಲಿಂದವರು ಜಪಾನಿನ ಕ್ಯೂಸು ದ್ವೀಪಕ್ಕೆ ಜಲ ಪ್ರಯಾಣದ ಮೂಲಕ ಹೋದರೆಂದೂ, ಈ ಪಂಗಡದ ಜನರಿಗೆ ಓರ್ವ ಸ್ತ್ರೀಯು ಮುಖಂಡೆಯಾಗಿದ್ದಳೆಂದೂ ಇಸ ಎಂಬಲ್ಲಿ ಅವಳ ಸಮಾಧಿ ಇಂದಿಗೂ ಇದೆಯೆಂದೂ ಅವರು ತಿಳಿಸುತ್ತಾರೆ. ಕೆಲವು ಜಪಾನಿ ದೇವ ಮಂದಿರಗಳಲ್ಲಿ ಹಿಂದೂ ದೇವತೆಗಳು ಆರಾಧಿಸಲ್ಪಡುವುದು ಆ ದೇಶಕ್ಕೂ ಬೌದ್ಧ ಧರ್ಮಕ್ಕೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತದೆಂದು ಚಮನ್‌ಲಾಲರು ತಿಳಿಸುತ್ತಾರೆ.

ಬೀಳ್ಕೊಡುವ ಸಮಾರಂಭ

ಕಳೆದ ತಾ. ೨೬ರಂದು ಸ್ಥಳೀಯ ಕೆನರಾ ಹೈಸ್ಕೂಲಿನ ಅಧ್ಯಾಪಕ ಸಂಘದವರು ತಮ್ಮ ವೈಸ್ ಶಾಲೆಯಿಂದ ಉದ್ಯೋಗದಿಂದ ನಿವೃತ್ತರಾದ ಶ್ರೀ ಕಾರ್ಕಳ ಯಶವಂತ ರಾವ್ ಮತ್ತು ಛಳು. ಆರ್. ಶೆಣೈ ಅವರುಗಳನ್ನು ಬೀಳ್ಕೊಡುವ ಸನ್ಮಾನಾರ್ಥವಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಮೂವತ್ತು ವರ್ಷಕ್ಕೂ ಮಿಕ್ಕಿದ ತಮ್ಮ ಶಾಲಾ ಸೇವೆಯಲ್ಲಿ ಈ ಇರ್ವ ಅಧ್ಯಾಪಕರು ಶಾಲೆಯ ಹಲವು ಇಲಾಖೆಗಳಲ್ಲಿ ಆದರ್ಶ ತ್ಯಾಗ ಸೇವಾಭಾವದಿಂದ ಗೈದ ಸೇವೆಯ ಕುರಿತು ಅನೇಕ ಉಪಾಧ್ಯಾಯ ಪ್ರತಿನಿಧಿಗಳು ಪ್ರಶಂಸಾ ಭಾಷಣ ಮಾಡಿದರಲ್ಲದೆ ಅಂದಿನ ಸಮಾರಂಭದ ಅಧ್ಯಕ್ಷರಾದ ಶಾಲಾ ಮೆನೇಜರ್ ಶ್ರೀ ಮಾಧವ ರಾಯರೂ ನಿವೃತ್ತಿಹೊಂದಿದ ಮಹನೀಯರ ಸೇವೆಯನ್ನು ಶ್ಲಾಘಿಸಿ ಆಯುರಾರೋಗ್ಯ ಶ್ರೇಯಸ್ಸನ್ನು ಕೋರಿದರು. ಇರ್ವ ಅಧ್ಯಾಪಕರಿಗೂ ಮಾನಪತ್ರ ಬೆಳ್ಳಿ ಬಟ್ಟಲನ್ನೂ ಸಂಘದ ಪ್ರೀತ್ಯಾದರಗಳ ಸ್ಮಾರಕವಾಗಿ ಕೊಡಲಾಯಿತು.

ಶಿಫ್ಟ್ ಪದ್ಧತಿ

ಇಲ್ಲಿಯ ಕೆನರಾ ಶಾಲೆಯಂತೆ ಕೆಲ ಮುನಿಸಿಪಲ್ ಶಾಲೆಗಳಲ್ಲೂ ಸ್ಥಳೀಯ ಗವರ್ನ್‌ಮೆಂಟ್ ಕೊಲೇಜಿನಲ್ಲೂ ಶಿಫ್ಟ್ ಪದ್ಧತಿಯನ್ನನುಸರಿಸಲು ಪರ್ಯಾಲೋಚನೆ ನಡೆದಿದೆಯೆಂದು ವದಂತಿಯಿದೆ ಇದು ತನಕಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಈ ವರ್ಷ ಕೊಲೇಜಿನ ಪ್ರವೇಶಾರ್ಥಿಗಳಾಗಿ ಬಂದಿರುವರೆಂದು ತಿಳಿದುಬರುತ್ತದೆ.

ಹೊಸ ಕಮೀಶನರು

ಇಲ್ಲಿಯ ಮುನಿಸಿಪಲ್ ಕಮೀಶನರರಾಗಿದ್ದ ಶ್ರೀ ನಾರಾಯಣ ಶೆಣೈಯವರು ಕಂಜೀವರಮ್ ಮುನಿಸಿಪಲ್ ಕಮೀಶನರರಾಗಿ ವರ್ಗಾಯಿಸಲ್ಪಟ್ಟಿದ್ದು ಅವರ ಸ್ಥಾನಕ್ಕೆ ಶ್ರೀ ಕೆ. ಸಂಜೀವ ತಳವಾರ್ ಇವರು ಇಲ್ಲಿಯ ಕಮೀಶನರರಾಗಿ ನೇಮಕ ಹೊಂದಿರುವರು ಇವರು ಈ ಕಡೆಯವರೇ ಆಗಿದ್ದಾರೆ

ಗೋಕರ್ಣ ಮಠಾಧೀಶರು

ವರ್ತಗಾಳಿಯ ಶ್ರೀ ಗೋಕರ್ಣ ಮಠಾಧೀಶರಾದ ಶ್ರೀ ದ್ವಾರಕಾನಾಥ ಶ್ರೀ ಪಾದಂಗಳವರು ಕೆಲದಿನಗಳ ಹಿಂದೆ ಇಲ್ಲಿಗೆ ಚಿತ್ತೈಸಿ ರಥಬೀದಿಯಲ್ಲಿರುವ ತಮ್ಮ ಸ್ವಂತ ಮಠದಲ್ಲಿ ಉಳಕೊಂಡಿರುವರು ಈ ಸಲದ ಚಾತುರ್ಮಾಸವನ್ನೂ ಶ್ರೀ ಯವರು ಇಲ್ಲಿಯೇ ಮಾಡುವರೆಂದೂ ಅಲ್ಲದೆ ತಮ್ಮ ಆರೋಗ್ಯಾಭಿವೃದ್ಧಿಗಾಗಿ ಇನ್ನು ಹೆಚ್ಚಿನ ಸಮಯ ಇಲ್ಲಿರುವರೆಂದೂ ತಿಳಿದುಬರುತ್ತದೆ

ಹಾಲಿನ ಬೆರಕೆಗೆ ಜುಲ್ಮಾನೆ

ಮೇರು ಮಜಲಿನ ಅಬ್ದುಲ್ ರಹಿಮಾನ್ ಬ್ಯಾರಿ ಒಮ್ಮೆ ಹಾಲಿಗೆ ಸೇ. ೨೦ರಷ್ಟು ನೀರು ಸೇರಿಸಿದ್ದಕ್ಕಾಗಿ ರೂ ೩೫, ಇನ್ನೊಮ್ಮೆ ಸೇ. ೨೫ರಷ್ಟು ನೀರು ಸೇರಿಸಿದ್ದಕ್ಕಾಗಿ ರೂ. ೪೦ ಜುಲ್ಮಾನೆ; ಮರಕಡದ ಹಸನಬ್ಬ ಸೇ. ೩೦ರಷ್ಟು ನೀರು ಬೆರೆಸಿದಕ್ಕೆ ರೂ ೫೦ರಷ್ಟು ಜುಲ್ಮಾನೆ ವಿಧಿಸಲ್ಪಟ್ಟಿರುವರು.

ಕಳವು

ಇಲ್ಲಿಯ ಕದ್ರಿಯ ಯಕ್ಷಗಾನ ಮೇಳದ ಮೆನೇಜರರ ಒಂದು ವಾಚು, ಪೌಂಟನ್ ಪೆನ್ನು ಮತ್ತು ಸುಮಾರು ಎಂಟು ರೂಪಾಯಿಗಳಿದ್ದ ಪಾಕೇಟು ಇವನ್ನು ಕದ್ದು, ಪೆನ್ನು ವಾಚುಗಳನ್ನು ಕೂಳೂರಿನ ಅಂಗಡಿಗಾರನೊಬ್ಬನಿಗೆ ಮಾರಲು ಯತ್ನಿಸಿದಾಗ ಹಿಡಿಯಲ್ಪಟ್ಟ ಅಲ್ಫಾನ್ಸೊ ಎಂಬಾತನಿಗೆ ೩ ತಿಂಗಳ ಕಠಿಣ ಸಜೆಯಾಗಿದೆ.

ಜಿಲ್ಲಾ ಸಮಾಚಾರ

ಕಾರ್ಕಳ

ಹೊಸತೊಂದು ಸ್ಟೋರಿನ ಯೋಜನೆ

ಬಡವ ಬಲ್ಲಿದ ಎಂಬ ಭೇದವನ್ನಿಟ್ಟುಕೊಳ್ಳದೆ ಅವಶ್ಯಕತೆ ಇರುವ ಎಲ್ಲರಿಗೆ ಆರೋಗ್ಯವನ್ನು ಕಾಪಾಡಲಿಕ್ಕೂ, ರೋಗ ರುಜೆಗಳನ್ನು ದೂರಮಾಡಲಿಕ್ಕೂ, ಅಗತ್ಯವಿರುವ ಔಷಧ ಮತ್ತು ಇತರ ಸಾಹಿತ್ಯಗಳನ್ನೂ ಸುಲಭದಲ್ಲಿ ಒದಗಿಸಿಕೊಳ್ಳಲಿಕ್ಕಾಗುವ ಉದ್ದೇಶದಿಂದ, ಇಲ್ಲಿಯ ಇಲ್ಲಿಯ ಕಾರ್ಕಳ ತಾಲೂಕು ವೈದ್ಯಮಂಡಲದ ಆಶ್ರಮದಲ್ಲಿ ಸಹಕಾರತತ್ವವನ್ನವಲಂಭಿಸಿ ಔಷಧೋಪಕರಣಗಳ ಒಂದು ಸ್ಟೋರನ್ನು ತೆರೆಯುವ ಯೋಜನೆಯೊಂದು ಸಿದ್ಧವಾಗಿದೆ ಈ ಸ್ಟೋರಿಗೆ ಶ್ರೀ ವಕೀಲ, ಕೆ. ವಾಸುದೇವ ಕಾಮತ್, ಡಾ। ಕೆ ವಿ ಕೆ ಉಪಾಧ್ಯಾಯ, ಡಾ। ಕೆ. ಸೋಮನಾಥ ಭಟ್, ಡಾ। ಆರ್ ವೈಕುಂಟ ಶೆಣೈ ಮತ್ತು ಡಾ। ಕೃಷ್ಣ ಕಾಮತರವರು, ಆರಂಭದ ಡ್ಯಾರೆಕ್ಟರರಾಗಲಿರುವರು

ಇಲ್ಲಿಯ ಬೋರ್ಡ್ ಶಾಲೆಯಲ್ಲಿ ಮಕ್ಕಳಿಗೆ ಐಚ್ಛಿಕ ವಿಷಯವಾಗಿ 'ಹಿಂದಿ'ಯನ್ನೂ ಇಟ್ಟಿರುವರು. ಇದಕ್ಕೆ ಶಾಲಾಧಿಕಾರಿಗಳು ಅಭಿನಂದನೀಯರಾಗಿದ್ದಾರೆ.

ಪಡುಬಿದ್ರೆ

ಇಲ್ಲಿಯ ಸುಪ್ರಸಿದ್ಧ ಸಾಹುಕಾರರೊಬ್ಬರಾದ ಶ್ರೀ ಎಚ್ ದಾಸಗಡಿಯಾರ ಇವರು ಇದೇ ತಾ ೨೮-೬-೪೮ರಂದು ತಮ್ಮ ತ್ರಾರಣ್ಯದಲ್ಲಿ ಪಾರ್ಥಿವ ಶರೀರವನ್ನು ತ್ಯಜಿಸಿ ದೈವಾಧೀನರಾದರೆಂಬುದನ್ನು ಕೇಳಲು ತುಂಬಾ ವಿಷಾದಪಡುತ್ತೇವೆ. ಮೃತರು ಸಾರ್ವಜನಿಕ ಸೇವೆಯಲ್ಲಿ ನಿರತರಿದ್ದರು ಪರಮಾತ್ಮನು ಮೃತರ ಆತ್ಮಕ್ಕೆ ಪರಮ ಶಾಂತಿಯನ್ನೀಯಲೆಂದೂ ಶ್ರೀ ಮದ ಕುಟುಂಬಕ್ಕೆ ಮನಶಾಂತಿಯನ್ನಿತ್ತು ಆಯುರಾರೋಗ್ಯ ಐಶ್ವರ್ಯಾದಿಗಳನ್ನೀಯಲೆಂದೂ, ನಮ್ಮ ಬಯಕೆ

ಕಮ್ಯೂನಿಸ್ಟ್ ಧುರೀಣನಿಗೆ ಆಶ್ರಯ ಕೊಟ್ಟ ಗ್ರಾಮ ಪಟೇಲನ ಕೈದು

ಕಮ್ಯೂನಿಸ್ಟ್ ಪ್ರೇರೇಪಕ ಶ್ರೀ ಎಸ್ ಎನ್ ಹೊಳ್ಳರಿಗೆ ಆಶ್ರಯ ಕೊಟ್ಟಿದ್ದರೆಂಬ ಅಪಾದನೆಯ ಮೇಲೆ ವೇಣೂರು ಬಳಿಯ ಗಾಂಡೇರಿ ಗ್ರಾಮದ ಪಟೇಲ್ ಶ್ರೀ ರಾಮ ಭಟ್ ಎಂಬವರನ್ನು ಪೋಲಿಸ್ ಅಧಿಕಾರಿಗಳು ಕೈದು ಮಾಡಿರುವರು

ಉಡುಪಿ

ಉಡುಪಿ ತಾಲೂಕು ನಿವಿಷ್ಟ ಭಾರತೀಯ ವೈದ್ಯಜ್ಞ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ಇದೇ ತಾ. ೨೦ನೇ ರವಿವಾರ ಅಪರಾಹ್ನ ಗಂಟೆ ೩ಕ್ಕೆ ಶ್ರೀ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಇವರ ಉಡುಪಿ ಆಫೀಸಿನಲ್ಲಿ ಶ್ರೀ ವಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನವರನ್ನು ಅಧಿಕಾರ ವರ್ಗಕ್ಕೆ ಚುನಾಯಿಸಲಾಯಿತು. ಶ್ರೀ ಗಳಾದ ವಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು (ಅಧ್ಯಕ್ಷ) ಡಾ। ಕೆ ಎಸ್. ಸುವರ್ಣ, (ಉಪಾಧ್ಯಕ್ಷ) ಯು ರತ್ನಾಕರ ಶೆಣೈ, (ಕೋ. ಅ) ಕಾ ರಾ ಪುರಾಣಿಕ, (ಕಾರ್ಯದರ್ಶಿ) ಮತ್ತು ಪಿ ವೈ ರಾಮ ಗುರುಕಳ ಇವರನ್ನು ಜತೆಕಾರ್ಯದರ್ಶಿಯರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು ಅಲ್ಲದೆ ಸದ್ರಿ ಸಭೆಯಲ್ಲಿ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟು ಸಂಬಂಧಪಟ್ಟವರಿಗೆ ತಿಳಿಸುವರೆ ಸರ್ವಾನುಮತದಿಂದ ನಿರ್ಣಯಿಸಲಾಯಿತು

ಠರಾವು: ಈ ಸಭೆಯು ಮದ್ರಾಸು ಸರಕಾರದ ಮದ್ಯಪಾನ ನಿರೋಧದ ದೂರದಿಂದ ಭಾರತೀಯ ವೈದ್ಯ ವರ್ಗಕ್ಕೆ ಉಂಟಾದ ತೊಂದರೆಗಳ ನಿವಾರಣೆಯನ್ನು ಉಗ್ರವಾಗಿ ವಿರೋಧಿಸುತ್ತದೆ ಅಲ್ಲದೆ ಈಗಲಾದರೂ ಅಧಿಕಾರಿ ವರ್ಗದವರು ಈ ಕುರಿತು ತಕ್ಕ ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಮಾಡಬೇಕೆಂದು ಜನತೆ ಸರಕಾರದವರನ್ನು ಕೇಳಿಕೊಳ್ಳುತ್ತದೆ



ಗಂಟಲು ನೋವು ನೆಗಡಿ ಮತ್ತು ಶೀತಜ್ವರ

ಇವನ್ನು ತಣಿಸುವ, ರೋಗಾಣು ನಾಶಕ ಪೆಪ್ಸ ನಿಮಗೆ ಅವಶ್ಯವಿದೆ

ಹಿತಕರ ರುಚಿಯ ಪೆಪ್ಸ್ ಮಾತ್ರೆಯೊಂದನ್ನು ಹೀರಿದರೆ ಅದರ ಔಷಧೀಯ ಸತ್ವಗಳು ನಿಮ್ಮ ಗಂಟಲು ಶ್ವಾಸಕೋಶಗಳಿಗೆ ಅತೀವವಾದ ಸುಖಾನಂದವನ್ನುಂಟುಮಾಡುವುದು ಅದರೊಳಗಿ ರೋಗಾಣುನಾಶಕ ಸತ್ವವು ಒಮ್ಮೆಲೆ ಗಂಟಲು, ಎದೆ ಮತ್ತು ಶ್ವಾಸಕೋಶಗಳೊಡನೆ ಸಂಪರ್ಕಕ್ಕೆ ಬರುವುದರಿಂದ ಪೆಪ್ಸ ಅತ್ಯಂತ ಪರಿಣಾಮಕಾರಿ ಪೆಪ್ಸ ನೋವಾಗುವಿಕೆ, ಸುರಿಸುವಿಕೆ ಊರುವಿಕೆಗಳನ್ನು ನಿಲ್ಲಿಸಿ, ರೋಗಾಣುಗಳನ್ನು ನಾಶಮಾಡಿ ಗಂಟಲು ಒತ್ತಡವನ್ನು ಸರಿಪಡಿಸುವುದು

ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ

PEPS

ವಿಷಹಾರಿ

ಗಂಟಲು ಮತ್ತು ಎದೆ ಗುಳಿಗೆಗಳು

ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ ಅತ್ಯಂತ ಪರಿಣಾಮಕಾರಿ ಔಷಧಿ.

In the Distict Court of South Kanara

In the matter of the debts d e to H Krishna Kamath (decease l of Hosdu g

1 Padmavathiamma
2 H Gannpathi Kamath
3 H Ramadasa Kamath
4 H Vasudeva Kamath
5 H Mukunda Kamath
6 H Muktha Bai
7 H Shankar Kamath } Minors
8 H Vaman Kamath
} Petitioners

by next friend 1st petitioner

To whomsover concerned

Notice is hereby given that on 16 6-1948 application was made to the above court for the grant to the petitioners 1 to 3 o a Certificate under The Indian Succession Act with respect to certain claims and securities of H Krishna Kamath who died on 21 2 1948 at Hosdurg and that 3-8-1948 at 11 A M has been appointed for the hearing thereof when you are at liberty to appear and oppose the same

Mangalore
29-6-1948

M. Keshava Pai.
Advocate for Petitioner

TENDER NOTICE

Tenders for the supply of 2 typewriters will be received by the Commissioner, Mangalore Municipality, till 5 p m. on 12-7-'48 further particulars can be had from the Municipal office.

Municipal Office,
Mangalore,
25-6-1948

COMMISSIONER.

ಸಾಮಾನ್ಯ ಜನತೆಗೆ ಆರೋಗ್ಯಕರ ಆಹಾರ

ಯಾವುದನ್ನು ತಿಂದರೆ ಕ್ಷೇಮದಿಂದಿರಬಹುದು?

ವಿಟಮಿನ್‌ಗಳು ಇರುವ ವಸ್ತುಗಳು

ವಿಟಮಿನ್‌ಗಳು ಏನೆಂದು ನಮಗೆ ತಿಳಿದಿರಲಿ ಇಲ್ಲದಿರಲಿ ನಮಗೆ ಕೊಂಡುಕೊಳ್ಳಲು ಅನುಕೂಲವಾಗಿರುವ ಕೆಲವು ಸಾಮಾನ್ಯ ಆಹಾರವಸ್ತುಗಳನ್ನು ನಾವು ಕ್ರಮವಾಗಿ ಬಳಸಿಕೊಂಡರೆ ಆರೋಗ್ಯವಂತರಾಗಿರಲು ತುಂಬಾ ಸಹಾಯವಾಗುತ್ತದೆ. ವಿಟಮಿನ್‌ಗಳೆಂದರೆ ಸೂಕ್ಷ್ಮವಾದ ಜೀವಾತುಗಳು ಅತ್ಯಲ್ಪ ಪ್ರಮಾಣದಲ್ಲಿವು ಆಹಾರದಲ್ಲಿರುವವು ನಮ್ಮ ಆರೋಗ್ಯಕ್ಕೂ ಬೆಳವಣಿಗೆಗೂ ಮತ್ತು ಜೀವಿತಕ್ಕೂ ಇವು ಅತ್ಯಾವಶ್ಯಕವಾದುದು ಆದುದರಿಂದ ಇವುಗಳನ್ನು ಸೇವನೆ ಮಾಡದಿರುವುದರಿಂದ ಆಗುವ ಅವ್ಯವಸ್ಥೆಗಳೇನು, ಸೇವನೆ ಮಾಡುವುದರಿಂದ ಆಗುವ ಅನುಕೂಲತೆಗಳೇನು ಎಂಬುದನ್ನು ಸಾಮಾನ್ಯ ಜನತೆಯೂ ತಿಳಕೊಳ್ಳುವುದತ್ಯಾವಶ್ಯಕ

ವಿಟಮಿನ್ ಎ.

ಇವು ಪ್ರಾಣಿಜನ್ಯವಾದ ಹಾಲು, ಬೆಣ್ಣೆ, ಮೊಟ್ಟೆ, ಮಾಂಸದ ಕೊಬ್ಬು, ಮೀನಿನ ಎಣ್ಣೆ ಇತ್ಯಾದಿಗಳಲ್ಲಿ ಧಾರಾಳ ಪ್ರಮಾಣದಲ್ಲಿರುವವು ಸಸ್ಯಜನ್ಯ ಕೊಬ್ಬು ಪದಾರ್ಥಗಳಾದ ತೆಂಗಿನ ಎಣ್ಣೆ ಇಪ್ಪೆ ಎಣ್ಣೆ, ಎಳ್ಳೆಣ್ಣೆ ಇತ್ಯಾದಿಗಳಲ್ಲಿ ಇವು ಇರುವುದಿಲ್ಲ ಹಸುರು ತರಕಾರಿಗಳಲ್ಲಿ ಮತ್ತು ಹುಳ್ಳಂಗಿಯಲ್ಲಿ ವಿಟಮಿನ್ ಜೀವಾತುಗಳಿಲ್ಲದಿದ್ದರೂ ಅವುಗಳಲ್ಲಿರುವ ಕರೊಟಿನ್ ಎಂಬ ಸತ್ವವು ಪ್ರಾಣಿಜನ್ಯ ವಸ್ತುಗಳಲ್ಲಿನ ಜೀವಾತುಗಳಿಂದ ವಿಟಮಿನ್ ಎ ಯಾಗಿ ಪರಿವರ್ತಿಸಲ್ಪಡುತ್ತವೆ ದನ ಆಡುಗಳಿಗೆ ಹೆಚ್ಚು ಹಸುರು ತರಕಾರಿಗಳನ್ನು ಹುಲ್ಲನ್ನೂ ತಿನ್ನಿಸಿದರೆ ಅವುಗಳು ಹಾಲಿನಲ್ಲಿನ ವಿಟಮಿನ್ ಅಂಶಗಳೂ ಹೆಚ್ಚುವವು ಒಣಹುಲ್ಲು, ತಿಂಡಿಗಳನ್ನೇ ತಿನ್ನಿಸುವುದರಿಂದ ಹಾಲಿನಲ್ಲಿನ ವಿಟಮಿನ್ ಎ. ಜೀವಾತುಗಳು ಕಡಿಮೆಯಾಗುವುವು

ಈ ಕೆಳಗಿನ ವಸ್ತುಗಳಲ್ಲಿ ವಿಟಮಿನ್ ಎ. ಜೀವಾತುಗಳ ಪ್ರಮಾಣ ಹೀಗಿದೆ ಬೆಣ್ಣೆ ೪೩೦೦, ಮೊಟ್ಟೆ ೩೦೦೦; ಬಾಳೆ ಹಣ್ಣು ೮೦, ಕೊಡ್ ಲಿವರ್ ಎಣ್ಣೆ ೧೯೫,೦೦೦.

ವಿಟಮಿನ್ ಎಯ ಕಾರ್ಯ!

ಬೆಳವಣಿಗೆಗೆ ಸಹಾಯ ಮಾಡುತ್ತದೆ, ಚರ್ಮದ ಆರೋಗ್ಯ ವೃದ್ಧಿಯಾಗುತ್ತದೆ, ರೋಗರುಜೆಗಳ ಕ್ರಿಮಿಗಳನ್ನು ನಾಶ ಮಾಡುತ್ತವೆ ಆದುದರಿಂದ ಇದಕ್ಕೆ ರೋಗಾಣುಧ್ವಂಸಕ ವಿಟಮಿನ್ ಎನ್ನುತ್ತಾರೆ.

ವಿಟಮಿನ್ ಎ. ಆಹಾರದಲ್ಲಿ ಕಡಿಮೆಯಾದರೆ ಶರೀರ ಸೊರಗುತ್ತದೆ, ಬೆಳವಣಿಗೆ ಕುಂಠಿತವಾಗುತ್ತದೆ, ದೃಷ್ಟಿ ಮಂದವಾಗುತ್ತದೆ. ಚರ್ಮಾರೋಗ್ಯ ಕುಂದುತ್ತವೆ, ರೋಗರುಜೆಗಳಿಗೆ ಶೀಘ್ರ ತುತ್ತಾಗಬಹುದು, ಮೂತ್ರಕೋಶದಲ್ಲಿ ಕಲ್ಲುಂಟಾಗುತ್ತದೆ.

ಈ ವಿಟಮಿನ್‌ಗಳ ಅಭಾವದಿಂದ ಕ್ಷಯರೋಗ ಉಂಟಾಗಬಹುದು. ಹಾಲು, ಬೆಣ್ಣೆ, ತುಪ್ಪ, ಹಸರು ತರಕಾರಿ, ಮೊಟ್ಟೆ ಮತ್ತು ಹಣ್ಣುಹಂಪಲುಗಳನ್ನು ತಿನ್ನಬೇಕು.

ವಿಟಮಿನ್ ಬಿ

ಈ ಜೀವಾತು ಧಾನ್ಯಗಳಲ್ಲೂ ಅಕ್ಕಿಯ ಮೇಲ್ಪದರಿನಲ್ಲೂ ಹೆಚ್ಚಾಗಿರುತ್ತದೆ ಆದಕ್ಕಾಗಿಯೇ ಈಚೆಗೆ ಅಕ್ಕಿಯನ್ನು ಹೆಚ್ಚು ಕುಟ್ಟಿ ನಾಜೂಕುಗೊಳಿಸಬಾರದೆಂದು ಪ್ರಚಾರವಾಗುತ್ತಿದೆ ಬಟಾಟೆ, ಟೊಮೆಟೊ, ಬಸಳೆಸೊಪ್ಪು ಮತ್ತು ಕೆಲವು ಹಣ್ಣುಗಳಲ್ಲೂ ಇದು ಧಾರಾಳವಾಗಿರುತ್ತದೆ.

ವಿಟಮಿನ್ ಬಿ ಇದರ ಕೊರತೆಯುಂಟಾದರೆ ಬೆರಿಬೆರಿ ಎಂಬ ಚರ್ಮ ಮತ್ತು ನರ ಊದುವಿಕೆಯ ವ್ಯಾಧಿಯಾಗುತ್ತದೆ ಶರೀರ ದುರ್ಬಲತೆ, ಕೈಕಾಲು ವಾತ, ಊದುವಿಕೆ ಮತ್ತು ಹಸಿವು ನಾಶ ಇವು ಇದರ ಲಕ್ಷಣಗಳು ಇದಲ್ಲದೆ ಜೀರ್ಣರಸಕ್ರಿಯೆಯು ಕ್ಷೀಣವಾಗುತ್ತದೆ. ಹೃತ್ಕೋಶ ನಿರ್ಬಲತೆಯೂ ಉಂಟಾಗುವುದು. ಮಕ್ಕಳಲ್ಲಿ ಆಮಶಂಕೆ ಮುತ್ತಾದ ಕರುಳು ವ್ಯಾಧಿಗಳು ಉಂಟಾಗುವವು ಮಕ್ಕಳ ಬೆಳವಣಿಗೆಯೂ ಇದರಿಂದ ಕುಂಠಿತವಾಗುತ್ತದೆ

ವಿಟಮಿನ್ ಸಿ

ಇದು ಹೆಚ್ಚಾಗಿ ಹಸನಾದ ಹಣ್ಣುಗಳ ರಸಗಳಲ್ಲೂ, ಕಬೆಜಿನಲ್ಲೂ, ಲಿಂಬೆ ಮತ್ತು ಕಿತ್ತಳೆ ಹಣ್ಣುಗಳಲ್ಲೂ, ಟೊಮೆಟೊಗಳಲ್ಲೂ ಇರುವುದರಿಂದ ಇದು ರಕ್ತದಲ್ಲಿನ ಕೆಂಪು ಕಣಗಳನ್ನು ಅಭಿವೃದ್ಧಿಪಡಿಸುವುದು, ಪರಿಣಾಮವಾಗಿ ರಕ್ತದ ಶಕ್ತಿಯು ಹೆಚ್ಚುವುದು, ಹೀಗಿರುವುದರಿಂದ ರಕ್ತಸ್ರಾವ ಪೊಸರುವಂತಹ ವ್ಯಾಧಿಯು ನಿಲ್ಲುವುದು.

ವಿಟಮಿನ್ ಸಿಯ ಅಭಾವವುಂಟಾದರೆ ಶರೀರದ ಬಾರಕ ಡಿಮೆಯಾಗುವುದು,

ವಾರದ ವಿಜ್ಞಾನ ವರದಿ

ಹೆಚ್ಚು ಹಾಲುಕೊಡುವ ದನಗಳು

ಕೃತಕ ಗರ್ಭಧಾರಣೆಯ ವಿಧಾನಗಳನ್ನನುಸರಿಸಿದ ಪರಿಣಾಮವಾಗಿ ಬ್ರಿಟಿಷ್ ದನಗಳ ಹಾಲಿನ ಪ್ರಮಾಣ ಹೆಚ್ಚಾಗಿದೆ. ಕಳೆದ ಹನ್ನೆರಡು ತಿಂಗಳುಗಳಲ್ಲಿ ೧೨೭೬೮ರ ಕೇಂದ್ರಗಳಲ್ಲಿ ೮೦ ಸಾವಿರ ತಮ್ಮ ದನಗಳಿಗೆ ಈ ಕೃತಕ ವೀರ್ಯ ವಿಧಾನವನ್ನುಪಯೋಗಿಸಿರುವರು ಇದರ ಮುಂಚಿನ ವರ್ಷ ಕೇವಲ ೪೪೨೦ ರೈತರು ಮಾತ್ರ ಇದರ ಉಪಯೋಗ ನಡಸಿದ್ದರು

ಹುಳುತಿನ್ನದ ಕಂಬಳಿಗಳು

ಲಂಡನಿನಲ್ಲಿರುವ ಅಂತರಾಷ್ಟ್ರೀಯ ಉಣ್ಣೆ ಅಭಿವೃದ್ಧಿ ಸಂಘದವರು ಹುಳುಹುಪ್ಪಟೆಗಳು ತಿನ್ನಲಾಗದ ಕಂಬಳಿಗಳನು ತಯಾರಿಸುವ ವಿಧಾನವು ಕಂಡುಹಿಡಿಯಲ್ಪಟ್ಟಿದೆಯೆಂದು ಸಾರಿರುವರು. ಉಣ್ಣೆಯನ್ನು ದಾರವಾಗಿ ಮಾಡುವ ಮೊದಲೇ ಅದನ್ನೊಂದು ರಾಸಾಯನಿಕ ಮಿಶ್ರಣದಲ್ಲಿ ಅದ್ದುವರು. ಆಗ ಉಣ್ಣೆಯೊಳಗೆ ಹುಳಗಳ ರುಚಿವತ್ತಾದ ಆಹಾರವಸ್ತು ಅವುಗಳಿಗೆ ಜೀರ್ಣವಾಗದ ಬೇರೊಂದು ವಸ್ತುವಾಗಿ ಮಾರ್ಪಾಟಾಗುವುದು

ಹಲ್ಲುಗಳು ಸಡಿಲಾಗುವವು, ಹಲ್ಲಿನ ಒಸಡುಗಳಿಂದ ರಕ್ತ ಸುರಿಯುವುದು, ರಕ್ತಕ್ಷೀಣತೆ, ಹಸಿವು ನಾಶ, ಗಾಯಗಳಾದರೆ ಮಾಸಲಿಕ್ಕೆ ಸಮಯ ಹಿಡಿಯುವುದು ಇತ್ಯಾದಿ ಅವ್ಯವಸ್ಥೆಗಳುಂಟಾಗುವವು.

ವಿಟಮಿನ್ ಡಿ

ಹಾಲು, ತುಪ್ಪ, ಮೊಟ್ಟೆ, ಬೆಣ್ಣೆ, ಕೊಡ್ ಲಿವರ್ ಎಣ್ಣೆ ಇವುಗಳಲ್ಲಿ ಇದು ಹೆಚ್ಚಾಗಿರುವುದು ವಿಟಮಿನ್ ಡಿಯ ಅಭಾವವಾದರೆ ಶರೀರದ ಎಲುಬುಗಳು ನಿರ್ಬಲವಾಗುವುವು, ಬೆಳವಣಿಗೆ ಕುಂಠಿತವಾಗುವದು, ಹಲ್ಲುಗಳು ಕೊಳೆಯುವವು, ಸಣ್ಣ ಕರುಳಿನಲ್ಲಿ ಅವ್ಯವಸ್ಥೆಯುಂಟಾಗುವುದು

ವಿಟಮಿನ್ ಇ

ಗೋಧಿ, ಕತ್ತೆ, ಬೀಜಗಳಲ್ಲಿ ಹೆಚ್ಚಾಗಿರುತ್ತದೆ ಇದನ್ನು ಶರೀರದಲ್ಲಿ ಸಾಕಷ್ಟು ಸೇರಿಸಿಕೊಳ್ಳದಿದ್ದರೆ ಲೈಂಗಿಕ ಕ್ರಿಯೆಯು ಅವ್ಯವಸ್ಥಿತವಾಗುವುದು

ವಿಟಮಿನ್ ಕೆ.

ಹಸುರು ತರಕಾರಿ ಮತ್ತು ಎಲೆಗಳಲ್ಲಿ ಇದು ಪುಷ್ಕಳವಾಗಿರುತ್ತದೆ ಈ ಜೀವಾತುಗಳಿಲ್ಲದಿದ್ದರೆ ರಕ್ತದ ಶಕ್ತಿ ಕುಂದುವುದು.

★

ಎಲುಮಿನಿಯಂ ಲೋಹದ ಹಡಗು

ಸಂಪೂರ್ಣ ಎಲುಮಿನಿಯಮಿನಿಂದ ರಚಿಸಲ್ಪಟ್ಟ ಹಡಗೊಂದು ಬ್ರಿಟನಿನಲ್ಲಿ ಸಿದ್ಧಗೊಳಿಸಲ್ಪಟ್ಟಿದೆ. ಇದು ಉಕ್ಕಿನ ಹಡಗಿಗಿಂತ ಅದೆಷ್ಟೋ ಕಡಿಮೆ ಪ್ರಮಾಣದ ಭಾರದ್ದಾಗಿರುವುದರಿಂದ ಇದರಲ್ಲಿ ಹೆಚ್ಚಿನ ಸರಕುಗಳನ್ನು ಒಯ್ಯಬಹುದು, ಮಾತ್ರವಲ್ಲ ಯುದ್ಧಕಾಲದಲ್ಲಿ ಹೆಚ್ಚು ಗಾತ್ರದ ಫಿರಂಗಿ ಗುಂಡುಗಳನ್ನು ಇದಕ್ಕೆ ಜೋಡಿಸಲು ಸಾಧ್ಯವಿದೆ ಇದರ ಇಂಜಿನುಗಳು ಸಹ ಎಲುಮಿನಿಯಮಿನಿಂದ ರಚಿಸಲ್ಪಟ್ಟಿದ್ದು ಇವು ತಮಗಿಂತ ಹೆಚ್ಚು ಭಾರದ ಉಕ್ಕಿನ ಯಂತ್ರಗಳಿಗಿಂತ ಹೆಚ್ಚು ಶಕ್ತಿಯನ್ನು ಉತ್ಪನ್ನ ಮಾಡುತ್ತವೆಯಂತೆ.

ಜ್ವಾಲಾಮುಖಿಯಿಂದ ವಿದ್ಯುತ್‌ಶಕ್ತಿ

ಸಂಯುಕ್ತ ಅಮೇರಿಕದ ಸರಕಾರವು ಇಟಲಿಯಲ್ಲಿರುವ ವೆಸೂವಿಯಸ್ ಜ್ವಾಲಾಮುಖಿ ಪರ್ವತದ ಬಳಿ ೬೦ ಲಕ್ಷ ಡಾಲರ್ ವೆಚ್ಚದ ಒಂದು ವಿದ್ಯುತ್‌ಶಕ್ತಿ ಉತ್ಪಾದಕ ಕೇಂದ್ರವನ್ನು ನಿರ್ಮಿಸುವರು. ವೆಸೂವಿಯಸ್ ಪರ್ವತದೊಳಗೆ ಹುದುಗಿಕೊಂಡಿರುವ ನೀರಿನ ಉಗಿಯನ್ನು ಯಂತ್ರಚಲಾವಣೆಯ ಶಕ್ತಿಯಾಗಿ ಉಪಯೋಗಿಸಿಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ ೭೫ ಸಾವಿರ ಕಿಲೊವಾಟ್ಸನಷ್ಟು ವಿದ್ಯುತ್‌ಶಕ್ತಿಯನ್ನು ಇಲ್ಲಿ ಉಂಟುಮಾಡಬಹುದೆಂದು ಅಂದಾಜು ಮಾಡಲಾಗಿದೆ

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O. ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ ಮಂಗ್ಳೂರು, ಕಾರ್ಕಳ, ಉಡ್ಪಿ ಎಕ್ಸ್‌ಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡಿಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅರದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಮಂಗಳೂರು,
23—12—1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION, LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED.

V. R. Kamath, B.A. LL.B.
General Manager

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — About 54 lakhs

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.
Factory & Head Office
KATAPADI S. Kanara.

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ರೋಗಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

MISSING

9 JULY

MISSING

9 JULY

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು: 1906

[ಸಂಪುಟ 42] ತಾರೀಕು 16—7—1948 [ಸಂಚಿಕೆ 28]

ಆಸಾಫಜಾಹಿ ವಂಶ ರಾಜಮನೆತನದ್ದಲ್ಲ

ಸುಭೇದಾರನ ಪ್ರಾಂತ್ಯ ಸ್ವತಂತ್ರ ಹೇಗಾದೀತು?

ನಿಜಾಮರ ಮೂಲ, ಹೈದರಾಬಾದದ ಇತಿಹಾಸ

ದಿಲ್ಲಿಯ ಕೆಂಪುಕೋಟೆಯ ಮೇಲೆ ಆಸಾಫಜಾಹಿ ಧ್ವಜವನ್ನು ಹಾರಿಸುವ ಕೋರಿಕೆಯನ್ನು ಹೈದರಾಬಾದದ ಇತ್ತಿಹಾದುಲ್ ಮುಸುಲ್ಮಾನರ ನಿರಂಕುಶ ಸರ್ವಾಧಿಕಾರಿ ಎನಿಸಿಕೊಳ್ಳುವ ಕಾಶೀಮ್ ರಜ್ವಿಯು ಬಹಿರಂಗಪಡಿಸಿದನು. ಕೆಂಪುಕೋಟೆಯ ಮೇಲೆ ಇತರ ಯಾವ ಧ್ವಜವನ್ನು ಹಾರಿಸಲು ಬರುವವರಿಗೆ ಅದರ ಕೆಳಗಿನ ಸುರಂಗದಲ್ಲಿ ಭದ್ರವಾಗಿರಿಸಲಾಗುವುದೆಂದೂ ಕೇಂದ್ರ ಮಂತ್ರಿ ಶ್ರೀ ಗಾಡ್ಗೀಳರೂ ಉತ್ತರ ವಿತ್ತಿದ್ದಾರೆ.

ಕಾಶೀಮ್ ರಜ್ವಿಯವರು ತಮ್ಮ ಸ್ವಂತ ಕಾರಣಗಳಿಗಾಗಿ ಈ ಆಸಫಜಾಹಿ ಧ್ವಜಕ್ಕೆ ಅತೀ ಮಹತ್ವವನ್ನು ಕೊಟ್ಟಿರುವುದು ಸಹಜವಾದರೂ ಇತಿಹಾಸದ ದಾಖಲೆಗಳು ಆ ಧ್ವಜವು ಭಾರತದಲ್ಲಿ ಸ್ವತಂತ್ರವಾಗಿ ಮೆರೆಯಲರ್ಹತೆಯುಳ್ಳದಾಗಿಲ್ಲವೆಂಬ ಸಾಕ್ಷ್ಯಗಳನ್ನೇ ಉಲ್ಲೇಖಿಸಿದೆ. ಕಾರಣ ಈ ಧ್ವಜವಾಗಲಿ, ಅದರ ನಿರ್ಮಾಪಕರಾದ ನಿಜಾಮುಲ್ ಮುಲ್ಕ್ ಇವರು ಪಾರಂಪರ್ಯಾಗತವೂ ಉಜ್ವಲವಾದುದೂ ಆದ ಯಾವ ರಾಜವಂಶ ಸಂಭೂತರಲ್ಲವೆಂಬುದು ಸಿದ್ಧಾಂತವಾದುದು.

ಇಷ್ಟೇ ಅಲ್ಲ ಕೆಲ ಬ್ರಿಟಿಷರು ನಿಜಾಮ ವಂಶದಲ್ಲಿ ಮೊಗಲ್ ಮನೆತನದ ಕುರುಹುಗಳನ್ನು ಕಂಡಂತೆ ಭ್ರಾಂತಿಸಿರುವರು. ಆದರೆ ಗತಇತಿಹಾಸವನ್ನು ಅವಲೋಕಿಸಿದರೆ ಆ ವಂಶದ ಮೂಲಪುರುಷನು ಓರ್ವ ಸಾಮಾನ್ಯ ಸುಬೇದಾರನಾದ್ದು, ಅವನು ಅನೇಕ ವಿಶ್ವಾಸಘಾತುಕತನದ ಕೃತ್ಯಗಳಿಂದ ಹೈದರಾಬಾದನ್ನು ರಚಿಸಿದನೆಂದೂ, ಅವನೀ ಕೃತ್ಯಗಳಿಗೆ ಸರಿಹೋಲುವಂತಹುದು ಭಾರತೀಯ ಇತಿಹಾಸದಲ್ಲೇ ಅಪೂರ್ವವೆಂದೂ ಸ್ಪಷ್ಟವಾಗುತ್ತದೆ.

ಮೊಗಲರ ದಕ್ಷಿಣ–ಹೈದರಾಬಾದು

ಈಗಿನ ಹೈದರಾಬಾದು ಮೊಗಲ್ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯವಾಗಿತ್ತು. ಮಿರ್ ಕಮ್ರುದ್ದಿನ್ ಚಿನ್ ಕಿಲಿಚ್ ಖಾನ್ ಎಂಬವನು ಅದರ ಸುಬೇದಾರನಾಗಿದ್ದು ಅವನೇ ಮುಂದೆ ಸ್ವತಂತ್ರನಾಗಿ ನಿಜಾಮುಲ್‌ಮುಲ್ಕ್‌ನಾಗಿ ಮೆರೆಯುತ್ತಾನೆ. ಅವನೇ ಇಂದಿನ ನಿಜಾಮರ ಮೂಲಪುರುಷ. ಕಮ್ರುದ್ದೀನನು ಸುಬೇದಾರನಾದರೂ ಆಗಿದ್ದ. ಆದರೆ ಅವನ ಅಜ್ಜನಾದ ಅಬೀದನು ಪರ್ಶಿಯಾದ ಓರ್ವ ಸಾಮಾನ್ಯ ವರ್ತಕನಾಗಿದ್ದು ಔರಂಗಜೇಬನ ಆಸ್ಥಾನದಲ್ಲಿ ಕೆಲಸ ಹುಡುಕಿಕೊಂಡು ಭಾರತಕ್ಕೆ ಬಂದ. ಸ್ವಲ್ಪ ಕಾಲದ ನಂತರ ಅವನ ಮಗ ಘಾಜಿಯುದ್ದೀನ್ ಫಿರೋಜ್ ಜಂಗನೂ (ನಿಜಾಮುಲ್‌ಮುಲ್ಕನ ತಂದೆ) ಇಲ್ಲಿಗೆ ಬಂದು ಅವನೂ ಔರಂಗಜೇಬನ ಕೈಕೆಳಗೆ ಹಲವು ಹಿರಿಯ ಹುದ್ದೆಗಳನ್ನು ನಿರ್ವಹಿಸಿಕೊಂಡಿದ್ದ. ಇವನ ಮಗನಾದ ಕಮ್ರುದ್ದೀನನು (ನಂತರ ನಿಜಾಮನೆನಿಸಿದವ) ಚಿಕ್ಕ ಸೇನಾನಾಯಕನಾಗಿ ಮೊಗಲ ಸೈನ್ಯದಲ್ಲಿ ಸೇರಿ ಶೀಘ್ರ ಸೇನಾಪತಿಸ್ಥಾನಕ್ಕೇರಿಸಲ್ಪಟ್ಟ.

ಔರಂಗಜೇಬನ ಮರಣಾನಂತರ ಮೊಗಲ್ ಪಟ್ಟಕ್ಕಾಗಿ ಉಂಟಾದ ಹೋರಾಟದಲ್ಲಿ ತಾನು ತಟಸ್ಥನಂತೆ ನಟಿಸಿ ಬಿಜಾಪುರ ಸೇನಾ ವಿಭಾಗದಲ್ಲಿದ್ದ ಕಮ್ರುದ್ದಿನನು ಉಪ್ಪರದ [illegible] ರಾಜಶಕ್ತಿ ವಿರುದ್ಧವಾಗಿ ಸಂಚು ನಡೆಸಿದ. ದಕ್ಷಿಣದಲ್ಲಿ ತನ್ನದೇ ಆದ ರಾಜ್ಯವೊಂದನ್ನು ಕಟ್ಟುವ ಕನಸನ್ನವನು ಆಗಲೇ ಕಂಡ. ಇವನ ಮಹತ್ವಾಕಾಂಕ್ಷೆಯನ್ನು ತಿಳಿದ ಬಹದ್ದೂರ್ ಶಹನು (ಔರಂಗಜೇಬನ ನಂತರ ಪಟ್ಟವೇರಿದವ) ಅವನನ್ನು ಔಂಡದ ಗವರ್ನರನಾಗಿ ಸ್ಥಳಾಂತರಗೊಳಿಸಿದ. ಮತ್ತೆ ಬಹದ್ದೂರ್ ಶಹನ ನಂತರ ಪಟ್ಟಕ್ಕೆ ಬಂದ ಫರೂಕ್ಸಿಯಾರನ ಕೃಪಾಕಟಾಕ್ಷವನ್ನು ಸಂಪಾದಿಸಿ ಕಮ್ರುದ್ದೀನನು ಫರೂಕ್ಸಿಯಾರನಿಂದ ದಕ್ಷಿಣದ ಸುಬೇದಾರನಾಗಿ ನೇಮಿಸಿಕೊಂಡ. ಆಗಲೇ ಮೊಗಲ್ ಅರಸನು ಅವನಿಗೆ ನಿಜಾಮುಲ್‌ಮುಲ್ಕ್ ಬಹದ್ದೂರ್ ಫತ್‌ಜಂಗ್ ಎಂಬ ಬಿರುದನ್ನು ಕೊಟ್ಟದ್ದು.

ಆ ನಂತರವೇ ಅವನು ತನ್ನ ಕನಸನ್ನು ಕಾರ್ಯರೂಪಕ್ಕೆ ತರಲು ಪ್ರಾರಂಭಿಸಿದನು. ಈ ಕಾರ್ಯದಲ್ಲಿ ನಿಜಾಮುಲ್ ಮುಲ್ಕನು ನ್ಯಾಯನೀತಿಯನ್ನೇ ಪರಿಗಣಿಸಿದವನಲ್ಲ. ತನ್ನ ಕೆಲಸವಾಗಲು ಯಾರೊಡನೆಯೂ ಅವನು ಒಪ್ಪಂದ ಮಾಡಿಕೊಳ್ಳುತ್ತಾನೆ. ಬೇಕಾದಾಗ ಅದನ್ನು ಮುರಿಯಲೂ ಸಿದ್ಧ. ಇದೇ ಆಸಫಜಾಹಿ ವಂಶದ ಸಂಸ್ಥಾಪನಾಚಾರ್ಯನೆನಿಸುವ ನಿಜಾಮುಲ್‌ಮುಲ್ಕನೇ ಮೊಗಲರ ಕೊನೆಯ ಪೀಳಿಗೆಯನ್ನು [illegible] ನಿರ್ಮೂಲಗೊಳಿಸಲು ಅಫಘಾನಿಸ್ಥಾನದ ಪುಂಡರ ದೊರೆಯಾದ ನಾದಿರ್ ಶಹನನ್ನು ದಿಲ್ಲಿಯನ್ನು ಮುತ್ತುವಂತೆ ಆಹ್ವಾನಿಸಿದವ. ಧೈರ್ಯಗೊಂಡ ಆ ಕ್ರೂರ ಅಫಘಾನನಾದರೋ ರಾಜಧಾನಿಯನ್ನು ಸೂರೆಸುಲಿಗೆ ಮಾಡುವುದಲ್ಲದೆ ಒಂದು ಲಕ್ಷ ನಾಗರಿಕರನ್ನು ತನ್ನ ಖಡ್ಗಕ್ಕೆ ಆಹುತಿ ತೆಗೆದುಕೊಂಡ. ಕೌತುಕದ ಸಂಗತಿಯೆಂದರೆ ತಾನೇ ಆಹ್ವಾನಿಸಿ ಕರೆದ ನಾದಿರ್ ಶಹನೊಡನೆ ಕಾದಾಡದೆ [illegible] ನಿಜಾಮ ಮೊಗಲ್ ಅರಸನಾದ ಮಹಮ್ಮದ್ ಶಹನ ಕಣ್ಣಿಗೆ ಮಣ್ಣೆರಚಲು ಪ್ರಯತ್ನಪಟ್ಟ. ಆ ಸಮಯಕ್ಕೆ ಪೇಶ್ವೆಯಾದ ಬಾಜಿರಾಯನು ಇವನನ್ನು ಸೋಲಿಸಿದಾಗ ನಿಜಾಮ ತನ್ನ ಮರಾಠ ವಿಜಯಿಗೆ ಕಪ್ಪತೆರಲೂ ಒಪ್ಪಿಕೊಂಡ. ಅಂದಿನಿಂದವನು ಕಟುವಾದ ಹಿಂದೂವಿರೋಧಿಯೂ ಆದ.

ದೊಡ್ಡ ಕುತಂತ್ರ

ಕುತಂತ್ರದಲ್ಲಿ ನಿಜಾಮ ಅದ್ವಿತೀಯ ಚಾಣಾಕ್ಷನೆನ್ನಬಹುದು. ಪೇಶ್ವೆಗಳೊಡನೆ ಸ್ನೇಹ ನಟಿಸಿ ಅದರ ವಿರೋಧಿ ಇನ್ನೊಬ್ಬ ಮಹತ್ವಾಕಾಂಕ್ಷಿಯಾಗಿದ್ದ ತ್ರ್ಯಂಬಕ್ ರಾಯನನ್ನು ಪೇಶ್ವೆಗಳ ಮೇಲೆ ಬೀಳಲೂ ಈತ ಪ್ರೋತ್ಸಾಹಿಸಿದ್ದಾನೆ. ಬಾಲಾಜಿ ಬಾಜಿರಾಯನ ಕಾಲದಲ್ಲಿ ನಿಜಾಮ ಭೋಪಾಲದ ಬಳಿ ಸೋತು ಸುಣ್ಣವಾದಾಗ ೧೭೩೮ರಲ್ಲಿ ಅವನೊಡನೊಂದು ಒಪ್ಪಂದ ಮಾಡಿಕೊಂಡ. ಆದರೆ ಸ್ವಲ್ಪ ಕಾಲದ ನಂತರ ಅದನ್ನು ಮುರಿದು ಪೇಶ್ವೆಯನ್ನು ಪುನಃ ಯುದ್ಧಕ್ಕೆ ಕೆದರಿಸಿದ.

೧೭೪೮ರಲ್ಲಿ ನಿಜಾಮುಲ್‌ಮುಲ್ಕನು ಮೃತಪಟ್ಟಾಗ ಪಟ್ಟಕ್ಕೆ ದಕ್ಷಿಣದ ಸುಬೇದಾರಿಕೆಗೆ ಅವನ ಮಗನಾದ ನಾದಿರ್ ಜಂಗ್, ಮೊಮ್ಮಗನಾದ ಮುಜಾಫರ್ ಜಂಗ್ ಇವರೀರ್ವರೂ ಬಾಧ್ಯಸ್ಥಿಕೆಗಳನ್ನು ಪ್ರತಿಪಾದಿಸುವವರಾದರು. ಆ ಸಮಯಕ್ಕೆ ಸಂದರ್ಭ ಕಾಯುತ್ತಿದ್ದ ಇಂಗ್ಲಿಷರು ನಾಸೀರ್ ಜಂಗನನ್ನು, ಫ್ರೆಂಚರು ಮುಜಾಫರ್ ಜಂಗನನ್ನೂ ಬೆಂಬಲಿಸಿದರು. ಪ್ರಖ್ಯಾತನಾದ ಡೂಪ್ಲೆಯ ಪರಾಕ್ರಮದಿಂದ ಮುಜಾಫರ್ ಜಂಗನಿಗೆ ದಕ್ಷಿಣದ ಸುಬೇದಾರಿಕೆ ಸಿಕ್ಕಿತು. ನಾಸೀರ್ ಜಂಗನು ಯುದ್ಧದಲ್ಲಿ ಮಡಿದ. ಹೀಗೆ ಮೂರನೇ ನಿಜಾಮನಾದ ಮುಜಾಫರಜಂಗನು ವಿದೇಶಿಯರಾದ ಫ್ರೆಂಚರ ಸಹಾಯದಿಂದ ನ್ಯಾಯವಾದ ಹಕ್ಕುದಾರನಾದ ತನ್ನ ಚಿಕ್ಕಪ್ಪನನ್ನು ಕೊಂದು ಪಟ್ಟವನ್ನು ಕ್ರಯಕ್ಕೆಂಬಂತೆ ಕೊಂಡುಕೊಂಡ. ವಿದೇಶಿಯರನ್ನು ಆಮಂತ್ರಿಸುವ ಸಾಂಪ್ರದಾಯ ಇವನೂ ಮುಂದರಿಸಿದ.

ನಂತರ ಮೈಸೂರು ಯುದ್ಧಗಳಲ್ಲಿ ನಿಜಾಮರು ವ್ಯವಹರಿಸಿದ ರೀತಿನೀತಿಗಳು ಅತ್ಯಂತ ಕೌತುಕದ್ದಾಗಿವೆ. ಒಂದು ಸಲ ಬ್ರಿಟಿಷರೊಡನೆ ನೆಂಟಸ್ತಿಕೆ ಮಾಡಿ ಅವರ ಮೂಲಕ ಅವರ ಸ್ನೇಹಿತರಾಗಿದ್ದ ಮರಾಟರೊಡನೆಯೂ ಮೈತ್ರಿ ಗಳಿಸಿದ. ಈ ಮೂವರು ಮಿತ್ರರೂ ಹೈದರ್ ಆಲಿಯ ಮೇಲೆ ಬಿದ್ದರು. ಆಗ ಆರ್ಕಾಟಿನ ನವಾಬನಾಗಿದ್ದ ಮಹಮ್ಮದ್ ಆಲಿಯು ನಿಜಾಮನನ್ನು ಹೈದರ್ ಆಲಿಯೊಡನೆ ಒಪ್ಪಂದ ಮಾಡಿಕೊಳ್ಳುವಂತೆ ಪ್ರೇರಿಸಲು ನಿಜಾಮನು ಬ್ರಿಟಿಷರನ್ನೂ ಮರಾಟರನ್ನೂ ತ್ಯಜಿಸಿ ಮಿತ್ರದ್ರೋಹ ಮಾಡಿ ಹೈದರನ ಮಿತ್ರತ್ವ ಮಾಡಿಕೊಂಡ. ಆದರೆ ಅಂಜುಬುರುಕತನದ ಈ ಸ್ನೇಹ ಧೀರ್ಘಕಾಲ ಬಾಳಲಿಲ್ಲ. ಹೈದರನ ಸ್ನೇಹದಲ್ಲಿ ತಿರುಳಿಲ್ಲವೆಂದರಿತು ನಿಜಾಮ ಪುನಃ ಬ್ರಿಟಿಷರ ಮರೆಹೊಕ್ಕ. ತನ್ನೆರಡು ಪ್ರದೇಶಗಳನ್ನು ಅವರಿಗೆ ಬಿಟ್ಟುಕೊಟ್ಟು, ತನಗೆ ಟಿಪ್ಪುವಿನ ಕೆಲ ಜಿಲ್ಲೆಗಳನ್ನು ಕೊಡಿಸಬೇಕೆಂದು ಭಿನ್ನವಿಸಿದ. ಆ ಸಮಯಕ್ಕೆ ಟಿಪ್ಪುವಿನ ಮೇಲೆ ಸಂಶಯ ಕಣ್ಣಿನಿಂದ ನೋಡುತ್ತಿದ್ದ ಬ್ರಿಟಿಷರು ಅವನೊಡನೆ ತಾವು ಮುಂಚೆ ಮಿತ್ರತ್ವದ ಒಪ್ಪಂದ ಮಾಡಿಕೊಂಡಿದ್ದರೂ ಎಂದಾದರೂ ಅವನೊಡನೆ ಯುದ್ಧ ಕಟ್ಟಿಟ್ಟದ್ದೆಂದು ಖಚಿತಗೊಂಡು ನಿಜಾಮನಿಗೆ ಸಹಾಯಮಾಡಲೊಪ್ಪಿದರು. ಹೀಗೆ ಒಂದರ ಮೇಲೊನ್ನೊಂದು ದ್ರೋಹ, ವಿಶ್ವಾಸಘಾತುಕತನಗಳು ನಡೆದು ಮೂರನೇ ಮೈಸೂರು ಯುದ್ಧದಲ್ಲಿ ಟಿಪ್ಪುವಿಗೆ ಸೋಲುಂಟಾಗಲು ನಿಜಾಮನೂ ಸಹಾಯವಿತ್ತು ತನ್ನ ರಾಜ್ಯವನ್ನು ದಪ್ಪಮಾಡಿಕೊಂಡ.

ಮಾನವ ಇತಿಹಾಸದಲ್ಲಿ ಗಡ್ಡ ಉಜ್ವಲ ಮಹಿಮೆ

ದೇವರ ಮತ್ತು ಜ್ಞಾನಿಗಳ ಕುರುಹು

ಅಮೇರಿಕದ ಸ್ಟೇಟ್‌ಟೌನ್ ಎಂಬ ಚಿಕ್ಕ ಪಟ್ಟಣದಲ್ಲಿನ ಗಂಡಹೆಂಡಿರುಗಳೊಳಗೆ ಒಂದು ಚಿಕ್ಕ ಸಂಗತಿಯ ಕುರಿತು ನಡೆಯುತ್ತಿರುವ 'ಭೀಕರ ಹೋರಾಟ'ವೊಂದರಲ್ಲಿ ವಿಜಯಶ್ರೀಯು ಯಾರನ್ನು ಒಲಿಯುವಳೆಂಬುದರ ಕುರಿತು ಜಗತ್ತೇ ನಿರೀಕ್ಷಿಸುತ್ತಿದೆ. ಅಲ್ಲಿನ ಹೆಂಗಸರು 'ನವನೋಟ' (new look)ವೆಂದೆನಿಸುವ ಗಡ್ಡ ಗವನುಗಳನ್ನು ಧರಿಸಿ ಮೆರೆಯುವುದನ್ನು ಆಕ್ಷೇಪಿಸಿ ಅವರ ಪತಿಯಂದಿರು 'ಗಡ್ಡ ಸತ್ಯಾಗ್ರಹ'ವನ್ನಾರಂಭಿಸಿರುವರು. ತಮ್ಮ ಅರ್ಧಾಂಗಿಯರು ಹಳೇ ಉಡುಪು ವೈಖರಿಯನ್ನೇ ಪುನಃ ಧರಿಸಿಕೊಳ್ಳದಿದ್ದರೆ ಈ ಇಪ್ಪತ್ತಮೂರು ಗಂಡಂದಿರು ಗಡ್ಡ ಬೆಳೆಸುವುದಾಗಿ ಛಲ ತೊಟ್ಟಿದ್ದಾರೆ

ವಿಚಿತ್ರ ವಿಚಾರ ಸರಣಿಗಳು ರಾತ್ರಿ ಬೆಳಗಾಗುವುದರೊಳಗೆ ಹರಡುವಂತಹ ದೇಶ ಅಮೇರಿಕಾ. ಅಂಥಲ್ಲಿ ಈ ಚಿಕ್ಕ ಘಟನೆಯಿಂದ ಗಡ್ಡ ವ್ಯಾಮೋಹವು ಶೀಘ್ರ ವ್ಯಾಪಿಯಾಗಬಹುದು. ನಮ್ಮ ಕಾಲವೆಂತಹದೆಂಬ ಅನಿಶ್ಚಿತ ಯೋಚನೆಯಲ್ಲಿ ನಾವಿರುವಾಗ ಈ ನೂತನ 'ಗಡ್ಡಕಾಲ'ವು ನಮ್ಮನ್ನೆದುರಿಸಬಹುದು.

ಇತಿಹಾಸ

ಗಡ್ಡದ ಕಥೆ ಅತೀ ಉದ್ದವಾದೊಂದು ಇತಿಹಾಸ. ಮಾನವರಲ್ಲಿ ಇದುವರೆಗೆ ಎರಡೇ ವರ್ಗಗಳಿದ್ದವೆನ್ನಬಹುದು—ಗಡ್ಡದವರು, ಗಡ್ಡರಹಿತರು. ಕಾಲಾನುಕ್ರಮದ ಪರಿಶೀಲನೆಮಾಡಬೇಕಾದರೆ ನಾವು ಮೂಲ ಮನುವಿನ ಕಾಲದಲ್ಲಿ ಸಂಗತಿ ಹೇಗಿತ್ತೆಂದು ತಿಳಿದುಕೊಳ್ಳಬೇಕು. ಮುಂಚಿನ ಕಾಲದಲ್ಲಿ ಗಡ್ಡವಿದ್ದವರು ಋಷಿಗಳೇ ಆಗಿರುತಿದ್ದರು. ಶ್ರೀಕೃಷ್ಣ ತನ್ನ ಬಾಲಲೀಲೆಯ ಕಾಲದಲ್ಲಿ ಓರ್ವ ಗೌಳಿಗ ಸತಿಯ ಜಡೆಯನ್ನು ಅವಳ ಪತಿಯ ಗಡ್ಡಕ್ಕೆ ಕಟ್ಟಿ ನಿದ್ದೆಯಿಂದೆದ್ದಾಗ ಮತ್ತೆ ನಡೆದ ವಿನೋದವನ್ನು ಕಂಡು ನಕ್ಕು ನಲಿದಾಡಿದನೆಂದು ಪುರಾಣಗಳಲ್ಲಿ ನಿರೂಪವಾಗಿದೆ.

ಆದರೆ ದಾಖಲೆಗೆ ಬಿದ್ದ ಇತಿಹಾಸದಲ್ಲಿ ಗಡ್ಡದ ಉಲ್ಲೇಖ ಸುಮಾರು ಕ್ರಿ. ಪೂ. ೩೦೦ ವರ್ಷಗಳ ಹಿಂದೆ ಆಳುತಿದ್ದ ರೋಮನ್ ಚಕ್ರವರ್ತಿಯೋರ್ವನ ಕಾಲದಲ್ಲಿ ಸಿಗುತ್ತದೆ ವದನಸೌಂದರ್ಯ ತೃಪ್ತಿಕರವಾಗುವಂತೆ ಪ್ರತಿಯೊಬ್ಬ ರೋಮನನು ಕನಿಷ್ಟಪಕ್ಷ ಎರಡು ವಾರಗಳಿಗೊಮ್ಮೆಯಾದರೂ ಮುಖಕ್ಷೌರ ಮಾಡಿಕೊಳ್ಳಬೇಕೆಂದು ಆ ಚಕ್ರವರ್ತಿ ಆಜ್ಞಾಪಿಸಿದ್ದ

ಮಹಾ ಯೋಧನೆನಿಸಿದ ಅಲೆಕ್ಸಾಂಡರನು ತನ್ನ ಸೈನಿಕರಿಗೆ ಒಂದೊಂದು ಕ್ಷೌರಗತ್ತಿಯನ್ನಿಟ್ಟುಕೊಂಡಿರಲೇಬೇಕೆಂದು ನಿರ್ಧರಿಸಿದ್ದ ಅದಕ್ಕೆ ಯುಕ್ತಕಾರಣವೂ ಇದೆ ಒಂದು ಯುದ್ಧ ಕಾಲದಲ್ಲಿ ಅವನ ಸೈನಿಕರಲ್ಲಿ ಹೆಚ್ಚಿನವರು ಗಡ್ಡಬೆಳೆಸಿದುದರ ಪರಿಣಾಮವಾಗಿ ಶತ್ರುಗಳು ಅಂದಿನ ಕೈ ಕೈ ಯುದ್ಧದಲ್ಲಿ ತಮ್ಮ ವಿರೋಧಿಗಳ ಗಡ್ಡವನ್ನು ಕುಲುಕಿ ಅವರಿಗೆ ಸೋಲುಂಟು ಮಾಡಿದರಂತೆ. ಇದರ ವಿಚಾರ ಆ ಪ್ರಖ್ಯಾತ ಗ್ರೀಕ್ ಸಾಹಸಿಯು ಮರೆಯುವಂತಿಲ್ಲ.

ಗಡ್ಡದ ಮೇಲೆ ತೆರಿಗೆ

ಗಡ್ಡದ ಇತಿಹಾಸದಲ್ಲಿ ರಷ್ಯವು ಪ್ರಧಾನ ಪಾತ್ರವಹಿಸಿದೆ. ಪ್ರಖ್ಯಾತ ಅರಸನಾದ ಐವನನ ಆಸ್ಥಾನಕ್ಕೆ ೫ ಅಡಿ ೨ ಅಂಗುಲ ಉದ್ದದ ಗಡ್ಡ ಧರಿಸಿದ್ದ ಓರ್ವ ವಿದೇಶಿ ರಾಯಭಾರಿ ಬಂದಾಗ ಅರಸನು ಆಕರ್ಷಿತನಾಗಿ ಅದನ್ನು ತನ್ನ ಕೈಗಳಿಂದ ಸವರಿನೋಡಲು ಸಮ್ಮತಿಯೀಯಬೇಕೆಂದು ಬಿನ್ನವಿಸಿಕೊಂಡನಂತೆ

ರಷ್ಯದಲ್ಲಿ ಕ್ಷೌರಪ್ರಿಯತೆಯನ್ನು ಪ್ರಚಾರ ಮಾಡುವ ಕಾರ್ಯವು ಬಹಳ ಕಠಿಣದ್ದಾಗಿದೆ. ಅಲ್ಲಿನ ಪ್ರಖ್ಯಾತ ಅರಸನಾಗಿದ್ದ ಪೀಟರನು ಗಡ್ಡತೆರಿಗೆಯೊಂದನ್ನು ವಸೂಲಿ ಮಾಡಿದ್ದಾನೆ ದಿನನಿತ್ಯದ ಗಡ್ಡದ ತಾಪತ್ರಯ ಬೇಡವೆಂದು ಅನೇಕರು ಈ ತೆರಿಗೆ ತೆತ್ತಿರುವರು ಗಡ್ಡಪ್ರಿಯತೆ ಕಡಿಮೆಯಾಗದಿದ್ದನ್ನು ನೋಡಿ ಪೀಟರ್ ದೊರೆ ಒಂದು ರಾಜಾಜ್ಞೆ ಹೊರಡಿಸಿ ಗಡ್ಡವಿಟ್ಟ ಸನ್ನ ಪ್ರಜೆಗಳನ್ನು ಸಾರ್ವಜನಿಕದಲ್ಲಿ ಬೋಳಿಸುವಂತೆ ಮಾಡಬೇಕೆಂದು, ಆ ಕಾರ್ಯಕ್ಕೆ ಒಡ್ಡಾದ ಕತ್ತಿಯನ್ನುಪಯೋಗಿಸಬೇಕೆಂದೂ ಕಟ್ಟು ಮಾಡಿದನು!

ತಲೆಗೆ ಹಾನಿ

ಫ್ರಾನ್ಸಿನ ಹದಿಮೂರನೇ ಲೂಯಿಯು ಪಟ್ಟವೇರಿದಾಗ ಒಂಭತ್ತು ವರ್ಷದ ಹುಡುಗನಾಗಿದ್ದ ಗಡ್ಡದವರನ್ನು ಕಂಡರೆ ಅವನಿಗ ಅಂಜಿಕೆಯಾಗುತಿತ್ತೇನೋ ಅಂಥವರನ್ನು ಕೂಡಲೇ ಶಿರಚ್ಛೇದನ ಮಾಡಲು ಆತ ಕಳುಹಿಸುತಿದ್ದ. ಗಡ್ಡಕ್ಕಾಗಿ ತಲೆಕಳೆಕೊಳ್ಳುವ ಫಜೀತಿಬೇಡವೆಂದು ಫ್ರೆಂಚ್ ರಾಜನ ಆಸ್ಥಾನಿಕರು ಗಡ್ಡಬೋಳಿಸಿಯೇ ರಾಜದರ್ಶನಕ್ಕೆ ಹೋಗುತಿದ್ದರು. ಇನ್ನೊಬ್ಬ ಫ್ರೆಂಚ್ ಅರಸನಾದ ಚಾರ್ಲೆಮೆಗ್ನೆಯ ಕಾಲದಲ್ಲಿ ಗಡ್ಡವು ವ್ಯಕ್ತಿಗಳನ್ನು ಗುರುತಿಸಲು ಉಪಯೋಗಿಸಲ್ಪಡುತಿತ್ತು. ಆಗ ಬಡಜನರು ಮಾತ್ರ ಗಡ್ಡವನ್ನಿಟ್ಟುಕೊಳ್ಳಬಹುದು. ಧನಿಕರು ಕೇವಲ ಮೀಸೆಗಳಿಂದ ತೃಪ್ತರಾಗಬೇಕಿತ್ತು

ಹದಿನೆಂಟನೆ ಶತಮಾನವು ಗಡ್ಡದ ಅವನತಿಯ ಕಾಲ. ಆಗ ವಿಶ್ವದ ಪುರುಷಾಡಂಬರದ ಕೇಂದ್ರಗಳಲ್ಲಿ ಅದಕ್ಕೆ ನಿಕೃಷ್ಟ ಸ್ಥಾನ ದೊರೆಯುವಂತಾಯಿತು ಆದರೆ ಹತ್ತೊಂಭತ್ತನೇ ಶತಮಾನದ ಪ್ರಾರಂಭ ಕಾಲದಲ್ಲಿ ಗಡ್ಡವು ಪುನಃ ತನ್ನ ಪ್ರಾಚೀನ ವೈಭವಕ್ಕೇರಲ್ಪಟ್ಟಿತು ಆದರೆ ಈ ಪುನರುದ್ಧಾರವು ತಾತ್ಕಾಲಿಕವಾದುದು ಕಾರಣ ಮತ್ತೆ ಕ್ರಮೇಣ ಗಡ್ಡದನುಯಾಯಿಗಳ ಸಂಖ್ಯೆ ಕ್ಷೀಣವಾಗತೊಡಗಿತು

ಬುದ್ಧನಿಗೆ ಗಡ್ಡವಿರಲಿಲ್ಲ ಬೌದ್ಧ ಸಾಂಪ್ರದಾಯದಲ್ಲಿದು ಕಠಿಣ ಸನ್ಯಾಸದ ಕುರುಹು. ಮೊಗಲ ಅರಸರಲ್ಲಿ ಅಕ್ಬರನೊಬ್ಬ ಗಡ್ಡ ತೆಗೆಸಿ ಹಿಂದೂ ಮುಸ್ಲಿಂ ಐಕ್ಯತೆ ಸ್ಥಾಪಿಸಿದ ರಜಪೂತ ಮಂಗಲರು ವಿವಾಹ ಹರಿವಾಡಿಯೇ ಶೌರ್ಯ ಪ್ರದರ್ಶಿಸಿದರು ಬಾಗರಾರ ತಮ್ಮ ರಜತವರ್ಣದ ಗಡ್ಡದಿಂದ ಸಾಂಪ್ರತ್ಯರನ್ನು ಮುಗ್ಧಗೊಳಿಸಿದ್ದರು ಶಾಸಕನು ಎಲ್ಲರಿಗೆ ಸಿಂಹ ಗಡ್ಡಗಳಿರಬೇಕೆಂದು ನಿರ್ದೇಶಿಸಿದನು

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಳೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು

CANARA BANK, LIMITED.

ESTD: 1906

ಮೇಲಿಂದ ಮೇಲೆ ಉಂಟಾಗುವ

ಕೆಮ್ಮು, ಶೀತ, ಶೀತಜ್ವರಗಳು ಉಂಟಾದರೆ ನಿಮಗೆ ಪೆಪ್ಸ್ ಅವಶ್ಯ

ಹಿತಕರ ರುಚಿಯ ಪೆಪ್ಸ್ ಮಾತ್ರೆಗಳು ಶೀಘ್ರ ಕಾರ್ಯಗೆಯ್ವ ಪರಿಣಾಮಕಾರಿಯಾಗಿ ಔಷಧೀಯ ಸತ್ವಗಳನ್ನು ನಿಮ್ಮ ಶ್ವಾಸದೊಂದಿಗೆ ಸಂಕಷ್ಟದ ಮೂಲಕ್ಕೇ ಕಳುಹಿಸುವುದು. ನೀವು ಪೆಪ್ಸನ್ನು ಹೀರುವಾಗ ಅದರ ವಿಷಾಣುನಾಶಕ, ಪರಿಹಾರದಾಯಕ ಹವೆಯು ನಿಮ್ಮ ಕೆಮ್ಮನ್ನು ನಿಲ್ಲಿಸಿ, ಉದಿಕೊಂಡ ಪದೆಗಳನ್ನು ಶಮನಿಸಿ, ರೋಗಾಣುಗಳನ್ನು ನಾಶಮಾಡಿ ಕಂಠಬಿಗಿತವನ್ನು ಸಡಲಿಸಿ, ನಿಮ್ಮ ಎದೆ ಮತ್ತು ಗಂಟಲಿಗೆ ತಕ್ಷಣದ ಪರಿಹಾರವನ್ನು ತರುವುದು



ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶ ವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ

PEPS

ವಿಷಹಾರಿ

ಗಂಟಲು ಮತ್ತು ಎದೆ ಗುಳಿಗೆಗಳು

ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ ಅತ್ಯಂತ ಪರಿಣಾಮಕಾರಿ ಔಷಧ.

ಕಾಪು ಕಸಬಾ ಪೇಟೆ ಗೌಡ ಸಾರಸ್ವತ ಬ್ರಾಹ್ಮಣರ ಕಾಪು ಶ್ರೀ ಹಳೆ ಮಾರಿಯಮ್ಮ ದೇವಸ್ಥಾನದ 1357ನೆ ಪಸಲಿ ಬಾಬ್ತು ಜಮಾ ಖರ್ಚಿನ ಲೆಕ್ಕ ಮಂಗಳೂರು ಸಬ್ ಕೋರ್ಟು O S 47ರಲ್ಲಿ ಆದ ಕ್ರಮ ಅರ್ಜಿ ನಂಬ್ರ 142/22ನೆ ಕ್ರಮ ರೂಲು ಪ್ರಕಾರ ಜಮಾ ಬಂದ ವಿವರಗಳು

ಜಮಾ ವಿವರ	ನಗದಿ			ಅಕ್ಕಿ			ಕ್ವಾ	ಸಿಯಾಳ
ಆರಂಭದ ಶಿಲ್ಕು	2	12	8	1	0	8¼		
ಗದ್ದಿಗೆ ಪೂಜೆ ಬಾಬ್ತು	3316	8	11					
ಕುಂಕುಮ ಅರ್ಚನೆ ಬಾಬ್ತು	13	2	0					
ಬಡ್ಡಿಯಿಂದ ಸೇವೆ ಬಗ್ಗೆ ಡಿಪೊಜಿಟು	50	0	0					
ನವರಾತ್ರೆ ಬಗ್ಗೆ ಬಂದದ್ದು	49	15	0					
ಮಾರಿಪೂಜೆ ಬಾಬ್ತು ಜಮಾ	680	0	3					
ವಕ್ಲು ಹುಟ್ಟುವಳ್ಳಿಯಿಂದ	1650	11	9	24	0	0	622	460
ಬೇಂಕಿನಿಂದ ಪಡೆದ ರೂಪಾಯಿ	8280	4	6					
ಗೆಟುವೆ ಪೌಳಿ ಕಟ್ಟೋಣಕ್ಕೆ ಚಾವಡಿಗೆ ತಮ್ಮ ತಮ್ಮ ಹೆಸರು ಕಾಣಿಸಿ ಕಲ್ಲುಗಳು ಇಡಿಸುವ ಬಗ್ಗೆ ಕೊಟ್ಟಂತೆ	760	6	3					
ವ್ಯವಹರಣೆ ಬಾಬ್ತು ವಸೂಲು ಬಂದ	62	12	0					
	14866	9	4	25	0	8¼	622	460

ಮತ್ತು ಪವನು ೬ (ಆರು) ಮೂಗುತಿ 8 (ಎಂಟು) ಬೂಟ್ಟು 6 (ಆರು) ಬೆಳ್ಳಿ ಮತ್ತು ಜರ್ಮನ್ ಬೆಳ್ಳಿ ಕೂಡಾ ಅಂದಾಜು 1¼ ತೊಲೆ (ಒಂದುವರೆ)

ಖರ್ಚು	ನಗದಿ			ಅಕ್ಕಿ			ಕ್ವಾ	ಸಿಯಾಳ
ಗದ್ದಿಗೆ ಪೂಜೆಗೆ ಖರ್ಚು	311	1	0	1		4	322	46[illegible]
ನವರಾತ್ರಿ ಬಗ್ಗೆ	[illegible]90	1	11	0	2	8		
ಮಾರಿ ಪೂಜೆ ಬಗ್ಗೆ	522	1	4	[illegible]	[illegible]	7	300	
ವ್ಯವಹರಣೆ ಬಾಬ್ತು	51	6	0					
ತೀರ್ವೆಗ	233	3	0					
ಹಸೂರಿ, ಪ್ರಯಾಣ [illegible]	292	[illegible]	8	[illegible]	0	2¼		
ವೆಂಕಟರಮಣ ದೇವಸ್ಥಾನ ಖರ್ಚಿಗೆ	595	13						
ಸಪ್ತಶ್ಲಾ ಬಗ್ಗೆ ಖರ್ಚಿಗೆ	[illegible]		1					
ಮೂಲಗೇಣಿ ಸಂದದ್ದು	8	12	0					
ಕ್ಷೇತ್ರದ ಬಗ್ಗೆ ಖರ್ಚು	[illegible]9	[illegible]	[illegible]					
[illegible] ರಶೀ	[illegible]	[illegible]	0					
[illegible] ಕರದ ತಲೆ [illegible]	15	5	9	6	2	4		
ಗೆಟುವೆ ಮತ್ತು ಪೌಳಿಗೆ ಬಗ್ಗೆ ಖರ್ಚು	69	1				½		
ಶಿಲ್ಕು ಉಳಿದದ್ದು	34	1	4	9		10¼		
	14866	9	4	25	0	8¼	622	460

ಕಾಪು ಕಸಬಾ ಪೇಟೆ ಗೌಡ ಸಾರಸ್ವತ ಬ್ರಾಹ್ಮಣರ ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದ 1357ನೆ ಪಸಲಿ ಬಾಬ್ತು ಜಮಾ ಖರ್ಚಿನ ಲೆಕ್ಕ ಮಂಗಳೂರು ಸಬ್ ಕೋರ್ಟು O S 72/21ನೆ ಕ್ರಮ ಅರ್ಜಿ N. 149/22 ಆದ ಕಮ್ರ ರೂಲು ಪ್ರಕಾರ

ವಿವರ	ನಗದಿ			ಅಕ್ಕಿ ಮು	ಕ.	ಸೇ.	ಕ್ವಾ.	ಉಡಿ
ತಾ. 1-7-47ಕ್ಕೆ ಇದ್ದ ಶಿಲ್ಕು	1	15	4	16	0	1¾		
ವಕ್ಲು ಹುಟ್ಟುವಳಿ ಜಮಾ ಬಂದದ್ದು	904	9	3	45	1	12	78	3
ಮಾರಿಯಮ್ಮ ದೇವರ ಭಂಡಾರದಿಂದ ಖರ್ಚಿಗೆ ಬಂದದ್ದು	595	13	7	0	0	0		
ಅನ್ಯುತ ಪಡಿ ಲೆಕ್ಕಕ್ಕೆ ಬಂದ ಅಕ್ಕಿ ಜಮಾ				2	1	7		
ಪ್ರಾಣ ದೇವರ ಡಬ್ಬಿ ಕಾಣಿಕೆ ಜಮಾ	7	4	6					
ವೆಂಕಟ್ರಮಣ ಕಾಣಿಕೆ ಡಬ್ಬಿ ಕಾಣಿಕೆ ರೂ	27	12	6					
ಶ್ರೀ ಕಾಶಿಮಠ ಶ್ರೀಗುರುಗಳ ಸಲ್ಲುವ ಶಿಲ್ಕು	4	0	0					
	1541	7	2	64	0	6¾	78	3

ಸದ್ರಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ 1356ನೆ ಪಸಲಿಗೆ ಒಂದು ವರ್ಷದ ಖರ್ಚಿನ ಲೆಕ್ಕ

ವಿವರ	ನಗದಿ ರೂ	ಆ	ಪೈ	ಅಕ್ಕಿ ಮು	ಕ	ಸೇ	ಕ್ವಾ	ಉಡಿ
ಅರ್ಚಕರಿಗೆ ತೀರ್ವೆಗೆ [illegible]	159	9	0					
ನಿತ್ಯ ಅನ್ನದಾನದಿಗೆ [illegible] ದೀಪ [illegible]	[illegible]60	5	0	43	1	10	60	3
ಶ್ರೀ [illegible] ಉತ್ಸವಗಳಿಗೆ [illegible]	276	7	0					
[illegible]	197	12	1[illegible]	3	2	13	18	
[illegible] ಬಗ್ಗೆ ಖರ್ಚು	9	12	4			4		
ವ್ಯವಹರಣೆ ಬಗ್ಗೆ ಖರ್ಚು	11	8	[illegible]					
[illegible] ಪ್ರಯಾಣ ಹಸೂರಿ [illegible]	45	1	1					
ನೌಕರರ ಸಂಬಳ ಖರ್ಚು	162	0	0					
[illegible] ಅಕ್ಕಿಗೆ	98	1	0					
[illegible] ಶಿಲ್ಕು	0	14	11			1¾		
	1541	7	2	64	0	6¾	78	3

ವಾರದ ವಿಜ್ಞಾನ ವರದಿ

ಸುವಾಸನೆಯ ಹಾಸು ಕಂಬಳಿಗಳು

ಇಂಗ್ಲೆಂಡಿನಲ್ಲಿ [illegible] ನೀಳಕ್ಕ ರಬ್ಬರಿನ ಚ[illegible]ಗಳನ್ನು [illegible] ಆದರ ಇವಕ್ಕೆ ಒಂದು ತರದ [illegible] ವಾಸನೆ ಬರುತ್ತದೆ. ಈಗ ಅಲ್ಲಿ ಒಂದು ಚಾಪ ತಯಾರಕ ಸಂಸ್ಥೆಯವರು ಪರಿಮಳ ದ್ರವ್ಯಗಳಿಂದ ತುಂಬಿರುವ ಇಂತಹ ಕಂಬಳಿಗಳನ್ನು ತಯಾರಿಸುತ್ತಿರುವರೆಂದು ತಿಳಿದು ಬರುತ್ತದೆ.

ಸರ್ಪ ವಿಷದ ಇಂಜೆಕ್ಷನ್

ವಿಪರೀತ ನೋವನ್ನು ನಿಲ್ಲಿಸಲು ಕೆಲವು ಹಾವುಗಳ ವಿಷವು ಅತ್ಯುಪಕಾರಿಯೆಂದು ವೈದ್ಯರ ಅನುಭವಕ್ಕೆ ಬಂದಿದೆ. ಬ್ರೆಜಿಲಿನಲ್ಲೊಂದು ವಿಷ ಹಾವಿದೆ. ಅದರ ನಂಜಿನಿಂದ ಹಲ್ಲು ನೋವನ್ನೂ, ರಕ್ತ ಇಳಿಯುವಿಕೆಯನ್ನೂ ಕ್ಷಣದಲ್ಲಿ ನಿಲ್ಲಿಸಬಹುದು. ಶಸ್ತ್ರಕ್ರಿಯೆ ಮಾಡುವಾಗ ಮೊರ್ಫಿನ್ ಎಂಬ ಔಷಧಿ ಸತ್ವವನ್ನು ಕೊಡುತ್ತಾರೆ. ಆದರೆ ಇದರ ಪರಿಣಾಮವು ಹಾವಿನ ವಿಷದಷ್ಟು ದೀರ್ಘಕಾಲ ಬರುವುದಿಲ್ಲ.

ಪಾಪದ ಹುಡುಗನ ಮಿದುಳು ಸರಿಯಿಲ್ಲ

[illegible] ಗಳಲ್ಲಿ ಮಾಡಿ ಪ್ರಾಕ್ತಿ[illegible] ಹುಡುಗರು [illegible] ಮಾಡುತ್ತಾರೆ ಆದರ ಇವರಷ್ಟು [illegible] ಏಕಾಂಗಿಯಾಗಿರುವ ಹುಡುಗ[illegible]! ಅವನ ವಿಷಯ [illegible] [illegible] ಮನೋಶಾಸ್ತ್ರಜ್ಞರು ತಿಳಿಸುತ್ತಾರೆ. ಅವನು ಮನೋವ್ಯಾಧಿಯಿಂದ ಪೀಡಿತನಾಗಿರಬಹುದಂತೆ. ಇಂಥ ಹುಡುಗರ ಏಕಾಂಗಿಯಾಗಿ[illegible] [illegible] ಮಾತ್ರವಲ್ಲ ತಮ್ಮನ್ನು ಯಾರಾದರೂ ಕಿಂಚಿತ್ ತೊಂದರೆಗೊಳಿಸಿದರೆ ಇವರು ಅತಿರೇಕವಾಗಿ ನೇಗುತ್ತಾರೆ.

ಸಿಹಿ ನೀರುಳ್ಳಿ

ಅಮೇರಿಕದ ಮೆರಿಲೆಂಡ್ ಪ್ರಾಂತ್ಯದಲ್ಲಿನ ಒಂದು ಗದ್ದೆಯಲ್ಲಿ ಕೆಲಸ ಮಾಡುತ್ತಿರುವ ರೈತರು ಪ್ರಗಲ್ಭ ವಿಜ್ಞಾನಿಗಳೂ, ಶ್ರೇಷ್ಠ ತತ್ವಜ್ಞಾನಿಗಳೂ ಆಗಿರುತ್ತಾರೆ. ಅಂದರೆ ಅವರು ಅಲ್ಲಿ ಕೃಷಿ ವಸ್ತುಗಳ ಕುರಿತು ಸಂಶೋಧನೆ ನಡೆಸುತ್ತಿರುವರು. ಅವರು ಸಾಕುವ ಕೋಳಿಗಳೆಲ್ಲ ಬಿಳಿಬಣ್ಣದವುಗಳೇ. ಅವರು ಬೆಳೆಸಿದ ಮರಗಳ ಸೇಬುಗಳು ಕಣ್ಣಾಗಿ [illegible] ಅಷ್ಟು [illegible] ಈ ಕೃಷಿ ಪ್ರಯೋಗ ಕ್ಷೇತ್ರದಲ್ಲಿ [illegible] ಗಳನ್ನು ಸಿಹಿಯಾಗಿ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದಾರೆ.

ಸಮುದ್ರದೊಳಗೆ ಸಾಗಾಟ ಮಾರ್ಗ

ಫ್ರಾನ್ಸಿಗೂ ಇಂಗ್ಲೆಂಡಿಗೂ ಮಧ್ಯದಲ್ಲಿರುವ 38 ಮೈಲು ಅಗಲದ ಸಮುದ್ರದಲ್ಲಿ ಎರಡೂ ದೇಶಗಳನ್ನೂ ನೇರವಾಗಿ ಜೋಡಿಸುವ ಒಂದು ಕೊಳವಿ ಮಾರ್ಗವನ್ನು ಹಾಕಲು ಇತ್ತಂಡದ ದೇಶಗಳ ಯಂತ್ರ ತಜ್ಞರು ಪರ್ಯಾಲೋಚಿಸುತ್ತಿದ್ದು ಈಗ ಈ ಕುರಿತು ಸುವ್ಯವಸ್ಥಿತವಾದೊಂದು ಯೋಜನೆ ಸಿದ್ಧವಾಗಿದೆಯಂತೆ. ಇದು ಕಾರ್ಯರೂಪಕ್ಕೆ ಬಂದರೆ ಇಂಗ್ಲೆಂಡಿನಿಂದ ಮೋಟಾರು ಮತ್ತು ರೈಲು ಮಾರ್ಗಗಳು ನೇರವಾಗಿ ಫ್ರಾನ್ಸಿನ ಸಮುದ್ರದಡಿಯ ಈ ಸುರಂಗ ಮಾರ್ಗವಾಗಿ ಕಾಲವಿಳಂಬವಿಲ್ಲದೆ ಹೋಗಲನುವಾಗುತ್ತದೆ. ಎರಡೂ [illegible] ಈ ಮಾರ್ಗ [illegible] ಬಹಳ [illegible] ಆಗುತ್ತಿವೆ.

ಕರಗದ ಬೆಣ್ಣೆ

ಬಿಸಿಯಾದರೂ [illegible] ಕರಗದ ಬೆಣ್ಣೆಯನ್ನು ಆಸ್ಟ್ರೇಲಿಯಾದ ಔದ್ಯೋಗಿಕ ಪ್ರಯೋಗ ಶಾಲೆಯವರು ತಯಾರಿಸಿದ್ದಾರೆ. ಸಾಮಾನ್ಯವಾಗಿ ಬಿಸಿಯಾದೊಡನೆ ಬೆಣ್ಣೆ ಕರಗುವುದು. ಆದರೆ ಇದುವರೆಗೆ ಅದನ್ನು ಬಹು ಕಾಲ ಉಳಿಸಲು ರೆಫ್ರಿಜೇಟರುಗಳೆಂಬ ಥಂಡಿ ಕವಾಟುಗಳಲ್ಲಿ [illegible]ತ್ತಿದ್ದರು. ಆದರೆ ಮೇಲ್ಕಂಡ ಸಂಸ್ಥೆಯವರು ಕಂಡುಹಿಡಿದ ತಯಾರಿ ವಿಧಾನದ ಬೆಣ್ಣೆಯಲ್ಲಿ ನೀರಿನ ಅಂಶಗಳಿರುವುದಿಲ್ಲ. ಒಂದು ತರದ ಕೊಳೆಣ್ಣೆಯಿರುತ್ತದೆ, ಅಲ್ಲದೆ ಸ್ವಲ್ಪ ಉಪ್ಪಿನಂಶವೂ ಕೂಡಿರುತ್ತದೆ. ಈ ಬೆಣ್ಣೆಯನ್ನು ನೀರಿನಲ್ಲಿ ಹಾಕಿದೊಡನೆ ಅದರೊಳಗಿನ ಮಿಶ್ರಣಾಂಶಗಳೆಲ್ಲವೂ ಹೋಗಿ ಅಪ್ಪಟವಾದ ಬೆಣ್ಣೆಯು ಸಿಗುವುದು.

ಸ್ವದೇಶಾಭಿಮಾನಿ

ತಾರೀಕು 16—7—1948

ಪ್ರೊ। ಭನ್ಸಾಲಿಯವರ ಆಮರಣಾಂತ ಉಪವಾಸ

ಪ್ರೊಫೆಸರ್ ಬನ್ಸಾಲಿಯವರು ಹೈದರಾಬಾದಿನಲ್ಲಿ ರಜಾಕರರು, ಪೋಲಿಸರು ಮತ್ತು ಸೈನಿಕರು ಇವರೆಲ್ಲರಿಂದ ಅಲ್ಲಿಯ ನಿರಪರಾಧೀ ಸ್ತ್ರೀಯರ ಮೇಲೆ ನಡೆಸಲ್ಪಡುವ ಅತ್ಯಾಚಾರಗಳನ್ನು ತಡೆಗಟ್ಟಲು ಆಮರಣಾನಂತರ ಉಪವಾಸದ ಧೀಕ್ಷೆಯನ್ನು ಕೈಕೊಂಡಿರುವರೆಂದು ಪ್ರಕಟವಾಗಿರುತ್ತದೆ.

ಭನ್ಸಾಲಿಯವರು ವಿಜಯವಾಡದಿಂದ ಹೈದರಾಬಾದು ಸಂಸ್ಥಾನವಲ್ಲಿದ್ದ ಮುರಾಥ ಎಂಬಲ್ಲಿಗೆ ಹೋದರು

ಸಂಸ್ಥಾನದಲ್ಲಿ ಅಲ್ಲಲ್ಲಿ ಪಾದಚಾರಿಯಾಗಿ ಸಂಚರಿಸಿ ಅಲ್ಲಿ ಸಂಕಷ್ಟಕ್ಕೊಳಗಾದ ಜನರಿಗೆ ಧೈರ್ಯಕೊಟ್ಟು ಸತ್ಯಾಗ್ರಹದ ದಾರಿಯನ್ನು ಉಪದೇಶಿಸುವುದು ಅವರ ಉದ್ದೇಶವಿತ್ತು. ಆದರೆ ಹೈದರಾಬಾದು ಸರಕಾರವು ಅವರು ಕೂಡಲೆ ಸಂಸ್ಥಾನದ ಗಡಿಯ ಹೊರಗೆ ಹೋಗಬೇಕೆಂದು ಆಜ್ಞೆ ಕೊಟ್ಟರು ಇದರಿಂದಾಗಿ ಅವರು ಉಪವಾಸ ಕೈಕೊಳ್ಳಬೇಕಾಯಿತು ಸಂಸ್ಥಾನದೊಳಗೆ ತನ್ನನ್ನು ಸ್ವತಂತ್ರವಾಗಿ ತಿರುಗಾಡಲುಬಿಟ್ಟರೆ ಭನ್ಸಾಲಿಯವರು ಉಪವಾಸ ನಿಲ್ಲಿಸುವರು ಇಲ್ಲದಿದ್ದರೆ ಅವರು ಪ್ರಾಣವನ್ನು ಕೊಡುವರು

ಇಂಥ ಉಪವಾಸಗಳನ್ನು ಕಂಡು ಇದೆಲ್ಲ ಹುಚ್ಚು ಎಂದು ನಗುವವರು ಎಷ್ಟೋ ಮಂದಿ ಇದ್ದಾರೆ ಗಾಂಧೀಯವರು ಆಗಿಂದಾಗ ಕೈಕೊಳ್ಳುತ್ತಿದ್ದ ಉಪವಾಗಳನ್ನು ಕುರಿತು ಕಟುವಾಗಿ ಟೀಕಿಸುತ್ತಿದ್ದರೆಂದ ಮೇಲೆ ಈಗ ಭನ್ಸಾಲಿಯವರ ಪಾಡೇನು? ಮಾತ್ರವಲ್ಲ ನೈಜಾಮು ಸರಕಾರವಾದರೂ ಈ ಉಪವಾಸಕ್ಕೆ ಬಗ್ಗುವ ಸಂಭವವಾದರೂ ಇದೆಯೆ? ಇಂಥ ಸಂದರ್ಭದಲ್ಲಿ ಉಪವಾಸ ಕೈಕೊಳ್ಳುವುದೆಂದರೆ ಆತ್ಮಹತ್ಯೆಯೇ ಸರಿ ಎಂದು ಹೆಚ್ಚಿನವರಿಗೆ ಕಂಡರೆ ಆಶ್ಚರ್ಯವಿಲ್ಲ

ಭನ್ಸಾಲಿಯವರು ಹಿಂದೆ ಚೀಮೂರ್ ಮತ್ತು ಅಷ್ಟಿಗಳಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರಗಳನ್ನು ಪ್ರತಿಭಟಿಸಿ ಉಪವಾಸ ಕೈಕೊಂಡಿದ್ದರು. ೬೩ ದಿನಗಳ ಉಪವಾಸದ ಬಳಿಕ ಅಂದಿನ ಬ್ರಿಟಿಷ್ ಸರಕಾರ ಅವರ ಮಾತಿನಂತೆ ವರ್ತಿಸಿ ಭನ್ಸಾಲಿಯವರು ವಿಜಯಿಗಳಾಗಿದ್ದರು ಈ ಭಾರಿ ಅಷ್ಟು ದೀರ್ಘ ಅವಧಿ ಇಲ್ಲ. ಉಪವಾಸದ ಸಮಯ ನೀರು ಕೂಡ ಕುಡಿಯುವುದಿಲ್ಲವಾಗಿ ಅವರು ನಿರ್ಧಾರ ಮಾಡಿರುವರು. ಈ ರೀತಿಯ ಉಪವಾಸ ಹೆಚ್ಚೆಂದರೆ ಮೂವತ್ತು ದಿನಗಳಿಗಿಂತಲೂ ಹೆಚ್ಚಿಗೆ ಹೋಗಲಾರದೆಂದು ಅವರೇ ಅಂದಾಜು ಹೇಳಿದ್ದಾರೆ.

ಭನ್ಸಾಲಿಯವರು ಸಾಯಲಿ ಅಥವಾ ಉಳಿಯಲಿ ಅಂತೂ ಹೈದರಾಬಾದಿನಲ್ಲಿ ಈಗ ಏನೆಲ್ಲ ನಡೆಯುತ್ತದೆ ಎಂಬುದು ಈಗ ಜಗತ್ತಿನಲ್ಲಿ ಪ್ರಕಟವಾಗುವುದರಲ್ಲಂತೂ ಸಂಶಯವಿಲ್ಲ ನಿರಪರಾಧಿ ಸ್ತ್ರೀಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನು ಕಂಡು ಕೇಳಿ ಅದರ ಕಡೆಗೆ ಗಮನಕೊಡದೆ ಇರುವವರಿಗಿಂತ ಅದನ್ನು ಸಹಿಸಲಾರದೆ ಇನ್ನೇನು ಮಾಡಲಾಗದಿದ್ದರೂ ಇದನ್ನು ತಡೆಗಟ್ಟುವ ಯತ್ನವೆಂದು ತನ್ನ ಪ್ರಾಣವನ್ನೇ ಅರ್ಪಿಸಲು ಹೊರಟಿರುವ ಭನ್ಸಾಲಿಯವರು ಸತ್ತರೂ ಇವರ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗುವುದು.

ಭಾರತ ಸರಕಾರದ ಅಗ್ರಸ್ಥಾನದಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರಿದ್ದಾರೆ ಸಂಸ್ಥಾನಗಳ ಖಾತೆಯ ಭಾರತ ಮಂತ್ರಿಗಳಾಗಿ ಸರ್ದಾರ ವಲ್ಲಭಾಯಿ ಪಟೇಲರಿದ್ದಾರೆ ಭಾರತದ ಮುಖ್ಯ ಮಂತ್ರಿಯಾಗಿ ಪಂಡಿತ ಜವಾಹರಲಾಲ ನೆಹರುರವರಿದ್ದಾರೆ ಭಾರತ ರಾಷ್ಟ್ರೀಯ ಸಭೆಯ ಅಧ್ಯಕ್ಷ ಪದವಿಯಲ್ಲಿ ಬಾಬೂ ರಾಜೇಂದ್ರಪ್ರಸಾದರಿದ್ದಾರೆ ಈ ನಾಲ್ಕು ಮಂದಿಯೂ ಗಾಂಧೀಜಿಯವರ ಅತ್ಯಂತ ಆಪ್ತ ಸ್ನೇಹಿತರಿದ್ದವರು ಇವರು ಈ ಅಧಿಕಾರಗಳ ಸ್ಥಾನದಲ್ಲಿದ್ದಾಗಲೂ ಪ್ರೊ। ಭನ್ಸಾಲಿಯವರಂಥ ಗಾಂಧೀ ಅನುಯಾಯಿಯೊಬ್ಬರು ಸತ್ಯಾಗ್ರಹದ ಉಪವಾಸ ಕೈಕೊಂಡು ಸಾಯುವಂತಾದರೆ ಭಾರತಕ್ಕೆ ಮುಂದೆ ಉಜ್ವಲ ಭವಿಷ್ಯವಿದೆಯೆಂದು ಆಶಿಸುವುದು ವ್ಯರ್ಥವೇ ಎಂದು ನಿಸ್ಸಂಶಯವಾಗಿ ಹೇಳಬಹುದು. ಯಾಕೆಂದರೆ ಭನ್ಸಾಲಿಯವರು ಈ ಸಂದರ್ಭದಲ್ಲಿ ಸಾಯುವದೆಂದರೆ ಈ ದೇಶದಲ್ಲಿ ಗಾಂಧೀವಾದವು ಸಾಯುವದೆಂದೇ ಅರ್ಥವಿರುತ್ತದೆ ಗಾಂಧೀಜಿಯವರ ದಾರಿ ಬಿಟ್ಟು ಬಿಟ್ಟು ಈ ದೇಶಕ್ಕೆ ಉಜ್ವಲ ಭವಿಷ್ಯ ಹೇಗೆ ಪ್ರಾಪ್ತವಾದೀತು?

ಪ್ರೊ। ಭನ್ಸಾಲಿಯವರು ಅಸಾಧ್ಯ ಶರ್ತವನ್ನೇನೂ ಹಾಕಿಲ್ಲ ಅವರನ್ನು ಸಂಸ್ಥಾನದಲ್ಲಿ ಸ್ವತಂತ್ರತೆಯಿಂದ ತಿರುಗಿ ಅವರ ಶಾಂತರೀತಿಯ ಕಾರ್ಯ ಮುಂದರಿಸಲು ಬಿಡತಕ್ಕದ್ದೆಂಬ ಶರ್ತ ಅಸಾಧ್ಯ ಶರ್ತವೆನ್ನುವಂತಿಲ್ಲ ಇವರ ಸತ್ಯಾಗ್ರಹದ ಉದ್ದೇಶವಾದರೂ ಕಲುಷಿತವಲ್ಲ ಸ್ತ್ರೀಯರನ್ನು ಅತ್ಯಾಚಾರಗಳಿಂದ ರಕ್ಷಿಸುವುದು ಯೋಗ್ಯ ಉದ್ದೇಶವಲ್ಲವೆಂದು ಯಾರೂ ಹೇಳುವಂತಿಲ್ಲ ಉಪವಾಸ ಕೈಕೊಳ್ಳಲು ಸಾಕಷ್ಟು ಅರ್ಹತೆ ಇವರಲ್ಲಿಲ್ಲವೆಂದೂ ಆಕ್ಷೇಪ ಹೇಳುವಂತಿಲ್ಲ ಏಕೆಂದರೆ ಇವರು ಈ ಮೊದಲು ಇಂಥ ಉಪವಾಸ ಕೈಕೊಂಡು ವಿಜಯಿಗಳಾಗಿರುವರು. ಹೀಗೆ ಗಾಂಧೀ ವಾದದ ದೃಷ್ಟಿಯಿಂದ ಪರಿಶೀಲಿಸಿದರೆ ಪ್ರೊ। ಭನ್ಸಾಲಿಯವರ ಉಪವಾಸವು ಪೂರ್ಣ ಶುದ್ಧವಿದ್ದುದರಿಂದ ಇದರ ಅಪಜಯವೆಂದರೆ ಭಾರತದಲ್ಲಿ ಗಾಂಧೀವಾದದ ಅಪಜಯವೇ ಎಂದ ಕಟಾಕ್ಷವಾಗಿ ಹೇಳಬಹುದು

ವಿಜಯವಾಡದ ಮುನ್ಸಿಪಲ್ ಅಧ್ಯಕ್ಷರ ಮನೆಯಲ್ಲಿ ಭನ್ಸಾಲಿಯವರ ಒಂದ ದಿನ ನಿಂತರು ತಮ್ಮ ಮನೆಯಲ್ಲಿ ಈ ರೀತಿ ಬಂದ ಅತಿಥಿ ಉಪವಾಸವಿರುವಾಗ ತಾವೂ ಉಪವಾಸ ಮಾಡುವುದು ತಮ್ಮ ಕರ್ತವ್ಯವೆಂದು ಇವರ ಘೋಷಿಸಿದಂತೆ ಕಾಣುತ್ತದೆ ಇದರಿಂದಾಗಿ ಭನ್ಸಾಲಿಯವರ ಅಲ್ಲಿಂದ ವಾರ್ಧಾ ಆಶ್ರಮಕ್ಕೆ ಹೋಗಿ ಅಲ್ಲಿಯೇ ತನ್ನ ಉಪವಾಸ ಪೂರೈಸುವುದು ಉತ್ತಮವೆಂದು ಕಂಡು ಈಗ ವಾರ್ಧಾ ಆಶ್ರಮಕ್ಕೆ ತೆರಳಿರುತ್ತಾರೆ

ಇದೇ ೧೧ನೇ ತಾರೀಕು ಸಂಜೆ ಗಂಟೆ ೬ರಿಂದ ಬನ್ಸಾಲಿಯವರ ಉಪವಾಸದ ಆರಂಭವಾಯಿತು ಇದನ್ನೋದುವಾಗ ಎಷ್ಟು ಸಮಯದ ಉಪವಾಸ ಕಳೆಯಿತೆಂದು ಎಣಿಸಿಕೊಳ್ಳಬಹುದು

ವಿಜಯವಾಡದ ನಗರ ಸಭಾಧ್ಯಕ್ಷರು ಈ ಕುರಿತು ನೈಜಾಮು ಸರಕಾರದ ಮುಖ್ಯ ಮಂತ್ರಿ ಲೈಕ್‌ಆಲಿಯವರಿಗೆ ತಿಳಿಸಿರುವರು ಅವರು ಯಾವ ಉತ್ತರವನ್ನು ಕೊಡಲಿಲ್ಲವಾಗಿ ಇದು ತನಕ ಪ್ರಕಟವಾದ ವಾರ್ತೆ. ಭಾರತದ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರ್ಯರೇ ಸ್ವತಃ ನೈಜಾಮರೊಡನೆ ಈ ಕುರಿತು ಮಾತುಕತೆ ನಡೆಸಿ ಭನ್ಸಾಲಿಯವರ ಪ್ರಾಣರಕ್ಷಿಸುವುದು ಹಿತಕರವಿರುತ್ತದೆ ಅಂತಾಗಲೆಂದು ಹಾರೈಸೋಣ

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಕಮಿಶನ್

ಕಾಶ್ಮೀರದ ಕುರಿತು ಸಂಯುಕ್ತ ರಾಷ್ಟ್ರಗಳ ಸಂಘದ ಕಡೆಯಿಂದ ನೇಮಿಸಲಾದ ಕಮಿಶನಿನವರು ಡಿಲ್ಲಿಗೆ ಬಂದು ಮುಟ್ಟಿದ್ದಾರೆ ಪಂಡಿತ ಜವಾಹರಲಾಲರನ್ನು ಒಮ್ಮೆ ಕಂಡರೆಂಬ ವಾರ್ತೆ ಪ್ರಕಟವಾಗಿದೆ

ಕಮಿಶನಿನವರು ಇತ್ತಂಡಗಳೊಗೆ ರಾಜಿಮಾಡಬೇಕೆಂಬ ಉದ್ದೇಶದಿಂದ ವಸ್ತುಸ್ಥಿತಿಯನ್ನು ಇದ್ದಂತೆ ಪರಿಶೀಲಿಸಿದರೆ ಇವರಿಂದ ಉಪಕಾರವೇ ಆದೀತು ಭದ್ರತಾ ಸಮಿತಿಯ ನಿರ್ಣಯದ ಸೂಚನೆಗಳಿಗೆ ಇತ್ತಂಡದವರೂ ಒಪ್ಪಿಗೆ ಕೊಟ್ಟಿಲ್ಲವೆಂಬುದರಿಂದ ಆ ನಿರ್ಣಯದ ಸೂಚನೆಗಳನ್ನು ಜಾರಿಗೆತರಲೆತ್ನಿಸುವುದು ವ್ಯರ್ಥ ಪ್ರಯತ್ನವಿರುತ್ತದೆ

ಅಂತೂ ಇವರು ಇಲ್ಲಿಯ ತನಕ ಬಂದ ಮೇಲೆ ಭಾರತ ಸರಕಾರವು ಇವರನ್ನು ಯೋಗ್ಯ ರೀತಿಯಿಂದ ಗೌರವಿಸುವುದು ಸರಿಯೇ ಇರುತ್ತದೆ ಭಿನ್ನ ರಾಜಕೀಯ ಕುಟಿಲಾಚಾರಗಳನ್ನು ಇವರು ನಡೆಸದಂತೆ ತಡಗಟ್ಟುವುದ ಕಂಡು ಅಷ್ಟೇ ಅಗತ್ಯ ಭಾರತ ಸರಕಾರ ಈ ಕುರಿತು ಸಾಕಷ್ಟು ಎಚ್ಚರಿಕೆಯಿಲ್ಲದೆಯೆಂಬ ಬಗೆ ಸಂಶಯಬೇಡ

ಕಮಿಶನಿನವರು ಸದುದ್ದೇಶದಿಂದಲೇ ವರ್ತಿಸಿ ಇವರ ಆಗಮನದಿಂದ ಸತ್ಫಲವೇ ದೊರೆಯುವಂತಾಗಲೆಂದು ಈಗ ಹಾರೈಸುವುದೇ ಯುಕ್ತವಿರುತ್ತದೆ.

ವಜೀರಿಸ್ಥಾನದಲ್ಲಿ ತೊಂದರೆ

ವಜೀರಿಸ್ಥಾನದಲ್ಲಿ ಜನರು ಪಾಕಿಸ್ಥಾನದ ವಿರುದ್ಧ ಭಂಡಾಯ ಆರಂಭಿಸಿರುತ್ತಾರೆಂದು ಪ್ರಕಟವಾಗಿದೆ ಪಾಕಿಸ್ಥಾನದವರು ಇಲ್ಲಿ ಈ ತೊಂದರೆ ನಿಲ್ಲಿಸಲು ವಿಮಾನದಿಂದ ಬಾಂಬುಹಾಕಲಾರಂಭಿಸಿರುವರೆಂದೂ ತಿಳಿದುಬರುತ್ತದೆ

ಹಿಂದುಸ್ಥಾನದ ಗಡಿಯ ಹೊರಗಿದ್ದ ಈ ಜನರನ್ನು ಅವರ ಮುಖಂಡರಿಗೆ ಸಾಕಷ್ಟು ದ್ರವ್ಯ ಕೊಟ್ಟು ಬ್ರಿಟಿಷರು ಹತೋಟಿಯಲ್ಲಿಟ್ಟುಕೊಳ್ಳುವುದು ಹಿಂದಿನ ಸಾಂಪ್ರದಾಯವಿತ್ತು ಈಗ ಆ ಪ್ರದೇಶ ಪಾಕಿಸ್ಥಾನಕ್ಕೆ ಬಂದದೆ ಹಿಂದಿನಂತೆ ಹಣಕೊಡುವುದು ಪಾಕಿಸ್ಥಾನಕ್ಕೆ ಸಾಧ್ಯವಿಲ್ಲ ಅದಕ್ಕೆ ಬದಲು ಕಾಶ್ಮೀರಕ್ಕೆ ಹೋಗಿ ಬೇಕಾದಂತೆ ಕೊಳ್ಳೆಹೊಡೆಯಲು ಪ್ರೋತ್ಸಾಹ ಕೊಡಲಾಯಿತು ಈಗ ಕಾಶ್ಮೀರದಲ್ಲಿ ಭಾರತ ಸರಕಾರದ ಸೈನ್ಯಗಳು ಇವರನ್ನು ಬೇಕೆಂಬಂತೆ ಇವರಿಗೆ ಪುಂಡರಿಸಲು ಬಿಟ್ಟಿಲ್ಲವಾದ ಮೇಲೆ ಈ ಜನರಲ್ಲಿ ಅತೃಪ್ತಿ ತಲೆದೋರಿದ್ದು ಆಶ್ಚರ್ಯವಿಲ್ಲ

ಗಡಿನಾಡಿದ ಗಾಂಧಿಯೆನಿಸಿದ್ದ ಖಾನ್ ಅಬ್ದುಲ್‌ಗಫರ್ ಖಾನ್ ಮತ್ತು ಇವರ ಖುದ್ದಾ ಖಿದ್‌ಮದ್‌ಗಾರ ದಳದ ಸ್ವಯಂ ಸೇವಕರು ಈ ಜನರ ಸ್ನೇಹ ಗಳಿಸಿಕೊಂಡಿದ್ದವರು ಪಾಕಿಸ್ಥಾನ ಸರಕಾರ ಇವರನ್ನೆಲ್ಲ ಈಗ ಬಂಧನದಲ್ಲಿಟ್ಟಿರುವುದರಿಂದ ಆ ಜನರ ಅಸಮಾಧಾನ ಇನ್ನೂ ಹೆಚ್ಚಲಿಕ್ಕೆ ಕಾರಣವಾಯಿತು ಕಾಶ್ಮೀರಕ್ಕೆ ಹೋಗಲು ಇವರಲ್ಲಿ ಹೆಚ್ಚಿನವರು ನಿರಾಕರಿಸುತಿದ್ದಾರೆ ಇವರ ಆಕ್ರಮಣದಿಂದ ಪಾಕಿಸ್ಥಾನದ ಸೈನ್ಯಗಳೇ ನಡೆದಿವೆ ಇಲ್ಲಿ ಜಗಳ ತಡೆಯಲಾದ ಪ್ರಸಂಗ ಬಂದಿದೆ ಈ ಗಡಿಯ ಜನರ ಮೇಲೆ ಬಲಾತ್ಕಾರ ಪ್ರಯೋಗ ಮಾತ್ರ ಪಾಕಿಸ್ಥಾನಕ್ಕೆ ಉಳಿದಿದೆ ಇದರಿಂದಾಗಿಯೇ ಆ ವಿಮಾನ ಧಾಳಿಗಳ ನಡೆಯುತ್ತಿವೆ ಇಲ್ಲಿಯ ಪರಿಸ್ಥಿತಿ ಹತ್ತಿರದಿಂದ ಪರಿಶೀಲಿಸುವ ಉದ್ದೇಶದಿಂದ ಆರೋಗ್ಯದ ನೆವ ಹೇಳಿ ಕ್ವಾದೇ ಆಜಾಮು ಜಿನ್ನಾ ಸಾಹೇಬರು ಅಲ್ಲಿಗೆ ಸಮೀಪದ ಊರಲ್ಲಿ ಹೋಗಿ ಇರುವರಂತೆ

ಈ ಗಡಿಯ ಜನರು ಮುಸ್ಲಿಮರು ಇವರ ಮೇಲೆ ಪಾಕಿಸ್ಥಾನವು ವಿಮಾನದಿಂದ ಬಾಂಬುಹಾಕುವ ಸಂದರ್ಭವೆಂದರೆ ಮುಸ್ಲಿಮ್ ರಾಷ್ಟ್ರವೆನ್ನಿಸುವ ಪಾಕಿಸ್ಥಾನಕ್ಕೆ ಒಂದು ದೊಡ್ಡ ಅಪಕೀರ್ತಿಯೇ ಸರಿ

ಪೆಲೆಸ್ತೈನದಲ್ಲಿ ಪುನಃ ಯುದ್ಧ

ನಾಲ್ಕು ಹಪ್ತೆಗಳ ತನಕ ಸಂಯುಕ್ತ ರಾಷ್ಟ್ರಗಳ ಸಂಘದ ಸೂಚನೆಯಂತೆ ಇತಂಡದ್ದವರೂ ಯುದ್ಧ ನಿಲ್ಲಿಸಿದ್ದರಷ್ಟೆ? ಕೌಂಟ್ ಬರ್ನಾಡೋಟರು ತಯಾರಿಸಿದ ಶಾಂತಿಯ ಯೋಜನೆಗೆ ಇತ್ತಂಡದವರ ಒಪ್ಪಿಗೆಯೂ ದೊರೆಯಲಿಲ್ಲ. ನಾಲ್ಕು

ಜಿಲ್ಲಾ ಬೋರ್ಡುಗಳು

ಗ್ರಾಮ ಪಂಚಾಯತುಗಳಿಗೇನೇ ಅಧಿಕಾರ ಕೊಟ್ಟು ಜಿಲ್ಲಾ ಬೋರ್ಡುಗಳನ್ನೇ ತೆಗೆದು ಹಾಕಬಹುದೆಂಬ ಅಭಿಪ್ರಾಯದಿಂದ ಇವುಗಳ ಸದಸ್ಯರ ಅವಧಿ ಮುಗಿದಂದಿನಿಂದ ಈ ಸಂಸ್ಥೆಗಳ ಆಡಳಿತೆಯನ್ನು ಅಲ್ಲಲ್ಲಿಯ ಜಿಲ್ಲಾ ಕಲೆಕ್ಟರರೇ ನಡೆಸುತ್ತಿದ್ದರು. ಈಗ ಗ್ರಾಮ ಪಂಚಾಯತ ಮಸೂದೆ ಎಲ್ಲಿ ಇದೆಯೋ ಗೊತ್ತಿಲ್ಲ. ಸಾರ್ವಜನಿಕ ಓಟುಕೊಡುವ ಪದ್ಧತಿಯಂತೆ ಓಟರರ ಪಟ್ಟಿ ತಯಾರಾಗಿಲ್ಲವೆಂಬುದರಿಂದ ಅದು ಆಗುವಲ್ಲಿ ತನಕ ಈ ಸಂಸ್ಥೆಗಳ ಆಡಳಿತೆ ಕಲೆಕ್ಟರರ ಕೈಯಲ್ಲಿ ಇರಿಸುವುದಕ್ಕೀತ ಒಂದು ಹೊಸ ಯೋಜನೆಯಂತೆ ಜಿಲ್ಲಾ ಬೋರ್ಡುಗಳ ವ್ಯವಸ್ಥೆ ಮಾಡುವುದು ಉತ್ತಮವೆಂದು ಮದ್ರಾಸು ಸರಕಾರ ನಿರ್ಧರಿಸಿಯದೆ. ಆಯಾ ಜಿಲ್ಲೆಯಲ್ಲಿರುವ ಶಾಸನ ಸಭಾ ಸದಸ್ಯರು ಮತ್ತು ಇನ್ನೂ ಕೆಲವು ಸರಕಾರದಿಂದ ನೇಮಿಸಲ್ಪಡುವ ಸದಸ್ಯರು ಇವರು ಜಿಲ್ಲಾ ಬೋರ್ಡಾಗುವರೆಂದು ಪ್ರಕಟವಾಗಿರುತ್ತದೆ.

ಹೊಸ ಓಟರರ ಪಟ್ಟಿಯಾಗುವಲ್ಲಿ ತನಕ ಈಗ ಇರುವ ಓಟರರ ಪಟ್ಟಿಯಂತೆ ಈಗ ಚುನಾವಣೆಗಳನ್ನು ಏತಕ್ಕೆ ನಡೆಸಬಾರದು? ಮುನಿಸಿಪಾಲಿಟಿಗಳಿಗೆ ಹೇಗೆ ಹಳೆ ಪಟ್ಟಿಗಳಂತೆಯೆ ಚುನಾವಣೆ ನಡೆಸಿದರು? ಈಗ ಇರುವ ಪಟ್ಟಿಗಳಂತೆ ಚುನಾವಣೆ ನಡಸುವುದಕ್ಕಿಂತ ಸರಕಾರೀ ನೇಮಕ ಸದಸ್ಯರು ಹೆಚ್ಚಿನ ಜನರ ಪ್ರತಿನಿಧಿಗಳಾಗುವದೆಂದರೂ ಹೇಗೆ? ಈಗ ಇರುವ ಶಾಸನ ಸಭಾಸದಸ್ಯರನ್ನು ಯಾ ಓಟರರ ಪಟ್ಟಿಯಂತೆ ಆರಿಸಲಾಗಿತ್ತು? ಇವೆಲ್ಲ ಪ್ರಶ್ನೆಗಳಿಗೆ ಸರಕಾರದ ಕಡೆಯಿಂದ ಸಮರ್ಪಕವಾದ ಉತ್ತರ ಬಾರದಿದ್ದರೆ ಜನರು ಒಂದರ್ಥದಿಂದ ಅಸಮಾಧಾನಪಡುವರೆಂಬುದರಲ್ಲಿ ಸಂಶಯವಿಲ್ಲ.

ಕಾಂಗ್ರೆಸ್ ಪುಢಾರಿಗಳು ಸದ್ಯದಲ್ಲಿಯೇ ಚುನಾವಣೆಗಳನ್ನು ನಡೆಸಬೇಕೆನ್ನುವುದು ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಲು ಈ ರೀತಿ ಬೇಕಾದವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದೇ ಈ ಹೊಸ ಯೋಜನೆಯ ಉದ್ದೇಶವೆಂದು ಕಲವರು ಈಗಲೇ ಹೇಳತೊಡಗಿದ್ದಾರೆ.

ಕೆಲವು ಕಾಂಗ್ರೆಸ್ ಪುಢಾರಿಗಳು ಮಂತ್ರಿಪದವಿ ಸಿಗದೆ ಬಾಧಪಡುತ್ತಿರುವಾಗ ... ಅಸಮಾಧಾನಪಡದ ಹಾಗೆ ಅಧಿಕಾರದ ಸ್ಥಾನ ಕೊಟ್ಟು ಅವರೂ ... ಅನುಕೂಲ ಮಾಡಿಕೊಟ್ಟು ... ಈ ಹೊಸ ಯೋಜನೆಯ ಉದ್ದೇಶವೆಂದು ಇನ್ನು ಕಲವರು ಹೇಳತೊಡಗಿದ್ದಾರೆ.

ಹೀಗೆ ಜನಸಾಮಾನ್ಯರ ಟೀಕೆಗಳಿಗೆ ಕಾಂಗ್ರೆಸ್ ಸರಕಾರವು ಒಳಗಾಗುವ ಈ ಪರಿಸ್ಥಿತಿಯನ್ನು ಕಂಡರೆ ಖೇದವಾಗುತ್ತದೆ.

ಗ್ರಾಮ ಪಂಚಾಯತುಗಳನ್ನು ಬಲಪಡಿಸುವ ಆ ಯೋಜನೆಯನ್ನು ಮದ್ರಾಸು ಸರಕಾರದವರ ಈಗಲೇ ಮುಂದೆ ತರುವುದು ಯುಕ್ತ. ಅದು ಈಗ ಸಾಧ್ಯವಿಲ್ಲವೆಂದಾದರೆ ಜಿಲ್ಲಾ ಬೋರ್ಡುಗಳನ್ನು ಈಗ ಇದ್ದಂತೆ ಸದ್ಯಕ್ಕೆ ಮುಂದರಿಸುವುದು. ಅನಿವಾರ್ಯವೆಂದಾದರೆ ಈ ಜಿಲ್ಲಾ ಬೋರ್ಡುಗಳಿಗೆ ಈಗ ಇರುವ ಓಟರರ ಪಟ್ಟಿಗಳನುಪಯೋಗಿಸಿ ಕ್ರಮವಾದ ಚುನಾವಣೆಗಳನ್ನು ನಡೆಸುವುದೇ ಸರಿಯಾದ ದಾರಿ ಇರುತ್ತದೆ.

ಇದಕ್ಕೆ ಬದಲು ಬೋರ್ಡಿನ ಕುರಿತಾದ ಆಕ್ಟನ್ನು ತಿದ್ದುಪಡಿ ಮಾಡಿ ನೇಮಕದ ಸದಸ್ಯರಿಂದ ಬೋರ್ಡಿನ ಏರ್ಪಾಡು ಮಾಡಹೋಗುವುದೆಂದರೆ ನಿಜವಾಗಿ ಹಾಸ್ಯಸ್ಪದವಿರುತ್ತದೆ. ಇಂಥ ಏರ್ಪಾಡನ್ನು ಯಾವ ಬಗೆಯ ಕಾರಣಗಳನ್ನು ಕೊಟ್ಟೂ ಸಮರ್ಥಿಸುವುದು ಸಾಧ್ಯವಿಲ್ಲ. ಶಾಸನ ಸಭೆಗಳಲ್ಲಿ ಈಗಿನ ಸರಕಾರೀ ಪಂಗಡಕ್ಕೆ ಬಹುಮತವಿದೆಯೆಂಬ ಮಾತ್ರಕ್ಕೆ ಇಂಥ ಆಕ್ಟಿನ ತಿದ್ದುಪಡಿ ಅಲ್ಲಿ ಮಂಜೂರು ಮಾಡಿಸಬಹುದು. ಆದರೆ ಪ್ರಾಂತ್ಯದ ಪ್ರಜಾಜನರಲ್ಲಿ ಹೆಚ್ಚಿನವರು ಈ ತಿದ್ದುಪಡಿಯನ್ನು ಆಕ್ಷೇಪಿಸುವರೆಂಬ ಬಗ್ಗೆ ಸಂಶಯವಿಲ್ಲ.

ಸರಕಾರದವರು ಮ್ಯುನಿಸಿಪಲ್ ಚುನಾವಣೆಗಳನ್ನು ಹಳೆ ಪಟ್ಟಿಗಳಂತೆ ನಡೆಸಿದಾಗ ... ಹಳೆ ಪಟ್ಟಿಗಳ ತನಕ ... ಜಿಲ್ಲಾ ಬೋರ್ಡಿನ ಕುರಿತು ಮಾತ್ರ ಈ ಹಳೆ ಪಟ್ಟಿಗಳಿಗೆ ಆಕ್ಷೇಪ ... ಇರುವುದಿಲ್ಲ.

ಈಗ ಇದ್ದ ಪಟ್ಟಿಗಳಂತೆ ಚುನಾವಣೆ ಇಳಿದರೆ ತಮ್ಮ ಪಂಗಡದ ಜನ ... ಸಂದರ್ಭಗಳು ... ಈಗಿನ ಸರಕಾರದವರಲ್ಲಿ ಬಲವಾಗಿ ಬೇರೂರಿರುವುದು ... ಕಾರಣ ಇದರ ಮೂಲವಲ್ಲದಿದೆಯೆಂದು ಜನರು ಭಾವಿಸಿದರೆ ತಪ್ಪುಗಳಿಕ್ಕಿಲ್ಲ. ಇದರ ಪರಿಣಾಮ ಮುಂದಿನ ಚುನಾವಣೆಯಲ್ಲಿ ಈಗಿನ ಸರಕಾರೀ ಪಂಗಡ ಅನುಭವಿಸಬೇಕಾಗ ಬಹುದೆಂಬುದೂ ನಿಜವಾಗಿರುತ್ತದೆ.

ಈಗ ಚುನಾವಣೆ ನಡಸಲು ಸರಕಾರಕ್ಕೆ ಅಷ್ಟು ಆಕ್ಷೇಪವಿದ್ದರೆ ಈಗಿನಂತೆ ಕಲೆಕ್ಟರರ ಕೈಯಲ್ಲಿಯೇ ಆಡಳಿತೆ ಮುಂದರಿಸುವುದು ಜಾಣತನವಿತ್ತು. ಇದಕ್ಕೆ ಬದಲು ಈ ಹೊಸ ಯೋಜನೆಯನ್ನು ಯಾಕೆ ಮುಂದೆ ತಂದಿರುವರೆಂದು ಗೊತ್ತಾಗುವದಿಲ್ಲ.

ನಮ್ಮ ಸರಕಾರದವರು ಈ ಕುರಿತು ಸಕಾಲದಲ್ಲಿ ಎಚ್ಚರಗೊಳ್ಳುವರೆಂದೂ ಈ ಹೊಸ ಯೋಜನೆಯನ್ನು ಮುಂದೊತ್ತುವುದಿಲ್ಲವೆಂದೂ ಆಶಿಸುತ್ತೇವೆ.

ಹವ್ನಗಳು ಮುಗಿದುವು. ಈ ತಾತ್ಕಾಲಿಕ ಶಾಂತಿಯ ಅವಧಿಯನ್ನು ಮುಂದರಿಸುವುದು ಕೂಡಾ ಅಸಾಧ್ಯವಾಯಿತು. ಇತ್ತಂಡದೊಳಗೆ ಪುನರಭಸದಿಂದ ಯುದ್ಧ ಪ್ರಾರಂಭವಾಗಿರುತ್ತದೆ. ಅದ್ದದಲ್ಲಿಯ ವಿಮಾನ ನಿಲ್ದಾಣವನ್ನು ಯಹೂದಿಯರು ಸ್ವಾಧೀನಪಡಿಸಿಕೊಂಡರೆ ದೂ ಈಗ ಯೇಸುಕ್ರಿಸ್ತನ ಊರಾಗಿದ್ದ ನಜರೇತ್ ಪಟ್ಟಣಕ್ಕಾಗಿ ಹೊಡೆದಾಟವಾಗುತ್ತಿದೆಯಾಗಿಯೂ ಪ್ರಕಟವಾಗಿರುತ್ತದೆ.

ಬರ್ಲಿನದಲ್ಲಿ

ಜರ್ಮನ್ ರಾಜಧಾನಿಯಾದ ಬರ್ಲಿನ್ ನಗರದ ಆಡಳಿತ ಯುದ್ಧಾನಂತರ ಅಮೇರಿಕ, ಬ್ರಿಟನ್, ಫ್ರಾನ್ಸು ಹಾಗೂ ರಷ್ಯಾ ಈ ನಾಲ್ಕು ರಾಷ್ಟ್ರಗಳ ಕೈಗೆ ಹೋಗಿತ್ತು. ಇಡೀ ಜರ್ಮನಿಯಲ್ಲಿ ಈ ನಾಲ್ಕು ರಾಷ್ಟ್ರಗಳು ವಿಭಾಗಿಸಿಕೊಂಡು ಆಳುತ್ತಿದ್ದರು. ಮೊದಲಿನ ಮೂರು ಪಾಶ್ಚಾತ್ಯ ರಾಷ್ಟ್ರಗಳು ಒಂದು ತರ ರಷ್ಯದವರು ಇನ್ನೊಂದು ತರ. ಪೂರ್ವ ಜರ್ಮನಿಯಲ್ಲಿ ರಷ್ಯದವರು ತಮ್ಮ ಕ್ರಮಗಳಿಗೆ ಜನರನ್ನು ಒಲಿಸಲೆತ್ನಿಸುವಾಗ ಪಶ್ಚಿಮ ಜರ್ಮನಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಕ್ರಮಗಳ ಕಡೆಗೆ ಜನರನ್ನೊಲಿಸಲು ಯತ್ನಿಸುತ್ತಿದ್ದರು.

ಬರ್ಲಿನ್ ನಗರದ ನಾಲ್ಕು ಭಾಗ ರಷ್ಯಾದ ಕೈಯಲ್ಲಿದೆ. ರೈಲು ಇತ್ಯಾದಿಗಳ ಕೇಂದ್ರ ಇವರ ಕೈಯಲ್ಲಿದೆ. ಇದರಿಂದಾಗಿ ಬರ್ಲಿನಿಗೆ ಬರುವರಹದಾರಿ ಬಂದುಮಾಡುವ ಶಕ್ತಿ ಇವರ ಕೈಯಲ್ಲಿದ್ದು ರಷ್ಯಾದವರು ಈ ದಾರಿಗಳನ್ನೆಲ್ಲ ಬಂದು ಮಾಡಿದರು. ಪಾಶ್ಚಾತ್ಯ ರಾಷ್ಟ್ರಗಳು ನಾಣ್ಯ ಚಲಾವಣೆಯ ಕ್ರಮ ಬದಲಾಯಿಸಿದ್ದು ಪೋಟ್ಸ್‌ಡಮಿನಲ್ಲಿ ಆದ ಕರಾರಿಗೆ ವಿರುದ್ಧ ಆಚರಿಸಿದರೆಂಬುದು ಇದಕ್ಕೆ ಕೊಟ್ಟ ಕಾರಣ. ಅಂತು ಬರ್ಲಿನಿನ ತಮ್ಮ ಭಾಗಕ್ಕೆ ಬೇಕಾದ ಸ್ಸಾಲು ಒದಗಿಸಲು ವಿಮಾನ ದಾರಿ ಮಾತ್ರ ಇವರಿಗೆ ಉಳಿಯಿತು. ಆದರೂ ಬಿಟ್ಟುಬಿಡದೆ ವಿಮಾನ ದಾರಿಯನ್ನೇ ಉಪಯೋಗಿಸಿದರು.

ರಷ್ಯಾದ ವರ್ತನೆಯ ಕುರಿತು ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ನಿಷೇಧವನ್ನು ತಿಳಿಸಿರುತ್ತಾರೆ. ಇದಕ್ಕೆ ಉತ್ತರವಿನ್ನೂ ಬಂದಿಲ್ಲ. ಇಲ್ಲಿ ಇನ್ನೊಂದು ಯುದ್ಧದ ಆರಂಭವಾಗಬಹುದನ್ನುವವರಿದ್ದಾರೆ. ಹಾಗಾಗದಿರಲೆಂದೇ ಆಶಿಸೋಣ.

ಸ್ವೀಕಾರ ಮತ್ತು ವಿಮರ್ಶೆ

ದಕ್ಷಿಣ ಕನ್ನಡ ಇತಿಹಾಸ (ತುಳುವ ಚರಿತ್ರೆ) ಗ್ರಂಥಕರ್ತ ಶ್ರೀ ಕೇಶವಕೃಷ್ಣ ಕುಡ್ವ, ಕಾರ್ಕಳ ಲೇಖಕರೇ ಪ್ರಕಾಶಕರು. ಬೆಲೆ ರೂ 2—12—0

ಈ ಪುಸ್ತಕಕ್ಕೆ ವಿದ್ಯಾ ಖಾತೆಯ ಜಿಲ್ಲಾ ಆಫೀಸರರಾದ ಶ್ರೀ ಎನ್ ಸುಬ್ಬರಾವ್ ಇವರು ಒಂದು ಮುನ್ನುಡಿ ಬರೆದಿದ್ದಾರೆ. ಇದರಲ್ಲಿ ಗ್ರಂಥಕರ್ತರು 1927 ಇಸವಿಯಲ್ಲಿ ಬೊಂಬಾಯಿ ವಿಶ್ವ ವಿದ್ಯಾಲಯದಲ್ಲಿ ರೋಮನ್ ಲೊ ಮತ್ತು ಜುರಿಸ್ಪ್ರುಡನ್ಸ್ ಸಂಬಂಧ ಬಹುಮಾನವನ್ನು ಕಿನ್‌ಲೋಕ್ ಪೋರ್ಬ್ಸ್ ಚಿನ್ನದ ಪದಕವನ್ನು ಪಡೆದವರೆಂದು ಹೇಳಿರುವರು. ಶ್ರೀ ಕೇಶವ ಕುಡ್ವರು ಬಿ ಎ ಎಲ್ ಎಲ್ ಬಿ ಪದವೀಧರರಿದ್ದು ಇತ್ತೀಚೆಗಿನ ತನಕ ಮಂಗಳೂರು ತಹಸಿಲ್ದಾರರಾಗಿದ್ದು ಈಗ ನಿವೃತ್ತಿ ಹೊಂದಿದವರು. ಇಂತಹವರು ಕನ್ನಡದ ಲೇಖಕರಾಗಿ ಮುಂದೆ ಬಂದಿರುವುದು ಅಭಿನಂದನೀಯ.

ಇತಿಹಾಸ ಕಾಲ ಪ್ರಾರಂಭವಾಗುವ ಮೊದಲೇ ಆರ್ಯ ದ್ರಾವಿಡರು ತುಳುವ ನಾಡನ್ನು ಪ್ರವೇಶಿಸಿ, ನಾಗರಿಕತೆಯನ್ನು ಬಿತ್ತಿ, ಕಾಡನ್ನು ನಾಡು ಮಾಡಿದಂದಿನಿಂದ ಹಿಡಿದು ಇತರ ಹಿಂದುಸ್ಥಾನದೊಡನೆ ತುಳುನಾಡು ಸ್ವಾತಂತ್ರ್ಯದ ಮುಸುಕಿಂದ ಕ್ರಿ. ಶ. 1947ರ ನಡುವೆ ಪಾರಾಗಿ ಬಂದಲ್ಲಿಯ ತನಕದ ತುಳುನಾಡಿನ ಚರಿತ್ರೆಯನ್ನು ಈ ಪುಸ್ತಕದಲ್ಲಿ ಬರೆದಿದ್ದಾರೆ. ನಮ್ಮ ಜಿಲ್ಲೆಯ ಚರಿತ್ರೆಯನ್ನು ಇಷ್ಟು ಸಂಗ್ರಹಕವಾಗಿ ಸರಳವಾಗಿ ಯಾವ ಒಂದು ಪುಸ್ತಕದಲ್ಲಿಯೂ ಇದುವರೆಗೆ ರಚಿತವಾಗಿರುವುದು ಕಂಡುಬರುವುದಿಲ್ಲವೆಂದು ಮುನ್ನುಡಿಕಾರರು ಹೇಳಿದ ಮಾತು ನಿಜವಿರುತ್ತದೆ.

ಸುಮಾರು 20 ವರ್ಷಗಳ ಕೆಳಗೆ ಶ್ರೀ ಗಣಪತಿ ಐಗಳರು ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಯೊಂದನ್ನು ಬರೆದಿದ್ದರು. ಆದರೆ ಇದರಲ್ಲಿ ಈ ಜಿಲ್ಲೆಯ ಚರಿತ್ರೆಗಿಂತಲೂ ಕರ್ನಾಟಕದ ಇತಿಹಾಸವೇ ಹೆಚ್ಚಿಗೆ ತುಂಬಿಕೊಂಡಿತ್ತು. ಕರ್ನಾಟಕದ ಇತಿಹಾಸ ಈ ಜಿಲ್ಲೆಯ ಚರಿತ್ರೆಗೆ ಅವಶ್ಯ ಹಿನ್ನೆಲೆಯೆಂಬುದು ನಿಜವಿದ್ದರೂ ಈ ಜಿಲ್ಲೆಯ ಚರಿತ್ರೆ ಹೇಳ ಹೋಗುವವರು ತಮ್ಮ ಪ್ರಧಾನ ವಿಷಯಕ್ಕಿಂತ ಹಿನ್ನೆಲೆಗೇನೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದು ಯುಕ್ತವೆನ್ನಿಸುವುದಿಲ್ಲ. ಶ್ರೀ ಕೇಶವ ಕುಡ್ವರು ಈ ದೋಷವನ್ನು ಬಹಳ ಮಟ್ಟಿಗೆ ನಿವಾರಿಸಿರುತ್ತಾರೆ. ಶ್ರೀ ಐಗಳರ ಬಳಿಕ ಈ ಜಿಲ್ಲೆಯ ಚರಿತ್ರೆಯ ಸಂಬಂಧ ಪ್ರಕಟವಾದ ಈ ಜಿಲ್ಲೆಯವರೇ ಆದ ಶ್ರೀ ಸಾಲೆತ್ತೂರು ಭಾಸ್ಕರಾನಂದ ಗ್ರಂಥದಲ್ಲಿಯ ಹೆಚ್ಚಿನ ಮಾಹಿತಿ ಶ್ರೀ ಕೇಶವ ಕುಡ್ವರಿಗೆ ಸಿಕ್ಕಿದ್ದರಿಂದ ತುಳುನಾಡಿನ ಇತಿಹಾಸಕ್ಕೆ ಹೆಚ್ಚಿನ ಸ್ಥಳಕೊಡಲು ಇವರಿಗೆ ಅನುಕೂಲವಾಗಿತ್ತೆಂಬುದು ನಿಜ. ಶ್ರೀ ಅಮ್ಮಣ್ಣಜಿ ಶ್ರೀನಿವಾಸ ಹೆಗ್ಡೆಯವರ ಭೂತಾಳಪಾಂಡ್ಯ ಚರಿತ್ರೆ, ಗ್ರಾಮಪದತಿ, ಶ್ರೀ ಮಂಜೇಶ್ವರ ಗೋವಿಂದ ಪೈಯವರು ಆಗಿಂದಾಗ ಬರೆಯುವ ಸಂಶೋಧಾತ್ಮಕ ಲೇಖನಗಳು ಇವೆಲ್ಲವನ್ನು ಓದಿ ಶ್ರೀ ಕೇಶವ ಕುಡ್ವರು ತಮ್ಮ ವಿಷಯದ ಕುರಿತು ಇದುತನಕ ಗೊತ್ತಾಗಿರುವ ಮಾಹಿತಿಯೆಲ್ಲವನ್ನು ಚೆನ್ನಾಗಿ ಉಪಯೋಗಿಸಿಕೊಂಡು ಈ ಗ್ರಂಥ ರಚನೆ ಮಾಡಿರುವರು.

ತುಳುವದ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳ ಆಗಾಗಲಿನ ವಿಮರ್ಶೆಯನ್ನು ಇದರಲ್ಲಿ ಅಲ್ಲಲ್ಲಿ ಕೊಡಲಾಗಿದೆ. ಕಂದಾಯ ವಸೂಲಿಯ ದರಗಳನ್ನು ಬೇರೆ ಬೇರೆ ಕಾಲದಲ್ಲಿದ್ದಂತೆ ವಿವರಿಸಲಾಗಿದೆ. ಅಳಿಯ ಕಟ್ಟಿನಲ್ಲಿ ಸ್ತ್ರೀಯರ ಸ್ವಾತಂತ್ರ್ಯದ ಪ್ರಾಧಾನ್ಯತೆ ವಿವರಿಸಲಾಗಿದೆ. ತುಳುವದಲ್ಲಿ ಸಾಮಂತ ರಾಜರಾಳಿದ ಕುಟುಂಬಗಳ ಪರಿಚಯ ಕೊಡಲಾಗಿದೆ. ಇದರಲ್ಲಿ ಹೆಚ್ಚಿನ ಅಂಶ ಶ್ರೀ ಕುಡ್ವರು ತಮ್ಮ ಈ ಜಿಲ್ಲೆಯ ಅನುಭವದಿಂದ ಸ್ವತಃ ಸಂಗ್ರಹಿಸಿದ ವಿಚಾರಗಳಿರಬಹುದು. ಈಗಿನ ಪರಿಸ್ಥಿತಿ ರೀತಿ ಹಿಂದಿನ ದಾಖಲೆಗಳಿಂದ ಹುಡುಕಿ ತೆಗೆದ ಐತಿಹಾಸಿಕ ದಾರಿ ಇದರಲ್ಲಿ ತಕ್ಕಂತೆ ಉಪಯೋಗಿಸಲ್ಪಟ್ಟಿರುತ್ತದೆ. ಅಳಿಯ ಕಟ್ಟನ್ನನುಸರಿಸುವವರು ಮಕ್ಕಳಿಗೆ ... ಈ ... ಸತ್ಯವಿಲ್ಲವೆಂದು ...

ಈ ಜಿಲ್ಲೆಯನ್ನು ಈಗ ಸಂದರ್ಶಿಸುವಾಗ ಜಿಲ್ಲೆಯಲ್ಲಿ ಕಂಡುಬರುವ ಕೋಟೆಕೊತ್ತಳಗಳು, ದೇವಸ್ಥಾನ ಬಸದಿಗಳು ಇತ್ಯಾದಿಗಳನ್ನು ಯಾರು ಯಾವಕಾಲದಲ್ಲಿ ಕಟ್ಟಿಸಿದರೆಂಬುದನ್ನು ತಿಳಿಯ ಬಯಸುವವರಿಗೆ ಈ ಗ್ರಂಥ ನೋಡಿದರೆ ಸಿಕ್ಕುತ್ತದೆ.

ಕರ್ನಾಟಕಕ್ಕೂ ಈ ಜಿಲ್ಲೆಗೂ ಎಷ್ಟು ಸಂಬಂಧವಿದೆಯೆಂಬುದನ್ನು ಏಕೀಕರಣ ಚಳವಳಿಯವರು ರುಜು ಮಾಡಿ ತೋರಿಸಬೇಕಾದರೆ ಈ ಗ್ರಂಥವೊಂದೇ ಅವರಿಗೆ ಸಾಕು.

ನಮ್ಮ ಜಿಲ್ಲೆಯ ಇತಿಹಾಸದ ಕುರಿತು ಈ ಜಿಲ್ಲೆಯವರಿಗೆ ಮಾತ್ರವಲ್ಲ ಅಖಿಲ ಕರ್ನಾಟಕದವರಿಗೆ ತುಂಬಾ ಕುತೂಹಲವಿರುವುದು ಸಹಜ. ಇಷ್ಟು ಅನುಕೂಲ್ಯ ಗ್ರಂಥವನ್ನು ಬರೆದು ಅದನ್ನು ತಾನೇ ಪ್ರಕಟಿಸಿ ಶ್ರೀ ಕೇಶವ ಕುಡ್ವರು ಕನ್ನಡಿಗರಿಗೆ ತುಂಬಾ ಉಪಕಾರ ಮಾಡಿರುವರು. ಈ ಗ್ರಂಥ ಪ್ರಕಟನೆಯು ತುಂಬಾ ಯಶಸ್ವಿಯಾಗಿ ಶ್ರೀ ಕುಡ್ವರು ಇಂಥ ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸುವಂತಾಗಲೆಂದು ಹಾರೈಸುತ್ತೇವೆ.

"[illegible]" ಮಾಸಪತ್ರಿಕೆಯ ರಜತೋತ್ಸವ

[illegible]ಟಕದಲ್ಲಿ ಕನ್ನಡ ಮಹಿಳೆಯರ [illegible] ಮಕ್ಕಳ ಮುನ್ನಡೆಗೆ ಸಹಾಯಕ [illegible] ಅವರನ್ನು ಸಾಹಿತ್ಯ ಪ್ರಪಂಚಕ್ಕೆ ಕರೆ[illegible] ಸಾಹಿತಿಗಳನ್ನಾಗಿ ಮಾಡಿದ [illegible] ರಜತೋತ್ಸವದ ಸುದ್ದಿ ಕನ್ನಡ [illegible]ಯರಲ್ಲಿ ನವಚೈತನ್ಯವನ್ನುಂಟು ಮಾಡಿದೆ. ಈ ವಿಚಾರದಲ್ಲಿ ಕೆಲವು ಮಾತುಗಳನ್ನು ತಿಳಿಸಲು 'ಸರಸ್ವತಿ'ಯಿಂದ [illegible] ಪಡೆದ ನಾನು ಇಚ್ಛಿಸುತ್ತೇನೆ. ಈಗ್ಗೆ ೨೫ ವರ್ಷಗಳ ಹಿಂದೆ ಮಹಿಳೆಯರಿಗಾಗಿ ಅದರಲ್ಲೂ ಮಹಿಳೆಯಿಂದ ನಡೆಸಲ್ಪಡುತ್ತಿರುವ ಪತ್ರಿಕೆಗಳೊಂದೂ [illegible] ವೇಳೆಯಲ್ಲಿ ಮಾನ್ಯ ಸೋದರಿಯು [illegible] ಶ್ರೀಮತಿ ಆರ್. ಕಲ್ಯಾಣಮ್ಮನವರು ಮುಂದೆ ಬಂದು ಈ ಉದ್ಯಮವನ್ನು ಕೈ[illegible]ಕೊಂಡರು. ಅಲ್ಲಿಂದ ಈ ಕಾಲದ ವರೆಗೂ [illegible] ಆದ ವೈಶಿಷ್ಟತೆಯಿಂದ ಕನ್ನಡ ನಾ[illegible]ನಲ್ಲಿ 'ಸರಸ್ವತಿ'ಯು ಮೆರೆದು ಮಹಿಳೆಯರಿಗೆ ಜ್ಞಾನಜ್ಯೋತಿಯನ್ನು ನೀಡಿ, ಮಕ್ಕಳ ಪ್ರಗತಿಗೂ ಅವಕಾಶವನ್ನು ಕೊಟ್ಟಿತು. ಅಲ್ಪ ಸ್ವಲ್ಪ ವಿದ್ಯೆಯನ್ನು ಕಲಿತಿದ್ದ ನನ್ನಂತಹ ಸೋದರಿಯರು ಸಾಹಿತ್ಯ ಲೋಕದಲ್ಲಿ ಅಣುಮುತ್ತುಗಳಾಗಿ ಮೆರೆಯುತ್ತಿದ್ದಾರೆ. ಆದ್ದರಿಂದ 'ಸರಸ್ವತಿ' ಹಿರಿಮೆಯನ್ನು ಎಷ್ಟು ತಿಳಿಸಿದರೂ ಸಾಲದು. ಈ 'ಸರಸ್ವತಿ'ಗೆ ರಜತೋತ್ಸವವೆಂದರೆ ನಮಗೆಲ್ಲಾ ಹೆಮ್ಮೆಯ ವಿಷಯ. ಸುಮ್ಮನೆ ಹೆಮ್ಮೆಪಟ್ಟರೆ ಸಾಲದೆಂದು ನನ್ನ ಭಾವನೆ. ಅದಕ್ಕಾಗಿ ನಮ್ಮ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಿ ಈ ಹಬ್ಬವು ಯಶಸ್ವಿಯಾಗಿ ನಡೆಯಲು ಸಹಾಯ ನೀಡುವುದು ಕನ್ನಡಿಗರಾದ ನಮ್ಮ ಕರ್ತವ್ಯವಾಗಿದೆ. ಆದುದರಿಂದ ನಾಡಿನ ಬಂಧುಭಗಿನಿಯರೆಲ್ಲರೂ ತಮ್ಮ ಕೈಯಲ್ಲಾದ ನೆರವನ್ನು ನೀಡೋಣ. [illegible] ಅಚ್ಚುಕಟ್ಟಾದ ಮುದ್ರಣ, ಹೆಸರಾಂತ ಸಾಹಿತಿಗಳಿಂದ ಸಮಾಜ ಉನ್ನತಿಗಾಗಿ ಬರೆಯಲ್ಪಟ್ಟ ಲೇಖನಗಳಿಂದೊಡಗೂಡಿ ವಿಶೇಷ ರೀತಿಯಿಂದ 'ಸರಸ್ವತಿ'ಯು ಕನ್ನಡ ನಾಡಿನ ಎಲ್ಲಾ ಮನೆಗಳಲ್ಲೂ ಶೋಭೆಯಲಿ. ದಕ್ಷತೆಯಿಂದ 'ಸರಸ್ವತಿ' [illegible] ಮುನ್ನಡೆಸಿದ, ಮುನ್ನಡೆಸುತ್ತಿರುವ ಸೋದರಿ ಕಲ್ಯಾಣಮ್ಮನವರಿಗೆ ನಮ್ಮ ತುಂಬು ನೆರವನ್ನು ನೀಡಿ ಅತಿ ಜಾಗ್ರತೆ 'ಸುವರ್ಣ ಮಹೋತ್ಸವ'ದಿಂದ ಸರಸ್ವತಿ [illegible] ಮೆರೆಯಿಸೋಣ

ಕನ್ನಡ ಸಹೋದರಿ,
ಶಾರದ
ಕಾಯೂರು

ಜಿಲ್ಲಾ ಸಮಾಚಾರ

ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ

ಪಶ್ಚಿಮ ಕರಾವಳಿಯಲ್ಲೊಂದು ಪ್ರಬುದ್ಧ ಬಂದರದ ನಿರ್ಮಾಣದ ಕುರಿತು ಚರ್ಚಿಸಲು "ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರದ ಅಭಿವೃದ್ಧಿಯ ಸಮಿತಿ" ಬೆಂಗಳೂರಲ್ಲಿ ಅದರ ಚೆಯರ್‌ಮ್ಯಾನ್ ಸೇಟ್ ಕಸ್ತೂರ್‌ಭಾಯ್‌ಲಾಲ್ ಭಾಯ್ ಅವರ ಅಧ್ಯಕ್ಷತೆಯಲ್ಲಿ ಎರಡು ದಿನ ಸೇರುತ್ತದೆ. ಈ ಸಂಬಂಧದಲ್ಲಿ ನಮ್ಮ ಜಿಲ್ಲಾ ವಾಣಿಜ್ಯ ಸಂಘದ ಪರವಾಗಿ ಒಂದು ಶಿಷ್ಟ ಮಂಡಲ, ಆ ಸಂಘದ ಅಧ್ಯಕ್ಷ ಶ್ರೀ ಎ. ಎಸ್ ಕುಡ್ವರೊಡನೆ ತೆರಳಿ, ಇದೇ ಬುಧವಾರ ತಾ. ೧೪ರಂದು ಬೆಂಗಳೂರಲ್ಲಿ ಆ ಇಡಿಯ ಕಮಿಟಿಯವರನ್ನೇ ಭೇಟಿಮಾಡಿ, ಮಂಗಳೂರನ್ನು ಪ್ರಬುದ್ಧ ಬಂದರವನ್ನಾಗಿ ಮಾರ್ಪಡಿಸುವಲ್ಲಿ, ಅದಕ್ಕಿರುವ ಹಕ್ಕುಬಾಧ್ಯತೆಗಳನ್ನು ಸಮಿತಿಯ ಮುಂದೊತ್ತುವರೆಂದು ಗೊತ್ತಾಗಿದೆ.

ಮುನಿಸಿಪಲ್ ಕೌನ್ಸಿಲಿನ ವಿಚಾರಗಳು

ನಮ್ಮ ಮುನಿಸಿಪಲ್ ಕೌನ್ಸಿಲಿನ ಮೀಟಿಂಗ್ ಈಚೆಗೆ ಚೆಯರ್‌ಮೇನ್ ಶ್ರೀ ಎಲ್ ಸಿ ಪಾಯಸ್ [illegible] ಇವರ ಅಧ್ಯಕ್ಷತೆಯಲ್ಲಿ ಮು[illegible] ಸಭಾಗೃಹದಲ್ಲಿ ಜರಗಿದಾಗ, ಕೌನ್ಸಿಲ್ ಸದಸ್ಯ ಶ್ರೀ ಪಿ ಕೊರಗಪ್ಪ ರೈ, ಅವರು ಈ ಕೌನ್ಸಿಲ ಮೀಟಿಂಗಿಗೆ ೩ ತಿಂಗಳ ಅವಧಿಯಲ್ಲಿ ಹಾಜರಾಗದ ಕಾರಣ ಅವರ ಮೆಂಬರಿಕೆ ರದ್ದಾಗಿ ಆ ಸ್ಥಾನಕ್ಕೆ ಚುನಾವಣೆ ಹೊಸದಾಗಿ ನಡೆವಂತೆ [illegible] ಮಂಗಳೂರು [illegible] ಕೌನ್ಸಿಲಿನ [illegible] ವರದಿಯ ಕುರಿತಾದ [illegible] ವಿಮರ್ಶೆ ರಿಕಾರ್ಡು [illegible] [illegible] ಕೊಳ್ಳಬೇಕೆಂದ [illegible] ಯಲ್ಲಿ ಕೊಡಿಸಬೇಕಾ[illegible] ಹೆಲ್ತ್ ಆಫೀಸರರು ಮುಂದಿಟ್ಟ ಅರಿಕೆಯನ್ನು ಕೌನ್ಸಿಲ್ ಅಂಗೀಕರಿಸಿತು. [illegible] ಕಮಿಶನರುಗಳಿಗೆಂದು ಕಮ್ಮಾದ ಸರ್ವೀಸನ್ನು ರಚಿಸಿಕೊಡುವಂತೆ ಸರಕಾರದವರನ್ನು ಒತ್ತಾಯಪಡಿಸಬೇಕಾಗಿ ಕುನ್ನೂರು ಮುನಿಸಿಪಾಲಿಟಿ ಚೆಯರ್‌ಮೇನರು ಬರೆದ ಪತ್ರಕ್ಕೆ ಮನ್ನಣೆ ಕೊಟ್ಟು ಈ ಕೌನ್ಸಿಲ್ ಸರಕಾರಕ್ಕೆ ಬರೆಯುವಂತೆ ನಿರ್ಧರಿಸಿತು. ಭಗಿನೀ ಸಮಾಜಕ್ಕೆ ರೂ ೫೦೦, ಸೈಂಟ್ ಜೋಸೆಫ್ ಎಸ್ಸ್ಯಾಲಿಮಿಗೆ ರೂ ೨೫೦ ೪೮-೪೯ಕ್ಕೆ ವರ್ಷದ ಗ್ರಾಂಟು ಕೊಡಬಹುದೆಂಬ ತನ್ನ ಕಮಿಟಿಯ ಶಿಫಾರಸನ್ನು ಕೌನ್ಸಿಲ್ ಅಂಗೀಕರಿಸಿತು. ಗವರ್ನಮೆಂಟ್ ಕಾಲೇಜಿನ ಇಂಟರ್‌ಮೀಡಿಯೇಟ್ ತರಗತಿಯ ಕೆಲವೊಂದು ಗ್ರೂಪುಗಳಲ್ಲಿ (ಅಂದರೆ ೧ ೨, ೩ನೇ ಗುಂಪು) ಈ ವರ್ಷ ೧೫೦ ವಿದ್ಯಾರ್ಥಿಗಳಿಗಾದರೂ ಪ್ರವೇಶ ಕೊಡುವಂತೆ [illegible] ಸರಕಾರವನ್ನು [illegible] ಶ್ರೀ [illegible] ಕೌನ್ಸಿಲರ್ ಅವರಿಂದ [illegible], ಸ್ವತಂತ್ರ ಭಾರತದ [illegible] ಗವರ್ನರ್ ಜನರಲ್ [illegible] ಚಕ್ರವರ್ತಿ [illegible], ಅವರ[illegible] ಶ್ರೀ [illegible]

ಜೆಪ್ಪೆಯಲ್ಲಿ ನೆರೆ

ಕಳೆದ ತಾ. ೧[illegible] ವತಿ ಹೊಳೆ[illegible] ಯಲ್ಲಿ [illegible] ಒತ್ತಕಟ್ಟೆ [illegible] ತುಂಬೆ, ಕಂಚಿಗಾರಕೊಟ್ಟು, ಆಲಡ್ಕ ಮೊದಲಾದಲ್ಲಿ ನೆರೆ ಬಂದು, ಅಂದು ಬಸ್ ಚಲಾವಣೆ ನಿಂತುಹೋಗಿತ್ತು. ಬಜತೂರು, ಉಪ್ಪಿನಂಗಡಿ, ಹೊಸಮುರಗಳಲ್ಲಿ ಈ ನೆರೆಯಿಂದ ೬ ಮನೆಗಳು ಬಿದ್ದು ಸುಮಾರು ೫೦೦ ರೂಪಾಯಿಗಳ ನಷ್ಟವಾಗಿದೆಯೆಂದು ತಿಳಿದುಬಂದಿದೆ.

ಶ್ರೀ ಕೊಳಡ್ಕಲ್ ಸ್ಮಾರಕ ಸಮಿತಿಯ ವಿನಂತಿ

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳೂ ಉಡುಪಿಯ ಗಣ್ಯ ನಾಗರಿಕರೂ ಆದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಬದುಕಿದ್ದಾಗ ನಾಡಿಗೂ ನುಡಿಗೂ ಸಲ್ಲಿಸಿದ ಸೇವೆಯ ನೆನಪು ಚಿರಕಾಲ ಉಳಿಯುವಂತೆ ಒಂದು ಸೂಕ್ತ 'ಸ್ಮಾರಕ ಯೋಜನೆ'ಯನ್ನು ರಚಿಸಬೇಕೆಂದು ತಾ ೨೪ರಂದು ಉಡುಪಿ ಬೋರ್ಡ್ ಹಾಯಸ್ಕೂಲಿನ ಪ್ರಿನ್ಸಿಪಲ್ಸ್ ಹಾಲಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ರಚಿಸಲ್ಪಟ್ಟ ಕೊರಡ್ಕಲ್ ಸ್ಮಾರಕ ಸಮಿತಿಯು ನಿಶ್ಚಯಿಸಿದೆ. [illegible] ಸ್ಮಾರಕ ಗ್ರಂಥಪ್ರಕಾಶನ [illegible] ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ [illegible] 'ಸಗೆಳ ವ್ಯವಸ್ಥೆ [illegible] ಸಮಿತಿ ಉದ್ದೇಶಿಸಿ[illegible]ದೆ

ಶ್ರೀ [illegible] ಶ್ರೀ ನಿವಾಸರಾಯರನ್ನು [illegible] ಶಿಷ್ಯ [illegible] ಸಹಕರಿಸಬೇಕೆಂದು [illegible] ೫ ೦-೦ [illegible]



ಶೀಘ್ರ ಶಮನಿಸಲ್ಪಟ್ಟು ಪರಿಹರಿಸಲ್ಪಡುತ್ತವೆ.

ಜಾಂಬಕಿನ [illegible] ತೀಕ್ಷ್ಣವಿಕೆಯಿಂದ ನೋವು [illegible] ಕಡಿಮೆ [illegible] ಪರಿಹಾರವಾಗುವುದು. ಜಾಂಬಕಿನಲ್ಲಿರುವ ಅನುಕೂಲ್ಯ ಔಷಧೀಯ [illegible] ಬಿಗಿತವನ್ನು ಸಡಿಲಿಸುವುದು. ದಣಿದ [illegible] ದಣಿದು ಬೇನೆಪಡುವ ಕಾಲಿಗೆ ಶೀಘ್ರ ಸುಖವನ್ನುಂಟು ಮಾಡುತ್ತದೆ

[illegible] ಪರಿಹಾರ ಮಾಡಿ [illegible] ಜಾಂಬಕ [illegible] ಸುಡತ, ಕಿವಿಸೋರು, ಮಡವೆ ಚರ್ಮರೋಗ [illegible], ಉಷ್ಣ [illegible] ದಕ್ಕೆ ಅನುಕೂಲ್ಯ ಔಷಧಿಯಾಗಿದೆ

ಜಾಂಬಕ್ ಉಪಯೋಗಿಸಿರಿ.

Zam-Buk

ವಿಶ್ವಖ್ಯಾತಿಯ ವನಸ್ಪತಿ ಮುಲಾಮು

ಖಂಡಿತ ಪ್ರಾಣಿಕೊಬ್ಬು ರಹಿತವಾದುದು

ಕುಡಿತ ಘಾಯ ಚರ್ಮ ಘಾತಗಳಿಗೆ ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ.ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT

ಕಿಸೆಕಳ್ಳರ ಕುರಿತು ಎಚ್ಚರದಿಂದಿರಿ

ಮನೋಶಾಸ್ತ್ರ ಬಲ್ಲ ಚಾಣಾಕ್ಷ ಚೋರರು

ಕಲ್ಕತ್ತಾ ಪೋಲಿಸ್ ಕಮಿಶನರ ಸಲಹೆಗಳು

[ಕಲ್ಕತ್ತಾ ನಗರದ ಪೋಲಿಸ್ ಡೆಪ್ಯುಟಿ ಕಮಿಶನರರಾದ ಶ್ರೀ ಪಿ. ಕೆ. ಸೆನ್ ಅವರು ಅಮೃತ ಬಜಾರ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು ಕಿಸೆಕಳ್ಳರ ಕುರಿತು ವಹಿಸಬೇಕಾದ ಜಾಗರೂಕತೆಗಳ ಕುರಿತು ಉಪಯುಕ್ತ ಸೂಚನೆಗಳನ್ನು ಕೊಟ್ಟಿರುವರು. ಒಂದು ಕಲೆಯಂತೆಯೇ ಪರಿಪೂರ್ಣಗೊಳಿಸಲ್ಪಟ್ಟ ಈ ಚೀಲ ಚೌರ್ಯದ ವೃತ್ತಿಯು ಎಲ್ಲಾ ದೊಡ್ಡ ನಗರಗಳಲ್ಲಿ ವಿಶಾಲ ಪ್ರಮಾಣದಲ್ಲಿ ತಜ್ಞ ಪುಂಡ ತಂಡಗಳಿಂದ ನಿರ್ವಹಿಸಲ್ಪಡುತ್ತದೆ ಮೇಲ್ಕಂಡ ಲೇಖನದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.]

ಪೋಲಿಸನೊಬ್ಬನು ಹೆಚ್ಚಾಗಿ ವ್ಯವಹರಿಸುವ ಖೂನಿಕಾರಕ ಕೃತ್ಯಗಳಲ್ಲಿ ಕಿಸೆಕಳ್ಳತನವು ಅತೀ ಹಳೆಯದೂ ಮತ್ತು ಹೆಚ್ಚು ವಿಶಾಲ ಪ್ರಮಾಣದಲ್ಲಿ ನಡಸಲ್ಪಡುವಂತಹದೂ ಆಗಿದೆ. ಚತುರ ಕಿಸೆಕಳ್ಳನು ನಿಜವಾಗಿ ಪೂರ್ವ ತಪ್ಪು ದಾರಿ ಹಿಡಿದ ತಂತ್ರ ಸಮರ್ಥನೆನ್ನಬಹುದು. ಅಸಾಮಾನ್ಯ ಕೈಚಳಕವು ಅವನ ವೃತ್ತಿಯ ಭದ್ರ ತಳಹದಿ. ಜೊತೆಗೆ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಮಾನವ ಸ್ವಭಾವವು ಹೇಗೆ ವರ್ತಿಸುವುದೆಂಬುದರ ಸೂಕ್ಷ್ಮ ಮನೋಶಾಸ್ತ್ರಾಭ್ಯಸವೂ ಅವನಿಗಿದೆ.

ಶೀಘ್ರ ಲಾಭ

ಖೂನಿ ಕೃತ್ಯದ ಇತರ ರೂಪಾಂತರಗಳಂತೆ ಕಿಸೆ ಚೌರ್ಯವೂ ಒಂದು ಶೀಘ್ರ ಲಾಭದ ದಂಧೆ. ಈಚೆಗೆ ಇದರ ಕೃತಿ ವಿಧಾನಗಳಲ್ಲಿ ಬಹಳ ಸುಧಾರಣೆಗಳಾಗಿದ್ದು ಕಿಸೆಕಳ್ಳರ ಉದ್ಯೋಗವೂ ತುಂಬಾ ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲ್ಪಟ್ಟಿದೆ. ದೊಡ್ಡ ದೊಡ್ಡ ನಗರಗಳು ಈ ಕೆಲಸಕ್ಕೆ ತುಂಬಾ ಅನುಕೂಲವೂ ಆಕರ್ಷಕವೂ ಆದ ಸ್ಥಳಗಳಾಗಿದ್ದು, ಕಿಸೆಗಳ್ಳರು ತಮ್ಮ ಪ್ರಾಥಮಿಕ ತರಬೇತಿಗಳನ್ನು ಇಲ್ಲೇ ಪಡೆಯುತ್ತಾರೆ. ಹಣವನ್ನು ಸುಲಭ ಶೀಘ್ರವಾಗಿ ಗಳಿಸುವುದಕ್ಕೆ ಇದೂ ಒಂದು ಸಲೀಸಾದ ಸಾಧನ. ಈ ವೃತ್ತಿಯಲ್ಲಿ ತಕ್ಷಣ ಲಾಭದ ಸೌಕರ್ಯವಿದ್ದು ಹಾನಿಯಾದರೊ ಅಗಣನೀಯವಿದೆ. ಕಾರಣ ಕಾರ್ಯಸಾಧನೆಯಲ್ಲಿ ಹಿಡಿಯಲ್ಪಟ್ಟರೂ ಅಪರಾಧಿಗೆ ಹೆಚ್ಚೆಂದರೆ ಕೆಲವೇ ವಾರಗಳ ಜೈಲು ಶಿಕ್ಷೆಯಾದೀತು. ನುರಿತ ಈ ಉದ್ಯೋಗ ಬಾಂಧವರಿಗಿದು ಸ್ವಾಗತಾರ್ಹ ವಿಶ್ರಾಂತಿಯಂತಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಯೋಗ್ಯ ಸಾಕ್ಷ್ಯವಿಲ್ಲದೆ ಕೋರ್ಟು ವಿಚಾರಣೆಯಲ್ಲಿ ಅನುಭವಸ್ಥ ಕಿಸೆಗಳ್ಳನು ನಿರಪರಾಧಿಯೆಂದು ಬಿಡಲ್ಪಡುವುದೂ ಉಂಟು. ಇಂತಹ ಸಂದರ್ಭದಲ್ಲಿ ನ್ಯಾಯಸ್ಥಾನಕ್ಕೂ, ಸಾರ್ವಜನಿಕ ಭದ್ರತಾ ರಕ್ಷಕರಾದ ಪೋಲೀಸರಿಗೂ ಇವರನ್ನು ಹತ್ತಿಕ್ಕಲು ಕಷ್ಟವಾಗುತ್ತದೆ.

ಅವರ ವಿಧಾನಗಳು

ತಮ್ಮ ನೀಚ ಉದ್ಯಮವನ್ನು ನಿರ್ವಹಿಸಲು ಚೀಲ ಚೋರರು ಅನುಸರಿಸುವ ಹಲವಾರು ವಿಧಾನಗಳಿವೆ. ನಗರ ವಾಸಿಗಳು ಇವುಗಳನ್ನು ಅರಿತುಕೊಂಡು ಸದಾ ಎಚ್ಚರಿಕೆಯಿಂದಿರುವುದೊಳಿತು.

ಸರ್ವಸಾಮಾನ್ಯವಾಗಿ ಜನನಿಬಿಡ ಬೀದಿಗಳೂ, ರೈಲು ಮೋಟಾರು ಸ್ಟೇಶನುಗಳೂ ಸಿನೆಮಾ ನಾಟಕ ವಿಹಾರ ಮಂದಿರಗಳೂ ಕಿಸೆಗಳ್ಳರ ಬೇಟೆ ಪ್ರದೇಶಗಳು. ಇಂತಹ ಸ್ಥಳಗಳಲ್ಲವರು ತಮ್ಮ ಕಾಮಗಾರಿಯನ್ನು ಪರಿಣಾಮಕಾರಿಯಾಗಿಯೂ, ಯಶಸ್ವಿಯಾಗಿಯೂ ಸಾಗಿಸುತ್ತಾರೆ. ಅಲಕ್ಷದಿಂದಿರುವ ವ್ಯಕ್ತಿಯು ಅವರಿಗೆ ಬೇಕಾದ ಉತ್ತಮ ಕೊಳ್ಳೆ. ಒತ್ತೊತ್ತಿ ಸಾಗುವ ಜನ ಸಾಂದ್ರತೆಯ ನಡುವಿನಲ್ಲಿ (ಅದು ಒಂದು ಮಾರ್ಗದಲ್ಲಾಗಲಿ, ಟಿಕೇಟು ಆಫೀಸಿನ ಬಳಿಯಲ್ಲಾಗಲಿ ಇಲ್ಲವೆ ರೈಲು ಮೋಟಾರು ವಾಹನದೊಳಾಗಲಿ ಇರಬಹುದು) ನಿಮ್ಮ ಲಕ್ಷ್ಯವು ಸದಾ ಕಾಲ ನಿಮ್ಮ ಚೀಲದ ಮೇಲೆಯೇ ಇರುತ್ತದೆಂದು ಹೇಳ ಬರುವುದಿಲ್ಲ. ಸುತ್ತುಮುತ್ತಲಿನ ಸಂಗತಿಗಳು ನಿಮ್ಮ ಗಮನವನ್ನು ಆಕರ್ಷಿಸುವುದೂ ಸಹಜ. ಅದಲ್ಲದೆ ನೀವು ದಿನವಿಡೀ ಶ್ರಮದಿಂದ ಆಯಾಸಗೊಂಡಿದ್ದು ನಿಮ್ಮ ಯೋಚನೆಗಳು ಸಂಸಾರತಾಪತ್ರಯಗಳಲ್ಲಿ ಹುದುಗಿದ್ದರಂತೂ ಹೇಳಬೇಕಿಲ್ಲ. ಮನೆ ಬಿಡುವಾಗ ಆಫೀಸಿನ ವಿಚಾರ, ಆಫೀಸು ಬಿಡುವಾಗ ಮನೆಯ ವಿಚಾರ, ಇಲ್ಲವೆ ಪ್ರಯಾಣ ಮಾಡುವಾಗ ಮುಟ್ಟಲಿಸಿಸುವ ಊರಿನ ವಿಚಾರ, ಇವು ನಿಮ್ಮ ಮನಸ್ಸಿನಲ್ಲಿ ತುಂಬಿರುತ್ತವೆ. ಈ ಎಲ್ಲ ಸಮಯದಲ್ಲಿ ಹೊಂಚು ಹಾಕುವ ಕಿಸೆಕಳ್ಳನ ಕೇಂದ್ರೀಕೃತ ದೃಷ್ಟಿಯು ನಿಮ್ಮ ಮೇಲಿರುತ್ತದೆ. ತನ್ನ ಕೊಳ್ಳೆಯಾಗಿ ಯಾರನ್ನು ಹೆಕ್ಕಬೇಕೆಂದೂ ಅವನಿಗೆ ಗೊತ್ತು. ಮತ್ತೆ ನೀವು ಎದು ಹೆಜ್ಜೆ ಹೋಗುವುದರೊಳಗೆ ನಿಮ್ಮ ಪಾಕೇಟು ಕತ್ತರಿ ಪ್ರಯೋಗಕ್ಕೆ ಬಿತ್ತೆಂದೇ ಲಕ್ಕ!

ಪ್ರಯೋಗ ಕ್ರಮ

ಕಿಸೆಗಳ್ಳರು ಸಾಮಾನ್ಯವಾಗಿ ಮೂರು ಬೆರಳುಗಳಿಂದಲೇ ತಮ್ಮ ಕಾರ್ಯ ಮುಗಿಸುತ್ತಾರೆ – ಅಂಗುಷ್ಟ, ಮಧ್ಯದ ಮತ್ತು ಉಂಗುರುಬೆರಳುಗಳೇ ಮುಖ್ಯವಾದುವು. ನಿಮ್ಮ ಗಮನವನ್ನು ಯಾವುದಾದರೊಂದು ವಿಧಾನದಿಂದ ಬೇರೆ ಕಡೆ ತಿರುಗಿಸುವುದೇ ಅವನ ಪ್ರಥಮ ಕಾರ್ಯಕ್ರಮ. ಈ ಸಂಬಂಧ ಅವರುಪಯೋಗಿಸುವ ಒಂಬತ್ತು ಸರ್ವ ಸಾಮಾನ್ಯ ಯೋಜನೆಗಳು ಹೀಗಿವೆ. 1) ಕಾಲು ತಪ್ಪಿಸುವುದು 2) ಕಾಲು ತುಳಿಯುವುದು 3) ದೂಡುವುದು 4) ಟೊಪ್ಪಿ ಬೀಳಿಸುವುದು 5) ಸೂಜಿ ಚುಚ್ಚುವುದು 6) ಮೊಣಗಂಟಿನಿಂದ ತಿವಿಯುವುದು 7) ಕನ್ನಡಕ ಬೀಳಿಸುವುದು 8) ಕೊಡೆಯಿಂದ ಕುಟ್ಟುವುದು 9) ಮೈಮೇಲೆ ಬಂದು ಬೀಳುವುದು. ಈ ಎಲ್ಲಾ ಅಭಿಯೋಗಗಳ ಕಾಲದಲ್ಲಿವು ಚೀಲ ಹೊಡೆಯಲು ಯತ್ನಗಳಾಗುವುವು.

ಇವಲ್ಲದೆ ಇತರ ಸಾಧನಗಳೂ ಇವೆ. ಆದರೆ ಅವು ಸರ್ವ ಸಾಮಾನ್ಯವಲ್ಲ. ಮೇಲೆ ಹೇಳಿದ ವಿಧಾನಗಳು ಹೆಚ್ಚಾಗಿ ರೈಲು ಬಸ್ಸುಗಳಲ್ಲೇ ನಡೆಸಲ್ಪಡುವವು.

ಅದನ್ನು ಹೇಗೆ ಮಾಡುವರು?

ಇದು ಹೇಗೆ ಸಾಧ್ಯವೆಂದು ನೀವು ಪ್ರಶ್ನಿಸಬಹುದು! ಈ ಒಂದು ನಿದರ್ಶನ ತೆಗೆದುಕೊಳ್ಳಿ. "ಆಫೀಸ್" ಕೆಲಸವಾದ ನಂತರ ನೀವೊಂದು ನುಗ್ಗಾಟದ ಬಸ್ಸು ಹತ್ತಲು ಪ್ರಯತ್ನ ಮಾಡುತ್ತೀರಿ. ಆಗ ನೀವು ನಿಮ್ಮ ಬಟ್ಟೆ ಬರೆಗಳ ವಿಷಯ ವಿಶೇಷ ಲಕ್ಷ್ಯ ವಹಿಸುವುದಿಲ್ಲ. ಬಸ್ಸಿನಲ್ಲಿ ಎಲ್ಲಾ ಸೀಟುಗಳು ತುಂಬಿರುತ್ತವೆ. ಹೆಚ್ಚಿನವರು ಎರಡು ಸಾಲಾಗಿ ನಿಲ್ಲಲು ಪ್ರಯತ್ನಿಸುತ್ತಾರೆ. ಅವರೊಳಗೆ ನೀವೂ ಒಬ್ಬರು. ಆಗ ನಿಮ್ಮ ಮುಂದೆ, ಹಿಂದೆ ಎರಡೂ ಬದಿಗಳಲ್ಲಿ, ಜನರಿರುತ್ತಾರೆ. ಬಸ್ಸು ಹೊರಡುತ್ತದೆ. ಆಗೊಂದು ಕುಲುಕುಂಟಾಗುತ್ತದೆ. ಆಗ ಕೆಲವರು ನಿಮ್ಮ ಬೆನ್ನ ಮೇಲೆ ಬೀಳುತ್ತಾರೆ. ಯಾರದೊಬ್ಬರ ಕಾಲು, ನಿಮ್ಮ ಕಾಲಿನ ಮೇಲೆ ಒತ್ತಲ್ಪಡುತ್ತದೆ. ನಿಮಗೆ ಕ್ಷಣಿಕ ತಪ್ಪುತ್ತದೆ. ನೀವು ಇನ್ನೊಬ್ಬರ ಮೇಲೆ ಬಿದ್ದಂತಾಗುವಿರಿ. ಮತ್ತೆ ಎಡವರಿಸಿಕೊಳ್ಳುವಾಗ ನಿಮಗೆ ಸಿಸಿರಿದ್ದು ನೀವು ಆಸುಪಾಸಿನವರ ಮೇಲೆ ಉರಿದು ಬೀಳುತ್ತೀರಿ. ಹೀಗೆ ಕೋಪದ ಚರ್ಚೆಯಲ್ಲಿ ಮಗ್ನರಾಗಿರುವಾಗ ನಿಮ್ಮ ದುಡ್ಡಿನ ಚೀಲ ಮಾಯವಾಗಬಹುದು. ಆಗುತ್ತದೆ. ನಿಮ್ಮ ಪಕ್ಕದಲ್ಲಿರುವ "ಸಭ್ಯ" ತನ್ನ ಕೆಲಸ ಮುಗಿಸಿ ತೆಪ್ಪಗಿದ್ದಾನೇ. ಮತ್ತೆ ಅವನಿಗೆ ಸಂಶಯದಿಂದ ಹಿಡಿದರೂ ನಿಮ್ಮ ಪಾಕೇಟು ಅವನ ಬಳಿ ಸಿಗಲಿಕ್ಕಿಲ್ಲ. ಅದು ಇಳಿದು ಹೋಗಲು ಸಿದ್ಧನಾಗಿ ನಿಂತಿರುವ ಅವನ ಸಂಗಾತಿಯ ವಶವಾಗಿದೆ. ಧೈರ್ಯವಿದ್ದವರಾದರೆ ಆಸುಪಾಸಿನವರ ಹತ್ತಿರ ಶೋಧೆ ಮಾಡುತ್ತೀರಿ. ಸಿಗದಿದ್ದರೆ ಮತ್ತೆ ಅವರ ಪ್ರತಿಕ್ರಿಯೆ ನಿಮ್ಮ ಮೇಲೆ ಹೇಗೆ ಆಗುತ್ತವೆಂದು ಹೇಳಬರುವುದಿಲ್ಲ. ಈ ಕಿಸೆಕಳ್ಳತನವು ಒಬ್ಬ ವ್ಯಕ್ತಿಯಿಂದಲೇ ನಡೆಸಲ್ಪಡುವಂತಹದಲ್ಲ. ಕಮ್ಮಿ ಪಕ್ಷದಲ್ಲಿ ಮೂರು ಮಂದಿಗಳು ಅದರಲ್ಲಿ ಭಾಗಿಗಳಾಗಿದ್ದಾರೆ.

ಚೌರ್ಯದ ಕಾಲ

ಬೆಳಿಗ್ಗೆ ೯ರಿಂದ ೧೧ ಗಂಟೆಯ ಸಮಯ, ಸಾಯಂಕಾಲ ೪॥ಯಿಂದ ೬ ಗಂಟೆಯ ಸಮಯ ಈ ಅವಧಿಗಳಲ್ಲೇ ಹೆಚ್ಚಿನ ಕಿಸೆ ಹೊಡೆತಗಳು ನಡೆಯುತ್ತವೆಂದು ತಿಳಿದು ಬಂದಿದೆ. ಈ ಕಳ್ಳರನ್ನು ಕೆಲವು ತಿಂಗಳು ಇಲ್ಲವೆ ವರ್ಷಗಳ ತನಕ ಜೈಲಿಗೆ ಕಳುಹಿಸಿದರೆ ಇವರು ಪರಿವರ್ತನೆ ಹೊಂದುವುದಿಲ್ಲ.

ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವ ನಾಗರಿಕರು ಎಚ್ಚರದಿಂದಿರುವುದು ಹಿತಕರ. ಯಾವಾಗಲೂ ನಿಮ್ಮ ದೃಷ್ಟಿ ಮತ್ತು ಮನಸ್ಸು ನಿಮ್ಮ ಚೀಲದ ಕಡೆ ಇರಬೇಕು. ಇದರಿಂದ ನಾವು ಸಮಾಜಕ್ಕೆ ಹಿತವನ್ನು ಮಾಡಿದಂತಾಗುವುದು ಮಾತ್ರವಲ್ಲ ಕಿಸೆಕಳ್ಳರ ಚಟುವಟಿಕೆಗಳನ್ನು ತಡೆದಂತೆಯೂ ಆಗುವುದು. ನಿಮ್ಮ ದಿನನಿತ್ಯದ ಸಂಚಾರದಲ್ಲಿ ನೀವು ಸದಾ ಎಚ್ಚರಿಕೆಯಿಂದಿರಬೇಕೆಂದು ಪುನಃ ಒಮ್ಮೆ ಒತ್ತಿ ಹೇಳಬೇಕಾಗುತ್ತದೆ.

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್, ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜ್ವೊಂಟ್ ಮೆನೇಜರ್ಸ್,

23-12-1947. ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಲೂರು.

CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

...l Authorised . . .	Rs. 25,00,000
...l Issued & Subscribed . . .	Rs. 20,00,000
...l Paid up	Rs 19,87,300
Reserves	Rs 8,00,400

...ING BUSINESS OF EVERY DESCRIPTION TRANSACTED

V. R. Kamath, B A L L B
General Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 = 3.28 Crores.

Our Chief Agency New Business in 1946 { **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the

...ta Galli, Hubli.
...endra
...s Ltd.
...ead Office
...Kanara

‘ಭುವನೇಂದ್ರ’ ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ

ಡಿಪೋ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 42] ತಾರೀಕು 23—7—1948 [ಸಂಚಿಕೆ 29]

ರಶ್ಯವು ನಿಜವಾಗಿ ಯುದ್ಧಕ್ಕೆ ಸಿದ್ಧವಿದೆಯೇ?

ಕೊಮ್ಯುನಿಸ್ಟ್ ಪದ್ಧತಿ ಇರುವ ತನಕ ಸಾಧ್ಯವಿಲ್ಲ

ಸೋವಿಯೆಟ್ ಯೂನಿಯನಿನೊಳಗಿನ ಒಳನೋಟ

ಜರ್ಮನಿಯು ತನ್ನ ಆಡಳಿತ ಪ್ರದೇಶದ ಮತ್ತು ಉಕ್ಕಿನ ಪರದೆಯುದ್ದಕ್ಕೂ ಹಾಗೂ ವಿದೇಶಿಯರ ಯಾವ ವ್ಯವಹಾರವೂ ಇಲ್ಲಿ ಸಾಗದಂತೆ ರಶ್ಯವು ಇತ್ತೀಚೆಗೆ ಶಕ್ತಿಯುಷ್ಟಗಳ ಮಿತ್ರಮಂಡಳಿಯ ಮನಸ್ತಾಪಕ್ಕೆ ಕಾರಣವಾಗಿದೆ. ಇಷ್ಟೊಂದು ಧೈರ್ಯ ರಶ್ಯಕ್ಕೆಲ್ಲಿಂದ ಬಂತು? ಒಂದು ವೇಳೆ ಇದೇ ಪರಿಸ್ಥಿತಿಯು ಬಿಕ್ಕಟ್ಟಿನದಾಗಿ ಯುದ್ಧದಲ್ಲಿ ಪರಿಣಾಮ ಹೊಂದಿದರೆ ರಶ್ಯವು ಅಂತರಾಷ್ಟ್ರೀಯ ರಂಗದಲ್ಲಿ ಹೇಗೆ ಹೋರಾಡಬಲ್ಲದು? ಇದು ತನಕ ಏಟಂಬೊಂಬಿನ ಭಯವಿತ್ತೆಂದು ಹೇಳಲ್ಪಟ್ಟ ಆ ದೇಶಕ್ಕೆ ಈಗ ಅದು ಅಕಸ್ಮಾತ್ತಾಗಿ ಮಾಯವಾಗಲು ಕಾರಣವೇನು?

ಏಟಂಬೊಂಬಿನ ಕುರಿತೇನು?

ರಶ್ಯನ್ ವಿಜ್ಞಾನಿಗಳಿಗೆ ಅಣುಬೊಂಬಿನ ಸರ್ವ ಸಾಮಾನ್ಯ ತತ್ವ ಗೊತ್ತಿದೆಯೆಂದು ಬ್ರಿಟಿಷ್ ಮತ್ತು ಅಮೇರಿಕನ್ ತಜ್ಞರು ತಿಳಿಸಿದ್ದಾರೆ. ಆದರೆ ಅಣುಶಕ್ತಿಯನ್ನು ಸಂಪೂರ್ಣ ಸ್ಫೋಟಕವಾಗಿ ಪರಿವರ್ತಿಸುವ ಕೆಲವೊಂದು ಸೂಕ್ಷ್ಮ ವಿಧಾನಗಳ ಅವರಿಗೆ ತಿಳಿದಿಲ್ಲವೆಂಬುದು ಖಂಡಿತ. ಅಣುಬೊಂಬುಗಳನ್ನು ತಯಾರಿಸಲು ಬೇಕಾಗುವ ವಿಶಾಲ ಕಾರ್ಖಾನೆಗಳ ಸಮಸ್ಯೆಯು ಅದಕ್ಕೆ ಎಲ್ಲದಕ್ಕಿಂತ ಕಠಿಣತರವಾದದ್ದು. ನಂಬಲಸಾಧ್ಯವಾದ ಯಂತ್ರೋಪಕರಣಗಳ ಜೋಡಣೆಯಿಂದಲೇ ಏಟಂಬೊಂಬೊಂದನ್ನು ತಯಾರಿಸಲು ಸಾಧ್ಯ. ಅಣುಶಕ್ತಿಯ ದುಷ್ಪರಿಣಾಮವಾದ ಅಪಾಯವನ್ನು ತಪ್ಪಿಸಲು ಈ ಯಂತ್ರೋಪಕರಣಗಳೆಲ್ಲವೂ ಸ್ವಯಂಕಾರ್ಯಗ್ರಯ್ಯುನಂತಹಗಳೂ ಆಗಿರಬೇಕು. ಇದಕ್ಕೆ ವಿಶೇಷತರದ ನಿಯಂತ್ರಣೋಪಕರಣಗಳ ಆವಶ್ಯಕತೆಯಿದೆ. ರಶ್ಯನರ ಬಳಿ ಇಷ್ಟರಿಂದು ಪರಿಪೂರ್ಣತೆಯ ಸೂಕ್ಷ್ಮ ಯಂತ್ರೋಪಕರಣ ತಯಾರಿಸುವ ಏರ್ಪಾಡೂ ಇರುವುದಿಲ್ಲ. ಅಲ್ಲಿನ ಯಂತ್ರ ಕೈಗಾರಿಕೆಯು ಸಂಯುಕ್ತ ಅಮೇರಿಕದ ಕೈಗಾರಿಕೆಗಿಂತ ಸುಮಾರು ೨೨ ವರ್ಷಗಳ ಅನುಭವಕ್ಕೆ ಹಿಂದೆ ಇದೆ!

ರಶ್ಯನರು ಒಂದು ವೇಳೆ ಅಣುಬೊಂಬನ್ನು ಕಷ್ಟಪಟ್ಟು ತಯಾರಿಸಿದರೆನ್ನೋಣ. ಆ ಹೊತ್ತಿಗೆ ಅಮೇರಿಕನ್ನರೊಡನೆ ರಶ್ಯವು ೧೮ ವರ್ಷಗಳಲ್ಲಿ ಮಾಡಲು ಸಮರ್ಥವಾಗುವದನ್ನು ಅಣುಬೊಂಬುಗಳಿರುವವು.

ರಶ್ಯದ ಆರ್ಥಿಕಸ್ಥಿತಿ ಹೇಗಿದೆ?

ಇಂದು ರಶ್ಯವು ಜಗತ್ತನ್ನು ಪದೇ ಪದೇ ಕಳವಳದಲ್ಲಿ ದೂಡುವಂತಹುದಾಗಿದೆ. ವಿಶ್ವಶಾಂತಿಗೆ ರಶ್ಯದಿಂದ ಅಪಾಯವು ಖಂಡಿತವಾದುದು. ಆದರೆ ಹೆಚ್ಚಿನವರು ನಂಬಿದಂತೆ ರಶ್ಯವು ಅಷ್ಟು ಬಲಿಷ್ಠವಾಗಿಲ್ಲ. ಯುದ್ಧವಾದರೆ ರಶ್ಯವು ರಕ್ಷಣೆ ಮಾಡುವ ಹೋರಾಟವನ್ನಷ್ಟೇ ಮಾಡಬಲ್ಲದು. ಅದೂ ತನ್ನ ದೇಶದ ಗಡಿಗಳ ಒಳಗೆ ಮಾತ್ರ. ಜರ್ಮನ್, ಇಟಲಿ, ಜಪಾನುಗಳಂತಹ ಕೈಗಾರಿಕಾ ದೇಶಗಳಂತೆ ಅಥವಾ ಅಮೇರಿಕನರ ಆ ದೇಶವನ್ನಾಗಲಿ ಅದರ ವಸಾಹತುಗಳನ್ನಾಗಲಿ ದಾಳಿ ಮಾಡಲು ಇನ್ನೂ ಕೆಲವು ವರ್ಷಗಳವರೆಗಾದರೂ ರಶ್ಯಕ್ಕೆ ಅಸಾಧ್ಯವೇ ಸರಿ.

ರಶ್ಯದ ಶಕ್ತಿ ಅದರ ಭೌಗೋಳಿಕ ಸ್ಥಾನದ ಅನುಕೂಲತೆಯಲ್ಲಿದೆ. ಅದು ಭೂಭಾಗ ಜಗತ್ತಿನ ಆರನೆ ಒಂದಂಶದಷ್ಟು. ಇಷ್ಟು ಅಗಾಧವಾದ ನೆಲಭಾಗವನ್ನು ಆಕ್ರಮಿಸುವುದು ಕಷ್ಟದ ಕೆಲಸ. ಒಳಪ್ರವೇಶ ಮಾಡುವುದರಿಂದ ಕಠಿಣವೆ. ಮತ್ತೆ ಅದರ ಒಳಗಿನ [illegible] ಗಳಿಂದ ತಾ ಅದು ಈಗಿನ ತನ್ನ ವರ್ತನೆಯನ್ನು [illegible] ತನ್ನ ಗಡಿಯಾಚೆ ಪ್ರದೇಶಗಳಲ್ಲಿ ಅದು ರಾಜಕೀಯ ಶಕ್ತಿಯನ್ನು ಹಿಂತೆಗೆ[illegible] ತನ್ನ ವಂಚನೆ ದಳದ ಚಟುವಟಿಕೆಗಳಿಂದ ವಿದೇಶಗಳಲ್ಲಿ ತನ್ನ ವರ್ತನೆಯನ್ನುಂಟು ಮಾಡಿದೆ. ತನ್ನ ಕಮ್ಯುನಿಸ್ಟ್ ತತ್ವಜ್ಞಾನವನ್ನು ಅನ್ಯ ದೇಶಗಳ ಜನತೆಯ ಮನಸ್ಸಿನಲ್ಲಿ ಬೇರೂರುವಂತೆ ಮಾಡಿದೆ. ಇವೆಲ್ಲವುಗಳಿಂದ ರಶ್ಯವು ನಿರಂತರ [illegible] ಕಾರಕವಾದದ್ದೆಂದು ವಿಶ್ವ [illegible] ನಂಬಲಾಗಿದೆ.

ರಶ್ಯಕ್ಕೆ ಯುದ್ಧ ಬೇಕಾಗಿಲ್ಲ

ನಿಜವಾಗಿ ನೋಡಿದರೆ ರಶ್ಯಕ್ಕೆ ಯುದ್ಧವು ಬೇಕಾಗಿಲ್ಲ. ಕಳೆದ ಯುದ್ಧದಲ್ಲಿ ಅಮೇರಿಕವು ಜರ್ಮನಿಯನ್ನು ಹೇಗೆ ಸೋತಗೊಳಿಸಿತೆಂದು ಸ್ಟಾಲಿನ್ ಸಂಗಡಿಗರಿಗೆ ಗೊತ್ತಿದೆ. ತಮ್ಮ ದೇಶಕ್ಕೆ ಅದೇ ವಿಪತ್ತನ್ನು ತಂದುಕೊಳ್ಳಲು ಅವರಿಗೆ ಇಚ್ಛೆಯಿಲ್ಲ.

ಆದರೆ ಅಂತರವಾದಗಳ ಘೋಷಣೆ [illegible] ರಶ್ಯದ ಉದ್ದೇಶವೇನಿರಬಹುದು? ಅಮೇರಿಕದಂತಹ ಪ್ರಬಲ ರಾಷ್ಟ್ರವನ್ನು [illegible] ಅದು ವಿದೇಶಗಳ [illegible] ಮಾಡುವುದೇ ರಶ್ಯದ ಮುಖ್ಯ ಉದ್ದೇಶ. ಇತ್ತ ವಿದೇಶಗಳಿಗೆ ಸಹಾಯ ಕೊಟ್ಟು, ಅತ್ತ ದೇಶದೊಳಗಿನ ಸಾಮಾನ್ಯ ಜನತೆಯನ್ನು (ಹೆಚ್ಚಾಗಿ ಮಜೂರ ವರ್ಗವನ್ನು) ಸಂತೃಪ್ತಿಪಡಿಸಲು ಅಪಾರ ಹಣವನ್ನು ವ್ಯಯಿಸುವಂತಾದರೆ ಅಮೇರಿಕದ ಆರ್ಥಿಕವ್ಯವಸ್ಥೆಯು ಕುಸಿದು ಬೀಳುವುದು. ರಶ್ಯದ ವರ್ತನೆಯು ಮತ್ತು ದಿನ ರಾಜಕೀಯ ಹೇಳಿಕೆಗಳ ಎಲ್ಲ ಮರ್ಮವು ಅಮೇರಿಕದ ಆರ್ಥಿಕ ರಚನೆಯಲ್ಲಿ ಬಿರುಕನ್ನುಂಟು ಮಾಡುವಂತಹದ್ದಾಗಿರುತ್ತದೆ. ಅಮೇರಿಕವು ತನ್ನ ಸ್ವಂತ ಗಲಿಬಿಲಿಯಿಂದ ತನ್ನೇಟು ತನಗೆ ತಗಲಿ ಬೀಳುವಂತೆ ಮಾಡುವುದು ರಶ್ಯದ ಆಟ. ಇದರಿಂದ ಯುದ್ಧ ಪ್ರಾಪ್ತವವೆ ರಶ್ಯಕ್ಕೆ ವಿಜಯ ದೊರಕಿದಂತಾಗುತ್ತದೆ. ಕಾರಣ ರಶ್ಯಕ್ಕೆ ಗೊತ್ತು, ಅಮೇರಿಕದಲ್ಲಿರುವ ಆಂತರಿಕ ಪ್ರಜಾಸ್ವಾತಂತ್ರ್ಯವೇ ಅದರ ಶಕ್ತಿಯೆಂದು. ಆ ದೇಶದ ಆಂತರಿಕ ಶಕ್ತಿ ಕುಂದಿದರೆ ಅದರ ವಿಶ್ವ ಶಕ್ತಿಯು ತನ್ನಷ್ಟಕ್ಕೆ ಮಾಯವಾಗುತ್ತದೆ. ಆದರೆ ಅಮೇರಿಕಕ್ಕೆ ಈ ಕುಹಕ ಯೋಜನೆಯು ತಿಳಿದಿದೆ. ತನ್ನ ಆಂತರಿಕ ಶಕ್ತಿಗೆ ಧಕ್ಕೆ ಒದಗದಂತೆ ಅದು ತನ್ನ ಧೋರಣೆಗಳನ್ನು ರೂಪಿಸಿಕೊಳ್ಳುತ್ತಿದೆ.

THE
UNITED INDIA LIFE ASSURANCE
CO., LTD.
ESTD 1906 | H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to—
INSPECTORATE OFFICE
K. S. Rao Road, Mangalore.

CANARA BANKING CORPORATION LTD

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,87,300.
Reserves	Rs. 8,00,400

BANKING BUSINESS OF EVERY DESCRIPTION TRANSACTED.

V. R. Kamath, B A L L B
General Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 } **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India

Bombay Life Building,

Central Office: Udipi.

Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the

...fa-Galli, Hubli.
...endra
...s Ltd.
...ad Office
...Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಹಡಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮುರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್
ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 42] ತಾರೀಕು 23—7—1948 [ಸಂಚಿಕೆ 29]

ರಶ್ಯವು ನಿಜವಾಗಿ ಯುದ್ಧಕ್ಕೆ ಸಿದ್ಧವಿದೆಯೇ?

ಕೊಮ್ಯುನಿಸ್ಟ್ ಪದ್ಧತಿ ಇರುವ ತನಕ ಸಾಧ್ಯವಿಲ್ಲ

ಸೋವಿಯೆಟ್ ಯೂನಿಯನಿನೊಳಗಿನ ಒಳನೋಟ

ಜರ್ಮನಿಯ ತನ್ನ ಆಡಳಿತ ಪ್ರದೇಶದ ಸುತ್ತ ಉಕ್ಕಿನ ಪರದೆಯನ್ನು ಹಾಕಿ ವಿದೇಶಿಯರ ಯಾವ ವ್ಯವಹಾರವೂ ಅಲ್ಲಿ ಸಾಗದಂತೆ ರಶ್ಯವು ಪಶ್ಚಿಮ ಶಕ್ತಿಗಳ ಮಿತ್ರಮಂಡಳಿಯ ... ಗಿದೆ. ಇಷ್ಟೊಂದು ಧೈರ್ಯ ರಶ್ಯಕ್ಕೆಲ್ಲಿಂದ ಬಂತು? ಒಂದು ವೇಳೆ ಇದೇ ಪರಿಸ್ಥಿತಿಯು ಬಿಕ್ಕಟ್ಟಿನದಾಗಿ ಯುದ್ಧದಲ್ಲಿ ಪರಿಣಾಮ ಹೊಂದಿದರೆ ರಶ್ಯವು ಅಂತರಾಷ್ಟ್ರೀಯರಂಗಗಳಲ್ಲಿ ಹೆಣಗಾಡಬಲ್ಲದೆ? ಇದುತನಕ ಏಟಂಬೊಂಬಿನ ಭಯವಿತ್ತೆಂದು ಹೇಳಲ್ಪಟ್ಟ ಆ ದೇಶಕ್ಕೆ ಈಗ ಅದು ಅಕಸ್ಮಾತಾಗಿ ಮಾಯವಾಗಲು ಕಾರಣವೇನು?

ಏಟಂಬೊಂಬಿನ ಕುರಿತೇನು?

ರಶ್ಯನ್ ವಿಜ್ಞಾನಿಗಳಿಗೆ ಅಣುವಿನ ವಿಷಯ ಸಾಮಾನ್ಯ ಗೊತ್ತಿದೆಯೆಂದು ಬ್ರಿಟಿಷ್ ಮತ್ತು ಅಮೇರಿಕ ತಜ್ಞ ತಿಳಿಸಿದ್ದಾರೆ. ಆದರೆ ಅಣುಶಕ್ತಿಯನ್ನು ಸಂಪೂರ್ಣ ಸ್ಫೋಟಕವಾಗಿ ಪರಿವರ್ತಿಸುವ ಕೆಲವು ಸೂಕ್ಷ್ಮ ವಿಧಾನಗಳು ಅವರಿಗೆ ತಿಳಿದಿಲ್ಲವೆಂದು ... ಅಣುಬೊಂಬುಗಳನ್ನು ತಯಾರಿಸಲು ಬೇಕಾಗುವ ವಿಶಾಲ ಕಾರ್ಖಾನೆಗಳ ಸಮಸ್ಯೆಯು ಅದಕ್ಕೆ ಎಲ್ಲದಕ್ಕಿಂತ ಕಠಿಣತರವಾದದ್ದು. ನಂಬಲಸಾಧ್ಯವಾದ ಯಂತ್ರೋಪಕರಣಗಳ ಜೋಡಣೆಯಿಂದಲೇ ಏಟಂಬೊಂಬೊಂದನ್ನು ತಯಾರಿಸಲು ಸಾಧ್ಯ. ಅಣುಶಕ್ತಿಯ ದುಷ್ಪರಿಣಾಮವಾದ ಅಪಾಯವನ್ನು ತಪ್ಪಿಸಲು ಈ ಯಂತ್ರೋಪಕರಣಗಳೆಲ್ಲವೂ ಸ್ವಯಂಕಾರ್ಯಕ್ಷಮವಂತಹಗಳೂ ಆಗಿರಬೇಕು. ಇದಕ್ಕೆ ವಿಶೇಷತರದ ನಿಯಂತ್ರಣೋಪಕರಣಗಳ ಆವಶ್ಯಕತೆಯಿದೆ. ರಶ್ಯನರ ಬಳಿ ಇಷ್ಟೊಂದು ಪರಿಪೂರ್ಣವಾದ ಸೂಕ್ಷ್ಮ ಯಂತ್ರೋಪಕರಣ ತಯಾರಿಸುವ ಏರ್ಪಾಡೂ ಇರುವುದಿಲ್ಲ. ಅಲ್ಲಿನ ಯಂತ್ರ ಕೈಗಾರಿಕೆಯು ಸಂಯುಕ್ತ ಅಮೇರಿಕದ ಕೈಗಾರಿಕೆಗಿಂತ ಸುಮಾರು ೨೦ ವರ್ಷಗಳ ಅನುಭವಕ್ಕೆ ಹಿಂದೆ ಇದೆ.

ರಶ್ಯನರು ಒಂದು ವೇಳೆ ಅಣುಬೊಂಬನ್ನು ಕಷ್ಟಪಟ್ಟು ತಯಾರಿಸಿದರೆನ್ನೋಣ. ಆ ಹೊತ್ತಿಗೆ ಅಮೇರಿಕನ್ನರೊಡನೆ ರಶ್ಯವು ೧೮ ವರ್ಷಗಳಲ್ಲಿ ಮಾಡಲು ಸಮರ್ಥವಾಗುವಷ್ಟು ಅಣುಬೊಂಬುಗಳಿರುವವು.

ರಶ್ಯದ ಆರ್ಥಿಕಸ್ಥಿತಿ ಹೇಗಿದೆ?

ಇಂದು ರಶ್ಯವು ಜಗತ್ತನ್ನು ಪ್ರಬಲ ಪ್ರದೇಶಗಳಲ್ಲಿ ದಬ್ಬುವಂತಹುದಾಗಿದೆ. ವಿಶ್ವಶಾಂತಿಗೆ ರಶ್ಯದಿಂದ ಅಪಾಯವು ಖಂಡಿತ ಬರುವುದು. ಆದರೆ ಹೆಚ್ಚಿನವರು ನಂಬಿದಂತೆ ರಶ್ಯವು ಅಷ್ಟು ಬಲಿಷ್ಠವಾಗಿಲ್ಲ. ಯುದ್ಧವಾದರೆ ರಶ್ಯವು ರಕ್ಷಣೋಪಾಯದ ಯುದ್ಧವನ್ನಷ್ಟೇ ಮಾಡಬಲ್ಲದು. ಅದೂ ತನ್ನ ದೇಶದ ಗಡಿಗಳ ಬಳಿ ಮಾತ್ರ. ಜರ್ಮನಿ ಇಟಲಿ ಜಪಾನುಗಳಂತಹ ಶ್ರೇಷ್ಠ ಕೈಗಾರಿಕಾ ದೇಶಗಳಂತೆ ಅದು ಅಮೇರಿಕನರ ಆ ದೇಶವನ್ನಾಗಲಿ ಅದರ ವಸಾಹತುಗಳನ್ನಾಗಲಿ ದಾಳಿ ಮಾಡಲು ಇನ್ನೂ ಕೆಲವು ವರ್ಷಗಳವರೆಗಾದರೂ ರಶ್ಯಕ್ಕೆ ದುಸ್ಸಾಧ್ಯವೇ ಸರಿ.

ರಶ್ಯದ ಶಕ್ತಿ ಅದರ ಭೌಗೋಳಿಕ ಸ್ಥಾನದ ಅನುಕೂಲತೆಯಲ್ಲಿದೆ. ಅದರ ಭೂಭಾಗ ಜಗತ್ತಿನ ಆರನೆ ಒಂದಂಶದಷ್ಟಿದೆ. ಇಷ್ಟು ಅಗಾಧವಾದ ನೆಲಭಾಗವನ್ನು ಆಕ್ರಮಿಸುವುದು ಕಷ್ಟದ ಕೆಲಸ. ಒಳಪ್ರವೇಶ ಮಾಡುವುದಂತೂ ಕಠಿಣವೆ. ಮತ್ತೆ ಅದರ ಬಳಿಯಿರುವ ರಕ್ಷಣೋಪಾಯದ ಶಸ್ತ್ರಾಸ್ತ್ರಗಳಿಂದಂತೂ ಅದು ಈಗಿನ ತನ್ನ ವರ್ತನೆಯನ್ನು ಸೈನ್ಯಬಲ ಪ್ರೋತ್ಸಾಹ ತಾಳಿದೆ. ತನ್ನ ಪಶ್ಚಿಮೋತ್ತರ ಪ್ರದೇಶಗಳಲ್ಲಿ ಅದು ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ. ತನ್ನ ಪಂಚಮ ದಳದ ಚಟುವಟಿಕೆಗಳಿಂದ ವಿದೇಶಗಳಲ್ಲಿ ತನ್ನ ವರ್ಚಸ್ಸನ್ನುಂಟುಮಾಡಿದೆ. ತನ್ನ ಕೊಮ್ಯುನಿಸ್ಟ್ ತತ್ವಜ್ಞಾನವನ್ನು ಅಮೇರಿಕದಷ್ಟು ದೂರ ಜನತೆಯ ಮನೋಪಟಲದಲ್ಲಿ ಹೋರಾಟ ನಡೆಸುವಂತೆ ಮಾಡಿದೆ. ಇವೆಲ್ಲವುಗಳಿಂದ ರಶ್ಯವು ನಿರಂತರವಾಗಿ ಅಶಾಂತಿಕಾರಕವಾದೊಂದು ವಿಶ್ವ ಅರಾಜಕತೆಯನ್ನು, ಗಲಿಬಿಲಿಯನ್ನು ಉಂಟುಮಾಡಬಲ್ಲದು.

ರಶ್ಯಕ್ಕೆ ಯುದ್ಧ ಬೇಕಾಗಿಲ್ಲ

ನಿಜವಾಗಿ ನೋಡಿದರೆ ರಶ್ಯಕ್ಕೆ ಯುದ್ಧವು ಬೇಕಾಗಿಲ್ಲ. ಕಳೆದ ಯುದ್ಧದಲ್ಲಿ ಅಮೇರಿಕವು ಜರ್ಮನಿಯನ್ನು ಹೇಗೆ ಘಾತಗೊಳಿಸಿತೆಂದು ಸ್ಟಾಲಿನ್ ಮಂಗಡಿಗರಿಗೆ ಗೊತ್ತಿದೆ. ತಮ್ಮ ದೇಶಕ್ಕೂ ಅದೇ ಭವಿಷ್ಯವನ್ನು ತಂದುಕೊಳ್ಳಲು ಅವರಿಗೆ ಇಷ್ಟವಿಲ್ಲ.

ಯುರೋಪಿನ ತಾತ್ಕಾಲಿಕ ಘಟನೆಗಳಲ್ಲಿ ರಶ್ಯದ ಉದ್ದೇಶವೇ ಬೇರೆ. ಅಮೇರಿಕಾದಂತಹ ಪ್ರಬಲ ರಾಷ್ಟ್ರವನ್ನು ... ವಿದೇಶಗಳಲ್ಲಿ ಖರ್ಚು ಮಾಡುವಂತೆ ಮಾಡುವುದೇ ರಶ್ಯದ ಮುಖ್ಯ ಉದ್ದೇಶ. ಇತ್ತ ವಿದೇಶಗಳಿಗೆ ಸಹಾಯ ತೆತ್ತು ಅತ್ತ ದೇಶದೊಳಗಿನ ಸಾಮಾನ್ಯ ಜನತೆಯನ್ನು (ಹೆಚ್ಚಾಗಿ ಮಜೂರ ವರ್ಗವನ್ನು) ಸಂತೃಪ್ತಿಪಡಿಸಲು ಅಪಾರ ಹಣವನ್ನು ವ್ಯಯಿಸುವಂತಾದಾಗ ಅಮೇರಿಕದ ಆರ್ಥಿಕ ವ್ಯವಸ್ಥೆಯು ಕುಸಿದು ಬೀಳುವುದು. ರಶ್ಯದ ವರ್ತನೆಯು ಮತ್ತದರ ರಾಜತಾಂತ್ರಿಕ ಹೇಳಿಕೆಗಳ ಎಲ್ಲ ಮರ್ಮವು ಅಮೇರಿಕದ ಆರ್ಥಿಕ ರಚನೆಯಲ್ಲಿ ಬಿರುಕನ್ನುಂಟುಮಾಡುವಂತಹದ್ದಿರುತ್ತದೆ. ಅಮೇರಿಕವು ತನ್ನ ಸ್ವಂತ ಗಲಿಬಿಲಿಯಿಂದ 'ತನ್ನೇಟು ತನಗೇ ತಗಲಿ ಬೀಳುವಂತೆ' ಮಾಡುವುದು ರಶ್ಯದ ಆಟ. ಇದರಿಂದ ಯುದ್ಧ ಮಾಡದೆ ರಶ್ಯಕ್ಕೆ ವಿಜಯ ದೊರಕಿದಂತಾಗುತ್ತದೆ, ಕಾರಣ ರಶ್ಯಕ್ಕೆ ಗೊತ್ತು, ಅಮೇರಿಕದಲ್ಲಿರುವ ಆಂತರೀಕ ಪ್ರಜಾಸ್ವಾತಂತ್ರವೇ ಅದರ ಶಕ್ತಿಯೆಂದು. ಆ ದೇಶದ ಆಂತರೀಕ ಶಕ್ತಿ ಕುಂದಿದರೆ ಅದರ ವಿಶ್ವ ಶಕ್ತಿಯು ತನ್ನಷ್ಟಕ್ಕೆ ಮಾಯವಾಗುತ್ತದೆ. ಆದರೆ ಅಮೇರಿಕಕ್ಕೆ ಈ ಕುಹಕ ಯೋಜನೆಯು ತಿಳಿದಿದೆ. ತನ್ನ ಆಂತರೀಕ ಶಕ್ತಿಗೆ ಧಕ್ಕೆ ಬರದಂತೇ ಅದು ತನ್ನ ಧೋರಣೆಗಳನ್ನು ರೂಪಿಸಿಕೊಳ್ಳುತ್ತದೆ.

THE

UNITED INDIA LIFE ASSURANCE

ESTD 1906 | CO., LTD. | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs 8,00,400

BANKING BUSINESS OF EVERY DESCRIPTION TRANSACTED

V. R. Kamath, B A L L B
General Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಊರುಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office. Udipi.
Branches at:—

MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the

...ta Galli, Hubli
...endra
...s Ltd.
...ad Office
...Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೊ ಮುರಾರಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸು
ಲಿಮಿಟೆಡ್.
ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 23—7—1948 [ಸಂಚಿಕೆ 29]

ರಶ್ಯವು ನಿಜವಾಗಿ ಯುದ್ಧಕ್ಕೆ ಸಿದ್ಧವಿದೆಯೇ?

ಕೊಮ್ಯುನಿಸ್ಟ್ ಪದ್ಧತಿ ಇರುವ ತನಕ ಸಾಧ್ಯವಿಲ್ಲ

ಸೋವಿಯೆಟ್ ಯೂನಿಯನಿನೊಳಗಿನ ಒಳನೋಟ

ಜರ್ಮನಿಯು ತನ್ನ ಆಡಳಿತ ಪ್ರದೇಶದ ಸುತ್ತ ಉಕ್ಕಿನ ಪರದೆ ... ಯೂರೋಪಿನ ವ್ಯವಹಾರದಲ್ಲಿ ಅಲ್ಲಿ ಸಂಗದಂತೆ ರಶ್ಯವು ಇತ್ತೀಚೆಗೆ ಕೆಲವು ಕಷ್ಟಗಳ ... ಮಿತ್ರಮಂಡಳಿಯು ... ಗಿದೆ. ಇಷ್ಟೊಂದು ಧೈರ್ಯ ರಶ್ಯಕ್ಕೆಲ್ಲಿಂದ ಬಂತು? ಒಂದು ವೇಳೆ ಇದೇ ಪರಿಸ್ಥಿತಿಯು ಬಿಕ್ಕಟ್ಟಿನದಾಗಿ ಯುದ್ಧದಲ್ಲಿ ಪರಿಣಾಮ ಹೊಂದಿದರೆ ರಶ್ಯವು ಅಂತರಾಷ್ಟ್ರೀಯರಂಗದಲ್ಲಿ ಹೆಣಗಾಡಬಲ್ಲದೆ? ಇದುತನಕ ಏಟಂಬೊಂಬಿನ ಭಯವಿತ್ತೆಂದು ಹೇಳಲ್ಪಟ್ಟ ಆ ದೇಶಕ್ಕೆ ಈಗ ಅದು ಅಕಸ್ಮಾತಾಗಿ ಮಾಯವಾಗಲು ಕಾರಣವೇನು?

ಏಟಂಬೊಂಬಿನ ಕುರಿತೇನು?

ರಶ್ಯನ್ ವಿಜ್ಞಾನಿಗಳಿಗೆ ಅಣುಬೊಂಬಿನ ಸರ್ವ ಸಾಮಾನ್ಯ ತತ್ವಗಳು ಗೊತ್ತಿದೆಯೆಂದು ಬ್ರಿಟಿಷ್ ಮತ್ತು ಅಮೇರಿಕನ್ ತಜ್ಞರು ತಿಳಿಸಿದ್ದಾರೆ. ಆದರೆ ಅಣುಶಕ್ತಿಯನ್ನು ಸಂಪೂರ್ಣ ಸ್ಫೋಟಕವಾಗಿ ಪರಿವರ್ತಿಸುವ ಕೆಲವೊಂದು ಸೂಕ್ಷ್ಮ ವಿಧಾನಗಳು ಅವರಿಗೆ ತಿಳಿದಿಲ್ಲವೆಂಬುದೂ ಖಚಿತ. ಅಣುಬೊಂಬುಗಳನ್ನು ತಯಾರಿಸಲು ಬೇಕಾಗುವ ವಿಶಾಲ ಕಾರ್ಖಾನೆಗಳ ಸಮಸ್ಯೆಯು ಅದಕ್ಕೆ ಎಲ್ಲದಕ್ಕಿಂತ ಕಠಿಣತರವಾದದ್ದು. ಸಂಚಲ ಸಾಧ್ಯವಾದ ಯಂತ್ರೋಪಕರಣಗಳ ಜೋಡಣೆಯಿಂದಲೇ ಏಟಂಬೊಂಬೊಂದನ್ನು ತಯಾರಿಸಲು ಸಾಧ್ಯ. ಅಣುಶಕ್ತಿಯ ದುಷ್ಪರಿಣಾಮವಾದ ಅಪಾಯವನ್ನು ತಪ್ಪಿಸಲು ಈ ಯಂತ್ರೋಪಕರಣಗಳೆಲ್ಲವೂ ಸ್ವಯಂಕಾರ್ಯಗೈಯ್ಯುವಂತಹಗಳೂ ಆಗಿರಬೇಕು. ಇದಕ್ಕೆ ವಿಶೇಷತರದ ನಿಯಂತ್ರಣೋಪಕರಣಗಳ ಆವಶ್ಯಕತೆಯಿದೆ. ರಶ್ಯನರ ಬಳಿ ಇಷ್ಟೊಂದು ಪರಿಪೂರ್ಣತೆಯ ಸೂಕ್ಷ್ಮ ಯಂತ್ರೋಪಕರಣ ತಯಾರಿಸುವ ಏರ್ಪಾಡೂ ಇರುವುದಿಲ್ಲ. ಅಲ್ಲಿನ ಯಂತ್ರ ಕೈಗಾರಿಕೆಯು ಸಂಯುಕ್ತ ಅಮೇರಿಕದ ಕೈಗಾರಿಕೆಗಿಂತ ಸುಮಾರು ೨೨ ವರ್ಷಗಳ ಅನುಭವಕ್ಕೆ ಹಿಂದೆ ಇದೆ!

ರಶ್ಯನರು ಒಂದು ವೇಳೆ ಅಣುಬೊಂಬನ್ನು ಕಷ್ಟಪಟ್ಟು ತಯಾರಿಸಿದರೆನ್ನೋಣ. ಆ ಹೊತ್ತಿಗೆ ಅಮೇರಿಕನ್ನರೊಡನೆ ರಶ್ಯವು ಹಲ ವರ್ಷಗಳಲ್ಲಿ ಮಾಡಲು ಸಮರ್ಥವಾಗುವಷ್ಟು ಅಣುಬೊಂಬುಗಳಿರುವವು.

ರಶ್ಯದ ಆರ್ಥಿಕಸ್ಥಿತಿ ಹೇಗಿದೆ?

ಇಂದು ರಶ್ಯವು ಜಗತ್ತನ್ನು ಪದೇ ಪದೇ ಕಳವಳದಲ್ಲಿ ದೂಡುವಂತಹುದಾಗಿದೆ. ವಿಶ್ವಶಾಂತಿಗೆ ರಶ್ಯದಿಂದ ಅಪಾಯವು ಖಂಡಿತವಾದುದು. ಆದರೆ ಹೆಚ್ಚಿನವರು ನಂಬಿದಂತೆ ರಶ್ಯವು ಅಷ್ಟು ಬಲಿಷ್ಠವಾಗಿಲ್ಲ. ಯುದ್ಧವಾದರೆ ರಶ್ಯವು ರಕ್ಷಣೆ ಮಾಡುವ ಹೋರಾಟವನ್ನಷ್ಟೇ ... ಅದು ತನ್ನ ದೇಶದ ಗಡಿಗಳ ಒಳ ಮಾತ್ರ. ಜರ್ಮನಿ, ಇಟಲಿ ಜಪಾನುಗಳಂತಹ ಶಕ್ತಿ ಕೈಗಾರಿಕಾ ದೇಶಗಳಂತೆ ಅದು ಅಮೇರಿಕನರ ಆ ದೇಶವನ್ನಾಗಲೀ ಅದರ ನೌಕಾ ಹಡಗುಗಳನ್ನಾಗಲೀ ದಾಳಿ ಮಾಡಲು ಇನ್ನೂ ಕೆಲವು ವರ್ಷಗಳವರೆಗಾದರೂ ರಶ್ಯಕ್ಕೆ ದುಸ್ಸಾಧ್ಯವೇ ಸರಿ.

ರಶ್ಯದ ಶಕ್ತಿ ಅದರ ಭೌಗೋಳಿಕ ಸ್ಥಾನದ ಅನುಕೂಲತೆಯಲ್ಲಿದೆ. ಅದರ ಭೂಭಾಗ ಜಗತ್ತಿನ ಆರನೆ ಒಂದಂಶದಷ್ಟಿದೆ. ಇಷ್ಟು ಅಗಾಧವಾದ ನೆಲಭಾಗವನ್ನು ಆಕ್ರಮಿಸುವುದು ಕಷ್ಟದ ಕೆಲಸ. ಒಳಪ್ರದೇಶ ಮಾಡುವುದಂತೂ ಕಠಿಣವೆ. ಶಕ್ತಿ ಅದರ ಒಳಗಿರುವ ರಕ್ಷಣೆ ಮಾಡುವ ಶಸ್ತ್ರಾಸ್ತ್ರಗಳಿಂದ ... ಅದು ಈಗಿನ ತನ್ನ ವರ್ತನೆಯನ್ನು ... ತನ್ನ ಗಡಿಯಾಚೆಯ ಪ್ರದೇಶಗಳಲ್ಲಿ ಅದರ ರಾಜಕೀಯ ಶಕ್ತಿಯನ್ನು ಹಿತ ... ಇದೆ. ತನ್ನ ಪಂಚಮ ದಳದ ಚಟುವಟಿಕೆಗಳಿಂದ ಪ್ರದೇಶಗಳಲ್ಲಿ ತನ್ನ ವರ್ಚಸ್ಸನ್ನು ... ತನ್ನ ಕೊಮ್ಯುನಿಸ್ಟ್ ತತ್ವಜ್ಞಾನವನ್ನು ... ದೊರೆಯದ ಜನತೆಯು ಮನಸ್ಸನ್ನು ಸೆಳೆಯುವಂತೆ ಮಾಡಿದೆ. ಇವೆಲ್ಲವುಗಳಿಂದ ರಶ್ಯವು ನಿರಂತರ ಅಪಾಯ ಕಾರಕವಾದುದೆಂದು ವಿಶ್ವ ಅರಾಜಕತೆಯನ್ನು ಗಲಿಬಿಲಿಯನ್ನು ಉಂಟುಮಾಡಬಲ್ಲುದು.

ರಶ್ಯಕ್ಕೆ ಯುದ್ಧ ಬೇಕಾಗಿಲ್ಲ

ನಿಜವಾಗಿ ನೋಡಿದರೆ ರಶ್ಯಕ್ಕೆ ಯುದ್ಧವು ಬೇಕಾಗಿಲ್ಲ. ಕಳೆದ ಯುದ್ಧದಲ್ಲಿ ಅಮೇರಿಕವು ಜಪಾನನ್ನು ಹೇಗೆ ಘಾತಗೊಳಿಸಿತೆಂದು ಸ್ಟೆಲಿನ್ ಮುಂದಾಳಿಗೆ ಗೊತ್ತಿದೆ. ತನ್ನ ದೇಶಕ್ಕೂ ಅದೇ ವಿಪತ್ತನ್ನು ತಂದುಕೊಳ್ಳಲು ಅವರಿಗೆ ಇಷ್ಟವಿಲ್ಲ.

ಆದರೆ ನಿರಂತರವಾದ ಗಲಿಬಿಲಿಯನ್ನೆಬ್ಬಿಸುವುದರಲ್ಲಿ ರಶ್ಯದ ಉದ್ದೇಶ ... ಅಮೇರಿಕದಂತಹ ಪ್ರಬಲ ರಾಷ್ಟ್ರವನ್ನು ... ಅದು ವಿವೇಕರಹಿತ ವರ್ತಿಸುವಂತೆ ಮಾಡುವುದೇ ರಶ್ಯದ ಮುಖ್ಯೋದ್ದೇಶ. ಇತ್ತ ವಿದೇಶಗಳಿಗೆ ಸಹಾಯ ಕೊಟ್ಟು ಅತ್ತ ದೇಶದೊಳಗಿನ ಸಾಮಾನ್ಯ ಜನತೆಯನ್ನು (ಹೆಚ್ಚಾಗಿ ಮಜೂರ ವರ್ಗವನ್ನು) ಸಂತೃಪ್ತಿಪಡಿಸಲು ಅಪಾರ ಹಣವನ್ನು ವ್ಯಯಿಸುವಂತಾದಾಗ ಅಮೇರಿಕದ ಆರ್ಥಿಕ ವ್ಯವಸ್ಥೆಯು ಕುಸಿದು ಬೀಳುವುದು. ರಶ್ಯದ ವರ್ತನೆಯು ಸುತ್ತದ ರಾಜತಾಂತ್ರಿಕ ಹೇಳಿಕೆಗಳ ಎಲ್ಲ ಮರ್ಮವು ಅಮೇರಿಕದ ಆರ್ಥಿಕ ರಚನೆಯಲ್ಲಿ ಬಿರುಕನ್ನುಂಟುಮಾಡುವಂತಹದ್ದಿರುತ್ತದೆ. ಅಮೇರಿಕವು ತನ್ನ ಸ್ವಂತ ಗಲಿಬಿಲಿಯಿಂದ 'ತನ್ನೇಟು ತನಗೆ ತಗಲಿ ಬೀಳುವಂತೆ' ಮಾಡುವುದು ರಶ್ಯದ ಆಟ. ಇದರಿಂದ ಯುದ್ಧ ಮಾಡದೆ ರಶ್ಯಕ್ಕೆ ವಿಜಯ ದೊರಕಿದಂತಾಗುತ್ತದೆ. ಕಾರಣ ರಶ್ಯಕ್ಕೆ ಗೊತ್ತು, ಅಮೇರಿಕದಲ್ಲಿರುವ ಆಂತರಿಕ ಪ್ರಜಾಸ್ವಾತಂತ್ರ್ಯವೇ ಅದರ ಶಕ್ತಿಯೆಂದು. ಆ ದೇಶದ ಆಂತರಿಕ ಶಕ್ತಿ ಕುಂದಿದರೆ ಅದರ ವಿಶ್ವ ಶಕ್ತಿಯು ತನ್ನಷ್ಟಕ್ಕೆ ಮಾಯವಾಗುತ್ತದೆ. ಆದರೆ ಅಮೇರಿಕಕ್ಕೆ ಈ ಕುಹಕ ಯೋಜನೆಯು ತಿಳಿದಿದೆ. ತನ್ನ ಆಂತರಿಕ ಶಕ್ತಿಗೆ ಧಕ್ಕೆ ಬರದಂತೇ ಅದು ತನ್ನ ಧೋರಣೆಗಳನ್ನು ರೂಪಿಸಿಕೊಳ್ಳುತ್ತದೆ.

THE
UNITED INDIA LIFE ASSURANCE
ESTD 1906 CO., LTD. H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to.—
INSPECTORATE OFFICE
K. S. Rao Road, Mangalore.

ನಮ್ಮ ಪ್ರಾರ್ಥನೆಗೆ ಪ್ರತಿಫಲ ಖಂಡಿತ ಸಿಗುತ್ತದೆ

ಭಕ್ತರ ಕೋರಿಕೆ ನೆರವೇರಿದ ದೈವಿಕ ಚಮತ್ಕೃತಿಗಳು

ಮಹಾತ್ಮಾ ಗಾಂಧಿಯವರ ಭಕ್ತಿ ವಿಶ್ವಾಸ

"ನನಗೆ ಆಹಾರ ಕೊಡದಿದ್ದರೆ ನಾನು ತಕ್ಷಣ ಸಾಯಲಾರೆ, ನನ್ನ ಕಣ್ಣನ್ನು ಕುಕ್ಕಿ ತೆಗೆದರೆ ನಾನು ಮಡಿಯಲಾರೆ. ಆದರೆ ದೇವರ ಮೇಲಿನ ನನ್ನ ವಿಶ್ವಾಸವನ್ನು ತಪ್ಪಿಸಿದರೆ ನಾನು ಕ್ಷಣ ಕಾಲವೂ ಬಾಳಲಾರೆ" ಹೀಗೆಂದು ಮಹಾತ್ಮಾ ಗಾಂಧಿಯವರೆಂದಿದ್ದರು. ತಮ್ಮೆಲ್ಲ ಕಾರ್ಯಕಲಾಪಗಳೂ ಅಂತರಾತ್ಮಪ್ರೇರಿತವಾದವೆಂದೂ ಹೇಳುತಿದ್ದುದರ ಇನ್ನೊಂದು ಅರ್ಥವು ಸಂಪೂರ್ಣ ದೇವಾಧೀನವೆಂದಾಗುತ್ತದೆ. ಪ್ರಾಚೀನ ಕಾಲದಲ್ಲಿ ಅನೇಕಾನೇಕ ದೇವಭಕ್ತರು ತಮ್ಮ ಸಹನಾತೀತ ಸಂಕಷ್ಟಕಾಲದಲ್ಲಿ ಚಮತ್ಕಾರಿಕವಾದ ರೀತಿಯಲ್ಲಿ ದೈವಸಹಾಯವನ್ನು ಹೊಂದಿದ ಲೆಕ್ಕವಿಲ್ಲದ ನಿದರ್ಶನಗಳಿವೆ. ಆದರೆ ದಿನನಿತ್ಯದ ಜೀವನದಲ್ಲಿ ಸಾಮಾನ್ಯ ಮನುಷ್ಯರ ಆರ್ತನಾದವು ದೈವಿಕ ಶಕ್ತಿಯ ಕಿವಿಗೆ ಹೇಗೆ ಮುಟ್ಟುತ್ತದೆ ಮತ್ತು ಅದಕ್ಕೆ ತಕ್ಕದಾದ ಪರಿಹಾರವು ಹೇಗೆ ಒದಗುತ್ತದೆಂಬುದರ ಕುರಿತು ರೆವೆರೆಂಡ್ ಆಲ್ಫ್ರೆ ಈ ಬ್ಲೇಕ್‌ಮೇನ್ ಎಂಬ ಮತೋಪದೇಶಕರು ಒಂದು ಲೇಖದಲ್ಲಿ ತಿಳಿಸುತ್ತಾರೆ:

ನನ್ನ ಬಳಿಗೊಂದು ಸಲ ಓರ್ವ ಚಿಕ್ಕ ಹುಡುಗ ಒಂದು ಕಾಲಾಣೆ ನಾಣ್ಯ ಹಿಡಿದುಕೊಂಡು ಬಂದ.

"ನೋಡಿ ಇದನ್ನು ದೇವರು ನನಗೆ ಕೊಟ್ಟರು" ಎಂದನಾತ.

"ದೇವರು ಹುಡುಗರಿಗೆ ಕಾಲಾಣೆಗಳನ್ನು ಕೊಡುವುದಿಲ್ಲ" ನಾನೆಂದೆ.

"ಹಾಗೊ, ದೇವರೇ ಇದನ್ನು ನನಗೆ ಕೊಟ್ಟರು. ತಿಂಡಿತೆಗೆದುಕೊಳ್ಳಲು ನನಗೊಂದು ಕಾಲಾಣೆ ಕೊಡೆಂದು ನಾನವರನ್ನು ಪ್ರಾರ್ಥಿಸುತ್ತಾ ಇದ್ದೆ, ಇಂದು ನಾನು ಮಾರ್ಗದಲ್ಲಿ ಹೋಗುತಿದ್ದಾಗ ಪಕ್ಕನೆ ಈ ಕಾಲಾಣೆ ಕಾಣಿಸಿಕೊಂಡಿತು. ದೇವರೇ ಅದನ್ನು ಬಿಸಾಡಿದ್ದರು" ಹೀಗೆಂದು ಆ ಬಾಲಕ ಗಂಭೀರವಾಗಿ ನುಡಿದ.

ಹುಡುಗನ ಸರಳತ್ವ ಮತ್ತು ಶ್ರದ್ಧೆಗಳನ್ನು ನೋಡಿ ಕೌತುಕವಾಯಿತು. ಸರ್ವಸಾಮಾನ್ಯವಾಗಿ ಪ್ರತಿಯೊಬ್ಬನು ಪ್ರಾರ್ಥನೆ ಮಾಡುತ್ತಾನೆ. (ಸಂಕಟ ಬಂದಾಗ ವೆಂಕಟರಮಣನನ್ನು ಕರೆಯುವುದು ಸಹಜವೇ.) ನಮ್ಮಿಂದ ಬಿಡಿಸಲಾಗದ ಸಮಸ್ಯೆ ನಮ್ಮೆದುರು ಬಂದು ನಿಂತಾಗ ನಾವು ದೇವರತ್ತ ಮೊರೆಯಿಡುತ್ತೇವೆ. ಮನುಷ್ಯರು ಪ್ರಾಯಹೋದಂತೆ ಪ್ರಾರ್ಥನೆಯಲ್ಲಿ ಕಮ್ಮಿ ಶ್ರದ್ಧೆಯುಳ್ಳವರಾಗುತ್ತಾರೆ. ಕಾರಣ ಅವರ ಕೋರಿಕೆಗಳು ಶೀಘ್ರದಲ್ಲಿ ಈಡೇರುವ ನಿರೀಕ್ಷೆ ಅವರಿಗಿರುವುದಿಲ್ಲ. ನಮ್ಮ ಪ್ರಾರ್ಥನೆಗೆ ತಕ್ಕ ಪ್ರತಿಫಲ ದೊರೆತಿರುವುದನ್ನು ಗುರುತಿಸಲು ನಮಗೆ ಮಗುವಿನಂತಹ ಸರಳತೆ ಶ್ರದ್ಧೆಗಳಿರಬೇಕು.

ಕೆಲವು ನಿದರ್ಶನಗಳು

ಒಬ್ಬ ರೈತನ ಹೆಂಡತಿಗೆ ಕೆನ್ಸರ್ ಕಾಯಿಲೆ. ಅವಳು ಬದುಕುವುದಶಕ್ಯವೆಂದು ವೈದ್ಯರು ಮೊದಲೇ ತಿಳಿಸಿಬಿಟ್ಟರು. ಆತ ದಿನಂಪ್ರತಿ ನನ್ನಲ್ಲಿಗೆ ಬಂದು ತನ್ನ ಶೋಕವನ್ನು ಸಾರುತ್ತಿದ್ದ. ನಾವಿಬ್ಬರೂ ಅವನ ಪತ್ನಿಯ ಆರೋಗ್ಯಕ್ಕಾಗಿ ಪ್ರಾರ್ಥಿಸುತಿದ್ದೆವು. ಆದರೂ ಅವಳು ಮೃತಪಟ್ಟಳು. ಕೆಲ ಕಾಲದ ನಂತರ ನಾನು ಪ್ರಶ್ನಿಸಿದೆ: "ನಮ್ಮ ಪ್ರಾರ್ಥನೆ ನಿಷ್ಫಲವಾಯಿತೆಂದು ನಿನ್ನ ವಿಶ್ವಾಸದಲ್ಲಿ ಏನಾದರೂ ನಿರ್ಬಲತ್ವ ಉಂಟಾಗಿದೆಯೆ?" "ಖಂಡಿತ ಇಲ್ಲ. ನನ್ನ ವಿಶ್ವಾಸ ಇನ್ನೂ ಬಲವಾಗಿದೆ. ಅವಳನ್ನು ಕಳಕೊಳ್ಳುವುದನ್ನು ನಾನು ಸಹಿಸಲಾರೆನೆಂದು ತಿಳಿಕೊಂಡಿದ್ದೆ. ಆದರೆ ದೇವರು ನನಗೆ ಶಕ್ತಿ ಕೊಟ್ಟನು. ಅನಿವಾರ್ಯವಾದುದನ್ನೆದುರಿಸಲು ಶಕ್ತಿ ಕೊಟ್ಟದ್ದೇ ನನ್ನ ಪ್ರಾರ್ಥನೆಗೆ ದೇವರಿತ್ತ ಉತ್ತರ" ನಮ್ಮ ಕೋರಿಕೆಗಳನ್ನು ಈಡೇರಿಸುವಂತೆ ಮಾಡುವುದಕ್ಕೆ ನಾವು ಅವು ನಮ್ಮಿಂದಲೇ ಈಡೇರುವಂತಾಗಲೆಂದು ಪ್ರಾರ್ಥಿಸಬೇಕು.

ಪ್ರಾರ್ಥನೆಗೆ ನಿರ್ದಿಷ್ಟವಾದೊಂದು ವಿಧಾನವಿಲ್ಲ. ನನ್ನೊಬ್ಬ ಸ್ನೇಹಿತರು ಮೋಟಾರು ಬಿಡುವಾಗ ಪ್ರಾರ್ಥನೆ ಮಾಡುವುದಿತ್ತು. ನಾನು ರಾತ್ರೆ ಹಾಸಿಗೆಯ ಮೇಲೇ ಹೆಚ್ಚಾಗಿ ಪ್ರಾರ್ಥಿಸುವುದು. ವಿಮಾನ ಚಲಾಯಿಸುವವರು ಹೆಚ್ಚಾಗಿ ತಮ್ಮ ಕೆಲಸದಲ್ಲಿರುವಾಗಲೇ ಪ್ರಾರ್ಥನೆ ಮಾಡುತ್ತಾರಂತೆ.

ದೇವರಿಗೆ ಕಾಗದ

ದೇವರಿಗೆ ಟೈಪ್ ಮಾಡಿ ಕಾಗದ ಬರೆಯುವ ಓರ್ವ ಮನುಷ್ಯನನ್ನು ನಾನು ಬಲ್ಲೆ. ಇವನ ಮಟ್ಟಿಗೆ ಪ್ರಾರ್ಥನೆಯೆಂಬುದು ಧರ್ಮಸಾಂಪ್ರದಾಯವಾಗಿದೆ. ಅದು ಕೇವಲ ಒಂದು ಮಾನಸೀಕ ನೈರ್ಮಲ್ಯದ ವಿಷಯವಾಗಿದೆ. ತನ್ನ ಮನದ ಕೋರಿಕೆಯನ್ನು ಇವನು ಪ್ರಾರ್ಥನೆಮಾಡಿಕೊಳ್ಳುವುದಕ್ಕಿಂತಲೂ ಬರೆಯುವುದರ ಮೂಲಕ ಸ್ಪಷ್ಟವಾಗಿ ನಿರೂಪಿಸಬಲ್ಲನೆಂದು ತಿಳಕೊಂಡಿದ್ದಾನೆ.

ದೇವರೊಡನೆ ಬಿನ್ನವಿಸಿಕೊಳ್ಳುವುದು ಆತ್ಮತೃಪ್ತಿಯನ್ನು ಉಂಟುಮಾಡುವಂತೆಯೇ, ನಾವು ದೇವರ ಮಾತುಗಳನ್ನು ಆಲಿಸಬೇಕಾದುದೂ ಮಹತ್ವದ ಸಂಗತಿ. ಸದಾ ಮಾತನಾಡುತ್ತ ಇದ್ದರೆ ನಾವೇನನ್ನೂ ಕಲಿಯಲಾರೆವು. ಪ್ರಶಾಂತ ಮೌನ, ಮಗುವಿನ ಸರಳತೆ, ಇವು ಪ್ರಾರ್ಥನೆಗೆ ಅವಶ್ಯವಾಗಿ ಬೇಕಾಗುವ ವಿಷಯಗಳು.

ಪ್ರಖ್ಯಾತಪುರುಷರ ಪ್ರಾರ್ಥನೆಗಳು

ಪ್ರಾರ್ಥನೆಯನ್ನು ಬಾಯಿಯಿಂದಲೇ ಹೇಳುವುದೂ ಅವಶ್ಯಕವಲ್ಲ. ಸಜ್ಜನ ಸಹವಾಸ, ಸದ್ಗುಣಪ್ರಿಯತೆ, ಉದಾತ್ತ ಧ್ಯೇಯಚಿಂತನ ಇವುಗಳೇ ನಿತ್ಯದ ಪ್ರಾರ್ಥನೆಯಾಗಬಲ್ಲವು. ಪ್ರಖ್ಯಾತ ಗ್ರಂಥಕರ್ತರಾದ ಪರ್ಲ್‌ಬಕ್ ಇವಳು, ಪ್ರಖ್ಯಾತ ನೀಗ್ರೊ ರಸಾಯನಿಕ ಶಾಸ್ತ್ರಜ್ಞರಾದ ವೊಶಿಂಗ್ಟನ್ ಕಾರ್ವರ್ ಇವರು ತಮ ಪ್ರಾರ್ಥನೆಗಳನ್ನೆಂದಿಗೂ ಉಚ್ಚರಿಸುತ್ತಿರಲಿಲ್ಲವಂತೆ. ಆದರೆ, ಇವರು ಮೌನವಾಗಿ ಪ್ರಾರ್ಥಿಸಿಕೊಂಡ ವಿಷಯಗಳೆಲ್ಲವೂ ಇವರಿಗೆ ವಿಪುಲವಾಗಿ ಸಿದ್ಧಿಸಿವೆ.

ಸಂತನ ಪ್ರಾರ್ಥನೆ

ಪ್ರಖ್ಯಾತ ಸಂತನಾದ ಸ್ಯೆಂಟ್ ಫ್ರೆನ್ಸಿಸನ ಪ್ರಾರ್ಥನೆಯ ಒಟ್ಟಾರ್ಥ ಹೀಗಿತ್ತು:

"ದ್ವೇಷವಿರುವಲ್ಲಿ ಪ್ರೀತಿಯನ್ನೂ, ನಿರಾಶೆಯಿರುವಲ್ಲಿ ನಿರೀಕ್ಷೆಯನ್ನೂ, ಕತ್ತಲಿರುವಲ್ಲಿ ಬೆಳಕನ್ನೂ, ದುಃಖವಿರುವಲ್ಲಿ ಆನಂದವನ್ನೂ ಬಿತ್ತುವಂತೆ ನನಗೆ ಶಕ್ತಿ ಕೊಡು. ಇತರರಿಗೆ ಸಮಾಧಾನಿಸುವ, ತಿಳಕೊಳ್ಳುವ, ಪ್ರೀತಿಸುವ, ಕ್ಷಮಿಸುವ ಶಕ್ತಿಯನ್ನು ದಯಪಾಲಿಸು. ಇತರಿಗಾಗಿ ಸಾಯುವುದರ ಮೂಲಕ ಅಮರ ಜೀವನವನ್ನು ಪಡೆಯುವಂತೆ ಮಾಡು"

ಮಹಾತ್ಮಾ ಗಾಂಧಿಯವರ ಪ್ರಾರ್ಥನೆಯ ಸಾರಾಂಶವಾದರೂ ಹಾಗೆಯೇ ಇತ್ತು: "ಕಾರ್ಗತ್ತಲೆಯ ನಡುವಿನಲ್ಲಿ ಬೆಳಕನ್ನೂ, ಅಸತ್ಯದ ಮಧ್ಯದಲ್ಲಿ ಸತ್ಯವನ್ನೂ, ಮರಣದೊಳಗೆ ಜೀವವನ್ನು ಕಾಣುವಂತೆ ಮಾಡು." ಪ್ರಾರ್ಥಿಸುವ ವಿಷಯಗಳನ್ನು ಹೊಂದುವ ಹೊಣೆಗಾರಿಕೆಯು ನಮ್ಮದೇ ಆಗಿದೆ. ಸ್ನೇಹವು ನಾವು ಇತರರಿಗೆ ಕೊಟ್ಟಾಗಲೇ ಅದು ನಮಗೆ ಸಿಗುವುದು. ಸಹಾನುಭೂತಿಯು ನಾವು ಇತರರಿಗೆ ತೋರಿಸಿದಾಗಲೆ ಅದು ನಮಗೆ ತೋರಿಸಲ್ಪಡುವುದು. ಕ್ಷಮೆ, ದಯೆ, ಶಾಂತಿಗಳು ಸ್ವಾದರ್ಶದಿಂದಲೇ ದೊರೆಯುವುವು. ಪ್ರಾರ್ಥನೆಯು ಒಂದು ಧಾರ್ಮಿಕ ಅಭ್ಯಾಸ ಮಾತ್ರವಲ್ಲ, ಅದು ಮಾನಸೀಕ ತೃಪ್ತಿಯ ಸಾಧನವೂ ಆಗಿದೆ. ಒಂದು ಸಲ ನಾವದನ್ನು ಅಪ್ಪಿಕೊಂಡರೆ ಅದರ ಅಭ್ಯಾಸವು ಶ್ವಾಸದಂತೆ ಸ್ವಾಭಾವಿಕವಾಗಿ ಜೀವನಕ್ಕೆ ಹಿತಕಾರಿಯಾಗಿ ಪರಿಣಮಿಸುವುದು.

ರಶ್ಯಾ ಅಮೇರಿಕಾ ಮತ್ತು ಭಾರತ

ಆಂಗ್ಲ ಪತ್ರಿಕೋದ್ಯೋಮಿಯ ಅಭಿಪ್ರಾಯ

ಲಂಡನಿನ ನ್ಯೂಸ್ ಕ್ರೊನಿಕಲ್ ಪತ್ರಿಕೆಯ ವಿದೇಶಾಂಗ ಸಂಪಾದಕರಾದ ಶ್ರೀ ಎ. ಜೆ. ಕಮಿಂಗ್ಸ್‌ರು ರಶ್ಯಾ, ಅಮೇರಿಕಾ ಮತ್ತು ಭಾರತದ ಕುರಿತು ಹೀಗೆ ಬರೆದಿದ್ದಾರೆ.

ದಾರಿದ್ರ್ಯವಿದ್ದಲ್ಲಿ ದೀನ ಜನತೆ ನರಳುತ್ತದೆ. ದೀನರ ನರಳಿಕೆಯ ಕ್ಷೇತ್ರವು ಕಮ್ಯೂನಿಸಮ್ ಸಮತಾವಾದಕ್ಕೆ ಉತ್ತಮ ಕೃಷಿ ಪ್ರದೇಶ. ನಿರಾಶೆಗೊಂಡ ಜನರು ಎಂತಹದನ್ನೂ ಹಿಡಿದಪ್ಪುವರು. ಕಾರಣ ನಷ್ಟವಾಗುವಂತಹ ವಿಷಯ ಅವರ ಬಳಿ ಏನೂ ಇರುವುದಿಲ್ಲ.

ಭಾರತವು ಒಂದು ಉತ್ತಮ ನಿದರ್ಶನ. ಅಲ್ಲಿಯ ಜನರ ಸಹಕಾರಗಳನ್ನುಂಟುಮಾಡುವುದು ಉದಾತ್ತ ಧ್ಯೇಯ. ರಶ್ಯಾ ಈ ದಿಶೆಯಲ್ಲಿ ಸಾಗುತ್ತಿದೆಯಾದರೂ ಅದರ ಧೋರಣೆಯು ಸಂಕುಚಿತ ದೃಷ್ಟಿಯವಾದುದು ವಿಷಯವು ಖೇದಾಸ್ಪದ. ಎರಡನೆಯ ಮಹಾಯುದ್ಧದ ನಂತರ ರಶ್ಯದ ಕುರಿತು ವಿಶ್ವಕ್ಕೆ ಸಹಾನುಭೂತಿಯಿತ್ತು. ಆದರೆ ಅದರ ವಿಚಿತ್ರ ವರ್ತನೆಯಿಂದದು ಆ ಸಹಾನುಭೂತಿಯನ್ನು ಕಳಕೊಳ್ಳುತ್ತಿದೆ.

ಜಗತ್ತಿನಲ್ಲಿ ಬಂಡವಾಳಶಾಹಿ ಪದ್ಧತಿಯು ಕುಸಿದು ಬೀಳಬೇಕೆಂದು ರಶ್ಯವು ನಿರೀಕ್ಷಿಸಿಕೊಂಡಿದೆ. ನಮ್ಮ ಮಟ್ಟಿಗೆ ನಮದು (ಬ್ರಿಟಿಷರದು) ಈಗೊಂದು ಸಮಾಜವಾದ ತಳಹದಿಯ ಪ್ರಜಾಪ್ರಭುತ್ವವಾಗಿದೆ. ರಶ್ಯನ್ನರು ಇದನ್ನು ಪುರಸ್ಕರಿಸುವ ಬದಲಿಗೆ ಧಿಕ್ಕರಿಸುತಿದ್ದಾರೆ. ಇದು ದುರ್ದೈವದ ಸಂಗತಿ.

ರಶ್ಯ ಮತ್ತು ಅಮೇರಿಕಾ

ಸಂಯುಕ್ತ ಅಮೇರಿಕದ ವಿಷಯ ಹೇಳುವುದಾದರೆ ಅದು ಪ್ರಕೃತಿ ಸಂಪತ್ತಿನಲ್ಲೂ, ಯಾಂತ್ರಿಕ ಬಲದಲ್ಲೂ ಅಪಾರ ಶ್ರೀಮಂತಿಕೆಯ ದೇಶ. ಸದ್ಯಕ್ಕೆ ಅದನ್ನು ಯಾರಿಂದಲೂ ತಲೆ ಕೆಳಗೆ ಮಾಡಲು ಸಾಧ್ಯವಿಲ್ಲ. ಅದೆಂತಹ ಬಿಕ್ಕಟ್ಟಿನ ಪ್ರಸಂಗವಾದರೂ ಅಮೇರಿಕತ್ವದ ಅಗಾಧ ಸಾಗರದ ಮೇಲೆ ಅದೊಂದು ಚಿಕ್ಕ ಗುಳ್ಳೆಯೇ ಸರಿ: ರಶ್ಯವೂ, ಜಗತ್ತು ಈ ಸತ್ಯವನ್ನು ಮನಗಾಣುವುದು ಶ್ರೇಯಸ್ಕರವಾದುದು.

ರಶ್ಯ ಮತ್ತು ಅಮೇರಿಕಗಳೊಳಗಿನ ವ್ಯತ್ಯಾಸಗಳನ್ನು ಬಗೆಹರಿಸಲು ಬ್ರಿಟನ್ನು ಬಹಳ ಪ್ರಯತ್ನಪಡುತ್ತದೆ. ಆದರೆ ಒಂದು ಕಡೆಯವರಿಂದಲೂ ಅದಕ್ಕೆ ಬೇಕಾದ ಸಹಾಯವು ದೊರೆಯುವುದಿಲ್ಲ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು, ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

CANARA BANK, LIMITED.

ESTD: 1906

ಕಾಶ್ಮೀರದ ಮೂರ್ಖ ದಾಳಿಗಾರರು

ಚಿನ್ನ ಹಿತ್ತಾಳೆಗಳ ವ್ಯತ್ಯಾಸ ಬಲ್ಲವರಲ್ಲ

ಕೆಲವು ಅವಿಚಾರದ ವಿನೋದ ಘಟನೆಗಳು

ಗಡಿನಾಡಿನ ಕಡೆಯಿಂದ ಕಾಶ್ಮೀರದ ಪಶ್ಚಿಮ, ದಕ್ಷಿಣ ಭಾಗಗಳ ಮೇಲೆ ಒತ್ತೊತ್ತಿ ಬಂದ ದಾಳಿಗಾರರನ್ನೀಗ ಹಿಂದಕ್ಕೆ ದೂಡಲಾಗಿದೆ. ಓಡಿಹೋಗುವಾಗ ಇವರು ನಿರ್ವಹಿಸಿದ ಅಕೃತ್ಯಗಳು ಚೆಂಗೀಸ್ ಖಾನನನ್ನು ನಾಚಿಸುವಂತಹುಗಳೆನ್ನಲಾಗಿದೆ. ಇದರಂತೆ ಆ ಕಡೆಗಳಲ್ಲಿ ಈ ದಾಳಿಗಾರರು ಕೆಲವೊಂದು ವಿನೋದ ಘಟನೆಗಳ ಮೂಲಕ ತಮ್ಮ ಮೂರ್ಖತನವನ್ನೂ ಪ್ರದರ್ಶಿಸಿದ್ದಾರೆ.

★

ದಾಳಿಗಾರರ ಒಂದು ದೊಡ್ಡ ಕೋರಿಕೆಯೆಂದರೆ ಅವರ ಚಿನ್ನಾಭರಣದ ಆಶೆ. ಕಾಶ್ಮೀರಿಯೊಬ್ಬನನ್ನು ಕಂಡೊಡನೆ ಅವರು ಉಚ್ಚರಿಸುವ ಮೊದಲ ಶಬ್ದಗಳೆಂದರೆ ಜರ್ ಜರ್ ಜಿಯಾದ್ (ನಮಗೆ ಬೆಳ್ಳಿ ಬಂಗಾರ ತಂದುಕೊಡಿರಿ), ಎಂದು. ಹಿಂದೂ ಸಿಖ್ಖರಿಂದ ಚಿನ್ನಾಭರಣವನ್ನು ಗಿಟ್ಟಿಸಲು ಮಾಡಲ್ಪಡುವ ಅದೆಂತಹ ಕ್ರೂರಕೃತ್ಯವಾದರೂ ನೀತಿಯುಕ್ತವೆಂದೆನಿಸುವುದು. ಆದರೆ ಈ ದುರ್ದಶೆ ಮುಸ್ಲಿಮರಿಗಾದರೂ ತಪ್ಪದಲ್ಲ. ಅವರ ಕೋರಿಕೆಗಳನ್ನು ಪೂರೈಸಲು ಸಂಕೋಚಪಟ್ಟರೆ—ಡಂ, ಢಂ, ಡ—ಗುಂಡಿನ ಪೂಜೆ. ಓರ್ವ ವಿವೇಕಿ ಮನುಷ್ಯ ಇಂತಹ ಸಂದರ್ಭದಲ್ಲಿ ಚಾತುರ್ಯದಿಂದ ವರ್ತಿಸಿದ. ದರೋಡೆಖೋರರು ತಮ್ಮ ಮನೆಬಾಗಿಲು ಸಮೀಪಿಸಿದಾಕ್ಷಣವೇ ಅವನು ಬೆಳ್ಳಿ ಬಂಗಾರವನ್ನರ್ಪಿಸಿದ. ಸಂತೃಪ್ತಿಪಟ್ಟು ಅವರು ಅವನಿಗೆ ನೆಕ್ 'ಯತ್ ಕಾಫರ್' (ಪ್ರಾಮಾಣಿಕ ಹಿಂದು) ಎಂದರು.

★

ಹಂಡ್ವಾರಾ ಜಿಲ್ಲೆಯಲ್ಲಿದ್ದ ಓರ್ವ ಹಿಂದೂ ಹಳ್ಳಿಗ ಅವರಿಗಾಗಿ ಉಡಗೊರೆಗಳನ್ನು ಸಿದ್ಧಪಡಿಸಿದ. ಅವನ ಬಳಿಯಿದ್ದ ಹಿತ್ತಾಳೆ ಸಟ್ಟುಗದ ಹಿಡಿಯನ್ನು ಮುರಿದು ಅದನ್ನು ಚಿನ್ನದ ಚಿಕ್ಕ ತುಂಡುಗಳ ಹಾಗೆ ಮಾಡಿಟ್ಟ. ಎಲ್ಲವನ್ನು ಚೆನ್ನಾಗಿ ತಿಕ್ಕಿ ಶುಭ್ರಗೊಳಿಸಿದ. ದಾಳಿಗಾರರು ಬಂದಾಗ ಅವರಿಗದನ್ನು ಅರ್ಪಿಸಿದ. "ಹೆಚ್ಚು ಕೊಡಲು ನನ್ನಲ್ಲೇನೂ ಇಲ್ಲ"ವೆಂದವ ಅರಿಕೆ ಮಾಡಿಕೊಂಡಾಗ ಕ್ಷಮೆಯನ್ನು ಮುಗುಳ್ನಗೆಯಲ್ಲಿ ನಿರೂಪಿಸುತ್ತ ಮೂರ್ಖರು ಹೊರಟುಹೋದರು. ಮತ್ತೆ ಆ ಹಳ್ಳಿಗನಿಗೆ ಯಾವ ತೊಂದರೆಯೂ ಉಂಟಾಗಲಿಲ್ಲ.

ಒಬ್ಬನಿಂದ ಗಂಟು ತುಂಬ ಚಿನ್ನಾಭರಣ ವಸ್ತ್ರ ಒಡವೆಗಳನ್ನು ಪಡೆಕೊಂಡ ದಾಳಿಗಾರರು ಅವನ ಮನೆಯ ಮುಂದುಗಡೆಯಲ್ಲೇ ಕೊಳ್ಳೆಯ ಪಾಲುಮಾಡುವುದಕ್ಕೆ ಕೂತರು. ಎಲ್ಲವೂ ಹಂಚಿಕೊಂಡ ಮೇಲೆ ಒಂದು ಕೈ ಗಡಿಯಾರದ ಕುರಿತು ಸಮಸ್ಯೆಯುತ್ಪನ್ನವಾಯಿತು. ಕಾಲಸೂಚಿ ಯಾರ ವಶದಲ್ಲಿರಬೇಕೆಂಬುದರ ಕುರಿತು ಅವರವರೊಳಗೆ ಕಲಹಕ್ಕಾರಂಭವಾಯಿತು. ಅದರಲ್ಲೊಬ್ಬನಿಗೆ ವಿಚಾರವುದಿಸಿತು. "ಈ ಕಾಫರ ನರಕಕ್ಕೆ ಬೀಳಲಿ. ಅವನ ಈ ಅನಿಷ್ಟ ಸೊತ್ತಿನಿಂದಾಗಿ ಸಾತ್ವಿಕ ಮುಸಲ್ಮಾನರೊಳಗೆ ಕಲಹವೇಳುವಂತಾಯಿತು. ನಾವದನ್ನು ಮುಟ್ಟಿ ಕಲಂಕಿತರಾಗದಿರೋಣ" ವೆಂದನವ. ಎಂತಹ ನೀತಿಸ್ವರೂಪ! ಕೊನೆಗೆ ಬೆಳ್ಳಿ, ಬಂಗಾರ, ಗಡಿಯಾರ ಎಲ್ಲವನ್ನು ಅಲ್ಲೇ ಬಿಟ್ಟು ಅವರು ಕೋಪಾಗ್ರರಾಗಿ ಹೊರಟು ಹೋದರು.

★

ಕಾಫರರಾದವರನ್ನು ನಿರ್ನಾಮಗೊಳಿಸುವುದು ಅವರ ಧರ್ಮಕಾರ್ಯಗಳಲ್ಲೊಂದೆಂದು ಕಲ್ಪಿಸಲ್ಪಟ್ಟಿದೆ. ಅನೇಕ ಹಿಂದುಗಳು ತಾವು ಮುಸಲ್ಮಾನರೆಂದು ನಂಬಿಸಿ ಉಸಿರುಳಿಸಿಕೊಂಡಿರುವರು. ಈ ಗುಡ್ಡಗಾಡು ಜನರ ಧಾರ್ಮಿಕ ಭಾವನೆಯ ನಿದರ್ಶನವೊಂದು ಸ್ವಾರಸ್ಯವಿದೆ.

ಬಾರಾಮುಲ್ಲಾದ ಆಕ್ರಮಣದ ಕಾಲದಲ್ಲಿ ಮತಿಯೊಬ್ಬ ಹಿಂದುವು ತನ್ನ ವರ್ತನೆ ಮತ್ತು ಉಡುಪುಗಳಿಂದ ತಾನು ಮುಸ್ಲಿಮನೆಂದು ರುಜುವಾತುಗೊಳಿಸಬೇಕಾಗಿತ್ತು. ಮುಸಲ್ಮಾನರ ಉಡುಪು ಧರಿಸಿದ ಓರ್ವ ಆಚಾರವಂತ ಹಿಂದೂ ಗೃಹಸ್ಥನು ಪ್ರಜದ ಮೇಲೊಂದು ಕಂಬಳಿ ಹಾಸಿ ಒಂದು ಸ್ತೋತ್ರವನ್ನು ಹಾಡುತ್ತಿದ್ದಾಗ ಓರ್ವ ದಾಳಿಗಾರನಿಂದ ಎದುರಿಸಲ್ಪಟ್ಟ. "ನೀನು ಕಾಫರನೇ?" ಎಂದವ ಪ್ರಶ್ನಿಸಿದ. "ಖಾನ ಸಾಹೇಬ್, ನಾನೊಬ್ಬ ಕಾಫರನಾಗಿದ್ದೆ, ಈಗ ಶೇಖನಾಗಿದ್ದೇನೆ (ಇತ್ತೀಚೆಗೆ ಮತಾಂತರ ಹೊಂದಿದವ)" ಎಂದ ಹಿಂದು. ಅಷ್ಟಕ್ಕೆ ಖಾನ್ ಸಾಹೇಬನ ಎತ್ತಿದ ಕೈ ಹಿಂದಕ್ಕೆ ಸರಿಸಲ್ಪಟ್ಟಿತು. ಆದರೆ ಪರೀಕ್ಷೆ ಅಷ್ಟಕ್ಕೆ ಮುಗಿಯಲಿಲ್ಲ. "ಕಲ್ಮಾ (ಪವಿತ್ರ ವಿಧಾನ)ವನ್ನುಚ್ಚರಿಸು" ಎಂದವ ನಿರ್ದೇಶಿಸಿದ. ಶೀಘ್ರಮತಿಯಾದ ಹಿಂದು ಜಗದೆ ಉತ್ತರಿಸಿತ್ತ "ಖಾನ್ ಸಾಹೇಬ ನಾನದನ್ನು ಮರೆತಿರುವೆನೆಂದು ತಿಳಿಸಲು ಖೇದಪಡುತ್ತೇನೆ. ದಯವಿಟ್ಟು ತಾವೇ ಅದನ್ನು ಉಚ್ಚರಿಸಿದರೆ ನಾನದನ್ನು ಸ್ಮರಿಸಿ ಪುನರುಚ್ಚರಿಸುವೆ" ಖಾನ್ ಸಾಹೇಬ ನಿರುತ್ತರನಾದ. ಆ ಮನುಷ್ಯನನ್ನು ಕಾಫರನೆಂದು ಪರಿಗಣಿಸಬೇಕೊ ಇಲ್ಲವೆ ಶೇಖನೆಂದು ಅವನ ನಿರ್ಧಾರವು ಅನಿಶ್ಚಿತವಾದಾಗ ಹಿಂದೂ ಗೃಹಸ್ಥ ಪುನಃ ಕೇಳಿದ "ಖಾನ್ ಸಾಹೇಬ್, ದಯಮಾಡಿ ನನಗೆ ಕಲ್ಮಾವನ್ನು ಕಲಿಸಿರಿ" "ನಾನೂ ಅದನ್ನು ಮರೆತಿರುವೆ"ನೆಂದು ತಿಳಿಸುತ್ತ ದಾಳಿಗಾರ ಕಾಲ್ಕಿತ್ತ.

★

ಬಾರಾಮುಲ್ಲಾದಲ್ಲಿ ನುಗ್ಗಿದಾಗ ದಾಳಿಗಾರರ ಉಡುಪು ಹರಿದು ಚೂರು ಚೂರಾಗಿತ್ತು. ಅವರ ಕಾಲಿಗೆ ಬೂಟ್ಸುಗಳ ಬದಲಿಗೆ ಹುಲ್ಲಿನ ಹೊದಿಕೆಗಳು ಕಟ್ಟಲ್ಪಟ್ಟಿದ್ದವು. ಬಾರಾಮುಲ್ಲಾದಲ್ಲವರು ಚಪ್ಪಲಿನ ಅಂಗಡಿಗಳನ್ನೇ ಬಂದು ಮಾಡಿದರು. ಲೂಟಿಯಲ್ಲಿ ಒಬ್ಬರಿಗೂ ಸರಿಯಾದ ಬೂಟ್ಸು ಇಲ್ಲವೆ ಮೆಟ್ಟು ಸಿಗಲಿಲ್ಲ. ಒಂದು ಕಾಲಿಗೆ ಕೆಂಪು ಬಣ್ಣದ್ದಾದರೆ ಇನ್ನೊಂದಕ್ಕೆ ಕಪ್ಪು. ಒಂದಕ್ಕೆ ಚಿಕ್ಕದು ಇನ್ನೊಂದಕ್ಕೆ ದೊಡ್ಡದು. ಒಂದು ಕಾಶ್ಮೀರಿ ಚಪ್ಪಲ, ಇನ್ನೊಂದು ಇಂಗ್ಲಿಷ್ ಪಾದರಕ್ಷೆ. ಹೀಗೆ ಅಸಮಾನ ಪಾದರಕ್ಷಾಧಾರಿಗಳಾಗಿ ಸಂಚರಿಸುತ್ತಿದ್ದ ಅವರ ದೃಶ್ಯ ಹಾಸ್ಯಮಯವಾಗಿತ್ತು.

★

ದಾಳಿಗಾರರ ವಿಚಿತ್ರ ಸ್ನೇಹದ ಘಟನೆಗಳಿಗೂ ಕಡಿಮೆಯಿಲ್ಲ. ಬಾರಾಮುಲ್ಲಾದಿಂದ ಆರು ಮೈಲು ದೂರದಲ್ಲೊಂದು ಹಳ್ಳಿ. ಅಲ್ಲಿ ಯಥಾಪ್ರಕಾರ ಕೊಲೆ ಕೊಳ್ಳೆ, ಅನಾಚಾರಗಳ ಕಾರ್ಯಕ್ರಮವಾದ ಮೇಲೆ ಅಲ್ಲಿನ ಜನತೆಯನ್ನು—ಅಬಾಲವೃದ್ಧ ಸ್ತ್ರೀಪುರುಷರನ್ನೆಲ್ಲ—ಬಾರಾಮುಲ್ಲಾದ ಒಂದು ಕೈದಿಶಿಬಿರಕ್ಕೊಯ್ಯಲಾಯಿತು. ಓರ್ವ ಮಹಿಳೆಗೆ ಇಬ್ಬರು ಮಕ್ಕಳಿದ್ದರು. ಐದು ವರ್ಷದ ಬಾಲಕಿಯೋರ್ವಳು ನಡೆದು ಬರುತ್ತಿದ್ದಳು. ಮೂರು ವರ್ಷದ ಮಗುವೊಂದು ತಾಯಿಯ ಹೆಗಲ ಮೇಲೇರಿತ್ತು. ಮಾರ್ಗವು ಬಹಳ ತಿಟ್ಟಾಗಿದ್ದುದರಿಂದ ಮಹಿಳೆ ಬೇಗ ದಣಿದಳು. ಕಾವಲಿದ್ದ ಓರ್ವ ದಾಳಿಗಾರ ಕೇಳಿದ "ನೀನು ದಣಿದಿರುವೆ. ಚಿಂತಿಸಬೇಡ. ನಾನು ಸಹಾಯಮಾಡುವೆ" ಎಂದು ತಿಳಿಸಿ ಆತ ಮಗುವನ್ನು ತನ್ನ ಹೆಗಲ ಮೇಲೆ ತೆಗೆದುಕೊಂಡನಂತೆ!

★

ಒಬ್ಬ ಗುಡ್ಡಗಾಡು ಮುಸ್ಲಿಂ ಓರ್ವ ಹಿಂದು ಬಂಧಿಯಿಂದ ಕಾಲೊತ್ತಿಸಿಕೊಳ್ಳುತ್ತಿದ್ದ. ಹಿಂದುವಿನ ಹಸ್ತಸ್ಪರ್ಶದಿಂದ ಗುರಿಕಾರನಿಗೆ ಅತ್ಯಾನಂದವಾಯಿತು. ಸ್ವಲ್ಪ ಚಳಿಯೂ ಇತ್ತು. ಗುರಿಕಾರನ ಬಳಿ ಒಂದು ಕಂಬಳಿಯಿತ್ತು. ಆದರೆ ತನ್ನ ಸೇವೆಯಿಂದ ತೃಪ್ತಿಗೊಳಿಸಿದ ಹಿಂದೂವಿನ ಬಳಿ ಕಂಬಳಿಯಿರಲಿಲ್ಲ. ಅವನು ಚಳಿಯಿಂದ ನಡುಗುತಿದ್ದ. ಅದೇ ಸಮಯಕ್ಕೆ ಇನ್ನೊಬ್ಬ ಮನುಷ್ಯ ಕಂಬಳಿ ಹೊದ್ದುಕೊಂಡು ಆ ಕಡೆ ಹೋಗುತಿದ್ದ. ಕೂಡಲೇ ಅವನನ್ನು ಗುಂಡು ಹಾರಿಸಿ ಕೊಂದು ಅವನ ಕಂಬಳಿಯನ್ನು ಕಿತ್ತು ಗುರಿಕಾರ ತನ್ನ ಕಾಲೊತ್ತಿದ ಸೇವೆಗೆ ಉಡುಗೊರೆಯಾಗಿ ಕೊಟ್ಟ!

ಇನ್ನೊಂದು ಸಂದರ್ಭದಲ್ಲಿ ದಾಳಿಗಾರರಿಗೂ ಅವರ ಬಳಿಯಿದ್ದ ಹಿಂದೂ ಬಂಧಿಗಳಿಗೂ ವಿಪರೀತ ಚಳಿ ಹತ್ತಿತ್ತು. ತಕ್ಷಣ ಅವರು ಕೆಲವು ಡಬ್ಬಿ ಪೆಟ್ರೋಲುಗಳನ್ನು ಹತ್ತಿರದ ಗುಡಿಸಲುಗಳ ಮೇಲೆ ಸುರಿದು ಬೆಂಕಿ ಹೊತ್ತಿಸಿ ಅತಿಥಿಗಳಾದ ಕಾಫರರಿಗೆ ಚಳಿಕಾಯಿಸಿಕೊಳ್ಳಲು ಆಮಂತ್ರಿಸಿದರಂತೆ.

<u>ವೃತ್ತದ ವೈವಿಧ್ಯ</u>

ಹೆಂಡತಿ ಮಾರಿದ ಲಾಭ

ಸಂಯುಕ್ತ ಪ್ರಾಂತ್ಯದ ಮಥುರಾ ಪಟ್ಟಣವು ಕೃಷ್ಣರಾಧೆಯರ ಲೀಲಾವಿಲಾಸದ ಪೌರಾಣಿಕ ಸ್ಥಳ. ಅಲ್ಲಿ ಓರ್ವ ಸತಿಯಾಟವಾಡಿದ ಸಂಗತಿ ಹೀಗಿದೆ.

ಟೆಕ್ ಬಹದ್ದೂರನೆಂಬಾತನಿಗೆ ಹಣದ ಅಡಚಣೆಯನ್ನು ನೀಗಲೊಂದುಪಾಯ ಹೊಳೆಯಿತು. ಕೈಹಿಡಿದ ಸತಿಯನ್ನು ಅವಿವಾಹಿತಳೆಂದು ಹೇಳಿ ಅಮೀನನೆಂಬಾತನಿಗೆ ಮದುವೆ ಮಾಡಲು ಒಪ್ಪಂದ ಮಾಡಿಕೊಂಡ. ಕರಾರು ಪ್ರಕಾರ ಒಂದು ಸಾವಿರ ರೂಪಾಯಿ ಅವನಿಂದ ಪಡೆದು ಲಗ್ನ ಸಮಾರಂಭ ಜರಗಿಸಿದ. ಕೆಲವೇ ದಿವಸಗಳಲ್ಲಿ ಟೆಕ್ ಬಹದ್ದೂರ ಅಮೀನನ ಮೇಲೆ ಪೋಲೀಸ್ ದೂರು ಕೊಟ್ಟು ತನ್ನ ಹೆಂಡತಿಯನ್ನವ ಅಪಹರಿಸಿರುವನೆಂದು ತಿಳಿಸಿದ. ಪೋಲಿಸರು ಟೆಕ್ ಬಹದ್ದೂರನ ಹೆಂಡತಿಯನ್ನು ಅಮೀನನ ಮನೆಯಿಂದ ಹೊರತಂದರು. ಅವಳೂ ತನ್ನ ಅಪಹರಣವಾದುದು ಹೌದೆಂದಳು. ಆದರೆ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾದಾಗ ಟೆಕ್ಕನ ಕುತಂತ್ರ ಹೊರಬಿತ್ತು. ಒಂದು ವರ್ಷದ ಕಠಿಣ ಸಜೆ ಸಾಹಸಿಗ ಬಹದ್ದೂರನಿಗೆ ವಿಧಿಸಲ್ಪಟ್ಟಿತು.

೩೨ ಮಕ್ಕಳ ತಂದೆ

ಅವನ ಹೆಸರ ಎ. ಟಿ. ಡ್ಯೂಪಜ್ ವಯಸ್ಸು 68. ಒಂದು ದಿನ ಈತ ನ್ಯೂಯೋರ್ಕಿನ ಮಾರ್ಗದಲ್ಲಿ ಸಂತೋಷದಲ್ಲಿ ಓರ್ವ ಬಾಲಕನ ಸೈಕಲಿನಲ್ಲಿ ಕೂತು ವಿನೋದ ಸಂಚಾರ ಮಾಡುತಿದ್ದ. ಕಾರಣ ವಿಚಾರಿಸಿದಾಗ ಆಗಲೇ ಅವನ ನಾಲ್ಕನೇ ಹೆಂಡತಿಯು ಮೂರು ಗಂಡು ಮಕ್ಕಳನ್ನು ಹೆತ್ತಿರುವಳೆಂದೂ, ಅದು ಸಮೇತ ತನಗೆ ೩೨ ಮಕ್ಕಳಾದುದಕ್ಕೆ ಅವನನ್ನು ಇಷ್ಟು ಸಂತೋಷದಲ್ಲಿ ತೇಲಾಡಿಸಿತೆಂದೂ ತಿಳಿದುಬಂತು.

ಡ್ಯೂಪೆಜನಿಗೆ ಮೊದಲ ಹೆಂಡತಿಯಿಂದ 4 ಅವಳಿ ಜವಳಿ ಮಕ್ಕಳು (ಒಟ್ಟು ಎಂಟು) ಪ್ರಾಪ್ತವಾದುವು. ಅವನ ಎರಡನೇ ಮತ್ತು ಮೂರನೇ ಹೆಂಡತಿಯರು ಅವನಿಗೆ ೨೧ ಮಕ್ಕಳನ್ನು ಕೊಟ್ಟು ಪರಂಧಾಮಕ್ಕೆಯ್ದಿದ್ದರು. ಇವುಗಳಲ್ಲಿಯೂ ಕೆಲವು ಅವಳಿ ಜವಳಿಗಳಿದ್ದವು.

ಟಿಕೇಟಿಲ್ಲದ್ದಕ್ಕೆ ಕಿವಿಹಿಡಿತ

ಹೌರಾದ ಜಿಲ್ಲಾ ಮೆಜಿಸ್ಟ್ರೇಟರು ಸ್ಥಳೀಯ ರೈಲಿನಲ್ಲಿ ಪ್ರಯಾಣ ಮಾಡುತಿದ್ದಾಗ ಅವರ ಫಸ್ಟ್ ಕ್ಲಾಸಿನಲ್ಲಿ ಟಿಕೇಟಿಲ್ಲದ ತರುಣರು ಕೆಲವರಿದ್ದರು. ಕೆಲವರು ಮೂರನೆ ತರಗತಿ ಟಿಕೇಟ್ ಪಡೆದು ಒಂದನೇ ತರಗತಿಯ ಸುಖವನ್ನನುಭವಿಸುತಿದ್ದರು. ಮುಂದಿನ ನಿಲ್ದಾಣದಲ್ಲಿ ಮೆಜಿಸ್ಟ್ರೇಟರು ರೈಲು ನಿಲ್ಲಿಸಿ ಆ ತರುಣರನ್ನು ಕೆಳಗಿಳಿಸಿ "ನಾಡು ಸ್ವತಂತ್ರವಾಯಿತೆಂದರೆ ಹೀಗೆ ಸರಕಾರದ ರೈಲು ಖಾತೆಗೆ ಮೋಸ ಮಾಡುವುದು ದೇಶದ್ರೋಹವಾಗುವುದೆಂದು ಉಪದೇಶಿಸಿ ಅವರಿಗೆ ಕಿವಿಹಿಡಿದು ಕೂತೇಳುವ ಶಿಕ್ಷೆ ವಿಧಿಸಿದರು.

ಹಾವು ಕಚ್ಚಲ್ಪಟ್ಟಿತು—ಮಗುವಿನಿಂದ

ವಿಷದ ಹಾವು ಕಚ್ಚಿದರೆ ಅದನ್ನು ತಿರುಗಿ ಕಚ್ಚುವುದರಿಂದ ವಿಷ ಇಳಿಯುವುದೆಂದು ನಮ್ಮಲ್ಲೊಂದು ಕಲ್ಪನೆಯಿದೆ. ಆದರೆ ಆಸ್ಟ್ರೇಲಿಯದ ಲಿಸ್ಮೋರ್ ಪಟ್ಟಣದಲ್ಲಿ ಎರಡು ವರ್ಷದ ಮೇರಿಟ್ಯೂಲರ್ ಎಂಬ ಹೆಣ್ಣು ಮಗು 2½ ಅಡಿ ಉದ್ದದ ಹಾವೊಂದನ್ನು ಕೈಯಲ್ಲಿ ಹಿಡಿದು ಕಚ್ಚಿಬಿಟ್ಟಿತು. ತೋಟದಲ್ಲಿ ಹಾವಿನೊಡನಾಟವಾಡುವ ಮಗುವನ್ನು ಆಕಸ್ಮಾತ್ತಾಗಿ ನೋಡಿದ ತಾಯಿ ಓಡಿಬಂದು ಹಾವನ್ನು ಕೈಯಿಂದ ಹಾರಿಸಿ ಒಂದು ಬಡಿಗೆಯಿಂದ ಅದನ್ನು ಕೊಂದಳು. ತಾಯಿಯ ಆವೇಶಕ್ಕೆ ಗಾಬರಿಯಾದ ಮಗು ಮಾತ್ರ ಅಳಹತ್ತಿತು.

ಸಿಂಗಾಪುರದ ಸೋಡ್ತಿ ರಾಜ

ಸಿಂಗಾಪುರದಲ್ಲಿ ಗುಪ್ತ ಸೋಡ್ತಿಯೊಂದು ದಿನಂಪ್ರತಿ ನಡೆಯುತ್ತದೆ. ಸಾವಿರಾರು ನಾಗರೀಕರು ಅದರ ಟಿಕೇಟುಗಳನ್ನು ತೆಗೆದುಕೊಳ್ಳುತ್ತಾರೆ. ಸೋಡ್ತಿಯು ಒಂದು ತರದ ಜೂಗಾರಿಯಿರುವುದರಿಂದ ಅದು ನ್ಯಾಯಬಾಹಿರವಾದುದು. ಆದರೆ ಕೆಲ ಪುಂಡರ ಗುಪ್ತ ಕೂಟವೊಂದು ಈ ಸೋಡ್ತಿಯನ್ನು ಜರಗಿಸಿ ಸಣ್ಣಪುಟ್ಟ ಬಹುಮಾನಗಳನ್ನು ಕೆಲವು ಗಣನೀಯ ನಾಗರಿಕರಿಗೆ ದೊರಕುವಂತೆ ಮಾಡಿ ಇತರರನ್ನು ಟಿಕೇಟು ಕೊಳ್ಳಲು ಪ್ರೋತ್ಸಾಹಿಸುತಿದ್ದರು. ಈಗ ಈ ಕೂಟದ 'ಅರಸ'ನೆಂದೆನಿಸುವ ಚೆವ್ ಚಿಕಿ ಎಂಬ ಚೀನಿಯನನ್ನು ಕೈದು ಮಾಡಿದ್ದಾರೆ. ಪ್ರಥಮ ಬಹುಮಾನಗಳೆಲ್ಲ ಇವನಿಗೆ ದೊರೆಯುತಿದ್ದುವು.

ಸ್ವದೇಶಾಭಿಮಾನಿ

ತಾರೀಕು 23—7—1948

ಮಂಗಳೂರು ಬಂದರ ಬೆಳವಣಿಗೆ

ಪಶ್ಚಿಮಕರಾವಳಿಯಲ್ಲಿ ಮರ್ಮಗೋವೆ ಮತ್ತು ಕೊಚ್ಚಿ ಬಂದರಗಳ ನಡುವೆ ದೊಡ್ಡ ಬಂದರವೊಂದನ್ನು ಏರ್ಪಡಿಸುವ ಪ್ರಶ್ನೆ ಈಗ ಪರಿಶೀಲಿಸಲ್ಪಡುತ್ತಿದೆಯಷ್ಟೆ. ಈ ಬಗ್ಗೆ ಭಾರತ ಸರಕಾರದಿಂದ ನೇಮಿಸಲ್ಪಟ್ಟಿರುವ ಕಮಿಟಿಯು ಇದೇ ತಾ. 14ರಲ್ಲಿ ಬೆಂಗಳೂರಲ್ಲಿ ಸೇರಿದಾಗ ಮಂಗಳೂರು, ಮಲ್ಪೆ ಹಾಗೂ ಭಟ್ಕಳಗಳ ಪರವಾಗಿ ಆಯಾ ಸ್ಥಳೀಕ ಜನರು ತಮ್ಮ ತಮ್ಮ ತರ್ಕಗಳನ್ನು ಕಮಿಟಿಯ ಮುಂದಿರಿಸಿದರು. ಕಮಿಟಿಯು ಪುನಃ ಇದೇ ತಿಂಗಳ ತಾ. 27 ರಷ್ಟಕ್ಕೆ ಪ್ರಾಯಶಃ ಬೊಂಬಾಯಿಯಲ್ಲಿ ಸಭೆ ಸೇರಿ ಈ ಪ್ರಶ್ನೆಯ ಕುರಿತು ತಮ್ಮ ಅಭಿಪ್ರಾಯವನ್ನು ನಿರ್ಧರಿಸಿ ಭಾರತ ಸರಕಾರಕ್ಕೆ ವರದಿಯೊಪ್ಪಿಸಲಿದೆಯಾಗಿ ತಿಳಿದು ಬರುತ್ತದೆ.

ಮೈಸೂರು ಸರಕಾರದವರು ಭಟ್ಕಳವನ್ನೇ ದೊಡ್ಡ ಬಂದರನ್ನಾಗಿ ಮಾಡಬೇಕೆಂದು ಒತ್ತಾಯ ಮಾಡುತ್ತಿದೆ. ಇದಕ್ಕೆ ಅವರು ಕೊಡುವ ಕಾರಣಗಳೆಂದರೆ ಮೈಸೂರು ಸರಕಾರದವರು ಶಿವಮೊಗ್ಗ ಜಿಲ್ಲೆಯನ್ನು ತಮ್ಮ ಕೈಗಾರಿಕೆಗಳ ಒಂದು ಕೇಂದ್ರವನ್ನಾಗಿ ಆರಿಸಿರುವರು. ಇಲ್ಲಿ ದೊಡ್ಡ-ದೊಡ್ಡ ಯೋಜನೆಗಳನ್ನು ಜಾರಿಗೆ ತರಲಿರುವರು. ಶಿವಮೊಗ್ಗ ಭದ್ರಾವತಿ ಹಾಗೂ ಜೋಗದ ಜಲಪ್ರಪಾತ—ಈ ಪ್ರದೇಶವು ಮೈಸೂರಿನ ದೊಡ್ಡ ಕೈಗಾರಿಕೆಗಳ ಮುಖ್ಯ ಕೇಂದ್ರವಾಗುವುದು. ಇದಕ್ಕೆ ಭಟ್ಕಳವು ಅತ್ಯಂತ ಸಮೀಪದ ಬಂದರು ಇರುತ್ತದೆ. ತಲಗುಪ್ಪೆಯಿಂದ 45 ಮೈಲು ರೈಲು ದಾರಿ ಮಾಡಿದರೆ ಸಾಕಾಗುತ್ತದೆ. ಇದೇ ಇವರ ಮುಖ್ಯ ತರ್ಕವಿರುತ್ತದೆ.

ಮಂಗಳೂರಿನಿಂದ ಶಿವಮೊಗ್ಗಕ್ಕೆ ರೈಲು ದಾರಿ ಮಾಡುವುದರಲ್ಲಿ ತೊಂದರೆಯೇನೂ ಇಲ್ಲ. ಹುಲಿಕಲ್ ಕಣಿವೆಯ ಮೂಲಕ ಈ ದಾರಿ ಏರ್ಪಡಿಸಬಹುದು. ಇದರ ಉದ್ದ ಮಾತ್ರ 120 ಮೈಲುಗಳಾಗುತ್ತದೆ. 45 ಮೈಲುಗಳ ಬದಲು 120 ಮೈಲು ರೈಲು ದಾರಿ ಮಾಡಲು ತಗಲುವ ಖರ್ಚು ಮಾತ್ರವಲ್ಲ ಮುಂದೆ ಪ್ರತಿ ಮಾಲನ್ನು 45 ಮೈಲು ದೂರಕ್ಕೆ ಸಾಗಿಸುವ ಬದಲು 120 ಮೈಲು ದೂರ ಸಾಗಿಸುವುದು ಹೆಚ್ಚಿನ ಅನಾನುಕೂಲವೆಂಬ ತರ್ಕದಲ್ಲಿ ಸತ್ಯಾಂಶವಿರುತ್ತದೆ.

ಆದರೆ ಮಂಗಳೂರು ಹುಲಿಕಲ್ ಶಿವಮೊಗ್ಗ ರೈಲು ದಾರಿಯಾದರೆ ಮಲೆನಾಡಿನ ಅಭಿವೃದ್ಧಿಗೆ ಎಷ್ಟು ಅನುಕೂಲವಿದೆಯೆಂಬುದನ್ನು ಮೈಸೂರಿನವರು ಯೋಚಿಸಬೇಕು. ಜೊತೆಯಲ್ಲಿ ಮಂಗಳೂರು ಹಾಸನ ರೈಲನ್ನು ಏರ್ಪಡಿಸಿ ಬೆಂಗಳೂರಿಗೆ ಸಂಬಂಧವೇರ್ಪಡಿಸಿದರೆ ಇಡೀ ಮಲೆನಾಡು ಅಭಿವೃದ್ಧಿ ಹೊಂದುತ್ತದೆ. ಶಿವಮೊಗ್ಗ ಭದ್ರಾವತೀ ಪ್ರದೇಶಗಳಿಗೂ ಬಹಳ ತೊಂದರೆಯಿಲ್ಲ. ಮಂಗಳೂರು ಹಾಸನ ರೈಲಿಗೆ ಸಕಲೇಶಪುರದಿಂದ ಕೊಡಗಿಗೆ ಒಂದು ದಾರಿ ಜೋಡಿಸಿದರೆ ಇಡೀ ಕೊಡಗಿಗೂ ಉಪಕಾರವಿರುತ್ತದೆ. ಹೀಗೆ ಮೈಸೂರಿನ ಮಲೆನಾಡ ದೃಷ್ಟಿಯಿಂದ, ಕೊಡಗಿನ ದೃಷ್ಟಿಯಿಂದ ಅಖಿಲ ಕರ್ನಾಟಕದ ದೃಷ್ಟಿಯಿಂದ ಮಂಗಳೂರನ್ನ ಆರಿಸುವುದೇ ಹೆಚ್ಚು ಶ್ರೇಯಸ್ಕರವಿರುತ್ತದೆಂಬುದನ್ನು ಮೈಸೂರವರು ಕೂಡಾ ಒಪ್ಪಲೇಬೇಕು.

ಭಾರತ ರಾಷ್ಟ್ರದ ದೃಷ್ಟಿಯಿಂದ ಕೂಡಾ ಈ ಪ್ರಶ್ನೆಯನ್ನು ಪರಿಶೀಲಿಸಬೇಕು. ದೊಡ್ಡ ಬಂದರೆಂದರೆ ಕೇವಲ ವ್ಯಾಪಾರ ಸೌಕರ್ಯಕ್ಕಾಗಿ ಮಾತ್ರ ಇರುವುದಲ್ಲ. ಇದು ನೌಕಾ ಕೇಂದ್ರವೂ ಆಗುವುದು. ಜೊತೆಯಲ್ಲಿ ಇಲ್ಲಿ ಸೈನ್ಯ ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳೂ ಇರಬೇಕಾಗುವುದು. ಇಂಥ ಕೇಂದ್ರವು ಭಾರತದ ಸೈನ್ಯ ಹಾಗೂ ಯುದ್ಧ ಸಾಮಗ್ರಿಗಳನ್ನು ಯಾವ ಅಡಚಣೆ ಇಲ್ಲದೆ ಕೂಡಲೆ ಸಾಗಿಸಲು ಅನುಕೂಲವಿದ್ದ ಸ್ಥಳದಲ್ಲೆ ಇರಬೇಕೆಂಬುದು ಸ್ಪಷ್ಟವಿರುತ್ತದೆ.

ಭಾರವಾದ ಯುದ್ಧ ಸಾಮಗ್ರಿಗಳನ್ನು ಒಯ್ಯಲು ಬ್ರೊಡ್‌ಗೇಜ್ ರೈಲುದಾರಿ ಅಗತ್ಯ. ತಲಗುಪ್ಪೆಯಿಂದ ಭಟ್ಕಳಕ್ಕೆ ಹಾಕುವ ರೈಲು ಮೀಟರ್ ಗೇಜ್ ಮಾತ್ರ ಆಗಬಲ್ಲುದು. ಮಂಗಳೂರು ಹಾಸನ್ ರೈಲು ಬ್ರೊಡ್‌ಗೇಜ್ ಆಗುವುದು. ಇದಕ್ಕೆ ಬೆಂಗಳೂರ ಸಂಬಂಧವೂ ದೊರೆಯುವುದರಿಂದ ಬೆಂಗಳೂರಿಂದ ಪೂರ್ವಕ್ಕೆ ಮದ್ರಾಸಿಗೂ ಪಶ್ಚಿಮಕ್ಕೆ ಮಂಗಳೂರಿಗೂ ಮಾಲುಗಳನ್ನಾಗಲಿ ಸೈನ್ಯ ಸಾಮಗ್ರಿಗಳನ್ನಾಗಲಿ ಕ್ಷಣದೊಳಗೆ ಸಾಗಿಸಲು ಅನುಕೂಲವಾಗುವುದು. ಬ್ರೊಡ್‌ಗೇಜ್ ರೈಲಿನಿಂದ ಉತ್ತರ ಹಿಂದುಸ್ಥಾನದ ಸಂಬಂಧ ಕಲ್ಪಿಸಲು ಬಹಳ ಅನುಕೂಲವಾಗುತ್ತದೆ.

ಇಂಥ ಅನುಕೂಲ ಇರುವ ಮಂಗಳೂರನ್ನು ಬಿಟ್ಟು ಮೈಸೂರವರು ಭಟ್ಕಳವೇ ಆಗಬೇಕೆಂದು ಆಗ್ರಹ ಕಟ್ಟಿಕೊಳ್ಳುವುದಾದರೂ ಏತಕ್ಕೆ? ಭಟ್ಕಳವಾದರೆ ಮೈಸೂರವರಿಗೆ ಮಾತ್ರ ಉಪಯುಕ್ತವಾಗಬಲ್ಲುದು. ಇದು ತಮ್ಮದೇ ಒಂದು ಬಂದರೆಂದಾಗುವುದೆಂಬ ಸಂಕುಚಿತ ದೃಷ್ಟಿಯ ಅಭಿಮಾನವೆ? ಮಹಾ ಕರ್ನಾಟಕ ಸ್ಥಾಪನೆಯ ಈಗಿನ ದಿನಗಳಲ್ಲಿ ಇಂಥ ಸಂಕುಚಿತ ಭಾವನೆ ಕಟ್ಟಿಕೊಳ್ಳುವುದು ಯೋಗ್ಯವೆ? ಇದಕ್ಕೆ ಭಾರತ ಸರಕಾರ ಪ್ರೋತ್ಸಾಹ ಕೊಡಬಹುದೆ?

ಕಮಿಟಿಯವರು ಪ್ರಾಯಶಃ ಭಟ್ಕಳವನ್ನೇ ಆರಿಸುವ ಸಂಭವವಿದೆಯಾಗಿ ಊಹಿಸಲಾಗುತ್ತಿದೆ. ಮಂಗಳೂರಲ್ಲಿ ವರ್ಷವಿಡೀ ಹಡಗುಗಳು ಒಂದು ಬಂದರದ ಸಮೀಪ ನಿಲ್ಲುವಷ್ಟರ ಏರ್ಪಾಡು ಮಾಡಲು ಶಿಫಾರಸು ಮಾಡುವರೆಂದು ಕೇಳಿ ಬರುತ್ತದೆ. ಮಂಗಳೂರವರ ಮಟ್ಟಿಗೆ ಇಷ್ಟಾದರೆ ತೃಪ್ತಿಯೇ ಇದೆ. ಆದರೆ ಅಖಿಲ ಕರ್ನಾಟಕ ಹಾಗೂ ಭಾರತ ರಾಷ್ಟ್ರದ ಹಿತದ ದೃಷ್ಟಿಯಿಂದ ಹಾಗೂ ಮೈಸೂರು ಮಲೆನಾಡಿನ ಹಾಗೂ ಕೊಡಗಿನ ದೃಷ್ಟಿಯಿಂದ ಮಂಗಳೂರನ್ನೇ ಆರಿಸಬೇಕಾಗಿಯೂ ಮಂಗಳೂರಿನ ಪರವಾಗಿ ಮೈಸೂರಿನವರೇ ವಾದಿಸಬೇಕಾಗಿಯೂ ಕೇಳಿಕೊಳ್ಳಬೇಕಾಗಿದೆ.

ಟೀಕೆ-ಟಿಪ್ಪಣಿಗಳು

ಪೆಲೆಸ್ಟೈನಿಗೆ ಸಂಯುಕ್ತರಾಷ್ಟ್ರ ಸಭೆಯ ಆಜ್ಞೆ

ಯುದ್ಧವನ್ನು ಮೂರು ದಿನಗಳ ಒಳಗೆ ಇತ್ತಂಡದವರೂ ನಿಲ್ಲಿಸಬೇಕೆಂದೂ ಇಲ್ಲವಾದರೆ ಸಂಯುಕ್ತರಾಷ್ಟ್ರಗಳ ಪರವಾಗಿ ವಿವಿಧ ಬಲಾತ್ಕಾರ ಪ್ರಯೋಗ ಮಾಡಲಾಗುವುದೆಂದೂ ಸಂಯುಕ್ತರಾಷ್ಟ್ರಗಳ ಸಭೆಯವರು ಆಜ್ಞೆ ಕೊಟ್ಟಿರುತ್ತಾರೆ. ಇದನ್ನು ಅಮೇರಿಕದವರು ಮುಂದೆ ತಂದು ರಶ್ಯದವರ ಬೆಂಬಲದಿಂದ ಮಂಜೂರು ಮಾಡಲಾಗಿದೆ. ಅರಬರು ಯುದ್ಧ ನಿಲ್ಲಿಸಿಲ್ಲವಾದರೂ ನಿಲ್ಲಿಸದೆ ನಿವೃತ್ತಿ ಇಲ್ಲವೆಂಬುದು ಸ್ಪಷ್ಟವಿರುತ್ತದೆ. ಮುಂದಿನ ವ್ಯವಸ್ಥೆ ಹೇಗೆ ಮಾಡುವರೆಂಬುದನ್ನು ನೋಡಲಿಕ್ಕಿದೆ.

ದಕ್ಷಿಣ ಆಫ್ರಿಕೆದ ಕುರಿತು ಸಂಯುಕ್ತರಾಷ್ಟ್ರ ಸಭೆಯ ಮುಂದೆ ದೂರು

ಭಾರತ ಸರ್ಕಾರವು ದಕ್ಷಿಣ ಆಫ್ರಿಕದಲ್ಲಿ ಹಿಂದೀಯರನ್ನು ನಡೆಸುವ ಕ್ರಾಪ್ಸಿಡೆಗಳ ಕುರಿತು ಸಂಯುಕ್ತರಾಷ್ಟ್ರ ಸಭೆಯ ಮುಂದೆ ಹಿಂದೆ ಎರಡು ಬಾರಿ ಪ್ರಶ್ನೆ ಎತ್ತಿತ್ತು. ಮೊದಲಬಾರಿ ವಿಜಯಲಕ್ಷ್ಮಿ ಪಂಡಿತರಿಗೆ ಆ ಸಭೆಯಲ್ಲಿ ವಿಜಯವಾದರೂ ಜನರ್ ಸ್ಮಟ್ಸರು ಮಾತ್ರ ಸಂಯುಕ್ತರಾಷ್ಟ್ರ ಸಭೆಯ ನಿರ್ಣಯಕ್ಕೆ ಮನ್ನಣೆ ಕೊಡಲಿಲ್ಲ. ಎರಡನೆಯ ಬಾರಿ ಸಂಯುಕ್ತರಾಷ್ಟ್ರ ಸಭೆಯೇ ಸ್ಮಟ್ಸರ ಕಡೆಗೆ ಒಲಿಯಿತು. ಈಗ ಮೂರನೆ ಬಾರಿ ಭಾರತ ಸರಕಾರವು ಈ ಪ್ರಶ್ನೆಯ ಕುರಿತು ಸಂಯುಕ್ತರಾಷ್ಟ್ರ ಸಭೆಗೆ ದೂರು ಕೊಟ್ಟಿರುತ್ತದೆ. ಈಗ ದಕ್ಷಿಣ ಆಫ್ರಿಕದ ಸರಕಾರ ಜನರಲ್ ಸ್ಮಟ್ಸರ ಕೈಯಲಿಲ್ಲ. ಡಾ॥ ಮಲಾನರು ಇನ್ನು ಹಿಂದೀಯರ ದೃಷ್ಟಿಯಿಂದ ಕಡು ಸ್ವಭಾವದವರು. ಈ ಬಾರಿಯ ದೂರಿನ ಪರಿಣಾಮವೇನಾಗುವುದೆಂದು ಊಹಿಸಲು ಕಷ್ಟವಿಲ್ಲ.

ಹೈದರಾಬಾದು ಮತ್ತು ಪ್ರೊಫೆಸರ್ ಭನ್ಸಾಲಿಯವರು

ಭನ್ಸಾಲಿಯವರನ್ನು ತಮ್ಮ ಸಂಸ್ಥಾನದಿಂದ ಹೊರಗೆ ಹೋಗಲು ಆಜ್ಞೆ ಕೊಟ್ಟದ್ದೇ ಇಲ್ಲವೆಂದೂ ಅವರು ತಾನಾಗಿ ಹೋದರೆಂದೂ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯುತ್ತಿದೆಯೆಂಬ ಆರೋಪ ವಿಚಾರಿಸಿದಲ್ಲಿ ಪೂರ್ಣ ಅಸತ್ಯವೆಂದೂ ಹೈದರಾಬಾದು ಸರಕಾರವು ಪ್ರಚಾರ ಪ್ರಕಟನೆ ಹೊರಡಿಸಿತು. ಇದು ಶುದ್ಧ ಸುಳ್ಳುಗಳ ಕಂತೆಯೆಂದು ಭನ್ಸಾಲಿಯವರು ತಿಳಿಸುತ್ತಾರೆ. ಸ್ತ್ರೀಯರ ಮೇಲೆ ಅತ್ಯಾಚಾರಗಳು ನಡೆಯುವುದು ಖಂಡಿತವೆಂದೂ ಇವರು ಪ್ರಕಟಿಸಿದ್ದಾರೆ. ಇವರ ಉಪವಾಸವನ್ನು ಮುಂದರಿಯುತ್ತಿದೆ. ಸರ್ದಾರ್ ಪಟೇಲರು ಉಪವಾಸ ನಿಲ್ಲಿಸುವಂತೆ ಕೇಳಿದರೂ ಇವರು ಒಪ್ಪಲಿಲ್ಲವೆಂದು ತಿಳಿದುಬರುತ್ತದೆ.

ಹೈದರಾಬಾದಿಗೆ ಪಟೇಲರ ಎಚ್ಚರಿಕೆ

ಪೂರ್ವ ಪಂಜಾಬ ರಾಷ್ಟ್ರಗಳ ಸಂಘದ ಆರಂಭ ಸಮಾರಂಭ ಜರಗಿಸುತ್ತ ಸರ್ದಾರ್ ಪಟೇಲರು ಹೈದರಾಬಾದಿನ ಪ್ರಶ್ನೆ ಎತ್ತಿದರು. ಲಾರ್ಡ ಮೌಂಟಬೇಟನರು ಹೈದರಾಬಾದಿಗೆ ಕೊಟ್ಟ ಅನುಕೂಲ ಶರ್ತಗಳೆಲ್ಲ ಮೌಂಟಬೇಟನರೊಡನೆಯೇ ಹೋದುವೆಂದೂ ಈಗ ಹೈದರಾಬಾದು ಭಾರತ ಸರಕಾರದ ಆಶ್ರಯವನ್ನು ಇತರ ಸಂಸ್ಥಾನಗಳಂತೆಯೆ [illegible]ಪಡೆಯತಕ್ಕದ್ದೆಂದೂ ನೈಜಾಮರು ಹೊರಗಿನವರ ಸಹಾಯ ನಂಬಿ ಹಟ ತೊಟ್ಟರೆ ಜುನಾಗಡ ನವಾಬರ ಗತಿಯೇ ಇವರಿಗೂ ಪ್ರಾಪ್ತವಾಗಲಿದೆಯೆಂದೂ ಕಂಠೋಕ್ತವಾಗಿ ಹೇಳಿದರು.

ಹೈದರಾಬಾದಿನ ಗಡಿ ಪ್ರಾಂತ್ಯಗಳ ಮುಖ್ಯ ಮಂತ್ರಿಯವರನ್ನು ಸರ್ದಾರ್ ಪಟೇಲರು ತಮ್ಮನ್ನು ಕಾಣಲು ಬರಮಾಡಿಕೊಂಡಿರುತ್ತಾರೆ.

ವಜಿರಿಸ್ಥಾನ ಗಲಾಟೆಯ ಕುರಿತು ಬ್ರಿಟಿಷ್ ಪತ್ರಿಕೆಗಳ ಹೇಳಿಕೆ

ವಜೀರಿಸ್ಥಾನದಲ್ಲಿ ಪಾಕಿಸ್ಥಾನ ವಿರುದ್ಧ ನಡೆದ ಗಲಾಟೆಯನ್ನು ವಿವರಿಸಿ ಇಪೀ ಫಕೀರ ಮೊದಲಾದ ಅಲ್ಲಿಯ ಮುಖಂಡರಿಗೆ ರಶ್ಯಾದವರು ಅಫಘಾನಿಸ್ಥಾನದ ಮೂಲಕ ಹಣ ಕೊಟ್ಟು ಈ ದಂಗೆ ಎಬ್ಬಿಸಿದ್ದೆಂದು ಬ್ರಿಟಿಷ್ ಪತ್ರಿಕೆಗಳು ಪ್ರಕಟಿಸಿರುತ್ತವೆ. ಅಫಘಾನಿಸ್ಥಾನ ಸರಕಾರಕ್ಕೂ ರಶ್ಯಕ್ಕೂ ಬಹಳ ಮೈತ್ರಿ ಇದೆಯಂತೆ ರಶ್ಯದ ರಾಯಭಾರಿಗಳನ್ನು ಪಾಕಿಸ್ಥಾನದೊಳಗೂ ಇಡಲು ಅವರು ಪ್ರಯತ್ನಿಸಿದರೂ ಈ ಕುರಿತು ಪಾಕಿಸ್ಥಾನದವರು ಒಪ್ಪಿಗೆಕೊಟ್ಟಿಲ್ಲವಂತೆ. ಅಂತೂ ಕೆಲವು ಪಾಶ್ಚಾತ್ಯರಿಗೆ ಎಲ್ಲಿ ಏನೂ ನಡೆದರೂ ಅದರಲ್ಲಿ ರಶ್ಯದ ಕೈವಾಡ ಕಾಣುತ್ತದೆಂಬುದು ಆಶ್ಚರ್ಯ.

ಬರ್ಲಿನ್ ಪ್ರಕರಣ

ಬರ್ಲಿನಿಗೆ ಬರುವ ದಾರಿಗಳನ್ನು ಮುಚ್ಚಿದ್ದನ್ನು ರಶ್ಯದವರು ಇನ್ನು ತೆರೆದಿಲ್ಲ. ಬಲಾತ್ಕಾರದಿಂದ ನುಗ್ಗೋಣವೆಂದು ಅಮೇರಿಕದವರು ಸಲಹೆ ಕೊಡುತ್ತಿದ್ದರಂತೆ. ಅಂತೂ ಈಗ ವಿಮಾನಗಳ ಮೂಲಕ ಮಾಲನ್ನು ಸಾಗಿಸುತ್ತಿದ್ದಾರೆ. ಇವರ ವಿಮಾನಗಳು ಹಾರುವಲ್ಲಿಯೇ ರಶ್ಯದವರು ವಿಮಾನ ಹೊಡೆಯುವ ಗುಂಡುಗಳನ್ನು ಹಾರಿಸುವ ಅಭ್ಯಾಸ ಹಾಗೂ ಅವರ ಯುದ್ಧ ವಿಮಾನಗಳನ್ನು ಹಾರಿಸುವ ಅಭ್ಯಾಸ ಆರಂಭಿಸಲಿಕ್ಕಿದ್ದಾರೆಂದು ರಶ್ಯದವರು ಸುದ್ದಿ ಹರಡಿಸಿದ್ದಾರೆ. ರಶ್ಯದವರು ಇದನ್ನು ಕಾರ್ಯತಃ ಮಾಡಲಿಕ್ಕಿಲ್ಲವಾದರೂ ಪಾಶ್ಚಾತ್ಯ ರಾಷ್ಟ್ರಗಳನ್ನು ಉದ್ರೇಕಿಸುವುದೇ ಅವರಿಗೊಂದು ಆಟದಂತಾಗಿದೆಯೆಂದು ಕಾಣುತ್ತದೆ. ಸದ್ಯದಲ್ಲಿ ಮಹಾಯುದ್ಧವಾಗುವಂತಿಲ್ಲವೆಂದು ರಶ್ಯದವರು ಬರ್ಲಿನ್ ಪ್ರಜೆಗಳಿಗೆ ಸಮಾಧಾನ ಹೇಳಿದ್ದಾರೆಂಬ ವಾರ್ತೆ ತೃಪ್ತಿಕರವಿರುತ್ತದೆ.

ದಿವಂಗತ
ಅಮ್ಮೆಂಬಳ ಶ್ರೀನಿವಾಸ ಪೈಯವರು

ಅಮ್ಮೆಂಬಳ ಶ್ರೀನಿವಾಸ ಪೈಯವರು ಇದೇ ತಾ. ೨೦-೭-೪೮ನೇ ರಾತ್ರೆ ಗಂಟೆ ೮ಕ್ಕೆ ತಮ್ಮ ಮಂಗಳೂರ ನಿವಾಸದಲ್ಲಿ ನಿಧನಹೊಂದಿದರು.

ತಾ. ೨೧ನೇ ದಿನ ದಿವಂಗತರ ನಿಧನದ ಬಗ್ಗೆ ಮಂಗಳೂರಿನ ಬಂದರವಿದೀ ಮುಚ್ಚಲಾಗಿತ್ತು. ಕೆನರಾ ಹೈಸ್ಕೂಲ್ ಹಾಗೂ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಹೈಸ್ಕೂಲುಗಳಿಗೆ ರಜೆಕೊಡಲಾಯಿತು. ಕೆನರಾ ಹೈಸ್ಕೂಲಿನಲ್ಲಿ ಸಾಯಂಕಾಲ ಸಂತಾಪ ಸೂಚಕ ಸಭೆಯೊಂದು ಜರಗಿಸಲ್ಪಟ್ಟಿತು.

ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಶ್ರೀ ಜಿ. ಸೋಮಶೇಖರರಾಯರು ಈ ವಾರ್ತೆಯನ್ನು ತಿಳಿಸಿ ದಿವಂಗತ ಶ್ರೀನಿವಾಸಪೈಯವರ ಗುಣಕಥನ ಮಾಡಿದರು. ಜಿಲ್ಲಾ ಜಡ್ಜರಾದ ಕೃಷ್ಣಮೂಸೆಯವರೂ ಪೈಯವರ ವಿಚಾರ ಕೇಳಿ ತನಗೆ ಪೂರ್ಣ ಗೊತ್ತಿದೆಯೆಂದು ಅವರು ಈ ಪ್ರಶಂಸೆಯಲ್ಲಿ ಸೇರಿ ಪ್ರಧಾನ ಸಬ್ ಕೋರ್ಟು, ಎಡಿಶಲ್ ಸಬ್ ಕೋರ್ಟು ಮುನಿಸಿಫ್ ಕೋರ್ಟು ಇವೆಲ್ಲ ಸ್ಥಳಗಳಲ್ಲಿಯೂ ಇದೇ ರೀತಿ ಪೈಯವರನ್ನು ಸ್ಮರಿಸಲಾಯಿತು.

ಅಮ್ಮೆಂಬಳ ಶ್ರೀನಿವಾಸ ಪೈಯವರಿಗೆ ೭೬ ವರ್ಷ ಪ್ರಾಯವಾಗಿದ್ದು ಈಚೆಗೆ ಸ್ವಲ್ಪ ಸಮಯದ ಕಾಯಿಲೆಯಲ್ಲಿದ್ದರು.

ಇವರಿಗೆ ಮೂರು ಮಂದಿ ಗಂಡು ಮಕ್ಕಳೂ ಒಬ್ಬ ಮಗಳೂ ಇದ್ದಾರೆ. ಅಮ್ಮೆಂಬಳ ವಿಟ್ಠಲ ಪೈಯವರು ಹಿರಿಯ ಮಗನಿದ್ದು ಇವರು ಈಗ ಸೆಂಟ್ರಲ್ ಸೆಕ್ರೆಟರಿಯೇಟಿನ ಬಗ್ಗೆ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರ ಮುಖ್ಯ ಖಾಸಗಿ ಸೆಕ್ರೆಟರಿಯ ಪದವಿಯಲ್ಲಿದ್ದಾರೆ. ಶ್ರೀ ಎ. ವಿ. ಪೈಯವರು ಬೊಂಬಾಯಿಯಲ್ಲಿ ಡಾಕ್ಟರರಾಗಿಯೂ ಶ್ರೀ ಎ. ಎನ್. ಪೈಯವರು ಮದ್ರಾಸಿನಲ್ಲಿ ವಕೀಲರಾಗಿಯೂ ಇದ್ದಾರೆ.

ಅಮ್ಮೆಂಬಳ ಶ್ರೀನಿವಾಸ ಪೈಯವರು ೧೮೭೨ರಲ್ಲಿ ಜನ್ಮತಾಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲಾಗಿ ಜಿಲ್ಲಾ ಜಡ್ಜ ಪದವಿಗೆ ಸೇರಿದ ದಿವಾನ್ ಬಹದ್ದೂರ್ ಅಮ್ಮೆಂಬಳ ವೆಂಕಟರಮಣ ಪೈಯವರ ದ್ವಿತೀಯ ಪುತ್ರ ಶ್ರೀನಿವಾಸ ಪೈಯವರು. ಇವರಿಗೆ ಮೂರು ವರ್ಷ ಪ್ರಾಯವಾದಾಗ ಇವರನ್ನು ಇವರ ತಂದೆಯ ಸಹೋದರರಾದ ದಿವಂಗತ ಎ. ನಾರಾಯಣ ಪೈಯವರಿಗೆ ದತ್ತಕ್ಕೆ ಕೊಡಲಾಯಿತು. ಮುಂದೆ ೧೦ ವರ್ಷಗಳನ್ನು, ಇವರು ಕಾಸರಗೋಡಿನಲ್ಲಿ ತನ್ನ ದತ್ತದ ತಂದೆಯವರ ಮನೆಯಲ್ಲಿ ಕಳೆದರು. ಇಲ್ಲಿ ಬಹಳ ಪ್ರೀತಿಯ ಉಪಾಧ್ಯಾಯರ ಮೂಲಕ ಇವರ ಶಿಕ್ಷಣವೇರ್ಪಡಿಸಲಾಗಿತ್ತು. ೧೮೮೫ರಲ್ಲಿ ಮಂಗಳೂರಿಗೆ ಬಂದು ಸೈಂಟ್ ಎಲೋಶಿಯಸ್ ಕಾಲೇಜಿನ ಮಿಡ್ಲ್ ಸ್ಕೂಲಿಗೆ ಸೇರಿ ೧೮೮೭ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದು ಪಾಸಾದರು. ಆಗ ಈ ಶಾಲೆಯನ್ನು ನಡೆಸಲು ಬಂದಿದ್ದ ಮೊದಲ ಜೆಸುವಿಟ್ ಪಾದ್ರಿಗಳಿಂದ ಶ್ರೀನಿವಾಸ ಪೈಯವರು ಹಲವು ಸದ್ಗುಣಗಳನ್ನು ಕಲಿಯುವಂತಾದಾಗಿತ್ತು. ೧೮೮೮ರಲ್ಲಿ ಇವರು ಮದ್ರಾಸಿಗೆ ತೆರಳಿ ಪ್ರೆಸಿಡೆನ್ಸೀ ಕಾಲೇಜನ್ನು ಸೇರಿದರು. ಮುಂದೆ ಹದಿನಾರು ವರ್ಷಗಳನ್ನು ಮದ್ರಾಸಿನಲ್ಲಿಯೇ ಕಳೆದರು. ಲಾ ಕಾಲೇಜಿನಿಂದ ಪಾಸಾಗಿ ಎಪ್ರೆಂಟಿಸ್ ಅವಧಿ ತೀರಿಸಿ ಸ್ವಲ್ಪ ಸಮಯ ಇವರು ಮದ್ರಾಸಿನಲ್ಲಿಯೇ ವಕಾಲತು ನಡೆಸಿದರು. ಕೊನೆಗೆ ೧೮೦೪ರಲ್ಲಿ ಮಂಗಳೂರಿನಲ್ಲಿ ಬಂದು ನೆಲಸಿದರು.

ಮದ್ರಾಸಿನಲ್ಲಿ ನಿಂತ ಈ ವರ್ಷಗಳಲ್ಲಿ ಶ್ರೀನಿವಾಸ ಪೈಯವರಿಗೆ ಮಿಲ್ಲರ್, ಸ್ವಾಮಿ ವಿವೇಕಾನಂದ, ಎನ್ನೀಬಿಸೆಂಟ್, ಸುರೇಂದ್ರನಾಥ ಬೆನರ್ಜಿ, ರಾನಡೆ ಮೊದಲಾದ ಮಹನೀಯರ ಪರಿಚಯವಾಗಿತ್ತು. ಇವರು ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಇವರೊಡನೆ ಇದ್ದವರೆಂದರೆ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಸರ್. ಟಿ. ವಿಜಯರಾಘವಾಚಾರಿಯರ್, ದಿವಾನ್ ಬಹದ್ದೂರ್ ಜಿ. ಎ. ನಟೇಶನ್, ದಿವಾನ್ ಬಹದ್ದೂರ್ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ ಮೊದಲಾದವರು.

ಮಂಗಳೂರಿಗೆ ಬಂದು ಶ್ರೀನಿವಾಸ ಪೈಯವರು ತಮ್ಮ ತಂದೆಯ ಸಹೋದರರಾದ ದಿವಂಗತ ಸುಬ್ಬರಾಯ ಪೈಯವರ ಜೂನಿಯರ್ ಆಗಿ ವಕಾಲತು ನಡೆಸಲು ನಿಂತರು. ಇವರ ನಿಧನದ ಬಳಿಕ ಇವರ ವಕಾಲತೆಲ್ಲವೂ ಶ್ರೀನಿವಾಸ ಪೈಯವರಿಗೇನೇ ಬಂದಿತು. ಜಿಲ್ಲೆಯ ಸಾರ್ವಜನಿಕ ಜೀವನದಲ್ಲಿ ಸುಬ್ಬರಾವ್ ಪೈಯವರ ಸ್ಥಾನವೂ ಕೂಡಾ ಸಹಜವಾಗಿ ಶ್ರೀನಿವಾಸ ಪೈಯವರಿಗೆ ಬಂದಿತು. ೧೮೯೨ರಲ್ಲಿ ಶ್ರೀನಿವಾಸ ಪೈಯವರು ಕೆನರಾ ಹೈಸ್ಕೂಲಿನ ಅಸಿಸ್ಟಂಟ್ ಮೆನೇಜರರಾದರು. ೧೯೦೬ರಲ್ಲಿ ಕೆನರಾ ಬೇಂಕನ್ನು ಆರಂಭಿಸಿದಾಗ ಅದರ ಡೈರೆಕ್ಟರಲ್ಲೊಬ್ಬರಾದರು. ೧೯೧೩ರಲ್ಲಿ ಈ ಬೇಂಕಿನ ಅಧ್ಯಕ್ಷರಾದರು. ೧೯೪೧ರಲ್ಲಿ ಇವರು ನಿವೃತ್ತರಾಗುವ ಪರ್ಯಂತರ ಈ ಎರಡೂ ಸಂಸ್ಥೆಗಳನ್ನು ಇವರೇ ನಡೆಸುತ್ತಿದರು.

ಜೀವನದ ಕೊನೆಯ ಭಾಗದಲ್ಲಿ ವಾನಪ್ರಸ್ಥಾಶ್ರಮದಲ್ಲಿರಬೇಕೆಂದು ಇವರ ಅಭಿಪ್ರಾಯವಿದ್ದುದರಿಂದ ಇವರು ಎಲ್ಲಾ ಚಟುವಟಿಕೆಗಳಿಂದ ನಿವೃತ್ತರಾಗಿ ಗೀತೆ ಮೊದಲಾದ ವ್ಯಾಸಂಗದಲ್ಲಿಯೇ ಕಾಲ ಕಳೆಯುತ್ತಿದ್ದರು.

ಶ್ರೀನಿವಾಸ ಪೈಯವರು ತನ್ನ ಕಾಲದಲ್ಲಿ ಪ್ರಸಿದ್ಧ ವಕೀಲರಿದ್ದು ದೀರ್ಘ ಕಾಲದ ತನಕ ಮಂಗಳೂರು ಬಾರ್ ಎಸೋಶಿಯೇಶನಿನ ಅಧ್ಯಕ್ಷರಾಗಿದ್ದರು. ಮಂಗಳೂರಿನ ಕೊಸ್ಮೊಪೊಲಿಟನ್ ಕ್ಲಬ್ಬಿಗೂ ಇವರು ಅಧ್ಯಕ್ಷರಾಗಿದ್ದರು. ಜಿಲ್ಲಾ ಸೆಕೆಂಡರಿ ಎಜುಕೇಶನ್ ಬೋರ್ಡಿಗೆ ಇವರನ್ನು ಒಮ್ಮೆ ಅಧ್ಯಕ್ಷರಾಗಿ ಆರಿಸಿದ್ದರು. ಇವರು ಜಿಲ್ಲಾ ದೇವಸ್ಥಾನ ಕಮಿಟಿಯ ಮೆಂಬರಿದ್ದರು. ರಾಷ್ಟ್ರೀಯ ಬಾಲಿಕಾ ಹೈಸ್ಕೂಲನ್ನು ಸ್ಥಾಪಿಸಿದ ಬಾಲಿಕಾ ಶಿಕ್ಷಣ ಸಭೆಗೂ ಇವರೇ ಅಧ್ಯಕ್ಷರಿದ್ದರು. ಸುಬ್ಬರಾವ್ ಪೈ ಮೆಮೋರಿಯಲ್ ಫಂಡು, ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನ್ ಮೊದಲಾದ ಸಂಸ್ಥೆಗಳಲ್ಲಿಯೂ ಇವರಿದ್ದರು. ಇತ್ತೀಚೆಗಿನ ತನಕ ಜಿಲ್ಲಾ ಹರಿಜನ ಸೇವಾ ಸಂಘದ ಪ್ರಮುಖ ಸದಸ್ಯರಲ್ಲೊಬ್ಬರಿದ್ದು ಈ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದರು.

ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಯವರು ಮಂಗಳೂರಿನ ಎಷ್ಟೊ ಸಾರ್ವಜನಿಕ ಸಭೆಗಳಲ್ಲಿ ಅಧ್ಯಕ್ಷ ಪದವಿಯನ್ನಲಂಕರಿಸಿದವರು. ಇವರ ಸ್ವಾರಸ್ಯವಾದ ಭಾಷಣಗಳನ್ನು ಕೇಳದವರು ಅಪರೂಪ. ಇವರಿಂದ ಒಂದಲ್ಲ ಒಂದು ಬಗೆಯ ಸಹಾಯ ಹೊಂದದವರೂ ಅಪರೂಪವೆನ್ನಬಹುದು.

ಸಮಯದ ಬೆಲೆಯರಿತು ಯಾವುದರಲ್ಲಿಯೂ ಅತಿಗೆ ಹೋಗದೆ ಸರಳ ರೀತಿಯಿಂದ ಎಲ್ಲರಿಗೂ ತಮ್ಮಿಂದಾಗುವ ಸಹಾಯ ಮಾಡುತ್ತ ಅತ್ಯುಪಯುಕ್ತ ರೀತಿಯಲ್ಲಿ ಜೀವನ ಕಳೆಯಬೆಳಸುವವರಿಗೆ ಶ್ರೀನಿವಾಸ ಪೈಯವರು ಒಂದು ಆದರ್ಶ ಸ್ವರೂಪರಿದ್ದರೆಂದರೆ ಅತಿಶಯೋಕ್ತಿ ಇಲ್ಲ.

ಇವರಂತೆಯೇ ಸದ್ಗುಣ ಭರಿತರೂ ಸತ್ಕೀರ್ತಿ ಪಾತ್ರರೂ ಆದ ಸತ್ಪುತ್ರರು ಇವರಿಗಿರುವರೆಂಬುದು ಸಮಾಧಾನದ ವಿಷಯ.

ದಿವಂಗತ ಅಮ್ಮೆಂಬಳ ಶ್ರೀನಿವಾಸಪೈಯವರ ನಿಧನಕ್ಕಾಗಿ ನಾವೂ ನಮ್ಮ ಸಹ ಸಂತಾಪವನ್ನು ಈ ಮೂಲಕ ಸೂಚಿಸುತ್ತೇವೆ.

ಮಲಯದಲ್ಲಿ

ಮಲಯದಲ್ಲಿ ಕಮ್ಯೂನಿಸ್ಟರು ಬ್ರಿಟಿಷ್ ತೋಟದ ಮಾಲಿಕರಲ್ಲಿ ಹಲವರನ್ನು ಕೊಲೆ ಮಾಡಿದರು. ಕಾಡುಗಳನ್ನು ಸೇರಿ ಬ್ರಿಟಿಷ್ ಅಧಿಕಾರಿಗಳೊಡನೆ ಇವರು ಜಗಳಾಡುತ್ತಿದ್ದಾರೆ. ಮಲಯವು ಜಪಾನಿನ ಸ್ವಾಧೀನವಾದಾಗ ತಯಾರಾದ ಕಮ್ಯೂನಿಸ್ಟ ಸೈನಿಕರು ಈ ರೀತಿ ಹಾವಳಿ ಆರಂಭಿಸಿರುವರಾಗಿ ತಿಳಿದು ಬರುತ್ತದೆ. ಮಲಯದ ತವರ ಮೊದಲಾದ ಉತ್ಪತ್ತಿ ಮಾರಾಟದಿಂದ ಬ್ರಿಟನಿಗೆ ಬೇಕಾದ ಡಾಲ್ಲರುಗಳು ಸಿಕ್ಕುತ್ತವೆ. ಡಾಲರು ಈಗ ಅವರಿಗೆ ಅತ್ಯಾವಶ್ಯಕವಿದ್ದು ಅವನ್ನೊದಗಿಸುವ ಈ ಕೇಂದ್ರವನ್ನು ಅವರು ಎಂದೂ ಕೈಯಿಂದ ತಪ್ಪಿ ಹೋಗಲು ಬಿಡುವಂತಿಲ್ಲ. ಕಮ್ಯೂನಿಸ್ಟರಿಗೆ ಹೊರಗಿನ ಸಹಾಯ ಬಾರದಂತೆ ಬ್ರಿಟಿಷ್ ನೌಕಾ ಪಡೆಗಳು ಕಾಯುತ್ತಿವೆ. ಮಲಯದೊಳಗಿದ್ದ ಸುಮಾರು ಎರಡುವರೆ ಸಾವಿರ ಕಮ್ಯೂನಿಸ್ಟರು ಎಷ್ಟು ಸಮಯ ಕಾದಾಡಬಲ್ಲರು?

ಕ್ವಾದೇ ಅಜಾಮರ ಹೊಸ ಆರ್ಡಿನೆನ್ಸು

ಪಾಕಿಸ್ಥಾನದ ಗವರ್ನರ್ ಜನರಲ್ ಕ್ವಾದೇ ಅಜಾಮ ಜಿನ್ನಾರವರು ತಾನು ಆಜ್ಞೆ ಕೊಟ್ಟಲ್ಲಿ ಪ್ರಾಂತಿಕ ಗವರ್ನರರು ತಮ್ಮ ಮಂತ್ರಿಗಳನ್ನು ಡಿಸ್‌ಮಿಸ್ ಮಾಡಿ ಸರ್ವಾಧಿಕಾರವನ್ನು ತಾವೇ ವಹಿಸಲು ಸಾಧ್ಯವಾಗುವಂತಹ ಹೊಸ ಆರ್ಡಿನೆನ್ಸು ಕಾನೂನನ್ನು ಜಾರಿಗೆ ತಂದಿರುತ್ತಾರೆ. ಕೇಂದ್ರ ಸರಕಾರದ ಅಧಿಕಾರವನ್ನು ಈ ರೀತಿ ಬಲಪಡಿಸಿ ಪಾಕಿಸ್ಥಾನವನ್ನು ಬಲಿಷ್ಠವನ್ನಾಗಿ ಮಾಡಲು ಈ ಬಗೆಯ ಏರ್ಪಾಡು ಅಗತ್ಯವೆಂದು ಜಿನ್ನಾರವರಿಗೆ ಕಂಡು ಬಂದುದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ.

ಸರ್ ಆರ್ಥರ್ ನೈಯವರಿಗೆ ಹೊಸ ಪದವಿ

ಮದ್ರಾಸಿನ ಗವರ್ನರರಾಗಿರುವ ಸರ್ ಆರ್ಥರ್ ನೈಯವರನ್ನು ಬ್ರಿಟಿಷ್ ಸರಕಾರವು ಭಾರತದಲ್ಲಿ ತಮ್ಮ ಹೈ ಕಮಿಶನರ್ ಪದವಿಗೆ ನೇಮಕ ಮಾಡಿರುವುದಾಗಿಯೂ ಸರ್ ಟೆರೆನ್ಸ್ ಶ್ರೋನರು ಈ ಪದವಿಯಿಂದ ಹಿಂತೆರಳಿದಾಗ ಅಂದರೆ ಬರುವ ನವಂಬರದಿಂದ ನೈಯವರು ಈ ಪದವಿಯನ್ನು ಕೈಕೊಳ್ಳುವರೆಂದೂ ಪ್ರಕಟವಾಗಿರುತ್ತದೆ.

ಸರ್ ಆರ್ಥರ್ ನೈಯವರೂ ಅವರ ಪತ್ನಿಯವರೂ ಮದ್ರಾಸು ಪ್ರಾಂತ್ಯದಲ್ಲಿ ಜನಪ್ರೀತರಾಗಿರುವರು. ಇವರಿಗೆ ಈ ಹೊಸ ಪದವಿಗೆ ನೇಮಕವಾಗಿ ಇವರು ಭಾರತದಲ್ಲಿ ಇನ್ನು ಸ್ವಲ್ಪ ಕಾಲ ಕಳೆಯುವಂತಾದುದು ಸಂತೋಷದ ಸಂಗತಿ ಇರುತ್ತದೆ. ಮದ್ರಾಸಿಗೆ ಗವರ್ನರರಾಗಿ ಯಾರು ಬರುವರೆಂಬುದು ಮಾತ್ರ ಇನ್ನೂ ಪ್ರಕಟವಾಗಿಲ್ಲ.

ಶ್ರೀ ನಿರ್ಕೋಡಿ ಸುಬ್ಬರಾಯರನ್ನು ಬೀಳ್ಕೊಡುವ ಸಮಾರಂಭ

ಕಳೆದ ೫ ವರ್ಷಗಳಿಂದ ಈ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದು ಆ ಕಾಲದಲ್ಲಿ ಜಿಲ್ಲೆಯ ಸಂದಿಗೊಂದಿಗಳಲ್ಲಿಯೂ ಅವಿಶ್ರಾಂತ ಶ್ರಮದಿಂದ ಸುಮಾರು ೨೦ ಹೈಸ್ಕೂಲುಗಳನ್ನು ಸ್ಥಾಪಿಸಲು ಸರಕಾರದವರ ಎಲ್ಲಾ ವಿದ್ಯಾಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರಲೂ ಕಾರಣಭೂತರಾದ ಮೇಲ್ಕಂಡ ಮಹನೀಯರು ತಮ್ಮ ಆ ಉದ್ಯೋಗದಿಂದ ನಿವೃತ್ತರಾಗುವ ಸಮಯ, ತಮ್ಮ ಗೌರವ ಭಾವದ ಕಾಣಿಕೆಯನ್ನು ಶ್ರೀಯುತರಲ್ಲಿ ಸಮರ್ಪಿಸಲು ಜಿಲ್ಲಾ ವಿದ್ಯಾಂಗದ ಹಲವು ಮಂದಿ ಉಚ್ಚ ಅಧಿಕಾರಿಗಳೂ, ಆಧೀನ ನಿಬಂಧಿಯುವರೂ ಕಳೆದ ತಾ. ೧೭ ೭-೪೮ ರಲ್ಲಿ ಸ್ಥಳೀಯ ಸರಕಾರಿ ಹಾ ಎ. ಟ್ರೈನಿಂಗ್ ಶಾಲೆಯಲ್ಲಿ ಸಭೆಸೇರಿ ಶ್ರೀಯುತರನ್ನು ಬೀಳ್ಕೊಟ್ಟರು

ಜಿಲ್ಲಾಸೆಶನ್ಸ್ ಕೋರ್ಟಿನಲ್ಲಿ ಆರೋಪಿಗೆ ೫ ವರ್ಷಗಳ ಸಜೆ

ನಮ್ಮ ಜಿಲ್ಲಾ ಮತ್ತು ಸೆ। ಜಡ್ಜರಾದ ಶ್ರೀ. ಸಿ ಕೃಷ್ಣಮೂಸೆ, ಬಿ ಎ ಬಿ ಎಲ್ ಅವರು ಕಾರ್ಕಳ ತಾಲೂಕು ನಂದಳಿಕೆ ಗ್ರಾಮದ ಮೈಂದಪೂಜಾರಿ ಎಂಬಾತನ ಮೇಲಿದ್ದ ಕೊಲೆಯ ತನಿಖೆ ನಡೆಸಿ, ಆರೋಪಿಗೆ ೫ ವರ್ಷಗಳ ಕಠಿಣ ಸಜೆ ವಿಧಿಸಿದರು

ಮೋಸ ಕೃತ್ಯದ ಫಿರ್ಯಾದಿ

ಬೊಂಬಾಯಿಯ ಗಿಬರ್ಟ್ ಕಂಪೆನಿಯ ಪ್ರತಿನಿಧಿ ತಾನೆಂದು, ತನ್ನ ಹೆಸರು ಆರ್ ಕೆ. ಗುಪ್ತನೆಂದು ಮಂಗಳೂರಲ್ಲಿ ಹೇಳಿಕೊಂಡು, ಇಲ್ಲಿಯ 'ವೆರೈಟಿಸ್ಟೋರ್ಸ್', ಎಂ ಎಂ ಶಾನುಭಾಗ ಎಂಡ್ ಸನ್ಸ್, ಕಾಮತ್ ಎಂಡ್ ಕೊ ಇವರಿಂದ ಕೆಲವು ಅಲಂಕಾರ ಸಾಮಾಗ್ರಿಗಳು, ಫೌಂಟನ್‌ಗಳು ಪಾರ್ಕರ್ ಪೆನ್ನುಗಳೇ ಮೊದಲಾದವುಗಳ ಸಂಬಂಧ ಸಾವಿರಾರು ರೂಪಾಯಿಗಳಆರ್ಡರ್, ಪಡೆದುಕೊಂಡು ಹೋದನೆಂದೂ, ಅನಂತರ ಬಂದ ರೈಲ್ವೆ ಪಾರ್ಸೆಲುಗಳ ರಶೀದಿಗಳನ್ನು ಬೇಂಕಿಗೆ ಹಣ ತುಂಬಿಸಿ ಪಡೆದ ಮೇಲ್ಕಂಡ ವ್ಯಾಪಾರಿ ಸಂಸ್ಥೆಗಳವರ ಆ ಪಾರ್ಸೆಲುಗಳನ್ನು ಒಡೆದು ನೋಡುವಾಗ ಅವುಗಳಲ್ಲಿ ಬರೇ ಪೆನ್ಸಿಲು, ಸ್ಲೇಟ್‌ಕಡ್ಡಿ, ಮಣ್ಣು ಹಿಡಿದ ಕಂಪಾಸ್‌ಪೆಟ್ಟಿಗೆಗಳು ಮಾತ್ರವೇ ಇದ್ದುವೆಂದು ತಿಳಿದು ಬಂದುದರ ಮೇಲೆ, ಪೋಲೀಸಿಗೆ ಫಿರ್ಯಾದಿ ಕೊಡಲು ಇಲ್ಲಿಯ ಕ್ರಾಯಿಮ್ ಶಾಖೆಯ ಸ॥ ಇನ್ಸ್‌ಪೆಕ್ಟರ್ ಮಿ ಸಿ ಎಫ್ ಎಕ್ಸ್ ಸಾಲ್ಡಾನ ಅವರು ಇದರ ಕುರಿತು ತನಿಖೆ ನಡಿಸುತ್ತಿರುವರೆಂದು ತಿಳಿದು ಬಂದಿದೆ

ವೇಶ್ಯಾಗೃಹ ನಡೆಸುವ ಆರೋಪದಿಂದ ಕೈದು

ಎಂ ವಿ ಕಲ್ಯಾರ ಮತ್ತು ಕೇಸರಿಬಾಯಿ ಎಂಬಿಬ್ಬರು ಇಲ್ಲಿಯ ಡೊಂಗರಕೇರಿಯಲ್ಲಿ ವೇಶ್ಯಾಗೃಹ ನಡೆಸುತ್ತಿರುವರೆಂಬ ಆರೋಪದ ಮೇಲೆ ಪೋಲೀಸರಿಂದ ಕೈದಿಗೊಳಗಾಗಿದ್ದಾರೆ.

ವರ್ಗಾವರ್ಗಿ

ಶ್ರೀ। ಎಸ್ ಯು ಪರಶುರಾಮ ನಾಯಕ್ ಅವರು ಕುಂದಾಪುರದ ತಹಶೀಲ್ದಾರರಾಗಿಯೂ, ಹರಿಜನರ ಲೇಬರ್ ವೆಲ್ಫೇರ್ ಆಫೀಸರಾಗಿದ್ದ ಶ್ರೀ। ಕೆ. ದೇವೇಂದ್ರ ಅವರು ಕಾಸರಗೋಡು ಅ। ಕ। ಟ್ಯಾ। ಆಫೀಸರಾಗಿಯೂ ಅವರ ಸ್ಥಾನಕ್ಕೆ ಶ್ರೀ। ಸಿ. ನಾರಾಯಣ ಮೆನೂನ ಅವರೂ ವರ್ಗಾಯಿಸಲ್ಪಟ್ಟಿದ್ದಾರೆ.

ಜಿಲ್ಲಾ ಸಮಾಚಾರ

ಜಿಲ್ಲೆಯಲ್ಲಿ ಮದ್ಯನಿರೋಧ ಮೊಕದ್ದಮೆಗಳು

ಕಳೆದ ತಿಂಗಳಲ್ಲಿ ಮಂಗಳೂರು ಸರ್ಕಲಿನಲ್ಲಿ ಒಟ್ಟು ೩೭, ಇದರಲ್ಲಿ ಕಳ್ಳಬಟ್ಟಿ ೨೭, ಕುಡಿತನ ೪. ಉಡ್ಪಿ ಸರ್ಕಲಿನಲ್ಲಿ ಒಟ್ಟು ೨೦, ಇದರಲ್ಲಿ ಕಳ್ಳಬಟ್ಟಿ ೧೦; ಕುಡಿತನ ೫ ಕಾಸರಗೋಡು ಸರ್ಕಲಿನಲ್ಲಿ ಒಟ್ಟು ೪೫, ಅದರಲ್ಲಿ ಕಳ್ಳಬಟ್ಟಿ ೨೫, ಕುಡಿತನ ೭ ಒಟ್ಟು ಜಿಲ್ಲೆಯಲ್ಲಿ ೧೮೨ ಎಪ್ರಿಲ್, ಮೇ, ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು ಅಪರಾಧಗಳು ೩೪೩, ಮಂಗಳೂರು ಸರ್ಕಲ ೧೫೦, ಉಡ್ಪಿ ಸರ್ಕಲ ೭೦, ಕಾಸರಗೋಡು ಸರ್ಕಲ ೧೬೩, ಒಟ್ಟು ೩೮೩

ಮದ್ಯನಿಷೇಧ ವಿಧಿಗಳ ಉಲ್ಲಂಘನೆ ದಂಡ

ಕುಡುಂಬಿ ಹಿತ್ಲು (ಮಂಗಳೂರು) ನಾರಾಯಣ ಪೂಜಾರಿ ಕುಡಿದ ಆರೋಪ-೨ ತಿಂಗಳ ಕಠಿಣ ಸಜೆ, ಸಿದ್ದೋಡಿ ಮ್ಯಾಥ್ಯೂಸ್ ಮೆಹರೋನ, ಅದೇ ಆರೋಪ ೩ ತಿಂಗಳ ಕಠಿಣ ಸಜೆ, ಕೊಡಿಯಾಲಬೈಲ್ (ಮಂಗಳೂರು) ಹೆಲನಾ ವಾಸ್ ಬಾಯಿಯ ವಶ ೧॥ ಡ್ರಾಂ ತಾಳಿ ಶರಾಬ್ ಇತ್ತೆಂದ ಆರೋಪ, ಜುಲ್ಮಾನೆ ರೂ. ೭೫

ಗೋಕರ್ಣ ಮಠಾಧೀಶರ ಚತುರ್ಮಾಸ ದೀಕ್ಷೆ

ಇಲ್ಲಿಯ ತಮ್ಮ ಗೋಕರ್ಣ ಮಠದಲ್ಲೇ ಉಳಕೊಂಡಿರುವ ಪರ್ತಗಾಳಿ ಸಂಸ್ಥಾನಾಧೀಶರಾದ ಶ್ರೀ ಮಧ್ವಾರಕಾನ್ಯಾದ ಶ್ರೀ ಪಾದಂಗಳವರು ತಾ ೨೧ರಂದು ಈ ವರ್ಷದ ಚಾತುರ್ಮಾಸದ ದೀಕ್ಷೆಯನ್ನು ವಹಿಸುವ ಸಮಾರಂಭ ವಿಧಿಗಳನ್ನು ಆಚರಿಸಿದರು ಈ ಸಂದರ್ಭದಲ್ಲಿ ಗೌ॥ ಸಾ। ಬ್ರಾಹ್ಮಣ ಸಮಾಜದ ಹತ್ತು ಸಮಸ್ತರು ಶ್ರೀ ಸ್ವಾಮಿಜಿಯವರಿಗೆ ಸು ಮಾ ರು ೧೭೫೦ ರೂಪಾಯಿಗಳನ್ನು ಪಾದಕಾಣಿಕೆಯಾಗಿ ಅರ್ಪಿಸಿದರಲ್ಲದೆ ಫಲ ಪುಷ್ಪಗಳನ್ನು ಸಮರ್ಪಿಸಿ ಆಶೀರ್ವಾದ ಪಡೆದರು

ಕಾಶೀಮಠಾಧೀಶರು

ಕೊಚ್ಚಿ ಸಂಸ್ಥಾನದತ್ತ ದಿಗ್ವಿಜಯಕ್ಕೆ ತೆರಳಿದ್ದ ಶ್ರೀ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ಶ್ರೀ ಪಾದಂಗಳವರ ಪಟ್ಟದ ಶಿಷ್ಯರಾದ ಶ್ರೀ ಸುಧೀಂದ್ರತೀರ್ಥ ಶ್ರೀ ಪಾದಂಗಳವರು ನಾಳೆ ತಾ ೨೪ಕ್ಕೆ ಶನಿವಾರ ಮಂಗಳೂರಿಗೆ ಚಿತ್ತೈಸುವರೆಂದೂ, ಇಲ್ಲಿ ಶ್ರೀ ವೆಂಕಟರಮಣ ದೇವಳದಲ್ಲಿಳಿದು, ಶ್ರೀ ಗೋಕರ್ಣ ಮಠಾಧೀಶರನ್ನು ಸಂದರ್ಶಿಸಿ ನಂತರ ಕಾರ್ಕಳದತ್ತ ತಮ್ಮ ಶಿಕ್ಷಣಪೂರ್ತಿಗಾಗಿ ದಯಮಾಡಿಸುವರೆಂದು ತಿಳಿದು ಬರುತ್ತದೆ

ಸಂತಾಪ ಸೂಚನೆ

ಇಲ್ಲಿಯ ಕೆನರಾ ಶಾಲೆಗಳ ಅಧ್ಯಾಪಕ ಸಂಘದವರು ತಾ. ೨೧ರಂದು ತಮ್ಮದೊಂದು ವಿಶೇಷ ಮಹಾ ಸಭೆಯಲ್ಲಿ ದಿ ವಂ ಗ ತ ಅಮ್ಮೆಂಬಳ ಶ್ರೀನಿವಾಸ ಪೈ ಅವರ ನಿಧನದ ಬಗ್ಗೆ ಸಂತಾಪಸೂಚಕ ಠರಾವನ್ನು ಸನ್ಮಾನಪೂರ್ವಕ ಅನುಮೋದಿಸಿದರು.

ಅಂದು ಸ್ಥಳೀಯ ಬಾರ್ ಎಸೋಶಿಯೇಶನಿನಲ್ಲಿಯೂ ಸಂತಾಪಸೂಚಕ ಸಭೆಯೊಂದು ಏರ್ಪಡಿಸಲ್ಪಟ್ಟಿದ್ದು ದಿ। ಅ ಶ್ರೀನಿವಾಸ ಪೈ ಅವರ ಜೀವನ ವೈಶಿಷ್ಟ್ಯ, ಗುಣಶ್ರೇಷ್ಠತೆಗಳ ಕುರಿತು ಅವರ ಮಿತ್ರರೂ, ಸಹೋದ್ಯೋಗಿಗಳಾಗಿದ್ದವರೂ ಭಾಷಿಸಿದರು

ಶ್ರೀ ಪೈಯವರ ನಿಧನದ ಶೋಕಸೂಚಕವಾಗಿ ನಗರದಲ್ಲಿನ ಮತ್ತು ಬಂದರದಲ್ಲಿನ ಪ್ರಮುಖ ವ್ಯಾಪಾರ ವಹಿವಾಟು ಸಂಸ್ಥೆಗಳು ಮುಚ್ಚಲ್ಪಟ್ಟಿದ್ದವು

ಸಮುದ್ರ ಮೀಯಲು ಹೋದ ಹುಡುಗನ ಕಣ್ಮರೆ

ಅಬ್ದುಲ್‌ಖಾದರ್ ಎಂಬ ಸುಮಾರು ೧೫ ವರ್ಷದ ಹುಡುಗನೊಬ್ಬನು ತಾ ೨೧ ರಂದು ಇಲ್ಲಿಯ ಉಗ್ರೆಯ ಬಳಿ ಸಮುದ್ರಸ್ನಾನಕ್ಕೆ ಹೋದವನು ಕಾಣೆಯಾಗಿರುವನೆಂದೂ, ಅವನ ಜೊತೆಯಲ್ಲಿ ಹೋಗಿದ್ದ ಇತರ ಹುಡುಗರು ಇವನಿಲ್ಲದೆ ಮರಳಿ ಬಂದಿರುವರೆಂದೂ ಸುದ್ದಿಯಿದೆ. ಹುಡುಗನ ಪತ್ತೆಗಾಗಿ ಸಮುದ್ರದ ಬಳಿ ಶೋಧ ನಡೆಯುವುದು ಹುಡುಗನ ತಂದೆಯು ದೀವಿ ದ್ವೀಪದಲ್ಲಿ ಡಾಕ್ಟರರಂತೆ ಅಲ್ಲಿಗೀಗ ಸಾರಿಗೆ ಸಂಪರ್ಕವು (ಮಳೆಗಾಲವಾದ್ದರಿಂದ) ಇಲ್ಲದಿದ್ದುದರಿಂದ ಸುದ್ದಿಯನ್ನು ಮುಟ್ಟಿಸಲೂ ಸಾಧ್ಯವಿಲ್ಲದ ದುರಂತ ಪರಿಸ್ಥಿತಿಯುಂಟಾಗಿದೆಂದೂ ಹೇಳಲಾಗಿದೆ

ರಾಷ್ಟ್ರೀಯ ಬೀಡಿ ಕೆಲಸಗಾರರ ಸಭೆ

ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘದ ಕಾರ್ಯಸಮಿತಿ ಸಭೆ ಸೋಶಲಿಸ್ಟ್ ಪಕ್ಷದ ಆಫೀಸಿನಲ್ಲಿ ಸೇರಿ ಈ ಕೆಳಗಿನ ನಿರ್ಣಯವಾಯಿತು ಜಿಲ್ಲೆಯಲ್ಲಿ ಬೀಡಿ ಉದ್ಯೋಗದಿಂದ ಜೀವನ ನಡೆಸುವ ೫೦೦೦ ಜನರ ಕುಟುಂಬಗಳು ಎಲೆಯ ಅಭಾವದಿಂದ ಉಪವಾಸ ಬೀಳುವ ಸಂಭವವಿರುವುದರಿಂದ ಮದ್ರಾಸ ಸರಕಾರದ ಸಾರಿಗೆ ಮಂತ್ರಿಗಳು ಎಲೆ ನಮ್ಮ ಜಿಲ್ಲೆಗೆ ಬರುವರೇ ವಾಗೀನುಗಳ ಸೌಕರ್ಯಗಳನ್ನು ಬೇಗನೆ ಒದಗಿಸಿಕೊಡಬೇಕೆಂದು ವಿನಂತಿ ಮಾಡುತ್ತದೆ ಈ ನಿರ್ಣಯವನ್ನು ತಂತಿ ಮೂಲಕ ಮದ್ರಾಸು ಸರಕಾರದ ಸಾರಿಗೆ ಮಂತ್ರಿಗಳಿಗೆ ತಿಳಿಸಲಾಯಿತು

ಬಸ್ಸುಸ್ಟೇಂಡು ಕಟ್ಟಡದ ಉದ್ಘಾಟನೆ

ಇಲ್ಲಿಹೊಸತಾಗಿ ಕಟ್ಟಿಸಿದಬಸ್‌ಸ್ಟಾಂಡ್ ಹಾಗೂ ಪ್ರಯಾಣಿಕರಿಗಾಗುವ ಬುಕ್ಕಿಂಗ್ ಆಫೀಸಿಗೆ ಎಂದು ಕಟ್ಟಿಸಿದ ಹೊಸ ಕಟ್ಟೋಣದ ಉದ್ಘಾಟನಾ ಸಮಾರಂಭ ಜಿಲ್ಲಾ ಕಲೆಕ್ಟರರಾದ ಶ್ರೀ ಎನ್ ಆರ್ ಕೈವಾರ್ ಎಂ ಎ ಐ ಸಿ ಯಸ್ ಅವರು ತಾರೀಕು ೧೭-೭-೪೮ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ನೆರವೇರಿಸಿದರು

ಪುತ್ತೂರು

ಜಿಲ್ಲಾ ಕಲೆಕ್ಟರರು

ತಾ. ೧೬ರಿಂದ ಇಲ್ಲಿ ಮೊಕ್ಕಾಮ್ ಮಾಡಿದ್ದರು. ಸರಕಾರಿ ನಿಬಂಧನೆಗಳನ್ನೂ, ಸಾರ್ವಜನಿಕರನ್ನೂ ಕಂಡು ವಿಚಾರ ವಿನಿಮಯ ಮಾಡುತ್ತಿರುವರೆಂದೂ ಗೊತ್ತಾಗಿದೆ.

ಕೊಲ್ಲೂರು

ಕೊಲ್ಲೂರು ಪುರಾಣ ಪ್ರಸಿದ್ಧವಾದ ಸ್ಥಳ. ಶ್ರೀ ಮೂಕಾಂಬಿಕೆಯ ವಾಸಸ್ಥಾನ. ಸಾವಿರಾರು ಜನರು ಯಾತ್ರೆಗೆ ಹೋಗಿಬರುವ ಸ್ಥಳ. ಒಂದು ದಿನವಾದರೂ ಯಾತ್ರಿಕರು ತಪ್ಪಿದ್ದೆಂದಿಲ್ಲ ಎಲ್ಲಾ ಊರುಗಳಂತೆ ಇಲ್ಲಿಯೂ ಪಂಚಾಯತ ಬೋರ್ಡು ಇದೆ. ಲೈಟ್‌ಕಂಬಗಳೂ ಇವೆ. ಅದಕ್ಕೆ ತಿಂಗಳಿಗೆ ಎಣ್ಣೆ ಸರಾಗವಾಗಿ ಬರುತ್ತಿದೆ ಆದರೆ ಕಂಬಗಳಲ್ಲಿ ದೀಪಗಳು ಮಾ ತ್ರ ಉರಿಯುವುದಿಲ್ಲ. ಎಣ್ಣೆ ಎಲ್ಲಿಗೆ ಹೋಗುವುದೋ ಆ ಮೂಕಾಂಬಿಕೆಯೇ ಬಲ್ಲಳು ಇದರಿಂದ ಯಾತ್ರಿಕರಿಗೆ ತುಂಬಾ ಪ್ರಾಸದಾಯಕವಾಗುತ್ತಿದೆ ಆದುದರಿಂದ ಇನ್ನು ಮುಂದಾದರೂ ಇದಕ್ಕೆ ಸಂಬಂಧಪಟ್ಟವರು ಕಣ್ತೆರೆಯಲಿ. ಊರ ಹಾಗೂ ಪರವೂರ ಜನರಿಗೆ ಉಪಕಾರವಾಗುವದು ಎಂದು ಯಾತ್ರಿಕರೊಬ್ಬರು ವಿನಂತಿಸುತ್ತಾರೆ

ಸಿಹಿಸುದ್ದಿ ಸಂಗ್ರಹ

ಇಟಲಿಯ ಫ್ಲೋರೆನ್ಸ್ ನಗರವಾಸಿ ಗ್ಯಸಪ್ಪ ಫೂರ್ಲ್ಲ ಎಂಬಾತ ತನ್ನ [illegible] ಸ್ತ್ರೀಯ ಈಚೆಗೆ ಮೃತಪಟ್ಟ ಈತ ತನ್ನ [illegible] ಮನೆಯಲ್ಲಿ ಕಸಕಳ್ಳತನದ ವೃತ್ತಿಯನ್ನಾರಂಭಿಸಿದ್ದು ಪತ್ತೆ [illegible] ಸಿಕ್ಕಿಬಿದ್ದಿದ್ದಾನೆ ಅಂದಿನಿಂದ [illegible] ವರ್ಷಗಳ ತನಕ ಜೈಲ್ ಇವನ ಮನೆಯಾಗಿತ್ತು ಮಧ್ಯದಲ್ಲಿ ಈತ ಜೈಲಿನಿಂದ ಹೊರಗೆ ಸ್ವತಂತ್ರನಾಗಿದ್ದ ಅತೀ ದೀರ್ಘ ಅವಧಿ [illegible] ದಿವಸಗಳ ತನಕ ಮಾತ್ರ ಸಾಯುವ ಆರು ತಿಂಗಳು ಮುಂಚೆ ಇವನ ಕೊನೆಯ ಬಿಡುಗಡೆಯಾಯಿತು

✠

ರಾಜಕೋಟದ ದಾಹೋದ್ ರೈಲ್ವೆ ಸ್ಟೇಶನಿನಲ್ಲಿ ಸ ಂಕಡಧಿಕಾರಿಗಳು ಓರ್ವ ಗರ್ಭಿಣಿ ಸ್ತ್ರೀಯನ್ನು ಶೋಧಕ್ಕೊಳಪಡಿಸಿದಾಗ ಅವಳು ಆಕ್ಷೇಪವೆತ್ತಿದಳು ಆದರೆ ಒತ್ತಾಯದಿಂದ ಶೋಧಿಸಲು ಅವಳ ಹೊಟ್ಟೆಯ ಬಳಿ ೧೭ ತೊಲ ಅನಧಿಕೃತ ಅಫೀಮು ಕಟ್ಟಲ್ಪಟ್ಟಿದ್ದು ಕಂಡು ಬಂತು

✠

ಅಜ್ಮೀರದ ಬಳಿಯಿರುವ ಪುಷ್ಕರವೆಂಬ ಯಾತ್ರಾ ಸ್ಥಳದಲ್ಲಿನ ಒಂದು ಹಳೇ ಕಟ್ಟಡದ ಒಂದು ೨೧ ರಾತ್ಲು ಭಾರದ ಕಲ್ಲು ಅಲ್ಲಿನೊಬ್ಬ ಚೌಕಿದಾರನ ಬಳಿಯಿದೆ ಇಷ್ಟು ಭಾರವಿದ್ದರೂ ಕಲ್ಲು ನೀರಿನ ಮೇಲೆ ತೇಲಾಡುತ್ತದೆಯಂತೆ ಈ ತೇಲುವ ಕಲ್ಲಿನ ವಿಚಿತ್ರ ನೋಡಲು ಜನರು ಗುಂಪುಕಟ್ಟಿ ಹೋಗುತ್ತಿರ ವರ

✠

ನ್ಯೂಯೋರ್ಕಿನ ಒಂದು ಶಾಲೆಯ ನಾಲ್ಕು ಪೋಕ್ರಿ ಬಾಲಕರು ತಮ್ಮ ಗಣಿತದ ಅಧ್ಯಾಪಕಿಯನ್ನು ಚಿತ್ರದಿಂದ ಭಿಗಿದರೆಂದು ಅವರನ್ನು ಕೈದುಮಾಡಲಾಗಿದೆ

✠

ಆಫ್ರಿಕದ ಕೆನ್ಯೂರೂನ ಕಾಡು ಜನರ ಮುಖಂಡನಿಗ ೧೧೦೦ ಹೆಂಡತಿಯರಿರುವರು ಪಂಗಡದಲ್ಲಿ ಹಿರಿ ಹೆಣ್ಣಾದರೆ ಗುರಿಕಾರನಿಗೆ — ಅವಳಿಜವಳಿಗಳಲ್ಲಿ ಒಂದು ಅವನಿಗೇ ಇವನ ರಾಣಿಯರ ಸಂಖ್ಯೆ ಕಡಿಮೆ ಮಾಡಲು ಭದ್ರತಾಮಂಡಳದಲ್ಲೂ ಪರ್ಯಾಲೋಚನೆಯಾಗುತ್ತಿದೆಯಂತೆ.

ನೆನಪು ಮರೆಯುವ ವಿಚಿತ್ರ ಸ್ವಭಾವ

ಸಿನೇಮಾ ಮಂದಿರವನ್ನು ಮನೆಯೆಂದು ತಿಳಿದವನು

ಅಧ್ಯಾಪಕರ, ಪ್ರೊಫೆಸರರ ಮರೆತುಬಿಡುವ ಅಭ್ಯಾಸದ ಕುರಿತಾದ ಅನೇಕ ಸಾರಸ್ಯ ಘಟನೆಗಳು ಆಗಾಗ್ಗೆ ಪ್ರಕಟಿಸಲ್ಪಡುತ್ತವೆ ಆದರೆ ಮರೆತಪ್ಪುವ ಹವ್ಯಾಸವು ಈ ಉದ್ಯಮ ವರ್ಗದವರಿಗೇ ಮೀಸಲಾಗಿಟ್ಟಿಲ್ಲ ಎಲ್ಲಾ ತರದ ಜನರೂ ಸ್ಮೃತಿವಂಚನೆಗೆ ಒಂದಲ್ಲ ಒಂದು ಸಲ ತುತ್ತಾಗುವರು

ಮೆಡ್ರಿಡ್ ನಗರದಲ್ಲಿ ಒಬ್ಬ ಸಭ್ಯ ಗೃಹಸ್ಥ ಸಿನೇಮಾ ಬಿಟ್ಟೊಡನೆ ತನ್ನ ಉಡುಪನ್ನು ಕಳಚಲು ಪ್ರಾರಂಭಿಸಿದ ಕೌತುಕಗೊಂಡ ದ್ವಾರಪಾಲಕರು ದೀಪನಂದಿಸಿ ಅವನ ಬಳಿ ಓಡಿಬಂದು ವಿಚಾರಿಸಿದಾಗ ಆತ ಅದು ತನ್ನ ಸ್ವಂತ ಮನೆಯೆಂಬ ಭ್ರಾಂತಿಗೊಳಗಾಗಿ ಮಲಗುವ ಸಿದ್ಧತೆಯಲ್ಲಿದ್ದನೆಂದು ತಿಳಿದುಬಂತು

ಇಗರ್ಜಿಯಲ್ಲಿ ಬಂದೂಕು ಪಾದ್ರಿ

ಒಕ್ಸ್‌ಫರ್ಡ್ ಪ್ರಾಂತ್ಯದ ಒಂದು ಹಳ್ಳಿ ಇಗರ್ಜಿಯ ಪಾದ್ರಿಯೊಬ್ಬರಿಗೆ ಆದಿತ್ಯವಾರವೆಂಬುದು ಮರೆತುಹೋಗುವುದು ಸರ್ವಸಾಮಾನ್ಯವಾಯಿತು ಅಂದವರು ಪೇಟೆ ಸಂತೆಗೆ, ಹೊಟೇಲಿಗೆ ಹೋಗಿ ತಿರುಗಿಕೊಳ್ಳುವರು. ಮತ್ತೆ ಇಗರ್ಜಿಯಲ್ಲಿ ಕಾಯುತಿದ್ದ ಭಕ್ತವೃಂದವರು ಜನ ಕಳಿಸಿ ಅವರನ್ನು ಕರತರಬೇಕು ಒಂದು ಆದಿತ್ಯವಾರ ಇವರು ಸಾಯಂಕಾಲದ ವರೆಗೆ ಕಾಣೆಯಾಗಿದ್ದರು ಹತ್ತಿರದ ಕಾಡಿನಲ್ಲಿ ಬೇಟೆಯಾಡುತಿದ್ದಾಗ ಅವರಿಗೆ ಪಕ್ಕನೆ ಆದಿತ್ಯವಾರವೆಂದು ನೆನಪು ಮೂಡಿತು ಕೂಡಲೇ ಬಂದೂಕು ಸಮೇತ ಬೇಟೆಗಾರನ ಉಡುಪಿನಲ್ಲಿ ಇವರು ಇಗರ್ಜಿ ಹೊಕ್ಕು ಪ್ರಾರ್ಥನಾ ವೇದಿಕೆಯಲ್ಲಿ ನಿಂತರಂತೆ

ಅತೀ ಎತ್ತರ ಹಾರುವ ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಿಫೋರ್ನಿಯದ ಓರ್ವ ನಿಪುಣ ವೈಮಾನಿಕ ತನ್ನ ಸರತಿ ಒಂದಾಗ ವಿಮಾನವನ್ನು ಮಿಕ್ಕೆಲ್ಲವರಿಗಿಂತ ಎತ್ತರ ಒಯ್ದು ಕಳಗೆ ಬಂದ ಆದರೆ ಪರಮಾವಧಿ ಉನ್ನತಿ ತೋರಿಸುವ ಉಪಕರಣವೊಂದನ್ನು ಜೋಡಿಸುವ ಗುಂಡಿಯೊಂದನ್ನೊತ್ತಲು ಮರೆತಿದ್ದುದರಿಂದ ಆತನ ಸಾಹಸ ಅಗಣೀಯವಾಯಿತು

ಪುನಃ ಪ್ರೊಫೆಸರನ ಕತೆ

ಕೆಂಬ್ರಿಜ್ ವಿಶ್ವ ವಿದ್ಯಾಲಯದ ಪ್ರೊಫೆಸರನೊಬ್ಬನಿಗೆ ಅಮೇರಿಕದ ಹರ್ವಾರ್ಡ್ ವಿಶ್ವ ವಿದ್ಯಾಲಯದಲ್ಲಿ ಕೆಲಸವಾಯಿತು ಅವನ ವಿದ್ಯಾರ್ಥಿಗಳು ಒಂದು ಬೀಳ್ಕೊಡುವ ಭೋಜನಕೂಟವನ್ನೇರ್ಪಡಿಸಿ ಆಮಂತ್ರಣವನ್ನು ತಂತಿವಾರ್ತೆ ಮೂಲಕ ಕಳುಹಿಸಿದರು ಪ್ರೊಫೆಸರನಿಗೆ ಉತ್ತರ ಕೊಡಲು ಮರೆತುಹೋಯಿತು ಪುನಃ ವಿದ್ಯಾರ್ಥಿಗಳು ಉತ್ತರದ ಖರ್ಚು ಕಟ್ಟಿದ ತಂತಿಯೊಂದನ್ನು ಕಳುಹಿಸಿದರು. ಅದಕ್ಕೂ ಪ್ರೊಫೆಸರನ ಮೌನವೆ ನಿರಾಶರಾಗಿ ಅವರು ಕೊನೆಗೆ ಉತ್ತರ ಬರೆಯುವ ಜೋಡಿಕಾರ್ಡು ಎಂದನ್ನು ಅವನಿಗೆ ಕಳುಹಿಸಿದರು. ಉತ್ತರವನ್ನು ಅವರೇ ಕಾರ್ಡಿನಲ್ಲಿ "ನನಗೆ ಔತಣಕ್ಕೆ ಬರಲು ಸಾಧ್ಯವಿಲ್ಲ" ವೆಂದು ಬರೆದಿದ್ದರು. ಈ ಸಲ ಪ್ರೊಫೆಸರ ಹೇಗೂ ಜವಾಬುಕೊಟ್ಟ-ಆತ ಆ ಎರಡು ಕಾರ್ಡುಗಳನ್ನು ಟಪ್ಪಾಲುಪೆಟ್ಟಿಗೆಯೊಳಗೆ ಹಾಕಿಬಿಟ್ಟನಂತೆ

ಟಪ್ಪಾಲು ಪೆಟ್ಟಿಗೆ ಸಂಬಂಧ ಇನ್ನೊಂದು ಸಂಗತಿ ನೆನಪಿಗೆ ಬರುತ್ತದೆ ನ್ಯೂಯೋರ್ಕಿನಲ್ಲಿ ಕ್ರೈಸ್ತ ದೇವಾಲಯಗಳ ಆಡಳ್ತೆದಾರರ ಒಂದು ಪರಿಷತ್ತು ಸೇರಿತ್ತು ಅದಕ್ಕೆ ಸದಸ್ಯನಾಗಿ ಬಂದೊಬ್ಬ ಅರ್ಚಕನು ಪರಿಷತ್ತಿನ ಕಾರ್ಯದರ್ಶಿ ಒಳಿಬಂದು ತನ್ನದೊಂದು ಚರ್ಮದ ಕೈ ಚೀಲ ಕಾಣೆಯಾಗಿದೆಂದೂ ಅದರಲ್ಲಿ ಆ ದಿನ ಸಭೆಗೆ ಸಂಬಂಧಪಟ್ಟ ಮುಖ್ಯದ ದಾಖಲೆ ಪತ್ರಗಳಿದ್ದವೆಂದು ಆತ ಸ್ಪಷ್ಟಿಸಿದ ಹೀಗೆ ಪತ್ತೆಯಾಗದೆ ಸದಸ್ಯರೆಲ್ಲಾ ಗಾಬರಿಗೊಂಡ ಬಳಿಕ ದಿನ ಸಂಜೆ ಒಂದು ಕಾಗದವನ್ನು ಟಪ್ಪಾಲಿಗೆ ಹಾಕಲು ಹೋದಾಗ ಪರವೆ ತಪ್ಪಿ ಕಾಗದದ ಬದಲಿಗೆ ಚರ್ಮದ ಚೀಲವನ್ನು ಕೆಂಪು ಪೆಟ್ಟಿಗೆಯೊಳಗೆ ಇಳಿಸಿಬಿಟ್ಟಿದ್ದನೆಂದು ತಿಳಿಯಿತು ಪ್ರಾಮಾಣಿಕರಾದ ಟಪ್ಪಾಲಧಿಕಾರಿಗಳು ಹೇಗೋ ಅದನ್ನು ಬೇಗನೆ ಅವನಿಗೆ ತಲುಪಿಸಿದರು

ಗವರ್ನರ್ ಜನರಲ್ಲರ ಹಿಂದೀ ಭಾಷಣ

ಭಾರತ ಪ್ರಧಾನರ ಪ್ರಶಂಸೆ

ಮಾನ್ಯ ಗವರ್ನರ್ ಜನರಲ್ ರಾಜಾಜಿಯವರು ತಮ್ಮ ಉನ್ನತ ಹುದ್ದೆಯ ಸ್ವೀಕಾರದ ನಂತರ ಪ್ರಥಮ ಸಾರ್ವಜನಿಕ ಭಾಷಣವನ್ನು ಹಿಂದೂಸ್ಥಾನಿಯಲ್ಲಿ ನಿರೂಪಿಸಿದರು ಸಂದರ್ಭ ಡಿಲ್ಲಿ ನಗರ ಸಭೆಯ ಮಾನಪತ್ರಕ್ಕೆ ಇತ್ತ ಉತ್ತರ ಧವಳ ಖಾಧಿಧಾರಿಗಳಾಗಿ ಹಣೆಯೆಲ್ಲ ಕುಂಕುಮದ ಮಂಗಲಕರವಾದ ತಿಲಕ ಲೇಪಿತರಾಗಿ ರಾಜಾಜಿಯವರು ಕಿಕ್ಕಿರಿದ ಜನಸ್ತೋಮದ ಹರ್ಷೋದ್ಗಾರಗಳ ಕೋಲಾಹಲದಲ್ಲಿ ಭಾಷಣ ವೇದಿಕೆಯನ್ನೇರಿ ಧ್ವನಿವಾಹಕಗಳ ಮುಂದೆ ನಿಂತರು

ಅವರಲ್ಲಿ ಚಿತ್ರೈಸಿದಾಗ ಹನಿಮಳೆ ಬೀಳುತಿತ್ತಾದುದರಿಂದ ಓರ್ವ ಅಂಗರಕ್ಷಕರು ಗವರ್ನರ್ ಜನರಲ್ಲರಿಗೆ ಒಂದು ಕೊಡೆಯನ್ನು ಹಿಡಿದರು. ನಮ್ರವಾಗದನ್ನು ದೂರ ಸರಿಸಿ ರಾಜಾಜಿಯವರು ನೀರಹನಿಗೆ ಶಿರವೆತ್ತಿ ಮುಂದರಿದರು

ನಂತರ ಅವರು ಭಾಷಣವನ್ನಾರಂಭಿಸಿದರು: "ಭಾಯಿಯೊ ಔರ್ ಬೆಹನೊ" ಸಮುಧರ ಭಾಷಾ ಸರಣಿಯಿಂದೊಡಗೂಡಿದ ಶುದ್ಧೋಚ್ಚಾರದ ಹಿಂದೂಸ್ಥಾನಿಯಲ್ಲಿ ಅವರು ಭಾಷಿಸಿ ಜನತೆಯ ಗೌರವಾದರವನ್ನು ಸೆಳೆದರು ಸಭೆ ಅವರ ಉಜ್ವಲ ಭಾಷಣದ ಪ್ರತಿಯೊಂದು ಸೊಲ್ಲನ್ನು ಅರ್ಥ ಮಾಡಿಕೊಳ್ಳುತ್ತ ನಿಶ್ಶಬ್ದವಾಗಿ ಆಲಿಸುತಿದ್ದರು ಭಾಷಣಾಂತ್ಯದಲ್ಲವರು ಜವಾಹರರ ಕಡೆ ತಿರುಗಿ "ಹೇಗಿತ್ತದು?" ಎಂದು ಪ್ರಶ್ನಿಸಿದರು ಉತ್ತರವಾಗಿ ಕೂಡಲೇ ಭಾರತ ಪ್ರಧಾನರು "ಅತ್ಯುತ್ತಮ"ವೆಂದ ಪ್ರಶಂಸಿಸಿದರು

ಡಿಲ್ಲಿಯ ಕೊಳೆ, ಕಲಹಗಳು

ಗವರ್ನರ್ ಜನರಲ್ಲರ ಅಂದಿನ ಭಾಷಣವು ಸರಳವಿಸ್ಪಷ್ಟ ಸ್ಫೂರ್ತಿದಾಯಕವಿತ್ತು, ಹೃತ್ಪ್ರವರ್ತಕವಾಗಿದ್ದಷ್ಟೆ ಸ್ವತಃಸ್ವೀಯವೂ ಆಗಿತ್ತು "ಕ ತಿಯಿಸ್ಲದ ಸೌಂದರ್ಯ ವಿಷಪೂರಿತವಾದ ಹೂವಿನಂತೆ" ಎಂದವರ ಮಾತುಗಳು ಹಳೆ ಡಿಲ್ಲಿಯ ಕೊಳೆ ಕೂಪಗಳ ಕುರಿತಾಗಿ ನಿರೂಪಿಸಲ್ಪಟ್ಟವು. ಮೂಗು ಕಟ್ಟುವ ದುರ್ವಾಸನೆ, ಉಸಿರು ಕಟ್ಟುವ ಧೂಳು. ಇವು ಶತಮಾನಗಳಿಂದ ಡಿಲ್ಲಿ ನಗರದಲ್ಲಿ ವಾಸಿಸಿಕೊಂಡಿದ್ದ ಅನಿಷ್ಟಗಳು

ಡಿಲ್ಲಿ ನಗರಗಳ (ಹೊಸ ಮತ್ತು ಹಳೆಯವುಗಳು) ನಗರಾಡಳಿತ ವ್ಯವಸ್ಥೆಯಾದರೂ ಅಷ್ಟೊಂದು ತೃಪ್ತಿಕರವಾಗಿಲ್ಲ ಹಳೇ ರಾಜ್ಯಾಡಳಿತದ ಪಿಡುಗು ಇನ್ನೂ ಆ ರಾಜಧಾನಿಗಳನ್ನು ಸಂಪೂರ್ಣ ಬಿಟ್ಟಿಲ್ಲ ಆದರೆ ಈ ವ್ಯಾಧಿಯು ಶಮನವಾಗುವ ದಿನಗಳು ದೂರವಿಲ್ಲವೆಂದು ನಿರೀಕ್ಷಿಸಬಹುದು ನಗರ ಸಭಾಸದರಾದರೊ ಪಕ್ಷಪಂಗಡಗಳ ಕಲಹದಲ್ಲಿ ಮಗ್ನರಾಗಿದ್ದು ತಮ್ಮ ಆದ್ಯ ಕರ್ತವ್ಯಗಳನ್ನು ದುರ್ಲಕ್ಷಿಸುತ್ತಿರುವರೆಂಬ ಆರೋಪಕ್ಕೆ ಒಳಗಾಗಿರುವರು ನಿರಾಶ್ರಿತರು ಅಲ್ಲಿಯ ಸಮಸ್ಯೆಗಳನ್ನು ಇನ್ನಷ್ಟು ಕಠಿಣ ಮಾಡಿರುವರು ಆದರೆ ರಾಜಾಜಿಯವರ ಭಾಷಣವು ಎಲ್ಲಾ ನಗರ ಸಭೆಗಳಿಗೆ ಮಾರ್ಗದರ್ಶಕವಾಗಿದೆ



ಕೂಸಿನ ಮೈ ತಂಪಗಿಡುವ ದಗ್ಗನ್ನು ನಿವಾರಿಸುವ ತಾಯಂದಿರೂ ಕೂಡ ಉಪಯೋಗಿಸುತ್ತಾರೆ.

ಸುಗಂಧಿತ ರೇಶ್ಮೆ ನುಣ್ಣಗಿನ ಈ ಪೌಡರ ಎಳೆ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ

558

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50 ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತು ಸಂಪಾಜೆ, ಮಡಿಕೇರಿ ಘಾಟಿರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜೊಯಿಂಟ್ ಮೆನೇಜರ್ಸ್,

ಮಂಗಳೂರು. 23-12-1947.

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs 19,87,300
Reserves	Rs 8,00,400

BANKING BUSINESS OF EVERY DESCRIPTION TRANSACTED

V. R. Kamath, B A L L B
General Manager

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 — **About 54 lakhs**

Our experience of 37 years available to you for arranging Insurance Investment
It therefore pays you to consult us to insure or to represent

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:
MANGALORE, CALICUT, TRIVANDRUM, MADURA, MADRAS, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಂಟುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 30—7—1948 [ಸಂಚಿಕೆ 30]

ಭಾರತವು ವಿಶ್ವಕ್ಕೆ ಶಾಂತಿ ದೀಪವನ್ನು ಬೆಳಗಲಿ

ಶಾಂತಿ ಸಾಧಕರ ಪರಿಷತ್ತಿನ ಉದ್ದೇಶ

ಮಹಾತ್ಮರಿಂದ ಪುನೀತವಾದ ಪುಣ್ಯಭೂಮಿ

ರಾಷ್ಟ್ರಾಧ್ಯಕ್ಷರ ದಿವ್ಯ ಸಂದೇಶ

[ಬರುವ ಜನವರಿಯಲ್ಲಿ ದಿಲ್ಲಿಯಲ್ಲಿ ವಿಶ್ವ ಶಾಂತಿ ಸಾಧಕರ ಪರಿಷತ್ತೊಂದು ಸೇರುವದು ಅದರ ಉದ್ದೇಶವನ್ನು ವಿವರಿಸುತ್ತಾ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಕೊಟ್ಟ ಒಂದು ರೇಡಿಯೊ ಭಾಷಣದ ಸಾರಾಂಶವನ್ನು ಕೊಡಲಾಗಿದೆ.]

ದಿಲ್ಲಿಯಲ್ಲಿ 1949ನೇ ಜನವರಿ ತಿಂಗಳಲ್ಲಿ ಸೇರಲಿರುವ ವಿಶ್ವಶಾಂತಿ ಸಾಧಕರ ಪರಿಷತ್ತು ಮಹಾತ್ಮಾ ಗಾಂಧಿಯವರ ದಿವ್ಯ ನೇತೃತ್ವದಲ್ಲಿ 1948ರಲ್ಲೇ ಜರಗಬೇಕೆಂದು ಎಲ್ಲರ ಹಾರೈಕೆಯಾಗಿತ್ತು. ಆದರೆ ಬ್ರಿಟಿಷರು ಇಲ್ಲಿಂದ ಸಂಪೂರ್ಣ ಹೊರಟುಹೋದ ಮೇಲೆ ಅದನ್ನು ಸೇರಿಸುವುದುತ್ತಮವೆಂದು ಮತ್ತೆ ನಿರ್ಧರಿಸಲಾಯಿತು.

ಯುದ್ಧವನ್ನು ಅನಿವಾರ್ಯವಾಗಿ ಮಾಡುವ ವಿನಾಶಕಾರಕ ಶಕ್ತಿಗಳನ್ನು ನಾವು ಸುಲಭವಾಗಿ ಮನಗಾಣಬಹುದು. ಯುದ್ಧವನ್ನೂ ಅವುಗಳ ದುಷ್ಪರಿಣಾಮಗಳನ್ನೂ ಪ್ರತ್ಯಕ್ಷ ಕಂಡ ನಾವು ಈ ಪರಿಸ್ಥಿತಿಯು ಅದೆಷ್ಟೋ ಭೀಕರ ಪರಿಣಾಮವನ್ನುಂಟು ಮಾಡುತ್ತದೆಂದೂ ಒಪ್ಪಿವು. ಯುದ್ಧದ ಹೃದಯ ಕರಗಿಸುವ ದೃಶ್ಯಗಳು ನಮ್ಮನ್ನು ಇಂತಹ ಕಾರ್ಯಸಾಧನೆಗೆ ತೊಡಗಿಸಿವೆ. ಸಂಕಷ್ಟಕಾಲದಲ್ಲಿ ಕೈಕೊಂಡ ಪ್ರತಿಜ್ಞೆಗಳನ್ನು ನಾವು ಮರೆತುಬಿಟ್ಟು ಪುನಃ ಅಂಥಹದೇ ಭೀಕರ ದುಃಸ್ಥಿತಿ ಒದಗುವ ತನಕ ಕೈಕಟ್ಟಿ ಕುಳಿತುಕೊಳ್ಳುವುದೊಂದು ಇದುತನಕದ ಸಾಮಾನ್ಯ ರೂಢಿಯಾಗಿ ಹೋಗಿದೆ. ಕಳೆದ ಯುದ್ಧದ ಸ್ಮೃತಿಯು ನಮ್ಮಲ್ಲಿ ಇನ್ನೂ ಹಸುರಾಗಿದೆ. ವಿನಾಶಕಾರಿ ಹಿಂಸೆಯು ಹೇಗಿರಬಲ್ಲುದೆಂದು ನಮಗದು ತೋರಿಸಿಕೊಟ್ಟಿತು. ಸಾಮೂಹಿಕ ಕೊಲೆ, ನಾಶಗಳು ಹೇಗೆ ಸಾಧ್ಯವೆಂದೂ ಅದು ತೋರಿಸಿಕೊಟ್ಟಿತು. ಮಾನವನ ಸುಖಕ್ಕೆ ಉಪಯೋಗಿಸಬಹುದಾದ ವಿಜ್ಞಾನದ ಪರಿಪೂರ್ಣತೆಯನ್ನು ಹೇಗೆ ದುರಂತಮಯ ವಿನಾಶವನ್ನು ತಂದೊಡ್ಡಲುಪಯೋಗಿಸಿಕೊಳ್ಳಬಹುದೆಂದೂ ಅದರಿಂದ ನಾವು ಕಲಿತೆವು. ಮನುಷ್ಯನು ಅದೆಷ್ಟು ಕೀಳು ಸ್ಥಿತಿಗೆ ಇಳಿಯಬಲ್ಲನೆಂಬುದರ ಸ್ಪಷ್ಟ ನಿದರ್ಶನವಿದು.

ಇಷ್ಟಾದರೂ ಯುದ್ಧವನ್ನು ತಡೆಗಟ್ಟಲು ನಾವು ಮಾಡಿದ ಪ್ರಯತ್ನಗಳು ಅತ್ಯಲ್ಪವಾಗಿವೆ. ಅವಿಶ್ವಾಸ, ಸಂಶಯ, ಪರರಾಷ್ಟ್ರಾಕ್ರಮಣ, ಇವುಗಳೆಲ್ಲೆಲ್ಲೂ ತುಂಬಿಕೊಂಡಿವೆ. ಇದರಲ್ಲಿ ಪುನಃ ಅದೇ ಹಳೆ ಸೊಲ್ಲು ಕಾಣುತ್ತಿದೆ. ಇಂದು ಅಗಾಧ ಶಕ್ತಿರಾಷ್ಟ್ರಗಳು ವಿಶ್ವ ಒಡೆತನಕ್ಕಾಗಿಯೇ ಹಾತೊರೆಯುತ್ತಿವೆ. ಅವರ ಬಳಿ ಹೊಸಹೊಸ ನಾಶಕಾರಕ ಶಸ್ತ್ರಾಸ್ತ್ರಗಳೂ ಇವೆ. ಇವು ಹೊಸತೊಂದು ಯುದ್ಧದ ಪೂರ್ವಸೂಚನೆಗಳೇ ಎಂದು ಸಂಶಯಬರುತ್ತಿದೆ. ಒಂದು ವೇಳೆ ಈ ಶಸ್ತ್ರಾಸ್ತ್ರಗಳ ಯುದ್ಧ ಪುನರ್ಸಂಭವಿಸಿದರೆ ಮಾನವ ಕೋಟಿಯು ಉಳಿಯಬಲ್ಲುದೇ?

ಹಿಂಸೆಯು ಸ್ವೇಚ್ಛಾರಕ್ತ ರಾಷ್ಟ್ರರಾಷ್ಟ್ರಗಳೇ ತೊಡಗಿವೆ ಮಾತ್ರವಲ್ಲ ವ್ಯಕ್ತಿಗತವಾಗಿಯೂ ಅದನ್ನು ನಿರ್ವಹಿಸಲು ನಮ್ಮ ಈಗಿನ ಸಮಾಜ ಮತ್ತು ರಾಜ್ಯಘಟನಾ ರಚನೆಯಲ್ಲಿ ಎಡೆಸಿಕ್ಕಿದಂತಾಗಿದೆ. ಆದುದರಿಂದ ಮಾನವ ವ್ಯವಹಾರ ಕ್ಷೇತ್ರದಲ್ಲೆಲ್ಲೊ ಒಂದು ಕಡೆ ಈ ಹುಳುಕು ಉಂಟಾಗಿದೆ. ಮಾನವನ ಭಾವನಾಕ್ಷೇತ್ರದಲ್ಲೇ ಕಳಂಕವುಂಟಾದಂತೆ ನನಗೆ ತೋರುತ್ತದೆ. ವಿಶ್ವವ್ಯವಹಾರ ಸಾಗಲು ಅತ್ಯಾವಶ್ಯಕವಾಗಿರುವ ಸದ್ವರ್ತನೆ, ಸತ್ಯಶೀಲ, ಮತ್ತಿತರ ನೈತಿಕ ವಿಚಾರಗಳಿಗೆ ನಮ್ಮ ಮೇಲಿರುವ ಹಿಡಿತ ತಪ್ಪಿದಂತಾಗಿದೆ. ನಾಭಿವನ್ನು ಅಲಕ್ಷ್ಯಮಾಡಿದ್ದೇ ಈ ಅನಾಹುತಕ್ಕೆ ನಾವು ಮುಟ್ಟುವಂತಾಯಿತು.

ಇಷ್ಟಾದರೂ ಈ ಹಿಂಸಾಮಯ ಜಗತ್ತಿನಲ್ಲಿ ಅಮರಸತ್ಯ ಅಹಿಂಸಾ ತತ್ವಗಳಲ್ಲಿ ಅಚಲವಿಶ್ವಾಸವಿದ್ದವರಿದ್ದಾರೆ. ನೀಚತನ ಹಿಂಸೆಗಳನ್ನು ಅವರು ಆತ್ಮಶಕ್ತಿ ಮತ್ತು ನೀತಿಯ ಬಲದಿಂದ ಜಯಿಸಲು ಇಚ್ಛೆಪಡುತ್ತಾರೆ. ಅನೀತಿ ವ್ಯವಹಾರದಿಂದಲೂ ಹಿಂಸಾತ್ಮಕ ಬಲಾತ್ಕಾರದಿಂದಲೂ ಚಿರಶಾಂತಿಸಾಧನೆಯು ದುಸ್ಸಾಧ್ಯವೆಂದವರು ದೃಢವಾಗಿ ನಂಬಿರುತ್ತಾರೆ.

ಇವರೇ ಶಾಂತಿಸಾಧಕರು. ಭಾರತದಲ್ಲಿ ಮಹಾತ್ಮಾಗಾಂಧಿಯವರ ದಿವ್ಯ ನಾಯಕತ್ವದಲ್ಲಿ ತರಬೇತಾದ ಒಂದು ತಂಡವಿದ್ದಂತೇ ಜಗತ್ತಿನ ಇತರ ದೇಶಗಳಲ್ಲೂ ಇಂತಹ ಸಜ್ಜನರು ಕೆಲವಂದಿ ಇದ್ದಾರೆ. ಇವರಲ್ಲನೇಕರು ವಿಶ್ವಶಾಂತಿ ಸಾಧನೆಗಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟಂಥವರು. ಇದಕ್ಕಾಗಿ ಸಹನಾತೀತ ಕಷ್ಟನಿಷ್ಠುರಗಳನ್ನು ಇವರು ಅನುಭೋಗಿಸಿರುವರು. ಇಂದು ಇವರು ವಿಶ್ವದ ಯುದ್ಧ ಕಾತ್ರವನ್ನು ನಿವಾರಣೆಮಾಡಲೇಬೇಕೆಂಬ ದೃಢ ನಿಶ್ಚಯಕ್ಕೆ ಬಂದಿರುವರು. ಇವರ ಸದುದ್ದೇಶವನ್ನು ಪರಿಪೂರ್ಣಗೊಳಿಸಲು ಜಗತ್ತಿನ ಶಾಂತಿಪ್ರಿಯರೆಲ್ಲರೂ ನೆರವಾಗಬೇಕಾಗಿದೆ.

ಮಾನವನ ಸತ್ಕಾರ್ಯೋತ್ಸಾಹವನ್ನು ಸಂಘಟಿಸುವುದು ಶಾಂತಿಸಾಧಕರ ಪ್ರಥಮ ಕರ್ತವ್ಯವಾಗಿದೆ. ಜಗತ್ತನ್ನು ನಿರಂತರಭೀತಿ ಕಳವಳಗಳಿಗೂ, ದೀನದರಿದ್ರತೆಗೂ ಒಳಮಾಡಿದ ದುಷ್ಟ ಶಕ್ತಿಗಳನ್ನು ಜಯಿಸಬೇಕಾಗಿದೆ. ಇಂತಹ ಅಗಾಧಕಾರ್ಯ ಸಾಧನೆಯನ್ನು ಮಾಡಲು ಸಮರ್ಥನಿದ್ದ ಆವೊಂದು ವ್ಯಕ್ತಿ ಇಂದು ನಮ್ಮ ಮಧ್ಯದಲ್ಲಿಲ್ಲದಿದ್ದುದು ನಮ್ಮ ದುರ್ಭಾಗ್ಯ. ವ್ಯಕ್ತಿಯಿಲ್ಲದಿದ್ದರೂ ಅವರ ಶಕ್ತಿಸ್ಫೂರ್ತಿಗಳು ನಮ್ಮನ್ನು ಕಾರ್ಯಮಗ್ನರನ್ನಾಗಿ ಮಾಡಲು ಯಥೇಷ್ಟ ಸಾಕು.

ಶಾಂತಿಸಾಧಕರ ಈ ಪರಿಷತ್ತನ್ನು ಯಶಸ್ವಿಯಾಗಿ ಮಾಡಲು ಶಾಂತಿನಿಕೇತನದ ಆಡಳಿತಗಾರರೂ ತಮ್ಮ ಸಂಪೂರ್ಣ ಸಹಕಾರದ ಆಶ್ವಾಸನಯಿತ್ತಿರುವರು. ಅದರ ಸಂಸ್ಥಾಪನಾಚಾರ್ಯರಾದ ಕೀರ್ತಿಶೇಷ ವಿಶ್ವಕವಿ ರವೀಂದ್ರನಾಥ ಟಾಗೋರರಾದರೋ ತಮ್ಮ ಜೀವನಾಂತ್ಯದ ವರೆಗೂ ಈ ಉದಾತ್ತ ಧ್ಯೇಯಸಾಧನೆಯಲ್ಲೇ ತೊಡಗಿದ್ದರು. ಅವರು ತಮ್ಮ ಪ್ರತಿಯೊಂದು ಕೃತಿ ಕಾರ್ಯ ಮೂಲಕವೂ ನಮ್ಮದಿಯ ವಿಶ್ವ ರಚನಯನ್ನೇ ತಳಹದಿಯಾಗಿಟ್ಟುಕೊಂಡವರು.

ಇಂತಹ ಸಂದರ್ಭದಲ್ಲಿ ಭಾರತವೇ ಈ ಶಾಂತಿಸಾಧಕರ ಪರಿಷತ್ತಿನ ಸಮ್ಮೇಳನದ ಸ್ಥಾನವಾಗಬೇಕಾದುದೂ ಯಥಾಯೋಗ್ಯವೆ. ಕಾರಣ ಸತ್ಯ ಅಹಿಂಸೆಗಳ ತೇಜೋವಂತ ಕಿರಣಗಳು ಪ್ರಥಮತಃ ಇಲ್ಲಿಂದಲೆ ತಾನೆ ಪಸರಿಸಲ್ಪಟ್ಟವು? ಒಂದಲ್ಲ ಒಂದು ವಿಧಾನದಲ್ಲಿ ಭಾರತೀಯರು ಈ ಸಂಪ್ರದಾಯವನ್ನು ಪಾರಂಪರ್ಯಾನುಗತವಾಗಿ ಮುಂದಕ್ಕೆ ಸಾಗಿಸಿ ಬಂದಿರುವರು ಮಾತ್ರವಲ್ಲ ಪ್ರಾಚೀನ ಕಾಲದ ಆ ಅಹಿಂಸಾಬೋಧಕನ ಪ್ರತಿಬಿಂಬವೆಂಬಂತೆ ನಮ್ಮೀ ಶತಮಾನದಲ್ಲಿ ಅದೇ ತತ್ವವನ್ನು ತನ್ನ ಜೀವನದ ಉಸಿರಾಗಿ ಕಟ್ಟಿಕೊಂಡ ಮಹಾತ್ಮನಾದರೋ ಇದೇ ದೇಶದಲ್ಲಿ ಹುಟ್ಟಿದವನಲ್ಲವೇ?

ಹಲವಾರು ಕುಂದುಕೊರತೆಗಳಿದ್ದರೂ ಭಾರತವು ಇನ್ನೂ ಜಗತ್ತಿಗೆ ಶಾಂತಿದೀಪವನ್ನು ಬೆಳಗಬಲ್ಲುದೆಂದು ನಮಗೆ ಸಂಪೂರ್ಣ ವಿಶ್ವಾಸವಿದೆ. ಮಾನವಕೋಟಿಗೆ ಭಾರತವೂ ದಿವ್ಯ ಸಂದೇಶಗಳನ್ನೀಯಲು ಸಮರ್ಥವಿದೆಂಬುದನ್ನು ನಾವು ತೋರಿಸೋಣ. ವಿಶ್ವದ ಶಾಂತಿಸುಧಾಕರನ್ನು ಅತಿಥಿಗಳಾಗಿ ಸನ್ಮಾನಿಸುವ ಪವಿತ್ರ ಕಾರ್ಯಭಾರವೂ ನಮ್ಮ ಮೇಲೆ ಬಿದ್ದಿರುವುದು. ನಮ್ಮೀ ಹೊಣೆಗಾರಿಕೆಯನ್ನು ನಾವು ನಮ್ಮ ಶತಮಾನಗಳಿಂದ ಪ್ರಸಿದ್ಧವಾದ ಸಾಂಪ್ರದಾಯದಿಂದ ನಿರ್ವಹಿಸೋಣ. ಪರಸ್ಪರ ದೇಶವಿದೇಶಿಗರ ವಿಚಾರ ಚರ್ಚೆಗಳಿಂದ ನಾವೆಲ್ಲರೂ ಲಾಭಹೊಂದಿದವರಾಗಿ, ನಮ್ಮ ಅತಿಥಿಗಳು ಹಿಂದಿರುಗುವಾಗ ಭಾರತದ ಉಚ್ಚ ಸಂಸ್ಕೃತಿಯನ್ನು ಪೂರ್ಣಬಲ್ಲವರಾಗಿ ಹಿಂತಿರುಗುವಂತೆ ನಾವು ಪ್ರಯತ್ನಿಸೋಣ.

ಹಾನಿ ಮಾಡಿದರೆ ಹಣ ತುಂಬಬೇಕಾದೀತು

ನಷ್ಟ ಭರ್ತಿಯ ಕೆಲ ವಿಚಿತ್ರ ಮೊಕದ್ದಮೆಗಳು

ಭಯಗೊಳಿಸಿದರೂ ನಷ್ಟ ತುಂಬಬೇಕು

ಕೆಲ ಸಮಯದ ಹಿಂದೆ ಬೊಂಬಾಯಿಯ ಒಬ್ಬ ವರ್ತಕನು ತನ್ನೊಂದು ಪಾರ್ಸೆಲು ನಷ್ಟವಾಯಿತೆಂಬುದಕ್ಕೆ ಬಿ. ಬಿ. ಸಿ. ಐ. ರೈಲ್ವೆಯ ಮೇಲೆ ನಷ್ಟಭರ್ತಿಗಾಗಿ ವ್ಯಾಜ್ಯ ಹೂಡಿ ಆ ರೈಲು ಕಂಪೆನಿಯ ಸೊತ್ತು ವಶ ಮಾಡುವ ಹಕ್ಕಿನ 'ಡಿಕ್ರಿ'ಯೊಂದನ್ನು ಪಡೆದ. ಅದರ ಆಧಾರದ ಮೇಲೆ ಅವನು ಅಲ್ಲಿ ಸ್ಟೇಶನೊಂದರಲ್ಲಿ ನಿಂತ ರೈಲುಬಂಡಿಯ ಇಂಜಿನನ್ನು ವಶಪಡಿಸಲು ಪ್ರಯತ್ನವನ್ನು ಮಾಡಿದನು. ರೈಲು ವಿಳಂಬವಾದಾಗ ಪ್ರಯಾಣಿಕರು ಅವನ ನಿರ್ಧಾರವನ್ನು ಬದಲಿಸುವಂತೆ ತುಂಬಾ ವಿನಂತಿ ಮಾಡಿದರೂ ಅವನು ಒಪ್ಪಲಿಲ್ಲ. ಕೊನೆಗೋರ್ವ ಚತುರ ಪ್ರಯಾಣಿಕನು ಒಂದು ಉಪಾಯ ಹೂಡಿದ. ರೈಲು ಇಂಜಿನಿನ ಚಾಲಕರಿಗೆ ಕೆಳಗಿಳಿಯುವಂತೆ ಹೇಳಿ ಆ ವರ್ತಕನಿಗೆ ಅದನ್ನು ಕೊಡಲೇ ಅಲ್ಲಿಂದ ಕೊಂಡೊಯ್ಯಲು ತಿಳಿಸಿದಾಗ ಹಟ ಹಿಡಿದ ವರ್ತಕನಿಗೆ ವಿವೇಕ ಮೂಡಿ ಎಲ್ಲ ಪ್ರಯಾಣಿಕರ ನಗಾಟದ ನಡುವಿನಲ್ಲವನು ತನ್ನ ಮನೆ ಹಾದಿ ಹಿಡಿಯಬೇಕಾಯಿತು

ಇದಕ್ಕಿಂತಲೂ ವಿಚಿತ್ರವಾದ ನಷ್ಟ ಭರ್ತಿಯ ಮೊಕದ್ದಮೆಗಳು ಜಗತ್ತಿನ ಇತರ ಕಡೆಗಳಲ್ಲಿ ನಡೆದಿವೆ ಇಂಗ್ಲೆಂಡಿನಲ್ಲಿ ನಡೆದ ಕೆಲ ಇಂತಹ ಘಟನೆಗಳನ್ನು ಅಲ್ಲಿನ 'ಸಂಡೇ ಎಕ್ಸ್‌ಪ್ರೆಸ್' ಪತ್ರಿಕೆಯ ಸಿಡ್ನಿರೊಡಿನ್ ಎಂಬ ಬಾತ್ಮಿದಾರನು ಶೇಖರಿಸಿರುವನು

ಜೇನುನೊಣ ಕಚ್ಚಿದಕ್ಕೆ

೧೯೩೩ರಲ್ಲಿ ನಡೆದ ಘಟನೆಯಿದು ಲಂಡನಿನಲ್ಲಿ ಒಬ್ಬ ತರುಣಿಯು ಒಂದು ಸೋಡಾ ಬಾಟ್ಲಿಯಿಂದ ಶುಂಠಿ ರಸವನ್ನು ಕುಡಿಯುತಿದ್ದಾಗ ಅದರೊಳಗಿದ್ದ ಒಂದು ಚಿಪ್ಪುಹುಳುವು ಅವಳ ಹೊಟ್ಟೆಯನ್ನು ಸೇರಿತು. ಅದರಿಂದವಳ ಆರೋಗ್ಯಕ್ಕೆ ತುಂಬಾ ಹಾನಿಯಾಯಿತೆಂದವಳು ಸೋಡಾ ಅಂಗಡಿಯ ಮಾಲಕ ಮೇಲೆ ನಷ್ಟ ಭರ್ತಿಗೆ ದಾವೆ ಹೂಡಿ ಯೋಗ್ಯ ಪರಿಹಾರವನ್ನು ಪಡೆದಳು

ಜೇನುನೊಣವನ್ನು ಸಾಕುವ ಇಂಗ್ಲಿಷ್ ಗೃಹಸ್ಥರನೇಕರು ನಷ್ಟ ಭರ್ತಿಯನ್ನು ತುಂಬಿದ್ದಾರೆ

ಒಬ್ಬ ಸೇವಕನನ್ನು ಪುಸಲಾಯಿಸಿ ತನ್ನ ಮನೆಗೆ ಕೆಲಸಕ್ಕೆ ಬರುವಂತೆ ಮಾಡಿದ ಒಬ್ಬನು ಆ ಸೇವಕನ ಮಾಜಿ ಯಜಮಾನನಿಗೆ ಪರಿಹಾರ ಧನವೀಯಬೇಕಾಯಿತು.

ಅಜಾಗ್ರತೆಯಿಂದ ಓರ್ವ ಮೋಟಾರು ಮಾಲಕನು ತನ್ನ ವಾಹನದಿಂದ ನೀರನ್ನು ಮಾರ್ಗದಲ್ಲಿ ಇಳಿಬಿಟ್ಟನು ಚಳಿಗಾಲವಾದ್ದರಿಂದ ನೀರು ಹೆಪ್ಪುಗಟ್ಟಿ ತೆಳ್ಳಗಿನ ಹಿಮಪದರಾಯಿತು ಅದರ ಮೇಲೆ ಹೋಗುತಿದ್ದ ಓರ್ವ ದಾರಿಹೋಕನು ಜಾರಿ ಬಿದ್ದು ಘಾತಗೊಂಡ. ಮೋಟಾರು ಒಡೆಯನು ಅವನಿಗೆ ಯೋಗ್ಯ ಪರಿಹಾರ ಕೊಡಬೇಕಾಯಿತು.

೧೯೩೭ರಲ್ಲಿ ಲಂಡನಿನ ಒಂದು ನಾಯಿ ತನ್ನ ಸ್ವಾಭಾವಿಕ ಶತ್ರುವಾದೊಂದು ಬೆಕ್ಕನ್ನು ಬೆನ್ನಟ್ಟಿಹೋಯಿತು. ಈ ವೈರ ಭರಲ್ಲಿದು ಎದುರಿಗೆ ಬರುವ ೭೩ ವರ್ಷದ ಒಬ್ಬ ಮುದುಕಿಯನ್ನು ಕೆಡವಿಬಿಟ್ಟಿತು. ನಾಯಿಯ ಯಜಮಾನನು ಅವಳಿಗೆ ನೂರು ಪವನಿನ ಪರಿಹಾರ ಕೊಡಬೇಕಾಯಿತು.

ಎಸೆಕ್ಸ್ ಪ್ರಾಂತ್ಯದಲ್ಲೊಂದು ಗೂಳಿ ಒಂದು ಪಿಂಗಾಣಿ ಅಂಗಡಿಯನ್ನು ಹೊಕ್ಕು ಮಾಡಿದ 'ವ್ಯಾಪಾರ'ದಿಂದ ಎತ್ತಿನ ಯಜಮಾನ ಚೂರಾದ ಸಾಮಾನುಗಳ ನಷ್ಟವನ್ನು ತುಂಬಿಸಬೇಕಾಗಿ ಬಂತು.

ವೆಂಬ್ಲಿಯ ಓರ್ವ ಅಧ್ಯಾಪಕಿಯನ್ನು ತನ್ನ ಅಜಾಗ್ರತೆಯಿಂದ ಮೋಟಾರು ಅಪಘಡಕ್ಕೆ ತುತ್ತುಪಡಿಸಿ ಅವಳ ಕಣ್ಣುರೆಪ್ಪೆಗಳು ಅಸ್ವಾಭಾವಿಕ ರೀತಿಯಲ್ಲಿ ಅಲ್ಲಾಡುವಂತೆ ಮಾಡಿದ ಆ ಮೋಟಾರು ಡ್ರೈವರನು ಅವಳಿಗೆ ೧೫೦೦ ಪವನು ನಷ್ಟ ಭರ್ತಿ ಮಾಡಲು ಆಜ್ಞಾಪಿಸಲ್ಪಟ್ಟ

ಮಾರ್ಗ ಅನಾಹುತಗಳು

ಬ್ರ್ಯಾಟನ್ ನಗರದಲ್ಲಿ ಓರ್ವ ಮಹಿಳೆ ಪಾರ್ಲಿಮೆಂಟ್ ಹುರಿಯಾಳುವಿನೊಬ್ಬನ ಪರವಾಗಿ ಚುನಾವಣೆ ಪ್ರಚಾರ ಮಾಡುತಿದ್ದಾಗ ಮೋಟಾರು ಅಪಘಾತಕ್ಕೆ ಸಿಕ್ಕಿದಳು ಹುರಿಯಾಳುವಿನಿಂದವಳು ೭೭೦ ಪವನು ನಷ್ಟ ತೆಗೆದುಕೊಂಡಳು

ಸ್ಟ್ಯಾಕ್‌ಪೋರ್ಟ್ ಎಂಬಲ್ಲಿ ಒಬ್ಬ ಹುಡುಗ ತನ್ನ ತಂಗಿಯನ್ನು ಕೂಗಿಸಲು ಅವಳ ಗೊಂಬೆಯನ್ನು ಸ್ಕೈಕಲಿಗೆ ಕಟ್ಟಿ ಅದಿಕ್ಷ್ಣದಿಂದ ಓಡುತಿದ್ದಾಗ ಎದುರಿನ ಮೋಟಾರೊಂದಕ್ಕೆ ಢಿಕ್ಕಿ ಒಡದ ಇಷ್ಟಾದರೂ ಮೋಟಾರಿನ ಯಜಮಾನನು ಅವನಿಗೆ ೧೧೭೦ ಪವನು ನಷ್ಟ ತೆರುವಂತೆ ಕೋರ್ಟು ಹುಕುಮು ಆಯಿತು

ಇಲ್‌ಫರ್ಡಿನ ಹದಿಮೂರು ವರ್ಷದ ಹುಡುಗಿಯೊಬ್ಬಳು ಅಲ್ಲಿನ ಶಾಲೆಯೊಂದರ ಸತ್ಕಾರ ಕೂಟಕ್ಕೆ ಹೋಗಿದ್ದಾಗ ಅಲ್ಲಿ ಸಿಟಿಸಿದ ಬೆಂಕಿ ಅನಾಹುತದಿಂದವಳ ಶರೀರದ ಕೆಲವು ಭಾಗಗಳು ಸುಡಲ್ಪಟ್ಟು ಅಸಹ್ಯ ಕಲೆಗಳುಂಟಾದವು ತನಗ ಈಜು ಉಡುಪು ಧರಿಸಿ ಸಾರ್ವಜನಿಕದಲ್ಲಿ ಮೈ ಬಿಟ್ಟು ಹೋಗಲಿಕ್ಕೆ ಅಸಹ್ಯವಾಗುತ್ತದೆಂದವಳು ನ್ಯಾಯಾಧೀಶನ ಮುಂದೆ ಅರಿಕೆ ಮಾಡಿಕೊಂಡಾಗ ಶಾಲಾಧಿಕಾರಿಗಳಿಂದವಳಿಗೆ ಒಂದು ಸಾವಿರ ಪವನಿನ ನಷ್ಟ ಕೊಡಿಸಲಾಯಿತು.

ಮೋಟಾರು ಅಪಘಾತದ ವಿಚಿತ್ರ ಮೊಕದ್ದಮೆಯೊಂದು ಹೀಗಿದೆ. ಮೆಂಚಸ್ಟರಿನ ಒಂದು ಮಾರ್ಗದ ಬದಿಯ ಕೋಣೆಯೊಂದರಲ್ಲಿ ದಂಪತಿಗಳಿಬ್ಬರು ಇಸ್ಪೀಟ್ ಆಡುತ್ತ ಕುಳಿತಿದ್ದರು ಒಂದು ಮೋಟಾರು ಲೋರಿ ಸ್ಥಿಮಿತ ತಪ್ಪಿ ಮಾರ್ಗದಿಂದ ಕೆಡವಲ್ಪಟ್ಟು ಅವರ ಕೋಣೆಯ ಗೋಡೆಯೊಡೆದು ಒಳಗೆ ಇಣಿಕಿತು ಈ ಅಕಸ್ಮಾತ್ತದ ಗಾಬರಿಯಿಂದ ಕಂಗೆಟ್ಟ ೬೦ ವರ್ಷದ ಮಹಿಳೆಗೆ ಏನೊ ಭ್ರಾಂತಿಯುಂಟಾಗಿ ಅಂದಿನಿಂದ ತನ್ನ ಪತಿಯನ್ನು ನೋಡಿದರೆ ಸಹಿಸಲಸಾಧ್ಯವಾದ ದ್ವೇಷವುತ್ಪನ್ನವಾಯಿತಂತೆ ಈ ವೃದ್ಧಾಪ್ಯದ ದಾಂಪತ್ಯದ ಒಡಕಿಗ ಕಾರಣನಾದ ಲೋರಿ ಮಾಲಕನು ಅವಳಿಗ ಸಾವಿರ ಪವನು [illegible] ನಷ್ಟ ಕೊಡಬೇಕಾಯಿತು

ಗಾಬರಿಯಿಂದ ದುಸ್ವಪ್ನಗಳು

ಇನ್ನೊಂದು ವಿಚಿತ್ರ ನಷ್ಟ [illegible] ಮೋಟಾರು ವೇಗದ [illegible] ಹೋಗಿದ್ದಳು ಧಾವಿಸುತಿದ್ದ ಒಂದು ಮೋಟಾರು ಚಕ್ರತಪ್ಪಿ ಅವಳು [illegible] ಒಂದು [illegible] ಅವಳಿಗೆ ಒಂದಿಷ್ಟು ತಗಲದೆ [illegible] ಚೂರುಚೂರಾಯಿತು ಇಷ್ಟಾದರೂ [illegible] ಪರಿಣಾಮವಾಗಿ ತನಗೆ ಈಗಲೂ ದುಸ್ವಪ್ನಗಳು [illegible] ವೆಂದು, ಅವಳು [illegible] ನಷ್ಟಭರ್ತಿಯ ಹಣವನ್ನು ತೆಗೆದುಕೊಂಡಳು.

ನೊರ್‌ವಿಚ್ಚದ ಇನ್ನೊಬ್ಬ ಮಹಿಳೆ ತನ್ನೆದುರಾದ ಒಂದು ಮೋಟಾರುಕಾರು ಮತ್ತು ಲೋರಿ ಅಘಡದಿಂದ ಬೆಚ್ಚಿದವಳಾಗಿ ಅವಳಿಗೆ ಈಗಲೂ ಮೋಟಾರು ಎಂಬ ಶಬ್ದ ಕೇಳಿದರೆ ಕೂಗಾಟವೆಬ್ಬಿಸುವ ಹವ್ಯಾಸವುಂಟಾಗಿದೆಂದು ೭೮೦ ಪವನು ನಷ್ಟ ಪಡೆದಿರುವಳು

ಮೋಟಾರು ಅಪಘಡದಿಂದ ತನ್ನ ಮಧ್ಯಪಾನ ಮತ್ತು ಸಿಗರೇಟು ಸೇವನೆಯ ರುಚಿಕರವಾದ ಅಭ್ಯಾಸಕ್ಕೆ ಆತಂಕವುಂಟಾಗಿದೆಯೆಂದು ಹೊವ್ ನಗರದ ಇನ್ಶೂರೆನ್ಸ್ ಏಜಂಟನೊಬ್ಬನು ಮೋಟಾರು ಮಾಲಕರಿಂದ ೧೨೯೫ ಪವನು ನಷ್ಟ ಭರ್ತಿಯನ್ನು ಗಳಿಸಿಕೊಂಡನು.

ನಷ್ಟ ತುಂಬಲು ಎಲ್ಲರೂ ಸಮರ್ಥರಾಗುವುದಿಲ್ಲ ಟೊಂಟನ್ ನಗರದ ಮಕ್ಕಳ ಆಟದ ಸಾಮಾನು ಮಾರುವ ಅಂಗಡಿಯವರು ಓರ್ವ ಗಿರಾಕಿಗೆ ತಮ್ಮ ಹೊಸ ಮಕ್ಕಳ ಬಂದೂಕನ್ನು ತೋರಿಸುತಿದ್ದಾಗ ಅದರೊಳಗಿನ ರಬ್ಬರಿನ ಗುಳಿಗೆಯೊಂದು ಹಾರಿ ಮಾರ್ಗದಲ್ಲಿ ಹೋಗುತಿದ್ದೋರ್ವ ಹುಡುಗನ ಕಣ್ಣನ್ನು ತೆಗೆಯಿತು ಹುಡುಗನ ಹೆತ್ತವರಿಗೆ ಆ ಅಂಗಡಿಯವರು ಕೊಡಬೇಕಾದ [illegible] ಪವನಿನ ನಷ್ಟ ಭರ್ತಿ [illegible] ಅಂಗಡಿ ದಿವಾಳಿ ತೆಗೆಯಿತು.

ಹುಚ್ಚರೊಡನೆ ಬಂಧಿಸಿಟ್ಟರು

[illegible] ಒಬ್ಬ [illegible] ಕ [illegible] ದಿನಗಳ ತನಕ ಹುಚ್ಚರ ಆಸ್ಪತ್ರೆಯಲ್ಲಿಟ್ಟರೆಂದವನು ಪೋಲಿಸ್ ಖಾತೆಯ [illegible] ಪವನು ನಷ್ಟ ಭರ್ತಿ ಪಡೆದ

[illegible] ನಗರದ [illegible] ಪವನು ನಷ್ಟ [illegible]

[illegible] ಕಡೆಯ [illegible] ಹುಡುಗನು [illegible] ಕಣ್ಣನ್ನು ತೆರೆದ [illegible] ವರ್ತನೆಯನ್ನು ಸರಿಯಾಗಿ ಪರಿಶೀಲಿಸುತ್ತಿರಲಿಲ್ಲವೆಂದು ಶಾಲೆಯ [illegible] ದಿಂದ ಕಣ್ಣು ಕಳಕೊಂಡ ಹುಡುಗನಿಗೆ ನ್ಯಾಯಾಧೀಶರು ೮೧೪ ಪವನು ನಷ್ಟ ಕೊಡಿಸಿದ್ದರು.

ಹುಟ್ಟಿದ ಮಗು ಕೂಡಾ ನಷ್ಟ ಕೇಳಲು ಕೋರ್ಟು ಹತ್ತಬಹುದು ಗ್ಲಾಸೆಸ್ಟರದಲ್ಲಿನ ಒಂದು ಹೆರಿಗೆ ಆಸ್ಪತ್ರೆಯಲ್ಲಿನ ದಾದಿಯರು ಕೈತಪ್ಪಿ ಇಟ್ಟ ಬಿಸಿ ನೀರಿನ ಬಾಟ್ಲಿಯಿಂದ ಆಗತಾನೆ ಹುಟ್ಟಿದ ಮಗುವಿನ ಮೈಚರ್ಮವನ್ನು ಸುಟ್ಟರೆಂದು ೭ ಸಾವಿರ ಪವನು ಹಾನಿ ನಷ್ಟ ಕೊಡುವಂತಾಯಿತು

ಅಲಕ್ಷ್ಯದ ಫಲ

ಇಂಗ್ಲೆಂಡಿನ ವಾಟರ್‌ಲೊ ಎಂಡ್ ಸನ್ಸ್ ಎಂಬ ಛಾಪಖಾನೆಯವರು ಪೋರ್ಚುಗೀಜ ಸರಕಾರಕ್ಕೆ ಹಣದ ನೋಟು ಅಚ್ಚುಹಾಕುತಿದ್ದರು ಪೋರ್ಚುಗಲ್ಲಿನ ಕೆಲ ವಂಚಕರು ತಾವು ಸರಕಾರದ ಪ್ರತಿನಿಧಿಗಳೆಂದು ಇವರಿಂದ ಸುಮಾರು ೬ ಲಕ್ಷ ಪವನು ಮೌಲ್ಯದ ನೋಟುಗಳನ್ನು ಮಾಡಿಸಿ ಒಯ್ದರು. ಈ ಅಲಕ್ಷ್ಯಕ್ಕಾಗಿ ಛಾಪಖಾನೆಯವರು ಪೋರ್ಚುಗಲ್ ಸರಕಾರಕ್ಕೆ ೬ ಲಕ್ಷ ಪವನು ತುಂಬಿಕೊಡಬೇಕಾಯಿತು

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿಸಲ್ಪಟ್ಟಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಕೊಳ್ಳ ಬರುತ್ತದೆ ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು

CANARA BANK, LIMITED.

ESTD: 1906

ಗೋವೆಯು ಯಾವ ಪ್ರಾಂತ್ಯಕ್ಕೆ ಸೇರಬೇಕು

ಪೋರ್ತುಗೀಜ ವಸಾಹತಿನಲ್ಲಿ ರಾಷ್ಟ್ರೀಯತೆ

ಲೇಖಕ: "ಗೋವಾ ನಿವಾಸಿ"

ಗೋವೆಯಲ್ಲಿ ಭಾಷಾನ್ವಯ ಪ್ರಾಂತ ಚಳವಳವು ಪ್ರಬಲವಾಗಿ ಸಾಗಲು ಇಂಬಿಲ್ಲವೆಂದು ಹಿಂದಿನ ಲೇಖಾಂಶದಲ್ಲಿ ವಿವರಿಸಿದ್ದೇವೆ. ಗೋವೆ ಸೇರುವದೇ ಆದರೆ ಯಾವ ಪ್ರಾಂತವನ್ನು? ಇಲ್ಲವೆ ಅದು ಸ್ವತಂತ್ರವಾಗಿಯೇ ಇರಲೆಳಸುವದೇ?–ಎಂಬುದನ್ನು ಇಲ್ಲಿ ನೋಡೋಣ

ಸಾಧ್ಯವಾದಲ್ಲಿ ಗೋವೆಯು ಸ್ವತಂತ್ರವಾಗಿಯೇ ಇರಬಯಸುವದು ಎಂದರೆ ಪೋರ್ಚುಗೀಜರ ಶೃಂಖಲೆಗಳನ್ನು ಹರಿದೊಗೆದ ಮೇಲೆ ಸ್ವತಂತ್ರ ಭಾರತದ ಸ್ವಾಯತ್ತ ಪ್ರಾಂತವಾಗಿರುವದು ಸಾಧ್ಯವಿಲ್ಲ ಅದು ಹಾಗೆ ಇರಬಯಸುವುದು ಇದಕ್ಕೆ ಕಾರಣಗಳೆಂದರೆ,–ಗೋವೆಯು ಕೊಂಕಣಿಗರ ತಾಯ್ನಾಡು ಸುಮಾರು ೪೫೦ ವರ್ಷಗಳ ಪೂರ್ವದಲ್ಲಿ ಪೋರ್ಚುಗೀಜರು ಗೋವೆಯಲ್ಲಿ ನೆಲೆಸಿಂತಂದಿನಿಂದ ಭಾರತದೊಡನೆ ಅದರ ಸಾಂಸ್ಕೃತಿಕ ಸಂಪರ್ಕ ಕಟ್ಟಾದುದರಿಂದ, ಆ ಪ್ರದೇಶದ ಜನರು ತಮ್ಮದೇ ಒಂದು ವಿಶಿಷ್ಟ ಜೀವನ ರೀತಿಯನ್ನು ರೂಪುಗೊಳಿಸಿಕೊಂಡಿದ್ದಾರೆ ಪೋರ್ತುಗೀಜ ಕ್ರಿಶ್ಚಿಯನ್ ಪ್ರಸಾರದ ಮೂಲಕ, ಅಲ್ಲಿಯ ನಿವಾಸಿಗಳಲ್ಲಿ ಸುಮಾರು ಅರ್ಧದಷ್ಟು ಜನ ಕ್ರಿಶ್ಚಿಯನರಿದ್ದರೂ ತಮ್ಮ ಮತ ಸಾಂಪ್ರದಾಯಗಳ ಬಗ್ಗೆ ತುಂಬಾ ಅಭಿಮಾನಿಗಳಾಗಿದ್ದಾರೆ ಅಲ್ಲಿಯ ರಾಜಕೀಯ ರಂಗದಲ್ಲಿ ಈ ಅಂಶಕ್ಕೆ ತುಂಬ ಮಹತ್ವವಿದೆ ಗೋವೆಯು ಕೊಂಕಣಿ ಭಾಷೆಯ ತವರುನಾಡು ಅದ್ದರಿಂದ ಹಿಂದುಗಳಾಗಲಿ ಕ್ರಿಶ್ಚಿಯನ್ನರಾಗಲಿ ಕೊಂಕಣಿ ಭಾಷೆಯ ಬಗ್ಗೆ ತುಂಬ ಅಭಿಮಾನವುಳ್ಳವರು. ಕೊಂಕಣಿ ಭಾಷೆಯು ಒಗ್ಗಿಸಿರತಕ್ಕ ಪ್ರೇಮ, ತಮ್ಮ ಜೀವನ ವೈಶಿಷ್ಟ್ಯ ಅನುರೂಪವಾದ ಸ್ವಾತಂತ್ರ್ಯಪ್ರೀತಿ–ಇವು ಗೋಮಾಂತಕದವರ ಸ್ವಭಾವ ವಿಶೇಷಗಳೆಂದು ಹೇಳಬಹುದು

ಆದರೆ, ಸ್ವತಂತ್ರ ಭಾರತದಲ್ಲಿ–ಗೋವೆಯು ಸ್ವಾಯತ್ತ ಪ್ರಾಂತವಾಗುಳಿಯಬಹುದೇ ಎಂಬುದೊಂದೇ ಪ್ರಶ್ನೆ ಕ್ಷೇತ್ರ ವಿಸ್ತಾರದಲ್ಲಿ ಹಾಗೂ ಜನ ಸಂಖ್ಯೆಯಲ್ಲಿ ಮುಂಬಯಿ ಪ್ರಾಂತದ ಯಾವುದೇ ಸರ್ವಸಾಧಾರಣ ಜಿಲ್ಲೆಯ ಅರ್ಧಕ್ಕಿಂತ ಸಣ್ಣದಾದ ಭೂಭಾಗವು ಸ್ವಾಯತ್ತ ಘಟಕವಾಗಿರಬೇಕಾದರೆ, ಭಾರತ ಸರಕಾರವು ವಿಶಿಷ್ಟ ರಾಜಕೀಯ ಇಲ್ಲವೆ ಸಂರಕ್ಷಣೆಯ ದೃಷ್ಟಿಯಿಂದ ಹಾಗಿರಕೊಡಲು ಒಪ್ಪಿಗೆ ಕೊಟ್ಟಲ್ಲಿ ಮಾತ್ರ ಅದು ಸಾಧ್ಯ ಇನ್ನು ಕೊಂಕಣಿ ಪ್ರಾಂತದ ಕನಸು ಕಾಣುತ್ತಿರುವ ಕೆಲವರ ಮನೀಷೆ ರಾಜಕೀಯ ದೃಷ್ಟಿಯಿಂದ 'ಮೊಲದ ಕೋಡಾ'ಗಿ ಪರಿಣಮಿಸುವದೆಂದು ಗೋವೆಯ ಪ್ರಬುದ್ಧ ಜನತೆಯು ಚೆನ್ನಾಗಿ ಬಲ್ಲದು / ಕಾಕಾ ಕಾಲೇಲ್ಕರರೇನೋ ಕಳೆದ ವರ್ಷ ಜೂಲೈ ೧೮ನೆಯ ದಿನ ಪೂಣೆಯ 'ಗೋಮಾಂತಕ ಸಮಿತಿ' ಯೆದುರು ಕೊಟ್ಟ ಉಪನ್ಯಾಸದಲ್ಲಿ, ಮುಂಬಯಿಯಿಂದ ಕಾರವಾರದ ವರೆಗೆ, ಅಥವಾ ಸಾಧ್ಯವಿದ್ದಲ್ಲಿ ಮುಂಬಯಿಂದ ಮಂಗಳೂರಿನ ವರೆಗೆ ಒಂದು ಕೊಂಕಣ ಪ್ರಾಂತವನ್ನು ನಿರ್ಮಿಸಬೇಕೆಂದು ಗಾಳಿಪಟವನ್ನು ಹಾರಬಿಟ್ಟರು ಆದರೆ ಇದು ತ್ರಿಕಾಲದಲ್ಲಿ ಸಾಧ್ಯವಿಲ್ಲವೆಂಬುದನ್ನು ಗೋವೆಯವರು ಅರಿತಿರುವರು. ಮುಖ್ಯ ಕಾರಣವೆಂದರೆ, ಮರಾಟಿಗರು ಮುಂಬಯಿಯನ್ನು ಠಾಣಾ–ಕುಲಾಬಾ– ರತ್ನಾಗಿರಿ ಜಿಲ್ಲೆಗಳನ್ನೂ ಕನ್ನಡಿಗರು ಕಾರವಾರ ಮಂಗಳೂರು (ಉತ್ತರ ದಕ್ಷಿಣ ಕನ್ನಡ) ಜಿಲ್ಲೆಗಳನ್ನೂ ಬಿಟ್ಟುಕೊಡಲಾರರೆಂಬುದನ್ನು ಅವರು ಬಲ್ಲರು ಅಲ್ಲದೆ ತಮ್ಮ ಉತ್ತರಕ್ಕಿರುವ ರತ್ನಾಗಿರಿ ಕುಲಾಬಾ ಜಿಲ್ಲೆಗಳಲ್ಲಿ ಅಲ್ಲಿಯ ನಿವಾಸಿಗಳು ಮೂಲ ಕೊಂಕಣಿಗರೇ ಇದ್ದರೂ ಶುದ್ಧ ಕೊಂಕಣಿಯೆಂಬುದು ಉಳಿದಿಲ್ಲವೆಂಬುದನ್ನೂ, ಅಚ್ಚ ಕೊಂಕಣಿಗರೇ ಮರಾಠಿಯನ್ನು ತಾಯ್ನುಡಿಯನ್ನಾಗಿ ಬಳಸುತ್ತಿರುವರೆಂಬುದನ್ನೂ ಅಲ್ಲಿ ಮರಾಠಿಯೇ ಕಾನೂನಾಗಿ ಮೆರೆಯುವದೆಂಬುದನ್ನೂ ಅವರು ಅರಿಯದೆ ಇಲ್ಲ ಅಂತೆಯೇ ಅಷ್ಟ ಕೊಂಕಣವು ಮನೆಯಾದ ಗೋವೆಯು ಮಹಾರಾಷ್ಟ್ರಕ್ಕೆ ಒಳಪಡುವುದರಿಂದ ರತ್ನಾಗಿರಿ ಕೊಂಕಣಿಗರಂತೆಯೇ ತನ್ನವರ ಗತಿಯಾಗಬಹುದೆಂದು ಮಹಾರಾಷ್ಟ್ರದ ಬಗೆ ಸಾಕಷ್ಟು ಭಾವನೆ ತಾಳಿದ ಮಹಾರಾಷ್ಟ್ರದ [illegible] ದರಿಂದ ಕೊಂಕಣಿಯು [illegible] ಹಿತ ಕಿಡ ತೆಯೆ [illegible] ಪ್ರಾದೇಶಿಕ [illegible] ಈಗ ಅವರು ಮರಾಠಿಯ ನಿಲುವು [illegible] ಪ್ರಸಿದ್ಧವಿದೆ ಆದರೆ ಅದರ [illegible] ಜನಕರು–ಸಾಕ್ಷ್ಯದ ಪೂರ್ವಜರು ಚಿತ್ಪಾವನ ಬ್ರಾಹ್ಮಣರು ಕೊಂಕಣ ಪ್ರದೇಶದವರು– ಕೊಂಕಣಸ್ಥರು [illegible] ದನ್ನು ಮರೆವ ಲಿಂಗದು ಗೋವೆಯು ಮಹಾರಾಷ್ಟ್ರದ ಭಾಗವಾದರೆ ಸತ್ವವನ್ನು ಪೂರ್ಣ ಕಳೆದುಕೊಳ್ಳುವದೆಂಬ ಭೀತಿ ಗೋವೆಯವರಲ್ಲಿ ಮನೆಮಾಡಿದೆ ಕೊಂಕಣಿ ಮರಾಠಿಯ ಉಪಭಾಷೆಯೆಂಬ ವಾದವನ್ನು ಅವರು ಬಲವಾಗಿ ಪ್ರತಿಭಟಿಸುವರು. ಎರಡೂ ಪ್ರಾಕೃತಜನ್ಯ ಭಾಷೆಗಳೇ, ಆದರೆ ದುರ್ದೈವದಿಂದ ಕೊಂಕಣಿಯು ಗ್ರಾಂಥಿಕ ಭಾಷೆಯಾಗಿ ಬೆಳೆದು ಬರಲಿಲ್ಲ (ಗೋವೆಯಲ್ಲಿ ಮಾತ್ರ ರೋಮನ್ ಲಿಪಿಯಲ್ಲಿ ಕೊಂಕಣಿ ಭಾಷೆಯ ಹಲವು ಉಪಯುಕ್ತ ಗ್ರಂಥಗಳನ್ನು ಮಿಶನರಿಗಳು ಪ್ರಕಟಿಸಿದರು.) ಕೊಂಕಣಿ ಧಾತುರೂಪುಗಳು (Conjugations) ಮರಾಠಿಯಿಂದ ಭಿನ್ನವಾಗಿವೆ ಸಾವಿರಾರು ನಾಮಪದಗಳು ಮೂಲ ಪ್ರಾಕೃತರೂಪದಲ್ಲಿಯೇ ಇವೆ. ನಿಕಟಪರಿಚಯವಿರದೆ ಮರಾಠಿಗರು ಮತ್ತು ಕೊಂಕಣಿಗರು ಪರಸ್ಪರರು ಭಾಷೆಗಳನ್ನು ತಿಳಿದುಕೊಳ್ಳಲಾರರು–ಮಾತನಾಡಲಾರರು ಪೋರ್ಚುಗೀಜರ ರಾಜಕೀಯ ವರ್ಚಸ್ಸಿನ ಮೂಲಕ ಮತ್ತು ಗೋವೆಯ ಕ್ರಿಶ್ಚಿಯನ್ನರನೇಕರು ಮುಂಬಯಿಗೆ ವಲಸೆ ಹೋದ ಮೂಲಕ ಪೋರ್ತುಗೀಜ ಮತ್ತು ಇಂಗ್ಲಿಷ್ ಭಾಷೆಗಳ ಪ್ರಭಾವ ಬೆಳೆದು, ಕೊಂಕಣಿಯಲ್ಲಿ ಓದುಬರಹ ಬಲ್ಲವರು ಕೆಳವರ್ಗಗಳವರೇ ಆಗಿರುವರು ಆದರೆ ಕೊಂಕಣಿಯೇ ತಮ್ಮ ತಾಯ್ನುಡಿ ಅದನ್ನು ಏಕೇ ಮಾಡಿ ಉನ್ನತ ಸ್ಥಿತಿಗೆ ತರಬೇಕೆಂಬ ಭಾವನೆಯು ಹಿಂದೂ ಕ್ರಿಶ್ಚಿಯನ್ ಎಲ್ಲ ವರ್ಗಗಳ [illegible] ಲ್ಲಿಯೂ ಬೇರೂರಿದೆ

ಕೊಂಕಣ [illegible] ದೃಷ್ಟಿಯಿಂದ ಗೋವೆಯ ಮಹತ್ವವನ್ನು [illegible] ಸ್ವಹಿತಾಸಕ್ತರು ಎಂಬುದನ್ನು ಮೇಲೆ ತಿಳಿಸಿದ್ದಾಯಿತು ಮಹಾರಾಷ್ಟ್ರವನ್ನು ಸೇರುವುದಕ್ಕೆ ಗೋವೆಯವರ ಸರ್ವಾತ್ಮಕ ವಿರೋಧವಿದೆಯೆಂಬುದನ್ನು ಮುಂದಿನ ಲೇಖಾಂಕದಲ್ಲಿ ಸಾಧಾರವಾಗಿ ತೋರಿಸುವೆನು

ಮುಂದೆ ಸಾಗುವದು

ಶಮನಿಸಿ, ರಕ್ಷಿಸಿ, ಪರಿಹರಿಸಲ್ಪಡುವವು.

ಅತೀ ಹೆಚ್ಚಿನ ರಕ್ಷಣೆಗಾಗಿ ಸುಟ್ಟ ಭಾಗವನ್ನು ಜಾಂಬಕು ತಂಗಿಸಿದ ಒಟ್ಟೆ ಚೂರಿನಿಂದ ಮುಚ್ಚಿರಿ ಜಾಂಬಕಿನೊಳಗಿನ ಶುದ್ಧೀಕೃತ ಔಷಧಿ ಎಣ್ಣೆಗಳು ನೋವನ್ನು ತಂಪಾದಿರಿಸಿ, ಊದ ಏಳೆಯನ್ನು ಇಳಿಸಿ ವಿಷಹಾರಿ ರಕ್ಷಣೆಯನ್ನು ಕೊಡುವುದು. ಚರ್ಮ ಒಡೆದಿದ್ದರೆ ಜಾಂಬಕು ಅದನ್ನು ಶೀಘ್ರ ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ.



Zam-Buk

ವಿಶ್ವಖ್ಯಾತಿಯ ವನಸ್ಪತಿ ಮುಲಾಮು.

ಮಂಡಿತ ಪ್ರಾಣಿಕೊಬ್ಬು ರಹಿತವಾದುದು.

ರಾಜ ಮನ್ನಣೆಗೆ ಪಾತ್ರವಾದ ಔಷಧಿ

ಪ್ರಸ್ತುತ ಕಾಲದಲ್ಲಿ ಮಲೇರಿಯಾ ಜ್ವರದ ಹಾವಳಿಗೆ ತುತ್ತಾದ ವಿಶಾಲ ಪ್ರದೇಶಗಳಿವೆ. ಆದರೆ ಹಿಂದಿನ ಕಾಲದಲ್ಲಿ ಈ ವ್ಯಾಧಿ ಪೀಡೆಯ ಅವ್ಯಾಪ್ತತೆ ಇನ್ನಷ್ಟು ವಿಶಾಲ ವ್ಯಾಪ್ತಿಯದಾಗಿತ್ತು. ಅದು ಪ್ರಬಲವಾಗಿದ್ದ ಅನೇಕ ದೇಶಗಳಲ್ಲದನ್ನೀಗ ನಿರ್ಮೂಲಿಸಲಾಗಿದೆ

ಹದಿನೇಳನೆ ಶತಮಾನದ ಅಂತ್ಯ ಭಾಗದಲ್ಲಿ ರೊಬರ್ಟ್ ಟಾಲ್ಬರ್ ಎಂಬೋರ್ವನು ತನ್ನ ಅರ್ಕಾನಂ ಎಂಬೊಂದು ಔಷಧಿಯ ತಯಾರಿಯಿಂದ ಇದಕ್ಕೆ ಉತ್ತಮ ಪರಿಹಾರವನ್ನು ಕಂಡುಹಿಡಿಯುವುದರಲ್ಲಿ ತುಂಬಾ ಯಶಸ್ಸು ಸಂಪಾದಿಸಿದನು ಇಂಗ್ಲಂಡಿನ ಅರಸನಾಗಿದ್ದ ಎರಡನೇ ಚಾರ್ಲ್ಸನು ಈ ಔಷಧಿಯಿಂದಾಗಿ ತನ್ನ ಜ್ವರ ಪೀಡೆಯನ್ನು ನಿವಾರಿಸಿಕೊಂಡನು. ಅಂತೇ ಸಂತೃಪ್ತಿಪಟ್ಟ ಅವನು 1678ರಲ್ಲಿ ಟಾಲ್ಬರನಿಗೆ ಯೋಧ ಪದವಿ ಕೊಟ್ಟು ಸನ್ಮಾನಿಸಿದನು ಮತ್ತೆ ಟಾಲ್ಬರನು ಫ್ರಾನ್ಸಿಗೆ ಹೋಗಿ ಅಲ್ಲಿನ ರಾಜಕುಟುಂಬದ ಘನಹೊಂದಿದ ಅನೇಕ ಸದಸ್ಯರ ವ್ಯಾಧಿಗಳನ್ನು ಗುಣಪಡಿಸಿ ಕೀರ್ತಿ ಹೊಂದಿದನು ಫ್ರಾನ್ಸಿನ ರಾಜನು ಅವನಿಂದಲೇ ಔಷಧಿಗಳನ್ನು ಕೊಳ್ಳುವಂತೆ ಆಜ್ಞೆಮಾಡಿದನು ಸ್ಪೈನ್‌ದೇಶದ ರಾಣಿ ಲೂಯಿಸೆಯು ಟಾಲ್ಬರನಿಗೆ ತನ್ನ ಖಾಸಗಿ ವೈದ್ಯನನ್ನಾಗಿ ನೇಮಿಸಿದಳು ಟಾಲ್ಬರನ ಅರ್ಕಾನಂ ಎಂಬ ಔಷಧಿಯು ಸಿಂಕೋನಾ ಮರ ತೊಗಟೆಯ ಒಂದು ಕಷಾಯವೆಂದು ಮತ್ತೆ ತಿಳಿಯಿತು ಕಾಲಕ್ರಮದಲ್ಲಿದು ಅತ್ಯಂತ ಜನಪ್ರಿಯವಾಯಿತು.

ಈಗ ಸಿಂಕೋನಾ ತೊಗಟೆಯು ನಿಷ್ಪ್ರಯೋಜನವಾಗಿದೆ 1820ರಲ್ಲಿ ಪಲ್ಲೆಟಿಯರ್ ಮತ್ತು ಕಾವೆಂಟೊ ಎಂಬಿಬ್ಬ ರಸಾಯನಿಕ ಶಾಸ್ತ್ರಜ್ಞರು ಈ ತೊಗಟೆಯಿಂದ ಕ್ವಿನೈನ್ ಎಂಬದರೊಳಗಿನ ಅತ್ಯಂತ ಶಕ್ತಿಯುಕ್ತವಾದ ಸತ್ವವನ್ನು ತೆಗೆಯುವ ವಿಧಾನವನ್ನು ಪರಿಪೂರ್ಣಗೊಳಿಸಿದರು. ಅಂದಿನಿಂದಿನವರೆಗೆ ಮಲೇರಿಯಾ ಜ್ವರ ನಿವಾರಣೆಗೆ ಕ್ವಿನೈನು ಅತ್ಯಂತ ಪರಿಣಾಮಕಾರಿಯಾದ ಔಷಧಿಯಾಗಿದೆ

ಮುಂಚಿನ ಜನಾಂಗ ಸಂಘದ ಮಲೇರಿಯಾ ತಜ್ಞರ ಸಮಿತಿಯು ಈ ಜ್ವರದ ಹಾವಳಿಯಾರಂಭವಾಗುವ ಋತುವಿನಲ್ಲಿ ದಿನಂಪ್ರತಿ 6 ಕಾಳುಗಳಷ್ಟು ಕ್ವಿನೈನನ್ನು ಸೇವಿಸಬೇಕೆಂದೂ, ಜ್ವರಬಂದರೆ 15–20 ಕಾಳುಗಳಷ್ಟನ್ನು 5ರಿಂದ 7 ದಿನಗಳ ತನಕ ತೆಗೆದುಕೊಳ್ಳಬೇಕೆಂದೂ ತಿಳಿಸುತ್ತದೆ ಜ್ವರಾನಂತರ ಸೇವನೆ ಅವಶ್ಯವಿಲ್ಲ ಪುನಃ ಜ್ವರ ಪ್ರಾಪ್ತಿಯಾದರೆ ಮುಂಚಿನಂತೇ ಸೇವಿಸಬೇಕು.

M Eng 22

ಮದ್ಯನಿಷೇಧದ ಕಾನೂನಿನ ಅತಿಕ್ರಮ: ದಂಡನೆ

ಮೇಲ್ಕಂಡ ಕೋರ್ಟಿನಲ್ಲಿ ಮಲ್ಲಪ್ಪ ಕೋಗನೂರ ಪೂಜಾರಿಯಬಳಿ ಅರ್ಧಡ್ರಾಂ ಕಳ್ಳ ಶರಾಬ ಸಿಕ್ಕಿತೆಂದು ೧೫ ರೂಪಾಯಿಗಳು, ನೀರುವಾರಗದ ಜುವಾನ್ ವಾಸ್ ಟ್ಟಾಯವೆ ಅವರ ೧ ಡ್ರಾಂ ಶರಾಬ್ ಇತ್ತೆಂದು ೪೦ ರೂಪಾಯಿಯ ದಂಡನೆ ವಿಧಿಸಲಾಯಿತು.

ಸ್ವದೇಶಾಭಿಮಾನಿ

ತಾರೀಖು 30—7—1948

ಮದ್ರಾಸಿನಲ್ಲಿ ಪಂಡಿತ ನೆಹರು

ಭಾರತ ರಾಷ್ಟ್ರದ ಪ್ರಧಾನ ಸಚಿವ ಪಂ॥ ಜವಾಹರಲಾಲರು ಮದ್ರಾಸನ್ನು ಮೂರು ದಿನಗಳ ಮಟ್ಟಿಗೆ ಸಂದರ್ಶಿಸಿದರು ಮದ್ರಾಸು ಅವರಿಗೆ ಅತ್ಯಂತ ಸಂಭ್ರಮದ ಸ್ವಾಗತ ಕೊಟ್ಟಿತು. ಇದರ ಮಧ್ಯೆ ಕಾರೈಕುಡಿಗೆ ಹೋಗಿ ಅಲ್ಲಿ ಸ್ಥಾಪಿತವಾದ ವಿದ್ಯುತ್ ರಾಸಾಯನಿಕ ಪರಿಶೋಧನಾ ಸಂಸ್ಥೆಯ ಶಂಕುಸ್ಥಾಪನೆಯನ್ನು ಮಾಡಿದರು. ಈ ಶಾಸ್ತ್ರೀಯ ಶೋಧನಾ ಸಂಸ್ಥೆಗೆ ಆರಂಭದ ಭಂಡವಲದ ಖರ್ಚು ರೂ 35 ಲಕ್ಷ. ಇದರಲ್ಲಿ ರೂ. 15 ಲಕ್ಷವನ್ನು ಡಾ॥ ಅಲಗಪ್ಪ ಚೆಟ್ಟಿಯಾರರೊಬ್ಬರೇ ದಾನವಾಗಿ ಕೊಟ್ಟರು ಇದರ ವರ್ಷಾವಧಿ ಖರ್ಚು ರೂ 2½ ಲಕ್ಷವನ್ನು ಭಾರತ ಸರಕಾರವೇ ವಹಿಸಿಕೊಳ್ಳುವುದು ಪಂಡಿತ ಜವಾಹರಲಾಲರಿಗೆ ಇಂದಿನ ಭೌತಿಕ ವಿಜ್ಞಾನದ ಬೆಳವಣಿಗೆಯಲ್ಲಿ ಬಹಳ ಪ್ರೇಮವಿದ್ದು ಈ ಕಾರ್ಯಕ್ರಮವೇ ಅವರನ್ನು ಈಗ ದಕ್ಷಿಣ ಭಾರತಕ್ಕೆ ಸೆಳೆದು ತಂದಿತೆಂಬುದು ನಿಜವಿರುತ್ತದೆ.

ಮದ್ರಾಸಿನ ನಗರ ಸಭೆಯು ಪ್ರಧಾನ ಸಚಿವರಿಗೆ ಒಂದು ಮಾನಪತ್ರವನ್ನರ್ಪಿಸಿತು. ಜಾತೀಯತೆಯ ಸಂಕುಚಿತ ಭಾವನೆಯ ಮೇಲೆ ತಾವು ಯುದ್ಧ ಹೂಡಿರುವುದಾಗಿಯೂ ಈ ವಿಚಾರದಲ್ಲಿ ಮದ್ರಾಸು ಇಡೀ ರಾಷ್ಟ್ರಕ್ಕೆ ದಾರಿ ತೋರಬೇಕೆಂದೂ ಪಂಡಿತಜೀಯವರು ಉತ್ತರವಿತ್ತರು

ಶಾಸನ ಸಭೆಯ ಸಭಾಭವನದಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರ ಭಾವಚಿತ್ರದ ಅನಾವರಣ ಸಮಾರಂಭವನ್ನು ಪಂಡಿತಜೀಯವರ ಹಸ್ತದಿಂದ ಮಾಡಿಸಿದರು ರಾಜಗೋಪಾಲಾಚಾರ್ಯರು ಈ ದೇಶಕ್ಕೊಂದು ಭೂಷಣವೆಂದು ಪ್ರಧಾನ ಸಚಿವರು ಕಂಠೋಕ್ತವಾಗಿ ಪ್ರಶಂಸಿಸಿದರು

ಮದ್ರಾಸಿನ ಹದಿಮೂರು ಸ್ತ್ರೀಯರ ಸಂಸ್ಥೆಗಳು ಒಟ್ಟು ಸೇರಿ ಒಂದು ಸ್ತ್ರೀಯರ ಮಹಾಸಭೆ ಜರಗಿಸಿ ಪಂಡಿತಜೀಯವರನ್ನು ಸ್ವಾಗತೀಕರಿಸಿದರು ಸಮಾಜಸೇವೆಯಲ್ಲಿ ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚಿನ ಭಾಗ ವಹಿಸಬೇಕಾಗಿ ಪಂಡಿತ ಜವಾಹರಲಾಲರು ಅವರಿಗೆ ಹೇಳಿದರು.

ರಾಮಕೃಷ್ಣ ಮಿಶನಿನವರು ನಡೆಸುವ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಪಂಡಿತ ಜವಾಹರಲಾಲರ ಹಸ್ತದಿಂದ ಮಹಾತ್ಮಾ ಗಾಂಧಿಯವರ ಭಾವಚಿತ್ರದ ಅನಾವರಣ ಸಮಾರಂಭ ನೆರವೇರಿಸಿದರು. ಮಹಾತ್ಮಾ ಗಾಂಧಿಯಂಥವರನ್ನು ಬರೀ ಬಾಯಿಮಾತಿನಲ್ಲಿ ಪ್ರಶಂಸಿಸಿ ತೃಪ್ತರಾಗುವುದೊಂದು ಅನ್ಯಾಯವೆಂದೂ ಅವರ ಉಪದೇಶಗಳಂತೆ ವರ್ತಿಸಲು ಪ್ರಯತ್ನಪಡಬೇಕೆಂದೂ ಪಂಡಿತಜಿಯವರು ಹೇಳಿದರು.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಜರಗಿಸಿದ ಸಭೆಯಲ್ಲಿ ಪಂಡಿತ ಜವಾಹರಲಾಲರು ಹಿಂದುಸ್ಥಾನೀ ರಾಷ್ಟ್ರಭಾಷೆಯಾಗುವುದರ ಅವಶ್ಯಕತೆಯನ್ನು ಒತ್ತಿ ಹೇಳಿ ಸಭೆಯ ಕಾರ್ಯವನ್ನು ಪ್ರಶಂಸಿಸಿದರು.

ಭಾರತದ ಪ್ರಧಾನ ಸಚಿವರನ್ನು ಇದಿರ್ಗೊಳ್ಳಲು ಜರಗಿದ ಮದ್ರಾಸಿನ ಪುರಜನರ ಮಹಾಸಭೆಯಲ್ಲಿ ಅರ್ಧ ಮಿಲಿಯಕ್ಕೆ ಮಿಕ್ಕಿ ಜನಸ್ತೋಮವು ನೆರೆದಿತ್ತು ಈ ಸಭೆಯ ವ್ಯವಸ್ಥೆ, ಸಭಿಕರು ತೋರಿಸಿದ ಶಾಂತತೆ ಮತ್ತು ಶಿಸ್ತು ಇವು ಪಂಡಿತಜೀಯವರ ಮೆಚ್ಚುಗೆಗೆ ಪಾತ್ರವಾದವು.

ಮದ್ರಾಸಿನ ಟ್ರೇಡ್ ಯೂನಿಯನುಗಳ ಕೆಲಸಗಾರರ ರೇಲ್ಲಿಯೊಂದನ್ನು ಏರ್ಪಡಿಸಲಾಗಿತ್ತು ಮಜೂರರನ್ನುದ್ದೇಶಿಸಿ ಪ್ರಧಾನ ಸಚಿವರು ದೇಶದ ಆರ್ಥಿಕ ಸಂಪತ್ತನ್ನು ಹೆಚ್ಚಿಸಲು ಮಜೂರರು ಸಹಕರಿಸಿ ವರ್ತಿಸುವುದರ ಆವಶ್ಯಕತೆಯನ್ನು ಒತ್ತಿ ಹೇಳಿದರು ಕಮ್ಯೂನಿಸ್ಟರ ಚಟುವಟಿಕೆಗಳನ್ನು ಖಂಡಿಸಿದರು

ಈ ರೀತಿ ಪಂಡಿತ ಜವಾಹರಲಾಲರು ಮದ್ರಾಸಿನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರತಿಯೊಂದು ಸಮಾರಂಭದಲ್ಲಿಯೂ ಉಜ್ವಲ ಹಾಗೂ ವಿಚಾರಪರಿಪ್ಲುತ ಭಾಷಣಗಳನ್ನು ಕೊಟ್ಟು ದೇಶದ ಸರಕಾರದ ಮುಖ್ಯ ಅಧಿಕಾರಿ ಮಾತ್ರವಲ್ಲ ಜನರ ಮುಂದಾಳೆಂಬುದನ್ನು ಖಚಿತಪಡಿಸಿದರು.

ಇಂದಿನ ಭಾರತ ಸರಕಾರಕ್ಕೆ ರಾಷ್ಟ್ರದ ಬೆಂಬಲವು ಎಷ್ಟರ ಮಟ್ಟಿಗಿದೆ ಎಂಬುದನ್ನು ಮದ್ರಾಸಿನ ಪುರಜನರ ಸಾರ್ವಜನಿಕ ಸಭೆಯಲ್ಲಿ ನೆರೆದ ಜನಸ್ತೋಮವನ್ನು ಕಂಡರೆ ಸಾಕು

ಈ ಸಭೆಯನ್ನುದ್ದೇಶಿಸಿ ಪ್ರಧಾನ ಸಚಿವರು 90 ಮಿನಿಟುಗಳ ತನಕ ಭಾಷಣವಿತ್ತರು. ರಾಷ್ಟ್ರದ ಬೆಳವಣಿಗೆಗಾಗಿ ಪ್ರಜಾಜನರು ದುಡಿಯುವುದರ ಮಹತ್ವವನ್ನು ಚೆನ್ನಾಗಿ ಮನಗಾಣಿಸಿದರು ಪಾಕಿಸ್ಥಾನದ ಜಾತೀಯತೆಗೆ ಬಲಿಬೀಳದಂತೆ ಭಾರತದಲ್ಲಿ ಮುಸ್ಲೀಮರನ್ನು ಎಚ್ಚರಿಸಿದರು ಕಾಶ್ಮೀರ ಹೈದರಾಬಾದುಗಳ ಕುರಿತು ಕೂಡಾ ಭಾರತ ಸರಕಾರದ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದರು

ಕೊನೆಗೆ ಮದ್ರಾಸಿನವರು ತೋರಿದ ಆದರಕ್ಕಾಗಿ ವಂದನೆಗಳನ್ನರ್ಪಿಸಿದರು ಈ ಬಗೆಯ ಆದರವು ಭಾರತ ರಾಷ್ಟ್ರದ ಸಂಕಷ್ಟಗಳನ್ನು ಎದುರಿಸಲು ತನಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತಿದೆಯೆಂದರು.

ಪಂಡಿತ ಜವಾಹರಲಾಲರು ಮಹಾತ್ಮಾ ಗಾಂಧಿಯವರ ಬಳಿಕ ಇಂದಿನ ಭಾರತದ ನಾಯಕರು ಇವರ ಉಪದೇಶಗಳು ಪ್ರಜಾಜನರ ಎದೆಮುಟ್ಟಲೆಂದು ಹಾರೈಸುತ್ತೇವೆ.

ಟೀಕೆ-ಟಿಪ್ಪಣಿಗಳು

ಕಾಶ್ಮೀರ ಕಮಿಶನ್

ಈ ಸಂಯುಕ್ತ ರಾಷ್ಟ್ರ ಸಭೆಯ ಕಮಿಶನದವರು ಪಾಕಿಸ್ಥಾನ ಹಾಗೂ ಭಾರತ ಸರಕಾರಗಳು ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸುವಂತೆ ಕೇಳಿಕೊಂಡಿರುವರೆಂದು ತಿಳಿದುಬರುತ್ತದೆ ಭದ್ರತಾ ಸಮಿತಿಯವರು ಈ ಕುರಿತು ಮಾಡಿರುವ ನಿರ್ಣಯದಲ್ಲಿ ಪಾಕಿಸ್ಥಾನದವರು ಕಾಶ್ಮೀರದಿಂದ ದಂಗೆಗಾರರು ಹಿಂದೆ ಹೋಗುವಂತೆ ಮಾಡಬೇಕೆಂದೂ ಆಗ ಭಾರತ ಸರಕಾರದವರು ಸ್ಥಳೀಕ ಶಾಂತಿರಕ್ಷಣೆಯ ಬಗ್ಗೆ ಅಗತ್ಯವುಳ್ಳಷ್ಟು ಸೈನ್ಯವನ್ನು ಮಾತ್ರ ಅಲ್ಲಿಟ್ಟು ಉಳಿದ ಸೈನ್ಯವನ್ನು ಹಿಂತೆಗೆಯಬೇಕೆಂದೂ ಹೇಳಲಾಗಿತ್ತು ಕಾಶ್ಮೀರದಲ್ಲಿ ಈಗ ಹೋರಾಡುವವರು ದಂಗೆಕಾರರು ಮಾತ್ರವಲ್ಲ ಪಾಕಿಸ್ಥಾನದ ಸೈನಿಕರೆಂಬುದನ್ನು ಕಮಿಶನದವರು ಕಾಣದೆ ಇರಲಿಕ್ಕಿಲ್ಲ ಇವರು ಮೊದಲಾಗಿ ಪಾಕಿಸ್ಥಾನಕ್ಕೆ ಮರಳುವಂತೆ ಮಾಡಿದರೆ ಆ ಬಳಿಕ ಭಾರತ ಸರಕಾರದ ಹೆಚ್ಚಿಗಿರುವ ಸೈನ್ಯವು ಅನಾವಶ್ಯಕವಾಗುವುದರಿಂದ ಹಿಂತೆಗೆಯಲ್ಪಡಬಹುದು ಪಾಕಿಸ್ಥಾನದ ಸೈನ್ಯದವರು ಕಾಶ್ಮೀರ ಭೂಮಿಯಲ್ಲಿದ್ದು ಕೇವಲ ಹೋರಾಟ ನಿಲ್ಲಿಸಿರೆಂದು ಕಮಿಶನದವರು ಹೇಳಿದರೆ ಅದು ಅರ್ಥವಿಲ್ಲದ ಹಾಗೂ ಜವಾಬ್ದಾರಿ ತಿಳಿಯದ ಮಾತೆಂಬುದರಿಂದ ಭಾರತ ಸರಕಾರವು ಇದಕ್ಕೆ ಎಷ್ಟು ಮಾತ್ರಕ್ಕೂ ಒಪ್ಪುವಂತಿಲ್ಲ ಈ ಅಭಿಪ್ರಾಯವನ್ನು ಭಾರತ ಸರಕಾರವು ಹಲವು ಬಾರಿ ಸ್ಪಷ್ಟಪಡಿಸಿರುತ್ತದೆ

ಹೈದರಾಬಾದಿನ ಕುರಿತು ಸ್ಪಷ್ಟೋಕ್ತಿ

ಹೈದರಾಬಾದಿನ ಕುರಿತು ಪಂಡಿತ ಜವಾಹರಲಾಲರು ಪರಿಸ್ಥಿತಿಯನ್ನು ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ವರ್ಣಿಸಿದರು. ಹೈದರಾಬಾದಿನಲ್ಲಿ ಈಗ ಆಡಳಿತೆ ನಡೆಸುವವರು ಒಂದು ಸರಕಾರವೆಂಬ ಹೆಸರಿಗೆ ಅಯೋಗ್ಯರು ಇದೊಂದು ಕಳ್ಳಕಾಕರ ದರೋಡೆಕಾರರ ಗುಂಪೆಂದು ಹೇಳಬಹುದು ಇಂಥವರ ಸಂಗಡ ಭಾರತ ಸರಕಾರವು ರಾಜಿ ಪಂಚಾಯತಿಗೆ ನಡೆಸಲು ಇಚ್ಛಿಸುವುದಿಲ್ಲವೆಂದರು ಎರಡನೆಯದಾಗಿ ಹೈದರಾಬಾದಿನಲ್ಲಿ ಅಗತ್ಯ ಕಂಡ ಸೈನ್ಯ ಮೂಲಕ ಶಿಸ್ತನ್ನು ಜಾರಿಮಾಡಲಾಗುವುದೆಂದರು ಇದಕ್ಕೆ ಯುದ್ಧವೆಂಬ ಹೆಸರು ಸಲ್ಲದು ಯುದ್ಧ ನಡೆಯುವುದು ಸ್ವತಂತ್ರ ರಾಷ್ಟ್ರಗಳ ಒಳಗೆ ಮಾತ್ರ ಹೈದರಾಬಾದು ಅಂದ ಸ್ವತಂತ್ರ ರಾಷ್ಟ್ರವಲ್ಲ ಭಾರತ ಸರಕಾರವು ಇಲ್ಲಿ ಸೈನ್ಯಮೂಲಕ ಶಿಸ್ತು ಜಾರಿಮಾಡುವುದೆಂಬ ಮಾತೇ ಸರಿಯಾದ ಪದಪ್ರಯೋಗವೆಂದರು ಹೈದರಾಬಾದು ಸಂಸ್ಥಾನದವರು ಭಾರತ ರಾಷ್ಟ್ರದ ಆಶ್ರಯವನ್ನು ಇತರ ಸಂಸ್ಥಾನಗಳಂತೆಯೇ ಪಡೆದರೆ ಸರಿ ಇಲ್ಲದಿದ್ದರೆ ನೈಜಾಮ ಸರಕಾರ ಹೋಗುವುದು ಮಾತ್ರವಲ್ಲ ಸಂಸ್ಥಾನವನ್ನೇ ತೆಗೆದುಹಾಕಿ ಇದರ ಭಾಗಗಳನ್ನು ಹತ್ತಿರದ ಪ್ರಾಂತ್ಯಗಳಿಗೆ ಸೇರಿಸಬಹುದು. ಪಂಡಿತ ಜವಾಹರಲಾಲರ ಇಂಥ ಸ್ಪಷ್ಟ ಮಾತುಗಳನ್ನು ಕೇಳಿಯಾದರೂ ಈ ಸಂಸ್ಥಾನದ ಆಡಳಿತೆಯವರಿಗೆ ಬುದ್ಧಿ ಕಲಿಯುವರೆ? ಆ ಸಂಭವವಿಲ್ಲ ಈ ಸೈನಿಕ ಶಿಸ್ತು ಜಾರಿಯ ಕಾರ್ಯಕ್ರಮ ಇನ್ನು ಹೆಚ್ಚು ದೂರ ಹೋಗುವಂತಿಲ್ಲವೆಂಬುದೇನೋ ಖಂಡಿತ ಕಾಣುತ್ತದೆ.

ಕಾಂಗ್ರೆಸಿಗರಿಗೆ ಅಧ್ಯಕ್ಷರ ಎಚ್ಚರಿಕೆ

ಕಾಂಗ್ರೆಸಿಗರು ಈಗ ನಡೆಯುತ್ತಿರುವುದು ತಮ್ಮ ಸರಕಾರವೆಂಬ ಭಾವನೆಯಿಂದ ಸರಕಾರೀ ಉದ್ಯೋಗಸ್ಥರ ಕೆಲಸಗಳಲ್ಲಿ ತಾವು ಕೈಹಾಕ ಹೋಗುತ್ತಿರುವರೆಂದೂ ಇದು ಸರಿಯಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ಬಾಬೂ ರಾಜೇಂದ್ರ ಪ್ರಸಾದರು ಎಚ್ಚರಿಕೆ ಕೊಟ್ಟಿರುವರು ಸರಕಾರದ ಕಾರ್ಯಗಳ ಕುರಿತು ಕಾಂಗ್ರೆಸಿಗರಿಗೆ ಏನಾದರೂ ಹೇಳಲಿಕ್ಕಿದ್ದರೆ ಅದನ್ನು ಎ ಐ ಸಿ ಸಿ ಗೆ ತಿಳಿಸಿ ಅದರ ಮೂಲಕ ಸಂಬಂಧಪಟ್ಟ ಸರಕಾರಕ್ಕೆ ತಿಳಿಸಬೇಕಾದುದೇ ನ್ಯಾಯವಾದ ದಾರಿಯೆಂಬುದನ್ನು ಸ್ಪಷ್ಟಪಡಿಸಿರುವರು. ಇದು ಸಕಾಲದಲ್ಲಿ ಕೊಟ್ಟ ಯೋಗ್ಯ ಎಚ್ಚರಿಕೆ ಇರುತ್ತದೆ

ಬರ್ಲಿನ್ ಪ್ರಕರಣದ ಕುರಿತು ಹೆನ್ರಿ ವಾಲೇಸರ ಅಭಿಪ್ರಾಯ

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರದ ಅಧ್ಯಕ್ಷ ಪದವಿಯ ಉಮೇದ್ವಾರರಾಗಿ ಪ್ರಗತಿಪರ ಪಕ್ಷದವರಿಂದ ನೇಮಿಸಲ್ಪಟ್ಟಿರುವ ಹೆನ್ರಿ ವಾಲೇಸರು ಕೆಲವು ಸ್ಪಷ್ಟ ಮಾತುಗಳನ್ನು ಹೇಳಿದ್ದಾರೆ ಬರ್ಲಿನ್ ಪ್ರಕರಣ ಪಾಶ್ಚಾತ್ಯ ರಾಷ್ಟ್ರಗಳು ತಂದುಕೊಂಡದ್ದು ಜರ್ಮನಿಯನ್ನು ವಿಭಾಗಿಸಿ ಪಶ್ಚಿಮ ಬಂಗ ತಪ್ಪು ಮಸಾಹತೆಂದು ತಿಳಿದಾಗಲೇ ನಾವು ಜರ್ಮನಿಯನ್ನು ರಾಜಕೀಯ ದೃಷ್ಟಿಯಿಂದ ಕಳೆದುಕೊಂಡೆವು ಈಗ ಅದನ್ನು ಬಿಟ್ಟುಕೊಡುವುದರಲ್ಲಿ ಹೆಚ್ಚಿನ ನಷ್ಟವಿಲ್ಲ ಈ ಕ್ಲಿಷ್ಟ ಪ್ರಶ್ನೆಗಳಿಗಾಗಿ ಜಗತ್ತನ್ನು ಯುದ್ಧದಲ್ಲಿ ಮುಳುಗಿಸುವುದಕ್ಕಿಂತ ರಶ್ಯಾದೊಡನೆ ರಾಜಿಮಾಡುವುದೇ ಯುಕ್ತ ಎಂಬುದಾಗಿ ಹೇಳಿದ್ದಾರೆ ಇವರು ಟ್ರೂಮೆನರ ಬದಲು ಚುನಾವಣೆ ಹೊಂದುವರೆ?

ಸ್ವಾತಂತ್ರ್ಯ ದಿನಾಚರಣೆ

ಈ ವರ್ಷ ಆಗೋಸ್ತು 15ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಜಯಶೀಲವಾಗಿ ಹೇಗೆ ಆಚರಿಸಬಹುದೆಂಬ ಕುರಿತು ಆಲೋಚಿಸುವರೆ ಸಭೆಯೊಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇದೇ ಬರುವ ತಾ 1—8—48ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಸೇರಲಿರುವುದೆಂದು ತಿಳಿದುಬರುತ್ತದೆ

ಬುದ್ಧ ದಿನಾಚರಣೆ

ಕಳೆದ ಆಷಾಡ ಪೂರ್ಣಿಮೆಯಂದು ಸ್ಥಳೀಯ ಬೆಸೆಂಟ್ ಬಾಲಿಕೆಯರ ಹೈಸ್ಕೂಲಿನಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ಮಠ ಶಾಖೆಯ ಸ್ವಾಮಿ ವಿಮಲಾನಂದರ ಅಧ್ಯಕ್ಷತೆಯಲ್ಲಿ ಬುದ್ಧ ದಿನಾಚರಣೆ ನಡೆಯಿತು

ಹೊಸ ಜಿಲ್ಲಾಧಿಕಾರಿಗಳು

ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಸ್ ಸುಬ್ಬರಾಯರ ಸ್ಥಾನಕ್ಕೆ ಪೆನಗೊಂಡೆಯಿಂದ ಅಲ್ಲಿ ಡೆ॥ ಇನಸ್ಪೆಕ್ಟರರಾಗಿದ್ದ ಶ್ರೀ ಕೆ ವೆಂಕಟನಾರಾಯಣರಾವ್ ಇವರು ವರ್ಗಾಯಿಸಲ್ಪಟ್ಟಿದ್ದಾರೆ

ಗಾಂಧೀನಿಧನದಿಂದ ಇಂದಿಗೆ ಆರು ತಿಂಗಳು ಆಗುತ್ತವೆ. ಜಗತ್ತಿನ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಬಗೆಯ ಗಾಂಧೀ ಸ್ಮಾರಕಗಳು ಏರ್ಪಡಿಸಲ್ಪಡುತ್ತಿವೆ. ಈ ಸಂಘವೂ ಒಂದು ಚಿಕ್ಕ ಆದರೆ ಜೀವಂತ ಸ್ಮಾರಕವಾಗುವಂತಾಗಲೆಂಬ ಆತುರದಿಂದ ಮಹಾಜನರ ಅವಗಾಹನೆ ಮತ್ತು ಅಭಿಪ್ರಾಯಕ್ಕಾಗಿ ಈ ಕೆಳಗಿನ ಮಾದರಿ ಘಟನೆ ಮತ್ತು ನಿಬಂಧನೆಗಳನ್ನು ಪ್ರಕಟಿಸಲಾಗಿದೆ ಈ ಕುರಿತು ಆಸಕ್ತಿ ಇರುವವರು ನನ್ನೊಡನೆ ಪತ್ರವ್ಯವಹಾರ ಇತ್ಯಾದಿ ಬೆಳೆಸಬಹುದು.

ತಾ॥ 30-7-48, ಹಿ ರಾಮರಾಯಮಲ್ಯ,
ಶುಕ್ರವಾರ ವ್ಯವಸ್ಥಾಪಕ

ದಕ್ಷಿಣ ಕನ್ನಡ ಜಿಲ್ಲಾ
ಲೋಕ ಸೇವಾ ಸಂಘ
(ಮಂಗಳೂರು)

1. ಉದ್ದೇಶ

ಸತ್ಯ ಮತ್ತು ಅಹಿಂಸಾ ತತ್ವಗಳ ತಳಹದಿಯ ಮೇಲೆ ಸಾರ್ವಜನಿಕ ಜೀವನವನ್ನು ರೂಪಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ದೇಶದ ಮುಂದಿರಿಸಿದ ವಿಧಾಯಕ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಆತುರಪಡುವ ಕಲಸಗಾರರ ಸಂಘಟಿತ ಸಂಸ್ಥೆಯಾಗಿ ದುಡಿದು ಪ್ರಜಾಸೇವೆ ಮಾಡುವುದು ಈ ಲೋಕ ಸೇವಾ ಸಂಘದ ಉದ್ದೇಶ

2 ಕಾರ್ಯಕ್ಷೇತ್ರ

ಈ ಸಂಘದ ಕಾರ್ಯಕ್ಷೇತ್ರವು ಪ್ರಕೃತ ದಕ್ಷಿಣ ಕನ್ನಡ ಜಿಲ್ಲೆ ಇದರ ಮುಖ್ಯ ಕಚೇರಿ ಮಂಗಳೂರು

3. ಸದಸ್ಯತನ

(1) ಸಂಘದ ಉದ್ದೇಶ ಮತ್ತು ನಿಬಂಧನೆಗಳನ್ನು ಒಪ್ಪಿ ಕಲಸ ಮಾಡಲಿಚ್ಛಿಸುವ ಹಾಗೂ ಕೈನೂಲಿಂದ ನೂಲುವವರು, ಸತತ ಖಾದಿಧಾರಣೆ ಅಸ್ಪೃಶ್ಯತಾ ನಿವಾರಣೆ ಜಾತಿಮತಗಳೊಳಗೆ ಸೌಹಾರ್ದ ಸಾಧನೆ ಮದ್ಯಮಾದಕದ್ರವ್ಯತ್ಯಾಗ ಇತ್ಯಾದಿ ಕಾರ್ಯಕ್ರಮಗಳನ್ನು ಸ್ವಂತ ಜೀವನದಲ್ಲಿ ಆಚರಿಸುವ ಕೆಲಸಗಾರರು ಈ ಸಂಘದ ಸದಸ್ಯತನಕ್ಕೆ ಅರ್ಹರು ನೂಲುವ ಹಾಗೂ ಸತತ ಖಾದಿಧಾರಣೆಯ ರೂಢಿ ಇಟ್ಟುಕೊಂಡಿರುವವರ ಸಂಖ್ಯೆ ಈಗ ಸಾಕಷ್ಟಿಲ್ಲವೆಂಬುದರಿಂದ ಸದಸ್ಯತನಕ್ಕೆ ಅರ್ಜಿ ಮಾಡಿದಂದಿನಿಂದ ಆರು ತಿಂಗಳಾಗುವುದರೊಳಗೆ ಈ ಈ ರೂಢಿಯನ್ನು ಇಟ್ಟುಕೊಳ್ಳುವುದಾಗಿ ವಾಗ್ದಾನಮಾಡುವವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುವುದು ಅವಧಿಯ ಅಂತ್ಯದೊಳಗೆ ಇದನ್ನು ಪಾಲಿಸದಿದ್ದರೆ ಇಂಥವರ ಸದಸ್ಯತನವು ತಾನಾಗಿ ರದ್ದಾಗುವುದು.

(2) ಸಂಘದ ಸದಸ್ಯರು ವಿಧಾಯಕ ಕಾರ್ಯಕ್ರಮಕ್ಕೇನ ಪೂರ್ಣಬಿಡು ಸಮಯವನ್ನು ಕೊಡುವುದು ಅಗತ್ಯವೆಂಬುದರಿಂದ ಇವರು ಇನ್ನಾವ ರಾಜಕೀಯ ಅಥವ ಜಾತೀಯ ಸಂಸ್ಥೆಯ ಸದಸ್ಯರಾಗಕೂಡದು ಕಾಂಗ್ರೆಸ್ ಸಂಸ್ಥೆಯ ಮೇಲಿನ ಆದರವನ್ನು ವ್ಯಕ್ತಪಡಿಸುವುದಕ್ಕಾಗಿ ಇದರ ಪ್ರಾಥಮಿಕ ಸದಸ್ಯರಾಗಿ ಸೇರಲು ಮಾತ್ರ ಅಡ್ಡಿ ಇಲ್ಲ ಆದರ ಗ್ರಾಮಕಾಂಗ್ರೆಸ್ ಪಂಚಾಯತುಗಳ ಮೊದಲ್ಗೊಂಡು ಮೇಲಿನ ಯಾವ ಕಮಿಟಿಯ ಸದಸ್ಯತನದ ಜವಾಬ್ದಾರಿಯನ್ನೂ ಈ ಸಂಘದ ಸದಸ್ಯರು ವಹಿಸಿಕೊಳ್ಳಕೂಡದು ಅಂತೆಯೇ ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳ, ಜಿಲ್ಲಾಬೋರ್ಡು ಮುನಿಸಿಪಾಲಿಟಿಗಳ ಸದಸ್ಯ

(3) ಮೇಲಿನ ಶರ್ತಗಳನ್ನು ಪಾಲಿಸಿ ಸದಸ್ಯರಾಗಲು ಬಯಸುವವರು ಪರಿಶಿಷ್ಟದಲ್ಲಿ ಕಾಣಿಸಿದ ಫಾರ್ಮಿನಲ್ಲಿ ಅರ್ಜಿ ಬರೆದು ವ್ಯವಸ್ಥಾಪಕರಿಗೆ ಕಳುಹಿಸತಕ್ಕದ್ದು ಇವರನ್ನು ಸದಸ್ಯರಾಗಿ ಸೇರಿಸಿಕೊಂಡಲ್ಲಿ ಇದನ್ನು ತಿಳಿಸುವ ಸದಸ್ಯತನದ ಕಾರ್ಡನ್ನು ಕಳುಹಿಸಲಾಗುವುದು ಮತ್ತು ಇದೇ ಸದಸ್ಯತನದ ದಾಖಲೆಯಾಗತಕ್ಕದ್ದು.

4. ಸೇವಾಪಥಕ

ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವ ಸದಸ್ಯರು ಐದು ಅಥವಾ ಹೆಚ್ಚಿಗ ಮಂದಿ ಕೂಡಿ ಒಂದು ಸೇವಾಪಥಕವನ್ನು ಏರ್ಪಡಿಸಿಕೊಳ್ಳಬಹುದು ಇವುಗಳ ಕಾರ್ಯಕ್ಷೇತ್ರಗಳು ಈ ಕೆಳಗಿನಂತೆ ಇರತಕ್ಕದ್ದು ಒಂದೇ ಕಾರ್ಯಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಪಥಕಗಳಿರಕೂಡದು.

(1) ಗ್ರಾಮ ಅಥವಾ ಗ್ರಾಮಸಮೂಹ ಸೇವಾಪಥಕ. ಒಂದು ರೆವೆನ್ಯೂ ಗ್ರಾಮದಲ್ಲಿ ಒಂದು ಸೇವಾಪಥಕ ಏರ್ಪಡಿಸಬಹುದು ನೆರೆಗ್ರಾಮಗಳು ಸೇರಿ ಒಂದೇ ಪಥಕವನ್ನೇರ್ಪಡಿಸಿಕೊಳ್ಳಬಹುದು

ನಗರ ಅಥವಾ ನಗರ ವಿಭಾಗ ಸೇವಾಪಥಕ ಮುನಿಸಿಪಾಲಿಟಿ ಇಲ್ಲದ ಹಾಗೂ ತಾಲೂಕು ಕೇಂದ್ರವಾದ ಪಟ್ಟಣಗಳನ್ನು ಮಾತ್ರ ಈ ಘಟನೆಯ ಬಗ್ಗೆ ನಗರವೆಂದಿಟ್ಟುಕೊಳ್ಳಲಾಗುತ್ತದೆ ಇಂಥಲ್ಲಿ 2500ಕ್ಕೆ ಕಡಮೆಯಾಗದಷ್ಟು ಜನಸಂಖ್ಯೆ ಇರುವ ವಿಭಾಗಗಳನ್ನು ಕಲ್ಪಿಸಿಕೊಂಡು ಒಂದೊಂದು ವಿಭಾಗಕ್ಕೆ ಒಂದೊಂದು ಪಥಕವನ್ನು ರಚಿಸಬಹುದು

(3) ಮುನಿಸಿಪಲ್ ನಗರ ಸೇವಾಪಥಕ ಮುನಿಸಿಪಾಲಿಟಿ ಇರುವ ನಗರಗಳಲ್ಲಿ ಪ್ರತಿಯೊಂದು ವಾರ್ಡಿಗೆ ಒಂದು ಸೇವಾಪಥಕ ವ್ಯವಸ್ಥೆಗೊಳಿಸಬಹುದು

(4) ವಿದ್ಯಾರ್ಥಿ ಸೇವಾಪಥಕ. ಹೈಸ್ಕೂಲು ಅಥವಾ ಕಾಲೇಜು ತರಗತಿಯ ಪ್ರತಿ ವಿದ್ಯಾಸಂಸ್ಥೆಗೆ ಒಂದು ಸೇವಾಪಥಕ ಏರ್ಪಡಿಸಬಹುದು, ಈ ಪಥಕಗಳಲ್ಲಿ ಉಪಾಧ್ಯಾಯರನ್ನಲ್ಲದೆ ಹೊರಗಿನವರನ್ನು ಸೇರಿಸಲಾಗದು

(5) ಮಜೂರ ಸೇವಾಪಥಕ ರಿಜಿಸ್ಟರಾದ ಪ್ರತಿಯೊಂದು ಟ್ರೇಡ್ ಯೂನಿಯನಿಗೆ ಒಂದು ಸೇವಾಪಥಕ ಏರ್ಪಡಿಸಬಹುದು ಆಯಾ ಟ್ರೇಡ್ ಯೂನಿಯನುಗಳ ಸದಸ್ಯರನ್ನಲ್ಲದೆ ಇತರರನ್ನು ಸೇರಿಸಲಾಗದು

(6) ಸ್ತ್ರೀಯರ ಸೇವಾಪಥಕ. ಮೇಲೆ ಕಾಣಿಸಿದ ಕಾರ್ಯಕ್ಷೇತ್ರಗಳಲ್ಲಿಯೇ ಸ್ತ್ರೀ ಸದಸ್ಯರು ತಮ್ಮ ಪ್ರತ್ಯೇಕ ಪಥಕಗಳನ್ನು ಏರ್ಪಡಿಸಬಹುದು ಒಂದು ಕಾರ್ಯಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಪಥಕಗಳಿರಕೂಡದೆಂಬ ನಿಯಮವು ಈ ಮಟ್ಟಿಗೆ ಅನ್ವಯಿಸುವುದಿಲ್ಲ. ಸ್ತ್ರೀಸದಸ್ಯರು ಸಾಮಾನ್ಯ ಪಥಕಗಳಲ್ಲಿ ಸೇರಲು ಅಡ್ಡಿ ಇಲ್ಲ.

(7) ಪಥಕ ವಿಭಜನೆ. ವಿಭಾಗಿಸಬಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮೂಹಪಥಕಗಳನ್ನೇರ್ಪಡಿಸಿದಲ್ಲಿ ಮತ್ತೆ ಬೇಕಾದಾಗ ಅವನ್ನು ವಿಭಾಗಿಸಲು ಆಕ್ಷೇಪವಿಲ್ಲ.

(8) ಪಥಕ ನಾಯಕ. ಪ್ರತಿಯೊಂದು ಪಥಕದವರು ತಮ್ಮ ಸದಸ್ಯರ ಬಹುಮತದ ಅಭಿಪ್ರಾಯದಂತೆ ತಮ್ಮ ಸದಸ್ಯರೊಳಗಿಂದ ಒಬ್ಬ ಪಥಕನಾಯಕರನ್ನು ಆರಿಸಿಕೊಳ್ಳಬೇಕು. ಈ ಘಟನೆಯಲ್ಲಿ ಕಾಣಿಸಿದ ನಿರ್ದಿಷ್ಟ ಅವಧಿಯ ತನಕ ಈ ನಾಯಕರ ಆಜ್ಞೆಗೆ ವಿಧೇಯರಾಗಿ ಪ್ರತಿಯೊಬ್ಬ ಸದಸ್ಯನೂ ಕೆಲಸಮಾಡತಕ್ಕದ್ದು

5. ನಾಯಕದಳ (ಪ್ರಾದೇಶಿಕ)

(1) ಪ್ರತಿಯೊಂದು ರೆವೆನ್ಯೂ ಫಿರ್ಕಾದಲ್ಲಿಯ ಅಥವಾ ಮುನಿಸಿಪಲ್ ನಗರದಲ್ಲಿಯ ಪಥಕ ನಾಯಕರು ಸೇರಿ ಒಂದೊಂದು ನಾಯಕ ದಳ ಏರ್ಪಡಿಸಿಕೊಳ್ಳಬಹುದು.

(2) ದಳನಾಯಕ ಮತ್ತು ದಳಪತಿ ಪ್ರತಿಯೊಂದು ನಾಯಕ ದಳಕ್ಕೆ ಒಬ್ಬ ದಳನಾಯಕ ಹಾಗೂ ಒಂದು ರೆವೆನ್ಯೂ ತಾಲೂಕಿನಲ್ಲಿಯ ಎಲ್ಲಾ ನಾಯಕ ದಳಗಳಿಗೆ ಒಬ್ಬ ದಳಪತಿ ಇರತಕ್ಕದ್ದು

(3) ದಳನಾಯಕ ಮತ್ತು ದಳಪತಿ ಇವರನ್ನು ಅವರವರ ಕಾರ್ಯಕ್ಷೇತ್ರದಲ್ಲಿಯ ಪಥಕ ನಾಯಕರು ಬಹುಮತದಿಂದ ಅಲ್ಲಿಯ ಸದಸ್ಯರೊಳಗಿಂದ ಆರಿಸತಕ್ಕದ್ದು

6 ವಿಶಿಷ್ಟ ನಾಯಕದಳ

ವಿದ್ಯಾರ್ಥಿಗಳ, ಮಜೂರರ ಮತ್ತು ಸ್ತ್ರೀಯರ, ಪಥಕ ನಾಯಕರು ತಮ್ಮ ತಮ್ಮ ವರ್ಗದ ನಾಯಕ ದಳ ಏರ್ಪಡಿಸಬಹುದು. ಇದರ ಕಾರ್ಯಕ್ಷೇತ್ರ ಇಡೀ ಜಿಲ್ಲೆ

(1) ಈ ನಾಯಕ ದಳಕ್ಕೆ ಒಬ್ಬ ದಳಪತಿ ಇರತಕ್ಕದ್ದು ಇವರನ್ನು ಸಂಬಂಧಪಟ್ಟ ವರ್ಗದ ಪಥಕ ನಾಯಕರು ಬಹುಮತದಿಂದ ತಮ್ಮ ಪಥಕಗಳ ಸದಸ್ಯರೊಳಗಿಂದ ಆರಿಸತಕ್ಕದ್ದು

(2) ವಿಶಿಷ್ಟ ಪಥಕಗಳ ಮತ್ತು ಇವುಗಳ ಅಧಿಕಾರಿಗಳ ಪ್ರಾದೇಶಿಕ ದಳಗಳ ಆಜ್ಞೆಗೊಳಪಡುವುದಿಲ್ಲ

7. ಲೋಕ ಸೇವಕ

ಈ ಲೋಕ ಸೇವಾ ಸಂಘದ ಜಿಲ್ಲೆಯ ಮುಖ್ಯ ಅಧಿಕಾರಿಯನ್ನು ಲೋಕ ಸೇವಕನೆಂದು ಕರೆಯಲಾಗುವುದು

ಜಿಲ್ಲೆಯಲ್ಲಿಯ ಪ್ರಾದೇಶಿಕ ಹಾಗೂ ವಿಶಿಷ್ಟ ಎಲ್ಲಾ ಸೇವಾ ಪಥಕಗಳ ನಾಯಕರು ಬಹುಮತದಿಂದ ಈ ಸಂಘದ ಸದಸ್ಯರೊಳಗಿಂದ ಆರಿಸತಕ್ಕದ್ದು

ಲೋಕ ಸೇವಾ ಸಂಘದ ಎಲ್ಲಾ ಸದಸ್ಯರೂ ಅಧಿಕಾರಿಗಳೂ ಇವರ ಆಜ್ಞೆಗಳನ್ನು ಪಾಲಿಸಲು ಬದ್ಧರು

8. ಕಾರ್ಯಕಾರೀ ಮಂಡಲ

(1) ಆರು ತಾಲೂಕುಗಳ ಪ್ರಾದೇಶಿಕ ದಳಪತಿಗಳು, ಮೂರು ವಿಶಿಷ್ಟ ವರ್ಗ ಪಥಕಗಳ ದಳಪತಿಗಳು ಮತ್ತು ಲೋಕ ಸೇವಕ ಹೀಗೆ ಹತ್ತು ಮಂದಿ ಈ ಸಂಘದ ಕಾರ್ಯಕಾರೀ ಮಂಡಲವಾಗುವರು

(2) ಲೋಕಸೇವಕರು ಈ ಕಾರ್ಯಕಾರೀ ಮಂಡಲದ ಅಧ್ಯಕ್ಷರು.

(3) ಯಾವುದೊಂದು ಪ್ರಶ್ನೆಯ ಕುರಿತು ಮಂಡಲದ ಬಹುಮತದ ಅಭಿಪ್ರಾಯವು ಲೋಕಸೇವಕನ ಅಭಿಪ್ರಾಯದಿಂದ ಭಿನ್ನವಿದ್ದಲ್ಲಿ ಲೋಕಸೇವಕನ ಅಭಿಪ್ರಾಯವೇ ಕೊನೆಯ ತೀರ್ಮಾನವಾಗಿ ಅದನ್ನೇ ಮಂಡಲವು ತನ್ನ ತೀರ್ಮಾನವೆಂದು ಸ್ವೀಕರಿಸತಕ್ಕದ್ದು.

9. ಲೋಕ ಸೇವಾಸಂಘದ ವರ್ಷ

ಒಂದು ವರ್ಷದ ಅಕ್ಟೋಬರ ತಾರೀಕು 2ರಿಂದ ಬರುವ ವರ್ಷದ ಅಕ್ಟೋಬರ ತಾರೀಕು 1ರ ವರೆಗೆ ಈ ಸಂಘದ ಒಂದು ವರ್ಷವೆಂದು ತಿಳಿಯತಕ್ಕದ್ದು

10. ಅಧಿಕಾರಿಗಳ ಅವಧಿ ಮತ್ತು ಚುನಾವಣೆಗಳು

ಪಥಕ ನಾಯಕರು, ದಳನಾಯಕರು, ದಳಪತಿಗಳು ಹಾಗೂ ಲೋಕಸೇವಕ. ಇವರ ಅಧಿಕಾರದ ಅವಧಿಯು ಒಂದು ವರ್ಷ ಮುಂದಿನ ವರ್ಷದ ಬಗ್ಗೆ ನಡೆಸಲ್ಪಡುವ ಚುನಾವಣೆಗಳಲ್ಲಿ ಪುನಃ ಅದೇ ಸದಸ್ಯರನ್ನು ಆರಿಸಲು ಆಕ್ಷೇಪವಿಲ್ಲ

ಪ್ರತಿ ವರ್ಷ ಸಪ್ಟಂಬರ ತಿಂಗಳಲ್ಲಿ ತಾ 25ರೊಳಗೆ ಚುನಾವಣೆಗಳನ್ನು ಮುಗಿಸತಕ್ಕದ್ದು

ಕೆಲಸದಿಂದ ನಿವೃತ್ತರಾಗುವ ಕಾರ್ಯಕಾರೀ ಮಂಡಲವು ಈ ಚುನಾವಣೆಗಳ ಯೋಗ್ಯ ಏರ್ಪಾಡು ಮಾಡತಕ್ಕದ್ದು

ಪ್ರತಿ ವರ್ಷ ಅಕ್ಟೋಬರ ತಾರೀಕು 2ನೇ ದಿನ ಹೊಸತಾಗಿ ಚುನಾಯಿತರಾದ ಅಧಿಕಾರಿಗಳು ಕೆಲಸ ವಹಿಸಿಕೊಳ್ಳತಕ್ಕದ್ದು ಅಲ್ಲಿಯ ತನಕ ಹಳೆಯ ಅಧಿಕಾರಿಗಳೇ ಕಾರ್ಯನಿರ್ವಹಿಸತಕ್ಕದ್ದು

11 ವಾರ್ಷಿಕ ಹಾಗೂ ವಿಶಿಷ್ಟ ಅಧಿವೇಶನಗಳು

ಪ್ರತಿ ವರ್ಷ ಸಾಮಾನ್ಯವಾಗಿ ಸಪ್ಟಂಬರ ತಾ 25ರಿಂದ ಅಕ್ಟೋಬರ ತಾ 1ರ ಒಳಗಿನ ದಿನಗಳಲ್ಲಿ ಲೋಕ ಸೇವಾ ಸಂಘದ ಎಲ್ಲ ಸದಸ್ಯರ ವಾರ್ಷಿಕ ಅಧಿವೇಶನಗಳನ್ನು ಜರಗಿಸಬಹುದು.

ಆಗ ಮುಂದಿನ ವರ್ಷಕ್ಕೆ ಚುನಾವಣೆ ಹೊಂದಿದ ಲೋಕ ಸೇವಕರೇ ಅಧಿವೇಶನದ ಅಧ್ಯಕ್ಷತೆ ವಹಿಸತಕ್ಕದ್ದು

ಜಿಲ್ಲಾ ವಿಶಿಷ್ಟ ಅಧಿವೇಶನ ಪ್ರಾದೇಶಿಕ ಅಧಿವೇಶನ ಅಥವಾ ವಿಶಿಷ್ಟ ಪಥಕಗಳ ಸದಸ್ಯರ ಅಧಿವೇಶನ ಇತ್ಯಾದಿಗಳನ್ನು ಬೇಕಾದಾಗ ಜರಗಿಸಬಹುದು

ಇವೆಲ್ಲವುಗಳ ಬಗ್ಗೆ ಕಾರ್ಯಕಾರೀ ಮಂಡಲದವರು ಯೋಗ್ಯ ನಿಯಮಗಳನ್ನು ಮಾಡತಕ್ಕದ್ದು

12 ಹಣ ಸಂಗ್ರಹ ಮತ್ತು ವಿನಿಯೋಗ

(1) ಲೋಕ ಸೇವಾ ಸಂಘದ ಸದಸ್ಯರಿಂದ ಸದಸ್ಯತನದ ಬಗ್ಗೆ ಯಾವ ವಂತಿಗೆಯನ್ನೂ ವಸೂಲು ಮಾಡಲಾಗುವುದಿಲ್ಲ

(2) ಸಂಘದ ಕಾರ್ಯಕ್ಕೆ ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ, ಸರಕಾರವಾಗಲಿ ಕೊಡಬಹುದಾದ ಸಹಾಯ ಧನವನ್ನು ಸ್ವೀಕರಿಸಲಾಗುತ್ತದೆ

(3) ಕಾರ್ಯಕಾರೀ ಮಂಡಲದವರು ಮಂಗಳೂರಲ್ಲಿರುವ ಸದಸ್ಯರೊಳಗಿಂದ ಒಬ್ಬರನ್ನು ಸಂಘದ ಖಜಾನ್ಜಿಯಾಗಿ ನೇಮಿತಕ್ಕದ್ದು ಸಂಘಕ್ಕೆ ಕೊಡುವ ಎಲ್ಲ ಹಣಗಳನ್ನು ಖಜಾನ್ಜಿಯವರೇ ಪಡೆದು ಪಾವತಿ ಕೊಡತಕ್ಕದ್ದು

(4) ಕಾರ್ಯಕಾರೀ ಮಂಡಲವು ಮಂಜೂರು ಮಾಡುವ ವಿಧಾನದಲ್ಲಿ ಈ ಹಣದ ವಿನಿಯೋಗ ಮಾಡತಕ್ಕದ್ದು.

(5) ಖಜಾನ್ಜಿಯವರು ಹಣ ಸಂಗ್ರಹ ಹಾಗೂ ವಿನಿಯೋಗದ ಲೆಕ್ಕವನ್ನಿಟ್ಟು

(೬ನೇ ಪುಟ ನೋಡಿ)

ಜಿಲ್ಲೆಯ ಆಹಾರ ಪರಿಸ್ಥಿತಿ

ಮಳೆಗಾಲದ ಮಧ್ಯದಲ್ಲಿ ಆಹಾರದ ಕೊರತೆ ಯುಂಟಾಗಬಹುದೆಂಬ ನಿರೀಕ್ಷೆಯುತ್ತಾದರೂ ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಪ್ರಕಟವಾದ ವರದಿಗಳಿಂದ ಆಹಾರ ತೀಕ್ಷ್ಣತೆಯುಂಟಾದ ಸಂದರ್ಭಗಳು ಕಂಡುಬರುತ್ತಿಲ್ಲ. ಇಷ್ಟು ಮಲ ಬಾರು ಕಡೆಯಲ್ಲಿಯೂ ಆಹಾರ ಪೂರೈಕೆಯು ಸರಿಯಾಗಿ ನಡೆಯುತ್ತಿರುವುದರಿಂದಲೂ ಇಲ್ಲವೆ ಈ ಮೊದಲು ಈ ಕಡೆಗಳಿಂದತ್ತ ಸಾಗಿಸಲ್ಪಟ್ಟ ಅಕ್ಕಿಯು ಹೇರಳ ದಾಸ್ತಾನಿರುವುದರಿಂದಲೂ ಆ ಕಡೆ ಈಚೆಗೆ ಅಕ್ಕಿ ಸಾಗಾಟ ನಿಂತಿರುವುದೆಂದೂ, ಪರಿಣಾಮವಾಗಿ ಪುತ್ತೂರು ಕಾರ್ಕಳ ತಾಲೂಕುಗಳಲ್ಲಿ ಅಕ್ಕಿಯ ಬೆಲೆ ಕೊಂಚ ಇಳಿಮುಖವಾಗಿರುವುದು ಕಂಡು ಬಂದಿರುತ್ತದೆ. ವಾಹನ ಸೌಕರ್ಯಗಳಿಲ್ಲದಿರುವುದೂ ಇದಕ್ಕೊಂದು ಕಾರಣವೆನ್ನಬಹುದು. ರೇಶನ್ ಕ್ಷೇತ್ರವಾದ ಮಂಗಳೂರು ಕಾಸರಗೋಡುಗಳಲ್ಲಿ ಪಡಿ ಪ್ರಮಾಣವನ್ನು ಹೆಚ್ಚಿಸಿದ್ದು ಒಂದು ಉತ್ತೇಜಕ ಸಂಗತಿ. ಇನ್ನೊಂದೆರಡು ತಿಂಗಳುಗಳು ಹೀಗೇ ದಾಟಿದರೆ ಕಠಿಣ ಪ್ರಸಂಗದಿಂದ ಪಾರಾದಂತಾಗುವುದು ಕಾರಣ ಆ ಕಾಲಕ್ಕೆ ಹೊಸ ಬೆಳೆಯು ಉತ್ಪತ್ತಿಯು ಸರಾಗವಾಗಿ ಬರುವುದು ಅದೇ ಹೊತ್ತಿಗೆ ಸಂಪೂರ್ಣ ರೇಶನ್ ರದ್ದತಿಯೂ ಆಗಬಹುದೆಂದು ನಿರೀಕ್ಷೆಯಿದೆ. ಹೀಗೆ ಅಕ್ಕಿ ಚಲಾವಣೆ ಅನಿರ್ಬಂಧಿತವಾದರೆ ಈ ಸಂಬಂಧವಾಗಿ ಇದುವರೆಗೆ ಅನುಭವಕ್ಕೆ ಬಂದ ಸಂಕಷ್ಟಗಳು ನಿವಾರಣೆಯಾಗಿ ಬೆಲೆಯೂ ಸರಮವಾಸಥಿಗೆ ಹೋಗದೆಂದು ಎಣಿಸಬಹುದು

ಎಳೆ ಹುಡುಗರ ಕಳ್ಳತನ– ೭೫ ಗೋಣಿ ಕಳವು

ಕಳೆದ ಎಪ್ರಿಲ್ ತಾ ೧೦ ಮತ್ತು ೧೧ ರಲ್ಲಿ ಇಲ್ಲಿಯ ಬಂದರದ ಒಂದು ಗೋಡೌನಿನಿಂದ ೭೫ ಖಾಲಿ ಗೋಣಿ ಚೀಲಗಳನ್ನು ಅಬುಬಕರ್, ಕೃಷ್ಣ, ಪೊಡಿಯ, ಮಹಮ್ಮದ್ ಎಂಬ ನಾಲ್ಕು ಮಂದಿ ಎಳೆ ಹುಡುಗರು ಕದ್ದರೆಂಬ ಮತ್ತು ಅಬ್ಬಾಸ್ ಎಂಬ ಚಿಲ್ಲರೆ ವ್ಯಾಪಾರಿ ಆ ಕಳುವಿನ ಪದಾರ್ಥಗಳನ್ನು ಪಡೆದನೆಂಬ ಆರೋಪದ ಮೊಕದ್ದಮೆ ನಮ್ಮ ಸ್ಪೆ॥ ಸ॥ ಮೆಜಿಸ್ಟ್ರೇಟ್ ಶ್ರೀ॥ ಎಂ ಶ್ರೀನಿವಾಸರಾಯರ ಮುಂದೆ ತನಿಖೆ ನಡೆದು ಅವರೆಲ್ಲರ ಮೇಲೆ ಮುಂದಿನ ಶಾಸನ ಕ್ರಮಗಳನ್ನು ಜರಗಿಸುವ ಬಗ್ಗೆ ಮಂಗಳೂರು ಸಬ್ ಡಿವಿಜನಲ್ ಆಫೀಸರರ ಕೋರ್ಟಿಗೆ ಕಳುಹಿಸಲಾಗಿದೆ

ಬೀಡಿ ಎಲೆಗಳ ಅಭಾವ ಹಲವು ಕಾರ್ಖಾನೆ ಮುಚ್ಚಿವೆ

ಇಲ್ಲಿನ ಹಲವು ಚಿಲ್ಲರೆ ಬೀಡಿ ಕಾರ್ಖಾನೆಗಳು ಈಚೆಗೆ ಮುಚ್ಚಿ ಸುಮಾರು ೨ ಸಾವಿರ ಮಂದಿಗೆ ಕೆಲಸವಿಲ್ಲ, ಇಲ್ಲಿಯ ದೊಡ್ಡ ಕಾರ್ಖಾನೆಗಳಲ್ಲಿ ಒಂದಾದ ಗಣೇಶಬೀಡಿ ಕಾರ್ಖಾನೆಯವರೂ ಇಲ್ಲಿಯ ೫, ಪುತ್ತೂರಿನ ೧, ಬಂಟ್ವಾಲ-ಪಾಣೆಮಂಗಳೂರಿನ ೨ ಶಾಖೆಗಳನ್ನು ಮುಚ್ಚುವಂತಾಗಿ ಸುಮಾರು ೧,೧೨೫ ಮಂದಿಗೆ ಕೆಲಸವಿಲ್ಲದಂತಾಗಿದೆ, ಬೀಡಿ ಎಲೆಗಳನ್ನು ಸಾಗಿಸಲು ಬೇಗನೆ ರೈಲ್ವೆ ವಾಗಿನುಗಳು ದೊರೆಯದಿದ್ದರೆ, ಇನ್ನುಳಿದ ಸುವಾಸಿನಿ, 'ದರ್ಬಾರ್' ಮೊದಲಾದ ಬೀಡಿ ಕಾರ್ಖಾನೆಗಳೂ ತಮ್ಮ ಬಾಗಿಲು ಮುಚ್ಚಬೇಕಾಗಿ ಬಂದು ಸುಮಾರು ೬ ಸಾವಿರ ಮಂದಿ ನಿರುದ್ಯೋಗಿಗಳಾಗಬಹುದೆಂಬ ಭೀತಿ ಇದೆ

ಕನ್ನ ಕಳವಿಗೆ ೨ ತಿಂಗಳು

ತಿರುವೈಲ್ ಗ್ರಾಮದ ಹನೀಫ್ ಬ್ಯಾರಿಯವರಿಂದ ಚೆಂಬುಪೆಟ್ಟಿಗೆಗಳೇ ಮೊದಲಾದ ಸುಮಾರು ೪೫ ರೂ. ಬೆಲೆಬಾಳುವ ಪದಾರ್ಥಗಳನ್ನು ಅದೇ ಗ್ರಾಮದ ಕಾಂತುಪೂಜಾರಿ ಎಂಬಾತನು ಕನ್ನಕಳವು ಮಾಡಿದನೆಂಬ ಆರೋಪದ ಮೊಕದ್ದಮೆ ಇಲ್ಲಿಯ ಆನರರಿ ೧ ಕ್ಲಾಸ್ ಬೆಂಚ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ತನಿಖೆಯಾಗಿ ಕಾಂತುವಿಗೆ ೨ ತಿಂಗಳ ಕಠಿಣ ಸಜೆ ವಿಧಿಸಿದೆ

ಗ್ರಾಮ ವಾಚನಾಲಯದ ಆರಂಭೋತ್ಸವ, ಬಾಡಿಗೆ ಇಲ್ಲದೆ ಕಟ್ಟಡ

ಬೋಳೂರಿನಲ್ಲಿ ಮೇಲ್ಕಂಡ ವಾಚನಾಲಯವನ್ನು ಉದ್ಘಾಟನೆ ಮಾಡುವ ಸಮಾರಂಭವನ್ನು ಈಚೆಗೆ ಇಲ್ಲಿನ ಮು॥ ಕೌನ್ಸಿಲ್ ಶ್ರೀ ಪಿ. ಡಿ'ಸೋಜರು, ಯುಕ್ತವಾದ ಹಿತವಚನಗಳೊಡನೆ ನೆರವೇರಿಸಿದರು. ಶ್ರೀ ಶ್ರೀನಿವಾಸರಾಯರು ಈ ವಾಚನಾಲಯಕ್ಕೆ ಶ್ರೀ ಕೃಷ್ಣಯ್ಯನವರು ಬಾಡಿಗೆ ಇಲ್ಲದೆ ತಮ್ಮ ಕಟ್ಟಡವನ್ನು ಕೊಟ್ಟಿರುವರೆಂದು ತಿಳಿಸಿದರು. ಶ್ರೀಯುತರಾದ ಪಿ. ಶಂಕರನಾರಾಯಣರಾವ್, ಎ. ಸುಬ್ರಾಯ ಪೈ, ಕೆ. ಕೃಷ್ಣರಾವ್, ಬಿ ಎ ಇವರು ಕಾಲೋಚಿತವಾದ ಭಾಷಣಗಳನ್ನು ಮಾಡಿದರು ಶ್ರೀ ಬಿ ಸೋಮಪ್ಪನವರು ವಂದನೆಗಳನ್ನರ್ಪಿಸಿದರು

ಮು॥ ಕೌನ್ಸಿಲ್ ಮೀಟಿಂಗ್— ಶಾಲಾಸ್ಪರ್ಧೆಗೆ ರೂಪಾಯಿ ೩೫೦!

ನಮ್ಮ ಮು। ಕೌ। ಮೀಟಿಂಗ್ ಈಚೆಗೆ ಅದರ ಕಾರ್ಯಾಲಯದಲ್ಲಿ ವೈಸ್ ಚೆಯರ್ ಮೇನ್ ಶ್ರೀ ಬಿ ಜಿ ದಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಹಲವು ಜಿ ಓಗಳನ್ನು ರಿಕಾರ್ಡು ಮಾಡಲಾಯಿತು ಸೆಂಟ್ರಲ್ ಮಾರ್ಕೆಟ್ ಹುಡುಗರ ಹಾ ಎ॥ ಶಾಲೆಯಲ್ಲಿ 'ಶಿಫ್ಟ್ ಪದ್ಧತಿ'ಯನ್ನು ಜಾರಿಗೆ ತರಬೇಕೆಂದು, ಮು॥ ಕೌನ್ಸಿಲರ್ ಶ್ರೀ ಜಿ ಎಸ್ ನಗರಕಾರರು ಮಂಡಿಸಲಿದ್ದ ಠರಾವನ್ನು ಅವರು ಮುಂದೊತ್ತದೆ ಹೋದರು ಈರೋಡ್ ಮುನಿಸಿಪಾಲಿಟಿಯಲ್ಲಿ ಮಂಜೂರಾಗಿ ಇಲ್ಲಿಯೂ ಅದೇ ರೀತಿಯ ಠರಾವನ್ನೇ ಮಂಜೂರು ಮಾಡಬೇಕೆಂಬ ಅವರ ಅರಿಕೆಯ ಮೇರೆಗೆ ಮುನಿಸಿಪಲ್ ಗದ್ದೆಗಳೊಳಗೆ ವಾಸಿಸುತ್ತಿರುವ ಹರಿಜನರು ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು, ಹರಿಜನೋದ್ಧಾರಕ್ಕಾಗಿರುವ ಸರಕಾರದ ಕಾದಿಟ್ಟ ನಿಧಿಗಳ ಒಂದು ಕೋಟಿ ಯೋಜನೆಯಿಂದ ಸಹಾಯ ದೊರೆಯುವಂತೆ ಸರಕಾರದವರಲ್ಲಿ ವಿನಂತಿಸುವ ಠರಾವು ಮಂಜೂರಾಯಿತಲ್ಲದೆ ಇತರ ಮುನಿಸಿಪಾಲಿಟಿಗಳೂ ಇಂತಹ ಠರಾವಿಗೆ ಬೆಂಬಲವಿತ್ತು "ಪಾಸುಮಾಡಿ ಸರಕಾರಕ್ಕೆ ಅದನ್ನು ಕಳುಹಿಸಬೇಕೆಂದೂ ಅರಿಕೆಮಾಡಿಕೊಳ್ಳುವ ನಿರ್ಣಯವೂ ಆಯಿತು ಶ್ರೀ ಗೋಪಾಲ ಸಾಲಿನ್ಸ, ಮು॥ ಕೌನ್ಸಿಲರ್ ಇವರು ಮಂಗಳೂರಿನ ಎಲ್ಲಾ ಶಾಲೆಗಳೊಳಗೊಂದು ಸ್ಪರ್ಧೆ ಮತ್ತು ಬಹುಮಾನಗಳನ್ನು ಏರ್ಪಡಿಸಬೇಕೆಂದು ಹಿಂದೆ ತಂದಿದ್ದ ಠರಾವಿನ ಬಗ್ಗೆ ನೇಮಿಸಲಾದ ಒಂದು ಸಮಿತಿಯ ಶಿಫಾರಸುಗಳ ಮೇರೆಗೆ, "ಸ್ಪರ್ಧೆ ಮುನಿಸಿಪಲ್ ಶಾಲೆಗಳೊಳಗೆ ಮಾತ್ರ ಪ್ರತ್ಯೇಕ ನಡೆಯಬೇಕು ಅದು ನಡೆಯುವ ಕಾಲ ಅಕ್ಟೋಬರ, ತಾ ೨೧ರಿಂದ ಒಂದು ವಾರ, ವಿದ್ಯಾ ಸಮಿತಿ ಉಪಾಧ್ಯಾಯ ಸಂಘದ ಸೂಚನೆಗಳನ್ನು ಪಡೆದು ಈ ಸ್ಪರ್ಧೆಯ ಕಾರ್ಯಕ್ರಮಗಳನ್ನು ನಿರ್ಧರಿಸಬೇಕು, ಕಮಿಶನರು ಇದರ ವ್ಯವಸ್ಥಾಪಕರು ಸ್ಪರ್ಧೆಗಾಗಿ ರೂ ೩೫೦ ಗಳನ್ನು ಮಂಜೂರು ಮಾಡಬಹುದು" ಎಂದು ತೀರ್ಮಾನವಾಯಿತು

ವಿದ್ಯಾಭಿಮಾನಿಗಳಲ್ಲಿ ವಿನಂತಿ

ಎರಡು ವರ್ಷಗಳ ಹಿಂದೆ ಉಳ್ಳಾಲ ರೈಲ್ವೆ ಸ್ಟೇಶನ್ ಬಳಿ, ಆನಂದಾಶ್ರಮ ಹೈಸ್ಕೂಲ್ ಎಂಬ ವಿದ್ಯಾ ಸಂಸ್ಥೆಯು ಸ್ಥಾಪನೆಯಾಗಿ, ಈಗ ೧ರಿಂದ ೪ನೇ ಫೋರ್ಮ್ ವರೆಗೆ ಕ್ಲಾಸುಗಳಿದ್ದು ಸುತ್ತುಮುತ್ತಲಿನ ಸುಮಾರು ೪೦ಕ್ಕೂ ಮಿಕ್ಕಿದ ಊರು ಗ್ರಾಮಗಳ, ಅಂದರೆ ನೇತ್ರಾವತಿ ನದಿಯಿಂದ ಮಂಗಲ್ಪಾಡಿ ತನಕದ, ಸಮುದ್ರ ಕಿನಾರೆಯಿಂದ ಸುಮಾರು ೨೦ ಮೈಲು ಒಳನಾಡು ತನಕದ—ಮಕ್ಕಳಿಗೆ ವಿದ್ಯೆಕೊಟ್ಟು ತನ್ನ ಕಿಂಚಿತ್ ಸೇವೆಯನ್ನು ಮಾಡುತ್ತದೆಯೆಂಬ ವಿಷಯ ತಮಗೆ ತಿಳಿದಿರಬಹುದು

ಈ ಸಂಸ್ಥೆಯನ್ನು ಸ್ಥಾಪಿಸಿದ ಮಂಗಳೂರು ಸಾ ವಿ ಸಂಘದವರು ಹಲಕೆಲವು ಕಾರಣಗಳಿಂದ, ಇನ್ನು ಅದನ್ನು ಮುಂದೆ ನಡೆಯಿಸಿಕೊಂಡುಹೋಗುವರೆ ತಮ್ಮಿಂದ ಅಸಾಧ್ಯವೆಂಬ ನಿರ್ಧಾರವು ನಮಗೆ ತಿಳಿದುಬಂದಲ್ಲಿ ಜನೋಪಕಾರಿಯಾದ ಇಂತಹ ವಿದ್ಯಾಸಂಸ್ಥೆಯು ಈ ರೀತಿಯ ಕಷ್ಟಕ್ಕೀಡಾದುದನ್ನು ಸಹಿಸಲಾರದೆ, ಅದನ್ನು ಮುನ್ನಡೆಯಿಸಿಹೋಗುವ ಸಾಹಸವನ್ನು ಮಾಡಿದ್ದೇವೆ ಅದಕ್ಕಾಗಿ ಒಂದು ಸ್ಥಳೀಯ ಕಮಿಟಿಯೂ ಆಗಿದೆ ಅದನ್ನು ಸದ್ಯದಲ್ಲೆ ರಿಜಿಸ್ಟ್ರಿಮಾಡುವ ಯೋಜನೆಯೂ ಇದೆ ಸಾ ವಿ ಸಂಘದವರ ಕೂಡಾ ಉದಾರಮನಸ್ಸಿನಿಂದ ತಮ್ಮ ಸಹಾಯವನ್ನು ಕೊಡಲು ಸಿದ್ಧರಿದ್ದಾರೆ ಮತ್ತು ನಮ್ಮ ಸುಯೋಗದಿಂದಲೋ ಎಂಬಂತೆ, ನಮ್ಮ ಜಿಲ್ಲೆಯ ಅನೇಕ ಸಾರ್ವಜನಿಕ ವಿಷಯಗಳಲ್ಲಿ ದುಡಿದ ತುಂಬ ಅನುಭವಶಾಲಿಗಳಾದ ಶ್ರೀ ಕೆ ಮೊಳಹಳ್ಳಿ ಶಿವರಾಯರು ಈ ವಿಷಯದಲ್ಲಿ ತನ್ನ ಸಂಪೂರ್ಣ ಸಹಾನುಭೂತಿಯನ್ನೂ ಕೆಲವು ಉಪಯುಕ್ತ ಸೂಚನೆಗಳನ್ನೂ ಕೊಟ್ಟಿರುವರಲ್ಲದೆ ಇನ್ನು ಮುಂದಕ್ಕೂ ಬೇಕಾದ ಸಹಾಯಗಳನ್ನು ಕೊಡಲಿರುವರು ಇನ್ನು ಈ ಸತ್ಕಾರ್ಯಕ್ಕೆ ನಿಮ್ಮಗಳ ಸಂಪೂರ್ಣ ಬೆಂಬಲ ಪ್ರೋತ್ಸಾಹ ಹಾಗೂ ಆಶೀರ್ವಾದ ದೊರೆಯಬಹುದೆಂದು ನಿರೀಕ್ಷಿಸಲಾಗಿದೆ

ಆ ಪ್ರಯುಕ್ತ ಇದೇ ಬರುವ ಅಗೋಸ್ತು ೮ನೇ ತಾರೀಕು ಆದಿತ್ಯವಾರ ದಿನ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ಆನಂದಾಶ್ರಮ ಹೈಸ್ಕೂಲಲ್ಲಿ (ಉಳ್ಳಾಲ ರೈಲ್ವೇಸ್ಟೇಶನ್ ಬಳಿ) ನಡೆಯಲಿರುವ ಈ ಮೇಲೆ ಸೂಚಿಸಿದ ಊರುಗಳ ಜನರ ಸಾರ್ವಜನಿಕ ಸಭೆಗೆ ವಿದ್ಯಾಭಿಮಾನಿಗಳಾದ ತಾವು ಮಿತ್ರರಿಂದೊಡಗೂಡಿ ದಯವಿಟ್ಟು ಬಂದು ಸಹಕರಿಸಿ ಪ್ರೋತ್ಸಾಹಿಸಬೇಕೆಂದು ಸದ್ರಿ ಸಮಿತಿಯ ಸೆಕ್ರೆಟರಿಯವರು ವಿನಂತಿಸುತ್ತಾರೆ ಈ ಸಭೆಗೆ ಶ್ರೀ ಮೊಳಹಳ್ಳಿ ಶಿವರಾಯರು ಬರಲು ಒಪ್ಪಿರುವರು

ಮಂಜೇಶ್ವರ

"ಶ್ರೀ ಮದನಂತೇಶ್ವರ ದೇವಸ್ಥಾನ" (ಧರ್ಮಪ್ರಚಾರ)

ಕನ್ನಡ ರಾಮಾಯಣವನ್ನು ಅತೀ ಮಧುರವಾಗಿ ಹಾಗೂ ಸುಲಲಿತವಾಗಿ ಕನ್ನಡನುಡಿಯಿಂದ ವಿವರಿಸಿ ಹೇಳಬಲ್ಲ ಗಮಕಿಗಳೂ; ಶ್ರೀ ದೇವಸ್ಥಾನದಲ್ಲಿ ಪ್ರತೀ ಏಕಾದಶೀ ದಿನಗಳಲ್ಲಿ ನಡೆಸಬೇಕೆಂದಿರುವ ಭಜನಾಕೂಟಗಳಲ್ಲಿ ಭಜನಾಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲ ಸಂಗೀತಗಾರರೂ, (ಪಕ್ಕಾ ಮೇಳ ಸಮೇತ) ತಾವು ಅಪೇಕ್ಷಿಸುವ ಪ್ರತಿಫಲದ ವಿವರವನ್ನು ತಿಳಿಸಿ ದೇವಳದ "ಎಕ್ಸಿಕ್ಯೂಟಿವ್ ಆಫೀಸರ್"ರವರಿಗೆ ಇದೇ ತಾ ೩೧ರ ಒಳಗೆ ತಲಪುವಂತೆ, ಅರ್ಜಿಗಳನ್ನು ಬರಕೊಳ್ಳಬೇಕಾಗಿ ಎಕ್ಸಿಕ್ಯೂಟಿವ್ ಆಫೀಸರರು ತಿಳಿಸುತ್ತಾರೆ

ಶ್ರೀ ಮದನಂತೇಶ್ವರ ದೇವಸ್ಥಾನದ ವರಾಂಡದಲ್ಲಿ ಪ್ರತಿ ಆದಿತ್ಯವಾರ (ಪೂರ್ವಾಹ್ನ ಗಂಟೆ ೮ರಿಂದ ೧೧ರ ವರೆಗೆ) ಪೂಜ್ಯರಾದ ಶ್ರೀಮತ್ ಕಮಲಾನಂದಜೀಯವರಿಂದ ಗೀತಾವಾಚನ, ವಿವರಣೆಗಳು ನಡೆಯುತ್ತಲಿವೆ

(೫ನೇ ಪುಟದಿಂದ)

ವರ್ಷಕ್ಕೊಮ್ಮೆ ಇಂಥ ಲೆಕ್ಕಗಳನ್ನು ಯೋಗ್ಯ ಆಡಿಟರರಿಂದ ಪರಿಶೋಧಿಸಿ ಪ್ರಕಟಿಸತಕ್ಕದ್ದು

13 ತಾತ್ಕಾಲಿಕ ಏರ್ಪಾಡು

ಈ ಲೋಕ ಸೇವಾ ಸಂಘವನ್ನು ರಚಿಸಿ ಕಾರ್ಯಕ್ಕೆ ಹಚ್ಚುವುದಕ್ಕಾಗಿ ಪ್ರಥಮ ವರ್ಷದ ಬಗ್ಗೆ ಅಂದರೆ 1949ನೇ ಇಸ್ವಿ ಆಕ್ಟೋಬರ ತಾ 2ರ ತನಕ ಈ ಕೆಳಗಿನ ಏರ್ಪಾಡು ಇರತಕ್ಕದ್ದು

(1) ಸ ಂಘ ಲೋಕ ಸೇವಕ [illegible] ಗಳನ್ನು ವ್ಯವಸಾಯ ಕರ್ತೆ ರಚಿಸಿಕೊಂಡು ನಿರ್ವಹಿಸತಕ್ಕದ್ದು ಇದರ ವ್ಯವಸ್ಥಾಪಕ [illegible] ತಕ್ಕದ್ದು

(2) ಈ ವರ್ಷದ [illegible] ವಿಶಿಷ್ಟ ದಳಪತಿಗಳನ್ನು ವ್ಯವಸ್ಥಾಪಕರು [illegible] ತಕ್ಕದ್ದು

(3 [illegible] ರಚಿಸಲ್ಪಡುವ ಸಂಘದ ಕಾರ್ಯಕಾರೀ ಮಂಡಲಿಯ ಸೇವಾ ಪಥಕಗಳನ್ನು ಕಟ್ಟಿ ಅವುಗಳಿಗೆ ಯೋಗ್ಯ [illegible] ಸದಸ್ಯ [illegible] ಸತಕ್ಕದ್ದು

14. ನಿಬಂಧನೆಗಳ ತಿದ್ದುಪಡಿ ಮತ್ತು ಇತರ ನಿಯಮಗಳು

ಈ ಘಟನೆಯಲ್ಲಿ [illegible] ನಿಬಂಧನೆಗಳನ್ನು ಇವುಗಳ ಧ್ಯೇಯ ಮತ್ತು ಜೀವನಗಳಿಗೆ ವಿರೋಧವಾಗದಂತೆ ತಿದ್ದುಪಡಿ ಮಾಡಲು, ಇದಕ್ಕೆ ಸಂಬಂಧಪಟ್ಟ ಕೆಲಸಗಳ ಬಗ್ಗೆ ನಿಯಮಗಳನ್ನು ಮಾಡಲಿಕ್ಕೂ ಸಂಘದ ಕಾರ್ಯಕಾರೀ ಮಂಡಲಕ್ಕೆ ಅಧಿಕಾರವಿರುತ್ತದೆ

ಪರಿಶಿಷ್ಟ

ಸದಸ್ಯತನದ ಅರ್ಜಿ ಫಾರ್ಮು

1 ಹೆಸರು 2 ತಂದೆ ಯಾ ರಕ್ಷಕನ ಹೆಸರು 3 ಪ್ರಾಯ 4 ಕಾರ್ಯಕ್ಷೇತ್ರ 5 ವಿಳಾಸ 9 ಸ್ವಂತ ಮತ್ತು ಸತತ ಖಾದಿ ಧಾರಣೆಯ ರೂಢಿ ಇದೆಯೊ ಅಥವಾ ಆರು ತಿಂಗಳೊಳಗೆ ಇದನ್ನು ಪಾಲಿಸುವವನಾಗ್ಯನನ್ನೋ ಇಷ್ಟು ವಿವರಗಳ ಬಳಿಕ ಲೋಕ ಸೇವಾ ಸಂಘದ ಘಟನೆ ಮತ್ತು ನಿಬಂಧನೆಗಳನ್ನು ನಾನು ತಿಳಿದುಕೊಂಡಿದ್ದೇನೆ ಅದರಂತೆ ವರ್ತಿಸಲು ಸಿದ್ಧನಿದ್ದೇನೆ ಸಂಘದ ಸದಸ್ಯನನ್ನಾಗಿ ಸೇರಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ ಎಂದು ಬರೆದು ತಾರೀಕು ಹಾಕಿ ಸಹಿ ಮಾಡತಕ್ಕದ್ದು

ಚರ್ಮ ವ್ಯಾಧಿಗಳಿಂದ ಶೀಘ್ರ ಗುಣಹೊಂದಲಿಕ್ಕೆ ತ್ವರೆಯ ಮುಲಾಮು

ವಿಷಹಾರಿ ಕುಟಿಕೂರಾ ಮುಲಾಮು ಶೀಘ್ರವಾಗಿ ಚರ್ಮ ಆರೋಗ್ಯ ಪುನರ್ರಚಿಸಿ, ಚಿಕ್ಕ ಪುಟ್ಟ ಎಲ್ಲಾ ಚರ್ಮ ತೊಂದರೆಗಳ ಬೇನೆಯನ್ನು ತಗಿಸುತ್ತದೆ ಚರ್ಮ ಸ್ವಚ್ಛವಿರಿಸಿ ಗುಣಪಡಿಸುತ್ತದೆ.

557

ಕುಟಿಕೂರಾ ಮುಲಾಮು

CUTICURA OINTMENT

ಅಂತರ್ರಾಷ್ಟ್ರೀಯ ರಾಜಕೀಯ

ಬರ್ಲಿನ ಬಿಕ್ಕಟ್ಟಿನ ಚರ್ಚೆಗಾಗಿ ಚತುರ್ರಾಷ್ಟ್ರಗಳ ಪರಿಷತ್ತು

ರಶಿಯದ ಗ್ರಹದೆಸೆ ಉಚ್ಚವಾಗಿದೆ

ಬರ್ಲಿನದ ನೆವದಿಂದ ಇನ್ನು ಯುದ್ಧದ ಕಿಡಿಯು ಹಾರಿಲ್ಲ ಆಂಗ್ಲೋ-ಅಮೇರಿಕನರು ರಶ್ಯಕ್ಕೆ ಇನ್ನು ರಾಯಭಾರಿಗಳನ್ನು ಕಳಿಸುವ ವಿಚಾರ ಮಾಡುತ್ತಿದ್ದಾರೆ ಈ ವಿಷಯದಲ್ಲಿ ರಶ್ಯದೊಡನೆ ಸಂಬಂಧ ಕಡಿದುಹೋಗುವ ಪೂರ್ವದಲ್ಲಿ ಬ್ರಿಟನ್, ಅಮೇರಿಕಾ, ಫ್ರಾನ್ಸ್ ರಶ್ಯ ಈ ಚತುರ್ರಾಷ್ಟ್ರಗಳ ಪರಿಷತ್ತು ಸೇರಬಹುದೆಂದು ತರ್ಕಿಸಲಾಗುತ್ತಿದೆ ಈ ನಾಲ್ಕು ರಾಷ್ಟ್ರಗಳ ವಿದೇಶ ಮಂತ್ರಿಗಳ ಪರಿಷತ್ತು ಅಯಶಸ್ವಿಯಾದರೆ ಆಟ್ಲೀ-ಟ್ರೂಮನ್-ಸ್ಟಾಲಿನರು ಸಭೆ ಸೇರಬೇಕು ಎಂದೂ ಸೂಚಿಸಲಾಗುತ್ತಿದೆ ರಶ್ಯ ಮತ್ತು ಪೂರ್ವದಲ್ಲಿಯ ಪ್ರಜಾಪ್ರಭುತ್ವ ರಾಷ್ಟ್ರಗಳ ಬಗ್ಗೆ ಇರುವ ಅವಿಶ್ವಾಸವನ್ನು ಕಿತ್ತು ಹಾಕಲು ಇವು ಸೂಚನೆಗಳೇ ಹೊರತು ಉಪಾಯಗಳಲ್ಲ

ರಶ್ಯದ ದೆಸೆ

ರಶ್ಯದ ಗ್ರಹಗಳೆಲ್ಲ ಈಗ ಉಚ್ಚ ದೆಸೆಯ[illegible] ಇದೆ ಬರ್ಲಿನಕ್ಕೆ ಬೇಕಾದಾಗ [illegible]ರವನ್ನು ಪೂರೈಸಿ ಜರ್ಮನರನ್ನು ತನ್ನ ಕಡೆಗೆ ಒಲಿಸಿಕೊಳ್ಳಬಲ್ಲದು ಆದ್ದರಿಂದಲೇ ರಶ್ಯವು ಪಶ್ಚಿಮ ಬರ್ಲಿನಕ್ಕೆ ಬೇಕಾದಾಗ ಆಹಾರ ಕಳಿಸಲು ಸಿದ್ಧವಾಗಿದೆ ಅಲ್ಲದೆ ಆಂಗ್ಲೋ-ಅಮೇರಿಕನರು ವಿಮಾನದಿಂದ ಈ ಪ್ರದೇಶಕ್ಕೆ ನಿರಂತರವಾಗಿ ಈ ಆಹಾರವನ್ನು ಪೂರೈಸಲಾರರೆಂಬುದೂ ರಶ್ಯಕ್ಕೆ ಗೊತ್ತಿದೆ ಇನ್ನು ಬೇಗನೆ ಚಳಿಗಾಲವು ಪ್ರಾರಂಭವಾಗುವುದು. ಬರ್ಲಿನದ ನಾಗರಿಕರು ಕಲ್ಲಿದ್ದಲಿ ವಿದ್ಯುಚ್ಛಕ್ತಿಯನ್ನು ಕೇಳುವರು. ವಿಮಾನಗಳಿಂದ ತಂದು ಇವನ್ನು ಪೂರೈಸಲು ಸಾಧ್ಯವಿಲ್ಲ ಆದ್ದರಿಂದ ಪಶ್ಚಿಮ ರಾಷ್ಟ್ರಗಳು ಮುಂದೆ ಸಾರುವ ಸಿದ್ಧತೆಯಿಲ್ಲ ದಿದ್ದರೆ ರಶ್ಯದೊಡನೆ ಯಾವುದೊಂದು ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗುವುದು. ಸದ್ಯಕ್ಕಂತೂ ಈ ಪಶ್ಚಿಮ ರಾಷ್ಟ್ರಗಳು ಯುದ್ಧ ಸಾರುವ ಸಂಭವವಿಲ್ಲ

ಒಕ್ಕಟ್ಟು

ಈ ವಿಷಯದಲ್ಲಿ ಫ್ರಾನ್ಸ್ ಸ್ವೀಕರಿಸಿರುವ ಧೋರಣವು ವಾಸ್ತವ ಪೂರ್ಣವಾಗಿದ್ದು ರಶ್ಯನರು ಬರ್ಲಿನದ ದಿಗ್ಬಂಧನವನ್ನು ಸಡಲಿಸದಿದ್ದರೂ ಚತುರಾಷ್ಟ್ರಗಳ ಪರಿಷತ್ತನ್ನು ಪ್ರೇರಕವಾಗಬಲ್ಲದು

ಇಲ್ಲಿಯ ಎರಡನೆ 'ಮ್ಯುನಿಕ' ಆಗುವ ಗಂಡಾಂತರವಿದೆ 'ಮ್ಯುನಿಕ' ಅಂದರೆ ಘರ್ಷಣ ಪ್ರಾರಂಭವಾಗುವ ವರೆಗೆ ಅನೀತಿ ತರ ಒತ್ತಡಗಳನ್ನು ತಡೆದು ಹಿಡಿಯುವುದು ಎಂಬ ಗ್ರಹಿಕೆಯಿದೆ

ಹಿಂದೂಸ್ಥಾನದ ಧೋರಣೆ

ಹಿಂದೀ ವಿದೇಶ ಶಾಖೆಯು ಈ ಅಂತರ್‌ರಾಷ್ಟ್ರೀಯ ಬೆಳವಣಿಗೆಗಗಳನ್ನು ಗಮನಿಸಿ ತನ್ನ ರಾಜಕೀಯ ಶಕ್ತಿಯನ್ನು ಪುನರ್ಘಟಿಸಬೇಕು ಹಿಂದೂಸ್ಥಾನವು ಯಾವ ಪಕ್ಷವನ್ನು ವಹಿಸುವದಿಲ್ಲೆಂದು ಹೇಳುತ್ತ ಕುಳಿತುಕೊಳ್ಳುವುದು ಜಾಣತನದ್ದಾಗಲಾರದು. ಹಿಂದೂಸ್ಥಾನ ಸರಕಾರವು ಜಗತ್ತಿನ ಘಟನೆಗಳ ಬಗ್ಗೆ ತನ್ನದೊಂದು ಸ್ಪಷ್ಟ ಸಿದ್ಧಾಂತವನ್ನು ಮಾಡಿಕೊಳ್ಳಬೇಕು. ಹಿಂದೂಸ್ಥಾನವು ಯಾವ ಸಾಧನವನ್ನು ವಹಿಸಬೇಕೆಂದು ಸೂಚಿತವಾಗಿದ್ದರೂ ಬ್ರಿಟಿಷ್ ವಿರೋಧಿ ಧೋರಣವನ್ನು ಸ್ವೀಕರಿಸುವದರಿಂದ ಹಿಂದೂಸ್ಥಾನಕ್ಕೆ ಅಪಾರ ಹಾನಿಯಾಗ ಬಾರದೆಂದು ಹೇಳಬಹುದು.

ಕಮ್ಯೂನಿಜಂ ತತ್ವವೇ ನಮ್ಮ ಧ್ಯೇಯ

ವಿರೋಧಕರಿಗೆ ಮಾರ್ಶಲ ಟಿಟೋರ ಎಚ್ಚರಿಕೆ

ನಾವು ಯುಗೋಸ್ಲಾವರು ರಶ್ಯವನ್ನೂ ಇತರ ಪ್ರಜಾಪ್ರಭುತ್ವದ ರಾಷ್ಟ್ರಗಳನ್ನೂ ಕಡೆಗಣಿಸಿದ್ದೇವೆ ಅಂತರಾಷ್ಟ್ರೀಯ ದೃಷ್ಟಿಕೋನ ನಮ್ಮಗಿಲ್ಲ, ಕೇವಲ ಕೂಪ ಮಂಡೂಕ ವೃತ್ತಿಯವರಾಗಿದ್ದೇವೆ ಮಾರ್ಕ್ಸ ಮತ್ತು ಲೆನಿನರ ಉಪದೇಶವನ್ನು ತ್ಯಜಿಸಿ ಬಿಟ್ಟಿದ್ದೇವೆ ಎಂದು ರೋಮಿನ್ ಫಾರ್ಮಿಕನ ಮುಖಂಡರು ಒಂದು ಗೊತ್ತುವಳಿಯನ್ನು ಸ್ವೀಕರಿಸುವುದು ನಮ್ಮ ದೃಷ್ಟಿಯಿಂದ ಗಂಭೀರವಾದ ವಿಷಯವಾಗಿದೆಂದು ಮಾರ್ಶಲ ಟಿಟೋರ ಯುಗೋಸ್ಲಾವ ಕಮ್ಯೂನಿಸ್ಟ ಪಕ್ಷದ ಐದನೇ ಅಧಿವೇಶನವನ್ನು ನಿನ್ನೆ ರಾತ್ರಿ ಉದ್ಘಾಟಿಸುತ್ತ ಹೇಳಿದರು

೧೯೨೧-೨೨ರಲ್ಲಿ ಲೆನಿನರೇ ರಶ್ಯದ ಆರ್ಥಿಕ ಧೋರಣಗಳನ್ನು ಬದಲಿಸಬೇಕಾಗಿ ಬಂತು. ಅಂದ ಮೇಲೆ ಈಗ ಕೋಮಿನ ಫಾರ್ಮಿನವರು ನಮ್ಮನ್ನು ತಾಡಿಕೋರರೆಂದು ಸಾರಿ ನಮ್ಮ ವಿರುದ್ಧ ಇಂಥ ಉಗ್ರ ಪ್ರಚಾರ ಕಾರ್ಯವನ್ನು ಪ್ರಾರಂಭಿಸುವಂತೆ ನಾವು ಎಸಗಿದ ದ್ರೋಹವಾದರೂ ಏನು ಎಂದು ಮಾರ್ಶಲ ಟಿಟೋರು ಕೋಮಿನ ಫಾರ್ಮದ ಟೀಕೆಯನ್ನು ಪ್ರತಿಭಟಿಸಿದರು.

ಕುಂಬಳೆ

ಪಾನನಿರೋಧಖಾತೆಯ ಸಬ್ ಇನ್ಸ್‌ಪೆಕ್ಟರರಾದ ಮಿ| ಕೆ. ವಿ. ವರ್ಗೀಸ್ ಇವರು ಶುಕ್ರವಾರ ರಾತ್ರಿ ಕುಂಬಳೆಯಲ್ಲಿ ಕುಂಞಿಕ್ಕಣ್ಣ ಪು ಎಂಬವನಿಂದ ಎರಡು ಬಾಟ್ಲಿ ಸರಾಯಿಯನ್ನು ಹಿಡಿದು ಆ ಸಂಬಂಧ ಮುಂದಿನ ತನಿಖೆಗಾಗಿ ಇಚ್ಲಂಪಾಡಿ ಗ್ರಾಮದ ಮಡ್ವದಕುಞ್ಞಿ ಬೆಳ್ಚಾಡನ ಮನೆಯನ್ನು ಹುಡುಕಿ ಒಂದು ಬಾಟ್ಲಿ ಸರಾಯಿ ಮತ್ತು ಭಟ್ಟಿ ಇಳಿಸುವ ಸಾಮಗ್ರಿಗಳನ್ನು ಹಿಡಿದು ಅಪರಾಧಿತರನ್ನು ಕಾಸರಗೋಡು ಸಬ್ ಮೆಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ಅಪರಾಧಿತರಲ್ಲಿ ಕುಞ್ಞಿಕ್ಕಣ್ಣಪುಗೆ ರೂ. ೭೫ ದಂಡನೆಯನ್ನೂ ಕುಂಞಿಬೆಳ್ಚಾಡನಿಗೆ ೫ ತಿಂಗಳ ಕಠಿಣ ಸಜೆಯನ್ನೂ ಮೆಜಿಸ್ಟ್ರೇಟರು ವಿಧಿಸಿರುವುದಾಗಿ ತಿಳಿದುಬರುತ್ತದೆ.

ಶ್ವಾಸನಾಳ ತೊಂದರೆಗಳಿಗೆ

ಉಕ್ಕುವ ಕೆಮ್ಮು, ಶ್ವಾಸತೊಂದರೆ ಇನಕ್ಕೆ

ನಿಮಗೆ ಪೆಪ್ಸ್ ಅವಶ್ಯ

ರುಚಿಕರವಾದ ಪೆಪ್ಸ್ ಮಾತ್ರೆಗಳು ಶ್ವಾಸಕೋಶ ಮತ್ತು ನಾಳಗಳ ಬಾಧೆ ಶಮನಿಸಲು ಅತ್ಯುತ್ತಮ, ಪೆಪ್ಸನ್ನು ನೀವು ಹೀರುವಾಗ ಅದರೊಳಗಿನ ಅಮೂಲ್ಯ ವಿಷಹಾರಿ ಸತ್ವಗಳು ನಿಮ್ಮ ಶ್ವಾಸದೊಂದಿಗೆ ನೇರವಾಗಿ ಬಾಧೆಗೊಳಗಾದ ಬಾಗಗಳಿಗೆಗೊಯ್ಯಲ್ಪಡುತ್ತವೆ ಪೆಪ್ಸ್ ಕೆಮ್ಮನ್ನು ನಿಲ್ಲಿಸುತ್ತದೆ, ಗಂಟಲನ್ನು ವಿಷ ರಹಿತವಾಗಿಸುತ್ತದೆ ಕಫವನ್ನು, ನೆಗಡಿ, ಇನ್‌ಫ್ಲುಯೆನ್ಸ ಮೊದಲಾದ ರೋಗಾಣುಗಳನ್ನು ನಾಶಮಾಡುತ್ತದೆ



ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶ ವ್ಯವಸ್ಥೆಯ ಪ್ರತಿಯೊಂದ ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ

ವಿಷಹಾರಿ ಪೆಪ್ಸನ್ನೇ ಉಪಯೋಗಿಸಿರಿ

PEPS

ಗಂಟಲು ಮತ್ತು ಎದೆ ಗುಳಿಗೆಗಳು

ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ ಅತ್ಯಂತ ಪರಿಣಾಮಕಾರಿ ಔಷಧಿ

ಪೆಸೆಂಜರರ ಅವಗಾಹನೆ ಬಗ್ಗೆ

G. O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 26—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ, ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ವೋಂಟ್ ಮೆನೇಜರ್ಸ್,

ಮಂಗಳೂರು. }
23-12-1947. } ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಲೂರು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B.
General Manager.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಧಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business Proves the Popularity

The Bombay Life Assurance Co., Ltd.

(ESTD. 1908)

Company's New Business in 1946 - 3.28 Crores.

Our Chief Agency New Business in 1946 { **About 54 lakhs.**

Our experience of 37 years available to you for arranging Insurance Investment.
It therefore pays you to consult us to insure or to represent.

Kochikar Brothers, Limited.

(ESTD. 1910)

Chief Agents for South India
Bombay Life Building,
Central Office: Udipi.
Branches at:—
MANGALORE, CALICUT, TRIVANDRUM, MADURA, MADRAS, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 6—8—1948 [ಸಂಚಿಕೆ 31]

ಆಧುನಿಕ ಹಟಯೋಗಿ - ಆಚಾರ್ಯ ಭನ್ಸಾಲಿ

ಮಾನವೋದ್ಧಾರಕ್ಕಾಗಿ ಮೀಸಲಾಗಿಟ್ಟ ಶರೀರ

ಮಹಾತ್ಮರಿಗೂ ಮಿಗಿಲೆನಿಸಿದ ಮಹಾವ್ಯಕ್ತಿ

ಸೇವಾಗ್ರಾಮವನ್ನು ಸಂದರ್ಶಿಸಿ ಬಂದ ಓರ್ವ ರಚನಾತ್ಮಕ ಕಾರ್ಯಕರ್ತರು ಪ್ರೊಫೆಸರ್ ಭನ್ಸಾಲಿಯವರ ಕುರಿತು ಹೀಗೆ ಬರೆಯುತ್ತಾರೆ

ಸೇವಾಗ್ರಾಮವು ಇನ್ನೂ ಶಿವ ... ಆಗಿತ್ತು. ಆಧುನಿಕ ಭಾರತ ಜನಾಂಗ ರಚಕನನ್ನೂ ಅವನ ಸೂರ್ಯ ಮಂಡಲದ ಸುತ್ತ ಚಲಿಸುವ ದೇಶೋದ್ಧಾರದ ಕಾರ್ಯವ್ಯೂಹವನ್ನು ಕಣ್ಣಾರೆ ಕಾಣಬೇಕೆಂದು ನವ ಕರ್ಮಕ್ಷೇತ್ರಕ್ಕೆ ಯಾತ್ರೆ ಹೋಗಿದ್ದೆವು. ಅಲ್ಲಿನ ಆರಾಧ್ಯ ಮಹಾತ್ಮನನ್ನೂ ಅವನು ಸಿದ್ಧಗೊಳಿಸಿದ ಅಸಾಮಾನ್ಯ ಕಾರ್ಯಸಾಧನೆಯ ಅನುಯಾಯಿಗಣವನ್ನೂ ಸಂದರ್ಶಿಸಿದೆವು ಮತ್ತೆ ಭಕ್ತಿಪೂರ್ವಕವಾಗಿ ನಾವು ಸೇವಾಗ್ರಾಮದ ಗುಡಿಸಲು ಮಂದಿರಗಳ ಒಂದೊಂದಾಗಿ ಈಕ್ಷಿಸುತ್ತಲಿದ್ದೆವು

... ಮಹದೇವನ ... ಸಿವಿಲ್ ... ಸಹಳತೆ, ನಿರಾಡಂಬರದ ಸ್ವಚ್ಛತೆ ಸಾಮರಸ್ಯದಿಂದ ತುಂಬಿದವೆಂದು ... ಧ್ಯೆಯೋನ್ನತಿಯ ಪ್ರತೀಕವಾದ ಕೈಲಾಸಶಾಂತಿಯು ಅಲ್ಲಿ ಬೀಡುಮಾಡಿ ಕೊಂಡಿದೆ

ಇದು ಆಶಾದೇವಿಯ ನಿಲಯ. ವ್ಯಕ್ತಿ ಶಿಕ್ಷಣದ ಶಾರದೆಯ ಮಂದಿರವದು. ಅಜ್ಞಾನಾಂಧಕಾರ ಮುಸುಕಿದ ಡಂಭದ ಮನಸ್ಸಿಗೆ ಅಲ್ಲಿಂದ ಹೊರಡುವ ಸಂಗೀತ ಪ್ರಭೆಯು ಆಹ್ಲಾದದ ಮಾರ್ಗದರ್ಶನವನ್ನು ಮಾಡುತಿತ್ತು. ಅಲ್ಲೇ ಭರತನ್ ಕುಮಾರಪ್ಪನವರು ಉಚ್ಛಧ್ವನಿಯ ಪಾದೂಕಾ ಪೂಜೆಯಲ್ಲಿ ಅಹೋರಾತ್ರಿಯೆಂಬಂತೆ ದೀಕ್ಷಾಬದ್ಧರಾಗಿದ್ದರು

ಮತ್ತೆ ಇದೇನು? ಮೊಣಕಾಲು ತನಕ ಕೊಳಕುಬಟ್ಟೆಯುಟ್ಟ ವ್ಯಕ್ತಿ ಆ ಆಲಯದ ಹೊರನಿಂತು ಭಾರವಾದ ಹೆಜ್ಜೆಗಳಿಂದ ಬೆನ್ನುಬಗ್ಗಿದ ತನ್ನ ಶರೀರವನ್ನು ಚಲಿಸುತ್ತ ಅದರ ಜಗಲಿಯನ್ನು ಹತ್ತಿದ. ನಾವು ಕೌತುಕದಿಂದಲೂ ನೆಟ್ಟ ದೃಷ್ಟಿಯಿಂದಲೂ ಅವನನ್ನು ನೋಡುತಿದ್ದೆವಾದರೂ ತನ್ನ ಸುತ್ತಲಿನ ವ್ಯವಹಾರಗಳ ಕಡೆ ಸಂಪೂರ್ಣ ಅನಾಸಕ್ತನಾಗಿದ್ದು ಆ ವ್ಯಕ್ತಿ ರಾಮಕೃಷ್ಣ ಪರಮಹಂಸರಂತೆ ಮುಖವುಳ್ಳವರಾಗಿದ್ದು ಜಗಲಿಯ ಒಂದು ಕಡೆ ಇರುವ ದೊಡ್ಡದೊಂದು ಬೀಸುಕಲ್ಲಿನೆದುರು ಕೂತು ಮಂದಗತಿಯಿಂದದನ್ನು ಚಲಾಯಿಸ ಹತ್ತಿತು ಕುತೂಹಲ ಹೆಚ್ಚಿದವರಾದ ನಾವು ಜೀವಾವಧಿ ಕಠಿಣ ಶಿಕ್ಷೆಗೊಳಗಾದ ಕೈದಿಗಳನ್ನು ಕಾದಂಬರಿಗಳಲ್ಲಿ ವರ್ಣಿಸಿದುದನ್ನೂ, ಆಫ್ರಿಕದ ಅರಣ್ಯಗಳಲ್ಲಿ ಮಾನವ ಅಸ್ತಿತ್ವವನ್ನು ಉಪೇಕ್ಷಿಸಿ ಅಲೆದಾಡುವ ರಾಜಗಾಂಭೀರ್ಯದ ಸಿಂಹಗಳ ವರ್ಣನೆಯನ್ನೂ ನೆನಪಿಗೆ ತಂದುಕೊಂಡೆವು ಮತ್ತು ಆ ವ್ಯಕ್ತಿ ಯಾರೆಂದು ವಿಚಾರಿಸಬೇಕೆಂದು ಇಚ್ಛೆಪಟ್ಟೆವಾದರೂ ಕಾರ್ಯಮಗ್ನರಾದ ಅಲ್ಲಿನ ಪ್ರತಿಯೊಬ್ಬರನ್ನೂ ಕಂಡು ಆ ಸಾಹಸಕ್ಕೆ ಕೈಹಾಕದಾದೆವು ಕೊನೆಗೆ ಹೇಗೂ ಹತ್ತಿರದ ಒಬ್ಬರು ... ಎತ್ತಿನ್ನೋ ... ಯಾರೆಂದು ಕೇಳಿದೆವು. ಅವರೇ ಭನ್ಸಾಲಿಬಾಬುಗಳು ಎಂದರು. ಆ ನಂತರದೊಂದು ಸಂದರ್ಭದಲ್ಲಿ ಓರ್ವ ಸಹಾಶ್ರಮವಾಸಿ ಸಹೋದ್ಯೋಗಿ ... ದ ಆಚಾರ್ಯ ಭನ್ಸಾಲಿಯವರ ಸವಿಸ್ತಾರ ಜೀವನ ಇತಿಹಾಸ ಸಿಕ್ಕಿತು.

ಕಾಲಿಂಗುಷ್ಟದ ಮೇಲೆ ನಿಂತ ಕೈಲಾಸದಿಂದ ಗಂಗೆಯನ್ನು ಇಹಲೋಕಕ್ಕಿಳಿದು ಬರುವಂತೆ ಮಾಡಿದ ಭಗೀರಥನ ನಾಡಿನಲ್ಲಿ ಪ್ರೊ. ಭನ್ಸಾಲಿಯವರಂಥವರು ಅಸಾಮಾನ್ಯರಲ್ಲವೆಂದು ಹೇಳಬಹುದು. ಆತ್ಮವು ಅಮರವೆಂದು ಸಾರುವ ಭಾರತೀಯ ತತ್ವಜ್ಞಾನವನ್ನು ಆಳವಾಗಿ ಹೀರಿದ ಈ ಮಹಾಪುರುಷ ದೇಹವನ್ನು ಮಾನವೋದ್ಧಾರ ಸಾಧನದ ಪ್ರಯೋಗಾಲಯವಾಗಿ ಮಾಡಿಕೊಂಡಿದ್ದಾನೆ. ಆಹಾರವಿಲ್ಲದೆ ಶರೀರ ಅದೆಷ್ಟು ದಿನ ಬಾಳಬಹುದು? ಒಣ ನೀರು ಕುಡಿದು ಅದೆಷ್ಟು ಕಾಲ ಚೈತನ್ಯವಿಟ್ಟುಕೊಳ್ಳಬಹುದು? ... ತಿಂದರೆ ... ಆಗಿಂದ ಶಕ್ತಿ ... ದಿನಗಟ್ಟಲೆ ... ಬಿಟ್ಟು ಶರೀರವನ್ನು ಕ್ರಮಕ್ಕೊಳಪಡಿಸಿ ... ದಿಲ್ಲವೆ? ... ಅವರ ಪ್ರಯೋಗ ಸಿದ್ಧಾಂತಗಳು. ಇವುಗಳಲ್ಲಿ ನಂಬಲಸಾಧ್ಯವಾದ ಯಶಸ್ಸು ಅವರಿಗ ದೊರಕಿದೆ

ಗಾಂಧೀ ಸಂಪರ್ಕ

೧೯೨೦ರಲ್ಲಿ ಗಾಂಧೀ ಚಳವಳಿ ಗಾಗಿ ಶಾಲೆ ಅನವರತ ಸೆಳೆಯಲ್ಪಟ್ಟ ಅನೇಕಾನೇಕ ವಿದ್ಯಾರ್ಥಿಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಎಂ. ಎ. ಪದವಿಗೆ ಸಿದ್ಧತೆ ಮಾಡುತಿದ್ದ ಭನ್ಸಾಲಿಗಳೂ ಒಬ್ಬರು. ಎಲ್ಲವನ್ನು ಬಿಟ್ಟು ಗಾಂಧೀಜಿಯವರ ಸನ್ನಿಹಿತಿ ಇವರು ಸಾಬರಮತಿ ಆಶ್ರಮವನ್ನು ಸೇರಿದರು.

ಭನ್ಸಾಲಿಯವರು ಹುಟ್ಟಿ ಬೆಳೆದದ್ದು ಶ್ರೀಮಂತ ವಾತಾವರಣದಲ್ಲಿ. ಐರೋಪ್ಯ ಶಿಷ್ಟ ಸಾಂಪ್ರದಾಯಗಳನ್ನೇ ಅವರ ಹೆತ್ತವರು ಕುಟುಂಬಸ್ಥರು, ಸ್ನೇಹಿತರೂ ಅನುಸರಿಸುತಿದ್ದರು. ಹೀಗಾಗಿ ಆಶ್ರಮದ ನೆಲದಲ್ಲಿ ಕೂತುಣ್ಣುವ ಸಪ್ಪೆಗೆ ಊಟ ಅವರಿಗ ರುಚಿಸಲಿಲ್ಲ. ಉಟ್ಟಬಟ್ಟೆ, ಊಟದ ತಟ್ಟೆಗಳನ್ನು ತೊಳೆಯುವುದಂತೂ ಅವರಿಗೆ ತೀರ ವಿಪರೀತವೆನಿಸಿತ್ತು. ಕಸಗುಡಿಸುವುದು, ಪಾಯಖಾನೆ ತೊಳೆಯುವುದಂತೂ ಕೌತುಕದ ಸಂಗತಿಗಳೆ. ಸ್ವೇಚ್ಛಾಚಾರದ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದು ಸ್ವಯಂಶಿಸ್ತಿನ ಕಾಠಿಣ್ಯಕ್ಕೆಂದೂ ಒಗ್ಗದ ಇವರಿಗೆ ಗಾಂಧಿ ಆಶ್ರಮಜೀವನವು ಆಗ ಒಗ್ಗದಿದ್ದರೂ ಕ್ರಮೇಣ ಇವರಲ್ಲಿ ರೂಪುಗೊಂಡ ಮನೋನಿರ್ಧಾರದ ಪ್ರವೃತ್ತಿಗಳು ಕೊನೆಗೆ ಈ ಶಿಸ್ತುಗಳನ್ನು ಅಲ್ಪವೆಂದು ಪರಿಗಣಿಸಿದುವು

ಒಂದು ಕಾಲದಲ್ಲಿರವರನ್ನು ಗಾಂಧಿಜಿಯವರು "ಯಂಗ್ ಇಂಡಿಯಾ" ಪತ್ರಿಕೆಯ ಸಂಪಾದಕರನ್ನಾಗಿ ಮಾಡಿದರು. ಬಿಡುವಿನ ಸಮಯದಲ್ಲಿ ಆಶ್ರಮವಾಸಿಗಳಿಗೆ ಪಾಠಹೇಳುವ ಕೆಲಸಕ್ಕೆ ಹಚ್ಚಿದರು. ಆಲಸ್ಯವ್ಯಕ್ತಿಯನ್ನು ಶ್ರಮಪ್ರಿಯನನ್ನಾಗಿ ಮಾಡಲೆತ್ನಿಸಿದ ಉದ್ದೇಶ ನಿರೀಕ್ಷೆಗಿಂತ ಹೆಚ್ಚು ಮುಂದುವರಿಯಿತು. ೧೯೨೧ರಲ್ಲಿ ಇವರೇ ಕೆಲ ಕಾಲ "ಯಂಗ್ ಇಂಡಿಯಾ" ಸಂಪಾದಕರಿದ್ದುದರಿಂದ ಸರಕಾರದ ಕಣ್ಣು ಚುಚ್ಚುವ ಆ ಪತ್ರಿಕೆಯ ತೀಕ್ಷ್ಣ ಲೇಖನಗಳ ಅಪರಾಧಕ್ಕೆ ಭನ್ಸಾಲಿಯವರು ಜೈಲು ಸೇರಬೇಕಾಯಿತು. ಒಂದು ದಿನ ಅಕಸ್ಮಾ

(೨ನೇ ಪುಟ ನೋಡಿ)

THE
UNITED INDIA LIFE ASSURANCE
ESTD 1906] CO., LTD. [H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVERNMENT OF MADRAS.
For Particulars apply to —
INSPECTORATE OFFICE
K. S. Rao Road, Mangalore.

ಬಾಯಿಯಾಕಳಿಸುತ್ತ ಆರೋಗ್ಯವಂತರಾಗಿರಿ

ಪಾಶ್ಚಾತ್ಯ ಗೃಹಸ್ಥನ ಯೋಗಾಭ್ಯಾಸ ಅನುಭವ

ವಿಶ್ರಾಂತಿ ಪಡೆಯುವ ಪ್ರಾಕೃತಿಕ ವಿಧಾನಗಳು

ಬಹಳ ಕಳವಳಾಸ್ಪದವಾದ ಇಂದಿನ ದಿನಗಳಲ್ಲಿ ಯೋಗ್ಯ ವಿಶ್ರಾಂತಿಪಡೆಯುವುದು ಹೇಗೆಂಬುದೇ ಕಠಿಣ ಸಮಸ್ಯೆಯಾಗಿದೆ. ನಾಗರಿಕರಾದ ಶ್ರೀಯುತ ರಾಮರು ಮತ್ತು ಅವರಿಗಿಂತ ಹೆಚ್ಚಾಗಿ ಶ್ರೀಮತಿ ಸೀತಮ್ಮನವರು—ತುಂಬಾ ದಣುಗೊಂಡಿರುವರು. ಒಂದಲ್ಲವಾದರೆ ಇನ್ನೊಂದು ವಿಷಯ ಕಾಳಜಿ ಇದ್ದೇ ಇರುವುದು. ಬೆಳಗ್ಗೆ ದುಡಿಯುವ, ಮನೆಕೆಲಸದ ಶ್ರಮ, ರಾತ್ರೆ ಮರುದಿವಸದ ಚಿಂತೆಯಿಂದ ನಿದ್ರೆಯಿಲ್ಲದಿರುವಿಕೆ ಕೆಲವರು ಇದರಿಂದ ತಾತ್ಕಾಲಿಕ ವಿಮೋಚನೆ ಪಡೆಯಲು ಕೆಲವೊಂದು ಮಾದಕಪದಾರ್ಥಗಳನ್ನೊ ಮದ್ದಿನ ಗುಳಿಗೆಗಳನ್ನೊ ತಿಂದು ಈ ತಾಪತ್ರಯದಿಂದ ಮರೆಯಾಗಲು ಪ್ರಯತ್ನಿಸುತ್ತಾರೆ ಆದರೆ ಇದಕ್ಕೆ ಪ್ರಾಕೃತಿಕವಾದ ಬಾಕಿ ವಿಷಯಗಳಿವೆಯೆಂದು ಪ್ರಾಣಿವರ್ಗದತ್ತ ನೋಡಿದರೆ ನಮಗೆ ತಿಳಿಯುವುದು

ಒಂದು ಬೆಕ್ಕು ಇಲ್ಲವೆ ನಾಯಿ ಆಯಾಸಗೊಂಡಾಗ ಇಲ್ಲವೆ ದೀರ್ಘ ನಿದ್ರೆಯಿಂದೆಚ್ಚೆತ್ತಾಗ ಮುಂದಿನ ಚಟುವಟಿಕೆಗೆ ದೇಹವನ್ನು ಅಣಿಮಾಡಿಕೊಳ್ಳುವ ವಿಧಾನ ಹೇಗಿದೆ? ಅವು ಕೈ ಕಾಲುಗಳನ್ನು ಸಾಧ್ಯವಿದ್ದಷ್ಟು ಉದ್ದಕ್ಕೆ ಚಾಚಿ ದೇಹದ ಮಾಂಸಖಂಡಗಳನ್ನೆಲ್ಲ ಒಮ್ಮೆ ಬಿಗಿಮಾಡಿ ಮತ್ತೆ ಸಡಿಲಿಸಿಕೊಳ್ಳುತ್ತವೆ ಅದೇ ಸಮಯ ಬಾಯಿಯನ್ನವು ವಿಶಾಲ ಮಾಡುತ್ತ ನೀಳವಾದ ಶ್ವಾಸವನ್ನು ತೆಗೆದುಕೊಂಡು ಸ್ವಲ್ಪ ಸಮಯದ ನಂತರ ಬಿಟ್ಟುಬಿಡುತ್ತವೆ. ಇದರಿಂದ ನಿಚೇತನವಾಗಿದ್ದ ಅದರ ಅಂಗಾಂಗಗಳು ಪುನಃ ಹುರುಪುಗೊಂಡು ಕಾರ್ಯಮಗ್ನವಾಗುತ್ತವೆ.

ಭಾರತದ ಪ್ರಾಚೀನ ಜನರು ಬಹುಶಃ ಪ್ರಾಣಿಗಳಿಂದ ಪ್ರಾಣಾಯಾಮ ಮತ್ತು ಯೋಗಾಭ್ಯಾಸದ ವಿಷಯಗಳನ್ನು ಅರಿಸಿಕೊಂಡಿರಬಹುದು. ಕಾರಣ ಯೋಗಾಭ್ಯಾಸದಲ್ಲಿ ಶರೀರದ ಎಲ್ಲಾ ಅವಯವಗಳನ್ನು ಸಾಧ್ಯವಿದ್ದಷ್ಟು ನೀಡುವಿಕೆಗೊಳಮಾಡುವುದಿದೆ ಇದರಿಂದ ಶರೀರವು ತಂಗಾಗಿ ಚುರುಕಾಗುವುದು ತತ್ಪರಿಣಾಮವಾಗಿ ಮನಸ್ಸು ಕೂಡ ಸುಪ್ರಸನ್ನವಾಗುವುದು

ಆಯಾಸ ಮತ್ತು ವಿಶ್ರಾಂತಿ

ಆಯಾಸವು ಒಂದೊ ಸುಖಕರವಾಗಿರುವುದು, ಇಲ್ಲವೆ ಅತ್ಯಂತ ಸಂಕಷ್ಟದಾಯಕವಾಗುವುದು ರಜಾ ಸಮಯದಲ್ಲಿ ಪ್ರಕೃತಿ ನೋಟ ನೋಡಲು ಸಂಚಾರಕ್ಕೆ ಹೋಗಿ ಬಂದರೆ ಅದೆಷ್ಟು ಉಲ್ಲಾಸಕರವಾದ ದಣುವಾಗುವುದು! ಆಗ ತುಸು ವಿಶ್ರಮಿಸಿಕೊಳ್ಳುವುದೆಂದರೆ ಪರಮಾನಂದವೆನಿಸುವುದು ಇನ್ನೊಂದು ತರದ ಆಯಾಸವಿದೆ ಅದು ಜೀವನ ಹೋರಾಟದ ಕಳವಳದಿಂದಲೂ ಅಭಿರುಚಿಗೆ ಸಲ್ಲದ ಕಾರ್ಯಶ್ರಮದಿಂದಲೂ ಉಂಟಾಗುವುದು. ದೀರ್ಘ ಯೋಚನೆಯಿಂದ ಬೇಸರವಾಗಿಯೂ ಒಂದು ತರದ ದುಃಖಕರ ದಣುವುಂಟಾಗುತ್ತದೆ.

ನಗಾಡಲು ಕಲಿಯಬೇಕು

ನನಗೊಬ್ಬ ಭಾರತೀಯ ಯೋಗಿಯ ಸಂಪರ್ಕ ಭಾಗ್ಯವು ಲಭಿಸಿತ್ತು. ಅವರು ತನ್ನ ಬಳಿ ಬಂದವರಿಗೆ "ತುಂಬಾ ನಗಾಡಿರಿ" ಎಂದು ಹೇಳುತಿದ್ದರು. ನಗುವುದೂ ಒಂದು ತರದ ವಿಶ್ರಾಂತಿಪಡೆಯುವ ವಿಧಾನ. ಮಾತ್ರವಲ್ಲ ಆಯಾಸವಾದ ಮೇಲೇ ವಿಶ್ರಾಂತಿಪಡೆಯಲು ಪ್ರಯತ್ನಿಸಬೇಕಾಗಿಲ್ಲ. ದಣುವು ನಮ್ಮನ್ನಾವರಿಸುವ ಮೊದಲೇ ನಾವು ಶರೀರವನ್ನು ಬಿಗಿಯಾಗಿ ಚಾಚಿ ಬಾಯಿಯಾಕಳಿಸುತ್ತ ಶ್ವಾಸವನ್ನು ಒಂದು ಸಲ ಆಳವಾಗಿ ಒಳತೆಗೆದುಕೊಂಡು ಮತ್ತೊಮ್ಮೆ ಅದನ್ನು ಮೆಲ್ಲನೆ ಹೊರಬಿಡುವುದರೊಂದಿಗೆ, ಅದೇ ಸಮಯ ಮತ್ತು ಅದೇ ಕ್ರಿಯೆಗೆ ತಕ್ಕದಾಗಿ ಬಿಗಿಮಾಡಿದ ಶರೀರವನ್ನು ಸಡಿಲುಬಿಡಬೇಕು ಈ ತರದ ವ್ಯಾಯಾಮವನ್ನು ಮಾಡುತ್ತಲೇ ಇದ್ದರೆ ಶರೀರವು ಸಚೇತನವಾಗುವುದು

ಒಂದು ದೃಷ್ಟಿಯಿಂದ ಆಯಾಸವುಂಟಾಗದಿದ್ದರೆ ವಿರಾಮವೂ ಬೇಕೆಂದೆನಿಸುವದಿಲ್ಲ ಆದುದರಿಂದ ವಿರಾಮದ ವಿಧಾನ ಆಯಾಸದ ಪ್ರಮಾಣವನ್ನನುಸರಿಸಿದೆ ಅದೇ ರೀತಿ ನಮಗಾಗುವ ದಣುವೂ ಸಂಪೂರ್ಣವಾಗಿರಬೇಕು ಆಗ ಮಾತ್ರ ಸಂಪೂರ್ಣ ವಿರಾಮವನ್ನು ಪಡೆಯಲು ಅನಂದವಾಗುತ್ತದೆ

ಪ್ರಕೃತಿಯ ಎಚ್ಚರಿಕೆ

ಆಯಾಸದ ಪ್ರಮಾಣವು ಅದೆಷ್ಟೇ ಇರಲಿ, ಶರೀರವನ್ನು ಬಿಗಿಯಾಗಿ ನೀಡಿಕೊಂಡು ಮತ್ತ ಸಡಿಲಿಸುವುದರಿಂದ ಸುಖಕರವಾದ ಪರಿಹಾರವು ಸಿಗುತ್ತದೆ ಪ್ರಕೃತಿಯಾದರೊ ನಮಗೆ ಸಕಾಲದಲ್ಲಿ ಎಚ್ಚರಿಕೆಯನ್ನು ಕೊಡುತ್ತದೆ ಶರೀರವು ತಪ್ಪುದಾರಿಯಲ್ಲಿ ಆಯಾಸಗೊಳ್ಳುತ್ತಿರುವಾಗ ಪ್ರಕೃತಿಯು ನಮಗೆ "ಆಕಳಿಸಪ್ಪಾ, ಆಕಳಿಸು, ನಿನ್ನ ಶ್ವಾಸಕೋಶಕ್ಕೆ ಆಮ್ಲಜನಕವು ಕಡಿಮೆಯಾಗಿದೆ ನಿನ್ನ ಮಾಂಸಖಂಡಗಳಲ್ಲಿ ರಕ್ತಚಲನವು ಕಡಿಮೆಯಾಗಿದೆ ಒಂದೇ ದೃಶ್ಯವನ್ನು ನೋಡುತ್ತ ನಿನ್ನ ಮನಸ್ಸು ಬೇಸರಗೊಂಡಿದೆ ನಿನ್ನ ನೋಟವನ್ನು ಬದಲಿಸು" ಎಂದು ಪಿಸುಗುಟ್ಟುತ್ತದೆ

ಹೀಗೆ ಆಕಳಿಸುವುದರಿಂದ ನಮ್ಮ ಶರೀರಕ್ಕ ಅವಶ್ಯವಿರುವ ಅತೀ ಹೆಚ್ಚಿನ ಆಮ್ಲಜನಕವನ್ನು ಸರಬರಾಯಿ ಮಾಡಿಕೊಂಡಂತಾಗುವುದು ಶರೀರವನ್ನು ಚೆನ್ನಾಗಿ ಸಡಿಲಿಸುವುದರಿಂದ ರಕ್ತಚಲನಯನ್ನು ವೇಗಗೊಳಿಸಿದಂತಾಗುವುದು. ಹೊಸ ಹೊಸ ದೃಶ್ಯಗಳನ್ನು ನೋಡುವುದರಿಂದ ಕಣ್ಣಿಗೂ ಆ ಮೂಲಕ ಮನಸ್ಸಿಗೂ ಹೊಸ ಹುರುಪುನ್ನು ಒದಗಿಸಿಕೊಟ್ಟಂತಾಗುವುದು.

ವಿರಾಮದ ವಿಧಾನ

ಈ ಸಂಬಂಧವಾದ ನಿರ್ದಿಷ್ಟ ಕ್ರಿಯೆಗಳಾವುವು? ಮೊದಲು ನೀವು ದೀರ್ಘ ಶ್ವಾಸವನ್ನು ತಗೆದುಕೊಳ್ಳಿರಿ ಅದನ್ನು ತುಸು ಸಮಯದ ತನಕ ಬಿಡಬಾರದು. ಆ ಮೇಲೆ ಕೈ ಕಾಲುಗಳನ್ನು ಹುರಿಮಾಡುವ ರೀತಿಯಲ್ಲಿ ಅಚೆ ಈಚೆ ತಿರುಗಿಸಿ ನೀಡಿಕೊಳ್ಳಬೇಕು ಬಲವಾಗಿ ಚಾಚಿಕೊಳ್ಳುವುದೇ ಮುಖ್ಯ ಉದ್ದೇಶ ಕೊನೆಗೆ ಶ್ವಾಸವನ್ನು ಮೆಲ್ಲನೆ ಹೊರಬಿಡುತ್ತಿರುವಾಗಲೇ ಬಿಗಿಗೊಳಿಸಿದ ಅಂಗಾಂಗಗಳನ್ನು ಸಡಿಲುಬಿಡಬೇಕು. ಇದು ಶುದ್ಧ ಯೋಗಾಭ್ಯಾಸವಲ್ಲದಿದ್ದರೂ ಆ ತರದ ವ್ಯಾಯಾಮದಿಂದುಂಟಾಗುವ ಪರಿಹಾರವೂ ಇದರಲ್ಲಿ ಸಿಗುವುದು. ಇದು ಜನಸಾಮಾನ್ಯರಿಗೆ ಸುಲಭವಾಗಿ ಅನುಸರಿಸಲು ಸಾಧ್ಯವಾಗುವ ವಿಧಾನ.

ಸಂಕ್ಷಿಪ್ತ ಸುದ್ದಿ ಸಂಗ್ರಹ

ಟಿಬೆಟಿನಲ್ಲಿ ಗ್ರಾಮಫೋನ್ ಹುಚ್ಚು

ವಿದೇಶಿಯರಿಗೆ ಪ್ರವೇಶ ನಿಷೇಧವಿರುವ ಟಿಬೆಟ್ಟಿನ ಬೌದ್ಧಸನ್ಯಾಸಿಗಳಿಗೆ ಈಚೆಗೆ ಫೊನೊಗ್ರಾಫುಗಳ ಅಭಿರುಚಿ ಹಿಡಿದಿದೆ. ರಾಜಧಾನಿ ಲಾಸಾದಲ್ಲಿ ವಿದ್ಯುಚ್ಛಕ್ತಿ ಸರಬರಾಯಿಯಿರುವುದರಿಂದ ಈಗಲ್ಲಿ 24 ರೇಡಿಯೊಗಳೂ ತರಿಸಲ್ಪಟ್ಟಿವೆ ಲಾಮಾಗಳಿಗೆ ಗಾಳಿವರ್ತಮಾನ ಕೇಳುವ ಕುತೂಹಲ ಹುಟ್ಟಿದೆಯಂತೆ

ಮೊಸಳೆ ಬೇಟೆಯ ಉದ್ಯೋಗ

ಆಸ್ಟ್ರೇಲಿಯದ ಓರ್ವ ನಿವೃತ್ತ ಸೈನಿಕನು ತನಗೆ ಮೊಸಳೆ ಹಿಡಿಯುವುದನ್ನು ಕಲಿಯಲು ಧನಸಹಾಯ ಮಾಡಬೇಕೆಂದು ಅಲ್ಲಿನ ಸೈನಿಕ ಪರಿಹಾರ ಖಾತೆಗೆ ಅರ್ಜಿಮಾಡಿದನು ಇಂತಹ ಅಪೇಕ್ಷೆ ಒಬ್ಬನಿಂದಲೇ ಬಂದುದರಿಂದ ಸರಕಾರದವರು ಅವನಿಗೆ ಓರ್ವ ತಜ್ಞನಿಂದ ತರಬೇತಿ ಕೊಡಿಸಿ ಒಂದು ಮೋಟಾರು ದೋಣಿಯನ್ನು ಜೋಡಿಸಿ ಕೊಟ್ಟರು ಈಗವನು ತಿಂಗಳಿಗೆ ಸುಮಾರು ಸಾವಿರ ಒಂದುವರೆ ಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಾನೆ ಮೊಸಳೆಯೊಂದಕ್ಕೆ 200 300 ರೂಪಾಯಿ ಬೆಲೆಯಿದೆ ಅದರ ಚರ್ಮಕ್ಕೆ ಮೊಳಕ್ಕೆ 12 ರಷ್ಟಿದೆ

ಜೋತಿಷ್ಯಗಳ ಸಂಘ

ಪ್ಯಾರಿಸ್ಸಿನಲ್ಲಿ ಮಾಟ ಹೇಳುವವರ ಸಂಖ್ಯೆ ಹೆಚ್ಚಿದೆ ಹೆಚ್ಚಿನವರದು ಕೇವಲ ಮೋಸವೇ ಅದಕ್ಕಾಗಿ ಅಲ್ಲಿನ ಕಾಲಜ್ಞಾನಿಗಳು ಜ್ಯೋತಿಷಿಗಳು ಮತ್ತು ಶಾಸ್ತ್ರಲಕ್ಷಣತಜ್ಞರು ತಮ್ಮದೇ ಆದೊಂದು ಸಂಘ ಕಲ್ಪಿಸಿ ಒಂದು ಸಂಪೂರ್ಣ ಜಾತಕ ಸ್ಪುಟಗೊಳಿಸಿ ಜೀವನ ಭವಿಷ್ಯ ಹೇಳುವುದಕೆ ರೂಪಾಯಿ 50 ಎಂದು ನಿಷ್ಕರ್ಷಿಸಿರುವರು.

ನರವಾನರ ಯುದ್ಧ

ದಕ್ಷಿಣ ಆಫ್ರಿಕದಲ್ಲಿ ಬಿಳಿಯರು ಅಲ್ಲಿ ಕಪ್ಪುಜನಗಳೊಡನೆ ಹೋರಾಟ ನಡೆಸುವುದರೊಡನೆ ಮಂಗಗಳೊಡನೆಯೂ ಜಗಳಾಡುವ ಪ್ರಸಂಗ ಒದಗಿದೆ ... ದಿಂದ ಸಂಕಟಪಡುವವರು. ಅಲ್ಲಿನ ... ಎಂಬ ... ಮಂಗಗಳ ... ರಿಂದೊಂದು ... ಮಂಗಗಳನ್ನು ವಶಪಡಿಸಿಕೊಂಡು ಅವುಗಳನ್ನು ಕಾವಲಿಗೆ ಒಳಪಡಿಸಿದ್ದ ಆ ಮಂಗಗಳು ಹಸಿವು ತಾಳಲಾರದೆ ... ಕುರಿಮಂದೆಗಳ ಮೇಲೆ ಬಿದ್ದು ಕುರಿಮರಿಗಳನ್ನು ಸೀಳಿ ತಿನ್ನುವದಕ್ಕಾರಂಭಿಸಿವೆ ಈಗ ಇಂತಹ ಕಪಿಗಳೊಡನೆ ಹೋರಾಟ ನಡೆಸುವ ಸಿದ್ಧತೆ ಅಲ್ಲಿಯವರು ಮಾಡುತ್ತಿದ್ದಾರೆ

(೧ನೇ ಪುಟದಿಂದ)

ತ್ತಾಗಿ ಇವರ ಬಿಡುಗಡೆಯಾದಂತೆ ಭನ್ಸಾಲಿಯವರು ಅನಿರೀಕ್ಷಿತವಾಗಿ ಬಹುಕಾಲದಿಂದ ತಾವೆಳಸಿದ್ದ ಐರೋಪ್ಯ ಪ್ರವಾಸವನ್ನು ಕೈಕೊಂಡರು. ಆದರೆ ಅಲ್ಲಿನ ಕೆಲವೇ ದೇಶಗಳನ್ನು ಸಂಚರಿಸುವುದರೊಳಗೆ ಸ್ವದೇಶದಲ್ಲಿ ಹಿರಿಯಣ್ಣನ ತೀವ್ರ ಕಾಯಿಲೆಯೆಂದು ತಿಳಿದವರಾಗಿ ಮರಳಿದರು

ಮತ್ತೆ ಸಾಬರಮತಿ ಆಶ್ರಮ ಸೇರಿದರು ಅಲ್ಲಿಂದ ಇವರನ್ನು ಗುಜರಾತ ವಿದ್ಯಾಪೀಠದ ಒಬ್ಬ ಅಧ್ಯಾಪಕರನ್ನಾಗಿ ಮಾಡಿದಾಗ ಹೇಗೂ ಆರುವರ್ಷ ಆ ಹುದ್ದೆಯಲ್ಲಿದ್ದು ಇವರು ಎಲ್ಲರನ್ನು ಕೌತುಕಗೊಳಿಸಿದರು

ಹಠಯೋಗಿ

ಇವರು ಹತ್ತು ಹನ್ನೆರಡು ದಿನಗಳ ಉಪವಾಸವನ್ನು ಸುಲಭವಾಗಿ ನಿರ್ವಹಿಸುತ್ತಾರೆ ಒಂದು ಸಲ ನಾಲ್ವತ್ತು ದಿನ ನಿರಾಹಾರ ಮಾಡಿದರು ಒಂದು ಸಲ ೫೧ ದಿನಗಳ ಉಪವಾಸಕ್ಕೆ ಕಂಕಣಬದ್ಧರಾದರು ಗಾಂಧೀಜಿಯ ಸಲಹೆಯನ್ನು ಕೇಳದೆ ಆಶ್ರಮ ಹೊರಗೆ ಈ ವ್ರತವನ್ನು ಮುಗಿಸಿದರು ಈ ಉಪವಾಸದ ಕೊನೆಯ ದಿನಗಳಲ್ಲಿ ಕಠ ... ಶಾರೀರಿಕ ಮತ್ತು ಮಾನಸಿಕ ದುಷ್ಪರಿಣಾಮಗಳು ... ಶರೀರ ಮಂದಗತಿಯುಳ್ಳದಾಯಿತು ... ಸ್ಮರಣಶಕ್ತಿ ... ಸಂಪೂರ್ಣ ... ಆಯಿತು

ಇದರ ... ತರ ಒಂದು ... ಘಟನೆ ... ಭನ್ಸಾಲಿ ... ಅಲ್ಲಿಯ ... ನಗ್ನರಾಗಿ ... ಮಾಡಿದರೂ ... ತಿನ್ನುವ ... ಅಕಸ್ಮಾತ್ತಾಗಿ ... ಸರಿಗೆ ... ಹೇಳಿದ ವ್ರತವನ್ನು ಸ... ಗೊಳಿಸಿದ್ದರೆ ಈ ಪ್ರೊ. ಭನ್ಸಾಲಿಯವರು ಅಸ್ತಿತ್ವವಾರದಲ್ಲಾದ ಅತ್ಯಾಚಾರಕ್ಕಿವರು ೬೩ ದಿವಸಗಳ ದೀರ್ಘ ಉಪವಾಸ ಮಾಡಿ ಜಗತ್ತನ್ನೇ ಆಶ್ಚರ್ಯಗೊಳಿಸಿದ್ದಾರೆ ಪ್ರತಿಯೊಂದು ಸಲವೂ ಯಶಸ್ಸು ಅವರನ್ನು ಒಲಿದಿರುವುದು ಮತ್ತೊಂದು ಗಣನೀಯದ ಸಂಗತಿ ಇಂದಾದರೂ ಅವರು ಹೈದರಾಬಾದದಲ್ಲಿ ತಮ್ಮ ಕಾರ್ಯವನ್ನು ಖಂಡಿತ ಸಾಧಿಸದಿರಲಾರರ

ಸೌಂದರ್ಯ ಸಾಧನ
ಪ್ರತಿ ಸಲ ಕುಟಿಕೂರಾದಿಂದ
ತ್ರಿಕ್ಕಿ ತೊಳೆದಾಗ
ಈ ಸೌಗಂಧ ಸಾಬೂನಿನಲ್ಲಿ ಔಷಧೀಯ ಮತ್ತು ಶೃಂಗಾರ ಮೌಲ್ಯವಿದೆ ಚರ್ಮವನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಹೊಸ ಕಾಂತಿ ಕೊಟ್ಟು ಎಲ್ಲಾ ಅದರ ಅವಗುಣಗಳನ್ನು ಹೋಗಲಾಡಿಸುತದೆ



555
ಕುಟಿಕೂರಾ ಸಾಬೂನು
CUTICURA SOAP

ಚಿಕಾಗೊ ನಗರದ ಆರೋಗ್ಯ ಖಾತೆಯ ಅಮೋಘ ಆದರ್ಶ

ಎಲ್ಲಾ ನಗರ ಸಭೆಗಳಿಗೂ ಒಂದು ಪಾಠ

ಮೃತ್ಯುವಿನೊಡನೆ ಹೋರಾಡುವ ಡಾ| ಬುಂಡೆಸನ್ನರು.

ಮೂವತ್ತೈದು ಲಕ್ಷ ಜನ ಜಂಗುಳಿಯಿಂದ ನಿಬಿಡವಾದ, ಜಗತ್ತಿನ ಅತ್ಯಂತ ವಿಶಾಲ ಚಟುವಟಿಕೆಯ ನಗರ, ಚಿಕಾಗೊ ಕಳೆದ ಹಿಮಋತುವಿನಲ್ಲೊಂದು ದಿನ ಅಲ್ಲಿನ ಒಂದು ಭವ್ಯ ಕಟ್ಟಡದಲ್ಲಿ ಭೀಕರ ಸ್ಫೋಟವುಂಟಾದಾಗ ಅರೆ ಜರಿದು ಬಿದ್ದ ದರ ಗೋಡೆಗಳಡಿಯಲ್ಲಿ ಓರ್ವ ನಾಗರೀಕ ಜಜ್ಜಲ್ಪಟ್ಟ. ಅಗ್ನಿ ಶಾಮಕ ದಳದ ಅಧಿಕಾರಿ ತನ್ನ ಸೈನಿಕರನ್ನು ಯಾವ ಕ್ಷಣದಲ್ಲೂ ಕುಸಿದು ಬೀಳಬಹುದಾದ ಆ ಕಟ್ಟಡದ ಬಳಿ ಸಾರದಂತೆ ಎಚ್ಚರಿಕೆಯಿತ್ತ. ಆದರೆ ಈ ಅಧಿಕಾರ ವಾಣಿಯನ್ನು ಅಲಕ್ಷಿಸಿ 66 ವರ್ಷದ ಡಾ| ಬುಂಡೇಸನ್ನರು ಮೊರ್ಫಿನಿನ ಮಾತ್ರೆಗಳನ್ನು ಕೈಯಲ್ಲಿ ಹಿಡಿದು ಬೆನ್ನಿಗೆ ಕಂಬಳಿಯೊಂದನ್ನು ಕಟ್ಟಿ ಉರಗದೋಪಾದಿ ಹರಿದು ಅಪಾಯಕ್ಕೆ ಸಿಕ್ಕಿದ ನಾಗರೀಕನಿಗದನ್ನು ತಲುಪಿಸಿದರು.

ಅವಘಡ ಕಾಲದಲ್ಲಿ ಡಾ| ಬುಂಡೇಸನ್ನರಿಗೆ ಇಂತಹ ಸಾಹಸ ಕೃತ್ಯಗಳು ದಿನನಿತ್ಯದ ವ್ಯವಹಾರವಾಗಿದೆ. ಚಿಕಾಗೊ ನಗರದ ಆರೋಗ್ಯದ ಖಾತೆಯ ಮುಖ್ಯಾಧಿಕಾರಿಯಾಗುವರು ಇಂದಿಗೆ 26 ವರ್ಷಗಳಿಂದ ನಂಬಲಸಾಧ್ಯವೆನಿಸುವ ಮಹತ್ಕಾರ್ಯಗಳನ್ನು ಮಾಡಿ ನಾಗರೀಕರ ಸೇವೆಯನ್ನು ಮಾಡಿದ್ದಾರೆ. ಅದರ ಪರಿಣಾಮವಾಗಿ ಅಗಾಧ ಜನಸಂಖ್ಯೆಯುಳ್ಳ ಆ ನಗರದಲ್ಲಿ ಕಳೆದ ವರ್ಷ ಗಂಟಲು ಬೇನೆಯಿಂದ ಸತ್ತವರ ಸಂಖ್ಯೆ ಕೇವಲ ಮೂರರಷ್ಟಾಯಿತು! ಆ ನಗರದಲ್ಲಿ ಹಂಚಲ್ಪಡುವ ಹಾಲು ಇಂದು ಸಂಪೂರ್ಣ ರೋಗಾಣು ರಹಿತವಾಗಿದೆ. ವ್ಯಭಿಚಾರ ಸಂಬಂಧವಾದ ಮೇಹ ಜಾಢ್ಯಗಳು ಯಶಸ್ವಿಯಾಗಿ ಅಲ್ಲಿ ನಿರ್ಮೂಲಿಸಲ್ಪಟ್ಟಿವೆ. ಹುಟ್ಟಿದೊಡನೆ ಸಾಯುವ ಮಕ್ಕಳ ಸಂಖ್ಯೆ ಅಲ್ಲಿ ಜಗತ್ತಿನಿತರ ಕಡೆಗಳಿಂದೆಷ್ಟೊ ಕಡಿಮೆಯಾಗಿದೆ.

ಈ ಮಹತ್ಕಾರ್ಯ ಸಾಧನೆಯ ಮೂಲಪುರುಷರು ಡಾ| ಹರ್ಮನ್ ಬುಂಡೇಸನ್ನರು. ಚಿಕಾಗೊದಲ್ಲಿ ಅವರನ್ನು ಅರಿಯದವರಾರೂ ಇಲ್ಲ. ದೊಡ್ಡ ಬ್ಯಾಂಕುಗಳ ಮಾಲೀಕರಿಂದ ಸಾಮಾನ್ಯ ಟೆಕ್ಸಿ ಡ್ರೈವರನು ಕೂಡ ಅವರನ್ನು ಕಂಡೊಡನೆ ಪ್ರೇಮದಿಂದ ವಂದಿಸುವರು. ಚಿಕಾಗೊದ ಪ್ರಖ್ಯಾತ ದರೋಡೆಗಾರರಿಗೂ ಈ ಅದ್ವಿತೀಯ ಸಾಹಸಿ ವೈದ್ಯ ಮಹಾಶಯನ ಮೇಲೆ ಅಪಾರವಾದ ಆದರಭಿಮಾನಗಳಿವೆ. ಅಮೇರಿಕದ 12 ~~ಕೋಟಿ ತಾಯಂದಿರು ಅವರು ಬರೆದ~~ "ನಮ್ಮ ಮಕ್ಕಳು" ಎಂಬ ಪುಸ್ತಕವನ್ನು ಓದಿ ಶಿಶುಗಳ ಆರೈಕೆಯ ವಿಧಾನಗಳನ್ನು ಅರಿತುಕೊಂಡಿರುವರು. ಅವರ ಆರೋಗ್ಯ ಸೂಚನೆಗಳುಳ್ಳ ಲೇಖನಗಳನ್ನು ಅಲ್ಲಿನ 500 ಪತ್ರಿಕೆಗಳು ವಾರಂಪ್ರತಿ ಪ್ರಕಟಿಸುತ್ತವೆ.

ಒರಟು ಬಾಲ್ಯ: ಏಕಾಂಗಿಯಾಗಿ 1932ರಲ್ಲಿವರು ಮೃತ್ಯುವಿನೊಡನೆ ಸೆಣಸಾಟವನ್ನಾರಂಭಿಸಿದರು. ಇವರ ಒರಟು ಹಟಮಾರಿತನದ (ಪ್ರೊ| ಬಸ್ನಾಲಿಯವರನ್ನು ಇವರ ಭಾರತೀಯ ಸಮಕಾಲೀನರೆನ್ನಬಹುದು.) ಸ್ವಭಾವವನ್ನು ಚಿಕಾಗೊದ ನಗರ ಪಿತಾಮಹರು ಮೊದಲೇ ತಿಳಿದಿದ್ದರೆ ಇವರಿಗೆ ಆರೋಗ್ಯ ಖಾತೆಯ ಕಮಿಶನರ್ ಕೆಲಸ ಸಿಗುತ್ತಿರಲೇ ಇಲ್ಲವೆನ್ನಬಹುದು. ಒರಟುತನವೆಷ್ಟೊ ಅಷ್ಟೇ ಜಿಗುಟುತನವೂ ಇವರಲ್ಲಿತ್ತು. ಎಂತಹ ಕಷ್ಟಕ್ಕೂ ಕುಗ್ಗುವವರಲ್ಲ, ಎಂತಹ ನಷ್ಟಕ್ಕೂ ಬೊಗ್ಗುವವರಲ್ಲ, ಅದೆಂತಹ ವಿರೋಧಕ್ಕೂ ಜಗ್ಗುವವರಲ್ಲ. ಈ ನಾರು ಸ್ವಭಾವ ಅವರನ್ನು ಯಶಸ್ವಿಗೊಳಿಸಿತು.

ಬಾಲ್ಯದಲ್ಲೇ ಹೆತ್ತವರನ್ನು ಕಳಕೊಂಡು ಚಿಕಾಗೋದ ಚರಂಡಿಗಳಡಿಯಿಂದ ಒಂದು ಅನಾಥಾಶ್ರಮವನ್ನು ತ್ಯಜಿಸಿ, ವರ್ತಮಾನ ಪತ್ರಿಕೆ ಮಾರಿ ಮಾರ್ಗದ ಪೋಕ್ರಿ ಹುಡುಗರ ನಾಯಕರಾಗಿದ್ದರು ಈ ಬುಂಡೇಸನ್ನರು (ಅವರಿರ್ವ ಬಾಲ ಸಂಗಾತಿಗಳು ಕೊಲೆಯ ಅಪರಾಧಕ್ಕೆ ಗಲ್ಲಿಗೇರಿಸಲ್ಪಟ್ಟಿದ್ದಾರೆ!) ಮತ್ತೆ ಕ್ಷೌರದಂಗಡಿಗಳಲ್ಲಿ ಬಾಳು ಮೆಸೆಯುವ ಸಹಾಯಕನಾಗಿ ತಮ್ಮ ಜಿಗುಟುತನವನ್ನು ತುಂಬಾ ಅಭಿವೃದ್ಧಿಸಿಕೊಂಡರು. ಒಂದು ಸಲ ಹಿಮಹುಡಿಯ ಚೆಂಡಿನಿಂದ ಇಗರ್ಜಿ ಗುರುಗಳ ತಲೆ ಕವಚವನ್ನು ಹಾರಿಸಿದಾಗ ಆ ಧರ್ಮ ಗುರುಗಳು ಕೋಪಗೊಳ್ಳದೆ ಬಾಲಕ ಬುಂಡೇಸನ್ನನ ನೋಟ "ಪ್ರಣತೆ"ಯನ್ನು ಶ್ಲಾಘಿಸಿ ಅವನನ್ನು ರವಿವಾರದ ಧರ್ಮ ಬೋಧೆಯ ಶಾಲೆಗೆ ಆಮಂತ್ರಿಸಿದರು. ಅಲ್ಲಿ ಒರುವ ಶ್ರೀಮಂತ ಮಕ್ಕಳ ಕೀಟಲೆಗಳಿಂದೇನಾದರೆ ಕಲಿಯುವ ಸುಸಂದರ್ಭ ಸಿಗುತ್ತದೆಂದೆಣಿಸಿ ಬುಂಡೇಸನ್ ಶಾಲೆಗೆ ಹಾಜರಾದ. ಆದರೆ ಅಲ್ಲಿನ ಪ್ರೇಮಪೂರ್ಣ ವಾತಾವರಣದಿಂದ ಅವನ ಬುದ್ಧಿಸ್ಥಿತ್ಯಂತರಹೊಂದಿ ಮುಂದೆ ವೈದ್ಯನಾಗಲವನು ನಿರ್ಧರಿಸಿದ.

ವೈದ್ಯ ಶಿಕ್ಷಣ ಪಡೆಯುತ್ತಿದ್ದಾಗ ಬುಂಡೇಸನ್ನನು ಉದರಂಭರಣ ಮಾಡಿದ ಮಾದರಿ ಚೆನ್ನಾಗಿದೆ. ಪ್ರಯೋಗಾರ್ಥವಾಗಿ ಒಹು ಕಾಲ ದಬ್ಬಿಗಳಲ್ಲೊ, ಭರಣಿಗಳಲ್ಲೊ ಕೆಡದಂತೆ ಇಟ್ಟ ಆಹಾರ ವಸ್ತುಗಳು ಚೆನ್ನಾಗಿವೆಯೋ ವಿಷ ಭರಿತವಾಗಿವೆಯೊ ಎಂದು ತಿಂದು ನೋಡಲು ಅಲ್ಲಿನ ವೈದಕೀಯ ಸಂಶೋಧಕರಿಗೆ ಸಕಾಲದಲ್ಲಿ ಈ ಸಾಹಸಿ ವಿದ್ಯಾರ್ಥಿಯ ಸಂಪರ್ಕವಾಯಿತು. ಅಂತೇ ಅವನು ಅವರೆಲ್ಲಾ ಪ್ರಯೋಗಗಳಿಗೂ ಬಾಯೊಡ್ಡಿ ಯಾವೊಂದು ಹಾನಿಯುಲ್ಲದೆ ದಿನ ದೂಡಿದ. ಅಲ್ಲಿನ ಆಸ್ಪತ್ರೆಯಲ್ಲಿನ ರೋಗಿಗಳ ಮಲಮೂತ್ರದ ಬೋಗುಣಿಗಳನ್ನು ಶುದ್ಧ ಮಾಡುವ ಸ್ಥಳಕ್ಕೆ ಒಯ್ಯುವ ದಿನಚರಿಯನ್ನು ವಹಿಸಿ ಈಶ ಆರಡಿ ಅಗಲ, ಹತ್ತಡಿ ಉದ್ದದ ಕೋಣೆಯನ್ನು ಧರ್ಮಾರ್ಥ ಪಡೆದ. ಅದೇ ಆಸ್ಪತ್ರೆಯ ಶವ ಶಾಲೆಯಲ್ಲವನು ಮೃತ್ಯುದ್ವೇಷವನ್ನೂ ಅದನ್ನುಂಟುಮಾಡುವ ರೋಗಗಳಮೇಲೆ ವೈರವನ್ನೂ ಕಟ್ಟಿಕೊಂಡನು.

ಹೋರಾಟ: ವೈದ್ಯ ವಿದ್ಯೆ ಮುಗಿಸಿ ಮೂರು ವರ್ಷ ಸೈನ್ಯ ವೈದ್ಯನಾಗಿ ಕೆಲಸ ಮಾಡಿದ ಮೇಲೆ ಚಿಕಾಗೋದ ಆರೋಗ್ಯ ಖಾತೆಯಲ್ಲಿ ಡಾ| ಬುಂಡೇಸನ್ನರು ಸಾಂಕ್ರಾಮಿಕ ರೋಗ ತಡೆಗಟ್ಟುವ ಅಧಿಕಾರಿಯಾಗಿ ನೇಮಿಸಲ್ಪಟ್ಟರು. ಆ ಸಮಯದಲ್ಲಿವರು ಮೃತ್ಯುಕಾರಕ ಟೈಫೊಯ್ಡ್ ಜ್ವರ ವರ್ಜನಾರ್ಥವಾಗಿ ಕೈಕೊಂಡ ಕಾರ್ಯ ವಿಧಾನವನ್ನವರನ್ನು ಆರೋಗ್ಯ ಖಾತೆಯ ಮುಖ್ಯಾಧಿಕಾರಿಪದವಿಗೊಯ್ಯಿತು.

ಅನಂತರವೆ ಒಂದರ ಹಿಂದೆ ಒಂದಾಗಿ ಅವರ ತಳವಳವು ಪ್ರಾರಂಭವಾಯಿತು. ಚಿಕಾಗೋದ ದನ ಸಂಖ್ಯೆಯಲ್ಲಿ ಶೇಕಡಾ 87ರಷ್ಟು ಕ್ಷಯ ರೋಗಪೀಡಿತವಾದವು. ಅಲ್ಲಿನ 24 ಹಾಲು ಕೇಂದ್ರದ ಸಂಸ್ಥೆಗಳಲ್ಲಿ ಒಂದಾದರೂ ಈ ಭೀಕರ ವ್ಯಾಧಿಯ ಅಣುಗಳನ್ನು ನಾಶ ಮಾಡುವ ವಿಧಾನವನ್ನು ಕೈಕೊಂಡಿರಲಿಲ್ಲ. ಪರಿಣಾಮವಾಗಿ ಅಲ್ಲಿನ ಮಕ್ಕಳ ಗ್ರಂಥಿಗಳು ಊದಿ, ಎಲುಬುಗಳಿಗೆ ಕೀವು ಹಿಡಿದು ಬೆನ್ನುಗಳೂ ಕೈಕಾಲುಗಳೂ ಬಗ್ಗಿ ಹೋಗುವಂತಾಯಿತು.

ಬುಂಡೇಸನ್ನರು ಈ ಸಂಕಷ್ಟದ ಮೂಲಕ್ಕೇ ಕೈಹಾಕಿದರು. ಚಿಕಾಗೋದ ದನಗಳೆಲ್ಲವೂ ಪಶು ವೈದ್ಯ ಪರೀಕ್ಷೆಗೊಳಪಡಿಸಲ್ಪಡಬೇಕು. ಕ್ಷಯ ರೋಗಾಣುನಾಶಕ ಇಂಜೆಕ್ಷನ್ನುಗಳನ್ನವಕ್ಕೆ ಕೊಡಿಸಬೇಕು. ಇಂತಹ ಪರೀಕ್ಷೆಯಾಗದ ಆಕಳುಗಳ ಹಾಲು ಮಾರಲು ಬಿಡಲಾಗುವುದಿಲ್ಲ. ಬುಂಡೇಸನ್ನರು ಗೋವಳದ ಸಂಘಗಳ ಮತ್ತು ಹಾಲು ಮಾರುವ ಸಂಘಗಳ ಪ್ರತಿನಿಧಿಗಳನ್ನು, ನಗರ ಪಿತಾಮಹರನ್ನು ಸಭೆ ಸೇರಿಸಿ ಈ ಕಾರ್ಯ ಸಾಧನೆಗೆ ಅವರ ನೆರವನ್ನು ಪಡೆದರು. ಒಂದು ವರೆ ವರ್ಷದೊಳಗೆ ಚಿಕಾಗೋದ ಹಾಲು ಕ್ಷಯಾಣು ರಹಿತವಾಯಿತು. ಮಕ್ಕಳ ಎಲುಬು ವ್ಯಾಧಿಗಳೂ ಕಡಿಮೆಯಾದವು.

ಚಿಕಾಗೋದ ಹೆರಿಗೆ ಆಸ್ಪತ್ರೆಗಳಲ್ಲಿನ ಹೆರಿಗೆ ವೈದ್ಯರು ಉಪಯೋಗಿಸುವ ಕೆಲವೊಂದು ತಪ್ಪು ವಿಧಾನಗಳಿಂದ ಹೆಚ್ಚೆಚ್ಚು ಮಕ್ಕಳು ಬೆಳಕು ಕಾಣುತ್ತಲೆ ಮೃತಪಡುವಂತಾಯಿತು. ಡಾ| ಬುಂಡೇಸನ್ನರು ಇತರ ಕಡೆಗಳಿಂದ ಹೆರಿಗೆ ತಜ್ಞರನ್ನು ತರಿಸಿ ತಮ್ಮ ನಗರದ ವೈದ್ಯರಿಗೆ ಸಲಹೆ ಕೊಡಿಸಿದರು. ಮತ್ತೆ ಶಿಶು ಸಾವು ಕಡಿಮೆಯಾಯಿತು.

ಡಾ| ಬುಂಡೇಸನ್ನರಿಗೆ ಹೆಚ್ಚಿನ ತೊಂದರೆ ಕೊಟ್ಟ ಸಾಂಕ್ರಾಮಿಕವೆಂದರೆ ವ್ಯಭಿಚಾರದಿಂದ ಹರಡುವ ಮೇಹ ಜಾಢ್ಯ. ಒಂದು ಸಲ ಇವರು ನಗರ ಸಭೆಯ ಅನುಮತಿಯಿಂದ ನಡೆಸಲ್ಪಡುವ ವೈಶ್ಯಾಗೃಹಗಳನ್ನು ಮುಚ್ಚಿಸಿ ಬಿಟ್ಟರು. ಇವುಗಳನ್ನು ನಡೆಸುತ್ತಿದ್ದ ಓರ್ವ ಪೋಕ್ರಿ ಪುಂಡನು ಬುಂಡೇಸನ್ನರಿಗೆ ಪಿಸ್ತೂಲಿನಿಂದ ಹೊಡೆದನು. ಚಿಕಾಗೋದ ಸುದೈವದಿಂದ ಗುಂಡಿನ ಗುರಿ ತಪ್ಪಿ ಆರೋಗ್ಯ ಕಮಿಶನರ್ ಬುಂಡೇಸನ್ನರು ಬದುಕಿಕೊಂಡರು. ಕಿಂಚಿತ್ತಾದರೂ ಎದೆಗುಂದದೆ ಅವರು ಚಿಕಾಗೊ ನಗರ ವಾಸಿಗಳನ್ನು ಮೇಹ ಪರೀಕ್ಷೆಗೊಳಪಡಿಸಿ 10 ಗಂಟೆಯೊಳಗೆ ಈ ವಿನಾಶಕಾರಿ ವ್ಯಾಧಿಯನ್ನು ನಾಶಮಾಡುವ ಔಷಧಿ ವಿತರಣೆಯ ಕಾರ್ಯಕ್ರಮವನ್ನು ಭರದಿಂದ ಸಾಗಿಸಿದರು. ಎರಡು ವರ್ಷಗಳಲ್ಲಿ ಮೇಹ ರೋಗದ ಸಾಂಕ್ರಾಮಿಕ ಒಂದಕ್ಕರ್ಧವಾಯಿತು. ಈ ಕೆಲಸಕ್ಕಾಗಿ ಅವರು ತರುಣ ವೈದ್ಯರನ್ನು ಸ್ವಯಂ ಸೇವಕರಾಗಿ ಒಟ್ಟುಗೂಡಿಸಿದ್ದರು.

ನಂತರದ ಅವರ ಯುದ್ಧ ಗಂಟಲು ಬೇನೆಯ ಮೇಲೆ. ಈ ರೋಗದಿಂದ ಶೇಕಡಾ 17 ಮಕ್ಕಳು ಸಾಯುತ್ತಿದ್ದರಲ್ಲಿ. ಆ ವರ್ಷ ಅವರು ನಗರದ ಮೂಲೆ ಮೂಲೆಗಳನ್ನು ಹೊಕ್ಕು 140 ಲಕ್ಷ ಮಕ್ಕಳಿಗೆ ಗಂಟಲು ಬೇನೆಯ ಇಂಜೆಕ್ಷನುಗಳನ್ನು ಕೊಡಿಸಿದರು. ಪರಿಣಾಮವಾಗಿ ಕಳೆದ ವರ್ಷ ಇದರಿಂದ ಕೇವಲ ಮೂರು ಮಂದಿ ಮಾತ್ರ ಸತ್ತರು. "ನಾವೀ ವ್ಯಾಧಿಗಳನ್ನು ಸಂಪೂರ್ಣ ನಿರ್ಮೂಲಿಸಲಾರವೆಂಬುದಕ್ಕೆ ವೈಜ್ಞಾನಿಕ ಸಾಕ್ಷ್ಯಗಳಿವೆ" ಎಂದೊರ್ವ ಅವರ ವೈದ್ಯ ಸಂಗಾತಿ ತಿಳಿಸಿದಾಗ ಬುಂಡೇಸನ್ನರು "ಇರಲಿ ನಾವು ಕೆಲಸವನ್ನು ಮುಂದರಿಸೋಣ. ಈ ವರ್ಷ ಮೂರೇ ಮಂದಿ ಸತ್ತರಾದರೂ ಬರುವ ವರ್ಷ ಯಾರೂ ಸಾಯಲಿಕ್ಕಿಲ್ಲವೆಂದು ಹಾರೈಸೋಣ"ವೆಂದರು ಬುಂಡೇಸನ್ನರು—ತಮ್ಮ ಜಿಗಟು ಧಾಟಿಯಲ್ಲಿ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

CANARA BANK, LIMITED.

ESTD: 1906

ಸ್ವದೇಶಾಭಿಮಾನಿ

ತಾರೀಖು 6—8—1948

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೈದರಾಬಾದಿನ ಪ್ರಶ್ನೆ

ಬ್ರಿಟನು ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಹೈದರಾಬಾದಿನ ಪರವಾಗಿ ಪ್ರಚಾರ ಅಥವಾ ಅಪಪ್ರಚಾರದ ಕಾರ್ಯವು ರಭಸದಿಂದ ಸಾಗುತ್ತಿದೆ. ನೈಜಾಮರು ತುಂಬಾ ಹಣವಂತರೆಂಬುದು ಅಲ್ಲಿ ಅನೇಕರಿಗೆ ಗೊತ್ತಿದೆ. ಮೊಂಕ್‌ಟನ್ ಮೊದಲಾದವರು ಈ ವಿಚಾರವನ್ನು ಹಲವರಿಗೆ ತಿಳಿಸಿರಬೇಕು.

ಬ್ರಿಟನಿನ ಲೇಬರ್ ಸರಕಾರದಿಂದ ನೊಂದ ಚರ್ಚಿಲರು ಈ ಹೈದರಾಬಾದು ಪರವಾದ ತಂಡಕ್ಕೆ ನಾಯಕರಾಗಿ ನಿಂತು ಬ್ರಿಟನಿನ ಪಾರ್ಲಿಮೆಂಟು ಸಭೆಯಲ್ಲಿ ಈ ಪ್ರಶ್ನೆಯ ಕುರಿತು ಚರ್ಚೆ ನಡೆಯಲೇಬೇಕೆಂದು ಹಟತೊಟ್ಟರು. ಚರ್ಚೆಗೆ ಆಸ್ಪದ ಒದಗಿಸಿಕೊಳ್ಳುವುದರಲ್ಲಿ ಯಶಸ್ವಿಯೂ ಆದರು.

ಹೈದರಾಬಾದಿನ ಮೇಲೆ ಭಾರತ ಸರಕಾರವು ಅಮಾನುಷ-ಅತ್ಯಾಚಾರ ನಡೆಸುತ್ತಿದೆ. ಭಯಂಕರವಾದ ಆರ್ಥಿಕ ಬಹಿಷ್ಕಾರ ಹಾಕಿ ಅಲ್ಲಿಯ ಪ್ರಜಾಜನರನ್ನು ಅನ್ನಾಹಾರವಿಲ್ಲದಂತೆ ಮಾಡಿರುತ್ತದೆ. ಬೇಕಾದ ಔಷಧೋಪಚಾರಗಳನ್ನಾದರೂ ಇಂಥ ಪರಿಸ್ಥಿತಿಯಲ್ಲಿ ಒದಗಿಸೋಣವೆಂದರೆ ಔಷಧಿಗಳಿಗೆ ಕೂಡ ಬಹಿಷ್ಕಾರ ಹಾಕಿ ಅವನ್ನು ಅಲ್ಲಿಗೆ ಕೊಂಡೊಯ್ಯಲು ಬಿಡುವುದಿಲ್ಲ. ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರು ಹೈದರಾಬಾದಿನ ಮೇಲೆ ಸೈನಿಕ ಶಿಸ್ತನ್ನು ಜಾರಿ ಮಾಡುವುದಾಗಿ ಹೆದರಿಸಿದ್ದಾರೆ. ಒಂದೇ ಹೈದರಾಬಾದು ಭಾರತಕ್ಕೆ ಶರಣುಬರಬೇಕು ಇಲ್ಲವಾದರೆ ಆ ಸಂಸ್ಥಾನವೇ ನಾಶಮಾಡಲಾಗುವುದೆಂದಿದ್ದಾರೆ. ಈ ಮಾತುಗಳು ಹಿಟ್ಲರನ ಮಾತುಗಳಂತೆಯೇ ಇವೆ.

ಬಡ ಹೈದರಾಬಾದು ಮಾಡಿದ ಅನ್ಯಾಯವಾದರೂ ಏನು? ಅದು ತನ್ನ ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಿದೆ. ಬ್ರಿಟಿಷ ಸರಕಾರದವರು ಭಾರತವನ್ನು ಬಿಟ್ಟುಕೊಡುವಾಗ ಸಂಸ್ಥಾನಗಳು ಬೇಕಾದರೆ ಸ್ವತಂತ್ರವಾಗಿರಲು ಅಡ್ಡಿಯಿಲ್ಲವೆಂದು ಹೇಳಿಲ್ಲವೇ? ಅವರ ಅಂಥ ಅಧಿಕಾರವನ್ನು ನಾವು ರಕ್ಷಿಸುವುದಾಗಿ ಮಾತು ಕೊಡಲಿಲ್ಲವೇ? ಹೈದರಾಬಾದು ಯಾವ ಅನ್ಯಾಯವನ್ನೂ ಮಾಡದೆ ಸ್ವತಂತ್ರವಾಗಿರಲು ಅಪೇಕ್ಷಿಸಿದ್ದಕ್ಕೆ ಇವರ ಮೇಲೆ ಭಾರತ ಸರಕಾರವು ನಡೆಸುವ ಅತ್ಯಾಚಾರವನ್ನು ಕಂಡೂ ನಾವು ಸುಮ್ಮಗಿದ್ದರೆ ನಾವು ವಚನಭ್ರಷ್ಟರಾಗುವುದಿಲ್ಲವೇ?

ಹೈದರಾಬಾದಿನ ಪ್ರಶ್ನೆಯು ನ್ಯಾಯವಾಗಿ ತೀರ್ಮಾನವಾಗುವಂತೆ ಸಂಯುಕ್ತ ರಾಷ್ಟ್ರ ಸಮಿತಿಯ ಮುಂದೆ ಕೊಂಡುಹೋಗಬೇಕು. ಹೈದರಾಬಾದು ಸರಕಾರವು ತನ್ನ ಪ್ರಜೆಗಳ ಇಚ್ಛೆಯಂತೆ ವರ್ತಿಸಲು ಸಿದ್ಧವಿದೆ. ಪ್ರಜಾಭಿಪ್ರಾಯ ನಿರ್ಣಯವು ಭದ್ರತಾ ಸಮಿತಿಯ ಅಧೀನದಲ್ಲಿ ನಡೆಯುವಂತೆ ಏರ್ಪಡಿಸಬೇಕು. ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಮಿತಿಯ ಮುಂದೆ ಕೊಂಡೊಯ್ಯಲು ಬ್ರಿಟಿಷ ಸರಕಾರವು ಹೈದರಾಬಾದಿಗೆ ಸಹಾಯ ಮಾಡಿ ತನ್ನ ವಾಗ್ದಾನವನ್ನು ಪೂರೈಸಬೇಕು. ಇದಿಷ್ಟು ಚರ್ಚಿಲರು ಮಾಡಿದ ಭಾಷಣದ ಸಾರಾಂಶವಿರುತ್ತದೆ.

ಬ್ರಿಟಿಷ್ ಸರಕಾರದ ಪರವಾಗಿ ಅಲ್ಲಿಯ ಪ್ರಧಾನ ಸಚಿವ ಅಟ್ಲೀಯವರು ಇದಕ್ಕೆ ಸಮರ್ಪಕವಾದ ಉತ್ತರ ಕೊಟ್ಟರು. ಹಿಂದುಸ್ಥಾನದ ಪ್ರಶ್ನೆಗಳ ಕುರಿತು ಚರ್ಚಿಲರು ಮಾತಾಡದಿರುವುದೇ ಹಿತಕರವೆಂದು ಆ ದೇಶದ ಅನುಭವವಿದ್ದ ಅವರ ಸಂಗಡಿಗರೇ ಒಪ್ಪುತ್ತಾರೆ. ಹಿಂದುಗಳು ಮಾಡುವುದೆಲ್ಲ ಅನ್ಯಾಯವೆಂಬ ಭಾವನೆಯನ್ನು ಕಟ್ಟಿಕೊಂಡೇ ಇವರು ಮಾತಾಡುತ್ತಾರೆ. ನಿಜವಾದ ಸಂಗತಿ ತಿಳಿಯಲು ಯತ್ನಿಸುವುದೇ ಇಲ್ಲ. ಹೈದರಾಬಾದಿಗೆ ಇಂದು ಕೊಂಡುಹೋಗಲು ಬಿಡದಿರುವ ಮಾಲುಗಳೆಂದರೆ ಮುಖ್ಯವಾಗಿ ಯುದ್ಧ ಸಾಮಗ್ರಿಗಳು. ಔಷಧಿ ಇತ್ಯಾದಿಗಳ ಮೇಲೆ ಬಹಿಷ್ಕಾರ ಹಾಕಿಲ್ಲವೆಂದು ಭಾರತ ಸರಕಾರವು ಮೇಲೆ ಮೇಲೆ ಹೇಳುತ್ತಿದೆ. ಪ್ರಾಯಶಃ ಇದನ್ನು ಚರ್ಚಿಲ್ಲರಿಗೆ ಯಾರೂ ತಿಳಿಸಿಲ್ಲ. ಇವರು ಮಾತಾಡಿದಾಗಲೆಲ್ಲ ಹಿಂದುಸ್ಥಾನದ ಪರಿಸ್ಥಿತಿ ಸುಧಾರಿಸುವ ಬದಲು ಇನ್ನಷ್ಟು ಕೆಡುವಂತೆ ಇವರು ಮಾಡುತ್ತಾರೆ.

ಹೈದರಾಬಾದು ಸ್ವತಂತ್ರ ರಾಷ್ಟ್ರವಾಗಿರುವುದು ಶಕ್ಯವಲ್ಲವೆಂದೂ ಅದು ಭಾರತದ ಆಶ್ರಯ ಪಡೆಯುವುದೇ ಹಿತಕರವೆಂದೂ ಬ್ರಿಟಿಷ ಸರಕಾರವು ತನ್ನ ಧೋರಣೆಯನ್ನು ಇದಕ್ಕೆ ಮೊದಲೇ ಸ್ಪಷ್ಟಪಡಿಸಿರುತ್ತದೆ. ಸಂಸ್ಥಾನಗಳು ಸ್ವತಂತ್ರವಾಗಿರಲು ನಾವು ಸಹಾಯ ಮಾಡುವೆವೆಂದು ಬ್ರಿಟಿಷ ಸರಕಾರವು ಎಂದೂ ವಾಗ್ದಾನಕೊಟ್ಟಿಲ್ಲ. ಕ್ರಿಪ್ಸ್ ಮಿಶನಿನ ಕಾಲದಲ್ಲಿ ಇಂಥ ಮಾತು ಬಂದಿದ್ದರೆ ಆ ಮಿಶನಿನಂತೆ ಕಾರ್ಯವೇ ಆಗಿಲ್ಲವೆಂದ ಬಳಿಕ ಅದನ್ನೆತ್ತಿ ತೋರಿಸುವುದು ಹಾಸ್ಯಾಸ್ಪದ.

ಹೈದರಾಬಾದು ಮತ್ತು ಭಾರತದೊಳಗಣ ಪ್ರಶ್ನೆ ಆ ದೇಶದ ಆಂತರೀಕ ಪ್ರಶ್ನೆ. ಇದರಲ್ಲಿ ಬ್ರಿಟಿಷ ಸರಕಾರವು ಕೈಹಾಕಲು ಯಾವ ಕಾರಣವೂ ಇಲ್ಲ. ಹೈದರಾಬಾದಿಗೂ ಭಾರತಕ್ಕೂ ಆದ ಒಪ್ಪಂದ ಜಾರಿಯಲ್ಲಿರುತ್ತದೆ. ಅದರಂತೆ ಹೈದರಾಬಾದಿನ ಪರಕೀಯ ಧೋರಣೆ ಭಾರತ ಸರಕಾರದ ಅಧೀನತೆಗೆ ಒಪ್ಪಿಸಲ್ಪಟ್ಟಿದೆ. ಈ ಒಪ್ಪಂದ ಜಾರಿಯಲ್ಲಿರುತ್ತ ಅದರ ಪ್ರಶ್ನೆ ಸಂಯುಕ್ತ ರಾಷ್ಟ್ರ ಸಭೆಯ ಮುಂದೆ ತರುವುದೇ ಸಾಧ್ಯವಿಲ್ಲ. ನಾವು ಇದಕ್ಕೆ ಸಹಾಯ ಮಾಡುವಂತಿಲ್ಲ.

ಈ ರೀತಿ ಅಟ್ಲಿಯವರು ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ತಮ್ಮ ಧೋರಣೆ ಹೇಳಿದ್ದು ಮಾತ್ರವಲ್ಲ ಚರ್ಚಿಲರಿಗೂ ಸರಿಯಾದ ಹಿತೋಕ್ತಿಯನ್ನೇ ಹೇಳಿದರು.

ಟೀಕೆ-ಟಿಪ್ಪಣಿಗಳು

ಅರಬರ ಜಿಹಾದು

ಅರಬರಾಷ್ಟ್ರಗಳ ಕಮಿಟಿಯವರು ಪೆಲೆಸ್ತ್ಯಾನದಲ್ಲಿ ಜಿಹಾದನ್ನು ಅಂದರೆ ಧರ್ಮಕ್ಕಾಗಿ ಹೂಡುವ ಯುದ್ಧವನ್ನು ಸಾರುವರೆಂದು ಪ್ರಕಟವಾಗಿರುತ್ತದೆ. ಇದು ನಿಜವಾದರೆ ಪೆಲೆಸ್ತ್ಯಾನು ಪ್ರಕರಣವನ್ನು ಮುಕ್ತಾಯಗೊಳಿಸಿ ಶಾಂತಿರಕ್ಷಿಸಲು ಸಂಯುಕ್ತ ರಾಷ್ಟ್ರ ಸಭೆಯವರು ಕೈಕೊಂಡ ಯತ್ನಗಳೆಲ್ಲ ನಿರರ್ಥಕವಾದಂತೆಯೇ ಸರಿ. ಈ ಜಿಹಾದ ಯುದ್ಧ ಶೀಘ್ರದಲ್ಲಿ ಮುಗಿಯುವಂಥ ಲಕ್ಷಣಗಳೂ ಇಲ್ಲ. ಯೆಹೂದಿಯರಿಗೆ ಒಂದೆಡೆಯಿಂದ ರಶ್ಯಾದವರೂ ಇನ್ನೊಂದೆಡೆಯಿಂದ ಅಮೇರಿಕದವರೂ ಸಹಾಯಮಾಡುವ ಸಂಭವವಿರುವುದರಿಂದಲೂ ಅರಬರಾಷ್ಟ್ರಗಳನ್ನು ಪಾಶ್ಚಾತ್ಯ ದೊಡ್ಡ ರಾಷ್ಟ್ರಗಳು ಸೇರಿದರೂ ಶೀಘ್ರದಲ್ಲಿ ಸೋಲಿಸುವುದು ಸಾಧ್ಯವಲ್ಲವೆಂಬುದರಿಂದಲೂ ಪೆಲೆಸ್ತ್ಯಾನಿನಲ್ಲಿ ದೀರ್ಘ ಕಾಲದ ತನಕ ಹೋರಾಟ ನಡೆಯುವ ಲಕ್ಷಣಗಳೇ ಕಂಡುಬರುತ್ತವೆ. ಇಲ್ಲಿ ಉರಿಯುವ ಬೆಂಕಿ ಜಗತ್ತಿಗೆ ಹಬ್ಬದಂತಾದರೂ ಸಂಯುಕ್ತ ರಾಷ್ಟ್ರಗಳ ಸಭೆಯವರು ಜಾಗರೂಕರಾಗಿರುವುದೇ ಲೇಸು.

ಸ್ಟೇಲಿನರೊಡನೆಯೇ ಮಾತುಕತೆ

ಬರ್ಲಿನ ಪ್ರಕರಣದಲ್ಲಿ ರಶ್ಯಾದವರು ಬಗ್ಗುವ ಸ್ಥಿತಿ ಇಲ್ಲವೆಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳು ಕಂಡುಕೊಂಡಿರುವರು. ಜರ್ಮನಿಯ ಇಡೀ ಪ್ರಶ್ನೆಯನ್ನು ಬೇಕಿದ್ದರೆ ಸ್ಟೇಲಿನರೊಡನೆಯೇ ಚರ್ಚಿಸಲಿಕ್ಕಾಗಿ ಇವರ ಮುಂದಾಳುಗಳು ರಶ್ಯಾಕ್ಕೆ ಹೋಗಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳ ಆಡಳಿತಕ್ಕೆ ಒಳಪಟ್ಟ ಬರ್ಲಿನ್ ಭಾಗದ ಆಡಳಿತೆ ರಶ್ಯಾದವರು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಳ್ಳುವ ಹಂಚಿಕೆ ನಡೆಯುತ್ತಿದೆಯೆಂದೂ ಒಂದು ವಾರ್ತೆ ಪ್ರಕಟವಾಗಿದೆ. ಅಂತೂ ಸ್ಟೇಲಿನರೊಡನೆ ಇಡೀ ಪ್ರಶ್ನೆಯನ್ನು ಚರ್ಚಿಸಲು ಹೋದುದೇನೋ ಒಳ್ಳೆಯದಾಯಿತು. ಈ ಮಾತುಕತೆಗಳ ಪರಿಣಾಮವಾಗಿ ಯುದ್ಧದ ಭಯವು ತತ್ಕಾಲಕ್ಕಾದರೂ ದೂರ ಹೋದರೆ ಸಾಕು. ಪ್ರಪಂಚವು ಒಮ್ಮೆ ಸಮಾಧಾನದಿಂದ ನಿಟ್ಟುಸಿರು ಬಿಡಬಹುದು.

ಶಾಂತಿಸಾಧಕರ ಪರಿಷತ್ತು

ಜಗತ್ತಿನಲ್ಲಿಯ ಶಾಂತಿಸಾಧಕರ ಪರಿಷತ್ತೊಂದು ಶ್ರೀ ರವೀಂದ್ರರು ಸ್ಥಾಪಿಸಿದ ಶಾಂತಿನಿಕೇತನದಲ್ಲಿ ಜರಗಲಿದೆಯೆಂದೂ ಇದಕ್ಕೆ ಕಾಂಗ್ರೆಸ್ ಅಧ್ಯಕ್ಷ ಬಾಬು ರಾಜೇಂದ್ರಪ್ರಸಾದರು ಅಧ್ಯಕ್ಷರಾಗಲಿರುವರೆಂದೂ ತಿಳಿದುಬರುತ್ತದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಶಾಂತಿರಕ್ಷಣೆಗಾಗಿ ದುಡಿಯುವ ಮಹನೀಯರನೇಕರು ಈ ಪರಿಷತ್ತಿಗೆ ಆಗಮಿಸಲಿರುವರಂತೆ. ಭಾರತದಲ್ಲಿ ಅದರಲ್ಲಿಯೂ ಶಾಂತಿನಿಕೇತನದಲ್ಲಿ ಇದನ್ನು ಜರಗಿಸಲು ಏರ್ಪಡಿಸಿದುದು ನಮ್ಮ ದೇಶಕ್ಕೊಂದು ಗೌರವದ ಸಂಗತಿಯೇ ಇದೆ. ಭಾರತ ರಾಷ್ಟ್ರಸಭೆಯ ಅಧ್ಯಕ್ಷರಿಗೆ ಇದರ ಅಧ್ಯಕ್ಷಪದವಿಯನ್ನೊಪ್ಪಿಸಿದುದು ಇನ್ನೂ ಅಭಿಮಾನದ ವಿಚಾರ. ಇವರು ಈ ಕಾರ್ಯಕ್ಕೆ ಅತ್ಯಂತ ಯೋಗ್ಯರಿದ್ದಾರೆಂಬುದೂ ನಿಜವಿರುತ್ತದೆ. ಈ ಪರಿಷತ್ತು ಯಶಸ್ವಿಯಾಗಿ ಪರಿಣಾಮಕಾರಿಯಾಗುವಂತಾಗಲೆಂದು ಹಾರೈಸೋಣ.

ನೈಜಾಮರು ಇಷ್ಟೊಂದು ಕೆಲಸ ಸಾಧಿಸಲು ಎಷ್ಟು ಹಣ ಖರ್ಚು ಮಾಡಿದ್ದಾರೊ ಗೊತ್ತಿಲ್ಲ. ಆದರೆ ಅವೆಲ್ಲವೂ ನಿರರ್ಥಕವಾಯಿತು. ಪರಕೀಯರ ಮೋರೆ ನೋಡಿ ಫಲವಿಲ್ಲವೆಂಬುದನ್ನು ಇವರು ಇನ್ನಾದರೂ ಕಲಿತುಕೊಂಡರೆ ಕ್ಷೇಮವುಂಟು.

ಕೈಗಾರಿಕೆಯಲ್ಲಿ ವಜ್ರದ ಸ್ಥಾನ
ಹೆಂಗಸರಿಗೆ ವಜ್ರದ ಆಶೆ ಏಕೆ?

ವಜ್ರದ ಕಾಫಿ ತಟ್ಟೆಗಳು

ಸರ್ ಸಿ. ವಿ. ರಾಮನ್ನರು ತಮ್ಮ ಇತ್ತೀಚಿನ ಯುರೋಪ್ಯ ಸಂಚಾರ ಕಾಲದಲ್ಲಿ ಆಕಡೆಯ ವಿಜ್ಞಾನಿಗಳಿಗೆ ತಮ್ಮ ಪರಿಶೋಧನೆಗಳ ಅನುಭವವನ್ನು ನಿರೂಪಿಸಿದರು. ಲಂಡನಿನಲ್ಲಿ ಅವರಿತ್ತ ಒಂದು ಭಾಷಣದಿಂದ ವಜ್ರದ ಕುರಿತಾದ ಈ ಕೆಳಗಿನ ಸಂಗತಿಗಳು ತಿಳಿದುಬಂದುವು.

ವಜ್ರಗಳು ಭೂಗರ್ಭದಲ್ಲಿ ಮಿಲಿಯಾಂತರ ವರ್ಷಗಳಿಂದ ನಡೆಯುತ್ತಿರುವ ಒಂದು ರಹಸ್ಯ ಪ್ರಕೃತಿ ಕ್ರಿಯೆಯಿಂದಾಗುತ್ತವೆ. ಅವು ಒಂದು ತರದ ಸ್ಫಟಿಕ ಸ್ವಭಾವದ ಇದ್ದಲುಗಳು. ಹೆಚ್ಚು ಬಿಸಿಮಾಡಿದರೆ ಉರಿದು ಕೆಂಡವಾಗುತ್ತವೆ.

ಮೆಡೆಮ್ ಕ್ಯೂರಿಯವರು ವಜ್ರದ ಕುರಿತು ಒಂದು ಸಿದ್ಧಾಂತ ಕಲ್ಪಿಸಿದ್ದರು. ಒಂದು ಗುಹೆಯಲ್ಲಿ ತುಂಬ ಕಲ್ಲಿದ್ದಲನ್ನು ಹಾಕಿ ಅವನ್ನು ಏಟಂ ಬೊಂಬಿನ ಸ್ಫೋಟಕ್ಕೊಳಪಡಿಸಿದರೆ ಅದರ ಪರಿಣಾಮದಿಂದ ಗುಹೆ ತುಂಬ ವಜ್ರಗಳಾಗುವ ಸಂಭವವಿದೆ.

ವಜ್ರಗಳನ್ನು ಬಿಳಿಯರಿಗಿಂತ ಕಂದುವರ್ಣದವರು ಹೆಚ್ಚು ಮೆಚ್ಚುತ್ತಾರೆ. ಕಿವಿಗೆ ಹಾಕಿದಾಗ ಅವುಗಳ ಹೊಳಪು ನೋಡುವವನ ದೃಷ್ಟಿಯನ್ನು ಧರಿಸಿದವರ ಮುಖದ ಮೇಲೆ ತಿರುಗುವಂತೆ ಮಾಡುತ್ತದೆ. ಕಣ್ಣುಗಳು ಹೊಳಪನ್ನು ನೋಡಬಯಸುವುದಿಲ್ಲ.

ವಜ್ರಗಳು ಕೈಗಾರಿಕೆಯಲ್ಲಿ ಬಹಳ ಉಪಯುಕ್ತವಾದವು. ನಾಜೂಕಾದ ಉಪಕರಣಗಳನ್ನು ಮಾಡಲು ಅವುಗಳನ್ನು ಉಪಯೋಗಿಸುತ್ತಾರೆ.

ವಜ್ರಗಳಿಂದ ತಟ್ಟೆ ತಂಬಿಗೆಗಳನ್ನು ತಯಾರಿಸಬಹುದು. ಇವುಗಳಲ್ಲಿ ಬಿಸಿ ಪಾನೀಯಗಳು ಬೇಗನೆ ತಣಿಯುವುದಿಲ್ಲ.

ಕೃತ್ರಿಮ ವಜ್ರಗಳನ್ನು ತಯಾರಿಸುವ ವಿಧಾನವು ಇನ್ನೂ ಪರಿಪೂರ್ಣಗೊಳಿಸಲ್ಪಟ್ಟಿಲ್ಲ. ಅದು ಸಾಧ್ಯವಾದಾಗ ವಜ್ರಗಳ ಬೆಲೆ ಸಾವಿರ ಪಾಲಷ್ಟು ಕಡಿಮೆಯಾಗುವುದು.

ಕ್ರಯಗಳ ಏರಿಕೆ ಮತ್ತು ಕಂಟ್ರೋಲು

ಕಂಟ್ರೋಲುಗಳನ್ನು ಒಂದೊಂದಾಗಿ ತೆಗೆಯುವಾಗ ಕ್ರಯಗಳು ಕಂಟ್ರೋಲು ಕ್ರಯಗಳಿಗಿಂತ ಹೆಚ್ಚಾಗಬಹುದಾದರೂ ಆಗಿನ ಕಳ್ಳಸಂತೆಯ ಕ್ರಯಗಳಿಗಿಂತ ಕಡಿಮೆ ನಿಲ್ಲಬಹುದೆಂದು ಯೋಚಿಸಲಾಗಿತ್ತು. ಆದರೆ ಈ ಭಾವನೆ ಸರಿಯಾಗಲಿಲ್ಲ. ಕ್ರಯಗಳು ವಿಪರೀತ ಏರುತ್ತ ಹೋದುವು ಸಕ್ಕರೆ ಹಾಗೂ ಬಟ್ಟೆಗಿರಣಿಗಳಿಗೆ ಕೋಟಿ ಸಂಖ್ಯೆಯಲ್ಲಿ ಲಾಭವು ಬೆಳೆದುದೊಂದೇ ಕಂಟ್ರೋಲು ತೆಗೆದುದರ ಪರಿಣಾಮವಾಯಿತೆಂಬ ಅಂಶವು ಈಗ ಸ್ಪಷ್ಟವಾಗಿರುತ್ತದೆ

ಕೇಂದ್ರ ಸರಕಾರದವರು ಬಟ್ಟೆಗಳ ಮೇಲೆ ಪುನಃ ಕಂಟ್ರೋಲು ಜಾರಿಮಾಡುವ ಕಾರ್ಯಕ್ಕೆ ಕೈಹೊಟ್ಟಿರುತ್ತಾರೆ ಕೇಂದ್ರ ಸರಕಾರದ ಆಜ್ಞೆಯಿಂದ ಪ್ರಾಂತಿಕ ಸರಕಾರಗಳೂ ಈ ವಿಷಯದಲ್ಲಿ ಕಾರ್ಯಕ್ಕೆ ಕೊಳ್ಳುತ್ತಿವೆ ಮಿಲ್ಲುಗಳಲ್ಲಿಯ ಮಾಲುಗಳನ್ನು ಹೊರಗೆ ಸಾಗಿಸದಂತೆ ಪೋಲೀಸು ಅಥವಾ ಸೈನಿಕ ಪಹರೆ ಇರಿಸಲಾಗಿದೆ ಅಲ್ಲಿರುವ ಎಲ್ಲಾ ಬಟ್ಟೆಗಳ ಮೇಲೆ ನ್ಯಾಯವಾದ ಕ್ರಯಗಳನ್ನು ನಿರ್ಣಯಿಸಿ ಮೊಹರು ಹಾಕಲಾಗುತ್ತಿದೆ ಈ ಬಟ್ಟೆಗಳನ್ನು ಹಾಗೂ ... ಆಗುತ್ತಿರುವ ಬಟ್ಟೆಗಳನ್ನು ಎಲ್ಲ ಸರಕಾರವೇ ಸ್ವಾಧೀನಪಡಿಸಿಕೊಂಡು ದೇಶದಲ್ಲಿ ವಿತರಣೆ ಮಾಡುವ ಕಾರ್ಯವನ್ನು ಕೈಕೊಳ್ಳುವುದು ಆಯಾ ಪ್ರಾಂತ್ಯಗಳಿಗೆಂದು ಕೇಂದ್ರ ಸರಕಾರವು ವಿಂಗಡಿಸಿಟ್ಟ ಅಂಶವನ್ನು ಕ್ಲುಪ್ತ ಸಮಯದೊಳಗೆ ಅವರು ತರಿಸಿಕೊಳ್ಳದಿದ್ದಲ್ಲಿ ಅದನ್ನು ಬೇರೆ ಪ್ರಾಂತ್ಯಗಳಿಗೆ ಕೊಡಲಾಗುವುದೆಂದು ಪ್ರಕಟವಾಗಿರುತ್ತದೆ

ಬಟ್ಟೆಗಳನ್ನು ಹೀಗೆ ಕಂಟ್ರೋಲುಗಳಿಗೊಳಪಡಿಸಿ ಅವನ್ನು ಉಪಯೋಗಿಸುವವರಿಗೆ ಒದಗಿಸುವ ಕಾರ್ಯವನ್ನು ಸಹಕಾರೀ ಸಂಸ್ಥೆಗಳ ಹಾಗೂ ಇತರ ಆರಿಸಲಾಗುವ ವ್ಯಾಪಾರಿಗಳ ಮೂಲಕ ಮಾಡಲಾಗುವುದು

ಯಾವ ಪ್ರಾಂತ್ಯದಲ್ಲಿ, ಯಾ ಪ್ರದೇಶದಲ್ಲಿ ಯಾವ ನಮೂನೆಯ ಬಟ್ಟೆಗಳಿಗೆ ಹೆಚ್ಚಿನ ಗಿರಾಕಿ ಇದೆ ಎಂಬಿತ್ಯಾದಿ ಅಂಶಗಳನ್ನು ತಿಳಿದು ವಿತರಣೆ ಮಾಡಿಸುವುದು ಅಗತ್ಯ ಈ ವಿಷಯದಲ್ಲಿ ಸರಕಾರದವರು ವ್ಯಾಪಾರೀ ವರ್ಗದ ಅನುಭವ ಕೇಳಿ ತಿಳಿದು ಅದನ್ನುಪಯೋಗಿಸಿಕೊಳ್ಳುವುದು ಅಗತ್ಯ

ರೇಶನ್ ಪದ್ಧತಿ ಅಂದರೆ ಕಾರ್ಡುಗಳ ಮೂಲಕ ಬಟ್ಟೆ ವಿತರಣೆ ಜಾರಿ ಮಾಡುವ ಯೋಚನೆ ಇದ್ದಂತೆ ಕಾಣುವುದಿಲ್ಲ ಬರೇ ಕ್ರಯಗಳ ಕಂಟ್ರೋಲು ನಿಂತೀತೆ? ಪುನಃ ಕಳ್ಳಸಂತೆ ಪ್ರಬಲವಾಗುವ ಸಂಭವವಿಲ್ಲವೆನ್ನುವಂತಿಲ್ಲ ಕಂಟ್ರೋಲು ದರಗಳಂತೆ ಬಂದ ಮಾಲುಗಳನ್ನೆಲ್ಲ ಮಾರಾಟಮಾಡಿದಂತೆ ಲೆಕ್ಕ ಬರೆದು ಕಳ್ಳಸಂತೆಗೆ ಸಾಗಿಸಿದರೆ ಗತಿಯೇನು? ಇಂಥವರಿಗೆ ತುಂಬಾ ಶಿಕ್ಷೆ ಕೊಡುತ್ತೇವೆಂದು ಸರಕಾರದವರು ಹೇಳುತ್ತಿದ್ದಾರೆ ಶಿಕ್ಷೆಗೆ ಕಳ್ಳಸಂತೆ ಈ ಮೊದಲು ಹೆದರಿದ್ದುಂಟೆ? ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸ್ವಲ್ಪ "ಕೈಬೆಚ್ಚ" ಮಾಡಿದರೆ ತೀರಿತೆಂದು ಅವರ ಎಣಿಕೆ ಇದ್ದರೆ ಆಶ್ಚರ್ಯವೆನ್ನಿಸುವಂತಿಲ್ಲ

ಹೀಗೆ ಪುನಃ ಕಂಟ್ರೋಲು, ಪುನಃ ಅಧಿಕಾರಿಗಳಿಗೆ ತಪ್ಪು ದಾರಿ ಹಿಡಿಯಲು ಆಸ್ಪದ ಇತ್ಯಾದಿ ಹಿಂದಿನ ಕೆಡುಕುಗಳು ಪುನಃ ತಲೆದೋರುವವೆ?

ಸಕ್ಕರೆಯ ಕಥೆಯೂ ಸ್ವಾರಸ್ಯವಾಗಿದೆ ಸಕ್ಕರೆ ಸಿಂಡಿಕೇಟಿನ ಅಧ್ಯಕ್ಷರು ತಮ್ಮ ಡೈರೆಕ್ಟರರ ಮುಂದೆ ತಾವು ಸಾಧಿಸಿದ ಮಹತ್ಕಾರ್ಯ ವರ್ಣಿಸಿದ್ದಾರೆ ರೂಪಾಯಿ 20ರಿಂದ ರೂ 35ಕ್ಕೆ ಕ್ರಯ ಏರಿಸಲು ಸಂಯುಕ್ತ ಪ್ರಾಂತ್ಯ ಮತ್ತು ಬೀಹಾರ ಸರಕಾರಗಳ ಒಪ್ಪಿಗೆ ಪಡೆಯಲಾಯಿತು ಮುಂದೆ ತಯಾರಾಗುವ ಸಕ್ಕರೆಗೆ ಮಾತ್ರ ಈ ರೀತಿ ಏರಿಸಿದ್ದಲ್ಲ ಆಗ ದಾಸ್ತಾನಿದ್ದ ಎಂಭತ್ತು ಸಾವಿರ ಟನ್ನು ಸಕ್ಕರೆಗೂ ಈ ಹೆಚ್ಚಿದ ಕ್ರಯವನ್ನೇ ವಸೂಲು ಮಾಡಲು ಬಿಡಲಾಯಿತು ಕಬ್ಬು ಬೆಳೆಸುವವರಿಗೆ ರೂಪಾಯಿ 2ರಂತೆ ಕ್ರಯ ಕೊಡುವುದೇ ಕ್ರಯ ಏರಿಕೆಯ ಉದ್ದೇಶವೆಂದಾಗ ಮೊದಲೇ ತಯಾರಾದ ಮಾಲಿಗೂ ಏಕೆ ಕ್ರಯ ಏರಿಸಲಾಯಿತೆ ದು ... ಕೇಳಲಿಲ್ಲ ಕ್ರಯ ಏರಿಸಿದ್ದರಿಂದ ಒಂದು ಲಕ್ಷ ಟನ್ ಸಕ್ಕರೆ ಹೆಚ್ಚು ತಯಾರಾಯಿತೆಂದು ಸಿಂಡಿಕೇಟಿನ ಅಧ್ಯಕ್ಷರು ಅಭಿಮಾನದಿಂದ ಹೇಳಿದರು ಕ್ರಯ ಏರಿಸಿಟ್ಟಾಗ ಅದನ್ನು ಉಪಯೋಗಿಸುವವರಾದರೂ ಎಷ್ಟು ಮಂದಿ ಇದ್ದಾರೆಂಬುದನ್ನು ಅವರು ಎಣಿಸಲಿಲ್ಲ ಕ್ರಯಗಳು ಬೀಳಲಾರಂಭಿಸಿದವು ಮಾಲು ಒದಗಿಸುವುದನ್ನು ತಡಗಟ್ಟಿ ಪುನಃ ಅವನ್ನು ಕೃತಕ ವಿಧಾನಗಳಿಂದ ಏರಿಸಲಾಯಿತು ಪರಿಣಾಮ ಈಗ ಮಾಲು ದಾಸ್ತಾನು ಉಳಿದಿದೆ, ಗಿರಾಕಿ ಇಲ್ಲ ಈ ಸಕ್ಕರೆಯನ್ನೆಲ್ಲ ಪಾಕಿಸ್ಥಾನಕ್ಕೆ ಕಳುಹಿಸಿದರೆ ಗಿರಾಕಿ ಸಿಕ್ಕಬಹುದೆಂದು ಈಗ ಆ ಪ್ರಯತ್ನ ನಡೆಯುತ್ತಿದೆಯಂತೆ ಅಂತೂ ಸಕ್ಕರೆಯ ಕ್ರಯ ಏರಿಸಿಟ್ಟು ಕಾಫಿ ಹೋಟೇಲುಗಳ ಬೆಲ್ಲಕ್ಕೆ ತಾಗುವಂತಾಗಿ ಬಡಜನರು ಬೆಲ್ಲಕ್ಕೆ ವಿಪರೀತ ಕ್ರಯ ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ

ಈ ಸಕ್ಕರೆ ವ್ಯಾಪಾರದಲ್ಲಿ ರೂ 9ರ ದರದ ಸುಂಕ ಹೊರಿಸಿ ಎರಡು ಕೋಟಿ ರೂಪಾಯಿ ಸರಕಾರಗಳಿಗೆ ವಸೂಲಾಯಿತಂತೆ ಇದೆಲ್ಲ ತಮ್ಮ ಪಾಲೆಂದು ಸಂಯುಕ್ತ ಪ್ರಾಂತ್ಯ ಮತ್ತು ಬೀಹಾರಿನ ಸರಕಾರಗಳು ಹೇಳುತ್ತಿವೆಯಂತೆ ಈ ಕೊಳ್ಳೆಯಲ್ಲಿ ತಮಗೂ ಒಂದು ಪಾಲು ಬೇಕೆಂದು ಕೇಂದ್ರ ಸರಕಾರದ ಪರವಾಗಿ ಇಂಡಿಯಾ ಸಕ್ಕರೆ ಕಂಟ್ರೋಲರು ವಾದಿಸುತ್ತಿದ್ದಾರಂತೆ.

ಈ ರೀತಿ ಕ್ರಯಗಳು ಇನ್ನೂ ಏರುತ್ತ ಹೋಗಲು ಕಾರಣವಾದರೂ ಏನೆಂಬುದನ್ನು ಎಲ್ಲಕ್ಕೂ ಮುಖ್ಯ ಪ್ರಶ್ನೆ ಇರುತ್ತದೆ ಯಾವ ಮಾಲುಗಳ ಕ್ರಯಗಳೂ ಕೆಳಕ್ಕೆ ಬರುವುದಲ್ಲ. ಇಂಥ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಗಳ ಕಂಟ್ರೋಲು ಮತ್ತು ರೇಶನುಗಳನ್ನು ತೆಗೆದುಹಾಕುವುದು ಸಾಧ್ಯವಾದೀತೆ ಎಂಬ ಪ್ರಶ್ನೆಯನ್ನು ಸರಿಯಾಗಿ ವಿಚಾರಿಸಬೇಕು ಆಹಾರ ಧಾನ್ಯಗಳನ್ನು ಬೆಳೆಸುವ ಅಥವಾ ಬೆಳೆಸುವ ಒಕ್ಕಲುಗಳಿಂದ ಸುಲಿಯುವ ರೈತವರ್ಗವೇ ಕಂಟ್ರೋಲು ತೆಗೆಯಬೇಕೆಂದು ಒತ್ತಾಯಪಡಿಸುವವರೆಂಬುದು ಸ್ಪಷ್ಟವಿರುತ್ತದೆ ಕಂಟ್ರೋಲು ತೆಗೆದೊಡನೆ ಇವರೂ ಬಟ್ಟೆ ಮತ್ತು ಸಕ್ಕರೆ ಗಿರಣಿ ಮಾಲಿಕರ ಧೋರಣೆಯನ್ನೇ ಅನುಸರಿಸಿ ತಮ್ಮ ಲಾಭ ಹೆಚ್ಚಿಸಲು ಹೊರಟರೆ ಈ ಕಾರ್ಯದಲ್ಲಿ ವ್ಯಾಪಾರೀ ವರ್ಗವೂ ಸಹಕರಿಸಿದರೆ ಬಡ ಜನರು ಸಾಯುವ ಪ್ರಸಂಗ ಬರಬಹುದೆಂಬುದು ಖಂಡಿತವೆಂಬುದರಿಂದ ಈ ಪ್ರಶ್ನೆ ಕೂಲಂಕುಶವಾಗಿ ಪರಿಶೀಲಿಸದೆ ಮುಂದೆ ಸಾಗುವುದು ಹಿತಕರವಲ್ಲವೆಂಬುದೇ ಕಂಟ್ರೋಲು ತೆಗೆದುದರಿಂದ ಆದ ಪರಿಣಾಮಗಳಿಂದ ಕಲಿಯತಕ್ಕ ಒಂದು ಮುಖ್ಯ ಪಾಠವೆನ್ನಬಹುದು

ಪರದೇಶದ ಸಕ್ಕರೆ ಆಮದು ಮಾಡಲು ಬಿಟ್ಟರೆ ಅದೇ ರೀತಿ ಜಪಾನು ಬಟ್ಟೆ ತರಿಸಲು ಬಿಟ್ಟರೆ ಬಟ್ಟೆ ಹಾಗೂ ಸಕ್ಕರೆಗಳ ಕ್ರಯಗಳನ್ನು ಇಳಿಸುವುದು ಸಾಧ್ಯವಿದೆ ಎನ್ನುತ್ತಾರೆ ಈ ಪರಕೀಯ ವ್ಯಾಪಾರಕ್ಕೆ ಬೇಕಾಗುವ ಹಣ ಒದಗಿಸುವುದು ಕಷ್ಟವೆಂಬುದರಿಂದ ಕೇಂದ್ರ ಸರಕಾರ ಆಮದು ನಿಯಂತ್ರಣ ಬಿಗಿದುಹಿಡಿದಿತ್ತೆಂದೂ ಈಗ ಪರಿಸ್ಥಿತಿ ಸುಧಾರಿಸಿದ್ದು ಆಮದುಗಳಿಗೆ ಹೆಚ್ಚಿನ ಆಸ್ಪದ ಕೊಡಬಹುದೆಂದೂ ಹೇಳಲಾಗುತ್ತಿದೆ ಈ ಪ್ರಶ್ನೆಯನ್ನು ಕೇಂದ್ರ ಸರಕಾರವು ಪರಿಶೀಲಿಸುತ್ತಿದೆ

ಊರಲ್ಲಿ ಹಣ ಹೆಚ್ಚು ಮಾಡಿ ಹಾಕಿದ್ದಾರೆ ಮಾಲುಗಳ ಅಭಾವ ನಿವಾರಣೆ ಇನ್ನೂ ಆಗಿಲ್ಲ. ಕ್ರಯಗಳು ಏರಿಕೆಯಲ್ಲಿ ನಿಲ್ಲುವುದು ಆಶ್ಚರ್ಯವಲ್ಲ ಕಂಟ್ರೋಲುಗಳಿಂದ ಈ ವಿಷಮ ಕ್ರಯಗಳ ಸಂಕಷ್ಟ ನಿವಾರಿಸಲು ಹೊರಟರೆ ಪುನಃ ಹಿಂದಿನ ಕಥೆಯ ಪುನರಾವರ್ತನ ಮಾತ್ರವಾದೀತಲ್ಲದೆ ಮತ್ತೇನು ಸಾಧಿಸಲಾದೀತು?

ನಿಜವಾದ ಸ್ವದೇಶೀ ವ್ರತದ ಪ್ರಚಾರ ಈ ಪ್ರಶ್ನೆಯ ಜಟಿಲತೆಯಿಂದ ನಮ್ಮನ್ನು ಬಿಡಿಸಬಹುದೆಂದು ನಮಗನ್ನಿಸುತ್ತದೆ ಪ್ರತಿಯೊಂದು ಪ್ರದೇಶ ಗ್ರಾಮ ವ್ಯಕ್ತಿ ಸಾಧ್ಯವಿದ್ದ ಮಟ್ಟಿಗೆ ತಮ್ಮ ತಮ್ಮ ಆವಶ್ಯಕತೆಗಳನ್ನು ತಾವೇ ಸ್ವಾವಲಂಬನದಿಂದ ಪೂರೈಸಿಕೊಳ್ಳಲು ದೃಢನಿಶ್ಚಯ ಮಾಡಿದರೆ ಇತರರ ಸಹಾಯ ಬೇಕಾದಲ್ಲಿ ಇದ್ದುದರಲ್ಲಿ ಹತ್ತಿರದವರ ಸಹಾಯ ಮಾತ್ರ ಉಪಯೋಗಿಸಿಕೊಂಡರೆ ಕ್ರಯಗಳ ಪ್ರಶ್ನೆ ತಾನಾಗಿ ತೀರ್ಮಾನ ಹೊಂದುವುದು ಉದಾಹರಣೆಗೆ ಒಂದು ಗ್ರಾಮದವರು ತಮ್ಮ ಬಟ್ಟೆಯೆಲ್ಲವನ್ನು ತಾವೇ ಒದಗಿಸಿಕೊಂಡರೆ ಗಿರಣಿಯವರ ಆಟ ಎಲ್ಲಿ ನಡೆದೀತು? ಅನ್ನ ಬಟ್ಟೆಗಳ ಮಟ್ಟಿಗೆ ನಮ್ಮ ಆವಶ್ಯಕತೆಯನ್ನು ನಾವೇ ಪೂರೈಸಿಕೊಂಡರೆ ಮಾತ್ರ ಈ ರಗಳೆ ತಪ್ಪೀತಲ್ಲದೆ ಬೇರೆ ದಾರಿಗಳಿಂದ ಈ ಪ್ರಶ್ನೆ ಇನ್ನೂ ಅನ್ನೂ ಜಟಿಲವಾಗುತ್ತ ಹೋಗಿ ಪ್ರಜಾ ಕ್ಷೋಭೆ ತಪ್ಪುವ ಲಕ್ಷಣ ಕಾಣುವುದಿಲ್ಲ.

ವಾರದ ವಿಜ್ಞಾನ ವರದಿ

ಆಹಾರದ ಕುರಿತಾದ ಮೂಢ ನಂಬಿಕೆಗಳು

ಮಿತವಾಗಿ ತಿನ್ನುವುದೇ ಆರೋಗ್ಯ ವಿಧಾನ

"ಆಹಾರ ಪ್ರಮಾಣದ ಕುರಿತು ಸಂಶಯಗ್ರಸ್ತರಾಗಿರುವುದೇ ಆರೋಗ್ಯವಂತರಾಗಿರಲು ಒಂದು ದಾರಿ." ಹೀಗೆಂದು ಅಮೇರಿಕದ ಬಫೆಲೊ ವಿಶ್ವವಿದ್ಯಾಲಯದ ಶರೀರಶಾಸ್ತ್ರಜ್ಞರಾದ ಪ್ರೊ। ಸ್ಲ್ಪ್ಯ ಅವರು ತಿಳಿಸುತ್ತಾರೆ

"ಈಗ ನಾವು ಆಹಾರದ ವಿಚಾರವಾಗಿ ಕೇಳುವಂತಹ ಅನೇಕ ಸಂಖ್ಯೆ ಸಂಗತಿಗಳೆಲ್ಲ ಅಸತ್ಯವವೂ, ಕೇವಲ ಕಲ್ಪನಾಮಯವೂ ಆದವುಗಳು" ಹೀಗೆಂದವರು ಟೀಕಿಸುತ್ತಾರೆ ಮತ್ತೂ ಅವರು ತಿಳಿಸುವುದೇನೆಂದರೆ

ಜನರು ತಮಗೆ ಆಹಾರದ ಕುರಿತು ಹೆಚ್ಚು ವಿಷಯಗಳು ತಿಳಿದಿವೆಂದು ನೆನಸುತ್ತಾರಾದರೂ ನಿಜವಾಗಿ ನೋಡ ಹೋದರೆ ಅವರಿಗೆ ಅವಶ್ಯ ತಿಳಿಯಬೇಕಾದ ಎಷ್ಟೋ ಸಂಗತಿಗಳನ್ನು ತಿಳಿದಿಲ್ಲ

ಕೆಲವು ಸಂಗತಿಗಳು ತೀರ ಶುದ್ಧ ಅವಿಚಾರದವು, ಉದಾ ಒಂದು ಸಲ ಊಟ ಮಾಡುವಾಗ ಯಾವುದಾದರೂ ಒಂದೇ ಆಹಾರವನ್ನು ಭುಂಜಿಸಬೇಕು, ಆದಷ್ಟು ಹೆಚ್ಚಾಗಿ ಹಸಿ ವಸ್ತುಗಳನ್ನೇ ತಿನ್ನಬೇಕು, ನೀರುಳ್ಳಿಯಲ್ಲಿ ಪಿತ್ತಕೋಶಕ್ಕೆ ಒಳಿತನ್ನುಂಟುಮಾಡುವ ಔಷಧಿ ಸತ್ವವಿದೆ, ಬೆಳ್ಳುಳ್ಳಿಯಲ್ಲಿ ನರ ನಿರ್ಬಲತೆಯನ್ನು ಹೋಗಲಾಡಿಸುವ ಶಕ್ತಿಯಿದೆ ಅಲ್ಲದೆ, ಮಿದುಳಿನ ಆಹಾರ, ಕರುಳಿನ ಆಹಾರ, ಚರ್ಮದ ಆಹಾರ, ಕಣ್ಣು ಆಹಾರ, ಮಾತ್ರವಲ್ಲ ಮುಂದೆ ಹುಟ್ಟಲಿರುವ ಮಗುವಿನ ಲೈಂಗಿಕ ರೂಪವನ್ನು ಬದಲಾಯಿಸುವ ಆಹಾರ ಇದೆಲ್ಲ ಅವಿಚಾರದ್ದೂ ಹಾಸ್ಯಾಸ್ಪದವೂ ಆದ ಪೊಳ್ಳು ಹರಟೆ

ಹದಮಿಕ್ಕಿದ ಭಾರ

ಬೊಜ್ಜು ಬೆಳೆಯುವುದು ಹದ ಮೀರಿದ ತಿನ್ನುವಿಕೆ ಮತ್ತು ಉತ್ತಮ ಜೀರ್ಣ ಶಕ್ತಿಯ ಪರಿಣಾಮವಾಗಿದೆ ಇದನ್ನು ಶೀಘ್ರದಲ್ಲಿ ತಡಗಟ್ಟಬೇಕಾಗುವುದು ಹಾಗೆ ಮಾಡದಿದ್ದರೆ ಮತ್ತೆ ತನ್ನಷ್ಟಕ್ಕೆ ಆ ಪರಿಸ್ಥಿತಿ ಬಂದೊದಗುವುದು

ಬಾಹ್ಯ ಲೇಪನಗಳಿಂದೇನೂ ಪ್ರಯೋಜನವಿಲ್ಲ ವ್ಯಾಯಾಮದಿಂದ ಹಸಿವನ್ನು ಹೆಚ್ಚಿಸಬಹುದು, ಭಾರವನ್ನು ಹೆಚ್ಚಿಸಬಹುದು ... ತಿಕ್ಕಿಸಿಕೊಳ್ಳುವುದು ನಿಷ್ಪ್ರಯೋಜನ, ಮತ್ತು ಚೈತನ್ಯವ್ಯಯ ಎಲ್ಲಾ ತರದ ತಾತ್ಕಾಲಿಕ ಶಮನಗಳು ಅಪಾಯಕಾರಕವಾದವು

ಸರ್ವಸಾಮಾನ್ಯವಾದ ಉತ್ತಮ ಆರೋಗ್ಯಸ್ಥಿತಿಯಲ್ಲಿರುವುದಕ್ಕೆ ಪ್ರತಿಯೊಂದು ಆಹಾರವನ್ನು ಕಮ್ಮಿ ಪ್ರಮಾಣದಲ್ಲಿ ಸೇವಿಸುವುದೇ ಮಾರ್ಗ.

ಜಿಲ್ಲಾ ಸಮಾಚಾರ

ದುರ್ಮರಣ

ಗಣಪತಿ ದೇವಸ್ಥಾನದ ರಸ್ತೆಯಲ್ಲಿನ ಶ್ರೀ ಲಕ್ಷ್ಮೀ ವೆಂಕಟರಮಣ ಮಠದ ಹಿಂದಿನ ಬಾವಿಯಲ್ಲಿ ಕಳೆದ ಶನಿವಾರದಂದು ಟೈಲರ್ ಒಬ್ಬನ ಕೆಲಸಗಾರನು ಆಕಸ್ಮಾತ್ತಾಗಿ ಬಿದ್ದನೆಂದು ತಿಳಿದುಬರುತ್ತದೆ. ಬಾವಿಯ ಹೊರಗಿನ ಅದರ ಸುತ್ತು ಗೋಡೆಗೆ ತಗಲಿ ಒಂದು ಏಣಿಯನ್ನಿಟ್ಟು ಅದರಲ್ಲಿ ನಿಂತು ಕೆಳಗೆ ಬಗ್ಗಿ ಬಾವಿಯ ಸುತ್ತುಮುತ್ತಲಿನ ಗಿಡ ಹೂದರುಗಳನ್ನು ಕಡಿಯುತ್ತಿದ್ದಾಗ ಏಣಿ ಬುಡ ತಪ್ಪಿ ಜಾರಿದರ ಪರಿಣಾಮವಾಗಿ ಅವನು ನೇರವಾಗಿ ನೀರಡಿಗೆ ಬಿದ್ದು ಮೃತಹೊಂದಿದ್ದನಂತೆ. ಕ್ರಮಪ್ರಕಾರದ ಪೋಲೀಸ್ ತನಿಖೆ, ಶವಪರೀಕ್ಷೆಗಳು ನಡೆದಿದೆ.

ಸತ್ಕಾರಕೂಟ

ಐದು ವರ್ಷಗಳಿಂದ ನಮ್ಮ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದು ಈಚೆಗೆ ನಿವೃತ್ತರಾದ ಶ್ರೀ ಎನ್. ಸುಬ್ಬರಾವ್ ಇವರನ್ನು ಸನ್ಮಾನಿಸಲು ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಅಲ್ಲಿನ ಉಪಾಧ್ಯಾಯ ಸಂಘದವರು ಒಂದು ಸತ್ಕಾರಕೂಟ ವನ್ನೇರ್ಪಡಿಸಿದ್ದರು. ಲಘುಫಲಾಹಾರದ ನಂತರ ಅಂದಿನ ಸನ್ಮಾನ ಅತಿಥಿಗಳು ಜಿಲ್ಲೆಯ ಶಿಕ್ಷಣಾಭಿವೃದ್ಧಿಗೆ ತಮ್ಮ ಅಧಿಕಾರ ಅವಧಿಯಲ್ಲೂ ಅದರ ಮುಂಚೆಯೂ ಮಾಡಿದ ಚಿರಸ್ಮರಣೀಯ ಸೇವೆಯ ಕುರಿತು ಕೆನರಾ ಶಾಲೆಗಳ ಮುಖ್ಯೋಪಾಧ್ಯಾಯರೂ, ಮೆನೇಜರರೂ ಅಲ್ಲದೆ ಇತರರೂ ಶ್ಲಾಘಿಸಿ ಭಾಷಣ ಮಾಡಿದರು. ಕೆನರಾ ಶಾಲೆಯ ಹಳೆಯ ವಿದ್ಯಾರ್ಥಿಗಳೂ, ಜಿಲ್ಲೆಯವರೇ ಆದ ಪ್ರಥಮ ಜಿಲ್ಲಾ ಶಿಕ್ಷಣಾಧಿಕಾರಿಗಳೂ ಆದ ಅವರ ನಿಷ್ಪಕ್ಷಪಾತದ ಮತ್ತು ಸೇವಾತತ್ಪರತೆಯ ಗುಣಶೀಲಗಳಿಗೆ ಅಪೂರ್ವ ಆಭಾರ ಮನ್ನಿಸಲಾಯಿತು. ಶ್ರೀ ಸುಬ್ಬರಾಯರು ಸಭಾಂತ್ಯದಲ್ಲಿ ಸಂದರ್ಭೋಚಿತ ಉತ್ತರವನ್ನಿತ್ತು ಮುಂದೆಯೂ ತಮ್ಮ ಕಿಂಚಿತ್ ಸೇವೆ ಸಲ್ಲಿಸಲು ಪ್ರಯತ್ನಿಸುವರೆಂದರು.

ಹವಾಮಾನ

ಮಳೆಗಾಲದ ಕಾರ್ಗಲ್ಲು ಮೋಡದ ದಿನಗಳು ಕಳೆದಂತೆ ತೋರುತ್ತದೆ. ದಿನದ ಅಧಿಕ ಅವಧಿಯಲ್ಲಿ ಮಳೆ ಬೀಳುವುದಾದರೂ ಮಧ್ಯ ಮಧ್ಯದಲ್ಲಿ ಬೆಚ್ಚನೆಯ ಬಿಸಿಲೂ ಕಾಣಿಸಿಕೊಳ್ಳುವುದು. ನಗರದಲ್ಲಿ ಮಾರ್ಗದುರಸ್ತಿಯ ಕೆಲಸವೂ ಸಾಗುತ್ತಿದೆ. ಕೆಲವು ಕಡೆಗಳಲ್ಲಿ ಜರಿದು ಬಿದ್ದ ತೋಡು, ಮಾರ್ಗದ ಬದಿಗಳಲ್ಲದೆ ಹೊಂಡಕಲ್ಲುಗಳನ್ನು ಬಿಟ್ಟಲ್ಲಿಯೂ ದುರುಸ್ತಿ ನಡೆದಿದೆ.

ವರ್ಷಾವಧಿ ಸಭೆ

ಅತ್ತಾವರ ಶ್ರೀಕೃಷ್ಣ ಜಯಂತ್ಯುತ್ಸವ ಸಮಿತಿಯ ವರ್ಷಾವಧಿ ಸಭೆಯು ಕಳೆದ ತಾ. ೨೫-೭-೪೮ರಲ್ಲು ಅತ್ತಾವರ ಶ್ರೀ ಅರಸು ಮುಂಡತ್ತಾಯ ದೇವಸ್ಥಾನದ ಹೌಳಿಯಲ್ಲಿ ಜರಗಿ ಚಾಲ್ತಿ ವರ್ಷದ ಕಾರ್ಯಕಾರಿ ಮಂಡಳಿಯನ್ನು ಚುನಾಯಿಸಿತು. ಶ್ರೀ ಎ. ಚಂದಪ್ಪ ಗುರಿಕಾರ್—ಅಧ್ಯಕ್ಷ, ಶ್ರೀ ಪಿ. ಎಂ. ಶಾಲಿವಾಹನ್—ಕಾರ್ಯದರ್ಶಿಗಳಾಗಿ ಚುನಾಯಿಸಿ ಬಂದಿರುವರು. ವರ್ಷಾವಧಿ ಶ್ರೀಕೃಷ್ಣಜಯಂತ್ಯೋತ್ಸವ ಯಾನೆ ಮೊಸರುಕುಡಿಕೆ ಹಬ್ಬವು ಇದೇ ಬರುವ ಆಗೋಸ್ತು ತಾ. ೨೮ರಲ್ಲು ನಡೆಯಲಿದೆ.

ಸಂತಾಪ ಸೂಚಕಸಭೆ

ಕೆನರಾ ಹೈಸ್ಕೂಲಿನ ಹಳೇವಿದ್ಯಾರ್ಥಿಸಂಘದ ನೇತೃತ್ವದಲ್ಲಿ, ದಿವಂಗತ ಅಮ್ಮೆಂಬಳ ಶ್ರೀನಿವಾಸ ಪೈಗಳವರ ನಿಧನದ ಕುರಿತು ಆಗೋಸ್ತು ೧ನೇ ಆದಿತ್ಯವಾರ ಸಂಜೆ ೫ ಗಂಟೆಗೆ ಸಂತಾಪ ಸೂಚಕಸಭೆಯು ಕೆನರಾ ಹೈಸ್ಕೂಲಿನಲ್ಲಿ ಜರಗಿತು.

ಶರಾಬು ಪತ್ತೆ

ಕಾವೂರು ಗ್ರಾಮದ ಕೀಸೆಗುಳಿ ಎಂಬಲ್ಲಿ ಕಳೆದ ತಾ. ೨೭-೭-೪೮ರಲ್ಲು ಬೆಳಿಗ್ಗೆ ಸುಬ್ಬ ಪೂಜಾರಿ ಎಂಬವನಲ್ಲಿ ಕಳ್ಳಭಟ್ಟಿಯಿಂದ ಮಾಡಿದ ಶರಾಬು ಬಾಟ್ಲಿ ೬ ಹಾಗು ಒಂದು ಮಣ್ಣಿನ ಪಾತ್ರೆಯಲ್ಲಿ ಕಂಡೆನ್ಸರ್ ಕೂಡಾ ಪತ್ತೆಹಚ್ಚಿದವರು ಪ್ರೊಹಿಬಿಶನ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸಿ. ಕರುಣಾಕರ್, ಪೆಟ್ಟಿ ಆಫೀಸರ್ ಮತ್ತು ಗಾರ್ಡ್ಸ್‌ನವರು ಜೊತೆಗೂಡಿ ಆಗಿರುತ್ತದೆ. ಸುಬ್ಬಪೂಜಾರಿಯು ಶರಾಬನ್ನು ಸ್ನಾನಗೃಹದಲ್ಲಿ ಅಡಗಿಸಿಟ್ಟಿದ್ದ. ಪ್ರೊಹಿಬಿಶನ್ ಸಿಬಂದಿಯವರು ತನ್ನಲ್ಲಿಗೆ ಬರುವುದನ್ನು ದೂರದಿಂದ ನೋಡಿ, ನೆಟ್ಟಗೆ ಬಚ್ಚಲುಕೋಣೆಯತ್ತ ಕಡೆ ತೆರಳುವಾಗ, ಇನ್ಸ್‌ಪೆಕ್ಟರರಿಗೆ ಸಂದೇಹ ಕಂಡುಬಂದು, ಕೂಡಲೇ ಅವನಿಗೆ ಮುತ್ತಿಗೆಹಾಕಿ, ಕಳ್ಳಭಟ್ಟಿಯ ಶರಾಬನ್ನು ಪತ್ತೆ ಹಚ್ಚಲಾಯಿತು.

ಅದೇ ದಿನ ರಾತ್ರಿ ಸುಮಾರು ೮-೩೦ ಗಂಟೆಯ ಸಮಯಕ್ಕೆ ಪದವು ಗ್ರಾಮದ ಬಾಬುನ್ಯೋಲಿ ಎಂಬಾತನು ಶರಾಬು ಕುಡಿದು ರಸ್ತೆಯಲ್ಲಿ ಅಮಲುಖೋರನಾಗಿ ನಿಂತುದನ್ನು, ಡ್ಯೂಟಿಯ ಮೇಲೆ ಅತ್ತ ತೆರಳಿದ ಪ್ರೊಹಿಬಿಶನ್ ಗಾರ್ಡ್ ನಂಬ್ರ ೧೪೬ನೇ ವಿ. ಸಿ. ಗೋವಿಂದ ಮತ್ತು ೧೯೬ನೇ ಎಂ. ಕೃಷ್ಣನಂಬಿಯರ್ ಇವರು ಹಿಡಿದು ಸೆರೆಮನೆಗೊಯ್ದರು. ತಾ. ೨೩-೭-೪೮ರಲ್ಲು ಸ್ಥಳೀಯ ವೆಬ್‌ಸ್ಟರ್ ಮಾರ್ಕೆಟ್ಟಿನ ಬಳಿ ಎ. ಮಮ್ಮುಬ್ಯಾರಿ ಎಂಬಾತನು ಶರಾಬು ಕುಡಿದು ಅಮಲುಖೋರನಾಗಿದ್ದು ಜನರಲ್ ಡ್ಯೂಟಿಯಲ್ಲಿದ್ದ ಪ್ರೊಹಿಬಿಶನ್ ಆಫೀಸರರು ಮತ್ತು ಗಾರ್ಡ್ಸ್ ಕಂಡು ಅವನನ್ನು ಕೈದು ಮಾಡಿದರು.

ತಾ. ೨೫-೭-೪೮ರಲ್ಲಿ ಪಾಂಡೇಶ್ವರದಲ್ಲಿರುವ ಡೆಂಟಿಸ್ಟ್ ಮಿ। ಕೊಸ್ವಾರವರ ಮನೆಯಲ್ಲಿ ನಂಬ್ರ ೧ನೇ ಮೆಡಿಕಲ್ ಬ್ರಾಂಡಿ ಬಾಟ್ಲಿ ೧ನ್ನು ಪ್ರೊಹಿಬಿಶನ್ ಸಿಬಂದಿಯವರು ಕಂಡು ಹಿಡಿದರೆಂದು ತಿಳಿಯಲಾಗಿದೆ.

ಅಲ್ಲಿ ಗ್ರಾಮದ ಕೊವಿಲ್ಲ ಕೋಬ ಇವರ ವಶ ೧॥ ಡ್ರಾಂ ತಾಳೆ ಶರಾಬ್ ಇತ್ತೆಂದು ನಮ್ಮ ಸ್ಪೆ॥ ಸ॥ ಮೆಜಿಸ್ಟ್ರೇಟರು ರೂ. ೪೦ರ ಜುಲ್ಮಾನೆ ವಿಧಿಸಿದರು.

ನಮ್ಮ ಜಿಲ್ಲಾ ಕಲೆಕ್ಟರರಿಗೆ ಪರ್ಸನಲ್ ಅಸಿಸ್ಟೆಂಟರು

ಮೇಲ್ಕಂಡ ಸ್ಥಾನಕ್ಕೆ ನೇಮಿಸಲ್ಪಟ್ಟಿದ್ದ ಶ್ರೀ ಎಸ್. ವೆಂಕಟಾಚಲಂ ನಾಯ್ಡು, ಬಿ.ಎ. ಅವರು ಈಚೆಗೆ ಆ ತಮ್ಮ ಚಾರ್ಜು ವಹಿಸಿಕೊಂಡಿರುತ್ತಾರೆ. ಅವರು ಎಡಿಶನಲ್ ಜಿಲ್ಲಾ ಮೆಜಿಸ್ಟ್ರೇಟರೂ ಆಗಿರುತ್ತಾರೆ.

ರೇಶನ್ ವಿಧಿಗಳ ಉಲ್ಲಂಘನೆ ದಂಡನೆ

ನಮ್ಮ ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಜನಾಬ್ ಎಸ್. ಅಬ್ದುಲ್ ರಹಮಾನ್ ಸಾಹೇಬ್ ಬಹದೂರ್ ಅವರು ಮೇಲ್ಕಂಡ ವಿಧಿಗಳಿಗೆ ಸಂಬಂಧಿಸಿದ ಈ ಕೆಳಗಿನ ಮೊಕದ್ದಮೆಗಳ ತನಿಖೆ ನಡೆಸಿ ವಿಧಿಸಿದ ದಂಡನೆ ಹೀಗಿದೆ:—

ಬಿಜೈಯ ಜೋನ್ ಸೋಜ ಮತ್ತು ಅಚ್ಚಪ್ಪ ಇವರು ಒಂದು ಗಾಡಿಯಲ್ಲಿ ೩ ಮುಡಿ ಅಕ್ಕಿಯನ್ನು ಹುಲ್ಲಿನಲ್ಲಿ ಅಡಗಿಸಿಟ್ಟು ತಂದರೆಂಬ ಆರೋಪಕ್ಕಾಗಿ ಅವರಲ್ಲಿ ಪ್ರತಿಯೊಬ್ಬರಿಗೆ ಜುಲ್ಮಾನೆ ರೂ. ೩೦ರಂತೆ; ಮನೆಯಲ್ಲಿ ಗೈರು ಹಾಜರಾದ ಮೆಂಬರರ ವಿಚಾರ ತಿಳಿಸದೆ ಅವರ ಬಗ್ಗೆ ರೇಶನ್ ತೆಗೆದುಕೊಂಡ ಆರೋಪಗಳಿಗಾಗಿ ಕೂಳೂರಿನ ಆಲ್ಬರ್ಟ ಸೋಜನಿಗೆ ರೂ. ೨೦; ಬೆಂಗರೆ ಮೋನಯ್ಯ ಕರುಣಾಕರನಿಗೆ ರೂ. ೨೦; ಪೆರಮನ್ನೂರು ಅಚ್ಯುತ ಮೇಸ್ತ್ರಿಗೆ ರೂ. ೨೦ ಜುಲ್ಮಾನೆ; ಉಳ್ಳಾಲದ ಸುಬ್ಬಗಟ್ಟಿ ಸ್ಟಾಕಿನ ವಿವರ ತಿಳಿಸದೆಯೂ, ಸ್ಟೋರಿಗೆ ಅಕ್ಕಿ ಒಪ್ಪಿಸದೆಯೂ ಇರುವ ಆರೋಪಕ್ಕಾಗಿ ರೂ. ೬೦; ಪೆರಮನ್ನೂರು ಜೊಸೆಫೈನ್ ಡಿಸೋಜಾ ಸ್ಟಾಕನ್ನು ಸ್ಟೋರಿಗೊಪ್ಪಿಸದೆ ಇರುವ ಆರೋಪಕ್ಕಾಗಿ ರೂ. ೨೫ ಜುಲ್ಮಾನೆ.

ಸೈಕಲ್ ಕಳವು—ಆರೋಪಿಗೆ ಬಿಡುಗಡೆ

ಸ್ಥಳೀಯ ಇಂಪೀರಿಯಲ್ ಬೇಂಕಿನ ವಠಾರದಲ್ಲಿ ಬ್ರೂಕ್ ಬಾಂಡ್ ಟೀ ಕಂಪೆನಿಯ ಏಜೆಂಟ ಶ್ರೀ ಕೆ. ರಾಮಚಂದ್ರರಾಯರು ಇರಿಸಿದ ಒಂದು ಸೈಕಲನ್ನು ಮಂಗಳೂರಿನ ಕೆ. ಡಿ. ಶಂಕರ ಸೇಟ್ ಕದ್ದನೆಂಬ ಆರೋಪದ ಮೊಕದ್ದಮೆಯ ತನಿಖೆ ನಮ್ಮ ಪ್ರಿನ್ಸಿಪಲ್ ಜಡ್ಜರಾದ ಶ್ರೀ ನರಸಿಂಹುಲು ಅವರ ಕೋರ್ಟಿನಲ್ಲಿ ನಡೆದು ಆರೋಪಿಗೆ ಬಿಡುಗಡೆಯಾಯಿತು.

ಆರೋಪಿ ಕಳವು ಮಾಡಿದ ಈ ಹೆಚ್ಚು ಬೆಲೆಯ ಸೈಕಲನ್ನು ಕದ್ರಿ ಸಾಧಕಾಶ್ರಮದ ಬಳಿ ಕೈಬಿಟ್ಟು ಕಡಿಮೆ ಬೆಲೆಯ ಅದರ ಡೈನೆಮೊ ದೀಪವನ್ನು ಅವನು ಮಾರಿದನೆಂಬುದು ಅಸ್ವಾಭಾವಿಕವೆಂದು,—ಜ್ಯೂರಿಯವರ ಅಭಿಪ್ರಾಯವೂ ಆರೋಪಿ ದೋಷಿಯಲ್ಲವೆಂದಿತ್ತು. ಜಡ್ಜರು ಮೇಲ್ಕಂಡ ತೀರ್ಪು ಕೊಟ್ಟರು. ಪ್ರೊಸಿಕ್ಯೂಶನಿನ ಪರ ಶ್ರೀ ಕೆ. ಜಿ. ಗೋವಿಂದ ಭಟ್ಟರೂ, ಡಿಫೆನ್ಸ್ ಪರ, ಶ್ರೀ ಎಂ. ಪಿ. ಶೆಣೈಗಳೂ ವಾದಿಸಿದರು.

ಕೃ। ಸ। ಮಾ। ಸಂಘದ ಮಹಾಸಭೆ—ಪುತ್ತೂರು

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘದ ವಾರ್ಷಿಕ ಮಹಾಸಭೆ ಈಚೆಗೆ ಪುತ್ತೂರು ಸಹಕಾರಿ ಕಟ್ಟಡದಲ್ಲಿ ಶ್ರೀ ಬೈಂದೂರು ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದಿನ ವರ್ಷದ ವರದಿಯನ್ನೂ ಮುಂದಿನ ವರ್ಷದ ಖರ್ಚಿನ ಅಂದಾಜು ಪಟ್ಟಿಯನ್ನೂ ಮಂಜೂರು ಮಾಡಿದ ನಂತರ ಮುಂದಿನ ವರ್ಷಕ್ಕೆ ಈ ಕೆಳಗಿನವರನ್ನು ಆಡಳಿತ ಮಂಡಳಿಗೆ ಚುನಾಯಿಸಲಾಯಿತು.

ಶ್ರೀಗಳಾದ ಬಿ. ಪ್ರಭಾಕರ ರಾವ್, ಮೊಳಹಳ್ಳಿ ಶಿವರಾವ್, ಜಿ. ಕೆ. ಗೋವಿಂದ ಭಟ್ಟ, ಎಂ. ಎನ್. ಭೀಡೆ, ನಗ್ರಿಮೂಲೆ ಶಂಕರ ಭಟ್ಟ, ಎಸ್. ಆರ್. ಕೋಟೆ, ಕೆ. ವೆಂಕಪ್ಪಯ್ಯ, ಎನ್. ಎ. ಕೊಳತ್ತಾಯ, ಪೆರ್ಡಾಲ್ ಕಷ್ಣಯ್ಯ, ಎಂ. ಬೆಳ್ಳಪ್ಪ ಗೌಡ, ಬಚ್ಚ ಮರಕಲ್, ಬೈಲೂರು ರಾಮರಾವ್.

ನಂತರ ಶ್ರೀ ಎಂ. ಶಿವರಾಯರು ಸಂಘದ ವಿಷಯ ಮಾತನಾಡಿ ಜನರು ಹೆಚ್ಚಾಗಿ ಸಹಕರಿಸಬೇಕೆಂದು ಕೇಳಿಕೊಂಡರು. ಶ್ರೀ ಪಿ. ಎಸ್. ಶಾಸ್ತ್ರಿಗಳವರು ಮೆಂಬರರಿಗೂ, ನಿವೃತ್ತರಾದ ಆಡಳಿತ ಮಂಡಳಿಯ ಮೆಂಬರರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಲಘು ಉಪಹಾರದ ನಂತರ ಸಭೆಯು ಮುಕ್ತಾಯವಾಯಿತು.

ಜುಗಾರಾಡಿದ ಆರೋಪ—ಜುಲ್ಮಾನೆ

ಬಜಾಲಿನ ಬಾಬು ಸೆಟ್ಟಿ ಮೊದಲಾದ ೧೯ ಮಂದಿ ತಾ. ೨೧-೩-೪೮ರಲ್ಲಿ ಒಂದು ದಶಾವತಾರದ ಆಟದ ಸಮಯ ಜುಗಾರಾಡಿದರೆಂಬ ಆರೋಪದ ಮೇಲೆ ಅವರಲ್ಲಿ ಪ್ರತಿಯೊಬ್ಬರಿಗೆ ರೂ. ೫ರ ಜುಲ್ಮಾನೆ; ಅಥವಾ ಒಂದು ವಾರ ಕಠಿಣ ಸಜೆ. ಪ್ರೊಸಿಕ್ಯೂಶನಿನ ಪರ ಪ್ರೊ॥ ಸ॥ ಇನಸ್ಪೆಕ್ಟರ್ ಮಿ। ಪಿ. ಎಂ. ಡಿಸೋಜರೂ, ಡಿಫೆನ್ಸ್‌ಪರ ಶ್ರೀ ಪ್ರಹ್ಲಾದ ಹೆಗ್ಗಡೆಯವರೂ ವಾದಿಸಿದ್ದರು.

I ಕ್ಲಾಸ್ ಅ। ಬೆಂಚ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ

ಜೆಪ್ಪಿನ ಬಿ. ಪಿ. ಸೀತಾರಾಮ ಮತ್ತು ನಾರಾಯಣ ಬೆಲ್ಚಡ ಇವರು ಕಾನೂನಿಗೆ ವಿರೋಧವಾಗಿ ಅಧಿಕಾರಿಗಳನ್ನು ತಡೆಗಟ್ಟಿದ ಆರೋಪಕ್ಕಾಗಿ ಅವರಲ್ಲಿ ಪ್ರತಿಯೊಬ್ಬನಿಗೆ ರೂಪಾಯಿ ೧೦ರ ಜುಲ್ಮಾನೆ ಅಥವಾ ಒಂದು ವಾರದ ಸಾದಾ ಸಜೆ.

ಪಡಿಲ್ (ದರ್ಜಿ) ಗುರುವಪ್ಪ (ಕಮ್ಯೂನಿಸ್ಟ್) ತಾ. ೧೨-೧೧-೪೭ರಲ್ಲಿ ಮತ್ತು ೧೩-೧೧-೪೭ರಲ್ಲಿ ಕುಲಶೇಖರದ ಗೇರುಬೀಜ ಕಾರ್ಖಾನೆಗೆ ಹೋಗುತ್ತಿದ್ದ ಹೆಂಗಸರಿಗೆ ಉಪದ್ರವಿಸಿದ ಆರೋಪದ ಸಂಬಂಧ ರೂ. ೧೦ ಮತ್ತು ೫೦ ಜುಲ್ಮಾನೆ ತೆರದ ಸಂಬಂಧ ಅವನು ಬಟ್ಟು ೪ ದಿನದ ಕಠಿಣ ಸಜೆಯನ್ನು ಅನುಭವಿಸುತ್ತಿದ್ದಾನೆ. ಪ್ರೊ। ಸಬ್ ಇನಸ್ಪೆಕ್ಟರ್ ಮಿ। ಪಿ. ಎಫ್. ಎಕ್ಸ್. ಸಾಲ್ಡಾನಾ ಇವರು ಈ ಮೊಕದ್ದಮೆಯ ಪ್ರೊಸಿಕ್ಯೂಶನ್ ನಡೆಸಿದರು.

ಬಿ. ನಾರಾಯಣ ಜೋಟ ಮತ್ತು ೧೯ ಮಂದಿ ಇತರರು ಮಂಗಳೂರು ರೈಲ್ವೆ ಲ್ಯಾನನ್ನು ಆ ಆಕ್ಟಿಗೆ ವಿರೋಧವಾಗಿ ದಾಟಿದ ಸಂಬಂಧ ಅವರಲ್ಲಿ ಪ್ರತಿಯೊಬ್ಬರಿಗೆ ರೂಪಾಯಿ ಎರಡರಂತೆ ಜುಲ್ಮಾನೆ ಮಾಡಲಾಗಿದೆ.

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿ

ಮಂಗಳೂರು ಶಾಖೆ

ಈ ಶಾಖೆಯ ಮುಖಾಂತ್ರ ತಾ. 31-7-48 ರವರೆಗೆ ರೂಪಾಯಿ 7514-5-4 ಧನ ಸಂಗ್ರಹವಾಗಿರುತ್ತದೆ.

WANTED

Applications are invited for appointment on probation as Inspector under S. P. C. A., Mangalore from candidates duly qualified to serve as Inspectors.

For salary and terms of employment apply to—

The Secretary,
S.P.C.A., Mangalore.

NOTICE

In the Court of the Small Cause Judge, Mangalore

S. C. 178 of 1948

Between

Basel Mission Book Depot by Manager Mr. Benedict Heri —*Plaintiff*

and

Atlas Stationery Mart —*Defendant.*

To

The Defendant-Atlas Stationery Mart by Manager Mr. T. P. Ramanathan, Janmabhumi Chambers, Fort St., Ballard Estate, Bombay 1.

Take notice that the Plaintiff has on 26-8-1948 filed the above suit against you for recovery of Rs. 254-13-6 being the amount received by you towards a consignment of goods which however were not delivered to Plaintiff and further interest and costs of suit and that the said suit is posted for hearing to 16-8-1948 at 11 a.m. in the above Court. You may appear in person or by Vakil and contest the same on the said date failing which it will be heard and decided in your absence.

(By Order of Court)

M. Keshava Pai,
Counsel for Plaintiff.

Mangalore, 31-7-48.

ಮನುಷ್ಯರು ಆಹಾರ ಮಾತ್ರೆ ಸೇವಿಸಿ ಬದುಕಬಹುದೆ?

ಬ್ರಿಟನಿನಲ್ಲಿ ಕೆಲವು ಪ್ರಯೋಗಗಳು

ಸದ್ಯದಲ್ಲಿ ಕೆಲ ಬ್ರಿಟಿಷ್ ವಿದ್ಯಾರ್ಥಿಗಳು ಐದು ದಿನದ ಆಟವಾರದ ಕಾರ್ಯಕ್ರಮವೊಂದನ್ನು ಪರಿಪೂರ್ಣ ಮಾಡಲಿದ್ದಾರೆ– ಈ ಅವಧಿಯಲ್ಲವರು ಯಾವ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ, ಆದರ ಬದಲಿಗೆ ಅವರು ದಿನಂಪ್ರತಿ ಆರು ಚಿಕ್ಕ 'ಆಹಾರ ಮಾತ್ರೆ'ಗಳನ್ನು ತಿನ್ನುವರು ವೈದ್ಯತಜ್ಞರ ತಂಡವೊಂದು ಅವರ ಚಟುವಟಿಕೆಗಳನ್ನು, ಶಾರೀರಿಕ ಮಾನಸೀಕ ಶಕ್ತಿಯ ಪರಿಳಿತಗಳನ್ನು ದಾಖಲೆ ಮಾಡಿ ಬರೆದಿಟ್ಟುಕೊಳ್ಳುವುದು

ಪರಸ್ಪರ ಹೋಲಿಕೆಯಿಂದ ವಿಷಯವನ್ನು ತಿಳಕೊಳ್ಳಲು ಇತರ ಕೆಲ ವಿದ್ಯಾರ್ಥಿಗಳು ಈ ಅವಧಿಯಲ್ಲಿ ಸಂಪೂರ್ಣ ಉಪವಾಸಗೈಯ್ಯುವರು

ಈ ಆಹಾರ ಮಾತ್ರೆಗಳು ಪೋಷಕ ಸತ್ವಗಳಿಂದ ಮಾಡಲ್ಪಟ್ಟವು ಅವುಗಳಲ್ಲಿ ನೀರಡಿಕೆಯನ್ನು ಶಮನಿಸುವ ರಸಾಯನಿಕ ಸತ್ವಗಳೂ ಇವೆ ಐದು ದಿವಸಗಳ ತನಕ ಈ ಮಾತ್ರೆಗಳು ಮನುಷ್ಯರನ್ನು ಶಕ್ತಿಗುಂದಿಸದ ಸರ್ವ ಸಾಮಾನ್ಯ ಆರೋಗ್ಯಪಟ್ಟದಲ್ಲಿರುವಂತೆ [illegible] ಇವು ಕ[illegible] ಯುದ್ಧರೆ ಇಂತಹ ಮಾತ್ರೆಗಳನ್ನು [illegible] ಕಾಲದಲ್ಲಿ ಭೂಕಂಪ, [illegible] ಗವಿಕೆ ಮೊದಲಾದ ಅನಾಹುತ ಕಾಲದಲ್ಲಿ ಕಂಗೆಟ್ಟ ಜನರಿಗೆ ತಾತ್ಕಾಲಿಕ ಸಹಾಯವಾಗಿ ಉಪಯೋಗಿಸಲ್ಪಡುವವು

ತರಬೇತಿ ಕೇಂದ್ರಲ್ಲಿ ಕಾವಲುಗಾರನ ಪ್ರೇತ

ಕೆಲವು ರಹಸ್ಯಮಯ ಘಟನೆಗಳು

ಬಿಳಿಯರೂ ಭೂತ ನಂಬುವರು

ಬ್ರಿಟನಿನ ಸರ್ರೆ ಪ್ರಾಂತದಲ್ಲಿನ ಅಂಗರಕ್ಷಕ ತರಬೇತಿ ಕೇಂದ್ರವಲ್ಲಿ ಒಂದು ಅದೃಶ್ಯಘಟಿತವು ಅಲೆದಾಡುತಿದೆಂದು ತಿಳಿದುಬಂದ[illegible] ಅದನ್ನು ಯಾರೂ ಇದುವರೆಗೆ ನೋಡಿಲ್ಲವಾದರೂ ಶಿಬಿರದೊಳಗಿನ ಸ್ಟೀಲಿನ ಕರಡಿಗೆಗಳು ಒಂದು ಕಡೆಯಿಂದ ಇನ್ನೊಂದು ಕಡೆ ತನ್ನಷ್ಟಕ್ಕೆ ಚಲಿಸುವುದು ಸೀರಿಸ ಕೊಡಗಳು ಇಟ್ಟಲ್ಲೇ ಚೆಲ್ಲಲ್ಪಡುವುದು, ಮೊಳೆಗಳು ಬಿಸಾಡಲ್ಪಡುವುದು ಇಂಥ ಘಟನೆಗಳ ಆಧಾರದಿಂದ ಭೂತದ ಅಸ್ತಿತ್ವವನ್ನು ಕಲ್ಪಿಸಲಾಗಿದೆ

ಒಂದು ದಿನ ಒಬ್ಬ ಅಂಗರಕ್ಷಕನು ಕಾವಲು ಮಾಡುತಿದ್ದಾಗ ಒಂದು ಜೋಡಿ ಬೂಟ್ಸುಗಳು ತಮ್ಮಷ್ಟಕ್ಕೆ ಕವಾತು ಮಾಡುವುದು ಅವನಿಗೆ ಕಂಡುಬಂತು ಬೂಟ್ಸಿನಲ್ಲಿ ಯಾವ ವ್ಯಕ್ತಿಯೂ ಇರಲಿಲ್ಲ ಮತ್ತೊಂದು ಸಲ ಟೆಲಿಫೋನ್ ಘಂಟೆ ಬಾರಿಸಲ್ಪಟ್ಟಿತು ಆದರೆ ಅದರ ಇನ್ನೊಂದು ತುದಿಯಲ್ಲಿ ಯಾರೂ ಇರಲಿಲ್ಲ.

ಆ ತರಬೇತಿ ಕೇಂದ್ರ ಮೇಲಧಿಕಾರಿಗಳೆಲ್ಲ(ಸಂಶಯಗ್ರಸ್ಥರಾಗಿದ್ದಾರೆ ಕೆಲ ಕಾಲ ಹಿಂದೆ ಮೃತಪಟ್ಟ ಅಂಗರಕ್ಷಕನ ಪ್ರೇತ ಅದೆಂದು ತರಬೇತಿಹೊಂದುವ ವಿದ್ಯಾರ್ಥಿಗಳು ನಂಬುತ್ತಾರೆ ಒಂದು ಸಲ ಯಾರೊ ಮಹಡಿಯಿಂದ ಕೆಳಗಿಳಿಯುವ ಸದ್ದು ಕೇಳಿಸಿತು "ನೀನೊಬ್ಬ ಅಂಗರಕ್ಷಕನಿದ್ದರೆ ಬೂಟ್ಸಿನ ಎರಡು ಶಬ್ದಗಳನ್ನು ಮಾಡು" ಎಂದರವರು. ತಕ್ಷಣ ಸೈನಿಕ ವಂದನೆಕೊಡುವ ತೆರದಲ್ಲಿ ಬೂಟ್ಸಿನ ಬಡಿತಗಳು ಕೇಳಿಬಂದುವು!

ವೃತ್ತದ ವೈವಿಧ್ಯ

ಓಡುವ ದೃಶ್ಯ

ಚಿಕಾಗೋದ ಓರ್ವ ಯಾಂತ್ರಿಕ ತಜ್ಞರು ತನ್ನ ಮೋಟಾರು ವಾಹನದಲ್ಲಿ ಟೆಲಿವಿಜನ್ ದೂರದರ್ಶಕ ಉಪಕರಣವನ್ನು ಜೋಡಿಸಿದ್ದಾನೆ

ಇಷ್ಟೂ ಸಾಲದೆ?

ಚೀನದಿಂದ ಸಂಯುಕ್ತ ಅಮೇರಿಕಕ್ಕೆ ಒಂದು ಟಪ್ಪಾಲು ಪಾರ್ಸೆಲು ಬಂತು ಅದಕ್ಕೆ ೧,೧೯೫,೦೦೦ ಚೀನಿ ಡಾಲರುಗಳ ಚೀಟಿ ಹಚ್ಚಲ್ಪಟ್ಟಿತ್ತಾದರೂ ಅಮೇರಿಕನ್ ಟಪ್ಪಾಲಧಿಕಾರಿಗಳು ಇನ್ನೂ ಅದಕ್ಕೆ ೧೫ ಸೆಂಟ್ಸುಗಳ(ಸುಮಾರು೧೨ಆಣೆ)ಚೀಟಿಗಳು ಕಡಿಮೆಯಾಗಿದೆಂದು ಹಿಡಿಬಿಟ್ಟರು

ಜಗಧ್ವಂಸಕ್ಕೆ ಸಾಕು

ಅಮೇರಿಕದ ಬಳಿ ಈಗ ಸುಮಾರು [illegible] ಏಟಂ ಬೊಂಬುಗಳ ಸಂಗ್ರಹವಾಗಿದೆಂದು ತಿಳಿದುಬರುತ್ತದೆ

ಇನ್ನೂ ಬೆಳೆಯುವನೆ?

ದಕ್ಷಿಣ ಆಫ್ರಿಕದ ಪೋರ್ಟ್ ಎಲಿಜಬೆತ್ ಪಟ್ಟಣದಲ್ಲಿನ ಓರ್ವ ಮೋಟಾರು ಸ್ವಾಮಿಯ ಎತ್ತರ [illegible] ಅಡಿ ಒಂದು ಇಂಚು ಕಡಿಮೆ

ಅಶ್ವ ವೃಷಭ

[illegible] ಸರಕಾರಿ ಕೃಷಿ [illegible] ಎತ್ತು ತನ್ನ ಹಟ್ಟಿಯಿಂದ ತಪ್ಪಿಸಿ ರೋಗ[illegible] ಸೇರುತ್ತಲೇ ಎದುರಿಗೆ ಕಾಣಿಸಿಕ್ಕಿದ ಒಂದು ಕುದುರೆ ಒಂದಿಯ ಮೇಲೆ ದಾಳಿ ಮಾಡಿ ಕದುರೆಯನ್ನು ತಕ್ಷಣ ಕೊಂದಿತು–ಗಾಡಿ ನುಚ್ಚುನೂರು ಆಯಿತು

ಅನಾರೋಗ್ಯಕರ

ಅಧ್ಯಕ್ಷ ಟ್ರೂಮನ್ನರ ಖಾಸಗಿ ವೈದ್ಯರು ಕೈಕುಲುಕುವ ಅಭ್ಯಾಸವು ಪುಷ್ಟಿ ತನದ್ದೂ ಅನಾರೋಗ್ಯಕರವೂ ಆದದ್ದೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಕಾರಣ ಇತ್ತೀಚೆಗೆ ಏರ್ಪಡಿಸಲ್ಪಟ್ಟ ಒಂದು ಸತ್ಕಾರಕೂಟದಲ್ಲಿ ೧೨೦೦ ಅತಿಥಿಗಳ ಕೈ ಕುಲುಕಿ ಅಧ್ಯಕ್ಷ ಟ್ರೂಮನರಿಗೆ ಅತ್ಯಾಯಾಸವಾಗಿ ಒಂದು ಗಂಟೆಯ ವಿರಾಮ ತೆಗೆದುಕೊಳ್ಳಬೇಕಾಯಿತಂತೆ

ಕಾಲಿಗೆ ಕಾಲು

ಕಳೆದ ಕೋಮುಕಲಹದಲ್ಲಿ ಅಂಗಾಂಗ ಕಳೆದುಕೊಂಡವರಿಗೆ ಕೃತಕ ಕೈ ಕಾಲುಗಳನ್ನು ಸರಬರಾಯಿ ಮಾಡಲು ಪೂರ್ವ ಪಂಜಾಬದ ಸರಕಾರವು ನಿರ್ಧರಿಸಿದೆ

ವಾಲುವ ಮಹಾಲು

ಇಟಲಿಯ ಪಿಸಾ ನಗರದಲ್ಲಿರುವ ಜಗತ್ತಿನ ಅದ್ಭುತಗಳಲ್ಲೊಂದೆನಿಸಿಲ್ಪಟ್ಟ ವಾಲುಗೋಪುರವು ತನ್ನ ಕೇಂದ್ರ ಬಿಂದುವಿನಿಂದ ೧೩ ಅಡಿ ವಾಲಿಕೊಂಡಿದೆ ಸುಮಾರು ೬೦೦ ವರ್ಷಗಳ ಹಿಂದೆ ಕಟ್ಟಲ್ಪಟ್ಟ ಈ ಏಳು ಮಹಡಿಯ ಗೋಪುರವು ವರ್ಷಂಪತಿ ಅಂಗುಲದ ಒಂದಂಶದಷ್ಟು ಹೆಚ್ಚೆಚ್ಚು ವಾಲುತ್ತಿದೆ ಈ ಪ್ರಮಾಣದಲ್ಲಿದು ಇನ್ನು ೪೦೦ ವರ್ಷಗಳಲ್ಲಿ ಸಂಪೂರ್ಣ ಒಡ್ಡು ಬಿಡುವುದೆಂದು ಲೆಕ್ಕಹಾಕಲಾಗಿದೆ

ನಿರುದ್ಯೋಗಿಗಳಾದ ದೇಶಿ ರಾಜರು ಸರಕಾರಿ ಕೆಲಸ ಹುಡುಕುತಿದ್ದಾರೆ

ನಿರುದ್ಯೋಗಿ ರಾಜನೊಬ್ಬನಿಗೆ ಯೋಗ್ಯವಾದ ಕೆಲಸವಿದ್ದರೆ ಹೇಳಿ ಸುಮಾರು ನೂರು ದೇಶಿ ರಾಜರು ಮತ್ತು ರಾಜಕುಮಾರರು ತಮಗೆ ತಕ್ಕದಾದ ಕೆಲಸಗಳನ್ನು ಹುಡುಕುತ್ತಲಿದ್ದಾರೆ ಇವರ ಚಿಕ್ಕಪುಟ್ಟ ಜಾಗೀರಿಗಳು, "ರಾಜ್ಯ"ಗಳು ಈಗ ಪ್ರಾಂತ್ಯಗಳಲ್ಲೊ, ಸಂಸ್ಥಾನ ಒಕ್ಕೂಟಗಳಲ್ಲೊ ಲೀನವಾಗಿದೆ

ಹೊಸ ರಾಜ್ಯಾಡಳಿತ ಕ್ರಮದಲ್ಲಿ ಈ ರಾಜವಂಶಸ್ಥರಿಗೆ ಸ್ವಂತ ಖರ್ಚಿಗಾಗಿ ಒಂದಿಷ್ಟು ಹಣವು ಸಾಲಿಯಾನ ಕೊಡಲ್ಪಡುವುದು ಆದರೆ ಹಿಂದೆ ಅವರು ಸ್ವೇಚ್ಛೆಯಾಗಿ ಖಜಾನೆ ಖಾಲಿಮಾಡುತಿದ್ದರು. ಈಗ ಅವರಿಗೆ ಕೊಡಲ್ಪಡುವ ಹಣ ಅವರ ಆನೆ, ಕುದುರೆ, ಬಿರುದುಬಾವಲಿಗಳಿಗೇ ಸಾಕಾಗುವುದಿಲ್ಲ. ಅನೇಕರು ಈಗಾಗಲೆ ತಾವು ಬಡವರಾಗಿದ್ದೇವೆಂದು ಭಾವಿಸಿಕೊಳ್ಳುವಂತಾಗಿದೆ ಖರ್ಚನ್ನು ಅಲ್ಲಿಂದಲ್ಲಿಗೆ ಮಾಡುವುದು ಅವರ ಸ್ವಾಭಿಮಾನಕ್ಕೆ ಕಷ್ಟತರವಾಗಿದೆ

ಸೈನ್ಯದಲ್ಲಿ

ಭಾರತ ಸರಕಾರದ ಸಂಸ್ಥಾನ ಖಾತೆಯವರು ಈ ದೇಶಿ ರಾಜರ ಅಧಿಕಾರಕ್ಕೆ ಕತ್ತರಿ ಪ್ರಯೋಗ ಮಾಡಿದ ಮೇಲೆ ಇವರಲ್ಲಿ ಕೆಲವರಿಗೆ ತಕ್ಕ ಕೆಲಸ ಕೊಡಲೂ ಪ್ರಯತ್ನಪಡುತಿದ್ದಾರೆ ಈ ಮಾಂಡಲೀಕರಲ್ಲಿ ಕೆಲವರು ಸೈನ್ಯಾನುಭವವಿದ್ದವರು ಅಂಥವರನ್ನು ಸೈನ್ಯದಲ್ಲಿ ತೆಗೆದುಕೊಳ್ಳಲಾಗುವುದು ಕೆಲವರ ನೌಕಾಧಿಕಾರಿಗಳಾಗಿಯೂ, ವಿಮಾನಾಧಿಕಾರಿಗಳಾಗಿಯೂ ಸೇರಿದ್ದಾರೆ

ಹೆಚ್ಚಿನ ಈ ಮಹಾರಾಜರುಗಳಿಗೆ ವಿದೇಶ ಸಂಚಾರದ ಅನುಭವವಿದೆ ಅವರಿಗೆ ರಾಯಭಾರಿ ಕಛೇರಿಗಳಲ್ಲಿ ನೇಮಿಸಬಹುದು ಮತ್ತೆ ಕೆಲವರು ಆಡಳಿತ ಖಾತೆಯಲ್ಲಿ ಮೇಲಧಿಕಾರಿಗಳಾಗಲು ಯತ್ನಿಸುವರು ಆದರೆ ಹಿಂದಿನ ಇವರ ಆಡಳಿತ ದಾಖಲೆಯಿಂದ ಈ ಕೆಲಸ ಸಿಗುವುದು ಮಾತ್ರ ಸ್ವಲ್ಪ ಕಷ್ಟತರವಿದೆ

— —

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡಿಪ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಮಂಗಳೂರು.
23-12-1947.

ಜ್ಯೊಂಟ್ ಮೆನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs 20,00,000
Capital Paid up	Rs 19,98,445
Reserves	Rs 8,66 715

BANKING BUSINESS OF EVERY DESCRIPTION TRANSACTED

V. R Kamath, B A L L B
General Manager

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬ್ಯಾ ಮದರಾಸು ಕಲ್ಕತ್ತ
ಮಂಗಳೂರಲ್ಲಿ ಶಾ - ಪನಿಯಲ್ಲ
ದೊರೆಯುವುದು

ದಿ ಬೊಂಬೇ ಲ್ಯಾಫ್. ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:
ಬೊಂಬ್ಯಾ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೇಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಧಾರ್ಮಿಕ ಪ್ರೀಮಿಯಮ್ ... ನಮ್ಮ ನಮ್ಮ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಪೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 13—8—1948 [ಸಂಚಿಕೆ 32]

ಮಾನವ ಸ್ವಾತಂತ್ರ್ಯದ ಮಹಾ ಮಂತ್ರೋಚ್ಚಾರಕರು

ಗಾಂಧಿ ಟಾಗೋರ್ ಮತ್ತು ಟಾಲ್‍ಸ್ಟಾಯ್

ಸ್ವಾತಂತ್ರ್ಯ ದಿನದಂದು ಅವರ ಪುಣ್ಯ ಸ್ಮರಣೆಯಾಗಲಿ!

ಭಾರತ ಸ್ವಾತಂತ್ರ್ಯದ ಪ್ರಥಮ ವಾರ್ಷಿಕ ದಿನಸ್ಮರಣೆಯಂದು ಈ ಮೂವರು ವಿಶ್ವಮಾನ್ಯರನ್ನು ಸ್ಮರಿಸಿಕೊಂಡು ಅವರ ಅಮರ ಸಂದೇಶಗಳ ಉಜ್ವಲ ಬೆಳಕಿನಲ್ಲಿ ಮಾನವೋದ್ಧಾರ ಸಾಧನೆಯ ಕಾರ್ಯವು ಮುಂದರಿಯಬೇಕಾದುದು ಉಚಿತೋಚಿತವಾಗಿದೆ. ಗಾಂಧಿ, ಟಾಗೋರ್ ಮತ್ತು ಟಾಲ್‍ಸ್ಟಾಯ್ ಈ ಮೂರ್ತಿಮಂತ ಮಹಾಪುರುಷರು ಮನುಷ್ಯನ ಮನಸ್ಸನ್ನು ಶತಮಾನಗಳ ಮೌಢ್ಯದಿಂದ ಪ್ರಥಮತಃ ವಿಮೋಚಿಸಿದರು.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅದ್ವಿತೀಯ ಪ್ರತಾಪಿಯಾದೊಬ್ಬ ಸಾಮ್ರಾಟನು ದೇಶವನ್ನೇ ಜಯಿಸಿದ ದಿಗ್ವಿಜಯಾಂತ್ಯದಲ್ಲಿ ಯುದ್ಧದ ಕ್ರೂರ ಅಸ್ತ್ರಗಳನ್ನು ಕೆಳಗಿಟ್ಟು ಧರ್ಮ ದೀಕ್ಷೆಯನ್ನು ಕೈಕೊಂಡನು. ಮಾನವ ಜೀವನೋನ್ನತಿಯನ್ನು ಸಾಧಿಸುವ ಉದಾತ್ತ ತತ್ವ ಪ್ರಚಾರಕರಾದ ಸನ್ಯಾಸಿಗಳ ಸೇನೆಯು ವಿಶ್ವದೆಂಟು ಮೂಲೆಗಳಿಗೂ ಕಳುಹಿಸಿತು. ಧರ್ಮ ಚಕ್ರದ ಧ್ವಜವು ದೂರ ದೂರದ ದೇಶಗಳಲ್ಲಿ ತನ್ನ ಅಮರ ಜೀವನ ಕ್ರಾಂತಿ ಶಾಂತಿಗಳ ಸಂದೇಶವನ್ನು ಸಾರಿತು.

ಎರಡು ಸಾವಿರ ವರ್ಷಗಳ ನಂತರ ರಷ್ಯದ ರಾಜವಂಶ ಸಂಭೂತನಾದ ಟಾಲ್‍ಸ್ಟಾಯ್ ಮಹಾಶಯನು ತನ್ನ ಸುಖೋಪಭೋಗದ ಮತ್ತು ಸೈನಿಕ ವೃತ್ತಿಯ ಶೂನ್ಯ ಜೀವನ ಕ್ರಮಕ್ಕೆ ತಿಲಾಂಜಲಿಯಿತ್ತು ದೀನ ಮಾನವೋದ್ಧಾರಕ್ಕೆ ಟೊಂಕ ಕಟ್ಟಿ ತೊಟ್ಟನು. ಅಶೋಕನು ಗೌತಮ ಬುದ್ಧನ ತತ್ವೋಪದೇಶದ ಸಾರವನ್ನು ಹೀರಿದಂತೆ ಟಾಲ್‍ಸ್ಟಾಯನು ಯೇಸುಕ್ರಿಸ್ತನ ಸರಳ ಸಂದೇಶದ ವಿಶಾಲ ದಿಗ್ದರ್ಶನವನ್ನು ಮಾಡಿಕೊಂಡನು. ತನ್ನ ಆಸ್ತಿಯನ್ನು ಒಕ್ಕಲಿಗರಿಗೆ ಹಂಚಿ, ಮಜೂರರ ಉಡುಪನ್ನು ಧರಿಸಿ ಟಾಲ್‍ಸ್ಟಾಯನು ಸರಳವಾಗಿ ಜೀವಿಸುತ್ತ ಉಚ್ಚ ವಿಚಾರಗಳನ್ನು ಯೋಚಿಸಿದನು.

ಹುತಾತ್ಮರು

ಗಾಂಧಿಜಿಯವರಾದರೋ ರಾಜಮನೆತನಕ್ಕೇ ಸಂಬಂಧಿಸಿದ್ದವರು. ಅವರು ದಿವಾನರ ಕುಟುಂಬದವರು. ಲೌಕಿಕ ಜೀವನದ ಸೌರಸ್ಯ ಸುಖವನ್ನನುಭೋಗಿಸುವ ಸೌಕರ್ಯಗಳೆಲ್ಲವೂ ಅವರಿಗಿದ್ದವು. ಅವರಾದರೋ ಜೀವನ ಹೋರಾಟದ ಈ ನಿಕೃಷ್ಟ ಸಾಹಸದಲ್ಲಿ ಜಿಗುಪ್ಸೆ ಹೊಂದಿ ಕರ್ಮಸನ್ಯಾಸವನ್ನು ತೊಟ್ಟರು. ಗಾಂಧಿಜಿ ಟಾಲ್‍ಸ್ಟಾಯಿಂದ ಸ್ಫೂರ್ತಿಪಡೆದಿದ್ದು ಅವರೊಡನೆ ಪತ್ರವ್ಯವಹಾರವನ್ನೂ ನಡೆಸಿದ್ದರು. ಅವನು ಕಾಗದದಲ್ಲಿ ಬರೆದುದನ್ನು ಅವರು ಪ್ರತ್ಯಕ್ಷ ಕಾರ್ಯರೂಪಕ್ಕೆ ತಂದರು. ಜಗತ್ತಿನ ದುಷ್ಟ ಶಕ್ತಿಗಳನ್ನು ನಿರ್ಮೂಲಿಸಬೇಕಾದರೆ ಆತ್ಮಶಕ್ತಿಯೇ ತಕ್ಕುದಾದ ಸಾಧನವೆಂದವರು ಸಾರಿದರು. ಕ್ರಿಸ್ತನ ಅಗಾಧ ವಾದೀ ತತ್ವವು ಕೇವಲ ವ್ಯಕ್ತಿಯೊಬ್ಬನ ವಿಮೋಚನೆಗೆ ಮಾತ್ರವಲ್ಲ ಜನಾಂಗಗಳನ್ನೂ, ಜಗತ್ತನ್ನೂ ಅದರಿಂದ ವಿಮೋಚಿಸಬಹುದೆಂದು ಗಾಂಧಿಜಿ ತಮ್ಮ ಅಸಹಕಾರದ ಬಳದಿಂದ ತೋರಿಸಿಕೊಟ್ಟರು. ಕ್ರಿಸ್ತನು ರೋಮಾಮರನ್ನೆದುರಿಸಿದನು. ಗಾಂಧಿಜಿ ಬ್ರಿಟಿಷರನ್ನೂ, ಟಾಲ್‍ಸ್ಟಾಯ್ ಝಾರ ಪಾಳೆಗಾರಿಯನ್ನೂ, ಕ್ರಿಸ್ತ ಜನಾಂಗಗಳು ಮರೆತುದನ್ನು ಕ್ರೈಸ್ತೇತರ ಗಾಂಧೀಜಿ ಆದರ್ಶದ ಮೂಲಕ ನೆನಪುಮಾಡಿ ಕೊಟ್ಟರು.

ಟಾಲ್‍ಸ್ಟಾಯರು ತಮ್ಮ ತತ್ವಗಳನ್ನಾಚರಿಸಲು ಆಪ್ತ ಕುಟುಂಬವನ್ನೂ ತ್ಯಜಿಸಿ, ಗುಡಿಸಲೊಂದರಲ್ಲಿ ವಾಸಿಸುತ್ತ ಜಗತ್ತು ಎಂದೆಂದಿಗೂ ಮರೆಯದಂತಹ ಸಾಹಿತ್ಯ ಕೃತಿಗಳನ್ನು ರಚಿಸಿ ಮನುಷ್ಯನಿಗೆ ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಮಾನಸಿಕ ಸ್ವಾತಂತ್ರ್ಯವು ಮಹತ್ವದ್ದೆಂದು ಸಾರಿದನು. ಕೊನೆಗೆ ತನ್ನ ಸರಳತೆಯಿಂದ ಚಳಿಗಾಳಿಗಳಿಗೆ ಬಿದ್ದು ವಿಷಮಜ್ವರ ಪೀಡಿತರಾಗಿ ಆ ಮಹನೀಯರು ಪರಂಧಾಮವನ್ನೈದಿದರು. ಅವರ ಬಲಿದಾನ ಮಾನವನಿಗೊಂದು ಆದರ್ಶ.

ಗಾಂಧಿಜಿಯವರೋ ಸದ್ಯಃ ಹುತಾತ್ಮರಾಗಿದ್ದಾರೆ ... ತನಕ ತಮ್ಮ ಜೀವನ ತತ್ವಸಾಧನೆಯನ್ನು ಎತ್ತಿ ಹಿಡಿದರು. ಅವರು ... ಯಾವ ರೂಪದಲ್ಲೂ ಸಹಿಸದೆ ಅದನ್ನು ... ಅಹಿಂಸಾಚರಣೆಯಿಂದೆದುರಿಸಿ ಒಂದು ಕಡೆಯಿಂದ ಅಸಾಮಾನ್ಯ ಶಕ್ತಿ ಸಂಪತ್ತಿನ ಸಾಮ್ರಾಜ್ಯವಾದಿಗಳ ... ಇನ್ನೊಂದು ಕಡೆಯಿಂದ ದಾಸ್ಯ, ನಿರಕ್ಷರತೆ, ಅಜ್ಞಾನ ಅಂಧಶ್ರದ್ಧೆಯ ತನ್ನ ಸ್ವಂತ ದೇಶಬಾಂಧವರ ಪ್ರತಿಗಾಮಿ ಶಕ್ತಿಯನ್ನೂ ಹೋರಾಡುತ್ತ ಕೊನೆಗೆ ಧರ್ಮಾಂಧತೆಯ ವಿಷಾಗ್ನಿಗೆ ಆಹುತಿಯಾದರು.

ಆದರೆ ಮಹಾತ್ಮರು ತಮ್ಮ ಅದ್ವಿತೀಯ ರಾಜಕೀಯ ಕ್ರಾಂತಿಯಿಂದ ವಿಶ್ವದ ದೃಷ್ಟಿಯನ್ನೇ ಸೆಳೆದರು. ಮಾನವನ ಉಚ್ಚನೀಚ ಪ್ರಮಾಣಗಳ ಕೃತಕ ಭಾವನೆಗಳನ್ನು ಛೇದಿಸಿದರು. ಮಾನವರ್ಗಕ್ಕೆ ಅವರು ನೂತನ ಧ್ಯೇಯಾಚರಣೆಯ ಪಥವನ್ನು ಹಾಕಿಕೊಟ್ಟರು. ಅದರೊಡನೆ ಶತಮಾನಗಳ ದಾಸ್ಯವೂ ಹರಿಯಿತು. ಸಹಸ್ರವರ್ಷಗಳ ಅಂಧಾಚಾರವೂ ಕುಸಿಯಿತು. ಅವರು ಸ್ಫೂರ್ತಿಗೊಳಿಸಿದ ವಿಚಾರ ಸ್ವಾತಂತ್ರ್ಯದ ಕ್ರಾಂತಿ ವಿಶ್ವವನ್ನೇ ತನ್ನ ಪ್ರಭಾವಕ್ಕೊಳಪಡಿಸಿತು.

ಟಾಲ್‍ಸ್ಟಾಯ್ ಮತ್ತು ಗಾಂಧೀಜಿ ಇವರಿಬ್ಬರ ನಡುವಂತರದವರು ಟಾಗೋರರು. ಇವರ ... ಶ್ರೀಮಂತ ಕುಟುಂಬದವರು. ... ಗೌತಮನ ಹಾಕಿಕೊಟ್ಟ ಮಾರ್ಗವನ್ನು ಪ್ರತಿಬಿಂಬಿಸಿದ ತಲಾಂತರದಲ್ಲೂ ಈ ಬುದ್ಧಭೂಮಿಯಲ್ಲಿ ಒಬ್ಬನಲ್ಲಿದ್ದರೆನ್ನಬಹುದು. ಅನುಕ್ರಮಿಸಿಯೇ ಒಂದನು ಅಂಥವರಲ್ಲಿ ರವೀಂದ್ರನಾಥರೂ ಒಬ್ಬರು. ಇವರು ತಮ್ಮ ಸಾಹಿತ್ಯ ಶ್ರೇಷ್ಠತೆಯಿಂದ ವಿಶ್ವವನ್ನೇ ಬೆಳಗಿದರು. ಭಾರತ ಸಂಸ್ಕೃತಿಯಲ್ಲಿನ ಉತ್ಕೃಷ್ಟಗಳನ್ನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ವಿಶ್ವಬಾಂಧವ್ಯ ಸೌಹಾರ್ದಕ್ಕಾಗಿ ಅಹೋರಾತ್ರಿ ದುಡಿದರು. ತಮ್ಮ ಕೃತಿಗಳಿಂದ ಅವರು ವಿಶ್ವಸಾಹಿತ್ಯವನ್ನು ಬೆಳಗಿದರು. ತಮ್ಮ ಸರಳ ಜೀವನದಿಂದ ಭಾರತ ಸಂಸ್ಕೃತಿಯ ಶ್ರೇಷ್ಠತೆಯನ್ನು ಜಗತ್ತಿನಲ್ಲಿ ಮೆರೆಯಿಸಿ, ಸ್ವಾತಂತ್ರ್ಯ ಹೋರಾಟದ ಕಳವಳಾಸ್ಪದ ಕಾಲದಲ್ಲಿ ತಮ್ಮ ಸ್ವತಂತ್ರ ವಿಚಾರ ಪ್ರಭೆಯಿಂದ ದೇಶವೀರರನ್ನು ಸ್ಫೂರ್ತಿಗೊಳಿಸಿದರು.

ಹೀಗೆ ಒಬ್ಬರು ತಮ್ಮ ವಿಚಾರ ಸರಣಿಯಿಂದಲೂ, ಒಬ್ಬರು ತಮ್ಮ ಕರ್ಮಾಚರಣೆಯಿಂದಲೂ ಮತ್ತೊಬ್ಬರು ತಮ್ಮ ಸಾಹಿತ್ಯ ಸಂಪತ್ತಿನಿಂದಲೂ ವಿಶ್ವವನ್ನಾವರಿಸಿದ ಅವಿಚಾರದ ಅಂಧಕಾರವನ್ನು ದೂರಗೊಳಿಸಲು ಕಾರಣಭೂತರಾದರು. ಸ್ವಾತಂತ್ರ್ಯ ದಿನಾಚರಣೆಯ ಶುಭಕಾಲದಲ್ಲಿವರನ್ನು ಸ್ಮರಿಸುವುದು ಆತ್ಯವಶ್ಯವಲ್ಲವೆ?

ಹಿಂದುಸ್ಥಾನ ಸೈನ್ಯದಲ್ಲಿರುವ ಬ್ರಿಟಿಷ್ ಅಧಿಕಾರಿಗಳೆಷ್ಟು?

ಹಿಂದೀ ಸೈನ್ಯದಲ್ಲಿ ಒಟ್ಟು ೩೦೦ ಬ್ರಿಟಿಷ ಅಧಿಕಾರಿಗಳಿರುವರೆಂದು ಅಧಿಕೃತ ವರ್ಗಗಳಿಂದ ತಿಳಿಯುತ್ತದೆ. ಮುಖ್ಯ ಸೇನಾಪತಿಗಳಾದ ಜನರಲ್ ಬ್ಯುಚರನ್ನು ಹಿಡಿದು ಕೆಲವೇ ಉಚ್ಚ ಬ್ರಿಟಿಷ ಅಧಿಕಾರಿಗಳಾಗಿದ್ದು ಉಳಿದವರನ್ನು ಬೇರೆ ಬೇರೆ ತಾಂತ್ರಿಕ ವಿಭಾಗಗಳಲ್ಲಿ ಸಲಹೆಗಾರರೆಂದು ಇರಿಸಿಕೊಳ್ಳಲಾಗಿದೆ. ಬ್ರಿಟಿಷ್ ಸರಕಾರದವರು ಹಿಂದುಸ್ಥಾನ ಮತ್ತು ಪಾಕಿಸ್ಥಾನ ಸೈನ್ಯಗಳಲ್ಲಿಯ ಬ್ರಿಟಿಶ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಬಹುದೆಂದು ಲಂಡನಿನಿಂದ ಬಂದ ವರದಿಗಳ ಬಗ್ಗೆ ವಿಚಾರಿಸಲಾಗಿ ಕಾಶ್ಮೀರ ರಣರಂಗಕ್ಕೆ ತೆರಳಿದ ಹಿಂದೀ ಸೈನ್ಯದಲ್ಲಿ ಯಾವ ಬ್ರಿಟಿಷ್ ಅಧಿಕಾರಿಯೂ ಇಲ್ಲವೆಂದು ತಿಳಿದುಬರುತ್ತದೆ. ಕಾಶ್ಮೀರದ ದಾಳಿಗಾರರ ವಿರುದ್ಧ ಕೈಕೊಳ್ಳುವ ಎಲ್ಲಾ ಯೋಜನೆಗಳನ್ನು ಹಿಂದೀ ಅಧಿಕಾರಿಗಳೇ ತಯಾರಿಸುತ್ತಿದ್ದು, ಮೇಜರ ಕರಿಯಪ್ಪನವರೇ ಅಲ್ಲಿಯ ಸೈನ್ಯಚಲನದ ಮುಖ್ಯ ಹೊಣೆ ಹೊತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಪಾಕಿಸ್ಥಾನ ಸೈನ್ಯದ ಅನೇಕ ವಿಭಾಗಗಳಿಗೆ ಬ್ರಿಟಿಷ್ ಅಧಿಕಾರಿಗಳು ಅಧಿಪತಿಗಳಾಗಿರುವರು. ಆದರೆ ಹಿಂದೀ ಸೈನ್ಯಕ್ಕೆ ಎದುರಾದ ಪಾಕಿಸ್ಥಾನ ಸೈನ್ಯದಲ್ಲಿ ಈ ಬ್ರಿಟಿಷ ಅಧಿಕಾರಿಗಳಿರುವರೋ ಎಂಬುದು ಇನ್ನೂ ತಿಳಿದುಬಂದಿಲ್ಲ. ಒಟ್ಟಿನ ಮೇಲೆ ಬ್ರಿಟನು ಕೈಕೊಳ್ಳುವ ಕ್ರಮದಿಂದ ಹಿಂದುಸ್ಥಾನಕ್ಕಿಂತ ಪಾಕಿಸ್ಥಾನಕ್ಕೆ ಹೆಚ್ಚು ಬಾಧಕವಿದೆ.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs 20,00,000
Capital Paid up	Rs. 19,98,445
Reserves	Rs 8,66,715

BANKING BUSINESS OF EVERY DESCRIPTION TRANSACTED

V. R. Kamath, B A L L B
General Manage

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ ಮದರಾಸು ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಪ್ರಯೋಜನಕ್ಕಾಗಿ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಹಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 13—8—1948 [ಸಂಚಿಕೆ 32]

ಮಾನವ ಸ್ವಾತಂತ್ರ್ಯದ ಮಹಾ ಮಂತ್ರೋಚ್ಚಾರಕರು

ಗಾಂಧಿ ಟಾಗೋರ್ ಮತ್ತು ಟೋಲ್‌ಸ್ಟಾಯ್

ಸ್ವಾತಂತ್ರ್ಯ ದಿನದಂದು ಅವರ ಪುಣ್ಯ ಸ್ಮರಣೆಯಾಗಲಿ!

ಭಾರತ ಸ್ವಾತಂತ್ರ್ಯದ ಪ್ರಥಮ ವಾರ್ಷಿಕ ದಿನಾಚರಣೆಯಂದು ಈ ಮೂವರು ವಿಶ್ವ ಮಾನ್ಯರನ್ನು ಸ್ಮರಿಸಿಕೊಂಡು ಅವರ ಅಮರ ಸಂದೇಶಗಳ ಉಜ್ವಲ ಬೆಳಕಿನಲ್ಲಿ ಮಾನವೋದ್ಧಾರ ಸಾಧನೆಯ ಕಾರ್ಯವು ಮುಂದರಿಯಬೇಕಾದುದು ಉಚಿತೋಚಿತವಾಗಿದೆ. ಗಾಂಧಿ, ಟಾಗೋರ್ ಮತ್ತು ಟೋಲ್‌ಸ್ಟಾಯ್ ಈ ಮೂರ್ತಿಮಂತ ಮಹಾ ಪುರುಷರು ಮನುಷ್ಯನ ಮನಸ್ಸನ್ನು ಶತಮಾನಗಳ ಮೌಢ್ಯದಿಂದ ಪ್ರಥಮತಃ ವಿಮೋಚಿಸಿದರು.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅದ್ವಿತೀಯ ಪ್ರತಾಪಿಯಾದೊಬ್ಬ ಸಾಮ್ರಾಟನು ದೇಶವನ್ನೇ ಜಯಿಸಿದ ದಿಗ್ವಿಜಯಾಂತ್ಯದಲ್ಲಿ ಯುದ್ಧದ ಕ್ರೂರ ಅಸ್ತ್ರಗಳನ್ನು ಕೆಳಗಿಟ್ಟು ಧರ್ಮ ದೀಕ್ಷೆಯನ್ನು ಕೈಕೊಂಡನು. ಮಾನವ ಜೀವನೋನ್ನತಿಯನ್ನು ಸಾಧಿಸುವ ಉದಾತ್ತ ತತ್ವ ಪ್ರಚಾರಕರಾದ ಸನ್ಯಾಸಿಗಳ ಸೇನೆಯು ವಿಶ್ವದೆಂಟು ಮೂಲೆಗಳನ್ನಾಕ್ರಮಿಸಿತು. ಧರ್ಮ ಚಕ್ರದ ಧ್ವಜವು ದೂರ ದೂರದ ದೇಶಗಳಲ್ಲಿ ತನ್ನ ಅಮರ ಜೀವನ ಕ್ರಾಂತಿ ಶಾಂತಿಗಳ ಸಂದೇಶವನ್ನು ಸಾರಿತು.

ಎರಡು ಸಾವಿರ ವರ್ಷಗಳ ನಂತರ ರಶ್ಯದ ರಾಜವಂಶ ಸಂಭೂತನಾದ ಟೋಲ್‌ಸ್ಟಾಯ್ ಮಹಾಶಯನು ತನ್ನ ಸುಖೋಪಭೋಗದ ಮತ್ತು ಸೈನಿಕ ವೃತ್ತಿಯ ಶೂನ್ಯ ಜೀವನ ಕ್ರಮಕ್ಕೆ ತಿಲಾಂಜಲಿಯಿತ್ತು ದೀನ ಮಾನವೋದ್ಧಾರಕ್ಕೆ ಟೊಂಕ ಕಟ್ಟಿ ತೊಟ್ಟನು. ಅಶೋಕನು ಗೌತಮ ಬುದ್ಧನ ತತ್ವೋಪದೇಶದ ಸಾರವನ್ನು ಹೀರಿದಂತೆ ಟೋಲ್‌ಸ್ಟಾಯನು ಯೇಸುಕ್ರಿಸ್ತನ ಸರಳ ಸಂದೇಶದ ವಿಶಾಲ ದಿಗ್ದರ್ಶನವನ್ನು ಮಾಡಿಕೊಂಡನು. ತನ್ನ ಆಸ್ತಿಯನ್ನು ಒಕ್ಕಲಿಗರಿಗೆ ಹಂಚಿ, ಮಜೂರರ ಉಡುಪನ್ನು ಧರಿಸಿ ಟೋಲ್‌ಸ್ಟಾಯನು ಸರಳವಾಗಿ ಜೀವಿಸುತ್ತ ಉಚ್ಚ ವಿಚಾರಗಳನ್ನು ಯೋಚಿಸಿದನು.

ಹುತಾತ್ಮರು

ಗಾಂಧಿಜಿಯವರಾದರೋ ರಾಜಮನೆತನಕ್ಕೇ ಸಂಬಂಧಿಸಿದ್ದವರು. ಅವರು ದಿವಾನರ ಕುಟುಂಬದವರು. ಲೌಕಿಕ ಜೀವನದ ಸಾರಸ್ಯ ಸುಖವನ್ನನುಭೋಗಿಸುವ ಸೌಕರ್ಯಗಳೆಲ್ಲವೂ ಅವರಿಗಿದ್ದವು. ಅವರಾದರೋ ಜೀವನ ಹೋರಾಟದ ಈ ಸಿಕ್ಕಷ್ಟು ಸಾಹಸದಲ್ಲಿ ಜಿಗುಪ್ಸೆ ಹೊಂದಿ ಕರ್ಮಸನ್ಯಾಸವನ್ನು ಕೊಟ್ಟರು. ಗಾಂಧಿಜಿ ಟೋಲ್‌ಸ್ಟಾಯಿಸಿಂದ ಸ್ಫೂರ್ತಿಪಡೆದಿದ್ದು ಅವರೊಡನೆ ಪತ್ರವ್ಯವಹಾರವನ್ನೂ ನಡೆಸಿದ್ದರು. ಅವನು ಕಾಗದದಲ್ಲಿ ಬರೆದುದನ್ನವರು ಪ್ರತ್ಯಕ್ಷ ಕಾರ್ಯರೂಪಕ್ಕೆ ತಂದರು. ಜಗತ್ತಿನ ದುಷ್ಟ ಶಕ್ತಿಗಳನ್ನು ನಿರ್ಮೂಲಿಸಬೇಕಾದರೆ ಆತ್ಮಶಕ್ತಿಯೇ ತಕ್ಕುದಾದ ಸಾಧನವೆಂದವರು ಸಾರಿದರು. ಕ್ರಿಸ್ತನ ಅಗಾಧ ವಾದಿ ತತ್ವವು ಕೇವಲ ವ್ಯಕ್ತಿಯೊಬ್ಬನ ವಿಮೋಚನೆಗೆ ಮಾತ್ರವಲ್ಲ ಜನಾಂಗಗಳನ್ನೂ, ಜಗತ್ತನ್ನೂ ಉದ್ಧರಿಸಿ ವಿಮೋಚಿಸಬಹುದೆಂದು ಗಾಂಧಿಜಿ ತಮ್ಮ ಅಸಹಕಾರ ಚಳುವಳಿಯಿಂದ ತೋರಿಸಿಕೊಟ್ಟರು. ಕ್ರಿಸ್ತನು ರೋಮನ್ನರನ್ನೆದುರಿಸಿದನು. ಗಾಂಧಿಜಿ ಬ್ರಿಟಿಷರನ್ನೂ, ಟೋಲ್‌ಸ್ಟಾಯ್ ಒಂದ ಪಾಳೆಯಗಾರರನ್ನೂ, ಕ್ರಿಸ್ತ ಜನಾಂಗಗಳು ಮರೆತುದನ್ನು ಕ್ರಿಸ್ತೇತರ ಗಾಂಧೀಜಿ ಆದರ್ಶದ ಮೂಲಕ ನೆನಪುಮಾಡಿ ಕೊಟ್ಟರು.

ಟೋಲ್‌ಸ್ಟಾಯರು ತಮ್ಮ ತತ್ವಗಳನ್ನಾಚರಿಸಲು ಆಪ್ತ ಕುಟುಂಬವನ್ನೂ ತ್ಯಜಿಸಿ, ಗುಡಿಸಲೊಂದರಲ್ಲಿ ವಾಸಿಸುತ್ತ ಜಗತ್ತು ಎಂದೆಂದಿಗೂ ಮರೆಯದಂತಹ ಸಾಹಿತ್ಯ ಕೃತಿಗಳನ್ನು ರಚಿಸಿ ಮನುಷ್ಯನಿಗೆ ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಮಾನಸಿಕ ಸ್ವಾತಂತ್ರ್ಯವು ಮಹತ್ವದ್ದೆಂದು ಸಾರಿದನು. ಕೊನೆಗೆ ತನ್ನ ಸರಳತೆಯಿಂದ ತಳಗಾಳಗಳಿಗೆ ಬಿದ್ದು ವಿಷಮಜ್ವರ ಪೀಡಿತರಾಗಿ ಮಹಸಿಯರು. ಸಂಬಂಧವನ್ನೆಲ್ಲ ತೊರೆದು ಅವರ ಒಲಿದಾನ ಮಾನವರಿಗೊಂದು ಆದರ್ಶ.

ಗಾಂಧಿಜಿಯವರಾದರೋ ಸದಾ ಕರ್ಮಪರರಾಗಿದ್ದರು. ಕೊನೆಯ ಸಿರಿನ ತನಕ ತಮ್ಮ ಮಹೋನ್ನತ ತತ್ವ ಸಾಧನೆಯನ್ನು ನಿತ್ಯ ಓದಿದವರು. ಅನ್ಯಾಯವನ್ನು ಯಾವ ರೂಪದಲ್ಲೂ ಸಹಿಸದೆ ಅದನ್ನು ಪ್ರೀತಿ ಅಹಿಂಸಾತತ್ವಗಳಿಂದೆದುರಿಸಿ ಒಂದ ಕಡೆಯಿಂದ ಅಪಾರ ಆತ್ಮಶಕ್ತಿ ಸಂಪತ್ತಿನ ಸಾಮ್ರಾಜ್ಯವಾದಿಗಳನ್ನೆದುರಿಸಿಯೂ, ಇನ್ನೊಂದು ಕಡೆಯಿಂದ ದಾಸ್ಯ, ನಿರಕ್ಷರತೆ, ಅಜ್ಞಾನ ಅಂಧಶ್ರದ್ಧೆಯ ತನ್ನ ಸ್ವಂತ ದೇಶಬಾಂಧವರ ಪ್ರತಿಗಾಮಿ ಶಕ್ತಿಯನ್ನೂ ಹೋರಾಡುತ್ತ ಕೊನೆಗೆ ಧರ್ಮಾಂಧತೆಯ ವಿಷಾಗ್ನಿಗೆ ಆಹುತಿಯಾದರು.

ಆದರೆ ಮಹಾತ್ಮರು ತಮ್ಮ ಅದ್ವಿತೀಯ ರಾಜಕೀಯ ಕ್ರಾಂತಿಯಿಂದ ವಿಶ್ವದ ದೃಷ್ಟಿಯನ್ನೇ ಸೆಳೆದರು. ಮಾನವನ ಉಪ್ಪಸೀತ ಪ್ರಮಾಣಗಳ ಕೃತಕ ಭಾವನೆಗಳನ್ನು ಛೇದಿಸಿದರು. ಮಾನವವರ್ಗಕ್ಕೆ ಅವರು ನೂತನ ಧ್ಯೇಯಾಚರಣೆಯ ಪದವನ್ನು ಹಾಕಿಕೊಟ್ಟರು. ಅದರೊಡನೆ ಶತಮಾನಗಳ ದಾಸ್ಯವು ಹರಿಯಿತು. ಸಹಸ್ರವರ್ಷಗಳ ಅಂಧಾಚಾರವೂ ಕುಸಿಯಿತು. ಅವರು ಸ್ಫೂರ್ತಿಗೊಳಿಸಿದ ವಿಚಾರ ಸ್ವಾತಂತ್ರ್ಯದ ಕ್ರಾಂತಿ ವಿಶ್ವವನ್ನೇ ತನ್ನ ಪ್ರಭಾವಕ್ಕೊಳಪಡಿಸಿತು.

ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಇವರಿಬ್ಬರ ನಡುಮಂತರದವರು ಟಾಗೋರರು. ಇವರೂ ವಿಲಾಸ ಪ್ರಿಯ ಶ್ರೀಮಂತ ಕುಟುಂಬದವರು. ಆದು ಗೌತಮನು ಹಾಕಿಕೊಟ್ಟ ಮಾರ್ಗವನ್ನು ಪ್ರತಿಯೊಂದು ಶತಮಾನದಲ್ಲೂ ಈ ಬುದ್ಧಭೂಮಿಯಲ್ಲಿ ಒಬ್ಬನಲ್ಲದಿದ್ದರೊಬ್ಬರು ಅನುಕ್ರಮಿಸಿಯೇ ಬಂದನು. ಅಂಥವರಲ್ಲಿ ರವೀಂದ್ರನಾಥರೂ ಒಬ್ಬರು. ಇವರು ತಮ್ಮ ಸಾಹಿತ್ಯ ಶ್ರೇಷ್ಠತೆಯಿಂದ ವಿಶ್ವವನ್ನೇ ಬೆಳಗಿದರು. ಭಾರತ ಸಂಸ್ಕೃತಿಯಲ್ಲಿನ ಉತ್ತಮಶೀಲಗಳನ್ನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ವಿಶ್ವಬಾಂಧವ್ಯ ಸೌಹಾರ್ದಕ್ಕಾಗಿ ಅಹೋರಾತ್ರಿ ದುಡಿದರು. ತಮ್ಮ ಕೃತಿಗಳಿಂದ ಅವರು ವಿಶ್ವಸಾಹಿತ್ಯವನ್ನು ಬೆಳಗಿದರು. ತಮ್ಮ ಸರಳ ಜೀವನದಿಂದ ಭಾರತ ಸಂಸ್ಕೃತಿಯ ಶ್ರೇಷ್ಠತೆಯನ್ನು ಜಗತ್ತಿನಲ್ಲಿ ಮೆರೆಯಿಸಿ, ಸ್ವಾತಂತ್ರ್ಯ ಹೋರಾಟದ ಕಳವಳಿಸಿದ್ದ ಕಾಲದಲ್ಲಿ ತಮ್ಮ ಸ್ವತಂತ್ರ ವಿಚಾರ ಪ್ರಭೆಯಿಂದ ದೇಶವೀರರನ್ನು ಸ್ಫೂರ್ತಿಗೊಳಿಸಿದರು.

ಹೀಗೆ ಒಬ್ಬರು ತಮ್ಮ ವಿಚಾರ ಸರಣಿಯಿಂದಲೂ, ಒಬ್ಬರು ತಮ್ಮ ಕರ್ಮಾಚರಣೆಯಿಂದಲೂ, ಮತ್ತೊಬ್ಬರು ತಮ್ಮ ಸಾಹಿತ್ಯ ಸಂಪತ್ತಿನಿಂದಲೂ ವಿಶ್ವವನ್ನಾವರಿಸಿದ ಅವಿಚಾರದ ಅಂಧಕಾರವನ್ನು ದೂರಗೊಳಿಸಲು ಕಾರಣಭೂತರಾದರು. ಸ್ವಾತಂತ್ರ್ಯ ದಿನಾಚರಣೆಯ ಶುಭಕಾಲದಲ್ಲಿವರನ್ನು ಸ್ಮರಿಸುವುದು ಅತ್ಯವಶ್ಯವಲ್ಲವೆ?

ಹಿಂದುಸ್ಥಾನ ಸೈನ್ಯದಲ್ಲಿರುವ ಬ್ರಿಟಿಷ್ ಅಧಿಕಾರಿಗಳೆಷ್ಟು?

ಹಿಂದೀ ಸೈನ್ಯದಲ್ಲಿ ಒಟ್ಟು ೩೦೦ ಬ್ರಿಟಿಷ ಅಧಿಕಾರಿಗಳಿರುವರೆಂದು ಅಧಿಕೃತ ವರ್ಗಗಳಿಂದ ತಿಳಿಯುತ್ತದೆ. ಮುಖ್ಯ ಸೇನಾಪತಿಗಳಾದ ಜನರಲ್ ಬ್ಯುಚರನ್ನು ಹಿಡಿದು ಕೆಲವೇ ಉಚ್ಚ ಬ್ರಿಟಿಷ ಅಧಿಕಾರಿಗಳಾಗಿದ್ದು ಉಳಿದವರನ್ನು ಬೇರೆ ಬೇರೆ ತಾಂತ್ರಿಕ ವಿಭಾಗಗಳಲ್ಲಿ ಸಲಹೆಗಾರರೆಂದು ಇರಿಸಿಕೊಳ್ಳಲಾಗಿದೆ. ಬ್ರಿಟಿಷ್ ಸರಕಾರದವರು ಹಿಂದುಸ್ಥಾನ ಮತ್ತು ಪಾಕಿಸ್ಥಾನ ಸೈನ್ಯಗಳಲ್ಲಿಯ ಬ್ರಿಟಿಶ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಬಹುದೆಂದು ಲಂಡನಿನಿಂದ ಬಂದ ವರದಿಗಳ ಬಗ್ಗೆ ವಿಚಾರಿಸಲಾಗಿ ಕಾಶ್ಮೀರ ರಣರಂಗಕ್ಕೆ ತೆರಳಿದ ಹಿಂದೀ ಸೈನ್ಯದಲ್ಲಿ ಯಾವ ಬ್ರಿಟಿಷ್ ಅಧಿಕಾರಿಯೂ ಇಲ್ಲವೆಂದು ತಿಳಿದುಬರುತ್ತದೆ. ಕಾಶ್ಮೀರದ ದಾಳಿಗಾರರ ವಿರುದ್ಧ ಕೈಕೊಳ್ಳುವ ಎಲ್ಲಾ ಯೋಜನೆಗಳನ್ನು ಹಿಂದೀ ಅಧಿಕಾರಿಗಳೇ ತಯಾರಿಸುತ್ತಿದ್ದು, ಮೇಜರ ಕರಿಯಪ್ಪನವರೇ ಅಲ್ಲಿಯ ಸೈನ್ಯಚಲನದ ಮುಖ್ಯ ಹೊಣೆ ಹೊತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಪಾಕಿಸ್ಥಾನ ಸೈನ್ಯದ ಅನೇಕ ವಿಭಾಗಗಳಿಗೆ ಬ್ರಿಟಿಷ್ ಅಧಿಕಾರಿಗಳು ಅಧಿಪತಿಗಳಾಗಿರುವರು. ಆದರೆ ಹಿಂದೀ ಸೈನ್ಯಕ್ಕೆ ಎದುರಾದ ಪಾಕಿಸ್ಥಾನ ಸೈನ್ಯದಲ್ಲಿ ಈ ಬ್ರಿಟಿಷ ಅಧಿಕಾರಿಗಳಿರುವರೋ ಎಂಬುದು ಇನ್ನೂ ತಿಳಿದುಬಂದಿಲ್ಲ. ಒಟ್ಟಿನ ಮೇಲೆ ಬ್ರಿಟನು ಕೈಕೊಳ್ಳುವ ಕ್ರಮದಿಂದ ಹಿಂದುಸ್ಥಾನಕ್ಕಿಂತ ಪಾಕಿಸ್ಥಾನಕ್ಕೆ ಹೆಚ್ಚು ಬಾಧಕವಿದೆ.

ಭಾರತಕ್ಕೆ ಸಾಮ್ರಾಜ್ಯವಾದಿ ಬಣ್ಣ ಬಳಿಯುವ ಪ್ರಯತ್ನ

ನೆಹರೂರವರಿಗೆ ಏಶಿಯದ ಮುಖಂಡರಾಗುವ ಮಹತ್ವಾಕಾಂಕ್ಷೆಯಂತೆ

ಭಾರತದ ಧೋರಣೆಯ ಬಗ್ಗೆ ಸೋವಿಯಟ್ ಪತ್ರಿಕೆಯ ಆಕ್ರೋಶ

ಮಹತ್ವಾಕಾಂಕ್ಷೆಯ ಸಾಮ್ರಾಜ್ಯವಾದೀ 'ನೆಹರೂ ಯೋಜನೆ'ಗಳಿಂದ ಅಂಧವಾದ ನವಭಾರತವು ಹಿಂದೀ ಜನತೆಯನ್ನು ಅದರ ಸ್ವಾಭಾವಿಕ ಮಿತ್ರರಿಂದ ಎಳೆದೊಯ್ದು ಏಶಿಯಾಖಂಡದಲ್ಲಿ ಒಡಕಿನ ಬೀಜವನ್ನು ಬಿತ್ತುತ್ತಿದೆಯೆಂದು ಸೋವಿಯಟ್ ಪತ್ರಿಕೆಯಾದ 'ನ್ಯೂ ಟೈಮ್ಸ್' ದಲ್ಲಿ ದಿನಾಂಕ ೪ರಂದು ಪ್ರಕಟವಾಗಿದೆ.

ಈ ಬಗ್ಗೆ ಬರೆದ ಎಳುವರೆ ಪುಟದ ವಿಸ್ತೃತವಾದ ಲೇಖದಲ್ಲಿ ಭಾರತದ ಮುಖ್ಯಮಂತ್ರಿಗಳಾದ ಪಂ. ನೆಹರುರವರು ಪಾಕಿಸ್ತಾನ, ಬರ್ಮಾ, ಮಲಯಾ, ಇಂಡೋನೇಶಿಯಾ ಮತ್ತು ಸಯಾಮುಗಳ ರಾಜಕೀಯ ಆರ್ಥಿಕ ಹಾಗೂ ಸೈನ್ಯದ ಮುಖಂಡರಾಗುವ ಯೋಜನೆಹಾಕಿರುವರೆಂದೂ ಬರೆಯಲಾಗಿದೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿ ಎಚ್ ಭಾಭಾರವರು 'ಜಪಾನು ಈಗ ಕಳೆದುಕೊಂಡಿರುವ ಆಯಕಟ್ಟಿನ ಸ್ಥಳವೆಲ್ಲವನ್ನು ಹಿಂದೀಯರು ಆಕ್ರಮಿಸಬೇಕೆಂದು' ಹೇಳಿದ್ದು 'ಬಂಡವಾಳಶಾಹಿ ಭಾರತವು' ಬರಿಯದಲ್ಲ, ಜಪಾನಿನ ಉತ್ತರಾಧಿಕಾರಿಯಾಗಲು ಪ್ರಯತ್ನಿಸುತ್ತಿರುವುದಕ್ಕೆ ಸಾಕ್ಷಿ ಎಂದು ಅದರಲ್ಲಿ ಹೇಳಲಾಗಿದೆ.

ಒಪ್ಪಂದದ ಕರಡಿಗೆ ಅಂಕಿತ ಹಾಕಿದ್ದ ಬಗ್ಗೆ ನಿಜಾಮರಿಗೆ ಬಹಳ ಪಶ್ಚಾತ್ತಾಪ?

ರಜವಿಗೂ ಪರಿಸ್ಥಿತಿಯ ಬಿಸಿಹತ್ತಿತು ಮಾತುಕತೆ ನಡೆಸಲು ಸರ್ ಮಿರ್ಝಾ ರವರು ಕರಾರು ಹಾಕಿದ್ದರು

ನಿಜಾಮರಿಗೆ ಈಗ ಹಿಂದುಸ್ಥಾನ ಸರಕಾರದವರು ಜೂನ್ ತಿಂಗಳಲ್ಲಿ ಕಳುಹಿಸಿದ ಒಪ್ಪಂದದ ಕರಾರಿಗೆ ಅಂಕಿತಹಾಕಲು ಸಿದ್ಧರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಆದರೆ ಹಿಂದುಸ್ಥಾನ ಸರಕಾರವು ಜೂನ್ ತಿಂಗಳಲ್ಲಿ ಸೂಚಿಸಿದ ಒಪ್ಪಂದದ ಕರಾರುಗಳು ರದ್ದಾಗಿವೆಯೆಂದು ಈ ಮೊದಲೇ ಸಾರಿದ್ದಾರೆ.

ಹೊಸ ದಿಲ್ಲಿಯಲ್ಲಿ ಹೈದರಬಾದ ಏಜಂಟ ಜನರಲ್‌ರಾದ ನವಾಬ ಝೈನಯಾರಜಂಗ ಬಹದ್ದೂರರು ಕೆಲ ದಿನಗಳ ಹಿಂದೆ ಹೈದರಾಬಾದಕ್ಕೆ ಹೋಗಿ ನಿಜಾಮರನ್ನು ಕಂಡು ಅವರಿಗೆ ಹಿಂದುಸ್ಥಾನ ಸರಕಾರದವರು ಜೂನ್ ತಿಂಗಳಲ್ಲಿ ಸೂಚಿಸಿದ ಒಪ್ಪಂದದ ಕರಡನ್ನು ಈಗ ಊರ್ಜಿತದಲ್ಲಿ ತರುವಂತೆ ಸರ್ ಮಿರ್ಝಾ ಇಸ್ಮಾಯಿಲರು ಹಿಂದುಸ್ಥಾನದ ಮನಒಲಿಸಲು ಶಕ್ತರಾಗಬೇಕಾಗಿದ್ದರೆ ಹೈದರಾಬಾದದಲ್ಲಿಯ ಈಗಿನ ಸರಕಾರವು ಹೋಗಬೇಕು. ರಜಾಕಾರರ ಸಂಸ್ಥೆಯು ನಾಮಾಶೇಷವಾಗಬೇಕು, ಸಂಸ್ಥಾನದಲ್ಲಿ ಶಾಂತತೆ ಪ್ರಸ್ಥಾಪನೆಯಾಗಬೇಕು, ಎಂದು ತಿಳಿಸಿದ್ದರೆಂದು ತಿಳಿಯುತ್ತದೆ. ಕಾಮನ್ಸ್ ಸಭೆಯು ಹೈದರಾಬಾದಿನ ಬಗ್ಗೆ ನಡೆದ ಚರ್ಚೆಗೆ, ಆಟ್ಲೀಯವರು ನಿಜಾಮರ ಬಿನ್ನಹಕ್ಕೆ ಕಳುಹಿಸಿದ ಉತ್ತರ ಇವುಗಳನ್ನು ನೋಡಿ ಹಿಂದುಸ್ಥಾನ ಸರಕಾರದವರು 'ನಿಜಾಮರ ಸೇರ್ಪಡೆ ಪತ್ರಕ್ಕೆ ಅಂಕಿತಹಾಕಬೇಕು;' ಎಂಬ ಧೋರಣಕ್ಕೆ ಅಂಟಿಕೊಂಡು ಕೂಡ್ರುವರೆಂದೂ ಈ ಧೋರಣ ಬದಲಿಸಲು ಶಕ್ಯವಾದುದು ಒಂದೇ ದಾರಿಯೆಂದರೆ ಹೈದರಾಬಾದದ ಈಗಿನ ಸರಕಾರ ಬದಲಿಸಿ ಆ ರಜಾಕರರ ಸಂಸ್ಥೆಯನ್ನು ಅಕ್ರಮ ಮಾಡುವುದೇ ಲೇಸೆಂದೂ ನವಾಬಜೈನ ಯಾರಜಂಗರು ನಿಜಾಮರಿಗೆ ಸೂಚಿಸಿದ್ದಾಗಿ ತಿಳಿದುಬಂದಿದೆ.

ನಿಜಾಮರು ಸದ್ಯದ ಸರಕಾರವನ್ನು ವಿಸರ್ಜಿಸುವವೇ ಒಪ್ಪಂದದ ಪೂರ್ವಪೀಠಿಕೆ ಎಂಬ ತತ್ವಕ್ಕೆ ಒಪ್ಪಿಕೊಂಡಿಲ್ಲವೆಂದು ತಿಳಿಯುತ್ತದೆ. ಇತ್ತೆಹಾದ್ ಮಜಲೀಸದ ಧುರೀಣರು ಗುಪ್ತಸಭೆಸೇರಿಸಿ ಇತ್ತೀಚೆಗೆ ಉದ್ಭವಿಸಿದ ಪರಿಸ್ಥಿತಿಯು ಸಿಂಹಾವಲೋಕನ ನಡೆಸಿರುವರೆಂದು ಪರಿಸ್ಥಿತಿ ಹದಗೆಟ್ಟು ಉಗ್ರರೂಪ ತಾಳಿದ್ದರಿಂದ ಮಜಲೀಸಿನ ಧುರೀಣರು ಆಲೋಚನೆ ನಡೆಸಿರುವದರಿಂದ ತಮ್ಮ ಕೊನೆಯ ನಿರ್ಣಯವನ್ನು ನವಾಬಜೈನಯಾರಜಂಗರು ದಿಲ್ಲಿಗೆ ಹೋಗುವ ಮುನ್ನ ತಿಳಿಸಲು ಸಾಧ್ಯವಾಗಲಿಲ್ಲವೆಂದು ಹೇಳಲಾಗುತ್ತಿದೆ. ಹೈದರಾಬಾದ ಸಂಸ್ಥಾನದ ಘಟನಾ ಶಾಖೆಯ ಹಿಂದಿನ ಮಂತ್ರಿಗಳಾದ ನವಾಬ ಅಲಿಯಾರಜಂಗ ಬಹದ್ದೂರರು ಯುಕ್ತರಾಷ್ಟ್ರ ಸಂಘಕ್ಕೆ ಹೈದರಾಬಾದದ ಶಿಷ್ಟ ಮಂಡಳದ ಧುರೀಣರಾಗಿ ಹೋಗಲು ನಿರಾಕರಿಸಿದ್ದಾರೆಂದು ಹೈದರಾಬಾದದಲ್ಲಿ ಹೊಸಗೂರ ಸರಕಾರ ಸ್ಥಾಪನೆಮಾಡದೆ ಯುಕ್ತರಾಷ್ಟ್ರ ಸಂಘಕ್ಕೆ ಹೋಗುವುದರಲ್ಲಿ ಏನೂ ಪ್ರಯೋಜನವಿಲ್ಲವೆಂದು ಅವರ ಅಭಿಪ್ರಾಯ ಇರುವದಾಗಿಯೂ ತಿಳಿದುಬಂದಿದೆ.

ಕಲಾಭಿವೃದ್ಧಿಗಾಗಿ ಸರಕಾರದ ಪ್ರಯತ್ನ

ಭಾರತದಲ್ಲಿ ಚಿತ್ರಕಲಾಸಂಸ್ಥೆ, ಸಂಗೀತ ಹಾಗೂ ವಾದನ ಸಂಸ್ಥೆ ಮತ್ತು ನೃತ್ಯ ಹಾಗೂ ನಾಟಕ ಸಂಸ್ಥೆಗಳನ್ನು ಪ್ರಾರಂಭಿಸುವುದಕ್ಕಾಗಿ ಭಾರತ ಸರಕಾರದವರು ಒಂದ 'ಹಿಂದೀ ಸಾಂಸ್ಕೃತಿಕ ವಿಶ್ವಸ್ಥ ಮಂಡಳ'ವನ್ನು ಸ್ಥಾಪಿಸಲಿರುವರು. ಈ ಯೋಜನೆಗಳೆಲ್ಲಾ ಸಂಪೂರ್ಣವಾಗಿದ್ದು ಈ ವರ್ಷದ ಅಂದಾಜ ಪತ್ರಿಕೆಯಲ್ಲಿ ಕಲ ಹಣವನ್ನು ಸಹ ಇದಕ್ಕಾಗಿ ತೆಗೆದಿಡಲಾಗಿದೆ.

ಲಕ್ನೋದಲ್ಲಿಯ ಹಿಂದುಸ್ಥಾನೀ ಸಂಗೀತ ಸಂಸ್ಥೆಯನ್ನ ಅ ಭಾ ಸಂಸ್ಥೆಯನ್ನಾಗಿ ಮಾರ್ಪಡಿಸಲು ಕೇಂದ್ರ ಸರಕಾರದವರು ಕೇಳಿಕೊಂಡಿರುವರಲ್ಲದೆ ಅದೇ ಮಾದರಿಯ ಸಂಗೀತದ ಒಂದು ಕೇಂದ್ರ ಶಾಲೆಯನ್ನು ಮದ್ರಾಸಿನಲ್ಲಿ ತೆರೆಯಲಾಗುವುದು.

ಸದ್ಯಕ್ಕೆ ಅಸ್ತಿತ್ವದಲ್ಲಿರುವ ಕೆಲ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲಾಗುವುದಲ್ಲದೆ ಸಾರ್ವಜನಿಕರಲ್ಲಿ ಸಂಗೀತದ ಅಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಕೇಂದ್ರ ಸರಕಾರದವರು ಪ್ರಾಂತಿಕ ಸರಕಾರದ ಕಡೆಗೆ ಒಂದು ಯೋಜನೆಯನ್ನು ಕಳುಹಿಸಿದ್ದಾರೆ. ಅದರಲ್ಲಿ ಶಾಲೆ ಕಾಲೇಜುಗಳಲ್ಲಿ ಕಲಾಶಿಕ್ಷಣವನ್ನು ಒತ್ತಾಯ ಶಿಕ್ಷಣವನ್ನಾಗಿ ಮಾಡುವ ಸೂಚನೆಯಿದೆ.

ವಿದೇಶಗಳೊಡನೆ ಸಹ ಸಾಂಸ್ಕೃತಿಕ ಸಂಪರ್ಕವನ್ನು ಬೆಳೆಸಿಕೊಳ್ಳುವುದಕ್ಕಾಗಿ ಭಾರತ ಸರಕಾರವು ಅನೇಕ ಯೋಜನೆಗಳನ್ನು ಸಿದ್ಧಗೊಳಿಸಿವೆ.

ಯುಕ್ತರಾಷ್ಟ್ರ ಸಂಘವು ರಾಷ್ಟ್ರಸಂಘದ ಪುನರವತಾರ

ಲೂಯಿಫಿಶರರ ಹೇಳಿಕೆ

"ಅಂತರಾಷ್ಟ್ರೀಯ ನ್ಯಾಯ ನಿರ್ಣಯದಲ್ಲಿ ಬಲ ಪ್ರಯೋಗದ ಅಧಿಕಾರವು ಯುಕ್ತರಾಷ್ಟ್ರ ಸಂಘಕ್ಕೆ ಇಲ್ಲ" ಎಂದು ಅಮೇರಿಕದ ಸುಪ್ರಸಿದ್ಧ ಪತ್ರಿಕಾ ಗ್ರಂಥಕರ್ತರಾದ ಲೂಯಿಫಿಶರರು ದಿಲ್ಲಿಯ ಪತ್ರಿಕಾಕರ್ತರ ಯೂನಿಯನಿನ ಪರವಾಗಿ ಏರ್ಪಡಿಸಿದ ಸತ್ಕಾರಕೂಟದಲ್ಲಿ ಭಾಷಣ ಮಾಡುತ್ತ ಹೇಳಿದರು. ಅವರು ಮತ್ತೂ ಹೇಳಿದ್ದೇನೆಂದರೆ ಕಾಶ್ಮೀರ ಪ್ರಶ್ನೆಯು ಭದ್ರತಾ ಮಂಡಳದಲ್ಲಿ ಚರ್ಚೆಗೆ ಬಂದಾಗ ಅಮೇರಿಕವಾಗಲಿ ಇತರ ರಾಷ್ಟ್ರವಾಗಲಿ ಹಿಂದುಸ್ಥಾನದ ಪರ ಧೋರಣ ವಹಿಸಿತು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಯುಕ್ತರಾಷ್ಟ್ರ ಸಂಘಕ್ಕೆ ತನ್ನ ನಿರ್ಣಯವನ್ನು ಬಲತ್ಕಾರದಿಂದ ಯಾವದೆ ರಾಷ್ಟ್ರದ ಮೇಲೆ ಹೇರಲು ಅಧಿಕಾರವೇ ಇಲ್ಲ. ಅದು ಮಧ್ಯಸ್ಥಿಕೆ ಮಾಡಬಹುದು. ಕಾಶ್ಮೀರದ ಪ್ರಶ್ನೆಯಲ್ಲಿ ಹಿಂದುಸ್ಥಾನದ ಬೇಡಿಕೆಯು ನ್ಯಾಯವಾದುದೆಂದು ಗ್ರಹಿಸಿದರೂ ದಾಳಿಗಾರರನ್ನು ಪಾಕಿಸ್ತಾನಿಗಳು ಕಾಶ್ಮೀರದಿಂದ ಹೊರದೂಡುವ ಬಲ ಪ್ರಯೋಗದ ಅಧಿಕಾರ ಭದ್ರತಾ ಮಂಡಳದವರಿಗಿಲ್ಲ. ಅದುದರಿಂದ ಅವರು ಮಧ್ಯ ಮಾರ್ಗ ಹಿಡಿದು ಒಪ್ಪಂದಪಡಿಸುವ ಪ್ರಯತ್ನ ಮಾತ್ರ ಮಾಡಬಲ್ಲರು. ಜಾಗತಿಕ ಫೆಡರಲ್ ಸರಕಾರ ಸ್ಥಾಪನೆಯಾಗಿ ಅದರ ಆಧೀನದಲ್ಲಿ ಸೈನ್ಯಬಲವಿದ್ದರೆ ಅಂಥ ಸರಕಾರವು ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ದಾಳಿಮಾಡಿದರೆ ಅದನ್ನು ಪ್ರತಿಭಟಿಸಿ ದಾಳಿಗಳಾಗದಂತೆ ಮಾಡಿಕೊಳ್ಳಲು ಶಕ್ಯವಾಗುವದು. ಈಗಿನ ಯುಕ್ತರಾಷ್ಟ್ರ ಸಂಘವು ಹಿಂದಿನ ರಾಷ್ಟ್ರ ಸಂಘದ ಪುನರವತಾರವಾಗಿದೆ. ಇದರ ಸದಸ್ಯ ರಾಷ್ಟ್ರಗಳೆಲ್ಲ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಗಳು. ಆದ ದರಿಂದ ಅವುಗಳ ಮೇಲೆ ಯಾವುದೇ ಶಾಸನ ಹೇರಲು ಬರಲಾರದು.

ಮಕ್ಕಳು ತುಂಟರಾಗುವದು ಏಕೆ?

ನಿಮ್ಮ ಮಗು ಪೋಕಿ ಮಾಡುವದೆ? ಹಾಗಾದರೆ ಅದರ ಆರೋಗ್ಯಕ್ಕೆ ಬೇಕಾಗಿದ್ದ ಯಾವುದೋ ಪೋಷಕವಸ್ತುವೊಂದನ್ನು ನೀವು ಅದಕ್ಕೆ ಲೋಪಮಾಡಿರುವಿರೆಂದಾಗುತ್ತದೆ. ಆ ಅವಶ್ಯವಾದ ವಸ್ತುಗಳಲ್ಲಿ ಈ ಕೆಳಗಿನವುಗಳಲ್ಲಿ ಕೆಲವಾಗಿವೆ. ಪ್ರೀತಿ, ಭದ್ರತೆ, ಅವರ ಇಚ್ಛೆಗಳನ್ನು ಸಲ್ಲಿಸುದುವುದು ಮತ್ತು ಅವರಿಗ ಸಂಚಾರ ಸಾಹಸಗಳಿಗೆ ಆಸ್ಪದಕೊಡದಿರುವುದ. ಇವುಗಳಿಗೆ ಸಂದರ್ಭ ಕೊಡಲ್ಪಟ್ಟ ಮಕ್ಕಳು ಎಂದಿಗೂ ಶಿಕ್ಷಾರ್ಹರಾಗ ವುದಿಲ್ಲ.

ಮಕ್ಕಳಿಗೆ ಶಿಕ್ಷಿಸುವುದರಿಂದ ಸತ್ಪರಿಣಾಮವಾಗುತ್ತದೆಂದು ನೀವು ನಿರೀಕ್ಷಿಸಿದರೆ ನಿರಾಶರಾಗುವಿರಿ. ನಿಮ್ಮ ಮಗು ಏನಾದರೊಂದು ಚಿಕ್ಕ ವಸ್ತುವನ್ನು ಕದ್ದರೆ ನೀವು ಅದಕ್ಕೆ ಶಿಕ್ಷೆಕೊಡುತ್ತೀರೆಂದು ಭಾವಿಸೋಣ.

ಪರಿಣಾಮವಾಗಿ ಅವನು ಹೆಚ್ಚೆಚ್ಚು ಕದಿಯದ ಹಾಗೆ ನೀವು ಅದಕ್ಕೆ ಹೆಚ್ಚೆಚ್ಚು ಶಿಕ್ಷೆ ಸಿಗುತ್ತದೆಂಬ ಭಯವನ್ನು ಹುಟ್ಟಿಸುವುದರ ಮೂಲಕ, ಇಲ್ಲವೆ ಕದ್ದರೆ ಸಿಕ್ಕಿಬೀಳುವ ಅಪಾಯವಿದೆಯೆಂಬ ಗದರಿಕೆಯ ಮೂಲಕ, ನೀವು ಹಾಗೆ ಮಾಡಬಹುದು.

ವಿಶ್ವಾಸ ಲೋಪ

ಹೀಗೆ ಮಾಡುವುದರಿಂದ ನೀವು ಅವನಿಗೆ ಮುಂದೆ ಕಳ್ಳವೃತ್ತಿಗೆ ತರಬೇತಿ ಮಾಡುವಿರಿ. ಕಾರಣ ಕದ್ದರೆ ಸಿಕ್ಕಿಬೀಳುವ ಮತ್ತು ಶಿಕ್ಷೆ ಅನುಭವಿಸುವುದೆರಡೇ ವಿಷಯಗಳಿವೆ ಎಂದಾದರೆ ಮಗು ಇವೆರಡಕ್ಕೂ ಸಿಕ್ಕಿಬೀಳದಂತೆ ತನ್ನ ಕಾರ್ಯಸಾಧನೆಯನ್ನು ದಕ್ಷತೆಯಿಂದಲೂ ಜಾಗರೂಕತೆಯಿಂದಲೂ ನಿರ್ವಹಿಲಲು ಅಭ್ಯಾಸಿಸುವುದು. ಇದರಿಂದ ಮುಂದೆ ಹೆಚ್ಚು ತೊಂದರೆಗಳು ಸಂಭವಿಸಬಹುದು.

ತುಂಟತನವನ್ನು ಪರಿಹರಿಸುವುದಕ್ಕಿಂತ ಅದನ್ನು ಪ್ರತಿಬಂಧಗೊಳಿಸುವುದೇ ಹೆಚ್ಚು ಸುಲಭ. ನೀವು ಮಾಡಬೇಕಾದ ಕೆಲಸವೆಂದರೆ ಮಕ್ಕಳಿಗೆ ಬಾಲ್ಯದಲ್ಲಿ ದೊರಕಬೇಕೆಂದು ಹೇಳಲ್ಪಟ್ಟ ಮೇಲಿನ ನಾಲ್ಕು ಅವಶ್ಯಕತೆಗಳು ಸಿಗುವಂತೆ ನೋಡಬೇಕು. ಅನೆಂದರೆ ಪ್ರೀತಿ, ಭದ್ರತೆ, ಅವರ ಅಭಿರುಚಿಗಳಲ್ಲಿ ಪ್ರೋತ್ಸಾಹ, ಮತ್ತು ಸಾಹಸ ಕೃತ್ಯಗಳಿಗೆ ಸಹಾಯ.

ನಿಮ್ಮ ಮಗುವಿಗೆ ಯೋಗ್ಯ ರಕ್ಷಣೆಯು ಮತ್ತು ಭದ್ರತೆಯು ದೊರೆಯುತ್ತಿವೆಯೇ? ಈ ವಿಷಯವನ್ನು ಕಂಡುಹಿಡಿಯಿರಿ. ಯಾವ ಸಂದರ್ಭದಲ್ಲೂ ಅದು ಮನೆಯಿಂದ ಹೊರದೂಡಲ್ಪಡುವುದಿಲ್ಲವೆಂಬ ಭದ್ರತೆಯ ವಿಶ್ವಾಸವನ್ನು ಮಗುವಿನಲ್ಲಿ ಉಂಟುಮಾಡಿದರೆ ಅದು ತುಂಟತನಕ್ಕೆ ಕೈಹಾಕುವುದಿಲ್ಲ. ಅದು ನಿಮ್ಮ ಮೇಲೆ ವಿಶ್ವಾಸವಿಡಲು ಕಲಿಯುವುದು.

ಮಗುವಿನ ಆಟಗಳಲ್ಲಿ ನೀವು ಯಾವ ತರದ ಅಭಿರುಚಿಯನ್ನು ಪಡೆಯುವುದಿಲ್ಲವೆ? ಯಾವಾಗಲೂ 'ಹೊರಗೆ ಹೋಗಿ ಆಡು, ತಾಯಿಗೆ ತೊಂದರೆಕೊಡಬೇಡ"ವೆನ್ನುವ ಪರಿಸ್ಥಿತಿಯೇ?

ಕೆಲವು ಸೂಚನೆಗಳು

ನಿಮ್ಮ ಮಗುವಿನ ವಶದಲ್ಲಿ ಕೆಲವೊಂದು ವಸ್ತುಗಳು ಇರುವಂತೆ ಮಾಡಿ. ಉದಾಹರಣೆಗೆ ಗೊಂಬೆಗಳ ಒಂದು ಪೆಟ್ಟಿಗೆ, ಒಂದು ಸಣ್ಣ ತೋಟ. ಎಲ್ಲಿದೆ ತನ್ನಾದದ್ದೆ ತನ್ನ ಸ್ವಂತ ಚಟುವಟಿಕೆಗಳನ್ನು ನಡೆಸಲು ಏಕಾಂತ ಸ್ಥಳವೊಂದು ಬೇಕಾಗಿರುವುದು. ಅಲ್ಲಿ ಅದ ನಡೆಸುವ ಕೆಲಸಗಳಲ್ಲಿ ನೀವು ಕೈ ಹಾಕಬಾರದು.

ಅಂತಹ ಅಪಾಯಕಾರಕ ಮತ್ತು ಅನಶ್ಯ ಸಂದರ್ಭವಲ್ಲಲ್ಲದೆ ಮತ್ತೆ ಯಾವಾಗಲೂ ಮಗವಿಗೆ "ಅದು ಮಾಡಬಾರದು, ಇದು ಮಾಡಬಾರದು" ಎಂದು ಕಟ್ಟಪ್ಪಣೆ ಮಾಡದಿರಿ. ಜಗವು ತನ್ನ ದೊಡ್ಡ ಅಪರಾಧ ಇಲ್ಲವೆ ನೀಚ ಪಾಪಿಷ್ಟ ಎಂಬ ಭಾವನೆಯನ್ನು ವಹಿಸುವಂತೆ ಮಾಡಬೇಡಿರಿ. ನಿಮಗೆ ಅನಾನುಕೂಲವಾಗುವ ರೀತಿಯಲ್ಲಿದು ವರ್ತಿಸುವುದೆಂದು ನೀವು ಅದನ್ನು ಈ ರೀತಿ ಕಾಣಬಾರದು.

ಸಿನೇಮಾ ಚಿತ್ರಗಳಿಂದ ಮಕ್ಕಳ ಮೇಲೆ ದುಷ್ಪರಿಣಾಮವಾಗುತ್ತದೆಂದು ನೀವು ಆಗಾಗ್ಗೆ ಕೇಳುತ್ತಿರುವಿರಿ. ಕೆಲವು ಮೂರ್ಖ ಚಿತ್ರಗಳು ದುಷ್ಪರಿಣಾಮ ಮಾಡುತ್ತವೆಂದು ಮನೋತಜ್ಞರು ಒಪ್ಪುತ್ತಾರೆ-ಆದರೆ ಎಲ್ಲಾ ಚಲಚಿತ್ರಗಳೂ ಹಾಗಲ್ಲ.

ಅತೀ ಹೆಚ್ಚು ತುಂಟತನದ ಹವ್ಯಾಸಕ್ಕೊಳಗಾದವರು ಮೇಲೆ ಹೇಳಿದ ನಾಲ್ಕು ವಿಷಯಗಳ ಲೋಪದಿಂದ ನರಳುವ ಮಕ್ಕಳೆಂಬುದು ಖಂಡಿತ. ಅವರಿಗೆ ಬಹಿರಂಗವಾಗಿ ಪ್ರೀತಿಸುವುದರಿಂದ ತಿದ್ದಬಹುದು. ಮನೆಯಲ್ಲಿ ಮಗುವನ್ನು ಪ್ರೀತಿಯಿಂದಲೂ ವಿಶ್ವಾಸದಿಂದಲೂ ಸಂರಕ್ಷಿಸಿದರೆ ಅವರ ನೈತಿಕ ಶೀಲಗಳ ಕುರಿತು ನೀವೆಂದಿಗೂ ಚಿಂತಿಸಬೇಕಾಗಿಲ್ಲ.

ಭಿಕ್ಷುಕರ ಉಪಟಳದ ಪರಿಹಾರ

ಇದೊಂದು ರಾಷ್ಟ್ರೀಯ ಸಮಸ್ಯೆ

ಯಾವ ದೇಶಕ್ಕಾದರೂ ಭಿಕ್ಷುಕರು ಭೂಷಣಪ್ರಾಯರಲ್ಲ. ಭಾರತದಲ್ಲಂತೂ ಅವರ ಸಂಖ್ಯೆ ಅತೀ ಹೆಚ್ಚಾಗಿದೆ. ಮಾರ್ಕೆಟಿನ ಬಳಿಯಿರುವಂತೆ ಮನೆಗಳಲ್ಲೂ, ಪ್ರಯಾಣಿಕ ಸ್ಥಳಗಳಲ್ಲಿರುವಂತೆ ಯಾತ್ರಾಕ್ಷೇತ್ರಗಳಲ್ಲೂ—ಒಂದೇ ಮಾತಿನಲ್ಲಿ ಹೇಳುವುದಾದರೆ ಇಡೀ ದೇಶದ ಎಲ್ಲೆಲ್ಲೂ ಭಿಕ್ಷುಕ ಸಮೂಹಗಳೇ ಇವೆ. ಸ್ವಾತಂತ್ರ್ಯ ಜೀವನವನ್ನು ನಿರ್ವಹಿಸುವ ಹಕ್ಕು ಇತರ ಮಾನವರಿಗಿರುವಂತೆ ಭಿಕ್ಷುಕರಿಗೂ ಇದೆ. ಮಾರ್ಗದ ಬದಿಗಳು ಮಾತ್ರ ಅವರ ಶಯನಗಾರಗಳಲ್ಲ, ಮಾರ್ಗಗಳೇ ಅವರ ಮನೆಯಲ್ಲ, ಜೀವನದ ಭವಿಷ್ಯವನ್ನು ರೂಪಿಸಿಕೊಳ್ಳಲು ಅವರಿಗೂ ಜನ್ಮಸಿದ್ಧವಾದ ಹಕ್ಕಿದೆ

ಬೊಂಬಾಯಿ, ಕಲ್ಕತ್ತಾ, ಮದರಾಸು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಸಾವಿರಾರು ತಿರುಕರು ದಿನದ ಹೊತ್ತಿನಲ್ಲಿ ದೂರ ದೂರದ ಸ್ಥಳಗಳಿಂದ ಬಂದು ಸಂಜೆಯಾಗುತ್ತಲೆ ತಮ್ಮ ಕೊಳಕು ನಿವಾಸಗಳಿಗೆ ತೆರಳುತ್ತಾರೆ. ಬೊಂಬಾಯಿ ನಗರದಲ್ಲೇ ಮನೆಮಾಡಿಕೊಂಡಿರುವ ಬಿಕ್ಷುಕರ ಸಂಖ್ಯೆ ಸುಮಾರು ಹತ್ತು ಸಾವಿರದಷ್ಟಿದೆ

ಕಳೆದ ನಲ್ವತ್ತು ವರ್ಷಗಳಿಂದ ಬಿಕ್ಷುಕರ ಸಂಖ್ಯೆಯು ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಇದನ್ನು ತಡೆಗಟ್ಟಲು ಶೀಘ್ರ ಉಪಾಯಗಳನ್ನು ಮಾಡದಿದ್ದರೆ ಪರಿಣಾಮವು ಅತ್ಯಂತ ಹಾನಿಕಾರವಾಗುವುದು ಖಂಡಿತ. ಬ್ರಿಟಿಷ್ ಸಾರ್ವಭೌಮ್ಯರಾದ ಐದನೇ ಜಾರ್ಜರಿಂದ "ಬ್ರಿಟಿಷ್ ಸಾಮ್ರಾಜ್ಯ ಕಿರೀಟದಲ್ಲಿನ ಅತ್ಯುಜ್ವಲ ವಜ್ರ"ವೆಂದು ವರ್ಣಿಸಲ್ಪಟ್ಟ ದೇಶದ ಶ್ರೇಷ್ಠ ನಗರವಾದ ಬೊಂಬಾಯಲ್ಲೇ ಈ ಸಮಸ್ಯೆಯು ವಿಕಾರ ಸ್ವರೂಪವು ಅಸ್ತಿತ್ವದಲ್ಲಿರುವಾಗ ಮತ್ತಿತರ ಕಡೆಗಳಲ್ಲಿ ಅದು ಯಾವ ರೀತಿಯಲ್ಲಿರಬೇಕೆಂದು ನಾವೇ ಊಹಿಸಿಕೊಳ್ಳಬಹುದು

ಒಂದು ಉದ್ಯೋಗ: ಭಿಕ್ಷಾಟನೆಯು ಒಂದು ಸುಲಭವಾದ ಜೀವನೋಪಾಯವಾಗಿದ್ದೆ ದಾಸ್ಯದಿಂದ ಜರ್ಝರಿತವಾದ ದೇಶದಲ್ಲಿ ಸಮಾಜ ಜೀವನವು ಅವ್ಯವಸ್ಥಿತ ಜೀವನ ಹೋರಾಟದಾಗಿ ಮಾರ್ಪಾಟುಗೊಂಡಾಗ ನಿರುದ್ಯೋಗ ಅನಾರೋಗ್ಯಗಳ ದೆಸೆಯಿಂದ ಉದರಂಭರಣದ ಸಂದರ್ಭಗಳನ್ನು ಕಳೆಕೊಂಡ ಪಂಗಡಗಳಿಗೆ ಕುಸಿದುಹೋದ ಜೀವನ ಕಟ್ಟಡವನ್ನು ಪುನಃ ರ್ರಚಿಸಿಕೊಳ್ಳಲು ಯಾವ ಸಂದರ್ಭಗಳೂ ಇಲ್ಲದಾದವು. ಕೈಗಾರಿಕೆಯು ಕೆಲವೇ ಸ್ವಹಿತ ಸಾಧಕ ಸಂಸ್ಥೆಗಳ ಸೊತ್ತಾಗಿ ಉಳಿಯುವಂತಾಗಿ ಅದರ ಪ್ರಗತಿಯು ಸ್ತಬ್ಧವಾದಾಗ, ಕೃಷಿ ಉದ್ಯಮವು ಯೋಗ್ಯ ಸೌಕರ್ಯಗಳ ಅಲಕ್ಷ್ಯದಿಂದ ಪಾಡುಬಿದ್ದಾಗ, ಶೇಕಡಾ ಐದರಷ್ಟು ಜನರಿಗೆ ಯಾವ ತರದ ಶಿಕ್ಷಣದ ಸಂದರ್ಭಗಳಿಲ್ಲದಾಗ, ಸಂಪತ್ಪ್ರಧಾನವಾದ ದೇಶದಲ್ಲಿ ಸಾಕಷ್ಟು ವೈದೇಕಿಯ ಚಿಕಿತ್ಸೆಯ ಅನುಕೂಲತೆಗಳಿಲ್ಲದಾಗ ದುರ್ದೈವದ ಸಂಕಷ್ಟಕ್ಕೆ ಸಿಲುಕಿದ ಜನ ತಮ್ಮ ದುರ್ಧರ ಪ್ರಸಂಗದಿಂದ ತಪ್ಪಿಸಿಕೊಳ್ಳಲು ಒಂದೇ ಉಪಾಯವಾದ ಭಿಕ್ಷಾಟನೆಯನ್ನು ಕೈಕೊಳ್ಳುವಂತಾಯಿತು

ನಗರಗಳೇ ಭಿಕ್ಷಾವೃತ್ತಿಯ ಮೂಲ ಕೇಂದ್ರಗಳಾಗಬಲ್ಲುವು. ಬಿಕ್ಷುಕರಲ್ಲಿ ಮುಖ್ಯವಾದ ಐದು ವರ್ಗಗಳಿವೆ

ಮೊದಲಾಗಿ ಸಶಕ್ತ ಶರೀರಿಯಾದ ಬಿಕ್ಷುಕ. ಬೇಡುವುದು ಸುಲಭವೂ ಶೀಘ್ರವೂ ಆದ ಹೊಟ್ಟೆಹೊರಕೊಳ್ಳುವ ಸಾಧನವೆಂದು ಅರಿತುಕೊಂಡವನಿವ. ಅದನ್ನೇ ಅವನು ಒಂದು ವೃತ್ತಿಯಾಗಿ ಮಾಡಿಕೊಳ್ಳುತ್ತಾನೆ

ಎರಡನೆಯವನೇ ವಂಚನೆ ಮಾಡಿ ತಿನ್ನುವವನು. ನೋಡಬಲ್ಲ ಕುರುಡರು, ನಡೆಯಬಲ್ಲ ಕುಂಟರು ಸಮುದಾಯದಲ್ಲಿ ಪತ್ತದಿಂದ ಹೆಡೆಯಬಲ್ಲ ಅಂಗಹೀನರು ಈ ವರ್ಗದವರು

ಅಸೀತಿವ ತನೇ ನಿರ್ದಾಕ್ಷಿಣ್ಯನೆ ಆದ ಕ್ರೂರ ಬಿಕ್ಷುಕನ ಮೂರನೇ ವರ್ಗದವನು. ಇವರು ಜನರ ಕರುಣೆಯನ್ನು ಸಂಪಾದಿಸಲು ತನ್ನ ಮಕ್ಕಳ ಕಣ್ಣುಗಳನ್ನು ಕಿತ್ತ ಯಲೂ ಹಿಂಜರಿಯುವುದಿಲ್ಲ. ತನ್ನ ಉದ್ಯೋಗವನ್ನು ಅಭಿವೃದ್ಧಿಪಡಿಸಲು ತನ್ನ ಮಕ್ಕಳ ಕೈಕಾಲುಗಳನ್ನಾದರೂ ಮುರಿಯುವನು

ನಿಜವಾಗಿ ಅಂಗಾಂಗ ಹೀನನಾಗಿ ಸಂದರ್ಭಗಳ ಒತ್ತಾಯದಿಂದ ಬಿಕ್ಷಾಟನಗ ಇಳಿಸಲ್ಪಟ್ಟ ದುರ್ದೈವಿಯೇ ನಾಲ್ಕನೆ ವರ್ಗದವನು. ಇವನಿಗೆ ಮರ್ಯಾದಿತ ಜೀವನವನ್ನು ಸಾಗಿಸಲು ಸಂದರ್ಭ ಕೊಟ್ಟರೆ ಇವನು ತುಂಬಾ ಸಂತೋಷದಿಂದ ಸ್ವೀಕರಿಸುವನು. ಇಂಥವನಿಗೆ ಸಹಾಯಮಾಡುವ ಕುಟುಂಬ ಸ್ವರೂಪ ಯಾರೂ ಇರುವುದಿಲ್ಲ

ಬೈರಾಗಿ ಫಕೀರರುಗಳೇ ಐದನೆಯ ವರ್ಗದ ಧಾರ್ಮಿಕ ಸದಸ್ಯರು. ಬೇಡಿ ತಿನ್ನುವುದು ಒಂದು ಧರ್ಮ ಸಾಂಪ್ರದಾಯವೆಂದೇ ಇವರ ಬಾವನೆ. ಇವರು ಭಿಕ್ಷೆಯನ್ನು ನೈತಿಕ ಹಕ್ಕಿನಂತೆ ಪ್ರತಿಪಾದಿಸುತ್ತಾರೆ. ಇಂಥವರಲ್ಲಿ ಹೆಚ್ಚಿನವರದು ಬರೆ ಸೋಗು. ನಮ್ಮ ದೇಶದ ಮತೀಯ ಭಾವನೆಯೇ ಪ್ರಧಾನವಾದ ಜನತೆಯು ಇವರ ಕೃತಕ ಹಾವಭಾವಗಳಿಗೆ ಬಲಿಬೀಳುತ್ತಾರೆ

ಪರಿಹಾರ ವಿಧಾನಗಳು: ಸಶಕ್ತನೂ, ಬಲಿಷ್ಟ ಶರೀರಿಯೂ ಆದ ಭಿಕ್ಷುಕನನ್ನು ಒತ್ತಾಯದಿಂದ ಹಿಡಿದೊಯ್ದು ಯಾವುದಾದರೂ ಕೈಗಾರಿಕೆಯಲ್ಲಿ ತೊಡಗಿಸಬೇಕು. ಇದಕ್ಕಾಗಿ ಒಂದು ಪ್ರತ್ಯೇಕ ಸಗೆರ ಬಡಾವಣೆಯಲ್ಲಿ ಆಲಸ್ಯ ಬಿಕ್ಷುಕರನ್ನು ಸಕ್ರಿಯಾವಂತರನ್ನಾಗಿ ಮಾಡುವ ಉದ್ದೇಶದ ವೃತ್ತಿ ಸರಂಜಾಮುಗಳನ್ನು ಸ್ಥಾಪಿಸಬೇಕು. ಅಲ್ಲಿ ಇಂಥವರಿಗೆ ಯೋಗ್ಯ ವೃತ್ತಿಗಳನ್ನು ಕಲಿಸಿ ಸಂಪಾದನೆಮಾಡಲು ಪ್ರೋತ್ಸಾಹಿಸಬೇಕು

ಅಂಗಾಂಗಗಳನ್ನು ವಿಕಾರಮಾಡಿ ವಂಚಿಸುವ ಭಿಕ್ಷುಕನ ಕುರಿತಾಗಿ ಒಂದು ಕಡೆಯಿಂದ ಕಠಿಣವಾಗಿಯೂ ಮತ್ತೊಂದು ಕಡೆಯಿಂದ ವಿವೇಚನೆಯಿಂದಲೂ ವ್ಯವಹರಿಸಬೇಕು. ಚತುರೋಪಾಯ ಕರುಣೆ ವಿನಂತಿಗಳಿಂದಿವನ 'ಕುರುಡು ಕಣ್ಣುಗಳಿಗೆ ದೃಷ್ಟಿಯನ್ನೂ ಕುಂಟೇತರ ಅಂಗಾಂಗಗಳಿಗೆ ಶಕ್ತಿಯನ್ನೂ ಕೊಡಬಹುದು. ನಿರ್ದಯೆಯೂ ಕ್ರೂರಿಯೂ ಆದ (ತನ್ನ ಮಕ್ಕಳ ಅಂಗಾಂಗಗಳನ್ನು ಉದ್ದೇಶಪೂರ್ವಕ ಊನಗೊಳಿಸುವವ) ಮೂರನೇ ವರ್ಗದ ಬಿಕ್ಷುಕರನ್ನು ಸಂಪೂರ್ಣ ನಿರ್ಮೂಲಿಸಬೇಕು. ಇವರು ತಮ್ಮ ಘಾತಕಾರ ಸ್ವಭಾವದಿಂದ ಸಮಾಜ ಕಂಟಕರೂ, ಆಗಲು ಸಂಭವವಿದೆ.

ನಿಜವಾಗಿ ಅಂಗಾಂಗ ಹೀನನಾದವನಿಗೆ ಯೋಗ್ಯ ಧನ ಮತ್ತು ಉದ್ಯೋಗದ ಮೂಲಕ ಸಹಾಯ ಮಾಡುವುದು ಉಚಿತವಿದೆ. ಇವನನ್ನು ಸುಲಭದಲ್ಲಿ ಉಪಯುಕ್ತ ಸಮಾಜ ಸದಸ್ಯನನ್ನಾಗಿ ಮಾಡಬಹುದು

ಧರ್ಮ ಭಾವನೆಯಿಂದ ಶೋಷಣೆ ಮಾಡುವವನು ಒಂದು ವಿಷವೆಂದು ತಿಳಿಯಬೇಕು. ನಮ್ಮ ದೇಶದ ಹೆಸರನ್ನು ಪಾಶ್ಚಾತ್ಯ ದೇಶಗಳಲ್ಲಿ ಅಪಹಾಸ್ಯಕ್ಕೀಡುಮಾಡಿದ ವ್ಯಕ್ತಿಯಿವ. ಭಾರತೀಯರು ಈ ತರದ ಬಿಕ್ಷುಕರ ಮೇಲೆ ಹಣ ವ್ಯಯಿಸುವುದನ್ನು ಎಂದು ನಿಲ್ಲಿಸುವರೋ ಆಗಲೆ ಈ ಸನ್ಯಾಸಿ ಪಕೀರರು ಮಾಯವಾಗುವರು

ಯಾವುದಕ್ಕೂ ಸಾರ್ವಜನಿಕರ ಸಹಾಯವಿಲ್ಲದೆ ಸರಕಾರದ ಪ್ರಯತ್ನಗಳು ಫಲಿಸಲು. ಅದಕ್ಕಾಗಿ ಗೋಡಪತ್ರಗಳ ಮೂಲಕವೂ, ಹಸ್ತಪತ್ರಿಕೆ, ವರ್ತಮಾನ ಪತ್ರಿಕೆಗಳ ಮೂಲಕವೂ ಜನಾಭಿಪ್ರಾಯವನ್ನು ಈ ವಿಷಯದಲ್ಲಿ ಸಂಘಟಿಸುವುದು ಅವಶ್ಯವಿದೆ

ಜರ್ಮನಿಯಲ್ಲಿ ಅಚ್ಚು ಯಂತ್ರವನ್ನು ಕಂಡುಹಿಡಿಯಲ್ಪಟ್ಟಾಗ ಗುಟೆಂಬರ್ಗ್ ಅಲ್ಲಿ ಅಚ್ಚು ಮಾಡಲ್ಪಟ್ಟ ಒಂದು ಬೈಬಲ್ ಗ್ರಂಥವನ್ನು ಲಂಡನ್ನಲ್ಲಿ ಇತ್ತೀಚೆಗೆ ಹರಾಜುಹಾಕಿದಾಗ ಅದಕ್ಕೆ ೨೦ ಲಕ್ಷ ರೂಪಾಯಿ ಕ್ರಯ ಬಂತು.

✠

ಬ್ರೋಂಕ್ಯಾಟಿಸ್, ಕೆಮ್ಮು ಮತ್ತು ಇತರ ಶ್ವಾಸಕೋಶ ಬಾಧೆಗಳಿಗೆ ಪೆಪ್ಸ್ ಅಗತ್ಯ



ಪೆಪ್ಸಿನ ಒಂದು ಮಾತ್ರೆಯನ್ನು ಬಾಯಿಯಲ್ಲಿ ಹಾಕಿರಿ. ಅದು ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧಿಯ ಸಾರವು ನೀವು ಒಳಸೇರಿಕೊಳ್ಳುವ ವಾಯುವಿನೊಡನೆ ಸೇರಿ ಶ್ವಾಸಕೋಶಗಳನ್ನು ಸೇರುವುದು. ಅಲ್ಲಿ ಅದು ನಿಮ್ಮ ಕೆಮ್ಮನ್ನು ನಿವಾರಿಸಿ, ಅಲ್ಲಿ ಸೇರಿರುವ ಕಫವನ್ನು ಹೊರಗೆಡವಿ ಸುಖವನ್ನುಂಟುಮಾಡುವುದು

ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶ ವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ

ಕುಡಿತ ಘಾಯ ಚರ್ಮ ಘಾತಗಳಿಗೆ ಕಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ. ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ

556

ಕುಟಿಕೂರಾ ಮುಲಾಮು

CUTICURA OINTMENT

ವಿಷಹಾರಿ ಪೆಪ್ಸನ್ನೇ ಉಪಯೋಗಿಸಿರಿ

PEPS

ಗಂಟಲು ಮತ್ತು ಎದೆ ಗುಳಿಗೆಗಳು

ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ

ಅತ್ಯಂತ ಪರಿಣಾಮಕಾರಿ ಔಷಧಿ

ಸ್ವದೇಶಾಭಿಮಾನಿ

ತಾರೀಕು 13—8—1948

ಸ್ವಾತಂತ್ರ್ಯ ದಿನ

ಬ್ರಿಟಿಷರು ಎರಡು ಶತಮಾನಗಳ ತಮ್ಮ ಆಳ್ವಿಕೆಯನ್ನು ಈ ದೇಶದಲ್ಲಿ ಮುಕ್ತಾಯಗೊಳಿಸಿ ಹಿಂದುಸ್ಥಾನವು ಸ್ವಾತಂತ್ರ್ಯವಾದ ಆಗೋಸ್ತು ತಾರೀಕು ೧೫ನೇ ದಿನವು ಈ ದೇಶದ ಇತಿಹಾಸದಲ್ಲಿ ಉಜ್ವಲವಾದ ದಿನವಿದ್ದು ಇದನ್ನು ಪ್ರತಿವರ್ಷವೂ ಸಂಭ್ರಮದಿಂದ ಆಚರಿಸುವುದು ಸಹಜವೂ ಯೋಗ್ಯವೂ ಇರುತ್ತದೆ.

ಇದೇ ಬರುವ ಆಗೋಸ್ತು ೧೫ಕ್ಕೆ ನಮ್ಮ ಸ್ವರಾಜ್ಯದ ಪ್ರಥಮ ವರ್ಷವು ಮುಗಿದು ಎರಡನೆಯ ವರ್ಷವಾರಂಭವಾಗುತ್ತದ. ಮೊದಲ ವರ್ಷದ ಸ್ವರಾಜ್ಯದ ಅನುಭವದಿಂದ ಎರಡನೆ ವರ್ಷಕ್ಕಾಗಿ ನಾವು ಕಲಿಯತಕ್ಕ ಪಾಠಗಳೇನೆಂದು ವಿಚಾರಿಸುವುದು ಈ ದಿನಾಚರಣೆಯ ಸಂದರ್ಭದಲ್ಲಿ ಉಚಿತವಿರುತ್ತದೆ.

ನಮ್ಮ ಸ್ವರಾಜ್ಯವು ಈ ಮೊದಲ ವರ್ಷದಲ್ಲಿ ಹಲವು ಮಹಾ ದುರಂತಗಳನ್ನು ಎದುರಿಸಬೇಕಾಗಿ ಬಂದಿತು. ಮಿಲಿಯ ಸಂಖ್ಯೆಯಲ್ಲಿ ಹಿಂದೂ ಮುಸ್ಲೀಮರು ತಮ್ಮ ಸರ್ವಸ್ವವನ್ನು ತ್ಯಜಿಸಿ ಪರಸ್ಪರ ದೇಶತ್ಯಾಗ ಮಾಡುವ ಇತಿಹಾಸದಲ್ಲೆ ಅಪೂರ್ವವೆನಿಸುವ ಘಟನೆಯು ಆರಂಭದಲ್ಲೆ ಸಂಭವಿಸಿತು. ಇಲ್ಲಿಂದ ಅಲ್ಲಿ ಹೋಗುವವರಿಗೆ ಅಲ್ಲಿಂದ ಇಲ್ಲಿ ಬರುವವರಿಗೆ ರೈಲಿನ ಏರ್ಪಾಡು, ತಕ್ಕ ರಕ್ಷಣೆ ಇತ್ಯಾದಿಗಳನ್ನು ಒದಗಿಸಿ ಇಲ್ಲಿ ಬಂದವರಿಗೆ ಉಳಿದುಕೊಳ್ಳುವರೆ ಹಾಗೂ ಮುಂದಿನ ಜೀವನಕ್ಕೆ ವ್ಯವಸ್ಥೆ ಮಾಡುವ ಕಾರ್ಯವಾದರೂ ದೊಡ್ಡ ಪ್ರಮಾಣದ ಕಷ್ಟಕಾರ್ಯವಿತ್ತು. ಇಂಥ ಸಂದರ್ಭದಲ್ಲಿ ಈ ಮಹಾ ಸಾಹಸದ ಕಾರ್ಯವನ್ನು ಎಷ್ಟು ದಕ್ಷತೆಯಿಂದ ನಿರ್ವಹಿಸುವುದು ಸಾಧ್ಯವಿದ್ದಿತೊ ಅಷ್ಟು ದಕ್ಷತೆಯನ್ನು ದೇಶದ ಮುಂದಾಳುಗಳಿಂದ ಕೂಡಿದ ನಮ್ಮ ಸರಕಾರವು ತೋರಿರುತ್ತದೆಂಬ ಬಗ್ಗೆ ಸಂಶಯವಿಲ್ಲ.

ಸ್ವರಾಜ್ಯದೊಡನೆಯೇ ನಮ್ಮಲ್ಲಿಯ ಐನೂರು ಸಂಖ್ಯೆಗೆ ಮಿಕ್ಕಿದ ಸಂಸ್ಥಾನಗಳ ಮುಂದಿನ ವ್ಯವಸ್ಥೆಯ ದೊಡ್ಡ ಪ್ರಶ್ನೆಯೂ ನಮ್ಮ ಸರಕಾರವನ್ನು ಎದುರಿಸಿತು. ಬ್ರಿಟಿಷರು ಆಡಳಿತೆಯನ್ನು ಬಿಟ್ಟುಕೊಡುವಾಗ ಈ ಸಂಸ್ಥಾನಗಳ ಮುಂದಿನ ವ್ಯವಸ್ಥೆ ಮಾಡುವ ಪೂರ್ಣ ಜವಾಬ್ದಾರಿಯನ್ನು ನಮ್ಮ ಸರಕಾರದ ಮೇಲೆಯೇ ಹಾಕಿಬಿಟ್ಟರು. ಈ ಪ್ರಶ್ನೆಯನ್ನಾದರೂ ನಮ್ಮ ಸರಕಾರವು ಈ ಮೊದಲನೆ ವರ್ಷದೊಳಗೆ ಅತ್ಯಂತ ದಕ್ಷತೆಯಿಂದ ಬಿಡಿಸಿತು. ಕಾಶ್ಮೀರ ಮತ್ತು ಹೈದರಾಬಾದಿನ ಪ್ರಶ್ನೆಗಳೆರಡನ್ನು ಬಿಟ್ಟರೆ ಬಾಕಿ ಎಲ್ಲಾ ಸಂಸ್ಥಾನಗಳ ಮುಂದಿನ ವ್ಯವಸ್ಥೆ ಶಾಂತರೀತಿಯಲ್ಲಿ ಸಾಧಿಸಲ್ಪಟ್ಟದು ಸಣ್ಣ ಕೆಲಸವಲ್ಲ. ಬ್ರಿಟಿಷರು ಕೂಡ ತಲೆದೂಗುವಷ್ಟು ರಾಜಕೀಯ ಕುಶಲತೆಯನ್ನು ನಮ್ಮ ಸರಕಾರವು ಈ ವಿಷಯದಲ್ಲಿ ತೋರಿರುತ್ತದೆಂಬುದು ನಿರ್ವಿವಾದ.

ಕಾಶ್ಮೀರ ಹಾಗೂ ಹೈದರಾಬಾದಿನ ಪ್ರಕರಣಗಳಲ್ಲಾದರೂ ನಮ್ಮ ಸರಕಾರವು ಅತ್ಯಂತ ಯೋಗ್ಯ ರೀತಿಯಲ್ಲಿ ವರ್ತಿಸಿದುತ್ತದೆ. ಪಾಕಿಸ್ಥಾನದವರು ಕಾಶ್ಮೀರವನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಲು ಹೂಡಿದ ಹಂಚಿಕೆ ನಡೆಯದಂತೆ ಮಾಡುವುದರಲ್ಲಿ ನಮ್ಮ ಸರಕಾರವು ಪೂರ್ಣ ಯಶಸ್ವಿಯಾಗಿರುತ್ತದೆ. ಭಾರತದ ಸೈನ್ಯಗಳು ಕಾಶ್ಮೀರಕ್ಕೆ ಹೋಗಿ ಮಾಡಿದ ಕಾದಾಟ ಜಯಪ್ರದವಾಗಿದೆಯೆಂಬುದು ಸ್ಪಷ್ಟ. ಪಾಕಿಸ್ಥಾನದ ಕುರಿತಾದ ದೂರನ್ನು ಸಂಯುಕ್ತ ರಾಷ್ಟ್ರದ ಮುಂದೆ ಕೊಂಡುಹೋಗಿ ಎರಡು ರಾಷ್ಟ್ರಗಳೊಳಗೆ ಯುದ್ಧ ಬೇಡವೆಂಬ ತಮ್ಮ ಅಭಿಪ್ರಾಯವನ್ನು ನಮ್ಮ ಸರಕಾರವು ಜಗತ್ತಿಗೇನೇ ತೋರಿಸಿಕೊಟ್ಟಿದೆ. ಆ ಸಂಘವಾದರೊ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಲಿಲ್ಲ. ಆದರೂ ಇಂದು ಈ ಪ್ರಕರಣದಲ್ಲಿ ಪಾಕಿಸ್ಥಾನವೇ ಅನ್ಯಾಯ ಮಾಡುತ್ತಿದೆಯೆಂಬುದು ಜಗತ್ತಿನ ಮುಂದೆ ಋಜುವಾಗುತ್ತಿದೆ

ಹೈದರಾಬಾದು ಪ್ರಕರಣದಲ್ಲಿ ಕೂಡಾ ನಮ್ಮ ಸರಕಾರವು ಪೂರ್ಣ ತಾಳ್ಮೆಯನ್ನು ತೋರಿಸಿರುತ್ತದೆ. ರಾಜಿಯಲ್ಲಿ ಈ ಪ್ರಶ್ನೆಯನ್ನು ತೀರಿಸಲು ಎಷ್ಟು ದೂರ ಹೋಗುವುದು ಸಾಧ್ಯವೋ ಅಷ್ಟು ದೂರವೂ ಹೋಗಿರುತ್ತದೆ. ಹೀಗೆ ಕಾಶ್ಮೀರ ಮತ್ತು ಹೈದರಾಬಾದು ಪ್ರಕರಣಗಳಲ್ಲಿ ನಮ್ಮ ಸರಕಾರವು ಅತ್ಯಂತ ನ್ಯಾಯದಿಂದಲೂ ದಕ್ಷತೆಯಿಂದಲೂ ವರ್ತಿಸಿರುತ್ತದೆಂಬುದನ್ನು ಒಪ್ಪಲೇಬೇಕು

ನಮ್ಮ ವಿದೇಶಾಂಗ ಧೋರಣೆಯಲ್ಲಿಯೂ ನಮ್ಮ ಸರಕಾರವು ತನ್ನ ಯಶಸ್ಸನ್ನು ಕಾಪಾಡಿಕೊಂಡಿರುತ್ತದೆ. ರಶ್ಯ ಅಮೇರಿಕಗಳ ಮುಂದಾಳ್ತನದಲ್ಲಿ ಜಗತ್ತೇ ಎರಡು ತಂಡ ಕಟ್ಟಿಕೊಳ್ಳುವಾಗ ನಮ್ಮ ದೇಶವು ಇತ್ತಂಡಕ್ಕೂ ಸೇರದೆ ಸ್ವಾತಂತ್ರ್ಯವಾಗಿ ವರ್ತಿಸಿರುತ್ತದೆ. ಇದರಿಂದ ಎಲ್ಲ ರಾಷ್ಟ್ರಗಳೂ ನಮ್ಮ ದೇಶವನ್ನು ಗೌರವಿಸುವಂತಾಗುವುದೆಂಬುದಕ್ಕೆ ಸಂಶಯವಿಲ್ಲ. ಏಸ್ಯಾಖಂಡದ ನಮ್ಮ ನೆರೆಹೊರೆಯವರೊಡನೆ ಸ್ನೇಹ ಬೆಳೆಸುವ ಧೋರಣೆಗೂ ಸಾಕಷ್ಟು ಯಶಸ್ಸು ದೊರಕಿರುತ್ತದೆ. ಬ್ರಿಟಿಷ ವಸಾಹತುಗಳಲ್ಲಿರುವ ಭಾರತೀಯರ ಪರಿಸ್ಥಿತಿ ಸುಧಾರಣಾ ಪ್ರಶ್ನೆಯಲ್ಲಿ ನಮ್ಮ ಸರಕಾರ ಹೆಚ್ಚಿನ ಕಾರ್ಯ ಸಾಧಿಸಲಿಲ್ಲವಾದರೂ ಈ ವಿಷಯವನ್ನು ಬಿಟ್ಟು ಕೊಡುವಂತಿಲ್ಲವೆಂಬುದನ್ನು ನಮ್ಮ ಸರಕಾರವು ಸ್ಪಷ್ಟಪಡಿಸಿರುತ್ತದೆ

ದೇಶದ ಅಂತರಿಕ ಆಡಳಿತೆಯ ಕಡೆಗೆ ಸಾಕಷ್ಟು ಗಮನ ಕೊಡಲು ನಮ್ಮ ಸರಕಾರಕ್ಕೆ ಈ ಮೊದಲ ವರ್ಷದಲ್ಲಿ ಹೆಚ್ಚಿನ ಅವಕಾಶ ದೊರೆಯಲಿಲ್ಲವೆಂಬುದು ಸ್ಪಷ್ಟ ವಿಚಾರವಿರುತ್ತದೆ. ಅಂದರೆ ಪ್ರಜಾ ಜನರ ಆರ್ಥಿಕ ಹಾಗೂ ಇತರ ಉನ್ನತಿಯನ್ನು ಸಾಧಿಸುವ ಕಾರ್ಯ ಅಷ್ಟು ಸುಲಭ ಸಾಧ್ಯವಾದ ಕೆಲಸವಲ್ಲ, ಇದನ್ನು ಸಾಧಿಸಲು ಹೆಚ್ಚಿನ ಅವಕಾಶವು ಬೇಕು. ತಮ್ಮ ಆರ್ಥಿಕ ಧೋರಣೆಯನ್ನು ತತ್ವಶಃ ನಮ್ಮ ಸರಕಾರವು ರೂಪಿಸಿ ದೇಶದ ಮುಂದಿರಿಸಿದೆಯಾದರೂ ಈ ಪ್ರಶ್ನೆಗಳ ಕಡೆಗೆ ಇನ್ನು ಸಾಕಷ್ಟು ಗಮನ ಕೊಟ್ಟಿಲ್ಲವೆಂಬುದೇ ನಿಜಸ್ಥಿತಿಯೆನ್ನಬೇಕು.

ನಮ್ಮ ಸ್ವರಾಜ್ಯದ ಮೊದಲ ವರ್ಷದಲ್ಲಿ ಹೆಚ್ಚಿಗೆ ತೊಂದರೆ ಕೊಟ್ಟ ಪ್ರಶ್ನೆಗಳೆಂದರೆ ಜಾತಿದ್ವೇಷ ಹಾಗೂ ಕಮ್ಯುನಿಸ್ಟರ ಹಾವಳಿ. ಜಾತಿ ದ್ವೇಷ ಬೆಳೆಸಿದವರು ಮುಖ್ಯವಾಗಿ ಹಿಂದೂ ಮುಸ್ಲೀಮ ಜಾತೀಯ ಸಂಸ್ಥೆಗಳು. ಈ ವೈರದ ಪರಿಣಾಮವಾಗಿ ಮಹಾತ್ಮಾಗಾಂಧಿಯವರ ನಿಧನವಾದುದು ಸ್ವರಾಜ್ಯದ ಈ ಪ್ರಥಮ ವರ್ಷದಲ್ಲಾದ ಅತಿ ದೊಡ್ಡ ದುರಂತವೆನ್ನಬೇಕು. ನಮ್ಮ ಕಮ್ಯೂನಿಸ್ಟ ಬಂಧುಗಳಾದರೂ ಮೇಲಿಂದ ಮೇಲೆ ಮುಷ್ಕರಗಳನ್ನು ವ್ಯವಸ್ಥೆಗೊಳಿಸಿ ದೇಶದ ಆರ್ಥಿಕ ಸ್ಥಿತಿ ಸುಧಾರಿಸಲು ಅತ್ಯಾವಶ್ಯಕವಾಗಿದ್ದ ಉತ್ಪತ್ತಿ ಹೆಚ್ಚಿಸುವ ಕಾರ್ಯಕ್ರಮಕ್ಕೆ ಸಾಧ್ಯವಾದಷ್ಟು ಅಡ್ಡಿ ತಂದೊಡ್ಡಿದ್ದಾರೆ. ಈ ಅಂತರಿಕ ಕಠಿಣ ಪ್ರಶ್ನೆಗಳನ್ನು ಎದುರಿಸುವುದರಲ್ಲಿ ನಮ್ಮ ಸರಕಾರವು ವಿಶೇಷ ಯಶಸ್ವಿಯಾದಂತೆ ಕಾಣುವುದಿಲ್ಲವೆಂಬುದನ್ನು ಒಪ್ಪಬೇಕು. ಬರೀ ದಬ್ಬಾಳಿಕೆಗಳಿಂದ ಈ ಪ್ರಶ್ನೆಗಳನ್ನು ಬಿಡಿಸುವಂತಿಲ್ಲ.

ಸಾಮಾನ್ಯ ಪ್ರಜಾ ಜನರ ಜೀವನದಲ್ಲಿ ಒಂದು ವರ್ಷದ ಸ್ವರಾಜ್ಯದಿಂದ ಯಾವ ಬದಲಾವಣೆಯೂ ಸಾಧಿಸಲ್ಪಟ್ಟಿಲ್ಲವೆಂಬ ಮಾತನ್ನು ಒಪ್ಪಲೇಬೇಕು. ಅನ್ನ ಬಟ್ಟೆಗಳ ಅಭಾವ ಕ್ರಯಗಳ ವಿಪರೀತ ಏರಿಕೆ ಈ ಸಂಕಷ್ಟಗಳೆಲ್ಲ ಆರಂಭದಲ್ಲಿದ್ದಂತೆ ಈಗಲೂ ಇವೆ.

ಸ್ವರಾಜ್ಯದ ಮೊದಲ ವರ್ಷದ ಈ ವಿಮರ್ಶೆಯಿಂದ ನಾವು ಕಲಿಯತಕ್ಕ ಪಾಠಗಳಾದರೂ ಏನು? ನಮ್ಮ ರಾಷ್ಟ್ರೀಯ ಸರಕಾರವು ಯೋಗ್ಯ ಮುಂದಾಳುಗಳ ಕೈಯಲ್ಲಿರುತ್ತದೆ. ಸ್ವರಾಜ್ಯವು ಬಲವಾಗಿ ಬೇರೂರುವ ತನಕವಾದರೂ ಇವರಿಗೆ ಬೇಕಾದ ಎಲ್ಲ ಬೆಂಬಲ ಕೊಡಬೇಕು ಎಂಬುದು ಎಲ್ಲರೂ ತಿಳಿಯಬೇಕಾದ ಮೊದಲ ಸಂಗತಿ

ದೇಶದ ಅಂತರಿಕ ಆಡಳಿತೆ, ಪ್ರಜಾಜನರ ಸ್ಥಿತಿ ಸುಧಾರಣೆ ಇತ್ಯಾದಿ ಪ್ರಶ್ನೆಗಳಲ್ಲಿ ಕೇಂದ್ರ ಸರಕಾರಕ್ಕಿಂತ ನಮ್ಮವೇ ಆದ ಪ್ರಾಂತಿಕ ಸರಕಾರಗಳೇ ಹೆಚ್ಚಿನ ಭಾಗ ವಹಿಸುವುದಿರುತ್ತದೆ. ಕೇಂದ್ರ ಸರಕಾರವು ಆವಶ್ಯವುಳ್ಳ ಅನುಕೂಲತೆಗಳನ್ನು ಕಲ್ಪಿಸಿಕೊಡಬಲ್ಲದು ಮಾತ್ರ. ಈ ಪ್ರಶ್ನೆಗಳು ಈ ಮೊದಲ ವರ್ಷ ಅಷ್ಟು ತೃಪ್ತಿಕರವಾಗಿ ಸಾಧಿಸಲ್ಪಟ್ಟಿಲ್ಲವಾದರೆ ಅದಕ್ಕೆ ನಮ್ಮ ಪ್ರಾಂತಿಕ ಆಡಳಿತೆಗಳು ಅಷ್ಟೊಂದು ಯಶಸ್ವಿಯಾಗಿ ನಡೆಯುತ್ತಿಲ್ಲವೆಂಬುದೇ ಇದರ ಅರ್ಥವಿರುತ್ತದೆ

ಕೊನೆಯದಾಗಿ ಯಾವ ಆಡಳಿತೆ ಸರಿಯಾಗಿ ನಡೆಯಬೇಕಾದರೂ ಅದೆಲ್ಲವೂ ಪ್ರಜಾ ಜನರು ತಮ್ಮ ಭಾಗದ ಕೆಲಸ ಸರಿಯಾಗಿ ಮಾಡುವುದರ ಮೇಲೆ ಹೊಂದಿಕೊಂಡಿದೆಯೆಂಬದರಿಂದ ನಮ್ಮ ಸ್ವರಾಜ್ಯವು ನಿಜವಾದ ಸ್ವರಾಜ್ಯವಾಗಬೇಕಾದರೆ ನಮ್ಮ ದೇಶದ ಪ್ರಜೆಗಳಿಗೆ ಪ್ರಜಾಧರ್ಮದ ಕುರಿತು ಸಾಕಷ್ಟು ಶಿಕ್ಷಣ ದೊರೆಯುವುದು ಅತ್ಯಗತ್ಯವಿರುತ್ತದೆ

ಅಂತೂ ಸ್ವರಾಜ್ಯದ ಪ್ರಥಮ ವರ್ಷ ಕಳೆಯಿತು. ನಮ್ಮ ಚಿರಸ್ಮರಣೀಯ ಸ್ವಾತಂತ್ರ್ಯ ದಿನವನ್ನು ಆಚರಿಸುವ ಸಂದರ್ಭ ಬಂದಿದೆ. ಕಳೆದ ವರ್ಷದಷ್ಟು ವಿಜೃಂಭಣೆ ಬೇಡವೆಂದೂ ದೀಪೋತ್ಸವ ಇತ್ಯಾದಿ ಬಿಡಬಹುದೆಂದೂ ಸರಕಾರದವರೇ ಸೂಚಿಸಿದ್ದಾರೆ. ಸ್ವರಾಜ್ಯದ ಮೊದಲ ವರ್ಷದಲ್ಲಿ ಮಹಾತ್ಮಾಗಾಂಧಿಯವರನ್ನು ಕಳೆದುಕೊಂಡಿರುವೆವೆಂಬುದರಿಂದ ಈ ಬಾರಿಯ ಸ್ವಾತಂತ್ರ್ಯ ದಿನದಲ್ಲಿ ಸಂತೋಷದೊಡನೆ ದುಃಖದ ಭಾರವೂ ಮಿಶ್ರವಿರುತ್ತದೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ

ಟೀಕೆ-ಟಿಪ್ಪಣಿಗಳು

ಮಿರ್ಜಾ ಇಸ್ಮಾಯಿಲರ ಯತ್ನ ವ್ಯರ್ಥವಾಯಿತು.

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ತಮ್ಮ ಪಕ್ಷಕ್ಕಾದ ಪರಾಭವವನ್ನು ಕಂಡು ಅಥವಾ ಅಟ್ಲೀಯವರ ಹಿತಸೂಚನೆಯಿಂದಾಗಿ ಹೈದರಾಬಾದಿನ ನೈಜಾಮರ ಕಣ್ತೆರೆದಂತೆ ಕಾಣುತ್ತದೆ. ರಜಾಕರ ಪಂಗಡದ ಧೋರಣೆ ಯಶಸ್ವಿಯಾಗುವಂತಿಲ್ಲವೆಂದು ಮನಗಂಡು ಇವರು ತನ್ನ ಸ್ನೇಹಿತರಾದ ಮಿರ್ಜಾ ಇಸ್ಮಾಯಿಲರ ಮೂಲಕ ಭಾರತ ಸರಕಾರದೊಡನೆ ರಾಜಿ ನಡೆಸುವ ಯತ್ನ ಕೈಕೊಂಡರು. ಡೆಲ್ಲಿಯಲ್ಲಿದ್ದ ಹೈದರಾಬಾದು ಸರಕಾರದ ಏಜಂಟರೂ ಇದಕ್ಕೆ ಅನುಕೂಲ ಇದ್ದರು. ಆದರೆ ಈ ಸಂಧಾನದ ಯತ್ನ ಯಶಸ್ವಿಯಾಗಲು ರಜಾಕರ ಪಂಗಡದವರು ಬಿಡಲಿಲ್ಲ. ಈಗಿನ ಹೈದರಾಬಾದು ಸರಕಾರ ರಜಾಕರರ ಕೈಯಲ್ಲಿದೆಯೆಂಬುದೂ ನೈಜಾಮರು ಅವರ ಕೈಯಲ್ಲಿದ್ದಾರೆಂಬುದೂ ಇದರಿಂದ ಸ್ಪಷ್ಟವಾಯಿತು. ಡೆಲ್ಲಿಯಲ್ಲಿದ್ದ ಏಜಂಟರನ್ನು ತೆಗೆದು ಹಾಕಿ ಬೇರೆ ಏಜಂಟರ ನೇಮಕವಾಯಿತು. ಮಿರ್ಜಾ ಇಸ್ಮಾಯಿಲರು ತನ್ನ ದಾರಿ ಹಿಡಿದು ಹೋಗಬೇಕಾಯಿತು. ತನ್ನ ಯತ್ನ ನಿರರ್ಥಕವಾಯಿತೆಂದು ಮಿರ್ಜಾರವರು ಹೇಳಿಕೆ ಇತ್ತಿದ್ದಾರೆ.

ಪ್ರೊ। ಭನಸಾಲಿಯವರ ಪುನಃ ಉಪವಾಸ

ಭನಸಾಲಿಯವರನ್ನು ಹೈದರಾಬಾದು ಸಂಸ್ಥಾನದಲ್ಲಿ ಸ್ವೇಚ್ಛೆಯಿಂದ ತಿರುಗಲು ಬಿಟ್ಟರೆಂಬುದರಿಂದ ಇವರು ತಮ್ಮ ಉಪವಾಸವನ್ನು ಹದಿನರಡನೆಯ ದಿನದಲ್ಲಿ ನಿಲ್ಲಿಸಿ ಸಂಸ್ಥಾನಕ್ಕೆ ಹೋಗಿ ಹಳ್ಳಿಯಿಂದ ಹಳ್ಳಿಗೆ ಪಾದಚಾರಿಯಾಗಿ ಜೊತೆ ಕೆಲಸಗಾರರು ಕೆಲವರೊಂದಿಗೆ ತಿರುಗುತ್ತಿದ್ದರು. ಅಲ್ಲಿ ಇವರು ಕಂಡ ರಜಾಕರರ ಅತ್ಯಾಚಾರಗಳನ್ನು ಸಹಿಸಲಾರದೆ ಇವರು ಪುನಃ ಆಮರಣಾಂತರ ಉಪವಾಸ ದೀಕ್ಷೆಯನ್ನು ಕೈಕೊಂಡಿದ್ದಾರೆ. ರಜಾಕರರಿಗೆ ಸದ್ಬುದ್ಧಿ ಬರಲೆಂಬುದು ಉಪವಾಸದ ಉದ್ದೇಶವಂತೆ. ಭನಸಾಲಿಯವರ ಉಪವಾಸದಿಂದಾದರೂ ರಜಾಕರರಿಗೆ ಸದ್ಬುದ್ಧಿ ಬರುವಂತಾಗಲೆಂದು ನಾವೂ ಹಾರೈಸೋಣ

ಪಾಕಿಸ್ಥಾನದವರು ತಪ್ಪು ಒಪ್ಪುತ್ತಾರೆ

ಕಾಶ್ಮೀರದಲ್ಲಿ ತಮ್ಮ ಸೈನ್ಯಗಳು ಕಾದಾಡುತ್ತಿವೆಯೆಂದು ಪಾಕಿಸ್ಥಾನದವರು ಒಪ್ಪಿಕೊಂಡಿರುತ್ತಾರೆ. ಗಡಿ ಹೊರಗಿನ ಜನರೇ ಕಾದಾಡುವವರು. ತಮಗೆ ಅವರನ್ನು ತಡೆಯಲು ಸಾಧ್ಯವಾಗಿಲ್ಲ ಇತ್ಯಾದಿ ಸುಳ್ಳು ಹೇಳುತ್ತ ದಿನ ತೆಗೆದ ಪಾಕಿಸ್ಥಾನ ಸರಕಾರಕ್ಕೆ ಈಗ ಸಂಯುಕ್ತ ರಾಷ್ಟ್ರ ಸಂಘದ ಕಮಿಶನಿನವರು ಪ್ರತ್ಯಕ್ಷ ಕಾಣುವ ಸಂದರ್ಭ ಬಂದಾಗ ಸತ್ಯಸ್ಥಿತಿ ಹೇಳದೆ ಉಪಾಯವಿರಲಿಲ್ಲ. ಅಂತೂ ಹಿಂದುಸ್ಥಾನ ಸರಕಾರದವರು ಪಾಕಿಸ್ಥಾನದ ಮೇಲೆ ಕೊಟ್ಟ ದೂರು ಸತ್ಯವೆಂಬುದು ಈಗ ಅವರೇ ಒಪ್ಪಿಕೊಂಡಂ

ನಮ್ಮ ಸ್ವರಾಜ್ಯವು ಮಹಾತ್ಮಾಗಾಂಧಿಯವರ ಕಲ್ಪನೆಯ ರಾಮರಾಜ್ಯವಾಗುವಂತೆ ಅವರು ಸೂಚಿಸಿದಂತೆ ವರ್ತಿಸುವ ನಿರ್ಧಾರವನ್ನು ಕೈಕೊಂಡು ಈ ದಿನವನ್ನು ಆಚರಿಸುವುದು ಶ್ರೇಯಸ್ಕರ.

ಗಾಂಧೀಜಿ ಕೊಲೆಯ ಮಹಾ ಪಾತಕ

ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದ ಮಹಾ ಪಾತಕದಿಂದ ಈ ಜನಾಂಗವು ಮುಕ್ತವಾಗಬೇಕೆಂದಿದ್ದರೆ ಅವರು ಅರ್ಧದಲ್ಲಿ ಬಿಟ್ಟ ಕಾರ್ಯವನ್ನು ಪೂರ್ಣಗೊಳಿಸುವುದೊಂದೇ ದಾರಿಯೆಂದು ಆಚಾರ್ಯ ಕೃಪಲಾನಿಯವರು ಇತ್ತೀಚೆಗೆ ಒಂದು ಭಾಷಣದಲ್ಲಿ ಹೇಳಿದರು.

ಆ ಕೊಲೆ ಮಾಡಿದವರು ಈಗ ಡೆಲ್ಲಿಯ ಕೆಂಪುಕೋಟೆಯಲ್ಲಿ ಅಪಾದಿತರಾಗಿ ಯಾರ ತನಿಖೆ ನಡೆಯುತ್ತಿದೆಯೋ ಆ ಗೋಡ್ಸೆ ಮೊದಲಾದವರು ಎಂಬುದು ನಿಜವಿರಬಹುದಾದರೂ ಈ ಕೊಲೆಯ ಮಹಾ ಪಾತಕವು ಮಾತ್ರ ಇಡೀ ಜನಾಂಗಕ್ಕೆ ತಗಲುವುದು ಎಂಬ ಅಭಿಪ್ರಾಯವು ಆಚಾರ್ಯರ ಮಾತಿನಲ್ಲಿ ಅಡಕವಾಗಿದ್ದ ಮೊದಲನೆಯ ಭಾವವಿರುತ್ತದೆ

ಹಿಂದು ಮುಸ್ಲಿಮ ವೈರವನ್ನು ಈ ದೇಶದಲ್ಲಿ ಬೆಳೆಸಿದ ಕಾರಣದಿಂದಲೇ ಗೋಡ್ಸೆ ಆ ಕಾರ್ಯ ಮಾಡುವಂತಾಯಿತೆಂಬುದು ಅಕ್ಷರಶಃ ಸತ್ಯವಿರುತ್ತದೆ ಈ ವೈರವನ್ನು ಬೆಳೆಸಿದ ಅಪರಾಧ ಇಡೀ ಜನಾಂಗಕ್ಕೆ ಸಲ್ಲುತ್ತದೆಂಬುದು ನಿಜ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಹಿಂದು ಮುಸ್ಲೀಮ ವೈರವನ್ನು ಸಾರಿರದಿದ್ದಿಕ್ಕಿಲ್ಲವಾದರೂ ಅದು ಬೆಳೆಯಲು ಬಿಟ್ಟ ಅಪರಾಧವಾದರೂ ಪ್ರತಿಯೊಬ್ಬರ ತಲೆಯ ಮೇಲೆ ಇದೆಯಷ್ಟೇ?

ಹಿಂದೂ ಮಹಾ ಸಭ, ಆರ್ ಎಸ್. ಎಸ್, ಮುಸ್ಲೀಮ ಲೀಗು ಮೊದಲಾದ ಜಾತೀಯ ಪ್ರಮುಖ ಸಂಸ್ಥೆಗಳು ಮಾತ್ರ ಇದಕ್ಕೆ ಹೊಣೆಯೆಂದು ತಿಳಿಯುವುದು ಸರಿಯಲ್ಲ ಜಾತೀಯ ಅಂಧ ಅಭಿಮಾನವಿಲ್ಲದವರು ಈ ದೇಶದಲ್ಲಿ ವಿರಳ ಎಂದರೆ ಅತಿಶಯೋಕ್ತಿ ಇಲ್ಲ ಮದ್ರಾಸ್ ಪ್ರಾಂತ್ಯದ ಬ್ರಾಹ್ಮಣ - ಅಬ್ರಾಹ್ಮಣ ಸ್ಪರ್ಧೆಯೂ ಇದೇ ಜಾತಿಗೆ ಸೇರಿದುದು ಅಸ್ಪೃಶ್ಯತಾ ನಿವಾರಣೆ ಹಾಗೂ ದೇವಸ್ಥಾನ ಪ್ರವೇಶಗಳನ್ನು ಮುಂದರಿಸದಂತೆ ತಡೆಗಟ್ಟುವ ಸಂಕುಚಿತ ಸನಾತನವೆನ್ನಿಸುವ ಭಾವನೆಯೂ ಜಾತಿವೈರದ ಸ್ವಭಾವದ್ದೇ ಎಂಬುದು ಸ್ಪಷ್ಟವಿರುತ್ತದೆ ಈ ಬಗೆಯ ಯಾವ ಭಾವನೆಯೂ ಇಲ್ಲದವರು ಕೆಲವೇ ಮಂದಿ ಇರುವರು ಇಂಥವರಾದರೂ ಈ ತರದ ಭಾವನೆ ನಿರ್ಮೂಲಗೊಳಿಸಲು ದುಡಿಯಬೇಕಿತ್ತು ಸಾಕಷ್ಟು ಯಶಸ್ವಿಯಾಗಿ ಅವರಾದರೂ ದುಡಿದಿಲ್ಲವೆಂಬ ಅಪರಾಧವು ಅವರ ಪಾಲಿಗೂ ಇರುತ್ತದೆ

ಈ ಸಂಕುಚಿತ ಭಾವನೆಯ ಮೂಲವೇನೆಂದು ಪರಿಶೀಲಿಸಿದ್ದರ ಇದು ಕೇವಲ ಸ್ವಾರ್ಥಸಾಧಕರ ಕೈವಾಡವೆಂಬುದು ವೇದ್ಯವಾಗುತ್ತದೆ ಹಿಂದೂ ಮಹಾ ಸಭ ಅಥವಾ ಮುಸ್ಲೀಮ ಲೀಗಿನ ಅಸ್ತಿತ್ವಕ್ಕೆ ಆಯಾ ಜಾತಿಗಳ ಉದ್ಧಾರ ಮಾಡಬೇಕೆಂಬ ಲಾಲಸೆ ನಿಜವಾಗಿಯೂ ಕಾರಣವಲ್ಲ ಆಯಾ ಜಾತಿಗಳ ಉದ್ಧಾರದ ಹೆಸರು ಹೇಳಿ ತಾವು ಮುಂದಾಳುಗಳಾಗಿ ಮೆರೆಯಬೇಕೆಂಬ ಕೆಲವರ ಲಾಲಸೆಯೇ ಇದರ ಬುಡದಲ್ಲಿದೆ ತಮ್ಮ ಕಾರ್ಯದಿಂದ ಆಯಾ ಜಾತಿಗಳ ಹಿತವಾಗುತ್ತದೆಂದು ಕರುಡು ನಂಬಿಗೆಯನ್ನು ಇತರರಲ್ಲಿ ಪ್ರಚಾರ ಮಾಡಲು ತೊಡಗಿ ಕೊನೆಗೆ ತಾವೂ ಅಂದ ಭಾವನೆಗೆ ಬಲಿಬಿದ್ದಿರಬಹುದು ಆದರೂ ನಿಜವಾದ ಸಂಗತಿಯೆಂದರೆ ಮುಂದಾಳುಗಳ ಸ್ವಾರ್ಥಸಾಧನೆಯೇ ಇದರ ನಿಜವಾದ ಮೂಲವಿರುತ್ತದೆ

ಪಂಜಾಬು ಮೊದಲಾದ ಉತ್ತರ ಹಿಂದುಸ್ಥಾನದ ಭಾಗಗಳಲ್ಲಿ ಮಿಲಿಯಾಂತರ ಜನರು ತಮ್ಮ ಕಷ್ಟವನ್ನು ಕಳೆದುಕೊಂಡು ದೇಶಾಂತರ ಹೊಂದುವಂತೆ ಮಾಡಿದ್ದಾದರೂ ಇದೇ ಜಾತೀಯ ವೈರ ಇಂದು ಕಾಶ್ಮೀರದಲ್ಲಿ ಭಾರತ ಪಾಕಿಸ್ಥಾನ ಸೈನ್ಯಗಳು ಹೊಡೆದಾಡುತ್ತಿರುವರಾದರೆ ಅದಕ್ಕೂ ಇದೇ ಮೂಲಕಾರಣ ಹೈದರಾಬಾದಿನಲ್ಲಿ ರಜಾಕರರು ಮಾಡುತ್ತಿರುವ ಅತ್ಯಾಚಾರಗಳಿಗೂ ಇಂಥ ಭಾವನೆಯೇ ಮೂಲದಲ್ಲಿದೆ ಈ ಬಗೆಯ ಅನೇಕ ಅನಿಷ್ಟ ಪರಂಪರೆಗಳು ಈ ದೇಶವನ್ನು ಪೀಡಿಸುತ್ತಲೇ ಇರುವವು ಆ ಜಾತೀಯ ಸಂಕುಚಿತ ಭಾವನೆಯ ನಿರ್ಮೂಲವಾಗದೆ ಈ ಜನಾಂಗಕ್ಕೆ ಕ್ಷೇಮವಿಲ್ಲ

ಆದುದರಿಂದಲೇ ಈ ಜಾತೀಯ ಸಂಕುಚಿತ ಭಾವನೆಯ ಮೇಲೆ ತಾವು ಯುದ್ಧ ಹೂಡಿರುವುದಾಗಿ ಪಂಡಿತ ಜವಾಹರಲಾಲರು ಮದ್ರಾಸಿನ ತಮ್ಮ ಭಾಷಣದಲ್ಲಿ ಉದ್ಗಾರವೆತ್ತಿದರು ಬೊಂಬಾಯಿ ಸರಕಾರದವರು ತಮ್ಮ ನೌಕರರು ಜಾತೀಯ ಸಂಸ್ಥೆಗಳು ಕೇವಲ ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗುವ ಸೋಗು ಹಾಕಿಕೊಂಡರೂ ಇಂಥ ಸಂಸ್ಥೆಗಳಲ್ಲಿ ಸೇರಕೂಡದೆಂಬ ಕಟ್ಟಾಜ್ಞೆ ಹೊರಡಿಸಲು ಕಾರಣವಾಯಿತು

ಇಡೀ ದೇಶದ ಉನ್ನತಿ ಸಾಧಿಸುವುದರಿಂದ ಮಾತ್ರ ಆಯಾ ಜಾತಿ ಅಥವಾ ಪ್ರಾಂತ್ಯದ ಉನ್ನತಿ ಸಾಧಿಸುವುದು ಸಾಧ್ಯವಾಗುತ್ತದೆ ಇದಕ್ಕೆ ಬದಲು ಒಂದೊಂದು ಗುಂಪಿನ ಉನ್ನತಿ ಸಾಧಿಸಲು ಹೊರಟವರು ದೇಶದ ಉನ್ನತಿಗೆ ಅಡ್ಡಿ ಮಾಡುವರು ಮಾತ್ರವಲ್ಲ ತಮ್ಮ ಗುಂಪಿನ ಉನ್ನತಿಯನ್ನು ಕೂಡಾ ಸಾಧಿಸಲಾರರೆಂದು ಪಂಡಿತ ಜವಹರಲಾಲರು ವಿವರಿಸಿದ ಮಾತುಗಳು ಅಕ್ಷರಶಃ ಸತ್ಯವಿರುತ್ತವೆ

ಗಾಂಧೀ ನಿಧನದ ಪಾತಕದಿಂದ ಜನಾಂಗವು ಮುಕ್ತವಾಗುವ ತನಕ ಈ ದೇಶಕ್ಕೆ ಮೇಲಿಂದ ಮೇಲೆ ಅನಿಷ್ಟ ಪರಂಪರೆಗಳು ಸಂಭವಿಸುವವು ಆದುದರಿಂದ ಈ ಪಾತಕದಿಂದ ನಾವು ಮುಕ್ತರಾಗಬೇಕು ... ದರ ಆವಶ್ಯಕತೆಯು ಇಷ್ಟು ಇರುತ್ತದೆ ಯಾವ ಕಾರಣಗಳು ಗಾಂಧೀ ನಿಧನವನ್ನು ತಂದೊಡ್ಡಿದವೋ ಅವನ್ನು ನಿರ್ಮೂಲಗೊಳಿಸಿ ಅವುಗಳಿಂದ ನಾವು ಬಿಡುಗಡೆ ಹೊಂದುವುದಿಲ್ಲವಾದರೆ ಆ ಕಾರಣಗಳು ಈ ದೇಶಕ್ಕೆ ಮೇಲಿಂದ ಮೇಲೆ ಅನಿಷ್ಟವನ್ನು ತಂದೊಡ್ಡುವವು ಈ ಅನಿಷ್ಟಗಳನ್ನು ತಡೆಯುವುದಕ್ಕಾಗಿ ಹಾಗೂ ದೇಶದ ಕ್ಷೇಮವನ್ನು ಸಾಧಿಸುವುದಕ್ಕಾಗಿ ಆ ಸಂಕುಚಿತ ಭಾವನೆಗಳನ್ನು ನಿವಾರಿಸುವುದು ಅಗತ್ಯ ಎಂಬುದೇ ಮುಖ್ಯ ಅಭಿಪ್ರಾಯ

ಈ ಜಾತೀಯ ಭಾವನೆಗಳನ್ನು ಕೇವಲ ಬರವಣಿಗೆಯಿಂದ ಅಥವಾ ಉಪನ್ಯಾಸಗಳಿಂದ ಹಾಗೆಯೇ ಸರಕಾರೀ ಕಾನೂನುಗಳ ಮೂಲಕ ಮಾತ್ರ ನಿರ್ನಾಮಗೊಳಿಸುವುದು ಸಾಧ್ಯವಿಲ್ಲ

ಜಾತಿ ಮತ ಭೇದವಿಲ್ಲದೆ ಎಲ್ಲ ಜನರ ಉನ್ನತಿಯನ್ನು ತಂದೊಡ್ಡುವ ಕಾರ್ಯಗಳನ್ನು ಮಾಡಿ ತೋರಿಸಿಯೇ ಈ ಸಂಕುಚಿತ ಭಾವನೆಗಳಲ್ಲಿ ಸಾರವಿಲ್ಲವೆಂಬುದನ್ನು ಖಚಿತಗೊಳಿಸುವುದು ಸಾಧ್ಯವಿರುತ್ತದೆ.

ಎಲ್ಲ ಜನರ ಉನ್ನತಿಯನ್ನು ಕಾರ್ಯತಃ ಸಾಧಿಸುವ ದಾರಿಯೆಂದರೆ ಮಹಾತ್ಮಾ ಗಾಂಧಿಯವರು ಹಾಕಿ ಕೊಟ್ಟಿರುವ ವಿಧಾಯಕ ಕಾರ್ಯಕ್ರಮದ ಹಾದಿ. ಇದನ್ನು ಬಲವತ್ತರವಾಗಿ ಮುಂದರಿಸುವುದರಿಂದ ಮಾತ್ರ ಜಾತಿ ದ್ವೇಷದ ವಿಷವನ್ನು ಕಿತ್ತೊಗೆಯುವುದು ಸಾಧ್ಯವಿಯುತ್ತದೆ.

ಆದುದರಿಂದಲೇ ಮಹಾತ್ಮಾಗಾಂಧಿಯವರು ಕೈಕೊಂಡು ಅರ್ಧದಲ್ಲಿ ನಿಲ್ಲಿಸಿದ ಈ ವಿಧಾಯಕ ಕಾರ್ಯಕ್ರಮವನ್ನು ಪೂರ್ಣಗೊಳಿಸುವುದರಿಂದ ಮಾತ್ರ ಗಾಂಧೀ ನಿಧನದಿಂದ ಪ್ರಾಪ್ತವಾದ ಪಾತಕವು ಪರಿಹರಿಸಲ್ಪಡುವುದೆಂದು ಆಚಾರ್ಯ ಕೃಪಲಾನಿಯವರು ಹೇಳಲು ಕಾರಣವಾಯಿತು.

ಜಾತಿ ಹಾಗೂ ಪ್ರಾಂತಿಕ ಅಭಿಮಾನಗಳನ್ನು ಕೆರಳಿಸಿ ಮುಂದಾಳುಗಳಾಗಲು ಮುಂದೆ ಬರುವವರ ಮಾತುಗಳಿಂದ ಮೋಸ ಹೋಗದೆ ವಿಧಾಯಕ ಕಾರ್ಯವನ್ನು ಮುಂದೊತ್ತುವ ನಿರ್ಧಾರವನ್ನು ಪ್ರಜಾಜನರು ಈ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಕೈಕೊಂಡಲ್ಲಿ ಸ್ವರಾಜ್ಯದ ಎರಡನೇ ವರ್ಷದಲ್ಲಾದರೂ ಹೆಚ್ಚಿನ ದೇಶ ಹಿತವು ಸಾಧಿಸಲ್ಪಡುವಂತಾದೀತು

ತಾಯಿತು ಪಾಕಿಸ್ತಾನದವರೇ ಈ ಕಾಶ್ಮೀರ ಪ್ರಕರಣದಲ್ಲಿ ತಪ್ಪಿತಸ್ಥರೆಂಬುದು ಈ ರೀತಿ ರುಜುವಾದ ಬಳಿಕ ಆದರೂ ಭದ್ರತಾಸಮಿತಿಯವರು ಇವರನ್ನು ಕಾಶ್ಮೀರ ಬಿಟ್ಟು ಹೋಗುವಂತೆ ಆಜ್ಞೆ ಕೊಡುವರೆ? ಪಾಕಿಸ್ಥಾನ ಮತ್ತು ಭಾರತ ಎರಡೂ ಬ್ರಿಟಿಷ ಡೊಮಿನಿಯನುಗಳೆಂಬುದರಿಂದ ಬ್ರಿಟಿಷ ಸರಕಾರವಾದರೂ ಪಾಕಿಸ್ಥಾನವು ಹಿಂದೆ ಹೋಗಬೇಕೆಂದು ಹೇಳುವುದೆ? ಅಥವಾ ತಿರುಗಿ ಇದನ್ನು ಕುರಿತು ಸಲ್ಲದ ಯೋಜನೆಗಳಿಂದ ಬಿಡಿಸಲು ಸೂಚಿಸುವರೇ ನೋಡಬೇಕು ಸಂಯುಕ್ತ ರಾಷ್ಟ್ರ ಸಂಘ ಹಾಗೂ ಬ್ರಿಟಿಷ ಸರಕಾರದ ನ್ಯಾಯ ಬುದ್ಧಿಯ ಪೂರ್ಣ ಪರೀಕ್ಷೆ ಈ ಕಾಶ್ಮೀರ ಪ್ರಶ್ನೆಯಿಂದ ಆಗುವಂತೆ ಕಾಣುತ್ತದೆ

ಗಡಿಜನರ ಮೇಲೆ ಬಾಂಬು

ಪಾಕಿಸ್ಥಾನಕ್ಕೆ ಗಡಿ ಹೊರಗಿನ ಜನರು ಸಹಕಾರ ಕೊಡುತ್ತಿರುವರೆಂಬುದನ್ನು ಈ ಮೊದಲೇ ಹೇಳಲಾಗಿತ್ತಷ್ಟೆ ಈ ತೊಂದರೆ ನಿವಾರಣೆಗೆ ಪಾಕಿಸ್ಥಾನದವರು ಈ ನಿರಾಯುಧ ಜನರ ಮೇಲೆ ಬಾಂಬುಗಳನ್ನು ಸುರಿದರೆಂದೂ ಈ ಕುರಿತು ಅಫಘಾನಿಸ್ಥಾನ ಸರಕಾರ ಬಲವತ್ತರವಾದ ಆಕ್ಷೇಪ ಹೇಳಿದೆಯೆಂದೂ ತಿಳಿದುಬರುತ್ತದೆ ಇದೇ ರೀತಿ ನಿರಾಯುಧರಾದ ಜನರ ಮೇಲೆ ಅತ್ಯಾಚಾರ ಮುಂದೆ ಸಾಗಿಸಿದರೆ ಈ ಪ್ರಶ್ನೆಯನ್ನು ಸಂಯುಕ್ತರಾಷ್ಟ್ರ ಸಭೆಯ ಮುಂದೆ ಕೊಂಡು ಹೋಗುವುದಾಗಿ ಆ ಸರಕಾರದವರು ಪಾಕಿಸ್ಥಾನಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ

ಜಾತೀಯ ಸಂಸ್ಥೆಗಳ ಕುರಿತು ಬೊಂಬಾಯಿ ಸರಕಾರದ ಧೋರಣೆ

ಜಾತೀಯ ಸಂಸ್ಥೆಗಳಿಗೆ ರಾಜಕೀಯ ಉದ್ದೇಶವಿಲ್ಲದೆ ಕೇವಲ ತಮ್ಮ ಜಾತಿಯ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿ ಸಾಧಿಸುವುದು ಮಾತ್ರ ಉದ್ದೇಶವಿದ್ದಲ್ಲಿ ಇಂಥ ಸಂಸ್ಥೆಗಳಲ್ಲಿ ಸೇರಲು ಬೊಂಬಾಯಿ ಸರಕಾರ ತನ್ನ ನೌಕರರಿಗೆ ಬಿಡುತ್ತಿತ್ತು ಆದರೆ ಈಗ ಇಂಥ ಸಂಸ್ಥೆಗಳಲ್ಲಿ ಕೂಡಾ ಸೇರಕೂಡದೆಂದು ಆಜ್ಞೆ ಕೊಟ್ಟಿರುತ್ತದೆ ಜಾತೀಯ ಸಂಸ್ಥೆಗಳು ಜಾತೀಯ ಸಂಕುಚಿತ ಭಾವನೆಯನ್ನು ಬೆಳೆಸುವವೆಂಬುದರಿಂದ ಈ ರೀತಿ ಆಜ್ಞೆ ಕೊಡಲಾಗಿದೆಯೆಂದು ಆ ಸರಕಾರ ಸ್ಪಷ್ಟಪಡಿಸಿರುತ್ತದೆ.

ಬ್ರಾಹ್ಮಣೇತರರ ಉದ್ಧಾರದ ಹೆಸರು ಹೇಳಿ ಮುಂದಾಳುಗಳಾಗುವವರಾದರೂ ಇದೇ ಬಗೆಯ ಸ್ವಾರ್ಥಸಾಧಕರು ಅಸ್ಪೃಶ್ಯತಾನಿವಾರಣೆಯನ್ನು ಮುಂದೊತ್ತದಂತೆ ತಡೆಗಟ್ಟುವವರಾದರೂ ತಮ್ಮ ತಮ್ಮ ಸಂಕುಚಿತ ಸ್ವಾರ್ಥದಿಂದಾಗಿಯೇ ಹಾಗೆ ಮಾಡುತ್ತಿರುವರು

ಇದೇ ಬಗೆಯ ಸ್ಪರ್ಧೆಯು ಇತ್ತೀಚೆಗೆ ಇನ್ನೊಂದು ವಿಧಾನದಲ್ಲಿ ವ್ಯಕ್ತಗೊಳ್ಳಲು ಆರಂಭವಾಗಿರುತ್ತದೆ ಇದು ಆಯಾ ಪ್ರಾಂತ್ಯದ ಉದ್ಧಾರದ ಸೋಗು ಧರಿಸುತ್ತದೆ ಈ ಮುಂದಾಳುಗಳಿಗೆ ಬೇಕಾದುದು ಆಯಾ ಪ್ರಾಂತ್ಯಗಳ ಉದ್ಧಾರವಲ್ಲ ತಮ್ಮ ಮುಂದಾಳ್ತನವನ್ನು ಸ್ಥಾಪಿಸುವ ಹಂಚಿಕೆ ಮಾತ್ರವಿದೆಂಬುದು ಇದನ್ನು ಸರಿಯಾಗಿ ಪರಿಶೀಲಿಸಿದರೆ ಸ್ಪಷ್ಟವಾಗುವುದು

ಸ್ವಾರ್ಥಮೂಲವಾದ ಇಂಥ ಸಂಕುಚಿತ ಭಾವನೆಗಳು ಒಟ್ಟು ಸೇರಿ ಮಹಾತ್ಮಾ ಗಾಂಧಿಯಂಥ ಜಗದ್ವಂದ್ಯ ವ್ಯಕ್ತಿಯ ಕೊಲೆಯಾಗುವಂತೆ ಮಾಡಿದವು.

ಕಿರುಸುದ್ದಿ ಸಂಗ್ರಹ

ಡಾ। ಟಾಲಿಸ್ ಎಂಬ ಗ್ಲಾಸ್ಗೋ ನಗರದ ಪಕ್ಷಿತಜ್ಞರು ತನ್ನ ಕೋಳಿಗಳನ್ನು ಹುಲ್ಲು ತಿನ್ನಿಸಿ ಸಾಕುತ್ತಾರೆ ಅವು ಹುಲ್ಲನ್ನು ತಿನ್ನುವುದಿಲ್ಲ ಆದರೆ ಡಾ। ಟಾಲಿಸರು ಅವಕ್ಕೆ ಹುಲ್ಲಿನ ಸತ್ವಗಳಿರುವ ಮಾತ್ರೆಗಳನ್ನು ಕೊಡುತ್ತಾರೆ ಇದರಿಂದ ಅವುಗಳ ಮೊಟ್ಟೆಯಿಡುವ ಶಕ್ತಿಗೆ ಹಾನಿ ಉಂಟಾಗಿಲ್ಲವಂತೆ.

✠

ಕೆನಡದ ಹಿರಿಯ ಮೆಜಿಸ್ಟ್ರೇಟರು ಮದ್ಯಪಾನ ಕುಡಿದು ಅಪಾಯತ ಮಾಡುವ ಆರೋಪಿಯನ್ನು ಕುರಿತು ನಿಮಗೆ ಮದ್ಯವಿಲ್ಲದ ಸ್ವರ್ಗಕ್ಕೆ ಹೋಗುವ ಇಲ್ಲವೆ ಮದ್ಯವಿರುವ ಘೋರ ಸ್ಥಳಕ್ಕೆ ಹೋಗುವ ಸಂದರ್ಭ ಕೊಟ್ಟರೆ ನೀವು ಯಾವುದನ್ನು ಆರಿಸಿಕೊಳ್ಳುತ್ತೀರಿ? ಎಂದು ಕೇಳಿದಾಗ "ನರಕ"ವೆಂದನಾತ ಅವನಿಗೆ ... ದಂಡ ... ಜುಲ್ಮಾನ ಮಾಡಲಾಯಿತು.

✠

ಪಾಕಿಸ್ತಾನದ ಜೈಲುಗಳಲ್ಲಿನ ಮುಸ್ಲಿಂ ಕೈದಿಗಳು ಈ ರಮಜಾನ್ ಹಬ್ಬದ ಸಮಯದಲ್ಲಿ ವಿಶೇಷ ಭಕ್ತಿಯನ್ನು ತೋರಿಸಿದ್ದು ಕಂಡುಬಂದಿದೆ

✠

ಒಂದು ಚೆಕ್ ಹಳ್ಳಿಯ ಪಂಚಾಯತಿಯವರು ತಮ್ಮ ಕಛೇರಿಯಲ್ಲಿ ಈ ನೋಟೀಸನ್ನು ಪ್ರಕಟನೆಗಾಗಿ ಹಚ್ಚಿದ್ದು ಕಂಡುಬಂತು. "ನಾಳೆ ಹಳ್ಳಿಯಲ್ಲಿನ ಎಲ್ಲ ಹಂದಿಗಳ ಖಾನೇಸುಮಾರಿ ತೆಗೆಯಲಾಗುವುದು ಪ್ರತಿಯೊಬ್ಬರೂ ಹಾಜರಾಗಿರಬೇಕಾಗಿ ವಿನಂತಿ"

✠

ಯುಕ್ತಪ್ರಾಂತ್ಯದ • ಗವರ್ನರರಾದ ಶ್ರೀಮತಿ ಸರೋಜಿನಿ ದೇವಿಯವರು ನೈನಿತಾಲ್ ನಗರ ಸಭೆಯ ಮಾನಪತ್ರ ಸ್ವೀಕರಿಸಲು ಹೋದಾಗ ಬಹುಕಾಲದಿಂದ ಅವರು ಧರಿಸುತಿದ್ದ ಒಂದು ಗಣೇಶ ದೇವರ ಕೆತ್ತನೆಯ ಚಿತ್ರದ ಪದಕವಿರುವ ಬಂಗಾರದ ಕೈ ಸರಪಣಿಯನ್ನು ಕಳಕೊಂಡರು.

✠

ವಿದ್ಯಾರ್ಥಿಗಳ ವಾಣಿಜ್ಯ ಸಂಘ

ಈಚೆಗೆ ಸೈಂಟ್ ಎಲೋಶಿಯಸ್ ಕೊಲೇಜಿನ ಕಾಮರ್ಸ್ ಸಂಘದ ಆರಂಭ ಸಭೆ ಶ್ರೀ ಸಿ. ಪಿ. ವರ್ಗೀಸ್ ಎಂ. ಎ. ಎಲ್. ಎಲ್. ಬಿ. ಬಿ. ಡಿ. ಎ. ಆರ್. ಐ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಭಾಷಣಕಾರರೂ, ಕೊಲೇಜಿನ ಹಳೆ ವಿದ್ಯಾರ್ಥಿಗಳೂ, ಸ್ಥಳೀಯ ಇಂಪೀರಿಯಲ್ ಬೇಂಕಿನ ಏಜೆಂಟರೂ ಆದ ಮಿ। ಸಿ. ಟಿ. ಕಾರ್ಲ್‌ಸನ್ ಅವರನ್ನು ಅಧ್ಯಕ್ಷರು ಸಭೆಗೆ ಪರಿಚಯ ಮಾಡಿ ಕೊಟ್ಟ ಮೇಲೆ ಮಿ। ಕಾರ್ಲ್‌ಸನ್ನರು, ಸಮತಾವಾದ, ಬಂಡವಾಳಶಾಹಿ, ಸಮಾಜವಾದ ಮೊದಲಾದುವುಗಳನ್ನು ವಿಮರ್ಶಿಸುತ್ತ ಪ್ರಸ್ತುತದ ರಾಜಕೀಯ ಅರ್ಥಶಾಸ್ತ್ರದ ಕುರಿತೂ ವಿವರಿಸಿದರು. ವಿದ್ಯಾರ್ಥಿಗಳು ರಾಜಕೀಯಕ್ಕೆ ಕೈ ಹಾಕುವಾಗ ಅಂಧರೀತಿಗಳನ್ನು ಅನುಸರಿಸಬಾರದು, ಸಂಗತಿಗಳನ್ನು ಇದ್ದಂತೆ ತಿಳಕೊಂಡು ಸ್ವತಂತ್ರವಾಗಿ ಆಲೋಚಿಸಿ ವರ್ತಿಸಬೇಕೆಂದು ಉಪದೇಶಿಸಿದರು.

ಉಪಾಧ್ಯಾಯ ಸಂಘದ ಸಭೆ

ಟಿಸೆಂಟ್ ಮಂದಿರದಲ್ಲಿ ದ. ಕ. ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ಸಭೆ ಅಧ್ಯಕ್ಷ ಏಕಾಂಬರರಾಯರ ನೇತೃತ್ವದಲ್ಲಿ ಈಚೆಗೆ ಜರಗಿದಾಗ ಸೆಕಂಡರಿ ಶಿಕ್ಷಣ ಸುಧಾರಣೆಗಳಿಗೆ ಸ್ವಾಗತ ಬಯಸಲಾಯಿತು. ಸದ್ಯಕ್ಕೆ ಅದರ ವಿಷಯ ಸ್ವಲ್ಪ ತೊಂದರೆಗಳಿರುವುದಾದರೂ ಮಾತೃಭಾಷೆಗೆ ಅದರಲ್ಲಿ ಕೊಡಲ್ಪಟ್ಟ ಮಹತ್ವದ ಸ್ಥಾನದ ದೃಷ್ಟಿಯಿಂದ ಉಪಾಧ್ಯಾಯರು ಉತ್ಸಾಹದಿಂದ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಸೂಚಿಸಲಾಯಿತು. "ಪೌರತನ ಶಿಕ್ಷಣ"ದಲ್ಲಿ ಉಪಾಧ್ಯಾಯರು ತರಬೇತಾಗುವಂತೆ ಯಾವತ್ತೂ ಜಿಲ್ಲೆಗಳಲ್ಲಿ ಉಪಾಧ್ಯಾಯರನ್ನು ತರಬೇತುಗೊಳಿಸುವುದಕ್ಕಾಗಿ "ಸಾಮಾಜಿಕ ವ್ಯಾಸಂಗ" "ಶಾಲಾ ಹೊರಗಿನ ಚಟುವಟಿಕೆ" ಇತ್ಯಾದಿಗಳ ಶಿಕ್ಷಣದ ಬಗ್ಗೆ ಕೇಂದ್ರಗಳನ್ನು ಸ್ಥಾಪಿಸಬೇಕು, ಆಧುನಿಕ ಗದ್ಯ ಪದ್ಯಗಳ ವ್ಯಾಸಂಗದಲ್ಲಿ ವ್ಯಾಕರಣ ಅಲಂಕಾರಗಳ ಭಾರವನ್ನು ಹೇರದೆ ಪ್ರಬಂಧ. ವಿಚಾರಗಳನ್ನು ಅರಿಯುವ ಗ್ರಹಣ ಶಕ್ತಿಯನ್ನು ಬೆಳೆಸುವ ಈ ವಿಷಯಗಳಿಗೆ ಪ್ರಾಧಾನ್ಯತೆ ಕೊಡಬೇಕು. ಉಪಾಧ್ಯಾಯ ತರಬೇತಿಯಲ್ಲಿ ಚಿತ್ರಗಾರಿಕೆ, ವ್ಯಾಯಾಮ ಬೋಧೆಗಳಿಗೆ ಹೆಚ್ಚಿನ ಲಕ್ಷ್ಯ ಕೊಡಬೇಕು. ತರಬೇತಾದ ಭಾಷಾ ಪಂಡಿತರಿಗೆ ಭರ್ತಿಸಲ್ಲಬೇಕು, ಮುಂದಿನ ವಿದ್ವಾನರು ಎಸ್. ಎಸ್. ಎಲ್. ಸಿ. ಯೋಗ್ಯತೆಯನ್ನು ಪಡೆದಿರಬೇಕು.

ಜಿಲ್ಲಾ ಸಮಾಚಾರ

ಎಂಬಿತ್ಯಾದಿ ಸೂಚನೆಯನ್ನು ಸರಕಾರಕ್ಕೆ ಮಾಡಲಾಯಿತು.

ಮದ್ಯಪಾನ ನಿಷೇಧ ಶಾಖೆಯ ಕಮಿಶನರರ ಜಿಲ್ಲಾ ಸಂದರ್ಶನ

ರೆವಿನ್ಯೂ ಬೋರ್ಡ್ ಮೆಂಬರರೂ ಪಾನ ನಿಷೇಧ ಶಾಖೆಯ ಕಮಿಶನರರೂ ಆದ ಶ್ರೀ ಎ. ಎಸ್. ಕುಡ್ವ ಐ. ಸಿ. ಎಸ್. ಸಿ. ಐ. ಇ. ಅವರು ಜ್ಯ ಡೆ॥ ಜಿಲ್ಲಾಧಿಕಾರಿ ರಾ। ಸಾ। ಕೆ. ಸರ್ವೋತ್ತಮ ರಾವ್, ಜಿಲ್ಲಾ ಪ್ರೊಹಿಬಿಶನ್ ಅಫಿಸರ್ ಶ್ರೀ ಶೇಷಗಿರಿ ಇವರು ಸಹಿತ ತಾ. ೧೦ರಲ್ಲಿ ಮೂಡಬಿದ್ರೆಯಲ್ಲಿ ಸದ್ಯವೆ ತೆರೆಯಲಿರುವ ತಾಳೆಬೆಲ್ಲ ಶಾಲಾ ವ್ಯವಸ್ಥೆಯನ್ನು ನೋಡಿದರು. ಬೆಳ್ತಂಗಡಿ ಬಳಿಯ ಕುವೆಟ್ಟು ಎಂಬಲ್ಲಿ ಮುರ್ತೆದಾರರ ಸುಮಾರು ೧೦೦ ಕುಟುಂಬಗಳಿಗೆ ೮೦೦ ಎಕ್ರೆ ಭೂಮಿಯನ್ನೂ ಅದಕ್ಕೆ ಸಂಬಂಧಿಸಿದ ಯೋಜನೆಯನ್ನೂ ಪರಿಶೀಲಿಸಿದರು.

ಡಕಾಯಿತಿ ಆರೋಪಕ್ಕೆ ಸಜೆ

ಉಡುಪಿ ಬಳಿಯ ಉಪ್ಪೂರು ಗ್ರಾಮಕ್ಕೆ ಒಯ್ಯಲ್ಪಡುತ್ತಿದ್ದ ಅಕ್ಕಿ ಮುಡಿ ತುಂಬಿದ ಗಾಡಿಯೊಂದನ್ನು ಬಲಾತ್ಕಾರದಿಂದ ತಡೆಹಿಡಿದು ಅಕ್ಕಿಯನ್ನು ಎಳೆದೊಯ್ದರೆಂದು ಅದೇ ಗ್ರಾಮದ ಅನುಪಾಸಿನ ೬ ಮಂದಿಗಳ ಮೇಲೆ ಹಾಕಿದ್ದ ಚಾರ್ಜ್ ಸೀಟು ಅಸಿ. ಸೆಶ್ಯನ್ಸ್ ಜಡ್ಜರಲ್ಲಿ ತನಿಖೆಯಾಗಿ ಆರೋಪಿಗಳಿಗೆ ತಲಾ ೬ ತಿಂಗಳ ಶಿಕ್ಷೆ ವಿಧಿಸಲಾಯಿತು.

ಮಳೆ

ಕಳೆದ ವಾರದಲ್ಲಿ ಬಿಸಿಲು ಬಿದ್ದು ಒಣಕಲು ಹವೆಯಿದ್ದಂತೆ ಈ ವಾರದಲ್ಲಿ ಬಿರುಸಾದ ಮಳೆ ಬಿದ್ದು ಮರಗಟ್ಟುವ ಚಳಿ ಶೀತಗಳುಂಟಾಗಿವೆ. ಬೆಳಗಿನ ಹೊತ್ತಿನಲ್ಲಿ ದಪ್ಪವಾದ ಮಂಜು ಮುಸುಕಿದಂತಿರುವುದು ನಮ್ಮಂತಹ ಉಷ್ಣ ಜಿಲ್ಲೆಯಲ್ಲಿ ಅಪರೂಪದ ಅನುಭವ. ಕೆಲವು ದಿವಸಗಳಂತೂ ಬಿಡದೆ ಮಳೆ ಸುರಿದುದರ ಪರಿಣಾಮವಾಗಿ ಬಂಟ್ವಾಳ, ಪಾಣೆಮಂಗಳೂರು ಜೋಡುಮಾರ್ಗ, ಗುರುಪುರ ಮೊದಲಾದ ಕಡೆಗಳಲ್ಲಿ ನೆರೆ ಬಂದಿದೆಂದು ವಾರ್ತೆ ಇದೆ. ತಾ. ೧೧ರಂದಿನ ಅತ್ತಕಡೆಯ ಮೋಟಾರುಗಳು ಬಂದಿರಲಿಲ್ಲ. ಬರೆಯುವ ಅವಧಿಯಲ್ಲೂ ಮಳೆಯ ಭರ ಕಡಿಮೆಯಾಗಿಲ್ಲ. ಆಕಾಶವೂ ತುಂಬು ಮೋಡಗಳಿಂದೊಡಗೂಡಿದೆ. ಕೆಲದಿನಗಳು ಮಳೆಯಿಲ್ಲದೆ ಬೆಳೆಗೆ ಹಾನಿಯಾಗಬಹುದೆಂದು ನಿರೀಕ್ಷಿಸಿದ್ದು, ಈಗ ಅತಿ ಮಳೆಯಿಂದ ವಿನಾಗುವುದೊ ಎಂದು ಆಸಕ್ತಿ ವಹಿಸಬೇಕಾಗಿದೆ.

ಕಳ್ಳತನಗಳು

ಮಳೆಯ ವಿಪರೀತತೆಯ ಸದುಪಯೋಗ ಮಾಡಿಕೊಳ್ಳುವ ಎಂಬಂತೆ ನಗರದಲ್ಲಿ ಸಣ್ಣಪುಟ್ಟ ಕಳವುಗಳ ವರ್ತಮಾನವು ಕೇಳಬರುತ್ತವೆ. ಜೇಡಿಗುಡ್ಡೆಯಲ್ಲಿಯ ಶ್ರೀ ಪುತ್ತು ವೈಕುಂಟ ಶೇಟರು ಕಟ್ಟಿಸಿದ ದೇವಳದ ಕಾಣಿಕೆಯ ಡಬ್ಬಿಯನ್ನು ಯಾರೊ ಕಳವು ಮಾಡಿರುವರೆಂದು ತಿಳಿದುಬರುತ್ತದೆ.

ಸ್ವಾತಂತ್ರ್ಯ ದಿನ

ತಾ. ೧೫ರಂದು ಗಂಭೀರ ಸಂಭ್ರಮದಿಂದ ಸ್ವಾತಂತ್ರ್ಯ ದಿನವನ್ನಾಚರಿಸಲು ನಗರದಲ್ಲಿ, ಆಸಕ್ತಿಯ ಏರ್ಪಾಡುಗಳಾಗುತ್ತಿವೆ. ಜಿ. ಕಾ. ಕಮಿಟಿಯವರು ನಗರದಲ್ಲಿ ನೂಲುಸ್ಪರ್ಧೆ, ಮೆರವಣಿಗೆ, ಮತ್ತಿತರ ರಚನಾತ್ಮಕ ಕಾರ್ಯಕ್ರಮಗಳನ್ನು ನೆರವೇರಿಸುವರು. ಜಿಲ್ಲಾಧಿಕಾರಿಗಳು ಧ್ವಜಾರೋಹಣ, ಮೆರವಣಿಗೆ, ದರ್ಬಾರು, ಪೋಲೀಸ್ ಪೆರೇಡ್, ಸಾರ್ವಜನಿಕ ಸಭೆ, ಬೇರೆ ಬೇರೆ ಭಾಷೆಯಲ್ಲಿ ಭಾಷಣಗಳ ಕಾರ್ಯಕ್ರಮವನ್ನು ಮಾಡಿಕೊಂಡಿರುವರು. ದೇವಸ್ಥಾನ, ಇಗರ್ಜಿ, ಮಸೀದಿಗಳಲ್ಲಿ ಅಂದು ದೇಶೋದ್ಧಾರಕ್ಕಾಗಿ ಪೂಜೆ, ಪ್ರಾರ್ಥನೆ ವಿನಿಯೋಗಾದಿಗಳೂ ಜರಗುವವು.

ಫರಂಗಿಪೇಟೆ

ಮದ್ರಾಸು ಪ್ರಾಂತಿಕ ಭೂಕಂದಾಯ, ಅಬಕಾರಿ, ಮತ್ತು ಪಾನನಿರೋಧ ಕಮಿಶನರರಾದ ಶ್ರೀಮಾನ್ ವಿ. ಎಸ್. ಕುಡ್ವಾ, C.I.E.I.C.S. ಇವರು ತಾ. 8–8–48ನೇ ಮಂಗಳವಾರ ದಿನ ಸಂಜೆ ಗಂಟೆ 4·30ಕ್ಕೆ ಇಲ್ಲಿಯ ಶ್ರೀರಾಮಾ ಹಾ. ಎ. ಶಾಲೆಯ ವಠಾರದಲ್ಲಿ ಪ್ರದರ್ಶಿಸಲ್ಪಟ್ಟ ಶಾಲಾ ಮಕ್ಕಳ ವ ಗ್ರಾಮ ಸಂಘದವರ ವಿವಿಧ ಚಟುವಟಿಕೆಗಳನ್ನು ಕಂಡು ತುಂಬಾ ಸಂತೋಷಪಟ್ಟದ್ದಲ್ಲದೆ ಸದರಿ ಶಾಲಾ ಆಡಳಿತೆಯವರಿಂದ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲೊಂದಾದ ನಿರಕ್ಷರತಾ ನಿವಾರಣೆಗಾಗಿ ಮಾಡಲಾದ 'ವಯಸ್ಕರ ಕ್ಲಬ್' (Adults Club) ನ ಉದ್ಘಾಟನಾ ಸಮಾರಂಭವೂ ಇವರ ದಿವ್ಯ ಹಸ್ತದಿಂದಲೇ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಶಾಲೆಯವರಿಂದ, ಗ್ರಾಮ ಸಂಘದವರಿಂದ, ಮತ್ತು ಇತರರಿಂದಲೂ ಪುಷ್ಪಹಾರಗಳನ್ನು ಹಾಕಲಾಯಿತು. ಅಂದಿನ ಸಭೆಗೆ ಜಿಲ್ಲಾ ಡೆವಲಪ್‌ಮೆಂಟ್ ಆಫೀಸರರೂ, ಜಿಲ್ಲಾ ವಿದ್ಯಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರರೂ ಅಸಿಸ್ಟೆಂಟ್ ಡೆವಲಪ್‌ಮೆಂಟ್ ಆಫೀಸರರೂ, ಪಾನ ನಿರೋಧ S. I. ರವರೂ, ಡಿಪ್ಯುಟಿ ತಹಶಿಲ್ದಾರರೂ ಮತ್ತಿತರ ಸರಕಾರಿ ಉದ್ಯೋಗಸ್ತರೂ ಅಲ್ಲದೆ ಶ್ರೀ ಯು. ಪಿ. ಮಲ್ಯ M. L. A ರವರೂ ಹಾಜರಿದ್ದರು.

ಸಾಂತೂರು

ಇಲ್ಲಿಯ ನದಿಯ ಬಳಿ ಕೆಲವು ದಿನಗಳ ಹಿಂದೆ ಅಂಗಾಂಗಗಳು ಪ್ರತ್ಯೇಕಿಸಲ್ಪಟ್ಟ ಆಗಂತುಕ ಸೋರ್ವನ ಶವವು ಕೊಳೆತು ಸಿಕ್ಕಿರುವುದೆಂದೂ, ವ್ಯಕ್ತಿಯು ಯಾರೆಂದೂ ಗುರುತು ಹತ್ತಿಲ್ಲವೆಂದೂ, ಬೊಂಬಾಯಿ ಕಡೆಯವನೆಂದೂ, ಪೋಲಿಸ್ ತನಿಖೆಯಾಗುತ್ತಿದೆಯೆಂದೂ ತಿಳಿದು ಬಂದಿದೆ.

ಉಪ್ಪಿನಂಗಡಿ

ಕಳೆದ ತಾ. ೧ರಂದು ಇಲ್ಲಿಯ ಚರ್ಚಿನ ರೆವರೆಂಡ್ ಜೋಸ್ ರೋಸ್ ರಿಡ್ರಿಕ್ಸ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಒಂದು ರಿಕ್ರಿಯೇಶನ್ ಕ್ಲಬ್ಬು ಸ್ಥಾಪಿಸಲ್ಪಟ್ಟಿತು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ.

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ—ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

CANARA BANK, LIMITED.

ESTD: 1906



ಹುಳು ಕ್ರಿಮಿಗಳ ಕಡಿತದಿಂದ ನೆತ್ತರಲ್ಲಿ ವಿಷವು ಸೇರದಂತೆ ಜಾಗ್ರತೆ ತೆಗೆದುಕೊಳ್ಳಿರಿ. ಕೂಡಲೇ ಅಂಥಾ ಕಡಿತದ ಮೇಲೆ ಜ್ಯಾಂಬಕನ್ನು ಸವರಿರಿ. ಜ್ಯಾಂಬಕಿನಲ್ಲಿರುವ ಔಷಧಿಯು ತೀವ್ರ ಅಂಥಾ ಕಡಿತಗಳ ಮಾರ್ಗವಾಗಿ ಒಳಸೇರಿ ಗುಣವನ್ನುಂಟುಮಾಡುವುದು. ವಿಷವು ಈಗ್ಯನೇ ರಕ್ತದಲ್ಲಿ ಸೇರಿರುವುದಾದರೂ ಜ್ಯಾಂಬಕ ಅಂಥಾ ಕಡಿತಗಳನ್ನು ಕೂಡಾ ಗುಣಪಡಿಸುವುದು.

ಜ್ಯಾಂಬಕು ಎಲ್ಲಾ ತರದ ವಿಷಪ್ರಾಯ ಕಡಿತಗಳ ಮೇಲೆ ರಾಮಬಾಣವೆಂದು ಹೆಸರುಗೊಂಡಿದೆ.

ಜ್ಯಾಂಬಕನ್ನೇ ಉಪಯೋಗಿಸಿರಿ.



Zam-Buk

ವಿಶ್ವಖ್ಯಾತಿಯ ವನಸ್ಪತಿ ಮುಲಾಮು.

ಬಂಡಿತ ಪ್ರಾಚೀಕೊಬ್ಬು ರಹಿತವಾದುದು.

ಕೃಷಿ ಸುಧಾರಣೆಯೇ ಸ್ವಾತಂತ್ರ್ಯದ ಭದ್ರ ತಳಹದಿ

ವಿಜ್ಞಾನವನ್ನು ಮಾನವ ಒಳಿತಿಗೆ ಉಪಯೋಗಿಸಬೇಕು

ಬೇಸಾಯವನ್ನು ಸುಧಾರಿಸುವ ವಿಷಯವು ಇಂದಿನಷ್ಟು ಪ್ರಾಮುಖ್ಯವಾಗಿ ಎಂದು ಇದ್ದಿಲ್ಲ. ಇದುತನಕ ಪರಕೀಯರ ಆಡಳಿತದ ಅತಂಕಗಳು, ಶೋಷಣೆಯ ವಿಧಾನಗಳು ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ತಡೆದು ಹಿಡಿದಿವೆ ಆದರೆ ಸ್ವಾತಂತ್ರ್ಯನಂತರ ಇಂದೂ ಶೀಘ್ರ ಅಭಿವೃದ್ಧಿಗೆ ಬೇಕಾದ ಸಾಧನಗಳಿಗಾಗಿ ನಾವು ಪರದೇಶಗಳ ಮೇಲೆ ಹೊಂದಿಕೊಂಡಿರಬೇಕಾಗಿದೆಯಾದರೂ ಕೃಷಿಗಾರಿಕೆಯ ಸುಧಾರಣೆಗಾಗಿ ನಮ್ಮ ದೇಶದಲ್ಲಿ ಪ್ರಗತಿಯೆಯ್ದಿದ ಕೈಗಾರಿಕೆ ಸಂಸ್ಥೆಗಳ ಸಹಾಯವನ್ನೇ ಬಳಸಿಕೊಂಡರೆ ಸಾಕಾಗುವುದು ಈಗ ಟಾಟಾ ಮೊದಲಾದ ಲೋಹೋಪಕರಣ ತಯಾರಕರು ತಮ್ಮ ತಯಾರಿಗಳಲ್ಲಿ ಬಹು ಮುಂದುವರಿದಿರುವರು

ಆಹಾರದ ಹಾಹಾಕಾರವೆದ್ದಾಗಲೇ ಕೃಷಿಗಾರಿಕೆಯತ್ತ ಗಮನಕೊಟ್ಟರೆ ಕಾರ್ಯವು ಬೇಗನೆ ಸಾಧಿಸುವುದು ಪರದೇಶಗಳಿಂದ ಹೆಚ್ಚಿನ ಬೆಲೆಕೊಟ್ಟು ಆಹಾರ ಕೊಳ್ಳುವುದು ಒಂದು ಆಪತ್ಕಾಲದ ಉಪಾಯವಲ್ಲದೆ ಅದನ್ನು ನಿತ್ಯದ ಧೋರಣೆಯಾಗಿಟ್ಟುಕೊಂಡರೆ ದೇಶದ ಹಿತ ಸಾಧನೆಯು ದಿವಾಳಿಯಾಗುವುದರಲ್ಲಿ ಸಂದೇಹವಿಲ್ಲ

ಸದ್ಯಕ್ಕೆ ಕೃಷಿಕರಾದರೋ ಜನತೆಯ ಕನಿಷ್ಠ ಆವಶ್ಯಕತೆಗಳಿಗೆ ಸಾಕಾಗುವಷ್ಟು ಮಾತ್ರ ಉತ್ಪತ್ತಿ ಮಾಡುವರು ಅನೇಕ ಅನಾನುಕೂಲತೆಗಳಿಂದ ಕೃಷಿ ಉತ್ಪತ್ತಿಯನ್ನು ಹೆಚ್ಚಿಸುವುದು ಅಸಾಧ್ಯವಾಗಿದೆ ನಮ್ಮಲ್ಲಿ ನಕಲಾದಿ ಪದ್ಧತಿಯು ಹೆಚ್ಚು ಪ್ರಸಾರವಾಗಿಲ್ಲ ಕೃಷಿದೇಶಕ್ಕೆ ಆ ಪದ್ಧತಿಯು ಅತ್ಯಂತ ಉಪಯುಕ್ತವಾದುದು

ಹಿಂದಿನ ಕಾಲದಲ್ಲಿ ಸಮಾಜವು ಜಮೀನಿನ ಸರ್ವಸ್ವವನ್ನು ತಿಳಿದಿತ್ತು ಆಗ ಮನುಷ್ಯನಿಗೆ ಕೃಷಿಯೇ ಮೂಲಾಶ್ರಯವಾಗಿತ್ತು ವ್ಯಾಪಾರ ಇತ್ಯಾದಿಗಳೆಲ್ಲಾ ಅಷ್ಟು ಮುಖ್ಯವಾಗಿದ್ದಿಲ್ಲ ಆ ಕಾಲಕ್ಕೆ ಒಕ್ಕಲತನ ಕಾಲವೆಂದು ಹೇಳಬಹುದು ಆ ಮೇಲೆ ವ್ಯಾಪಾರಕ್ಕೆ ಪ್ರಾಧಾನ್ಯ ಬಂತು ವ್ಯಾಪಾರಿಯು ಸಮಾಜದಲ್ಲಿ ಎಲ್ಲರಿಗಿಂತಲೂ ಮುಖ್ಯನಾದನು ಆ ಮೇಲೆ ಕ್ರಮೇಣ ಕೈಗಾರಿಕಾ ಕ್ರಾಂತಿಯು ತಲೆದೋರಿತು ಆಗಲೇ ಸಾಮ್ರಾಜ್ಯಶಾಹಿಗಳು ವಸಾಹತುಗಳಲ್ಲಿ ವ್ಯಾಪಾರ ನಡೆಸಲೂ ಕಚ್ಚಾ ವಸ್ತುಗಳಿಗಾಗಿ ಯುದ್ಧ ಹೂಡಲೂ ಪ್ರಾರಂಭಿಸಿದರು ಮತ್ತಿನದೇ ಅಧಿಕಾರಿ ಶಾಹಿಯ ಯುಗ ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಸಾಧ್ಯವೇ ಎಂದು ವಿಚಾರಿಸಿದಾಗ ಈ ಬಗೆಯ ಸಮಾನತೆಯ ಅಭಾವವೇ ಸುಲಿಗೆ, ಮಾನವ ವರ್ಗವರ್ಗಗಳೊಳಗೆ ತಿಕ್ಕಾಟ, ಇದಕ್ಕೆಲ್ಲಾ ಅವಕಾಶವಾಯಿತು ಎಂದು ತಿಳಿದು ಬರುತ್ತದೆ ಜಹಗೀರುಗಳ ಕಾಲದಲ್ಲಿ ಜಹಗೀರುದಾರರು ಇತರ ವರ್ಗದವರನ್ನೆಲ್ಲಾ ಸುಲಿಗೆ ಮಾಡುತ್ತಿದ್ದರು ವ್ಯಾಪಾರಯುಗದಲ್ಲಿ ವ್ಯಾಪಾರಿಯು ಕೃಷಿಕ ಮತ್ತು ಕಸಬುದಾರರಿಬ್ಬರಿಂದಲೂ ಲಾಭ ಗಳಿಸುತ್ತಿದ್ದ. ಕೈಗಾರಿಕಾ ಯುಗದಲ್ಲಿ ವ್ಯಾಪಾರಿಯೂ ಉದ್ಯೋಗಶಾಹಿಗಳೊಡನೆ ಸೇರಿಕೊಂಡು ಕೃಷಿಕರಿಂದ ಪಡೆಯುವ ಲಾಭದಲ್ಲಿ ಪಾಲುಗಾರನಾಗಿದ್ದ. ಈ ಎಲ್ಲಾ ಬಗೆಯ ಆರ್ಥಿಕ ತಿಕ್ಕಾಟದಲ್ಲೂ ನೌಕರಿಗಳಲ್ಲೂ ಅಧಿಕಾರದಲ್ಲಿರುವ ವರ್ಗದ ಸೇವೆಮಾಡಿ ಉತ್ತಮ ಸ್ಥಿತಿಯಲ್ಲಿದ್ದರು.

ಬಹುಶಃ ಇತರರೆಲ್ಲರನ್ನೂ ಹೊರತಳ್ಳಿ ಇವರೇ ಅಧಿಕಾರಕ್ಕೆ ಏರಲು ಕಾಯುತ್ತಿರುವಂತೆ ಕಾಣುತ್ತದೆ ಬೇಸಾಯದಲ್ಲಿ ಭಾಗವಹಿಸಿದವರಿಗೆ ಉದ್ಯೋಗ ಕಲ್ಪಿಸುವುದಕ್ಕೂ ದೇಶದ ಬಡತನವನ್ನು ಹೋಗಲಾಡಿಸುವುದಕ್ಕೂ ಕೈಗಾರಿಕೆ, ವ್ಯಾಪಾರ, ನೌಕರಿಗಳ ವಿಸ್ತರಣೆಯಿಂದಲೇ ಸಾಧ್ಯವೆಂದು ವಾದಿಸುತ್ತಿದ್ದರು ಇದರಿಂದ ಅವುಗಳಿಗೆ ಸಾರ್ವಜನಿಕ ಜೀವನದಲ್ಲಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಗಮನ ಕೊಡಲಾಯಿತಲ್ಲದೆ ರಾಷ್ಟ್ರದ ಉಳಿಕೆಯಲ್ಲಿ ಹೆಚ್ಚಿನ ಅಂಶವನ್ನು ಅವಕ್ಕಾಗಿಯೇ ವಿನಿಯೋಗಿಸಲಾಯಿತು ಆದರೆ ಹಿಂದಿನ ಚರಿತ್ರೆಯನ್ನು ಸ್ವಲ್ಪ ವಿವರವಾಗಿ ತಿಳಕೊಂಡರೆ ಈ ಪದ್ಧತಿಯು ಎಷ್ಟು ಮೋಸವುಳ್ಳದ್ದೆಂದು ತಿಳಿಯುತ್ತದೆ

“150 ವರ್ಷಗಳಿಂದ ಜಗತ್ತು ಕೃಷಿಯಿಂದ ದೊರೆತ ಉತ್ಪತ್ತಿಯನ್ನು ಕಡಿಮೆ ಕ್ರಯಕ್ಕೆ ಪಡೆದು ಉಪಯೋಗಿಸುತ್ತಿದೆ” ಎಂದು ಸಂಖ್ಯಾಶಾಸ್ತ್ರಜ್ಞರಲ್ಲಿ ಅಗ್ರಗಣ್ಯರಾದ ಕೋಲಿನ್ ಕ್ಲಾರ್ಕ್ ಎಂಬವರು ಒಮ್ಮೆ ಹೇಳಿದ್ದರು ಸಿದ್ಧ ವಸ್ತುಗಳ ಬೆಲೆಯು ರೈತನ ಉತ್ಪತ್ತಿ ಹೆಚ್ಚಿಸಿ ಅವನನ್ನೂ ಅವನ ಕುಟುಂಬವನ್ನೂ ಉತ್ತಮ ಸ್ಥಿತಿಯಲ್ಲಿ ನಡೆಯಿಸಿಕೊಂಡು ಬರುವ ಮೊತ್ತದಿಂದ ನಿಶ್ಚಯಿಸಲ್ಪಡದೆ ಕೈಗಾರಿಕೆಯವರು ಸಿದ್ಧ ವಸ್ತುಗಳ ಮೇಲೆ ನಿಶ್ಚಯಿಸುವ ಬೆಲೆ ಅವರು ಇಚ್ಛಿಸಿದ ಲಾಭ ಇವುಗಳ ಆಧಾರದ ಮೇಲೆ ನಿಶ್ಚಯಿಸಲ್ಪಡುತ್ತಿದೆ ರಾಷ್ಟ್ರದ ಸಂಪತ್ತಿನ ಪಾಲಿನಲ್ಲಿ ಕೈಗಾರಿಕೆಯವರಿಗೂ ಅವರ ತರುವ ವ್ಯಾಪಾರಿ ನೌಕರರಿಗೂ ಮೊದಲ ಪಾಲು ಇರುವುದು ಆ ಮೇಲೆ ರೈತನಿಗೆ ಉಳಿದುದು ಅಲ್ಪ ಭಾಗ ಮಾತ್ರ.

ತಾರತಮ್ಯ

ಕೈಗಾರಿಕೆಗಳಿಂದ ಅದಕ್ಕಾಗಿ ಹಾತೊರೆಯುವವರಿಗಾದರೂ ಲಾಭವಿದೆಯೇ ಎಂಬ ವಿಷಯದಲ್ಲಿ ಸರಿಯಾದ ವಿಚಾರ ನಡೆದಿದೆಯೆಂಬುದು ಸಂಶಯಾಸ್ಪದವೇ ಸರಿ ಹಣ, ಸಾಮಾಗ್ರಿ, ನೌಕರಿಗಳನ್ನು ಲೆಕ್ಕ ಹಾಕಿದರೆ ಹೆಚ್ಚಿನ ಲಾಭ ತೋರಿದರೂ ಮಾನವ ಹಿತದೃಷ್ಟಿಯಿಂದ ಹೆಚ್ಚೇನೂ ದೊರೆತಂತೆ ಕಾಣುವುದಿಲ್ಲ ಅಸಿದ್ಧ ವಸ್ತುಗಳಿಗಾಗಿ ಹೂಡಿದ ಯುದ್ಧಗಳಿಂದುಂಟಾದ ಮಿಲಿಯಗಟ್ಟಲೆ ಜನರ ಕಷ್ಟನಷ್ಟಗಳ ಸಾಲಿನಲ್ಲಿ ಸೇರಿಸಿಕೊಳ್ಳಬಹುದು ಇದಲ್ಲದೆ ಕೈಗಾರಿಕಾ ಸಮಸ್ಯೆಯು ಹೊಲಸು, ಅವಮಾನ, ಅವನತಿಗಳನ್ನು ಜನತೆಗೆ ತಂದಿಕ್ಕಿವೆ ಸಾಮಾನ್ಯವಾಗಿ ಇದರಿಂದುಂಟಾದ ಅವಿಶ್ರಾಂತಿ, ನಿರುದ್ಯೋಗ, ವರ್ಗದ್ವೇಷವು ಇವು ಮಾನವ ಬಾಂಧವ್ಯ ಭಾವನೆಗೆ ಧಕ್ಕೆಯನ್ನುಂಟುಮಾಡಿವೆ

ಇದಕ್ಕೆ ಬದಲಾಗಿ ದೊಡ್ಡ ದೊಡ್ಡ ಯಂತ್ರರಾಕ್ಷಸಗಳು, ಕೆಲಸ ಕಡಿಮೆ ಮಾಡುವ ಸಾಧನಗಳಾದ ಮೋಟಾರು ವಿಮಾನ, ಮೊದಲಾದ ವಾಹನಗಳು ಪ್ಲಾಸ್ಟಿಕ್ ಸಾಮಾನುಗಳಂತಹ ವಸ್ತುಗಳು ಅಲ್ಲದೆ ಸ್ವತಃ ಎಟಂ ಶಕ್ತಿ ಮೊದಲಾದ ವಿನಾಶಕ ಶಕ್ತಿಗಳು ಒದಗಿದ ಲಾಭದ ಸಾಲವುಗಳೇ ಆಗಿವೆ ಮಾನವ ಹಿತದೃಷ್ಟಿಯಿಂದ ಕೈಗಾರಿಕೋದ್ಯಮದವು ಜನರಿಗೆ ಲಾಭದಾಯಕವೆಂಬುದು ಸಂಶಯಾಸ್ಪದವಾಗಿದೆ ಪ್ರಾಪಂಚಿಕ ವಿಚಾರದಲ್ಲಿ ವಿನಾ ದರೂ ಲಾಭವಿದ್ದರೂ, ವರ್ಗಗಳೊಳಗಿನ ಸಂಬಂಧದ ವಿಷಯದಲ್ಲಿ ಏನೂ ಪ್ರಯೋಜನವಿಲ್ಲ ಇವುಗಳ ವ್ಯತ್ಯಾಸವು ದಿನದಿನ ಹೆಚ್ಚುತ್ತಿದೆ ಇದು ಮುಂದಿನ ಸಮಾಜಕ್ಕೆ ಹಾನಿಕಾರಕವಾದುದು ಹಾಗೆಂದ ಮಾತ್ರಕ್ಕೆ ನಾವು ಪ್ರಾಚೀನ ಕಾಲದ ರೈತರಂತೇ ಜೀವಿಸಬೇಕೆಂದು ಅರ್ಥವಲ್ಲ. ಹಾಗಿದ್ದರೆ ಅದರಿಂದ ಮಾನವನ ಪ್ರಗತಿ ಮತ್ತು ವಿಜ್ಞಾನದ ಸದುಪಯೋಗಗಳನ್ನೇ ಅಲ್ಲಗಳೆದಂತಾಗುತ್ತದೆ. ವಿಜ್ಞಾನದ ಪ್ರಯೋಜನವು ಮಾನವರೊಳಗಿನ ವೈರತ್ವವನ್ನು ತೊಡೆದುಹಾಕಲು ಸಹಾಯವಾಗಬೇಕು.

ಇಂದಾದರೂ ನಮ್ಮ ಕೃಷಿಯು ಹಳೆಯ ಪದ್ಧತಿಯಲ್ಲೇ ಸಾಗುತ್ತಿದೆ ಲಾಭದಾಯಕವಲ್ಲದ ತುಂಡು ತುಂಡಾದ ಚಿಕ್ಕ ಹಿಡುವಳಿಗಳು ಪ್ರಗತಿಗೆ ಅಭ್ಯಂತರವಾದವುಗಳು ಅಜ್ಞಾನ, ನಿರಕ್ಷರತೆ, ಭದ್ರತೆಯಿಲ್ಲದಿರುವುದು ಸರಿಯಾದ ಕೃಷಿ ಅಭಿವೃದ್ಧಿಗೆ ತೊಡಕಾದ ಸಂಗತಿಗಳೂ ಆಗಿವೆ ಅಧಿಕ ಜನಸಂಖ್ಯೆಯುಳ್ಳ, ಕಡಿಮೆ ತರದ ಉದ್ಯೋಗ ಸಂದರ್ಭಗಳಿರುವ, ಇಲ್ಲವೆ ನ್ಯಾಯ ಸಮಾನತೆಗಳ ಮೇಲೆ ಹೊಂದಿಕೊಂಡಿರುವ ಸಮಾಜಗಳಲ್ಲಿ ಇವು ಸಹಿಸುವ ವಿಷಯಗಳಲ್ಲ ಅಂದರೆ ಕೃಷಿ, ಕೈಗಾರಿಕೆ ಮತ್ತು ನೌಕರಿಗಳಲ್ಲಿರುವ ಜನಸಂಖ್ಯೆಯಲ್ಲಿ ಸಮಾನತೆಯಿರಬೇಕೆಂದಲ್ಲ ಕೃಷಿ, ಕೈಗಾರಿಕೆ, ವ್ಯಾಪಾರಗಳಿಂದ ದೊರೆಯುವ ಲಾಭಗಳಲ್ಲಿ ಸಮಾನತೆ ಇರಬೇಕೆಂದು ಅಭಿಪ್ರಾಯ.

(ಸಶೇಷ)

ಮಂಗಳೂರು ನಗರ ಸಭಾ ಪಿತಾಮಹರು ತಮ್ಮ ನಗರದ ಮೂಲ ಸ್ಥಾಪಕನೂ, ಸಮುದ್ರ ಆಡಳಿತಗಾರನೂ ಆಗಿದ್ದ ಮಾಗಡಿಯ ಪಾಳೆಯಗಾರ ಕೆಂಪೇ ಗೌಡನ ಪ್ರತಿಮೆಯೊಂದನ್ನು ಇರಿಸಲು ೬ ಸಾವಿರ ರೂಪಾಯಿ ಮಂಜೂರು ಮಾಡಿರುವರು ನಾಗಪ್ಪರು ವರ್ಷಗಳ ಹಿಂದೆ ಬಂಗಳೂರನ್ನವನು ಕೋಟೆಕೊತ್ತಗಳ ಭದ್ರರಕ್ಷಣೆಯಿಂದ ಸ್ಥಾಪಿಸಿದ್ದ ಇದರ ಕುರುಹುಗಳು ಈಗಲೂ ಇಲ್ಲಿವೆ

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1-0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಆರಭ್ಯಾತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜ್ಯೊಂಟ್ ಮೆನೇಜರ್ಸ್,

ಮಂಗಳೂರು 23-12-1947

ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed . . .	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B.
General Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಪ್ರೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಯಾ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗೆಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುತ್ತದೆ. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 42] ತಾರೀಕು 20—8—1948 [ಸಂಚಿಕೆ 33]

ಭಾರತ ಸರಕಾರವೂ ಹೈದರಾಬಾದಿನ ಮೇಲಧಿಕಾರವೂ

ಹೈದರಾಬಾದಿನ ದುರಾಡಳಿತದ ಪಾರಂಪರ್ಯ

ಪಾಳೆಯಗಾರ ಹೇಗೆ ಸ್ವತಂತ್ರನಾಗಬಲ್ಲ?

ಇತಿಹಾಸಜ್ಞರ ಸ್ಪಷ್ಟ ದಾಖಲೆಗಳು

ಹೈದರಾಬಾದು ಇತಿಹಾಸ ಪ್ರಸಿದ್ಧವಾದ ರಾಜ್ಯವೆಂದು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಪೊಟ್ಟಿರಿದರು. ನಿಜಾಮ ಸರಕಾರವಾದರೊ ತಮ್ಮ ಸಂಸ್ಥಾನವು ಸ್ವತಂತ್ರವೆಂದೇ ವ್ಯವಹರಿಸುತ್ತಿದೆ. ಕೆಲವು [illegible]ಗಳಿಂದ ಅಲ್ಲಿನ ಜನರಿಗೆ ಶಾಂತಿ ನೆಮ್ಮದಿಗಳು ಇಲ್ಲದಿರುವುದೂ ಅವರು ಪ್ರತಿಪಾದಿಸುತ್ತಿದ್ದಾರೆ [illegible] ಸ್ವತಂತ್ರ [illegible] ಪಾಳೆಯಗಾರನೆಂದು [illegible] ಸರಕಾರ ಅವರು [illegible] ಈ ವಿಷಯದಲ್ಲಿ [illegible] ದಾಖಲೆಗಳನ್ನು ಪ್ರಕಟಿಸಿ ಮೇಲಿನವರ ತರ್ಕಗಳು ಅದೆಷ್ಟು ಹಾಸ್ಯಾಸ್ಪದವಾದವೆಂದು ತೋರಿಸಿದ್ದಾರೆ. ಅವರ [illegible] ಹೀಗಿದೆ.

ನಿಜಾಮ [illegible] ಸ್ವತಂತ್ರ ಸಾಚೇಫ್ವರ್ ಇಲ್ಲದ ಆಡಳಿತದ ಅಧಿಕಾರಿ (ಗವರ್ನರ್) ಎಂದರ್ಥ [illegible] ಹೈದರಾಬಾದಿನ [illegible] ಆಡಳಿತಗಾರ ಇಲ್ಲದೆ [illegible] ತನ್ನ ಮೃತ್ಯು ಪತ್ರದಲ್ಲಿ ತನ್ನ ಉತ್ತರಾಧಿಕಾರಿಗಳಿಗೆ ಹೀಗೆ ಸಿದ್ಧಪಡಿಸಿದ್ದನು.

[illegible] ಹೆಚ್ಚಾಗಿ [illegible] ಅವರೇ ದೇಶದಲ್ಲಿ [illegible] ಕರೆ [illegible] ಅಧಿಕೃತ [illegible] ಸರದ ವಿಚಾರಣೆ ನಡೆಸದ [illegible]ನ್ನು ಗಲ್ಲಿಗೇರಿಸಬಾರದು.

(ಈ ಮೃತ್ಯುಪತ್ರದ ನಕಲು ಹೈದರಾಬಾದು ಸರಕಾರದ ದಾಖಲೆಖಾತೆಯ ಕಛೇರಿಯಲ್ಲಿದ್ದು ಅದರ ಪ್ರತಿನಕಲೊಂದನ್ನು ಸರ್ ಜಾಡುನಾಥರು ಪ್ರಕಟಿಸಿದ್ದಾರೆ.)

ಅದರಲ್ಲಿ ಅಸಫ್ ಜಾಹಿ ವಂಶಸ್ಥಾಪಕರು ತಮ್ಮನ್ನು ರೈಸ್ ಇಲ್ಲದ ತುಂಡು ಪಾಳೆಯಗಾರನೆಂದೇ ಸಂಬೋಧಿಸಿಕೊಂಡಿದ್ದಾರೆ. ಶಹಾ ಇಲ್ಲವೆ ಸುಲ್ತಾನ್ ಎಂದು ಅವರೆಲ್ಲಿಯೂ ಹೇಳಿಕೊಳ್ಳಲಿಲ್ಲ. ಸಕ್ರಖೇಡಾದಲ್ಲಿ ಮುಬಾರಿಜನನ್ನು ಸೋಲಿಸಿದ (೧೭೨೪)ರ ಮೇಲೆ ಹೈದರಾಬಾದು ಸ್ವತಂತ್ರ ರಾಜ್ಯವಾಗಿದೆ, ಆ ದಿನವೇ ಹೈದರಾಬಾದು ಸ್ವತಂತ್ರವಾದ ದಿನವೆಂದು ಈಗಿನ ನಿಜಾಮರು ಹೇಳುತ್ತಿದ್ದಾರೆ, ಆದರೆ ಮೇಲಿನ ಉಯಿಲು ಆ ವಿಜಯದ ನಂತರ ಬರೆಯಲ್ಪಟ್ಟದ್ದು.

ದಿಲ್ಲಿಯಲ್ಲೊಬ್ಬ ಬಾದಶಹನು ಇರುವ ತನಕ ಹೈದರಾಬಾದದ ಆಳರಸರು ತಮ್ಮ ಉತ್ತರಾಧಿಕಾರವನ್ನು ಅವರ ಸಮ್ಮತಿಯಿಂದಲೇ ಪಡೆಯುತ್ತಿದ್ದರು. ಕಾರಣ ದಿಲ್ಲಿ ಚಕ್ರವರ್ತಿಯು ಕೈಕೆಳಗೆ ಅವರು ನೌಕರರಾಗಿದ್ದರು. ಚಕ್ರವರ್ತಿಯಾದ ಎರಡನೇ ಶಹಾ ಆಲಮನು ಪಾದಶಹ ಸಿಂಹಾಸನವನ್ನು ದಿಲ್ಲಿ ಪಟ್ಟದ ರಾಜ್ಯ ಪ್ರಮಾಣವನ್ನಾಗಿ ನೇಮಿಸಿದಾಗ [illegible] ತನ್ನ ಹಕ್ಕನ್ನು ಸಮ್ಮತಿಗಾಗಿ [illegible] ಪ್ರತಿನಿಧಿಯನ್ನು ಕಳುಹಿಸಿದನು. [illegible] ಪ್ರಕಟಿಸಿದ ಬ್ರಿಟಿಷ್ [illegible] ದಾಖಲೆಗಳಲ್ಲಿ ಈ ಸಂಗತಿ [illegible] ೧೭೬೫ರಲ್ಲಿ [illegible] ಸನದಿನ ನಂತರವೂ ನಿಜಾಮನ [illegible] ಹೀಗ ಇದ್ದವು.

೧೭೬೫ರಲ್ಲಿ ಬ್ರಿಟಿಷರು ದಿಲ್ಲಿಯನ್ನು ವಶಪಡಿಸಿಕೊಳ್ಳುವಾಗ ಚಕ್ರವರ್ತಿಯು ಮತ್ತವನಿಂದ ಪ್ರಮುಖನಾಗಿ ನೇಮಿಸಲ್ಪಟ್ಟ ಸಿಂಧ್ಯನ ಅಧಿಕಾರವನ್ನೂ ಸ್ವಾಧೀನಪಡಿಸಿಕೊಂಡರು, ಅಂತೇ ಅವರು ನಿಜಾಮನ ಒಡೆಯರೂ ಆದರು. ೧೮೫೭ರಲ್ಲಿ ನಡೆದಂತೆ ನಾಮಮಾತ್ರವಾಗಿದ್ದ ದಿಲ್ಲಿ ಬಾದಶಹಗಿರಿಯನ್ನು [illegible] ಮುಗಿತು. [illegible]ವಾಗಿ ಬ್ರಿಟಿಷರು ಹೈದರಾಬಾದನ್ನೊಳಗೊಂಡು [illegible] ದೇಶಗಳ [illegible] ಸಾರ್ವಭೌಮತ್ವವನ್ನು ಪಡೆದರು.

೧೮೫೭ರಲ್ಲಿ ಇಂಗ್ಲಿಷರು ದಿಲ್ಲಿಯನ್ನು ಭಾರತ [illegible] ಅದೇ ರೀತಿ [illegible] ಹೈದರಾಬಾದಿನ ಆಡಳಿತಗಾರರ ಮೇಲಧಿಕಾರಿಗಳ ಸ್ಥಾನಕ್ಕೆ ಬಂದರು. ಹೀಗಿರುವುದರಿಂದ ಒಂದೇ ಸನದೆ ಈಗ ನಿಜಾಮರು ರಾಜಕೀಯವಾಗಿ ಸ್ವತಂತ್ರರು ಹೇಗಾದಾರು?

ಜನತೆಯ ದುಃಸ್ಥಿತಿ

ಇದು ಹಕ್ಕುಬಾಧ್ಯತೆಗಳ ನ್ಯಾಯದೃಷ್ಟಿ ಮಾತಾಯಿತು. ಒಂದು ದೇಶದ ಮೇಲೆ ಆಳುವ ಹಕ್ಕು ಒಂದು ಕುಟುಂಬಕ್ಕೆ ಬರಬೇಕಾದರೆ ಆ ದೇಶದ ಜನತೆಗೆ ಅವರು ಸಂತೃಪ್ತಿಯನ್ನು ಉಂಟುಮಾಡಬೇಕು. ಈ ವಿಷಯದಲ್ಲಾದರೂ ಅಸಫ್ ಜಾಹಿ ಪಾರಂಪರ್ಯವು ಚೆನ್ನಾಗಿ ವರ್ತಿಸಿದೆಯೇ?

೧೭೭೬ರಲ್ಲಿ ಕೊಮೆಸ್ಕಿಡ ಪೇಡೆಮ್ ಎಂಬ ಫ್ರೆಂಚ್ ರಾಜಕಾರಣಿ [illegible] ಹೈದರಾಬಾದನನ್ನು ಸಂದರ್ಶಿಸಿ ಜನತೆಯ ಪರಿಸ್ಥಿತಿಯು ಕರುಣಾಜನಕವಿದೆಯೆಂದು ವರ್ಣಿಸಿದ್ದಾನೆ.

ಇತಿಹಾಸಕಾರರಾದ [illegible], [illegible] ೧೮೧೧ರಲ್ಲಿ [illegible] ಹೇಳುವಂತೆ [illegible] ಸಂಕೀರ್ಣತೆ [illegible].

[illegible] ಇತಿಹಾಸವಾರಂಭವಾದ ನಂತರ [illegible] ಈಗಿನ ಪರಿಸ್ಥಿತಿ [illegible] ಅದನ್ನು [illegible] ಮಾಡಬೇಕೆಂದೇ [illegible] ಮುತ್ಸದ್ದಿಗೂ ತೋಚುವುದಿಲ್ಲ" [illegible] ಎಂಬ ಗವರ್ನರ್ ಜನರಲ್ಲರ [illegible] ಹೈದರಾಬಾದ ರೆಸಿಡೆಂಟರಿಗೆ ೧೮[illegible]ರಲ್ಲಿ ಬರೆದ ಒಂದು ಪತ್ರದಲ್ಲಿ ಹೀಗೆ ತಿಳಿಸಿದ್ದರು.

"ದೇಶವು ಶೀಘ್ರದಲ್ಲಿ ಬರಿದಾಯಿತು. ಜೀವನಾವಶ್ಯಕತೆಗಳ ಬೆಲೆಗಳು ಬರಗಾಲದ ಬೆಲೆ ಮಟ್ಟಕ್ಕೇರಿದುವು. ಸರಕಾರವು ಸ್ತಬ್ಧವಾಯಿತು. ನ್ಯಾಯ ಶಿಸ್ತು ಇಲ್ಲವೆ ಪೋಲೀಸ್ ಉಸ್ತುವಾರಿಯ ನೆರಳು ಕೂಡ ಎಲ್ಲಿಯೂ ಇಲ್ಲವಾಯಿತು. ಸಶಸ್ತ್ರ ಪುಂಡ ತಂಡಗಳು ರಾಜಮಾರ್ಗದಲ್ಲೂ ಅಡವಿಗಳಲ್ಲೂ ಅಲೆದಾಡುತ್ತಿವೆ" ಇದು ೧೮೨೦ರಲ್ಲಿ. ೧೯೪೮ರಲ್ಲಿ ಪ್ರಕಟವಾದ ಹೈದರಾಬಾದಿನ ವರದಿಗಳು ಇದಕ್ಕಿಂತಲೂ ಹೆಚ್ಚಿನ ಸುವ್ಯವಸ್ಥೆಯ ಚಿತ್ರವನ್ನು ತೋರಿಸುತ್ತದೆಯೆ?

([illegible]ನೇ ಪುಟ ನೋಡಿ)

THE
UNITED INDIA LIFE ASSURANCE CO., LTD.

ESTD 1906 | H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to:—

INSPECTORATE OFFICE
K. S. Rao Road, Mangalore.

[illegible]

[illegible]

ಅಜ್ಞಾನದ ಮೇಲೆ ಸವಾರಿಗೆ!!!

[illegible] ಜನತೆಯೇ ಇವರನ್ನು ಹಿಡಿದು ಬಂಧಿಸುತ್ತಿದೆ ಎಂದರೆ ತಪ್ಪಲ್ಲ. [illegible] ಕಠಿಣವಾದ ಕಾಲವನ್ನು ಎದುರಿಸುತ್ತಿದ್ದೇವೆ. ಪ್ರತಿಯೊಬ್ಬ ಭಾರತೀಯನೂ ತನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ. ಇಂತಹ ದುರಂತ ಸನ್ನಿವೇಶದಲ್ಲಿ ಭಾರತ ಮಾತೆಯ ರಕ್ಷಣೆ ಪೋಷಣೆಗಳು ನಮ್ಮ ಪಾಲಿನವು. ಅತ್ತ ಪುನರ್ವಸತಿ, ಪುನಃ ರಚನೆಗಳ ಮಹಾ ಕಾರ್ಯಗಳಿಗೆ ಗಮನಕೊಡುವುದೂ ನಮ್ಮ ಕರ್ತವ್ಯ. ಇಂತಹ ಬಿಕ್ಕಟ್ಟಿನ ಕಾಲದಲ್ಲಿ ರಾಷ್ಟ್ರ ನಿರ್ಮಾಣದ ಮಹಾ ಕಾರ್ಯದಲ್ಲಿ ಜನತೆಯು ಸರ್ವಶಕ್ತಿಯೂ ಒಂದಾಗಿ ಸಾಗಬೇಕು. ಎದುರಿದುರಿಗೇ ವಿನಾಶಕ ಚಟುವಟಿಕೆಗಳಲ್ಲಿ ಕೈಹಾಕುವ ಯಾವ ವ್ಯಕ್ತಿಗಳಿಗೂ ಎಡೆಕೊಡಲಾಗದು. ನಾಗರಿಕ ನೀತಿ ರೀತಿಗಳನ್ನು ಭೇದಿಸಿ, ಜನತಾ ಸರಕಾರದಿಂದ ಸಿದ್ಧವಾದ ಜನತಾರಂಗವನ್ನು ಮುರಿದು ಶಾಂತಿಗೆ ಭಂಗ ತರುವ ಯಾವ ಕೆಲಸಗಳಿಗೂ ಇಲ್ಲಿ ಎಳ್ಳಷ್ಟು ಎಡೆ ದೊರೆಯದು. ಇದನ್ನು ಚೆನ್ನಾಗಿ ಪರ್ಯಾಲೋಚಿಸಿ, ಜನತೆಯ ಸುಖಶಾಂತಿಗಳಿಗೆ, ಶಿಸ್ತು ನೀತಿಗಳಿಗೆ ಭಂಗ ತರುವ ಕಮ್ಯುನಿಸ್ಟರ ಹಾವಳಿಯನ್ನು ಸದೆಬಡಿಯಲು ಸರಕಾರವು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸುವುದು. ಅತಿ ಕಠಿಣವಾದ ಚಿಕಿತ್ಸೆ ಕೈಕೊಳ್ಳುವುದು.

ಪ್ರತಿಯೊಬ್ಬನ ಕರ್ತವ್ಯ

ಆಹಾರದ ಪರಿಸ್ಥಿತಿಯನ್ನು ಹೋಗಲಾಡಿಸಲು ಸರಕಾರವು ಕೈಕೊಂಡ ಕಾರ್ಯಕ್ರಮಗಳು ಮೂರು—(1) ಉತ್ಪತ್ತಿಯನ್ನು ಹೆಚ್ಚಿಸುವುದು. (2) ಸಮಾನವಾಗಿ ಹಂಚುವುದು. (3) ಕ್ರಮಬದ್ಧವಾಗಿ ಉಪಯೋಗಿಸುವುದು.

ಇಂದಿನ ಪರಿಸ್ಥಿತಿಯಲ್ಲಿ ಆಹಾರದ ಕೊರತೆಯು ನಮ್ಮನ್ನು ಪೀಡಿಸುತ್ತಿದೆ. ಬರಗಾಲವು ನಮ್ಮನ್ನು ಹೆದರಿಸುತ್ತಿದೆ. ಸಮಾಜದ ಹಿತದೃಷ್ಟಿಯುಳ್ಳ ಪ್ರತಿಯೊಬ್ಬ ನಾಗರಿಕನೂ ಭುಜಕ್ಕೆ ಭುಜ ಕೊಟ್ಟು ಬರಗಾಲ ಪಿಶಾಚಿಯೊಡನೆ ಹೋರಾಡಬೇಕು. ಉಪವಾಸದಿಂದ ತನ್ನ ಸಮಾಜವು ವಿಪತ್ತಿಗೆ ಗುರಿಯಾಗದಂತೆ ನೋಡಿಕೊಳ್ಳಲು ಸಿದ್ಧನಾಗಬೇಕು. ಇದು ಅವಶ್ಯಕ ಮಾತ್ರವಲ್ಲ; ಪ್ರತಿಯೊಬ್ಬನ ಕರ್ತವ್ಯವೂ ಆಗಿದೆ.

ಅಜ್ಞಾನದ ಮೇಲೆ ಸವಾರಿ

[illegible] ನಮ್ಮ ದೇಶದ ನಾಯಕರೆಲ್ಲಾ [illegible] ಇವರ ಅಜ್ಞಾನದ [illegible] ಕಾರ್ಮಿಕರೇ? ಕ್ರಾಂತಿ! ನಡೆಯಿತು ಕ್ರಾಂತಿ!! ಇದೇ ನಮ್ಮ ದೇಶದಲ್ಲಿ [illegible] ಜೀವನದ [illegible] ಉತ್ಪತ್ತಿಗೆ [illegible] ಕಾರ್ಮಿಕರ [illegible] ಇಲ್ಲವಾದರು.

ಮುಷ್ಕರದ ಧ್ವಂಸಕ ಧೋರಣೆ

ದೇಶವು ಅಭಿವೃದ್ಧಿಯಾಗಬೇಕು ಜನತೆ ಸುಧಾರಿಸಬೇಕು [illegible] ಕಾಲದಲ್ಲಿ ಮುಷ್ಕರ ಹೂಡುವುದೆಂದರೆ ದೇಶದ ಪ್ರಗತಿ [illegible] ಕಮ್ಯುನಿಸ್ಟ್ [illegible] 45,000 ಗಿರಣಿಕೂಲಿಗಳು [illegible] ತಿಂಗಳಿಗಿಂತಲೂ ಹೆಚ್ಚು ಕಾಲ ಮುಷ್ಕರ ಹೂಡಿದರು. ಜನತೆಗೆ ಪ್ರತಿ ತಿಂಗಳು ದೊರೆಯುತ್ತಿದ್ದ 16,000 ಬೇಲ್ ಅಥವಾ 64 ಲಕ್ಷ ಪೌಂಡ್ ನೂಲು ಇಲ್ಲದಾಯಿತು. ಈ ಬಟ್ಟೆ ನಮ್ಮ ದೇಶದ ಅರೆಬತ್ತಲೆಯ ಲಕ್ಷಗಟ್ಟಲೆ ದರಿದ್ರ ನಾರಾಯಣರಿಗೆ ದೊರೆಯುತ್ತಿತ್ತು. ಈ ವಿನಾಶಕ ಧೋರಣೆಯಿಂದ ಯಾರಿಗೆ ಪ್ರಯೋಜನ? ಯಾರಿಗೆ ಲಾಭ?

ಮದರಾಸಿನಲ್ಲಿ 7,000 ತೋಟಿಗಳು ಮುಷ್ಕರ ಹೂಡಿದರು. ನಗರದ ಪ್ರಾಮುಖ್ಯ ಸೇವೆಯನ್ನು ನಿರಾಕರಿಸಿದರು. ತಮ್ಮ ಕರ್ತವ್ಯವನ್ನು ಬಿಟ್ಟರು. ಜನರ ಆರೋಗ್ಯಕ್ಕೆ ಅಪಾಯದ ಭೀತಿಯನ್ನು ತಂದೊಡ್ಡಿದರು. ಇದರಿಂದ ಸಮಾಜಕ್ಕಾಗಲೀ ಮಜೂರರಿಗಾಗಲೀ ದೊರೆತ ಲಾಭವೇನು? ಎಸ್. ಐ. ಆರ್. ರೈಲ್ವೇ ಕೆಲಸಗಾರರೂ ಮುಷ್ಕರ ಹೂಡಿದರು. ಏನಾಯಿತು? ಅವರಿಗೇನು ಲಾಭವಾಯಿತು? ಕೆಲಸಗಾರರು ಉಪಾಯವಿಲ್ಲದೆ ಕಷ್ಟನಷ್ಟಗಳಿಗೆ ತುತ್ತಾಗಿ ಮರಳಿ ಕೆಲಸಕ್ಕೆ ಬರಬೇಕಾಯಿತು. ಅವರಿಗೆ ಮೊದಲಿಗಿಂತ ಯಾವ ಹೆಚ್ಚಿನ ಸೌಕರ್ಯಗಳು ದೊರೆಯದಿದ್ದರೂ ಇಳಿಮೋರೆಯಿಂದ ಕೆಲಸಕ್ಕೆ ಸೇರಬೇಕಾಯಿತು. ಇವರು ತಮ್ಮ ಸಾಂಘಿಕ ಶಕ್ತಿಯನ್ನು ನಿರ್ಬಲ ಮಾಡಿ ಇಂದು ಸಾಮಾನ್ಯ ವ್ಯಕ್ತಿಯೊಬ್ಬನೂ ಇಂತಹ ನಿಷ್ಪ್ರಯೋಜಕ ಮುಷ್ಕರಗಳನ್ನು ಮುರಿಯಲು ಮುಂದೆ ಬಂದು ಸಹಕರಿಸಲು ಸಿದ್ಧನಾಗಿದ್ದಾನೆ. ತೋಟಿಗಳು ಮುಷ್ಕರ ಹೂಡಿದಾಗ ಅನೇಕ ಸ್ವಯಂ ಸೇವಕರು ಮದರಾಸಿನ ಬೀದಿಗಳನ್ನು ಗುಡಿಸಿ ನಿರ್ಮಲ ಮಾಡಲು ಸಹಕರಿಸಿದ್ದರು. ಆದರೆ ಇವೆಲ್ಲಾ ಕಮ್ಯುನಿಸ್ಟರು ಗಮನಕೊಡುವಂತಿಲ್ಲ. ಏಕೆಂದರೆ ಮುಷ್ಕರಗಳೆಂದರೆ ಅವರು ಸಿದ್ಧಗೊಳಿಸುತ್ತಿರುವ ಮುಂದಿನ ಕ್ರಾಂತಿ ನಾಟಕದ ಪೂರ್ವ ಸಿದ್ಧತೆಗಳು. ಹಸಿವೆ ಹಸಿವೆ ಎಂದು ಗೋಳಿಡುತ್ತಿರುವವರಿಗೆ ಆಹಾರವನ್ನೊದಗಿಸುವ ಹಾಗೂ ಅರೆಬತ್ತಲೆಯಾಗಿ ತಿರುಗುವವರಿಗೆ ಬಟ್ಟೆಯೊದಗಿಸುವ ಸಮಸ್ಯೆಯು ಸಂಕಟಕ್ಕೆ ದಿನ ದಿನ ಹೆಚ್ಚುತ್ತಿದ್ದರೆ, ಅಜ್ಞಾನ—ಅತೃಪ್ತಿಗಳಿಂದ ತುಂಬಿ ತುಳುಕಿದ ಮಜೂರ ವರ್ಗವನ್ನು ಸುಲಿದು ಹಿಂಸಾತ್ಮಕತೆಗಳ ಕಡೆಗೆ ಹಿಂದು ಮುಂದು ನೋಡದೆ ದೂಡಿ, ಸ್ವಾರ್ಥವನ್ನು ಸಾಧಿಸಿಕೊಳ್ಳುವುದೇ ಕಮ್ಯುನಿಸ್ಟರ ಉದ್ದೇಶವಾಗಿ ಕಾಣುತ್ತಿದೆ.

ಕೆಲವೇ ತಿಂಗಳುಗಳ ಹಿಂದೆ ಕಮ್ಯುನಿಸ್ಟ್ ಪಾರ್ಟಿಯವರು ನೆಹ್ರೂಯವರ ಸರಕಾರಕ್ಕೆ ಸರ್ವಥಾ ಬೆಂಬಲಕೊಡಬೇಕೆಂದು ಸಾರುತ್ತಿದ್ದರು. 1948ನೇ ಫೆಬ್ರವರಿ ತಿಂಗಳ ಕೊನೆಯಲ್ಲಿ ನಡೆದ ಕಮ್ಯುನಿಸ್ಟ ಪಕ್ಷದವರ ದ್ವಿತೀಯ ಮಹಾಧಿವೇಶನವು ಇವರ [illegible] ಈ ಪಾರ್ಟಿಯು ನೆಹ್ರೂಯವರ ಸರಕಾರಕ್ಕೆ ಬೆಂಬಲ ಕೊಡುವುದನ್ನು ಸಂಪೂರ್ಣ ಅಲ್ಲಗಳೆದು ಈ ಸರಕಾರದ ಸುಧಾರಣೆಯ ಹಾದಿಗೆ ಕಾಲಿಟ್ಟಿತು. "ಸರಕಾರದ ಪ್ರತಿಕ್ರಿಯಾತ್ಮಕವಾದ ಧೋರಣೆಯೊಡನೆ ಸತತ ಹೋರಾಡಲು ನಿಶ್ಚಯಿಸಿತು."— ಮೌಂಟ್‌ಬೇಟನರ ಒಪ್ಪಂದವು ಜನತೆಯ [illegible] ಶಕ್ತಿಗಳ ಮೇಲೆ ಹೂಡಿದ ಬ್ರಿಟಿಷ್ ಸಾರ್ವಭೌಮತ್ವದ ಕುತಂತ್ರ ಪೂರ್ವಕವಾದ ಪ್ರತಿಫಲಿಯಾಗಿದೆ. ಅದನ್ನು ಒಪ್ಪಿಕೊಂಡುದರಿಂದ ಸಾಮಾನ್ಯ ಮನುಷ್ಯನ ಸ್ವಾತಂತ್ರ್ಯ ಹೋರಾಟವು ಅದಗಿಸಲ್ಪಟ್ಟಿತು. ಅಲ್ಲದೆ ರಾಷ್ಟ್ರೀಯ ಧುರೀಣತ್ವವು ಉಪವಾಸದಿಂದ ನರಳುತ್ತಿರುವ ಮಿಲಿಯಗಟ್ಟಲೆ ಜನರ ಮೇಲೆ ಭಯಂಕರ ಪರಿಣಾಮವನ್ನು ತಂದಿತು ಎಂಬ ಈ ಘೋರಣೆಯನ್ನು ಪಾರ್ಟಿಯವರು ಒಪ್ಪಿಕೊಂಡರು.

ಕಮ್ಯುನಿಸ್ಟ್ ಪಕ್ಷದ ಹೊಸ ಕಾರ್ಯದರ್ಶಿಗಳಾದ ಶ್ರೀ ರಾನಡಿವೆ ಇವರು ತಮ್ಮ ರಾಜಕೀಯದ ಕರಡು ಪತ್ರದಲ್ಲಿ —

ನೆಹರು ಸರಕಾರವು ಸಹಕಾರಕ್ಕೆ ಶರಣುಹೊಂದ ಹಾಗೂ ಒಡಂಬಡಿಕೆಯ ಸರಕಾರವಾಗಿದೆ. ಪಕ್ಷದ ಹೊಸ ಅಭಿಪ್ರಾಯದಂತೆ ನೆಹರು ಸರಕಾರವು ಬ್ರಿಟಿಷ್ ಚಕ್ರಾಧಿಪತ್ಯ ಮತ್ತು ಹಿಂದುಸ್ಥಾನದ ಸ್ವಾರ್ಥಪರಾಯಣತೆಗಳ ಅಪವಿತ್ರ ಸಂಪರ್ಕದಿಂದ ಹುಟ್ಟಿದ ಕಲಂಕಿತ ಶಿಶುವಿನಂತಿದೆ. ಈ ಅಭಿಪ್ರಾಯದಿಂದ ಕಮ್ಯುನಿಸ್ಟ್ ಪಕ್ಷವು ಜನತಾ ಸರಕಾರದ ಮೇಲೆ ಅಪಪ್ರಚಾರಕ್ಕೆ ಕೈಹಾಕಿತು. ಈ ಪಕ್ಷದ ಪತ್ರಿಕೆಗಳಲ್ಲಿ ಸರಕಾರದ ಕಡೆಗೆ ಬಹಿರಂಗವಾಗಿ ತಿರಸ್ಕಾರ ತೋರಿಸಲ್ಪಟ್ಟಿತು. ಹಿಂಸಾತ್ಮಕ ಕಾರ್ಯಕಲಾಪಗಳಿಗೆ ಹುರಿದುಂಬಿಸುವ ಕರಪತ್ರಗಳೂ ಸರಕಾರವನ್ನೂ ಬಹಿರಂಗವಾಗಿ ಧಿಕ್ಕರಿಸಿದುವು.

ಎಲ್ಲಾ ಕಾರ್ಯಗಳೂ ಪ್ರಜೆಗಳ ಹೆಸರಿನಲ್ಲೇ ಆಗುತ್ತಿವೆ. ಪ್ರಜಾಸ್ವಾತಂತ್ರ್ಯದ ಈ ವೀರಪುರುಷರು ಪ್ರಜೆಗಳಿಗಾಗಿ ಮಾಡುತ್ತಿರುವುದಾದರೂ ಏನು? . ಇವರು ಜಾತೀಯ ದ್ವೇಷವನ್ನು ಹೆಚ್ಚಿಸಿ ಹಿಂಸೆಯನ್ನು ಹಬ್ಬಿಸಿದರು. . . ಇವರು ಪ್ರಜಾಪ್ರಭುತ್ವದ ಪ್ರಾಮುಖ್ಯ ತಳಹದಿಯನ್ನೇ ಪುಡಿಮಾಡುತ್ತಿರುವರಲ್ಲದೆ ಜನತಾ ಸರಕಾರದೊಡನೆ ಯುದ್ಧ ಹೂಡಿದರು. . . ಇವರು ತಮ್ಮ ರಾಜಕೀಯದ ಪಗಡೆಯಾಟದಲ್ಲಿ ಕಿಸಾನರನ್ನೂ ಮಜೂರರನ್ನೂ ಕಾಲಾಳುಗಳಂತೆ ಮುಂದೆ ತಳ್ಳಿದರು. . ಭಾರತೀಯ ಆಗಸದಲ್ಲಿ ರಕ್ತತಾರೆಯನ್ನು ಕಾಣುವ ತಮ್ಮ ಮತಾಂಧತೆಯ ಉತ್ಸಾಹದಿಂದ ತಪ್ಪುದಾರಿಗೊಯ್ಯಲ್ಪಟ್ಟ ಅಜ್ಞಾನಿ ಮಜೂರರ ರಕ್ತದಿಂದ ಪವಿತ್ರವಾದ ಭಾರತ ಭೂಮಿಯನ್ನು ಕಲುಷಿತವಾಗಿ ಮಾಡಿದರು.

ಸಾರ್ವಜನಿಕ ಜೀವನದ ಧರ್ಮನೀತಿಯನ್ನೇ ಇವರು ಧ್ವಂಸಮಾಡಿದರು. ರಾಜಕೀಯ ನೀತಿ ತತ್ವಗಳನ್ನೆಲ್ಲಾ ಹಾಳುಗೆಡವಿದರು. ಸಾರ್ವಜನಿಕ ಅಭಿಪ್ರಾಯದ ಮುಂದೆ ಕಮ್ಯುನಿಸ್ಟರ ಮೇಲೆ ಜನತೆಯು ಹೊರಿಸುವ ಅಪರಾಧಗಳು ಇವೇ ಆಗಿವೆ.

ಈ ಅಕ್ರಮಗಳನ್ನು ನಿಲ್ಲಿಸಲು ಸರಕಾರವು ಎಲ್ಲಾ ಬಗೆಯ ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳುವುದೆಂದು ಜನತೆಗೆ ಈ ಮೂಲಕ ಭರವಸೆ ಕೊಡುತ್ತಿದೆ. ಅಲ್ಲದೆ ವಿಚಾರಿಗಳೆಲ್ಲರೂ ಈ ವಿಷಯದಲ್ಲಿ ಸಂಪೂರ್ಣ ಬೆಂಬಲಕೊಡುವರೆಂದು ಸರಕಾರಕ್ಕೆ ವಿಶ್ವಾಸವಿದೆ. ಯಾರ ಮತವು ದೋಷಯುಕ್ತವೋ, ಯಾರ ಪಂಥವು ಹಿಂಸಾಮಯವೋ ಯಾರ ಆಯುಧವು ವಿನಾಶಕಾರಿಯೋ, ಯಾರ ಉದ್ದೇಶವು ಅರಾಜಕತ್ವವೋ ಅಂತಹರನ್ನು ಸರಕಾರ ಮಾತ್ರವಲ್ಲ ಪ್ರಜೆಗಳೂ ಸಹಿಸಲಾರರೆಂಬುದು ಈಗ ಸ್ಪಷ್ಟವಾಗುತ್ತಿದೆ.

೧ನೇ ಪುಟದಿಂದ

೧೯೪೭ರ ನವೆಂಬರ್ ೬ರ ಸಂಚಿಕೆಯಲ್ಲಿ ಲಂಡನಿನ ಟ್ರಿಬ್ಯೂನ್ ಪತ್ರಿಕೆ ಹೀಗೆ ಬರೆದಿತ್ತು. "ಸಂಕಷ್ಟದಲ್ಲಿ ಬಿದ್ದಿರುವ ಹೈದರಾಬಾದಿನ ಜನತೆ ಗವರ್ನರ್ ಜನರಲ್ಲರ ಕಡೆ ವಿಮೋಚನೆಗಾಗಿ ನೋಡುತ್ತಿದೆ. ಅಲ್ಲಿ ಅವ್ಯವಸ್ಥಿತ ಸರಕಾರವನ್ನು ಸಮಗೊಳಿಸುವುದು ಗವರ್ನರ್ ಜನರಲ್ಲರ ಸುಲಭವೂ ನ್ಯಾಯಯುಕ್ತವೂ ಆದ ಕರ್ತವ್ಯವಾಗಿದೆ."

"ಈ ನಿಜಾಮನನ್ನು ಏನು ಮಾಡುತೀರಿ? ಈತ ತನ್ನ ಆಡಳಿತ ನಡೆಸಲು ಅಸಾಧ್ಯವೆ ಆಗಿದೆ"—ಸರ್ ಚಾರ್ಲ್ಸ್‌ವುಡ್ ಇವರು ಗವರ್ನರ್ ಜನರಲ್ಲಿಗೆ ೧೮೫೩ರಲ್ಲಿ ಬರೆದದ್ದು.

"ಈ ನಿಜಾಮನಿಗೆ ಸ್ವತಂತ್ರ ಸ್ಥಾನ ಕೊಡಬೇಕಾದರೆ ಅವನ ದೇಶಾಧಿಪತ್ಯವನ್ನು ಯುರೋಪಿಯನ್ ಮಂಡಳಿಯೊಂದರ ಕೈಗೆ ಕೊಡಬೇಕು" ರೆಸಿಡೆಂಟರಾಗಿದ್ದ ಜನರಲ್ ಫ್ರೇಸರರು ಬರೆದ ಪತ್ರ.

ಇದಕ್ಕೆ ಮದ್ದು ಎಲ್ಲಿದೆ?

೧೮೫೩ರಲ್ಲಿ ನಿಜಾಮರ ಮುಖ್ಯ ಮಂತ್ರಿಯಾಗಿದ್ದ ಲಾಯಕ್ ಅಲಿ (ನಂತರ ಇವರಿಗೆ ಸಾಲಾರ್ ಜಂಗ್ ಎಂದು ಬಿರುದು ಬಂತು) ಎಂಬವರು ಮಿ। ಬ್ಲಂಟ್ ಎಂಬ ಆಂಗ್ಲ ಅಧಿಕಾರಿಗೆ ಬರೆದ ಪತ್ರದಲ್ಲಿ- "ನಿಜಾಮನು ಸ್ವಂತವಾಗಿ ದೇಶವನ್ನು ಆಳಲಾರ. ಅದೇ ರೀತಿ ದೇಶವಾದರೂ ಸ್ವಯಂ ಆಡಳಿತೆಗೆ ಯೋಗ್ಯವಾಗಿಯೂ ಇಲ್ಲ" ಎಂದು ಬರೆದಿದ್ದರು.

ಅರುವತ್ತೈದು ವರ್ಷಗಳ ನಂತರ ೧೯೪೮ರಲ್ಲಿ ಇನ್ನೊಬ್ಬ ಲಾಯಕ್ ಅಲಿಯು "ಹೈದರಾಬಾದಿನ ಪ್ರಜೆಗಳು ಸ್ವಯಂ ಆಡಳಿತ ವಹಿಸಲು ಸಮರ್ಥರಾಗಿಲ್ಲ"ವೆಂದು ಜಗತ್ತಿಗೆ ಸಾರಿದ್ದಾನೆ! ಇನ್ನೂ ೬೫ ವರ್ಷಗಳ ನಂತರ—೨೦೧೩ರಲ್ಲಾದರೂ—ಈಗಿನ ಪುಂಡ ತಂಡಗಳ ಕೈಕೆಳಗೆ ಪಳಗಿದ ಹೈದರಾಬಾದು ಪ್ರಜಾಪ್ರಭುತ್ವಕ್ಕೆ ಸಿದ್ಧವಾದೀತೆ?

"ಭಾರತೀಯ ಗವರ್ನರ್ ಜನರಲ್ಲರನ್ನೊಬ್ಬನ ಕೈಕೆಳಗೆ ಪಾಲಿಸುವ ಸಂದರ್ಭ ದೊರೆತದ್ದು ಒಂದು ಸೌಭಾಗ್ಯವೇ ಸರಿ" ಹೀಗೆಂದು ಸರ್ ತೇಜ್‌ಬಹದ್ದೂರ್ ಸಪ್ರುರವರು ರಾಜಾಜಿಯವರು ತಮ್ಮ ಉನ್ನತ ಪದವಿ ಸ್ವೀಕರಿಸಿದಾಗ ಕಳುಹಿಸಿದ ಶುಭಾಶಯದ ಸಂದೇಶದಲ್ಲಿ ತಿಳಿಸಿದ್ದರು. ಸ್ವನ್ಮಾನ್ಯ ಸಪ್ರುಗಳು ಅನುಭವಿಸಿದ ಈ ಹೆಮ್ಮೆ ಅಭಿಮಾನಗಳನ್ನು ಅಪರ ಎಲ್ಲಾ ದೇಶಬಾಂಧವರು ಕಳೆದ ವರ್ಷದ ಅಗಸ್ಟ್ ೧೫ರಂದು ದೇಶವು ಕಳೆದ ಹೊಸ ಸ್ಥಾನಮಾನ ಸಂದರ್ಭದಲ್ಲೇ ಅನುಭವಿಸಿದೆ. ನಮ್ಮ ದೇಶಬಾಂಧವರ ಎರಡು ತಲಾಂತರಗಳವರು ಬೆವರಿಳಿಸಿದ ಕಾರ್ಯಸಾಧನೆಯ ಅಂತಿಮ ಫಲಪ್ರಾಪ್ತಿಯ ದಿನವದು.

ಸ್ವಾತಂತ್ರ್ಯವೆಂದರೆ ಭಾರತೀಯರ ಮಟ್ಟಿಗೆ ಸಮಾನ ಸಂದರ್ಭವಕಾಶಗಳ ಸಂಯೋಗ. ಅಮೇರಿಕನ್ನರು ತಮ್ಮ ಮಹೋನ್ನತ ದೇಶ ಧುರೀಣರ ಕುರಿತು "ಅವರು ಗುಡಿಸಲಿನಿಂದ ನೇರವಾಗಿ ಅಧ್ಯಕ್ಷ ಗದ್ದುಗೆಯನ್ನೇರಿದರು" ಎಂದು ಹೆಮ್ಮೆಯಿಂದಂದುಕೊಳ್ಳುತ್ತಾರೆ. ಇನ್ನೊಂದು ವಿಷಯದಲ್ಲೂ ಈ ಹೊಸ ಸ್ಥಾನಾಂತರವು ಮಹತ್ವದ್ದು. ಅದು ಗಾಂಧಿಜಿಯ ರಾಜಕೀಯ ಗುರುಗಳಾಗಿದ್ದು ದೇಶದ ಸ್ವಾತಂತ್ರ್ಯದ ಹುರುಪನ್ನು ಎಬ್ಬಿಸಿದವರಲ್ಲೊಬ್ಬರಾದ ಗೋಖಲೆಯವರ ಅತ್ಯಾಪ್ತ ಕನಸನ್ನೂ ಪೂರ್ತಿಗೊಳಿಸಿತು. ಅವರೆಂದಿದ್ದರು "ನಮ್ಮ ಜನರು ತಮ್ಮದೇ ಆದ ದೇಶದಲ್ಲಿರುವಂತಾಗಬೇಕೆಂದು ನನ್ನ ಉತ್ಕಟೇಚ್ಛೆ. ನಮ್ಮ ಬಂಧುಭಗಿನಿಯರಿಗೆ, ಜಾತಿಮತ ವರ್ಣಗಳ ಭೇದವಿಲ್ಲದೆ ಅವರವರ ಸಾಮರ್ಥ್ಯದ ಸಂಪೂರ್ಣ ಮಟ್ಟಕ್ಕೆ ಮುಟ್ಟುವ ಸಮಾನ ಸಂದರ್ಭಗಳು ಸಿಗುವಂತಾಗಬೇಕು. ಈ ದಿಕ್ಕಿನಲ್ಲಿ ಯಾವುದೂ ತರದ ಅಸ್ವಾಭಾವಿಕ ಎಡರುಗಳೂ ಕುತ್ಸಿತದ ಒಡ್ಡುಗಳೂ ಇರಬಾರದು."

ಈಗ ಆ ಅಸ್ವಾಭಾವಿಕ ಪರಕೀಯ ಒಡೆತನವು ಸಂಪೂರ್ಣ ಹೊರಟುಹೋಗಿದ್ದು, ಮುಂದೆ ನಮ್ಮ ಹೃದಯದಿಚ್ಛೆಯ ಭಾರತವನ್ನು ರೂಪುಗೊಳಿಸುವ ಕರ್ತವ್ಯವು ನಮ್ಮ ಪಾಲಿಗೆ ಬಿದ್ದಿರುವುದು.

★

ಆದರೆ ಹಿಂದೆಂದೂ ಯೋಚಿಸದಂತಹ ವಿಭಾಗೀಕರಣದಿಂದೊಡಗೂಡಿದ ಸ್ವಾತಂತ್ರ್ಯವು ನಮಗೆ ಸಿಗುವಂತಾಯಿತು. 'ತುಂಡರಿಸಿಯೇ ಸ್ವಾತಂತ್ರ್ಯ ಇಲ್ಲವೆ ಪರಕೀಯರಾಡಳಿತದ ಮುಂದುವರಿತ ಇವೆರಡೂ ನಮ್ಮೆದುರು ಇಡಲ್ಪಟ್ಟ ಕೊಡು ಕೊಳ್ಳು ಶರ್ತಗಳು. ಇದು ನಮ್ಮ ನಾಯಕರಿಗೆ ಅದೆಷ್ಟು ಹೃದಯ ವೇದನೆಯ ಸಂಗತಿಯಾಗಿತ್ತೆಂಬುದಕ್ಕೆ ಪಂಡಿತ ನೆಹರುರವರ ಮದ್ರಾಸ್ ಭಾಷಣದಿಂದ ನಾವು ತಿಳಿಯಬಹುದು.

"ಪಾಕಿಸ್ತಾನವೆಂಬುದನ್ನು ತುಂಡರಿಸಿದ್ದುದರಿಂದ ಅಸಂಖ್ಯಾತ ಸಮಸ್ಯೆಗಳುದ್ಭವಿಸಿದುವು—ರಾಜಕೀಯ, ಆರ್ಥಿಕ, ಸಾಮಾಜಿಕ. ಆದರೆ ಎಲ್ಲದಕ್ಕಿಂತಲೂ ಹೆಚ್ಚು ಕಷ್ಟತರವಾದುದು ಮಾನಸಿಕವಾದ ಸಂಕಷ್ಟ. ನಾವು ಭಾರತದ ಜೀವಂತ ಶರೀರದೊಂದು ಭಾಗವನ್ನೇ ಕತ್ತರಿಸಿದೆವು. ವಿಭಾಗೀಕರಣವು ನಮ್ಮ ಸಮ್ಮತಿಯಿಂದಲೇ ಉಂಟಾಯಿತು. ನಾವು ಅದಕ್ಕೊಪ್ಪಿಗೆ ಕೊಟ್ಟ ಪಕ್ಷದವರು. ನಾವು ಒಪ್ಪಿದಂತೇ ನಾವು ವರ್ತಿಸಲು ಸಿದ್ಧರೆ. ನಾವು ಒಪ್ಪಿದೆವು. ಕಾರಣ ಇನ್ನೊಂದು ಮಹತ್ತರ

ಒಂದು ವರ್ಷದ ತಪ್ಪೊಪ್ಪುಗಳು

ಗೋಖಲೆಯವರ ಕನಸ್ಸಿನ ಕಾರ್ಯರೂಪ

ಪಾಡ ಪಹೌಲ್ಯವನ್ನು ಕೊಟ್ಟಾದ್ದರೂ ಶಾಂತಿ ಸೌಹಾರ್ದಗಳನ್ನು ಕೊಂಡುಕೊಳ್ಳುವೆವೆಂದು ನಮ್ಮ ಹಾರೈಕೆಯಿತ್ತು. ನಮಗೆ ಆ ಶಾಂತಿ ಸೌಹಾರ್ದತೆಗಳು ಸಿಗಲಿಲ್ಲ. ಅದರ ಬದಲಿಗೆ ಭೀಕರವಾದ ಬೇರೆ ಸಂಗತಿಗಳು ನಮಗೆ ದೊರಕಿದುವು. ಇಷ್ಟಾದರೂ ಕೈಕೊಂಡ ನಿರ್ಧಾರದಿಂದ ಒಂದಿಷ್ಟು ಹಿಂದೆ ಸರಿಯೆವು."

★

ನೆಹರುಗಳಂತವರು ಮಾತ್ರ ಇಷ್ಟೊಂದು ಬಹಿರಂಗವಾಗಿಯೂ, ನಿರ್ಭೀತವಾಗಿಯೂ ಸತ್ಯವನ್ನು ನಿರೂಪಿಸಬಲ್ಲರು. ತಮ್ಮ ಸಮ್ಮತಿಯು ಭೀಕರ ಪರಿಣಾಮವಾದರೂ ಅವರು ಕಲ್ಪಿಸಿದ್ದರು. ಆದರೆ ಅನಿಷ್ಟಗಳಲ್ಲಿ ಕಡಿಮೆ ಸಂಕಷ್ಟದಾಯಕವಾದುದನ್ನೇ ಅವರು ಆರಿಸಿದರು.

ಮತ್ತೆ ನಡೆದ ಅನರ್ಥಗಳು ಅನಾಹುತದಲ್ಲಿ ಭಾರತ ಜನಾಂಗದ ಮನಸ್ಸಿಗೆ ಶಾಶ್ವತವಾದ ಆಘಾತವೂ ಉಂಟಾಯಿತು. ಆದರೆ ಇತಿಹಾಸದ ಸಮದೃಷ್ಟಿಯಿಂದ ಈ ಕ್ಷಿಸ ವಾಗ ಇದ ಅನಿವಾರ್ಯವೆಂದು ತಿಳಿಯದಿರದು. ವರ್ಣನಾತೀತವಾದ ಈ ರಕ್ತ ಚೆಲ್ಲುವಿಕೆ ಮತ್ತು ಕಣ್ಣೀರು ಸುರಿತಗಳನ್ನು ಜನಾಂಗವು ಕೌತುಕಗೊಳಿಸುವ ತಾಳ್ಮೆಯಿಂದ ಸಹಿಸಿತು. ಈ ದಾರುಣ ಹೋರಾಟದ ಬಿರುಸು ಬಿರುಗಾಳಿಯಲ್ಲಿ ದೇಶ ನೌಕೆಯನ್ನು ಸುಗಮವಾಗಿ ಸಾಗಿಸಿ ಪ್ರಶಾಂತ ನೀರಿನೊಳಗೊಯ್ದ ಸತ್ಕೀರ್ತಿ ಚುಕ್ಕಾಣಿ ಕೈಯಲ್ಲಿ ಹಿಡಿದ ನಮ್ಮ ಅಸಾಮಾನ್ಯ ದೇಶದುರೀಣರಿಗೇ ಸಲ್ಲುವುದು.

ನಮ್ಮ ನೂತನ ಸ್ವಾತಂತ್ರ್ಯವನ್ನು ನಾವು ಹೇಗೆ ಬಳಸಿಕೊಂಡೆವು? ನಮ್ಮಲ್ಲಿ ಹಲವರು ಹುಡುಕುವ ಸಾಂಪ್ರದಾಯದವರಿದ್ದಾರೆ. ಅವರ ಕಣ್ಣಿಗೆ ಸರಕಾರವು ಇನ್ನೂ ಹಿಂದಿನ ಸರ್ವಾಧಿಕಾರದ ಕಟ್ಟಳೆಯನ್ನು ಬಿಟ್ಟಿಲ್ಲವೆಂದೂ, ಅವ್ಯವಸ್ಥೆ ಅಪರಿಪೂರ್ಣತೆಗಳೂ ಇನ್ನೂ ಅಸ್ತಿತ್ವದಲ್ಲಿರುವುವೆಂದೂ ಅವರು ಗೊಣಗುಟ್ಟುತ್ತಲಿದ್ದಾರೆ.

ಆದರೆ ನಮ್ಮ ರಾಷ್ಟ್ರೀಯ ಸರಕಾರವನ್ನೆದುರಿಸಿದ ಮಹತ್ತಮವಾದ ಸಮಸ್ಯೆಗಳನ್ನು ಮತ್ತು ಅವುಗಳನ್ನು ಪರಿಹರಿಸಲು ಅವರು ಪಟ್ಟ ಶ್ರಮವನ್ನು ನಾವೆಣಿಸಿದರೆ ದೇಶದ ಆಂತರಿಕ ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ನಡೆಸಲ್ಪಟ್ಟ ಪ್ರಯತ್ನಗಳು ಶ್ಲಾಘನೀಯವೆಂದೇ ಹೇಳಬೇಕು. ಜನಾಂಗದ ಜೀವನದಲ್ಲಿ ಒಂದು ವರ್ಷದ ಅವಧಿಯು ಅತ್ಯಲ್ಪವಲ್ಲವೆಂದು ಭಾವಿಸಿಕೊಳ್ಳುವವರು ಮಾತ್ರ "ಇದು ತನಕ ಏನೂ ಆಗಿಲ್ಲವೆಂದು" ಹೇಳಬೇಕಲ್ಲದೆ ಇತರ ವಿಚಾರಿಗಳಾರೂ ಹೀಗೆ ದುಡುಕಲಾರರು.

ನಮ್ಮ ರಾಷ್ಟ್ರ ನೌಕೆಯನ್ನು ನಡೆಸುವವರು ತಮ್ಮ ಕರ್ತವ್ಯ ಪರಾಯಣತೆಗೂ ಅತುಲಿತ ಸಾಮರ್ಥ್ಯಕ್ಕೂ ಮತ್ತು ವಿವೇಕ ಧೋರಣೆ [illegible] ಜನಾಂಗದ ವಿಶ್ವಾಸವನ್ನು [illegible] ಗಳಿಸಿದವರಾಗಿರುವರು. [illegible] ದೇಶವನ್ನೆದುರಿಸಿದ ಬೃಹತ್ ಸಮಸ್ಯೆಗಳ [illegible] ಕಲ್ಪಿತ [illegible] ಆದರೆ ನಮ್ಮ [illegible] ರದ ವಿಜೃಂಭಣೆಯನ್ನು [illegible] ಅವರಿಗೆ ಸಂಪೂರ್ಣ [illegible] ಕೊಡಬೇಕಾದುದು ಕರ್ತವ್ಯವೇ ಆಗಿದೆ.

★

ಸಂಸ್ಥಾನಗಳ ಪ್ರಶ್ನೆಯು ಸೃಷ್ಟಿಸಿದ ಸಮಸ್ಯಾಗಳು ಬಿಕ್ಕಟ್ಟಾದವು ದೊಡ್ಡದೊಂದು ಅಪಶಕುನ ಆಕ್ರಮಣವಾಯಿತು. ಒಂದೇ ಮಾತಿನಲ್ಲಿ ಅವುಗಳಲ್ಲಿ ಈ ಸಂಸ್ಥಾನಗಳನ್ನು ಯಾವಪ್ರಕಾರವಾಗಿಯೂ ಭಾರತದೊಳಗೆ ಒಳಪಡಿಸಬಹುದಿತ್ತು. ಆದರೆ ಅವರು ಹಾಗೆ ಮಾಡದೆ "ಒಪ್ಪಂದ"ಗಳನ್ನು ಮಾಡಿಕೊಳ್ಳಲು "ಸ್ವತಂತ್ರರು" ಎಂದು ಈ ಮೊದಲೇ [illegible] ಸ್ವೇಚ್ಛಾಮಂತ್ರವನ್ನು ಸಾರಿದರು. ಆದರೆ ದೇಶದ [illegible] ಮತ್ತು ಸರ್ದಾರ್ ಪಟೇಲರ ಸಂಸ್ಥಾನ ಖಾತೆಯ [illegible] ಈ ಪ್ರಶ್ನೆಯ ಹೆಚ್ಚಿನಂಶವನ್ನು ಬಗೆಹರಿಸಿತು.

ಒಂದು ವರ್ಷದ ಅತ್ಯಲ್ಪ ಅವಧಿಯಲ್ಲಿ ಸರ್ದಾರ್ ಪಟೇಲರು ಬ್ರಿಟಿಷರಿಂದ ಎರಡು ಶತಮಾನಗಳಲ್ಲಿ ಮಾಡಲಿಕ್ಕಾಗದ [illegible] ಮಾಡುವ ಮನಸ್ಸಿದ್ದ ಕಾರ್ಯವನ್ನು ತೀರಿಸಿಬಿಟ್ಟರು. ಇದೊಂದು [illegible] ಕಾರ್ಯವೇ ಅವರ [illegible] ಅರ್ಹತೆಯನ್ನು ಪ್ರದರ್ಶಿಸುತ್ತದೆ.

ಇನ್ನು ನಮ್ಮ ರಾಷ್ಟ್ರ ಸರಕಾರಕ್ಕೆ ಔದ್ಯೋಗಿಕ, ರಾಷ್ಟ್ರೀಕರಣ, [illegible], ಶಿಕ್ಷಣ ಮೊದಲಾದ ಸಮಸ್ಯೆಗಳ ಕಡೆಗೆ ಗಮನಕೊಡಲು ಸಾಕಷ್ಟು [illegible] ಸಿಕ್ಕಿಲ್ಲ. ಆದರೆ ಎಂತಹ ಸಂದರ್ಭದಲ್ಲೂ ತಮ್ಮ ಹಿರಿಯ ನಾಯಕರು ದೇಶಹಿತವಾದ ಯಾವ [illegible] ಅಲಕ್ಷಿಸಲಾರರೆಂಬ ದೃಢವಿಶ್ವಾಸವು ನಮ್ಮೆಲ್ಲರಿಗೂ ಇದೆ ಎಂಬುದರಲ್ಲಿ ಸಂದೇಹವಿಲ್ಲ.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅದವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಘೋಷಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು—ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

CANARA BANK, LIMITED.

ESTD: 1906

ಸುದ್ದಿ ಸಂಗ್ರಹ

[illegible] ಪಾಕಿಸ್ತಾನದ [illegible] ಸಮಿತಿಯು [illegible] ಪತ್ರಿಕೆಗಳನ್ನು [illegible] ಭಾರತ [illegible] ಸ್ಥಾನಗಳಿಗೆ [illegible] ಇದನ್ನು [illegible] ರಾಜಕೀಯ [illegible] ಸಂದೇಹವುಂಟಾಗಿದೆ.

ಸರ್ ಷಣ್ಮುಗಂರವರ ರಾಜಿನಾಮೆ

[illegible] ಸಚಿವರಾಗಿದ್ದ ಸರ್ ಷಣ್ಮುಗಂ ಚೆಟ್ಟಿಯವರ ರಾಜಿನಾಮೆಯು ಕೌತುಕವನ್ನುಂಟುಮಾಡಿದೆ. ಆದರೆ ಅವರು ತಮ್ಮ ಕರ್ತವ್ಯ ನಿರ್ವಹಣದಲ್ಲಿ ಲೋಪವಿಲ್ಲದೆ ಮಾಡಿದ್ದರು. ಚಿಕ್ಕ ತಪ್ಪಿಸಿದಾಗಿ ಸಾರ್ವಜನಿಕ ಸಂದೇಹಕ್ಕೊಳಗಾಗಿದ್ದರು. [illegible] ಸಚಿವರು ಸ್ವಪ್ರೇರಕ್ಕೆ [illegible] ಬೇಕೆಂಬ ತತ್ವದ ಮೇಲೆ ಮುಖ್ಯ ಪ್ರಧಾನರು ಅವರ ರಾಜಿನಾಮೆ ಸ್ವೀಕರಿಸಿರುವರು. ಸದ್ಯ ಶ್ರೀ [illegible] ಯವರು ಅವರ ಸ್ಥಾನಕ್ಕೆ ಬಂದಿರುವರು.

ನಿಜಾಮರಿಗೆ ನಿಧಿಯ ಚಿಂತೆ

ಬ್ರಿಟಿಷ್ ಮತ್ತು ಭಾರತ ಸರಕಾರಗಳು ನಿಜಾಮರ ಸುವರ್ಣ ನಿಧಿ ಸಂಗ್ರಹವನ್ನು ಅಪಹರಿಸಬೇಕೆಂದು ಯುದ್ಧ ಹೂಡುವವೆಂಬ ಸುದ್ದಿಯು ತೀರ ಸುಳ್ಳೆಂದು ಪಾಕಿಸ್ತಾನದಲ್ಲಿನ ಬ್ರಿಟಿಷ್ ಹೈಕಮಿಷನರರು ಪ್ರಕಟಣೆ ಹೊರಡಿಸಿರುವರು. ಆ ನಿಧಿ ಜನತೆಯ ವಶ ಬರಬೇಕೆಂಬುದರಲ್ಲಿ ಎರಡು ಭಿಪ್ರಾಯಗಳಿಲ್ಲದೆಂದು ಒಂದು ಪತ್ರಿಕೆ ಸೂಚಿಸಿದೆ.

ಸ್ವದೇಶಾಭಿಮಾನಿ

ತಾರೀಕು 20—8—1948

ಶ್ರೀ ಶಣ್ಮುಗಮ್ ಚೆಟ್ಟಿಯಾರರ ರಾಜಿನಾಮೆ

ಕೇಂದ್ರ ಸರಕಾರದ ಆರ್ಥಿಕ ಖಾತೆಯ ಸಚಿವ ಶ್ರೀ ಶಣ್ಮುಗಮ್ ಚೆಟ್ಟಿಯಾರರು ತಮ್ಮ ಸಚಿವ ಪದವಿಗೆ ರಾಜಿನಾಮೆಕೊಟ್ಟಿದ್ದಾರೆಂದೂ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರುರವರು ಇದನ್ನು ಸ್ವೀಕರಿಸಿರುವರೆಂದೂ ಪ್ರಕಟವಾಗಿರುತ್ತದೆ.

ಗಳೆದನೇ ಇಸ್ವಿ ಎಪ್ರಿಲ್ ತಿಂಗಳಲ್ಲಿ ಆಗಿನ ಹಿಂದುಸ್ಥಾನ ಸರಕಾರದ ಆರ್ಥಿಕ ಸಚಿವ ಲಿಯಾಖತ್ ಆಲಿಯವರು ಆದಾಯಕರಿಗೆಯಿಂದ ತಪ್ಪಿಸಿಕೊಂಡವರ ವಿಚಾರಣೆಗಾಗಿ ಒಂದು ವಿಚಾರಣಾ ಸಂಸ್ಥೆಯನ್ನು ಏರ್ಪಡಿಸಿದ್ದರು ಸರಕಾರದವರು ಈ ಸಂಸ್ಥೆಯ ಮುಂದೆ ಕಳುಹಿಸುವ ನಂಬ್ರಗಳನ್ನೆಲ್ಲ ಅದೇ ದಶಂಬರ ಅಂತ್ಯದೊಳಗೆ ಕಳುಹಿಸಬೇಕೆಂದು ಅದರಲ್ಲಿ ವ್ಯಾದೆ ಹಾಕಲಾಗಿತ್ತು ಸರಕಾರದ ಮುಂದೆ ಬಂದ ನಂಬ್ರಗಳನ್ನು ಅವರೇ ಮುಂದಾಗ ಪರಿಶೀಲಿಸಿ ಅಗತ್ಯಕಂಡವುಗಳನ್ನು ಮಾತ್ರ ಹೀಗೆ ಸಂಸ್ಥೆಯ ಮುಂದೆ ಕಳುಹಿಸತಕ್ಕದ್ದೆಂದೂ ಸಾಕಷ್ಟು ರುಜುವಾತು ಇಲ್ಲದ ನಂಬ್ರಗಳನ್ನು ಅವರೇ ಬಿಡಬಹುದೆಂದೂ ನಿಯಮವಿತ್ತು.

ವ್ಯಾದೆಯು ಮುಗಿಯುತ್ತ ಬಂದ ಕಾರಣ ಸರಕಾರವು ತನ್ನ ಮುಂದಿದ್ದ ನಂಬ್ರಗಳೆಲ್ಲವನ್ನು ಪೂರ್ಣ ಪರಿಶೀಲಿಸದೇನೇ ಈ ವಿಚಾರಣಾ ಸಂಸ್ಥೆಗೆ ಒಪ್ಪಿಸಿತು

ಮುಂದೆ ಇಂಥ ನಂಬ್ರಗಳನ್ನು ಹಿಂತೆಗೆಯಬೇಕಾದರೆ ಒಂದು ಕಮಿಶನ್ ನೇಮಕ ಮಾಡಿ ಅದರ ಒಪ್ಪಿಗೆ ಪಡೆದುಕೊಳ್ಳತಕ್ಕದೆಂಬ ಉಪ ಸೂಚನೆಯೊಂದನ್ನು ಮಂಜೂರುಮಾಡಲಾಯಿತು ಈ ಉಪ ಸೂಚನೆಯ ಕುರಿತು ಚರ್ಚೆ ನಡೆಯುತ್ತಿರುವಾಗಲೇ ಕೆಲವು ನಂಬ್ರಗಳನ್ನು ಹಿಂತೆಗೆಯುವಂತೆ ಶ್ರೀ ಶಣ್ಮುಗಮ್ ಚೆಟ್ಟಿಯಾರರ ಈ ಆಜ್ಞೆ ಜಾರಿಯಾಗಿ ಈ ನಂಬ್ರಗಳು ಹಿಂತೆಗೆಯಲ್ಪಟ್ಟವು. ಇದೆಲ್ಲ ಆದ ಬಳಿಕ ಹೀಗೆ ಹಿಂತೆಗೆಯಲ್ಪಟ್ಟ ನಂಬ್ರಗಳ ಬಗ್ಗೆ ಕಮಿಶನಿನ ಸಮ್ಮತಿ ಮತ್ತೆ ಪಡೆಯಲಾಯಿತು.

ಕಮಿಶನಿನ ಸಮ್ಮತಿ ವಿನಾ ನಂಬ್ರಗಳನ್ನು ಹಿಂತೆಗೆಯಬಾರದೆಂಬ ತಿದ್ದುಪಡಿಯ ಚರ್ಚೆ ನಡೆಯುತ್ತಿರುವಾಗಲೇ ಶ್ರೀ ಚೆಟ್ಟಿಯಾರರು ಈ ಕೆಲವು ನಂಬ್ರಗಳನ್ನು ಹಿಂತೆಗೆಸಿದ್ದು ತಪ್ಪಾಯಿತೆಂದು ಅವರೇ ಒಪ್ಪಿದರು. ಈ ಕುರಿತು ತನ್ನ ವರ್ತನೆಯ ಕುರಿತು ಸಂಶಯಕ್ಕೆಡೆ ಇದೆಯೆಂಬುದನ್ನು ಕಂಡು ಇಂಥ ಸಂದರ್ಭದಲ್ಲಿ ತಾನು ರಾಜಿನಾಮೆ ಕೊಡುವುದೇ ಯುಕ್ತವೆಂದು ತಿಳಿದು ಅವರು ರಾಜಿನಾಮೆ ಕೊಟ್ಟರು

ಪಂಡಿತ ಜವಾಹರಲಾಲರು ಈ ಕುರಿತು ಕೇಂದ್ರ ಶಾಸನ ಸಭೆಯಲ್ಲಿ ವಿವರಿಸುತ್ತ ಶ್ರೀ ಚೆಟ್ಟಿಯಾರರ ನಡತೆಯ ಕುರಿತು ಸ್ವತಃ ತನಗೆ ಯಾವ ಸಂಶಯವೂ ಇಲ್ಲವೆಂದೂ ಆದರೆ ಅವರು ನಂಬ್ರಗಳನ್ನು ಹಿಂತೆಗೆದುದು ತಪ್ಪೆಂದೂ ತನ್ನ ನಡತೆಯ ಕುರಿತು ಸಂಶಯಕ್ಕೆ ಆಸ್ಪದವಿದೆಯೆಂದು ಕಂಡಕ್ಷಣ ತನ್ನ ತಪ್ಪನ್ನು ಒಪ್ಪಿಕೊಂಡು ಅವರು ರಾಜಿನಾಮೆ ಕೊಟ್ಟದ್ದು ನಿಜವಾಗಿ ಶ್ಲಾಘನೀಯವೆಂದೂ ಇದರಿಂದ ಕೇಂದ್ರ ಸರಕಾರದ, ಚೆಟ್ಟಿಯಾರರ ಹಾಗೂ ಶಾಸನ ಸಭೆಯ ಗೌರವ ಹೆಚ್ಚಿದಂತಾಗಿದೆಯೆಂದೂ ವಿವರಿಸಿ ಆದ ತಪ್ಪಿನ ದೃಷ್ಟಿಯಿಂದ ರಾಜನಾಮೆ ಸ್ವೀಕರಿಸುವುದೇ ತನಗೆ ಯುಕ್ತ ದಾರಿಯೆಂದು ಹೇಳಿದರು ಶ್ರೀ ಶಣ್ಮುಗಮ್ ಚೆಟ್ಟಿಯಾರರೂ ನಡೆದ ಸಂಗತಿಗಳನ್ನು ಯಥಾವತ್ತಾಗಿ ವಿವರಿಸಿ ತಮ್ಮ ಹೇಳಿಕೆಯನ್ನು ಇತ್ತರು

ಈ ಆರ್ಥಿಕ ಖಾತೆಯನ್ನು ತತಕ್ಷಲಕ್ಕೆ ಶ್ರೀ ಕೆ ಸಿ ನಿಯೋಗಿಯವರಿಗೆ ವಹಿಸಿ ಕೊಡಲಾಗಿದೆ

ಶ್ರೀ ಚೆಟ್ಟಿಯಾರರು ಆರ್ಥಿಕ ವಿಚಾರಗಳಲ್ಲಿ ಒಳ್ಳೆಯ ಸಮರ್ಥರಿದ್ದು ಇತ್ತೀಚೆಗೆ ಬ್ರಿಟನಿಗೆ ಹೋಗಿ ಆ ದೇಶದಿಂದ ನಮಗೆ ಬರಲಿಕ್ಕಿರುವ ಸಾಲದ ವಿಚಾರದಲ್ಲಿ ಉತ್ತಮ ಏರ್ಪಾಡುಗಳನ್ನು ಸಾಧಿಸಿಬಂದಿದ್ದರು ಇಷ್ಟು ದಕ್ಷತೆಯುಳ್ಳ ಸಚಿವರೊಬ್ಬರನ್ನು ಕಳೆದುಕೊಳ್ಳುವಂತಾದುದು ಒಂದು ಬೇಸರದ ಸಂಗತಿಯಾದರೂ ಕೇಂದ್ರ ಸರಕಾರದಲ್ಲಿಯ ವ್ಯಕ್ತಿಗಳು ಸ್ವಲ್ಪವಾದರೂ ತಮ್ಮ ನಡತೆಯ ಕುರಿತು ಸಂಶಯಕ್ಕೆ ಕೂಡಾ ಆಸ್ಪದ ಕೊಡದೆ ಸೀದಾ ದಾರಿಯಲ್ಲಿ ವರ್ತಿಸುತ್ತಿರುವರೆಂಬುದು ಸಮಾಧಾನದ ಸಂಗತಿ

ಕೇಂದ್ರ ಸರಕಾರದ ಸಚಿವರಾಗಿಲ್ಲದಿದ್ದರೂ ಶ್ರೀ ಶಣ್ಮುಗಮ್ ಚೆಟ್ಟಿಯಾರರು ತಮ್ಮ ಅನುಭವ ಹಾಗೂ ಸಾಮರ್ಥ್ಯಗಳನ್ನು ರಾಷ್ಟ್ರದ ಹಿತಕ್ಕಾಗಿ ಇತರ ವಿಧಾನಗಳಲ್ಲಿ ಉಪಯೋಗಿಸುವಂತಾಗಲೆಂದು ಕೋರಿದ ಪಂಡಿತ ಜವಾಹರಲಾಲರ ಕೋರಿಗೆಯನ್ನು ನಾವೂ ಸಮರ್ಥಿಸುತ್ತೇವೆ

ಟೀಕೆ-ಟಿಪ್ಪಣಿಗಳು

ಕಾಶ್ಮೀರಕ್ಕೆ ಯುದ್ಧಸಾಮಗ್ರಿ ಒದಗಿಸುವವರು ಯಾರು?

ಭದ್ರತಾ ಸಮಿತಿಯ ಕಮಿಶನಿನವರು ಯುದ್ಧ ನಿಲ್ಲಿಸುವ ಯತ್ನ ಮಾಡುತ್ತಿರುವುದನ್ನು ಕಂಡು ಭಾರತ ಸರಕಾರವು ಯುದ್ಧ ನಿಲ್ಲಿಸಲಿಲ್ಲವಾದರೂ ತಾವೇ ಮುಂದಾಗಿ ಹೋಗಿ ಆಕ್ರಮಣ ಮಾಡುವುದನ್ನು ಸ್ವಲ್ಪ ಸಮಾಧಾನ ಮಾಡಿದ್ದರು. ಪಾಕಿಸ್ಥಾನದವರಾದರೋ ಈ ಅವಕಾಶದ ಲಾಭ ಮಾಡಿಕೊಂಡು ಎಲ್ಲ ಯುದ್ಧರಂಗಗಳಲ್ಲಿಯೂ ಆಕ್ರಮಣವನ್ನೇ ಆರಂಭಿಸಿದರು. ಆದರೆ ಭಾರತದ ಸೈನ್ಯಗಳು ಈ ಆಕ್ರಮಣಗಳನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾಗುತ್ತಿವೆ.

ಈ ಕದನದಲ್ಲಿಯ ವಿಶೇಷವೆಂದರೆ ಯುದ್ಧಸಾಮಗ್ರಿಗಳನ್ನು ವಿಸ್ತೃತಪ್ರಮಾಣದಲ್ಲಿ ಪಾಕಿಸ್ಥಾನದವರು ಉಪಯೋಗಿಸುತ್ತಿರುವರೆಂಬುದು ಪಾಕಿಸ್ಥಾನದವರೊಡನೆ ಈ ರೀತಿ ದೊಡ್ಡ ಪ್ರಮಾಣದಿಂದ ಉಪಯೋಗಿಸುವಷ್ಟು ಯುದ್ಧಸಾಮಗ್ರಿಗಳಿರಲ್ಲ ಈ ರೀತಿ ಇವರು ಉಪಯೋಗಿಸುವುದನ್ನು ಕಾಣುವಾಗ ಇವರಿಗೆ ಹೊರಗಿನವರು ಯಾರೋ ಸರಾಗವಾಗಿ ವಿಸ್ತೃತ ಪ್ರಮಾಣದಲ್ಲಿ ಯುದ್ಧಸಾಮಗ್ರಿಗಳನ್ನು ಒದಗಿಸುತ್ತಿರುವರೆಂದು ಊಹಿಸಲಾಗಿದೆ ಇದು ಯಾರಾಗಿರಬಹುದು?

ನೈಜಾಮರ ನಿಜವಾದ ಹಿತಚಿಂತಕರು

ಹೈದರಾಬಾದಿನ ನೈಜಾಮರು ಇನ್ನಾದರೂ ಭಾರತ ಸರಕಾರದ ಹಿತಸೂಚನೆಗಳನ್ನು ಸ್ವೀಕರಿಸಿ ಆ ಸರಕಾರದ ಆಶ್ರಯ ಒಪ್ಪಬೇಕೆಂದೂ ರಜಾಕರ ತಂಡ ನಿಲ್ಲಿಸಬೇಕೆಂದೂ ಪ್ರಜಾ ಸರಕಾರ ಜಾರಿಮಾಡಲು ಒಪ್ಪಿ ಯೋಗ್ಯ ತಾತ್ಕಾಲಿಕ ಸರಕಾರ ಕೂಡಲೇ ಏರ್ಪಡಿಸಬೇಕೆಂದೂ ಹೈದರಾಬಾದಿನಲ್ಲಿಯ ಪ್ರಮುಖ ಮುಸ್ಲಿಮ್ ಜನರು ಕೆಲವರು ಒಂದು ಹೇಳಿಕೆಯನ್ನು ಪ್ರಕಟಿಸಿರುತ್ತಾರೆ ಇವರಲ್ಲಿ ಹೆಚ್ಚಿನವರು ಈ ಮೊದಲು ನೈಜಾಮ ಸರಕಾರದ ನೌಕರಿ ಮಾಡಿದವರೇ ಇದ್ದು ಈಗ ಪೆನ್ಶನ್ ಪಡೆಯುತ್ತಿರುವವರು

ಈ ಹೇಳಿಕೆಗೆ ರಜಾಕರರ ಕೈಯಲ್ಲಿ ಸಿಕ್ಕಿಬಿದ್ದಿರುವ ನೈಜಾಮರ ಉತ್ತರವೆಂದರೆ ಅವರ ಪೆನ್ಶನುಗಳನ್ನು ಏತಕ್ಕೆ ರದ್ದುಮಾಡಬಾರದೆಂಬ ವಿಚಾರಣೆ ಮಾಡುವುದೇ ಎಂದ ಮೇಲೆ ಈಗ ಹಿತಚಿಂತಕರ ಮಾತುಗಳಿಗೆ ಕಿವಿಕೊಡುವವರಿಲ್ಲವೆಂದೇ ಅರ್ಥ

ನೈಜಾಮರ ಹಿರಿಯ ಮಗ ಹೈದರಾಬಾದಿನ ಮುಖ್ಯ ಸೇನಾಪತಿ ಎರಡನೆಯ ಮಗ ಒಂದು ಟಿಸ್ಟಿನ ಅಧ್ಯಕ್ಷರು ಇವರಿಬ್ಬರೂ ಈಗಿನ ಸರಕಾರೀ ಧೋರಣೆಗೆ ತಮ್ಮ ಅಸಮ್ಮತಿ ಸೂಚಿಸಲು ತಮ್ಮ ತಮ್ಮ ಕೆಲಸಗಳಿಗೆ ರಾಜಿನಾಮೆ ಕೊಟ್ಟರು ನೈಜಾಮರಾದರೋ ಈ ರಾಜಿನಾಮೆಗಳನ್ನು ಸ್ವೀಕರಿಸಲಿಲ್ಲ ಈ ರಾಜಕುಮಾರರನ್ನು ಸೆರೆಯಲ್ಲಿಡುವ ಸಂಭವವೇ ಹೆಚ್ಚು

ಅಂತೂ ರಜಾಕರರ ಉಪಟಳ ನಿಂತಿಲ್ಲ ಭಾರತ ಸರಕಾರದ ಗಡಿಯೊಳಗೆ ಒಂದಾಗಲೆಲ್ಲ ನಮ್ಮ ಸೈನಿಕರಿಂದ ಇವರು ಚೆನ್ನಾಗಿ ಹೊಡೆತ ತಿನ್ನುತ್ತಿದ್ದಾರೆಂಬುದು ಸಮಾಧಾನದ ವಿಷಯ ಇವರಿಗೆ ಬುದ್ಧಿ ಬರಬೇಕಾದರೆ ಹೊಡತದ ದಾರಿಯಲ್ಲದೆ ಬೇರೆ ಯಾವುದೂ ಫಲವಿಲ್ಲವೆಂಬುದು ಸ್ಪಷ್ಟವಾಗುತ್ತಲೇ ಇದೆ ಮಾತ್ರವಲ್ಲ ರಜಾಕರ ಪಂಗಡಗಳು ನಿರಾಯುಧ ಜನರ ಮೇಲೆ ಮಾತ್ರ ಬಲಾತ್ಕಾರ ನಡೆಸಲು ಸಮರ್ಥರಿರುವರಲ್ಲದೇ ನಮ್ಮ ಸೈನ್ಯಗಳೊಡನೆ ಕಾದಾಡಲು ಇವರಿಂದ ಸಾಧ್ಯವಲ್ಲವೆಂಬುದೂ ಸ್ಪಷ್ಟವಾಗುತ್ತಿದೆ

ಮದ್ರಾಸಿಗೆ ಹೊಸ ಗವರ್ನರರು

ಮದ್ರಾಸ್ ಪ್ರಾಂತ್ಯದಲ್ಲಿ ಇದುವರೆಗೆ ಗವರ್ನರರಾಗಿದ್ದ ಸರ್ ಆರ್ಚಿಬಾಲ್ಡ್ ನ್ಯಾಯುವೆಲು ಬರುವ ತಿಂಗಳ ಆರಂಭದಲ್ಲಿ ಬ್ರಿಟನಿಗೆ ತೆರಳುವರು. ಇವರ ಸ್ಥಾನಕ್ಕೆ ಭಾವನಗರದ ಮಹಾರಾಜರನ್ನು ನೇಮಕ ಮಾಡಿರುವುದಾಗಿ ಪ್ರಕಟವಾಗಿದೆ.

ಇವರಿಗೆ 36 ವರ್ಷ ಪ್ರಾಯ. ಇವರ ಶಿಕ್ಷಣ ಬ್ರಿಟನಿನಲ್ಲಿ ನಡೆದಿತ್ತು. 18ನೇ ವರ್ಷದಲ್ಲಿಯೇ ಭಾವನಗರದ ರಾಜರಾಗಿ ಆಡಳಿತೆ ವಹಿಸಿದರು. ಇವರ ಮನೆತನ ಹದಿನೆರಡನೇ ಶತಮಾನದಿಂದ ನಡೆದು ಬಂದ ರಜಪೂತ ರಾಜ ಮನೆತನ. ಪ್ರಜೆಗಳಿಗೆ ಪೂರ್ಣ ಆಡಳಿತ ಬಿಟ್ಟಲ್ಲಿ ಸಂಸ್ಥಾನದ ರಾಜರಲ್ಲಿ ಇವರು ಮೊದಲಿಗರಂತೆ ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಸೌರಾಷ್ಟ್ರ ಪ್ರಾಂತ್ಯಕ್ಕೆ ಇವರನ್ನೇ ಉಪರಾಜಪ್ರಮುಖರಾಗಿ ಆರಿಸಿದ್ದರು

ಮದ್ರಾಸಿಗೆ ಇಷ್ಟು ಯೋಗ್ಯ ಗವರ್ನರರನ್ನು ಆರಿಸಿ ತೆಗೆದ ಬಗ್ಗೆ ಎಲ್ಲರಿಗೂ ತುಂಬಾ ತೃಪ್ತಿಯಾಗಿರುತ್ತದೆ

ದಕ್ಷಿಣ ಆಫ್ರಿಕದಲ್ಲಿ ಮಲಾನ ಸರಕಾರದ ಧೋರಣೆ

ಜನರಲ್ ಸ್ಮಟ್ಸರ ಕಾಲದಲ್ಲಿ ಹಿಂದೀಯರಿಗೂ ಆಫ್ರಿಕದವರಿಗೂ ಕೊಟ್ಟಿದ್ದ ಅಲ್ಪ ಸ್ವಲ್ಪ ಹಕ್ಕುಗಳನ್ನು ಹಿಂತೆಗೆಯಲು ಈಗಿನ ಮಲಾನ ಸರಕಾರವು ಹೊಸ ಮಸೂದೆ ತರುತ್ತಿದೆ ಹಿಂದೀಯರನ್ನೆಲ್ಲ ಹಿಂದುಸ್ಥಾನಕ್ಕೇ ಕಳುಹಿಸುವರಂತೆ. ಯಾರಾದರೂ ಮತ್ತೆಯೂ ಅಲ್ಲಿ ಉಳಿದರೆ ಅವರಿಗೆ ಯಾವ ಅಧಿಕಾರಗಳನ್ನೂ ಇಡುವುದಿಲ್ಲ ಈಗಲೇ ರೈಲು ಗಾಡಿಗಳಲ್ಲಿ ಬಿಳಿ ಜನರ ಗಾಡಿಗಳನ್ನು ಪ್ರತ್ಯೇಕಿಸಲು ಆರಂಭವಾಗಿರುತ್ತದೆ ಇಪ್ಪತ್ತನೆಯ ಶತಮಾನದ ಎರಡು ಮಹಾಯುದ್ಧಾನಂತರದ ಈಗಿನ ದಿನಗಳಲ್ಲಿ ನಾಚಿಕೆ ಇಲ್ಲದೆ ಈ ಬಗೆಯ ಧೋರಣೆಯನ್ನು ಕೈಕೊಳ್ಳುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ

ಈ ... ಸಂಯುಕ್ತ ರಾಷ್ಟ್ರಸಂಘ ... ಪತ್ರಗಳಿಗೆ ... ಪತ್ರೀಕ ಹೇಳಿಕೆ ... ಮುಂದಿನ ... ಮಹಾಧಿವೇಶನದ ಮುಂದೆ ಈ ಪ್ರಶ್ನೆಯು ಪುನಃ ತರಲಾಗುತ್ತದೆ ... ಸಂಘವು ಇದರಲ್ಲಿ ಇನ್ನಾದರೂ ... ಕೈಹಾಕುವುದೇ ನೋಡಲಿಕ್ಕಿದೆ

ಹಿಂದು ಪಾಕಿಸ್ಥಾನ ಒಟ್ಟುಗೂಡುವುದೆ?

ಮಿ। ಜಿನ್ನರಿಗೆ ಕೆನ್ಸರ್ ರೋಗದ ಶಾಯಿಲೆಯುಂಟಾಗಿರುತ್ತದೆಂದೂ ಲಂಡನಿನಿಂದ ತಜ್ಞ ವೈದ್ಯರೊಬ್ಬರನ್ನು ಕರೆಸಲಾಗಿದೆಂದೂ ಸುದ್ದಿ ಹರಡಿದೆ ಅವರನ್ನು ಚಿಕಿತ್ಸೆಗಾಗಿ ನ್ಯೂಯೋರ್ಕಿಗೆ ಒಯ್ಯಲಾಗುವುದೆಂದೂ, ಸರ್ ಮಹಮ್ಮದ್ ಜಾಫರುಲ್ಲಾ ಖಾನರು ಪಾಕಿಸ್ಥಾನದ ಹಂಗಾಮಿ ಗವರ್ನರ್ ಜನರಲ್ಲರಾಗುವರೆಂದೂ ಹೇಳಲಾಗಿದೆ ಒಂದು ವೇಳೆ ಜಿನ್ನರು ಪೈಗಂಬರವಾಸಿಗಳಾದರೆ ಪಾಕಿಸ್ಥಾನವು ಭಾರತದೊಡನೆ ಪುನಃ ಸೇರಲು ಚಳವಳಿವುಂಟಾಗುವ ಉಂಟಾಗುವ ಸಂಭವವಿದೆಯೆಂದು ಲಂಡನಿನಲ್ಲಿ ಬಲವಾದ ಊಹೆಗಳೆದ್ದಿವೆ ಪ್ರಧಾನ ನೆಹರುಗಳಂತು ಇದು ಸದ್ಯಕ್ಕೆ ಅಸಾಧ್ಯವೆಂದು ತಮ್ಮ ಮದ್ರಾಸ್ ಭಾಷಣದಲ್ಲಿ ತಿಳಿಸಿರುವರು

ಲೋಕ ಸೇವಾ ಸಂಘ

[ವ್ಯವಸ್ಥಾಪಕ ಮತ್ತು ಓದುಗರೊಳಗಿನ ಒಂದು ಕಾಲ್ಪನಿಕ ಸಂಭಾಷಣೆ]

ಸೂಚನೆ—ಇತರ ಪತ್ರಿಕೆಯವರು ಇದನ್ನೆತ್ತಿ ಪ್ರಕಟಿಸಲು ಅಡ್ಡಿಯಿಲ್ಲ.

ಲೇಖಕ—ಹಿ. ರಾಮರಾಯ ಮಲ್ಯ.

ಓದುಗ—ನಿಮ್ಮ ಲೋಕ ಸೇವಾ ಸಂಘದ ಘಟನೆ ಮತ್ತು ನಿಬಂಧನೆಗಳನ್ನು ಪೂರ್ಣ ಓದಿ ನೋಡಿದೆ. ಇಂಥ ಸಂಘವೊಂದು ಏಕೆ ಬೇಕೋ ನನಗಂತೂ ತಿಳಿಯುವುದಿಲ್ಲ ದಯವಿಟ್ಟು ತಿಳಿಸುವಿರಾ?

ವ್ಯವಸ್ಥಾಪಕ—ವಿಧಾಯಕ ಕಾರ್ಯಕರ್ತರ ಸಂಘಟನೆಯಿಂದ ಆ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದೇ ಇದರ ಉದ್ದೇಶವೆಂದು ಅದರಲ್ಲೆ ಸ್ಪಷ್ಟವಾಗಿ ಹೇಳಿದೆಯಲ್ಲ

ಓದುಗ—ಅದನ್ನು ಓದಿದ್ದೇನೆ—ಆದರೆ ವಿಧಾಯಕ ಕಾರ್ಯಗಳನ್ನು ಮುಂದೊತ್ತಲು ಮಹಾತ್ಮಾಗಾಂಧಿಯವರೇ ವ್ಯವಸ್ಥೆಗೊಳಿಸಿದ ಅಖಿಲ ಭಾರತ ಚರಖಾ ಸಂಘ ಗ್ರಾಮೋದ್ಯೋಗ ಸಂಘ, ಹರಿಜನ ಸೇವಾ ಸಂಘ, ಹಿಂದೀ ಪ್ರಚಾರ ಸಭೆ, ಗೋ ಸಂರಕ್ಷಣಾ ಸಂಘ, ನಯೀ ತಾಲೀಮ್ ಸಂಸ್ಥೆ ಇವೇ ಮೊದಲಾದವು ಪೂರ್ಣ ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ಕೆಲಸ ಮಾಡುತ್ತಿರವಾಗ ನಿಮ್ಮದೊಂದು ಹೊಸ ಸಂಘವೇಕೆ ಬೇಕು?

ವ್ಯವಸ್ಥಾಪಕ—ಉತ್ತಮವಾದ ಪ್ರಶ್ನೆಯನ್ನು ಕೇಳಿದಿರಿ. ಇವೆಲ್ಲ ಸಂಸ್ಥೆಗಳಲ್ಲಿ ಪೂರ್ಣ ಶ್ರದ್ಧೆಯಿಂದಲೂ ಒಳ್ಳೆ ದಕ್ಷತೆಯಿಂದಲೂ ದುಡಿಯುವ ಕೆಲಸಗಾರರಿದ್ದಾರೆಂಬ ನಿಮ್ಮ ಮಾತು ಸರಿ. ಆದರೆ ಇವೆಲ್ಲ ಸಂಸ್ಥೆಗಳ ಬೆಂಬಲಕ್ಕೆ ಇದುವರೆಗೆ ಮಹಾತ್ಮಾಗಾಂಧಿಯವರಿದ್ದರು. ಈ ಸಂಸ್ಥೆಗಳು ನಿರ್ದೇಶಿಸುವ ಉದ್ದೇಶಗಳ ಪ್ರಚಾರಕ್ಕೆ ಹಾಗೂ ಅವುಗಳಿಗೆ ಬೇಕಾಗುವ ಸಹಾಯ ಒದಗಿಸಲಿಕ್ಕೆ ಗಾಂಧೀಜಿಯವರು ಎಡೆಬಿಡದೆ ದುಡಿಯುತ್ತಿದ್ದರು. ಇಂಥ ಬೆಂಬಲವಿದ್ದೂ ಈ ಸಂಸ್ಥೆಗಳ ಕಾರ್ಯವು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿದೆ ಎನ್ನುವಂತಿಲ್ಲ. ಈ ಕಾರ್ಯಕ್ರಮದ ಉದ್ದೇಶವು ನಮ್ಮ ದೇಶದ ಸಮಾಜದಲ್ಲಿ ಪೂರ್ಣ ಕ್ರಾಂತಿಯನ್ನು ತಂದೊಡ್ಡುವುದೆಂಬುದನ್ನು ಅರಿತರೆ ಈ ಬಗ್ಗೆ ಕಾರ್ಯವು ಇನ್ನೂ ಆರಂಭ ಸ್ಥಿತಿಯಲ್ಲಿದೆಯೆಂದೂ ಇನ್ನೂ ಆಗಬೇಕಾದ ಕಾರ್ಯದ ಒಂದು ಚಿಕ್ಕ ಅಂಶ ಕೂಡಾ ನಾವು ಸಾಧಿಸಿಲ್ಲವೆಂದೂ ಸ್ಪಷ್ಟವಾಗುವುದು. ಗಾಂಧೀಜಿಯವರು ಇದಕ್ಕಾಗಿ ಮಾಡುತ್ತಿದ್ದ ಕಾರ್ಯ ಮುಂದ ಯಾರು ಮಾಡುವರು? ಇಂಥ ಕಾರ್ಯಗಳಲ್ಲಿ ವಿಶ್ವಾಸವಿದ್ದವರೆಲ್ಲ ಒಟ್ಟು ಸೇರಿ ತಮ್ಮದೇ ಸಂಘಟಿತ ಸಂಸ್ಥೆಯೊಂದನ್ನು ರಚಿಸಿಕೊಂಡು ತಮ್ಮ ವಿವಿಧ ಕಾರ್ಯಗಳಿಗೆ ಸಾಕಷ್ಟು ಜನರ ಬೆಂಬಲ ದೊರೆಯುವಂತೆ ಸಾಧಿಸುವುದು ಅಗತ್ಯವಿರುತ್ತದೆ

ಓದುಗ—ಈ ಬಗೆಯ ಸಂಘಟನೆ ಮಾಡುವುದಿಲ್ಲವಾದರೆ ಏನಾಗುವುದೆಂದು ಹೇಳುವಿರಿ?

ವ್ಯವಸ್ಥಾಪಕ—ಈ ಕಾರ್ಯಗಳ ನಿಜವಾದ ಮಹತ್ವ ಜನರು ತಿಳಿಯುವಂತಿಲ್ಲ. ಗಾಂಧೀಜಿಯವರ ಕಾಲದಲ್ಲಿ ಇದಕ್ಕೆ ಸಿಕ್ಕುತ್ತಿದ್ದ ಬೆಂಬಲವು ಕ್ರಮೇಣ ಕಡಿಮೆಯಾಗುತ್ತ ಬಂದು ಅವರು ಸ್ಥಾಪಿಸಿದ ಈ ಸಂಸ್ಥೆಗಳು ಒಂದೊಂದಾಗಿ ನಿಂತು ಹೋಗುವ ಸಂಭವವೇ ಹೆಚ್ಚು.

ಓದುಗ—ನೀವು ಶುದ್ಧ ನಿರಾಶಾವಾದಿಗಳಿರಬೇಕು. ಅದಿರಲಿ, ಕಾಂಗ್ರೆಸ್ ಸಂಸ್ಥೆಯು ಈ ವಿಧಾಯಕ ಕಾರ್ಯಕ್ರಮವನ್ನು ತನ್ನ ಕಾರ್ಯವೆಂದಿಟ್ಟುಕೊಂಡಿರುತ್ತ ಇಂಥ ನಿರಾಶೆಗೆ ಯಾವ ಅವಕಾಶವೂ ಇಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ನೀವೆನ್ನುವುದೇನು?

ವ್ಯವಸ್ಥಾಪಕ—ಪುನಃ ಬಹಳ ಒಳ್ಳೆಯ ಪ್ರಶ್ನೆಯನ್ನು ಹಾಕಿರುವೆ. ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮವು ಕಾಂಗ್ರೆಸಿನ ಕಾರ್ಯಕ್ರಮವೆಂದೇ ಗೊತ್ತಿಗನೇ ಇಸ್ವಿಯಿಂದ ಇಲ್ಲಿಯ ತನಕವೂ ತಿಳಿಯಲ್ಪಟ್ಟಿದೆಯೆಂಬ ಮಾತು ನಿಜವೇ ಇರುತ್ತದೆ. ಆದರೆ ಈಗ ಕಾಂಗ್ರೆಸಿನ ಮುಖ್ಯ ಧ್ಯೇಯವಾಗಿದ್ದ ರಾಜಕೀಯ ಸ್ವಾತಂತ್ರ್ಯವು ದೇಶಕ್ಕೆ ಸಿಕ್ಕಿರುತ್ತದೆಂಬುದರಿಂದ ಪರಿಸ್ಥಿತಿಯಲ್ಲಿ ತುಂಬಾ ವ್ಯತ್ಯಾಸವುಂಟೆಂಬುದನ್ನು ಮರೆಯಬಾರದು. ಇದುವರೆಗೆ ಕಾಂಗ್ರೆಸಿನಲ್ಲಿ ಬಹಳ ಮಂದಿ ಪ್ರಸಿದ್ಧ ಮುಂದಾಳುಗಳಿದ್ದರೂ ಗಾಂಧೀಜಿಯವರು ಕಾಂಗ್ರೆಸಿನ ಪ್ರಾಥಮಿಕ ಸದಸ್ಯರಾಗಿರುವುದನ್ನು ಕೆಲವು ವರ್ಷಗಳಿಂದ ಬಿಟ್ಟಿದ್ದರಾದರೂ ಕಾಂಗ್ರೆಸಿನ ನಿಜವಾದ ಮುಂದಾಳ್ತನ ಗಾಂಧೀಜಿಯವರಲ್ಲಿಯೇ ಇತ್ತು. ಮುಂದೆ ಕಾಂಗ್ರೆಸ್ ಸಂಸ್ಥೆಯು ಗಾಂಧೀಜಿಯವರ ಈ ವಿಧಾಯಕ ಕಾರ್ಯಕ್ರಮವನ್ನು ತನ್ನ ಕಾರ್ಯಕ್ರಮವೆಂದು ಇಟ್ಟುಕೊಳ್ಳುವುದೋ ನೋಡಲಿಕ್ಕಿದೆ. ಕಾಂಗ್ರೆಸ್ ಸಂಸ್ಥೆಯು ಈ ಕಾರ್ಯಕ್ರಮವನ್ನು ತನ್ನದಾಗಿ ಮಾಡಿಕೊಂಡರೆ ಪ್ರತ್ಯೇಕವಾದ್ದೊಂದು ಸಂಘದ ಆವಶ್ಯಕತೆ ಇಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಈಗಿನ ಪರಿಸ್ಥಿತಿ ನೋಡಿದರೆ ಕಾಂಗ್ರೆಸಿಗೆ ಈ ಕಾರ್ಯಕ್ರಮದಲ್ಲಿ ನಿಜವಾದ ವಿಶ್ವಾಸವಿದ್ದಂತೆ ಕಾಣುವುದಿಲ್ಲ

ಓದುಗ—ಇದು ನೀವು ಹೇಳುವುದು ಬಹಳ ಹೆಚ್ಚಿನ ಮಾತು. ಕಾಂಗ್ರೆಸ್ ಸಂಸ್ಥೆಯ ಮೇಲೆ ಈ ರೀತಿಯ ಟೀಕೆ ಮಾಡುವುದು ನನಗೆ ಉಚಿತವೆನ್ನಿಸುವುದಿಲ್ಲ. ಗಾಂಧೀಜಿಯವರ ಅತ್ಯಂತ ಪ್ರೀತಿಪಾತ್ರರೆನಿಸಿದ್ದ ಬಾಬೂ ರಾಜೇಂದ್ರ ಪ್ರಸಾದ, ಸರ್ದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹರಲಾಲ ಹಾಗೂ ಚಕ್ರವರ್ತಿ ರಾಜಗೋಪಾಲಾಚಾರಿ ಇವರಂಥವರ ಮುಂದಾಳ್ತನವಿದ್ದಿರುವ ಕಾಂಗ್ರೆಸ್ ಗಾಂಧೀಜಿಯವರ ಕಾರ್ಯಕ್ರಮವನ್ನು ಬಿಟ್ಟು ಬಿಡುವುದೆಂದ ನೀವು ಹೇಳಿದರೆ ನಾನೆಂದೂ ಒಪ್ಪಲಾರೆನು

ವ್ಯವಸ್ಥಾಪಕ—ನಾನು ಹೇಳಿದ ಮಾತ್ರಕ್ಕೆ ನೀನು ಒಪ್ಪಬೇಕೆಂದು ನಾನೂ ಅಪೇಕ್ಷಿಸುವುದಿಲ್ಲ. ನೀನು ಹೆಸರಿಸಿದ ಮುಂದಾಳುಗಳು ನಮ್ಮ ದೇಶ ಸೇವಕರಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಗಳೆಂದೂ ಗಾಂಧೀಜಿಯವರ ನಂತರ ಇಂಥ ಮುಂದಾಳುಗಳು ನಮಗಿರುವುದು ನಮ್ಮ ನಿಜವಾದ ಭಾಗ್ಯವೆಂದೂ ನನಗೂ ಗೊತ್ತಿದೆ. ನಿನಗೆ ಇವರಲ್ಲಿ ಅಭಿಮಾನವಿರುವಂತೆಯೇ ನನಗೂ ಇದೆ. ಇವರು ಗಾಂಧೀಜಿಯವರ ಪರಮ ವಿಶ್ವಾಸಕ್ಕೆ ಪಾತ್ರರಿದ್ದು ಅವರ ಮುಖ್ಯ ಶಿಷ್ಯರೆಂದೂ ಗಾಂಧೀಜಿಯವರ ಉಪದೇಶಗಳನ್ನು ಚೆನ್ನಾಗಿ ತಿಳಿದುಕೊಂಡು ಅವುಗಳ ದೃಷ್ಟಿಯಿಂದ ತಮ್ಮ ಕಾರ್ಯ ಸಾಗಿಸುವವರೆಂಬುದೂ ನಿಜವಿರುತ್ತದೆ. ಇವೆಲ್ಲ ಸತ್ಯವಿದ್ದರೂ ಇವರಿಗೂ ಗಾಂಧೀಜಿಯವರಿಗೂ ಅಭಿಪ್ರಾಯ ಭೇದಗಳಿದ್ದವೆಂಬುದು ನಿನಗೆ ಹೊಸ ವಿಷಯವಿರಬಹುದು. ಗಾಂಧೀಜಿಯವರಾದರೂ ತನ್ನ ಅಭಿಪ್ರಾಯದಂತೆಯೇ ಇತರರು ವರ್ತಿಸಬೇಕೆಂದು ಎಂದೂ ಒತ್ತಾಯ ಮಾಡುತ್ತಿರಲಿಲ್ಲ. ಅವರವರ ಮನಸ್ಸಿಗೆ ತೋರುವ ಸತ್ಯವನ್ನೆ ಅನುಸರಿಸುವಂತೆ ಬೋಧಿಸುತ್ತಿದ್ದರು. ಈ ಮುಂದಾಳುಗಳಿಗೂ ತನಗೂ ಅಭಿಪ್ರಾಯ ಭೇದ ಕಂಡು ಬಂದಾಗಲೆಲ್ಲ ತಾನೇ ದೂರ ನಿಂತು ಇವರ ಅಭಿಮತದಂತೆ ವರ್ತಿಸಲು ಹೇಳಿ ಸಾಧ್ಯವಾದಷ್ಟು ಸಹಕರಿಸುತ್ತಿದ್ದರು. ಇಂಥ ಅಭಿಪ್ರಾಯ ಭೇದದ ದೆಸೆಯಿಂದಲೇ ಅವರು ಕಾಂಗ್ರೆಸಿನ ಪ್ರಾಥಮಿಕ ಸದಸ್ಯತನ ಕೂಡಾ ಬಿಟ್ಟು ಪ್ರತ್ಯೇಕ ನಿಂತಿದ್ದರು.

ಓದುಗ—ನೀವು ಪರಸ್ಪರ ವಿರುದ್ಧ ಮಾತುಗಳನ್ನು ಹೇಳಿ ನನ್ನಲ್ಲಿ ವ್ಯರ್ಥ ಗಲಿಬಿಲಿ ಮಾಡಲು ಯತ್ನಿಸುವಂತಿದೆ. ಕಾಂಗ್ರೆಸಿನ ಈಗಿನ ಮುಂದಾಳುಗಳು ಗಾಂಧೀಜಿಯವರ ಪರಮ ಶಿಷ್ಯರೆಂದೂ ಅವರ ಉಪದೇಶಗಳನ್ನು ಚೆನ್ನಾಗಿ ಅರಿತು ವರ್ತಿಸುವವರೆಂದೂ ನೀವೇ ಹೇಳುತ್ತೀರಿ. ಮತ್ತೆ ಪುನಃ ಇವರು ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ ಮುಂದೊತ್ತುವ ವಿಷಯದಲ್ಲಿ ಸಂಶಯ ಹೇಳುತ್ತೀರಿ. ಈ ನಿಮ್ಮ ಮಾತುಗಳಿಗೆ ಬೆಲೆ ಇದೆಯೆ?

ವ್ಯವಸ್ಥಾಪಕ—ಗಾಂಧೀಜಿಯವರು ಯಾವ ಧ್ಯೇಯಗಳಿಗಾಗಿ ದುಡಿಯುತ್ತಿದ್ದರೋ ಅವು ಈ ನಮ್ಮ ಈಗಿನ ಮುಂದಾಳುಗಳೂ ತಮ್ಮ ಧ್ಯೇಯವನ್ನಾಗಿ ಇಟ್ಟುಕೊಂಡಿರುವರೆಂಬ ಬಗ್ಗೆ ನನಗೆ ಎಳ್ಳಷ್ಟು ಸಂಶಯವಿಲ್ಲ. ಗಾಂಧೀಜಿಯವರ ಕೆಲಸದ ವಿಧಾನದಲ್ಲಿ ಅಡಕವಾಗಿರುವ ಸತ್ಯಾಹಿಂಸಾ ಧರ್ಮಗಳ ವಿಧಾನದಲ್ಲಿ ನಡೆಯುವುದೇ ನಮ್ಮ ಮುಂದಾಳುಗಳೂ ತಮ್ಮ ಗುರಿಯನ್ನಾಗಿ ಇಟ್ಟುಕೊಂಡಿರುವರೆಂದೇ ಹೇಳಲು ಅಡ್ಡಿಯಿಲ್ಲ. ಗಾಂಧೀ ಜೀವನದ ತತ್ವಗಳೆಲ್ಲ ಇವರಿಗೆ ಮಾನ್ಯವಿದ್ದರೂ ಕೂಡಾ ಅವರ ಆ ತತ್ವಗಳನ್ನು ಆಚಾರದಲ್ಲಿ ತರಲು [illegible] ಕಾರ್ಯಗಳ [illegible] ಗುಣ ಧರ್ಮ [illegible] ದೃಷ್ಟಿ ಭೇದವ [illegible] ಇಂದಿನ ನಮ್ಮ [illegible] ರಾಜಕೀಯ [illegible] ಗಾಂಧೀಜಿಯವರ ತತ್ವಗಳನ್ನು ಆ ರಾಜಕೀಯ ಕಾರ್ಯಕ್ಷೇತ್ರದಲ್ಲಿ ಅನುಸರಿಸಲು ಇವರು ಯತ್ನಿಸುತ್ತಿರುವರು. ಇದರಿಂದ ದೇಶದ ಕಲ್ಯಾಣವೇ ಆಗ ಬಹುದೆಂದು ನಾನೆಂದರೂ ನಂಬುವುದಿಲ್ಲ.

ಗಾಂಧೀಜಿಯವರು ಹಾಕಿ ಕೊಟ್ಟಿರುವ ವಿಧಾಯಕ ಕಾರ್ಯಕ್ರಮವನ್ನು ಪೂರ್ಣ ರೀತಿಯಿಂದ ಕಾರ್ಯರೂಪಕ್ಕೆ ತರುವ ಆವಶ್ಯಕತೆಯನ್ನು ಕಾಣುವವರು ಈ ಮುಂದಾಳುಗಳ ವರೆಗೆ [illegible] ಕೊಳ್ಳುವುದು ನಿಷ್ಪ್ರಯೋಜಕವೆಂಬುದೇ ನನ್ನ ಮಾತಿನ ಅಭಿಪ್ರಾಯ.

ಓದುಗ—ನೀವೇನೊ ಕುತರ್ಕ ಹೇಳುವಂತೆ ನನಗೆ ಕಾಣುತ್ತದೆ. ಕಾಂಗ್ರೆಸ್ ಸಂಸ್ಥೆಯಲ್ಲಿ ವಿಧಾಯಕ ಕಾರ್ಯಕ್ರಮದಲ್ಲಿ ಪೂರ್ಣ ವಿಶ್ವಾಸವಿಟ್ಟು ಕೆಲಸ ಮಾಡುವವರು ಎಷ್ಟೊ ಮಂದಿ ಇದ್ದಾರೆಂದು ನಾನು ಕಣ್ಣಾರೆ ಕಾಣುತ್ತಿದ್ದೇನೆ. ಕಾಂಗ್ರೆಸ್ ಸಂಸ್ಥೆಯ ಪ್ರಾಥಮಿಕ ಗ್ರಾಮ ಕಮಿಟಿಯ ಸದಸ್ಯರಾಗುವವರು ಖಾದೀಧಾರಿಗಳಾಗಬೇಕೆಂದೂ ಅಸ್ಪೃಶ್ಯತಾನಿವಾರಣೆ ಜಾತಿಗಳೊಳಗಿನ ಐಕ್ಯ ಸಾಧನೆ, ಮದ್ಯನಿಷೇಧ ಇತ್ಯಾದಿ ಕಾರ್ಯಗಳನ್ನು ಸ್ವಂತ ಜೀವನದ ಮಟ್ಟಿಗೆ ಆಚರಿಸುವವರೇ ಆಗಬೇಕೆಂದೂ ಈಗಿನ ಕಾಂಗ್ರೆಸ್ ಘಟನೆಯಲ್ಲಿ ನಿಯಮ ಇಡಲಾಗಿದೆ. ಅದಕ್ಕೆ ಮೇಲ್ಪಟ್ಟ ಕಮಿಟಿಯ ಸದಸ್ಯರಾಗುವವರು ವಿಧಾಯಕ ಕಾರ್ಯಕ್ರಮಕ್ಕಾಗಿ ಪ್ರತಿದಿನ ಸ್ವಲ್ಪ ಸಮಯವಾದರೂ ಕೊಡುವುದಾಗಿ ಪ್ರತಿಜ್ಞೆ ಮಾಡಿದವರೇ ಇರಬೇಕೆಂದೂ ನಿಯಮವುಂಟು. ಕಾಂಗ್ರೆಸ್ ಸರಕಾರಗಳಾದರೂ ಮದ್ಯನಿಷೇಧ ಜಾರಿಗೆ ತರುತ್ತಿವೆ. ಅಸ್ಪೃಶ್ಯತಾನಿವಾರಣೆಗಾಗಿ ಕಾನೂನು ಮಾಡುತ್ತಿದೆ. ಖಾದಿ ಕೇಂದ್ರಗಳನ್ನು ಸ್ವತಃ ನಡೆಸುತ್ತಿವೆ. ಗುಡಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಗಳನ್ನೇ ಏರ್ಪಡಿಸುತ್ತಿವೆ. ಇಷ್ಟೆಲ್ಲ ಇದ್ದೂ ಕಾಂಗ್ರೆಸ್ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ ಬಿಡುತ್ತಿದೆಯೆಂದು ನೀವು ಹೇಳಿದರೆ ಹೇಗೆ ನಂಬಬೇಕು? ನಮ್ಮ ರಾಷ್ಟ್ರ ಧ್ವಜದಲ್ಲಿ ಕೈರಾಟೆ ತೆಗೆದು ಅಶೋಕ ಚಕ್ರ ಇಟ್ಟದ್ದು ನಿಮಗೆ ತೃಪ್ತಿಯಾಗಲಿಲ್ಲವೋ ಏನೊ. ಈಗಿನ ಚಕ್ರವೂ ಹಿಂದಿನ ಚರಖವೂ ಒಂದೇ ಎಂದೂ ಧ್ವಜವನ್ನು ಎರಡು ಬದಿಯಿಂದ ನೋಡಿದರೂ ಒಂದೇ ಕಾಣಬೇಕೆಂಬುದಕ್ಕಾಗಿ ಮಾತ್ರ ಈ ಬದಲಾವಣೆ ಮಾಡಲಾಯಿತೆಂದೂ ಪಂಡಿತ ಜವಾಹರಲಾಲರೇ ಹೇಳಿರುವರಷ್ಟೆ? ನಿಮಗೆ ಕಾಂಗ್ರೆಸಿನ ಮೇಲೆ ಕಾರಣಾಂತರಗಳಿಂದ ಅತೃಪ್ತಿ ಇರಬೇಕು. ಆದುದರಿಂದಲೇ ನೀವು ಈ ರೀತಿ ಟೀಕೆಗೆ ಹೊರಟಿರುವಿರೆಂದು ನನಗೆ ಕಾಣುತ್ತದೆ

ವ್ಯವಸ್ಥಾಪಕ—ಕಾಂಗ್ರೆಸಿನ ಮೇಲೆ ನನಗೆ ಅತೃಪ್ತಿ ಇರಬಹುದೆಂಬ ವ್ಯಕ್ತಿಗತವಾದ ಟೀಕೆಯ ಆವಶ್ಯಕತೆ ಇಲ್ಲ. ವ್ಯಕ್ತಿಶಃ ನನಗೇನೂ ಮಹತ್ವವಿಲ್ಲವೆಂಬುದನ್ನು ನನಗೆ ಪ್ರತ್ಯೇಕ ಹೇಳುವ ಆವಶ್ಯಕತೆ ಇಲ್ಲ. [illegible] ಕಾಂಗ್ರೆಸ್ ಸಂಸ್ಥೆಯ ಮೇಲೆ [illegible] ಅಭಿಮಾನವಿಲ್ಲವೆಂದು ನೀವು ತಿಳಿಯುವುದಾದರೂ ಸರಿಯಲ್ಲ. ಲೋಕ ಸೇವಾ ಸಂಘದ ಸದಸ್ಯರು ಇತರ ಸಂಸ್ಥೆಗಳ ಸದಸ್ಯರಾಗಿರಕೂಡದೆಂಬ ನಿಯಮವಿಟ್ಟಿಲ್ಲ. ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಲು ಅಡ್ಡಿಯಿಲ್ಲವೆಂಬ ನಿಯಮ ನೀವು ಓದಿರಬೇಕು. ಈ ಮಾತಂತಿರಲಿ. ವಿಷಯವನ್ನು ಶಾಂತ ರೀತಿಯಿಂದ ಪರಿಶೀಲಿಸೋಣ.

ಕಾಂಗ್ರೆಸ್ ಸರಕಾರಗಳು ಅಲ್ಲಲ್ಲಿ ಖಾದಿ ಕೇಂದ್ರಗಳನ್ನು ನಡೆಸುತ್ತಿರುವರೆಂಬುದು ನಿಜ. ಆದರೆ ಅದೇ ಸಮಯದಲ್ಲಿ ಮಿಲ್ಲು ಗಿರಣಿಗಳ ಸಂಖ್ಯೆ ಹೆಚ್ಚಿಸಲು ಎಷ್ಟು ಪ್ರಯತ್ನಪಡುತ್ತಿರುವರೆಂದು ಗೊತ್ತಿಲ್ಲವೆ? ಗ್ರಾಮ ಕೈಗಾರಿಕೆಗಳ ಮಾತೂ ಅಷ್ಟೇ. ಒಂದೆಡೆಯಿಂದ ಓಲೆ ಬೆಲ್ಲ ತಯಾರಿಗೆ ಪ್ರೋತ್ಸಾಹ ಕೊಟ್ಟರೆ ಇನ್ನೊಂದೆಡೆ ಸಕ್ಕರೆ ಕಾರ್ಖಾನೆಗಳಿಗೆ ಅದಕ್ಕಿಂತ ಹೆಚ್ಚಿನ ಪ್ರೋತ್ಸಾಹ ಕೊಡುವರು. ಕೈಯಿಂದ ಕಾಗದ ತಯಾರಿ ಕೇಂದ್ರ ತೆರೆಯುವಾಗಲೆ ಕಾಗದ ಕಾರ್ಖಾನೆಗಳನ್ನು ತೆರೆಯುವರು. ಮದ್ಯ ನಿಷೇಧ ಜಾರಿ ಮಾಡಿರುವುದು ನಿಜ. ಆದರೆ ಅದೇ ಸರಕಾರ ನಡೆಸುವ ಮಂತ್ರಿಗಳಲ್ಲಿ ಕೂಡಾ ಇದೊಂದು ದೊಡ್ಡ ಹುಚ್ಚುತನವೆಂಬ ಅಭಿಪ್ರಾಯ ಎಷ್ಟು ಮಂದಿಯಲ್ಲಿದೆ ಗೊತ್ತಿದೆಯೆ? ಇಷ್ಟು ಹಣ ಕಳೆದುಕೊಳ್ಳುವುದಕ್ಕಿಂತ ಬೇರೆ ಏನೊ ಉಪಯುಕ್ತ ಕೆಲಸ ಮಾಡಬಹುದಿತ್ತೆಂಬ ಅಭಿಪ್ರಾಯ ನಮ್ಮ ಶಾಸನ ಕರ್ತರಲ್ಲಿ ಬಲವತ್ತರವಾಗಿ ಇರುತ್ತದೆ. ಅಸ್ಪೃಶ್ಯತಾ

(೭ನೇ ಪುಟ ನೋಡಿ)

ಸ್ವಾತಂತ್ರ್ಯ ದಿನಾಚರಣೆ

ಜಿಲ್ಲೆಯಲ್ಲೆಲ್ಲಾ ಸ್ವಾತಂತ್ರ್ಯ ದಿನವನ್ನೂ ಗಂಭೀರ ಸಂಭ್ರಮದಿಂದ ಆಚರಿಸಲಾಯಿತೆಂದು ತಿಳಿದುಬರುತ್ತದೆ. ಮಂಗಳೂರು ನಗರದಲ್ಲಿ ಅಂದು ಬೆಳಿಗ್ಗೆ ೮ ಗಂಟೆಗೆ ಜಿಲ್ಲಾ ಕಲೆಕ್ಟರರು ಸಾರ್ವಜನಿಕ ಮೈದಾನಿನಲ್ಲಿ ರಾಷ್ಟ್ರಧ್ವಜಾರೋಹಣವನ್ನು ಮಾಡಿದರು, ಪೋಲಿಸ್ ಪೇರೆಡು ನಡೆಯಿತು. ಅಂದು ಸಾಯಂಕಾಲ ಮೆರವಣಿಗೆಯಾಗಿ ಮೈದಾನಿನಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ಬಹಿರಂಗ ಸಭೆ ಜರಗಿತು. ನಗರ ಪ್ರಮುಖರನೇಕರು ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ವಿವರಿಸಿ ಬೇರೆ ಬೇರೆ ಭಾಷೆಗಳಲ್ಲಿ ಭಾಷಣವಿತ್ತರು

144ನೇ ಕಲಮು

"ಸ್ವಾತಂತ್ರ್ಯ ದಿನಾಚರಣೆಯ ಮುಂಚಿನ ದಿನ ಸ್ಥಳೀಯ ವಿರೋಬ ದೇವಸ್ಥಾನದಲ್ಲಿ ಕೆಲ /ಆರ್. ಎಸ್ ಎಸ್ ನವರು ಮರು ದಿನ ಕಪ್ಪು ನಿಶಾನಿ ಪ್ರದರ್ಶನವೊಂದನ್ನು ಮಾಡುವ ಏರ್ಪಾಡನ್ನು ಪರ್ಯಾಲೋಚಿಸಲು ಭಜನೆ ನೆವದಿಂದ ಸೇರಿರುವರೆಂಬ ಸುದ್ದಿಯೊಂದು ಪೋಲೀಸ್ ಅಧಿಕಾರಿಗಳಿಗೆ ಮುಟ್ಟಿತೆಂದೂ ತಕ್ಷಣ ತಮ್ಮ ವಾಹನದಲ್ಲಿ ವರು ಆ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸುತ್ತಿದ್ದಾಗ ಭಜಕರು ಚದರಿದರೆಂದೂ, ಅಧಿಕಾರಿಗಳು ಸ್ಥಳೀಯ ಮೆಜಿಸ್ಟ್ರೇಟರ ಮೂಲಕ ೧೫ ದಿವಸಗಳ ತನಕ ೧೪೪ನೇ ಸೆಕ್ಷನನ್ನು ಜ್ಯಾರಿಮಾಡಿ ಪೂರ್ಣ ಅನುಮತಿಯಿಲ್ಲದೆ ಇತರ ಯಾವ ಸಭೆ ಮೆರವಣಿಗೆಗಳೂ ಜರಗಬಾರದೆಂದು ನಿಷೇಧಿಸಿರುವರು

ವಿದ್ಯಾಧಿಕಾರಿಗಳ ಭಾಷಣ

ವಿದ್ಯಾ ಇಲಾಖೆಯ ಡಿವಿಜನಲ್ ಇನ್ಸ್‌ಪೆಕ್ಟರರಾದ ಶ್ರೀ ನಟರಾಜನ್ ಅವರು ಕಳೆದ ಶನಿವಾರ ಸ್ಥಳೀಯ ಸೆಕೆಂಡರಿ ಶಾಲಾ ಅಧ್ಯಾಪಕರ ಸಭೆಯೊಂದನ್ನು ಸೇರಿಸಿ ಬದಲಾದ ದೇಶ ಪರಿಸ್ಥಿತಿಯಲ್ಲಿ ನೂತನವಾಗಿ ಜಾರಿಗೆ ತರಲ್ಪಟ್ಟವಿದ್ಯಾಂಗದ ಪುನರ್ವ್ಯವಸ್ಥೆಯನ್ನು ನಿರ್ವಹಿಸಲು ಉಪಾಧ್ಯಾಯರು ಸ್ವಾದರ್ಶವನ್ನು ಕಲ್ಪಿಸಿಕೊಳ್ಳುವುದರ ಮಹತ್ವವನ್ನೂ ತನ್ಮೂಲಕ ಅಧೋಗತಿಗಿಳಿದಿರುವ ಅಧ್ಯಾಪಕ ವೃತ್ತಿಯನ್ನು ಹೇಗೆ ಉದಾತ್ತಗೊಳಿಸಬಹುದೆಂಬುದನ್ನು ತಿಳಿಸಿದರು ಇವರು ಜಿಲ್ಲೆಯ ಮೂಲ ಶಿಕ್ಷಣ ತರಬೇತಿ ಕೇಂದ್ರಗಳನ್ನು ಸಂದರ್ಶಿಸಿರುವರು

ಹವಾಮಾನ

ಕಳೆದ ವಾರಾಂತ್ಯದಿಂದ ಮಳೆಯ ಭಾರವು ಕಡಿಮೆಯಾಗಿದ್ದು ಆಗಾಗ್ಗೆ ಬಿಸಿಲೂ ಬೀಳುತ್ತಿರುವುದು ಮುಂಚಿನ ವಾರದ ವಿಪರೀತ ಮಳೆಯಿಂದ ಜಿಲ್ಲೆಯ ಕೃಷಿ ಪ್ರದೇಶದಲ್ಲಿ ವಿಶೇಷ ಹಾನಿಯಾಗಿಲ್ಲವೆಂದು ಊಹಿಸಲಾಗಿದೆ. ನಗರದಲ್ಲಿ ವಿಷಮಜ್ವರದ ಸ್ವಲ್ಪ ಹಾವಳಿಯಾಗಿದೆಯಾಗಿ ತಿಳಿದುಬರುತ್ತದೆ. ಕೆಲವು ಮೈಲಿಗಜ್ಜಿಯ ವರದಿಗಳೂ ಆಗಿವೆ

ಅಕ್ರಮ ಪ್ರಯತ್ನಕ್ಕೆ ಉಪಾಧ್ಯಾಯರಿಗೆ ಸಜೆ

ಅಡ್ಯತ್ತಾಬೈಲ್ ಫಿಶರೀಸ್ ಶಾಲೆಯ ಕುಂಜಕಣ್ಣನಾಯರ್ ಎಂಬ ಉಪಾಧ್ಯಾಯನು ಅದೇ ಶಾಲೆಗೆ ಬರುತಿದ್ದ ವಿ ಲಕ್ಷ್ಮೀ ಎಂಬ 16 ವರ್ಷದ ವಿದ್ಯಾರ್ಥಿನಿಯ ಮೇಲೆ ಅಕ್ರಮ ಪ್ರಯೋಗವನ್ನು ನಡೆಸಲು ಪ್ರಯತ್ನಿಸಿದನೆಂಬ ಆರೋಪಕ್ಕೊಳಗಾಗಿ ಇಲ್ಲಿಯ ಪ್ರಿನ್ಸಿಪಾಲ್ ಅಸಿ. ಸೆಶ್ಶನ್ಸ್ ಜಡ್ಜರು ಅವನಿಗೆ ೨ ವರ್ಷದ ಕಠಿಣ ಸಜೆ ೫೦ ರೂ. ಜುಲ್ಮಾನೆಯನ್ನು ವಿಧಿಸಿರುವರು.

ಮದ್ಯವಿಧಿ ಉಲ್ಲಂಘನೆ

ಹಳೆಯಂಗಡಿ ಸಂಕಪ್ಪಪೂಜಾರಿಯ ವಶ ೩ ಬಾಟ್ಲಿ ೨೧ ಡ್ರಾಂ ಕಬ್ಬಿನ ಬೆಲ್ಲದ ಶರಾಬು ಇದ್ದುದಕ್ಕೆ ೪ ತಿಂಗಳ ಕ ಸಜೆ ನೀರು ಮಾರ್ಗದ ಅಲ್ಫಾನ್ಸೊ ಡಿ'ಸೋಜನ ಬಳಿ ೨೫ ಡ್ರಾಂ ತಾಳಿ ಶರಾಬು ಇತ್ತೆಂದು ೪ ತಿಂಗಳು, ಕಾಪ್ರಿಯ ಚಾರ್ಲ್ಸ್ ನರೋನ್ಹನ ಬಳಿ ೨೫ ಡ್ರಾಂ ೯ ಡ್ರಾಂ ತಾಳಿಬೆಲ್ಲದ ಶರಾಬು ಇತ್ತೆಂದು ೨ ತಿಂಗಳು, ಕುಡ್ಪಿಯ ರೈಮಂಡ್ ಲೂಯಿಸನ ಬಳಿ ೨೦ ಡ್ರಾಂ ತಾಳಿ ಶರಾಬು ಇತ್ತೆಂದು ೪ ತಿಂಗಳು, ಹಂಪನ ಕಟ್ಟೆಯ ಕುಂಬ್ಳೆ ರಾಮ ಎಂಬಾತ ಅಮಲುಖೋರನಾಗಿದ್ದನೆಂದು ೨ ತಿಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ ಬೆಂದೂರಿನ ಮೊಸೆಸ್ ಮಾರ್ಕ್ ಎಂಬಾತ ಕುಡಿದಿದ್ದನೆಂದು ಕೈದುಮಾಡಲ್ಪಟ್ಟದ್ದು ಜಾಮಿನಿನ ಮೇಲೆ ಬಿಡಲ್ಪಟ್ಟಿದ್ದಾನೆ

ಬಿಜೈ ಲೇಡಿ ಆಲ್ಬರ್ಟ್ ಸೋಜನ ಬಳಿ ೫೦ ರೂ ಬಾಳುವ ಚಿನ್ನಬೆಳ್ಳಿ ಜರತಾರಿ ಕಟ್ಟು ದೊರಕಿದ್ದು ಆತ ಆ ಕುರಿತು ಸಮರ್ಪಕ ಕಾರಣ ಕೊಡದ್ದಕ್ಕೆ ೬ ವಾರಗಳ ಕಠಿಣ ಸಜೆಗೆ ಒಳಗಾಗಿದ್ದಾನೆ

ನೇಮಕ ಮತ್ತು ವರ್ಗಾವರ್ಗಿಗಳು

ಕಾರ್ಕಳ ತಹಶೀಲ್ದಾರರಾಗಿದ್ದ ಎ ಸದಾನಂದ ಪೈ ಅವರನ್ನು ಮಲಬಾರು, ಕೊಯಮುತ್ತೂರು, ನೀಲಗಿರಿ ದ ಕನ್ನಡ ಜಿಲ್ಲೆಗಳ ಬಾವಿ ಶಾಖೆಯ ಸ್ಪೆ. ಡೆಪ್ಯುಟಿ ಕಲೆಕ್ಟರರಾಗಿ ನೇಮಿಸಲಾಗಿದೆ

ಶ್ರೀ ಪಿ ಎಸ್ ಮಧ್ವಪ್ಪ ಶೆಟ್ಟಿ ಅವರು ಕಮಿಶ್ಯನರ್ಸ್ ಮೊಕದ್ದಮೆಗಳನ್ನು ತನಿಖೆ ನಡೆಸುವ ಎಡಿ. ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿದ್ದಾರೆ

ಶ್ರೀ ಪಿ ನಾರಾಯಣ ರಾಯರು ಲ್ಯಾಂಡ್ ಎಕ್ವಿಜಿಶನ್ ಸ್ಪೆಶಲ್ ತಹಶೀಲ್ದಾರರಾಗಿಯೂ, ಶ್ರೀ ಕೆ ಲಿಂಗಪ್ಪಯ್ಯರು ಪುತ್ತೂರು ಮತ್ತು ಶ್ರೀ ಎಚ್ ಗಣಪತಿ ಕದಿಲಾಯರು ಕಾರ್ಕಳ ಶ್ರೀ ಕೆ ಸಿ ಬಾಲಕೃಷ್ಣನಾಯರ್ ಅವರು ಮಂಗಳೂರು ತಾ ಹೆ. ಕ್ವಾರ್ಟರ್ಸ್ ಡೆಪ್ಯುಟಿ ತಹಶೀಲ್ದಾರರುಗಳಾಗಿಯೂ, ಶ್ರೀ ಎಂ ಪಿ ಕೃಷ್ಣನ್ ನಾಯರ್ ಅವರು ಹೊಸದುರ್ಗ ಡೆ. ತಹಶೀಲ್ದಾರರಾಗಿಯೂ ಶ್ರೀ ಆರ್ ಎಸ್ ಸುಬ್ರಹ್ಮಣ್ಯಂ ಅವರು ಬಾವಿಗಳ ಯೋಜನೆಯ ಸ್ಪೆಶಲ್ ಡೆ ತಹಶೀಲ್ದಾರರಾಗಿಯೂ ನೇಮಿಸಲ್ಪಟ್ಟಿದ್ದಾರೆ ಶ್ರೀ ಪಿ ಕುಂಜ ಆನಂದನ್ ನಾಯರ್ ಅವರು ಕುಂದಾಪುರದಲ್ಲಿ, ಮಿ. ಎಸ್ ಡಿ'ಸೋಜರು ಕಾಸರಗೋಡಿನಲ್ಲಿ ಸ್ಪೆ. ಸ. ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ ಜ ಅಬ್ದುಲ್‌ರಹಿಮಾನ್‌ರು ಪುತ್ತೂರು ಅಸಿ. ಕಮ್ಮರ್ಶಿಯಲ್ ಟೇಕ್ಸ್ ಆಫೀಸರರಾಗಿಯೂ, ಶ್ರೀ ಕೆ. ಭಾಸ್ಕರ ಪ್ರಭುಗಳು ಉಡುಪಿಯ ಅಸಿ ಕಮ್ಮರ್ಶಿಯಲ್ ಟೇಕ್ಸ್ ಆಫೀಸರರಾಗಿಯೂ, ಶ್ರೀ ಎಂ ಗಣಪತಿ ಅವರು ಕೊಳ್ಳೆಗಾಲದ ಅಸಿ. ಕ. ಟೇಕ್ಸ್ ಆಫೀಸರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಇತರ ಕಡೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

ಶ್ರೀ ಎಂ ವಿಟ್ಟಪ್ಪ ಪ್ರಭುಗಳ ನೇತೃತ್ವದಲ್ಲಿ ಮಣ್ಣಗುಡ್ಡೆ ಶಾಲೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲ್ಪಟ್ಟಿತು ಅದೇ ರೀತಿ ಇತರ ಮುನ್ಸಿಪಲ್ ಶಾಲೆಗಳಲ್ಲೂ ಆಚರಿಸಲ್ಪಟ್ಟಿದೆ

ಜಿಲ್ಲಾ ದಂತವೈದ್ಯರ ಸಂಘದ ಆಶ್ರಯದಲ್ಲಿ ಹಂಪನಕಟ್ಟೆಯ ಡ್ಯಾಮಂಡ್ ಬಿಲ್ಡಿಂಗಿನಲ್ಲಿ ಡಾ ಬಿ ವಿ ರೈ ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲ್ಪಟ್ಟಿತು ಶ್ರೀ ಎಲ್ ಸಿ ಪಾಯಸ್ ಎಂ ಎಲ್ ಎ ಅವರು ಭಾಷಣ ಮಾಡಿದರು

ಕಾಸರಗೋಡಿನ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು. ಶ್ರೀಮತಿ ಸರೋಜ ಕಕ್ಕಿಲ್ಲಾಯರು ಧ್ವಜಾರೋಹಣ ಮಾಡಿದರು ಶ್ರೀ ಉಮೇಶರಾಯರು ದಿನದ ಮಹತ್ವವನ್ನು ವಿವರಿಸಿದರು

ಕಾಸರಗೋಡಿನ ೬ ದುಃಸ್ಥನ ಸ್ಕೌಟ್ ದಳದ ಆಶ್ರಯದಲ್ಲಿ ಸ್ಥಳೀಯ ಎಲ್ಲಾ ಶಾಲೆಗಳ ಸ್ಕೌಟ್ ವಿದ್ಯಾರ್ಥಿಗಳ ಪ್ರತ್ಯೇಕವಾಗಿ ಸ್ವಾತಂತ್ರ್ಯ ದಿನವಾಚರಿಸಿದರು

ಮದ್ರಾಸಿನಲಿ ಸ್ವಾತಂತ್ರ್ಯ ದಿನದ ದುರಂತ

ಮದ್ರಾಸಿನ ಲೊಯೊಲಾ ಕಾಲೇಜಿನ ಬಿ ಎ ತರಗತಿಯ ೩೦ ವಿದ್ಯಾರ್ಥಿಗಳ ತಮ್ಮೊರ್ವ ಪ್ರೊಫೆಸರರ ಜೊತೆಯಲ್ಲಿ ಅಲ್ಲಿನ ಎನ್ನೋರ್ ಸರೋವರದ ಬಳಿ ವಿಹಾರಾರ್ಥವಾಗಿ ಹೋಗಿದ್ದಾಗ ಸರೊವರದಲ್ಲಿ ಮಿಂದುಳ ಹೋದ ನಾಲ್ಕು ವಿದ್ಯಾರ್ಥಿಗಳ ಜಲಾಂತರ್ಗತ ಸುಳಿಯೊಳ ದಕ್ಕಿ ಮೃತಪಟ್ಟರು ಅವರ್ [illegible] ಗಳೂರಿನವನ [illegible]

ಕಾವೂರು ಬೋ ಎ ಶಾಲೆ

ಈ ಶಾಲೆ [illegible] ರದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಜರಗಿಸಲಾಯಿತು. ಮಂಗಳ ಗ್ರಾಮ ಉದ್ಯೋಗಸ್ಥರು ಅಧ್ಯಕ್ಷತೆ ವಹಿಸಿದ್ದರು. ದೆಪ್ಪುಣಿಗುತ್ತು ಶ್ರೀ ಚಂದ್ರಹಾಸ ಶೆಟ್ಟಿ, ಸಾಹುಕಾರ ವಾಮನ ಪ್ರಭು ಮೊದಲಾದ ಪ್ರಮುಖರು ಶಾಲಾ ಮಕ್ಕಳು ಉಪಾಧ್ಯಾಯರುಗಳಿಂದ ಕೂಡಿದ ಮೆರವಣಿಗೆ ದೇವದರ್ಶನ ಮಾಡಿ ಜಯಘೋಷಗಳಿಂದ ಸಿಡ್ಡೆ ಪದಪಿನ ತನಕ ಹೋಗಿ ಶಾಲಾ ಆಟದ ಬಯಲಿಗೆ ಮರಳಿತು ಅಲ್ಲಿ ಧ್ವಜವಂದನೆ, ಮಕ್ಕಳ ಚಟುವಟಿಕೆಗಳಾದ ಮೇಲೆ ಮುಖ್ಯೋಪಾಧ್ಯಾಯರು ಅಧ್ಯಕ್ಷರು ಸ್ವಾತಂತ್ರ್ಯ ದಿನಾಚರಣೆಯನ್ನು ವಿವರಿಸಿ ಸುರಸ ಭಾಷಣ ಮಾಡಿದರು ಲಘು ಉಪಹಾರಾನಂತರ ವಿದ್ಯಾರ್ಥಿಗಳ ಪ್ರಾರ್ಥನೆ ಜಯಕಾರಗಳ ನಂತರ ಸಭಾಂತ್ಯವಾಯಿತು

ನರಿಮನ್ನರ ಆಗಮನ

ಬೊಂಬಾಯಿ ನಗರಸಭೆಯ ನಾಯಕರಾಗಿದ್ದ ಶ್ರೀ ಎಸ್ ಕೆ ಪಾಟೀಲರು ರಾಜಿನಾಮೆಯಿತ್ತಿದ್ದರಿಂದ ಅವರ ಸ್ಥಾನದಲ್ಲಿ ನಾಯಕರಾಗಿ ಶ್ರೀ ಕೆ ಎಫ್ ನರಿಮನ್ನರು ಚುನಾಯಿಸಲ್ಪಟ್ಟಿರುವರು

In the Court of the Subordinate Judge of South Kanara.

O. S No. 60 of 1937.

Between –

A C Patiamma and others–*Plaintiffs*

and

A C Koman Nair and others–*Defendants*

NOTICE

1 The Commissioner appointed by the Court in the above case will sell by public action on 5 9-1948 from 10 A M in his Office in Car Street Mangalore, the outstandings due to the estate as per lists filed by the Joint Receivers

2 The outstandings consist of—

(i) Paddy and cash due by family members 8882 paras $8\frac{1}{2}$ hanes of paddy and Rs 8 897 6 4

(ii) Paddy and cash due by tenants 40 876 paras $4\frac{3}{4}$ hanes of paddy and Rs 12,859 8 0

(iii) Decree amounts due—Rs 16 098-13 11

3 The lists will be [illegible] inspection in the Commissioner's Office aforesaid on any day prior to the date of sale

4 The family members have raised objections—

(a) as to the [illegible] the list (i) above

(b) that amounts are due to them by way of [illegible] and [illegible] which have to be deducted from the claim [illegible]

(c) that the sale is to be held subject to objections aforesaid and subject also to all [illegible] and questions [illegible] that may be raised

5 The [illegible] under para 2 [illegible] will be sold [illegible] as [illegible] family members [illegible] amounts are alleged to be due

6 The outstandings due under para 2 [illegible] will be sold in two separate lots respectively The Commissioner however reserves the right to sell them [illegible] two

7 The parties to the suit are also at liberty to bid at the sale

8 The sale is with notice of all risks, flaws and defects and all objections that may be put forward by family members as aforesaid and by other debtors Intending bidders should make all necessary enquiry as to the right title and interest of the outstandings mentioned in the several lists Intending bidders shall be deemed to bid with full knowledge of all risks, flaws and defects in the property and title

9 The highest bid will be accepted and the purchaser shall forthwith deposit the amount of the purchase money In default the item of outstanding will be resold and the defaulting purchaser will be liable for all loss and expenses

10 The purchaser shall, at his own expense obtain the necessary deed of assignment in respect of the outstanding sold to him

M Keshava Pai, *Advocate*,
Commissioner appointed in the above suit
Mangalore 17 8 1948

(೫ನೇ ಪುಟದಿಂದ)

ನಿವಾರಣೆಗಾಗಿ ಶಾಸನೊನು ಮಾಡುತ್ತಿವೆ. ಆದರೆ ಈ ಪ್ರಶ್ನೆ ಕಾನೂನಿನಿಂದಲೇ ಬಗೆ ಹರಿಯುವ ಪ್ರಶ್ನೆಯಲ್ಲವೆಂಬುದು ಈ ಕಾನೂನುಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತಿವೆಯೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಕಾಂಗ್ರೆಸ್ ಸರಕಾರಗಳು ವಿಧಾಯಕ ಕಾರ್ಯಕ್ರಮಕ್ಕೆ ಈ ರೀತಿ ಮಾಡುವ ಸಹಾಯದ ಪೂರ್ಣ ಉಪಯೋಗ ಮಾಡಿಕೊಳ್ಳುವುದು ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ನಮ್ಮ ಇಂದಿನ ಕಾಂಗ್ರೆಸ್ ಸರಕಾರಗಳನ್ನೇ ಅವಲಂಬಿಸುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ.

ಇನ್ನು ಕಾಂಗ್ರೆಸ್ ಸಂಸ್ಥೆಯಲ್ಲಿ ಸದಸ್ಯರಿಗಿಟ್ಟ ನಿಯಮಗಳ ವಿಚಾರವನ್ನು ಪರಿಶೀಲಿಸೋಣ. ಗಾಂಧೀಜಿಯವರು ತಮ್ಮ ನಿಧನದ ದಿನವೇ ಕಾಂಗ್ರೆಸು ಸಂಸ್ಥೆಯನ್ನು ಲೋಕ ಸೇವಾ ಸಂಘವಾಗಿ ಮಾರ್ಪಡಿಸಲು ತಮ್ಮ ಸೂಚನೆಗಳನ್ನು ತಯಾರಿಸಿ ಕಾಂಗ್ರೆಸ್ ಮುಂದಾಳುಗಳ ಕೈಯಲ್ಲಿಟ್ಟಿದ್ದರಷ್ಟೆ. ಕಾಂಗ್ರೆಸಿನ ನಿಜವಾದ ಕಾರ್ಯಕ್ಷೇತ್ರವು ರಾಜಕೀಯ ರಂಗವೆಂಬ ಬಲವಾದ ಸ್ವತಂತ್ರ ಅಭಿಪ್ರಾಯವುಳ್ಳ ಕಾಂಗ್ರೆಸ್ ಮುಂದಾಳುಗಳು ಗಾಂಧೀಜಿಯವರ ಈ ಸೂಚನೆಗಳನ್ನು ಒಪ್ಪಿಕೊಳ್ಳುವುದು ಸಾಧ್ಯವಿರಲಿಲ್ಲ. ಅವರು ಒಪ್ಪಲೂ ಇಲ್ಲ. ವೆಂಬ ಬಗ್ಗೆ ಅವರನ್ನು ನಿಜವಾಗಿ ಅಭಿನಂದಿಸಬೇಕು. ಗಾಂಧೀಜಿಯವರ ಬದುಕಿದ್ದರೆ ಅವರೇ ತಮ್ಮ ಸೂಚನೆಗಳನ್ನು ಒತ್ತಾಯದಿಂದ ಹೊರಿಸುತ್ತಿರಲಿಲ್ಲ. ಆದರೆ ಗಾಂಧೀ ನಿಧನವು ಅಂದೇ ಸಂಭವಿಸಿತು. ಇವೇ ಅವರ ಕೊನೆಯ ಸೂಚನೆಗಳಾದವು. ಇವು ತಮ್ಮ ಪೂರ್ಣ ಶ್ರದ್ಧೆಗೆ ಪಾತ್ರರಿದ್ದ ಮುಂದಾಳುವಿನ ಕೊನೆಯ ಸೂಚನೆಗಳಾಗಿರುವುದರಿಂದ ಇವನ್ನು ಸ್ವಲ್ಪ ಮಟ್ಟಿಗಾದರೂ ಮನ್ನಿಸಬೇಕೆಂಬ ಮೋಹವು ಈ ಮುಂದಾಳುಗಳನ್ನು ಬಿಡಲಿಲ್ಲ. ವೇದವರಿಂದ ಸ್ವಾತ್ರ[illegible] ಹೇಳಿದ ನಿಯಮಗಳು ಕಾಂಗ್ರೆಸ್ ಘಟನೆಯಲ್ಲಿ ಸೇರಿಕೊಂಡವು. ಈ ರೀತಿ ಮೋಹಜನ್ಯವಾಗಿ ಬಂದ ಈ ನಿಯಮಗಳನ್ನು ಸರಿಯಾಗಿ ಪಾಲಿಸ ಬೇಕೆಂಬುದೂ ಇಲ್ಲ. ಅವು ಹೆಚ್ಚು ಸಮಯ ನಿಲ್ಲಬೇಕೆಂಬುದೂ ಇಲ್ಲ. ಗಾಂಧೀಜಿಯವರು ಬದುಕಿದ್ದರೆ ಈ ನಿಯಮಗಳನ್ನು ಸೇರಿಸಿಕೊಳ್ಳುವುದು ಬೇಡವೆಂದೇ ಅವರು ಉಪದೇಶಿಸುತ್ತಿದ್ದರು. ನಿಜವಾದ ಸಂಗತಿಯೆಂದರೆ ಖಾದಿಯಲ್ಲಿ ಕಾಂಗ್ರೆಸ್ ಮುಂದಾಳುಗಳಿಗೆ ಗಾಂಧೀಜಿಯವರು ಸಾರುತ್ತಿದ್ದಕ್ಕಮದ ವಿಶ್ವಾಸ ಇಲ್ಲ. ಜನ ಜಾಗ್ರತಿ ಮಾಡಲಿಕ್ಕೆ ಅಥವಾ ಬಟ್ಟೆಯ ಅಭಾವ ತತ್ಕಾಲಕ್ಕೆ ಪೂರೈಸಲಿಕ್ಕೆ ಇಲ್ಲವೆ ಕೆಲವರಿಗೆ ಬೇರೆ ಉದ್ಯೋಗವಿಲ್ಲದಾಗ ಒಂದು ಚಿಕ್ಕ ಉಪ ಕಸಬನ್ನು ಒದಗಿಸಲಿಕ್ಕೆ ಖಾದಿಯು ಉಪಯುಕ್ತವೆಂಬುದಕ್ಕಿಂತ ಹೆಚ್ಚಿನ ವಿಶ್ವಾಸ ಇವರು ಅದರಲ್ಲಿ ಇಟ್ಟಿಲ್ಲ. ಪಂಡಿತ ಜವಾಹರಲಾಲರ ಬರವಣಿಗೆಗಳನ್ನು ಓದಿದರೆ ಇದು ಸ್ಪಷ್ಟವಾಗುವುದು. ವಿಕೇಂದ್ರೀಕೃತ ಕೈಗಾರಿಕೆಗಳ ದಾರಿಯಿಂದ ಹೊಸ ಬಗೆಯ ಸಮಾಜ ಸೃಷ್ಟಿಗೆ ಹೊರಟ ಗಾಂಧೀಜಿಯವರಿಗೆ ತಮ್ಮ ಸಮಸ್ತ ಉಪದೇಶಗಳ ಸಾರ ಕೈರಾಟೆ ಇತ್ತೆಂಬ ವಿಷಯ ಇಲ್ಲಿ ವಿವರಿಸಬೇಕಾಗಿಲ್ಲವಷ್ಟೆ?

ಓದುಗ—ನಿಮ್ಮ ಮಾತುಗಳಲ್ಲಿ ಸ್ವಲ್ಪ ಸತ್ಯಾಂಶವಿರಬಹುದೆಂದು ಈಗ ಅನ್ನಿಸುತ್ತಿದೆ. ನಿಮ್ಮನ್ನು ವ್ಯಕ್ತಿಗತವಾಗಿ ಟೀಕಿಸಿದ್ದಕ್ಕೆ ಕ್ಷಮಿಸಿರಿ. ಕಾಂಗ್ರೆಸ್ಸಿನ ಮುಂದಿನ ಗತಿಯೇನು?

ವ್ಯವಸ್ಥಾಪಕ—ಕಾಂಗ್ರೆಸು ನಮ್ಮ ಪ್ರಧಾನ ರಾಜಕೀಯ ಸಂಸ್ಥೆ. ಅದರ ನೇತೃತ್ವದಲ್ಲಿ ನಮ್ಮ ರಾಜಕೀಯ ಸ್ವಾತಂತ್ರ್ಯ ಗಳಿಸಿದ್ದೇವೆ. ದೇಶದ ಸ್ವಾತಂತ್ರ್ಯ ಇನ್ನೂ ಸ್ಥಿರವಾಗಿಲ್ಲ. ಕಷ್ಟಪರಂಪರೆಗಳು ಮೇಲಿಂದ ಮೇಲೆ ಬರುತ್ತಿವೆ. ಈ ಸಂದಿಗ್ಧ ಸಮಯದಲ್ಲಿ ದೇಶದ ಆಡಳಿತ ನಮ್ಮ ಪೂರ್ಣ ವಿಶ್ವಾಸ ಯೋಗ್ಯ ಹಾಗೂ ಅತ್ಯಂತ ಸಮರ್ಥರಾದ ಇಂದಿನ ಕಾಂಗ್ರೆಸ್ ಮುಂದಾಳುಗಳ ಕೈಯಲ್ಲಿಯೇ ಇರಿಸುವುದು ಅತ್ಯಾವಶ್ಯಕ ವಿಚಾರ. ಕಾಂಗ್ರೆಸು ಸದ್ಯಕ್ಕಂತೂ ನಮ್ಮ ಪ್ರಧಾನ ರಾಜಕೀಯ ಸಂಸ್ಥೆಯಾಗಿಯೇ ಉಳಿಯಬೇಕು. ಇದರ ಗೌರವ ಹಾಗೂ ಜನರಿಗೆ ಇದರಲ್ಲಿರುವ ಭಕ್ತಿ ಇವನ್ನು ಎಷ್ಟು ಮಾತ್ರಕ್ಕೂ ಕುಗ್ಗಿಸಬಾರದು. ಮುಂದೆ ನಮ್ಮ ಸ್ವರಾಜ್ಯವು ಚೆನ್ನಾಗಿ ಬೇರೂರಿದ ಬಳಿಕ ದೇಶದಲ್ಲಿ ಭಿನ್ನ ರಾಜಕೀಯ ಪಂಗಡಗಳು ತಲೆಯೆತ್ತುವುದು ಸಹಜ ಹಾಗೂ ಅಪೇಕ್ಷಣೀಯವೂ ಇರುತ್ತದೆ. ಆಗ ಕಾಂಗ್ರೆಸು ಯಾವ ಬಗೆಯ ಸಾಮಾಜಿಕ ಹಾಗೂ ಆರ್ಥಿಕ ಧೋರಣೆಯನ್ನನುಸರಿಸುವುದೋ ಅದಕ್ಕನುಗುಣವಾದ ಬೆಂಬಲವು ಅದಕ್ಕೆ ದೊರೆಯುವುದು.

ಓದುಗ—ಒಂದು ಪ್ರಶ್ನೆಯನ್ನು ಕೇಳುವುದು ಉಳಿದಿದೆ. ನೀವು ಕಾಂಗ್ರೆಸಿಗೆ ಸೇರಿ ಅದು ಗಾಂಧೀಜಿಯವರ ದಾರಿಯಲ್ಲಿಯೇ ನಡೆಯುವಂತೆ ಒಳಗಿನಿಂದಲೇ ಏತಕ್ಕೆ ಪ್ರಯತ್ನಿಸಬಾರದು?

ವ್ಯವಸ್ಥಾಪಕ—ನಾನು ಈಗ ಹೇಳಿದ ಉತ್ತರದಲ್ಲಿ ಇದರ ಉತ್ತರವೂ ಅಡಕವಾಗಿದೆ. ಕಾಂಗ್ರೆಸು ಈಗ ದೇಶದ ಆಡಳಿತಕ್ಕೆ ಕೈಕೊಟ್ಟಿದೆ. ಈಗಿನ ಸಂದಿಗ್ಧ ಸಮಯದಲ್ಲಿ ಅದು ಇದೇ ರಾಷ್ಟ್ರದ ಸರಕಾರವಾಗಿಯೇ ವರ್ತಿಸದೆ ನಿವೃತ್ತಿ ಇಲ್ಲ. ಅದು ಗಾಂಧೀಜಿಯವರ ದಾರಿಯನ್ನೇ ಅನುಸರಿಸುವುದೆಂದು ಆಶಿಸುತ್ತೇನೆ. ಕಾಂಗ್ರೆಸಿನೊಳಗೆ ಪ್ರಯತ್ನಪಡಲು ಆಗ ಯೋಗ್ಯ ಸಮಯ ಬರುವುದು, ಈಗ ಫಲವಿಲ್ಲ.

ಓದುಗ—ಈಗ ಏನೂ ಮಾಡಬೇಕೆಂದು ಹೇಳುವಿರಿ?

ವ್ಯವಸ್ಥಾಪಕ—ಅಂಥ ಸಮಯ ಬರುವ ತನಕ ಗಾಂಧೀ ದಾರಿಯಲ್ಲಿ ವಿಶ್ವಾಸವಿಟ್ಟವರು ತಟಸ್ಥರಿರುವುದು ಯೋಗ್ಯವಲ್ಲ. ತಮ್ಮ ಕಾರ್ಯಕ್ರಮ ಮುಂದೊತ್ತಲು ಗಾಂಧೀಯವರೇ ಸೂಚಿಸಿದ ಬಗೆಯ ಲೋಕ ಸೇವಾಸಂಘವನ್ನು ತಾವೇ ಕಟ್ಟಿಕೊಂಡು ದುಡಿಯಬೇಕು. ಈ ಸಂಸ್ಥೆಯು ಕಾಂಗ್ರೆಸಿನೊಡನೆ ಪೂರ್ಣ ಸಹಕರಿಸಿ ನಡೆಯಬೇಕು. ಕಾಂಗ್ರೆಸಿನಿಂದಲೂ ಕಾಂಗ್ರೆಸ್ ಸರಕಾರಗಳಿಂದಲೂ ದೊರೆಯಬಹುದಾದ ಸಹಾಯವನ್ನು ಉಪಯೋಗಿಸಿಕೊಳ್ಳಬೇಕು. ಈ ರೀತಿ ನಡೆದರೆ ಒಂದು ದಿನ ಕಾಂಗ್ರೆಸ್ಸನ್ನು ತಮ್ಮ ದಾರಿಗೆ ತರಬಹುದು. ಸದ್ಯಕ್ಕೆ ಗಾಂಧೀಜಿಯವರ ದಾರಿಯಲ್ಲಿ ವಿಶ್ವಾಸವಿದ್ದವರು ಈ ಹೊಸ ಸಂಸ್ಥೆಗೆ ಸೇರಿ ತಮ್ಮ ಕಾರ್ಯಕ್ರಮ ಮುಂದೊತ್ತುವುದೊಂದೇ ದಾರಿ.

ಓದುಗ—ನೀವು ಹೇಳಿದ್ದನ್ನೆಲ್ಲ ವಿಚಾರಿಸಿ ನೋಡುತ್ತೇನೆ. ಸರಿಯೆಂದು ಕಂಡರೆ ನಿಮ್ಮೊಡನೆ ಸೇರುತ್ತೇನೆ—ಇನ್ನೂ ಸಂಶಯಗಳಿದ್ದರೆ ಕೇಳುತ್ತೇನೆ.

ವ್ಯವಸ್ಥಾಪಕ—ಸರಿಯಾಗಿ ಹೇಳಿದೆ. ಚೆನ್ನಾಗಿ ವಿಚಾರಿಸಿ ಸರಿಕಂಡವರೇ ಈ ಸಂಘಕ್ಕೆ ಸೇರಬೇಕೆಂದು ನಾನೂ ಹೇಳುತ್ತೇನೆ. ನನಗೂ ಅವಸರವೇನೂ ಇಲ್ಲ.

ಪ್ರಾಂತ್ಯದ ಆಹಾರಪರಿಸ್ಥಿತಿ

ಈ ವರ್ಷ ನವಂಬರ ಮತ್ತು ಡಿಸೆಂಬರಗಳಲ್ಲಿ ಮದ್ರಾಸು ಪ್ರಾಂತ್ಯದಲ್ಲಿ ಅಕ್ಕಿಯ ಕೊರತೆ ತಲೆದೋರಬಹುದೆಂದು ಹೇಳಲಾಗಿದೆ. ಈಗಿನ ದಾಸ್ತಾನಿದ್ದ ಅಕ್ಕಿ ಅಕ್ಟೋಬರ ಕೊನೆಯ ವರೆಗೆ ಬರಬಹುದೆಂದು ತಿಳಿಯುತ್ತದೆ. ಆ ನಂತರ ಹೊಸ ಬೆಳೆಯುಂಟಾಗುವುದರಿಂದ ಮೇಲಿನ ಅಂಜಿಕೆಯು ನಿರಾಧಾರವೆನ್ನಬಹುದು.



ಕೂಸಿನ ಮೈ ತಂಪಗಿಡುವ
ದಗ್ಗನ್ನು ನಿವಾರಿಸುವ
ತಾಯಂದಿರೂ ಕೂಡ ಉಪಯೋಗಿಸುತ್ತಾರೆ.
ಸುಗಂಧಿತ ರೆಕ್ಕೆ ನುಣ್ಣಗಿರುವ ಈ ಪೌಡರು ಎಳೆ ಚರ್ಮವನ್ನು ನುಣ್ಣಗೆ ಮತ್ತು ಶುಭ್ರವಾಗಿಡುತ್ತದೆ. ಅಲಂಕಾರಲಾಲಸೆಯ ಸ್ತ್ರೀಯರೂ ಇದನ್ನು ಉಪಯೋಗಿಸುತ್ತಾರೆ
558
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1 —0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ, ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಮಂಗಳೂರು,
23—12—1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.
(Incorporated in British India).
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B A L L B
General Manager.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:
ಬೊಂಬ್ಬಾ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಕು 27—8—1948 [ಸಂಚಿಕೆ 34]

ವಂದೇ ಮಾತರಂ ಮತ್ತು ಜನಗಣಮನ

ಇವುಗಳಲ್ಲಿ ರಾಷ್ಟ್ರಗೀತೆ ಯಾವುದಾಗಬೇಕು?

ಒಂದು ನಿಷ್ಪ್ರಯೋಜಕ ವಾದವಿವಾದ

ಬಂಕೀಮ್ ಚಂದ್ರ ಚಟರ್ಜಿಯವರು ವಿಧಿಗರ್ಭದಲ್ಲಿ ಗಾಢ ನಿದ್ರೆಯಲ್ಲಿರುವರು ಎಂದೆಂದಿಗೂ ಎಚ್ಚರವಾಗದ ಕಾಲಾಂತ್ಯವರೆಗಿನ ನಿದ್ರೆಯದು ಆದರೆ ಅವರ 'ವಂದೇ ಮಾತರಂ' ಗೀತೆಯು ಜನಾಂಗವನ್ನು ಸ್ಫೂರ್ತಿ ಚೈತನ್ಯಕ್ಕೆಬ್ಬಿಸುವ ಹಳೆಯ ಕೂಗಾಗಿ ನಮ್ಮನ್ನು ರಾಜಕೀಯ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ಐಕ್ಯ ಭಾವನೆಯ ಕಡೆ ಮೊಗದಿರುವಿಸುತ್ತಿದೆ ಅವನು ತನ್ನ ಗೀತೆಯಲ್ಲಿ ತುಂಬಿದ ಸಂದೇಶವು ಪ್ರತಿಯೋರ್ವ ದೇಶಭಕ್ತನ ಹೃದಯದಲ್ಲಿ ಧ್ವನಿತವಾಗಿ ಪ್ರತಿಧ್ವನಿಗೈಯ್ಯುತ್ತಿದೆ ಅದನ್ನು ಹಾಡಿದ ಪ್ರತಿಯೊಂದು ಸಲವೂ ನಮ್ಮ ನಾಡಿಗಳಲ್ಲಿನ ರಕ್ತವು ಉಕ್ಕೇರಿ ಹರಿಯುವಂತಾಗುತ್ತದೆ

ಭಾರತ ಜನತೆಯು ದೇಶಾಭಿಮಾನವನ್ನು ಜಾಗ್ರತೆಗೊಳಿಸಿ ಸ್ವತಂತ್ರ ಜನಾಂಗವನ್ನು ರೂಪಿಸಲು ಸಹಾಯಕವಾದ ಈ ಗೀತೆಯು ರಾಷ್ಟ್ರ ಧ್ವಜವು ಗಗನದಲ್ಲಿ ಹಾರಾಡಿಸಲ್ಪಡುವಾಗ ರೋಮಾಂಚಕವಾದ ಅದರ ಸೊಲ್ಲುಗಳು ಹಿಂದೂ ಮುಸ್ಲಿಂ, ಸಿಕ್, ಕ್ರೈಸ್ತ ಪಾರಸಿಕರನ್ನು ಒಕ್ಕಟ್ಟಿನ ದಾರಿಗೆ ಧಾವಿಸುವಂತೆ ಮಾಡುವಂತಿದ್ದವು ಇಂತಹ ಘನ ಗಂಭೀರ ಕವಿತೆಯನ್ನು ರಚಿಸಿದವನಾರು? ಬಂಕೀಮ್ ಚಂದ್ರನು ನಮಗೊಂದು ರಾಷ್ಟ್ರ ಗೀತೆಯನ್ನಿತ್ತು ಕೊಟ್ಟನೆಂದು ನಮ್ಮಲ್ಲಿ ಪ್ರತಿಯೊಬ್ಬನಿಗೂ ತಿಳಿದಿದೆ ಆದರೆ ಇಂದು ಅದನ್ನು ರಾಷ್ಟ್ರ ಗೀತೆಯಾಗಿ ಸ್ವೀಕರಿಸುವ ವಿಷಯದಲ್ಲಿ ಅನೇಕ ಸಂದೇಹಗಳುತ್ಪನ್ನವಾಗಿವೆ.

ಭಾರತದ ಕೀರ್ತಿ

ಪ್ರಖ್ಯಾತ ಇತಿಹಾಸಜ್ಞನಾದ ರಮೇಶ್ ಚಂದ್ರ ದತ್ತನ, ವಿಶ್ವ ವಿಖ್ಯಾತನೂ ಜನಪ್ರಿಯ ಧರ್ಮ ಪ್ರವರ್ತಕನೂ ಆದ ರಾಮಕೃಷ್ಣ ಪರಮಹಂಸನ ಸಮಕಾಲೀನನಾಗಿದ್ದ ಬಂಕೀಮ್ ಚಂದ್ರನು ಹತ್ತೊಂಬನೆ ಶತಮಾನದ ಭಾರತದ ಮಹಾ ಶ್ರೇಷ್ಠ ಸಾಹಿತ್ಯ ವ್ಯಕ್ತಿಯಾಗಿದ್ದನು ಬಂಗಾಲಿ ಸಾಹಿತ್ಯ ದೇವಿಯ ಸೇವೆಯನ್ನು ಸಲ್ಲಿಸುವರೊಂದಿಗೆ ಆವನು ಭಾರತ ಸಂಸ್ಕೃತಿ ಸೂಚಕವಾದೀ ಅಮರ ಗೀತೆಯನ್ನು ರಚಿಸಿದನು. ಇದರಿಂದಾಗಿ ಬಂಕೀಮ್ ಚಂದ್ರನನ್ನು ನಾವು ಸ್ವತಂತ್ರ ಭಾರತ ನಿರ್ಮಾಪಕರಲ್ಲಿ ಮೊದಲನೆಯವನೆನ್ನಬಹುದು.

ವಂದೇ ಮಾತರಂ ಗೀತವು ದೈವೀಕ ಸ್ಫೂರ್ತಿ ಬಂದ ಕ್ಷಣದಲ್ಲಿ ರಚಿಸಲ್ಪಟ್ಟಿತು. ಕೇವಲ ಮಸಿಯಿಂದ ಬರೆಯಲ್ಪಟ್ಟಿತು ದರಲ್ಲ, ಬಂಗಾಲದ ಅತಿ ಸಂಕಷ್ಟದ ಕಾಲದಲ್ಲಿ ರಕ್ತ ಕಣ್ಣೀರುಗಳಿಂದ ಅದು ಹೊರ ಬಂದುದು ಇಂದದು ಕೋಟ್ಯಾನುಕೋಟಿ ಭಾರತೀಯರ ಹೃದಯಗಳಲ್ಲಿ ಆಳವಾಗಿ ನೆಟ್ಟುಕೊಂಡಿದೆ ಐಕ್ಯ ರಾಷ್ಟ್ರೀಯತೆ ಮತ್ತು ಒಂದು ಜಗತ್ತಿನ ಧ್ಯೇಯವಾದಗಳು ಅದರಲ್ಲಿ ಮಿಳಿತವಾಗಿ ಪ್ರೋತ್ಸಾಹಿಸಲ್ಪಟ್ಟಿವೆ ಫ್ರಾನ್ಸಿನ ಕ್ರಾಂತಿಕಾಲದಲ್ಲಿ ಲಾ ಮಾರ್ಸಲಿ ಎಂಬ ಗೀತೆಯು ಸ್ವಾತಂತ್ರ್ಯಾಭಿಮಾನಿ ಫ್ರೆಂಚರನ್ನು ರಣಾಂಗಣಕ್ಕೆ ಹೋಗ ಹುರಿದುಂಬಿಸಿತೋ ಅದೇ ರೀತಿ ವಂದೇ ಮಾತರಂ ಭಾರತೀಯರನ್ನು ಕೆಚ್ಚುಗೆಬ್ಬಿಸಿತು

ಬಂಕೀಮ್ ಚಂದ್ರನು ತನ್ನ ಬಾಲ್ಯದಿಂದಲೂ ಬ್ರಿಟಿಷ್ ಧೋರಣೆಗೆ ವಿರೋಧಕನಾಗಿದ್ದನು ಬಂಗಾಲದ ಜಮೀನ್ದಾರಿಯನ್ನು ಶಾಶ್ವತ ಪ್ರಮಾಣದಲ್ಲಿ ನೆಲೆಗೊಳಿಸುವ ಕರಾರು ವ್ಯವಸ್ಥೆಯನ್ನು ಬ್ರಿಟಿಷರು ಮಾಡಿದಾಗ ಬಂಕೀಮನು ತನ್ನ 'ವಂಗ ದರ್ಶನ ಎಂಬ ಕಾದಂಬರಿಯಿಂದ ಹೊತ್ತಿಗೊಂದು ತುತ್ತಿಲ್ಲದೆ ನರಳುವ ವಂಗ ರೈತನುದ್ಧಾರಕ್ಕೆ ಚಳವಳಗೆಯ್ಯಲು ತನ್ನ ದೇಶಸ್ಥರನ್ನು ಸ್ಫೂರ್ತಿಸಿದನು ಆ ಶಾಶ್ವತ ಕಂದಾಯ ಪದ್ಧತಿಯನ್ನವನು 'ಅನ್ಯಾಯದ್ದೂ ಹಾನಿದಾಯಕವಾದುದೂ' ಎಂದು ಕರೆದು ಜನಾಂಗವು ಅದರಿಂದ ನಿರ್ಬಲವಾಗುವುದೆಂದವನು ತೋರಿಸಿ ಕೊಟ್ಟನು.

ಹತ್ತೊಂಬನೆ ಶತಮಾನದ ಅಂತ್ಯ ಕಾಲದ ಸುಮಾರಿಗೆ 'ವಂದೇಂ ಮಾತರಂ' ಗೀತವು ರಚಿಸಲ್ಪಟ್ಟಿತು. ಬಂಕೀಮನ ದೇಶಾಭಿಮಾನ ಪೂರ್ಣವಾದ 'ಆನಂದ ಮಠ'ವೆಂಬ ಕಾದಂಬರಿಯಲ್ಲಿದು ನಿರೂಪಿತವಾಯಿತು. ಈ ಕುರಿತು ಆ ಕಾದಂಬರಿಯಲ್ಲಿ ಕೆಲವು ಸನ್ಯಾಸಿಗಳೊಳಗೆ ಒಂದು ಚರ್ಚೆಯಾರಂಭವಾಗುತ್ತದೆ ಒಬ್ಬನು "ನನಗೊಬ್ಬ ಮಾತೆಯಿದ್ದಾಳೆ, ಆದರ ದೇಶವಿಲ್ಲ"ವೆನ್ನುತ್ತಾನೆ ಇನ್ನೊಬ್ಬ "ದೇಶವಲ್ಲದೆ ಬೇರೆ ಯಾವ ಮಾತೆಯನ್ನೂ ನಾವರಿಯೆವು" ಎನ್ನುತ್ತಾನೆ. ನನ್ನ ದೇಶ, ನನ್ನ ಮಾತೆ ಎಂಬ ಕಲ್ಪನೆಯು ಇಲ್ಲಿಂದಲೇ ಪ್ರಕಾಶಗೊಂಡಿತು.

ತರುಣರ ಸ್ಫೂರ್ತಿ—ವೃದ್ಧರ ಸಮಾಧಾನ

ಇಪ್ಪತ್ತನೇ ಶತಮಾನದ ತನಕ ಈ ಗೀತೆ ಹೆಚ್ಚಿನ ಜನಪ್ರಿಯತೆಯನ್ನು ಪಡೆಯಲಿಲ್ಲ ೧೯೦೫ರಲ್ಲಿ ದುರಂತ ಇತಿಹಾಸದ ವಿಭಜಿತ ಬಂಗಾಲ ವಿಕ್ಷೋಭಕಾರಣದ ಕಾಲದಲ್ಲಿ ಯಾರೂ ಒಬ್ಬರು ವಂದೇ ಮಾತರಂ ಹಿಡಿದು ಕೂಗಲು ಅದರ ಧ್ವನಿ ಜನಜೀವನವಾಯಿತು ನಂತರ ಜನಾಂಗದ ಮೂಲೆ ಮೂಲೆಯಿಂದಲೂ ಪ್ರತಿಧ್ವನಿತವಾಯಿತು ತರುಣ ಬಂಗಾಲಿಗಳು ಹೆಚ್ಚೆಚ್ಚಿನ ತ್ಯಾಗ ಬಲಿದಾನಗಳನ್ನು ಮಾಡುವಂತೆ ಆ ಗೀತೆ ಅವರನ್ನು ಪ್ರೋತ್ಸಾಹಿಸಿತು ಅದರ ಮಧುರವೂ ಶಾಂತಿದಾಯಕವೂ ಆದ ರಾಗಾರ್ಥಗಳು ಸೆರೆಮನೆಯಲ್ಲಿ ಕಾಲಕಳೆಯುತ್ತಿದ್ದ ವೃದ್ಧರಾದ ದೇಶ ಭಕ್ತರಿಗೆ ಸಮಾಧಾನದ ಸುವಾರ್ತೆಯನ್ನು ಮುಟ್ಟಿಸಿತು, ತಮ್ಮ ಆಪ್ತರನ್ನು ಕಳಕೊಂಡ ತಂದೆತಾಯಿಗಳ, ಹೆಂಡತಿಮಕ್ಕಳ ಕಣ್ಣೀರನ್ನೊರಸಲು ಆ ಗೀತೆಯು ಓರ್ವ ಶಾಂತಿ ದೂತನಂತಾಯಿತು

ಬಂಗಾಲದಿಂದ ಈ ಹಾಡು ನಾಡಿನೆಲ್ಲಾ ಪ್ರಾಂತ್ಯಗಳಿಗೂ ಒಯ್ಯಲ್ಪಟ್ಟಿತು ಭಾರತ ಸ್ವಾತಂತ್ರ್ಯ ಸಮರ ಇತಿಹಾಸವೂ ಈ ಪದ್ಯ ರಚನೆಯಿಂದಲೇ ಪ್ರಾರಂಭವಾಯಿತೆಂದರೆ ಅತಿಶಯವಲ್ಲ.

೧೯೦೬ರಲ್ಲಿ ದಾದಾಭಾಯಿ ನವರೋಜಿಯವರಧ್ಯಕ್ಷತೆಯಲ್ಲಿ ಕೊಂಗ್ರೆಸ್ ಅಧಿವೇಶನ ಸೇರಿದಾಗ 'ವಂದೇಂ ಮಾತರಂ ಹಾಡಲ್ಪಟ್ಟಿತ್ತು. ಅಂದಿನಾ ಭಾಷಣವೇದಿಕೆಯು ಮುಂದಿನ ಭಾರತ ಇತಿಹಾಸದ ಹಿನ್ನೆಲೆಯಾಯಿತು ಅಂದಿನಿಂದಿನ ತನಕವೂ ಆ ಗೀತವು ಪ್ರತಿಯೊಬ್ಬ ದೇಶಭಕ್ತನ ಉಸಿರಿನಂತಾಗಿದೆ ಸಾಮ್ರಾಜ್ಯವಾದಿಗಳನ್ನು ಮಣಿಸಲು ಅದು ಅವರ್ಣನೀಯವಾದ ಪಾತ್ರವನ್ನು ವಹಿಸಿದೆ

ಸ್ವಾತಂತ್ರ್ಯದ ರೂಪಕ

ಕೆಲವು ವರ್ಷಗಳ ಹಿಂದೆ ಈ ಗೀತವು ಬ್ರಿಟಿಷ್ ವಿರೋಧಿಯೆಂದೂ ನಿಷೇಧಿಸಲ್ಪಟ್ಟಿತ್ತು ಅದನ್ನು ಹಾಡಲು ಧೈರ್ಯಪಟ್ಟ ಧೀರರನ್ನು ಬಂಧನ ಶೃಂಖಲೆಯಲ್ಲಿರಿಸಲಾಗುತ್ತಿತ್ತು ಖಿಲಾಫತ್ ಚಳವಳಿಯ ಕಾಲದಲ್ಲಿಯೂ ಮತ್ತು ಅಸಹಕಾರ ಆಂದೋಲನದ ಸಮಯದಲ್ಲೂ ಈ ಗೀತೆ ಅಪಾರ ಸ್ಫೂರ್ತಿಯನ್ನೆಬ್ಬಿಸಿತ್ತು. 'ವಂದೇ ಮಾತರಂ' ಹಾಡುತ್ತ ದೇಶವೀರರು ಕಲ್ಪನಾತೀತ ಅನಾಚಾರಗಳನ್ನೂ, ದಬ್ಬಾಳಿಕೆಯನ್ನು ಸಹಿಸಲು ಸಮರ್ಥರಾದರು ಪ್ರಾಂತ್ಯಗಳು ಒಂದಕ್ಕೊಂದು ಅನ್ಯೋನ್ಯವಾಗಿ ಪೋಣಿಸಲ್ಪಟ್ಟವು ಜನತೆಯು ತಮ್ಮ ಪ್ರಾಂತೀಯ ಭಾವನೆಗಳನ್ನು ಸಂಪೂರ್ಣ ಮರೆವಂತೆ ಅದು ಮಾಡಿತು.

ವಂದೇ ಮಾತರಂ, ಮತ್ತು ತ್ರಿವರ್ಣ ಧ್ವಜಗಳು ಒಂದು ನಾಣ್ಯದ ಇಬ್ಬದಿಗಳಂತಿದ್ದವು ಅದನ್ನು ಬೇರ್ಪಡಿಸುವುದು ಅಸಾಧ್ಯವಾಗಿತ್ತು ಇಂದು ಜಗತ್ತಿನ ಎಲ್ಲಾ ಕಡೆಗಳಲ್ಲಿನ ಭಾರತೀಯರು ಹೆಮ್ಮೆಯಿಂದ ಅದನ್ನು ಹಾಡುತ್ತಿದ್ದಾರೆ ಬಂಕೀಮ್ ಚಂದ್ರನನ್ನು ಜನಾಂಗದ ಮೂಲಪಿತನೆಂದು ನಾವು ಕರೆಯಬಹುದು

ಜನಗಣಮನ ಅಮರ

ರಾಷ್ಟ್ರ ಗೀತೆಯ ಪ್ರಶ್ನೆ ಬಂದಾಗ ಪ್ರತಿಸಲವೂ ರವೀಂದ್ರನಾಥ ಠಾಗೂರರ 'ಜನಗಣಮನ'ವೂ ಇಕ್ಬಾಲರ "ಹಿಂದೂಸ್ತಾನ್ ಹಮಾರಾ'ವೂ ಮತ್ತು ಬಂಕೀಮನ 'ವಂದೇ ಮಾತರಂ'ವೂ ವಿವಾದಕ್ಕೆ ಗುರಿಯಾಗುತ್ತದೆ

ತುಂಬಾ ಅರ್ಥ ಗರ್ಭಿತವೂ ಮನಮೋಹಕವೂ ಆದ 'ಹಿಂದೂಸ್ತಾನ್ ಹಮಾರಾ' ಗೀತೆಗೆ ಕ್ರಮೇಣ ಹಿಂದೂ ಮಹಾಸಭೆಯವರು ಆಕ್ಷೇಪವೆತ್ತಿದರು. ಅದರಲ್ಲಿ ತುಂಬಿರುವ ಉರ್ದು ಶಬ್ದಗಳು ಅಶುದ್ಧವಾದುವೆಂದವರು ಹೇಳುವರಾದರು.

(೨ನೇ ಪುಟ ನೋಡಿ)

ಈ ದೇವರುಗಳೆಂದರೆ ಯಾರು?

ಯೋಗಾಭ್ಯಾಸಕಳಾದ ಓರ್ವ ಆಂಗ್ಲ ಮಹಿಳೆ

ತನ್ನ ಅನುಭವವನ್ನು ನಿರೂಪಿಸುವಳು

"ಅನಾದಿ ಕಾಲದಿಂದಲೂ ಮನುಷ್ಯರು ಬಹುಶಕ್ತಿಗಳೆಂದು ತಿಳಿದುಕೊಂಡು ಬಂದ ತತ್ವಗಳೇ ದೇವರು. ಈ ಶಕ್ತಿಗಳಿಗೆ ಅವರು ತಮ್ಮ ವಿಶ್ವಾಸವನ್ನರ್ಪಿಸಿಕೊಂಡು ಉತ್ತಮ ಫಲಪ್ರಾಪ್ತಿಯನ್ನು ಮಾಡಿಕೊಂಡಿರುವರು" ಹೀಗೆಂದು ಸಿಸ್ಟರ್ ಲಲಿತಾ ಎಂಬ ಆಂಗ್ಲ ಮಹಿಳೆಯೊಬ್ಬಳು ತಿಳಿಸುತ್ತಾಳೆ. ವಿಭೂತಿ ಸ್ವಾಮಿ ಶ್ರೀ ನಿತ್ಯಾನಂದರ ಶಿಷ್ಯೆಯಾಗಿದ್ದು ಈಕೆ ಇಂದಿಗೆ ಸುಮಾರು ೧೫ ವರ್ಷಗಳಿಂದ ಯೋಗಾಭ್ಯಾಸವನ್ನು ಮಾಡುತ್ತಿರುವಳು. ದೇವರ ವಿಷಯವಾಗಿ ಅವಳು ಹೀಗೆ ತಿಳಿಸಿದ್ದಾಳೆ:

ಜಗತ್ತಿನ ಇತಿಹಾಸದಲ್ಲೆಲ್ಲ ದೇವರುಗಳು ಇದ್ದಾರೆ. ಪ್ರಾಚೀನ ಕಾಲದವರ ಪ್ರಕೃತಿ ಆರಾಧನೆಯ ವಿಶ್ವಾಸ; ಗ್ರೀಕ್ ಜನರು ಮಾನವ ಸಲ್ಲಕ್ಷಣಗಳನ್ನು ಮೂರ್ತಿಮತ್ತಾಗಿ ಮಾಡಿ ಪೂಜಿಸುತ್ತಿದ್ದ ದೇವರುಗಳಿದ್ದಾರೆ; ಅದೇ ರೀತಿ ರೋಮಾಯರ ಮತ್ತು ಭಾರತೀಯರ ದೇವರುಗಳು ಕೂಡ ಅನೇಕವಿದ್ದಾರೆ.

ಹೆಸರುಗಳು ಬೇರೆ ಬೇರೆಯಾಗಿದ್ದರು ದೇವರು ಒಂದೇಯಾಗಿ ಉಳಿದಿದ್ದಾರೆ.

ದೇವರ ಸಂಬಂಧವಾಗಿ ಮಾತನಾಡುವಾಗ ಯಾವ ಭಾವನೆಗಳು ಉತ್ಪನ್ನವಾಗುತ್ತವೆ? ಸಾಮಾನ್ಯ ಮನುಷ್ಯನು ಯಾವಾಗ ದೇವರ ವಿಷಯವಾಗಿ ಯೋಚಿಸುತ್ತಾನೆ? ಅವನು ಸಂಕಟದಲ್ಲಿರುವಾಗ, ಇಲ್ಲವೆ ಅವನಿಗೇನಾದರೂ ಬೇಕಾದಾಗ ಅಲ್ಲವೆ? ಇದಕ್ಕಾಗಿ ಅವನಿಗೆ ಮೊರೆಯಿಡಲಾಗುವಂತಹ ಒಂದು ಶಕ್ತಿಯ ಕುರಿತು ಅವನು ಯೋಚಿಸುತ್ತಾನೆ. ಆ ಶಕ್ತಿಯ ಕಡೆ ಅವನು ತಿರುಗುತ್ತಾನೆ.

★

ಮನುಷ್ಯನೆಂದರೆ ಆ ದೈವಿಕ ಶಕ್ತಿಯ ಒಂದು ಸಣ್ಣಗಾದ ಪ್ರತಿಬಿಂಬ. ತನ್ನೊಳಗಿನ ಅಧ್ಯಾತ್ಮಿಕ ಶಕ್ತಿಯನ್ನು ಅರಿತುಕೊಂಡ ಹಾಗೆ ಅವನು ಉಜ್ವಲತೆಯನ್ನು ಹೊಂದುತ್ತಾನೆ.

ಆ ಶಕ್ತಿಗಳು ಒಂದೇ ತರದವು. ಮನುಷ್ಯನು ಕಲ್ಪಿಸಿಕೊಳ್ಳುವ ಆ ಶಕ್ತಿಯ ರೂಪರೇಷೆಗಳು ಅವನ ಸುತ್ತಮುತ್ತಲಿನ ವಾತಾವರಣ ಮತ್ತು ಮಾನಸಿಕ ಪ್ರತಿಭೆಗಳನು ಸಾರವಾಗಿದೆ.

ದೇವರು, ಎಲ್ಲಾ ಜೀವ, ಚೈತನ್ಯ ಶಕ್ತಿಗಳ ಒಂದು ಉದ್ಭವ ಮೂಲ; ಎಲ್ಲಾ ಶಕ್ತಿಗಳನ್ನೊಳಗೊಂಡೊಂದು ಶಕ್ತಿ; ಯಾವ ಮನಸ್ಸೂ ಅದನ್ನು ನಿರೂಪಿಸಲು ಶಕ್ಯವಿಲ್ಲ; ಅದೇ ಪ್ರಥಮ ಹೇತು; ಅದು ಸರ್ವಾಂತರ್ಯಾಮಿಯಾಗಿದೆ; ಅದು ಸರ್ವಶಕ್ತಿ ಸಂಪನ್ನವಾಗಿದೆ; ಸಂಸ್ಕೃತದಲ್ಲಿ ಓಂ ಎಂಬ ಶಬ್ದದಿಂದದನ್ನು ನಿರೂಪಿಸಲಾಗುತ್ತದೆ. ಆಂಗ್ಲ ಭಾಷೆಯಲ್ಲಿ ಅದನ್ನು ಸರ್ವಶಕ್ತಿ ಸಾಮರ್ಥ್ಯದ್ವೆಂದು ಹೇಳಲಾಗುತ್ತದೆ.

ಅವಿಚ್ಛಿನ್ನವಾದ ಮಹಾ ಶಕ್ತಿಯನ್ನು ಹಿಂದೂಗಳು ನಿರ್ಗುಣ ಬ್ರಹ್ಮನೆಂದೂ, ಮುಸಲ್ಮಾನರು ಅಲ್ಲಾನೆಂದೂ, ಕ್ರೈಸ್ತರು ಜಹೋವನೆಂದೂ ಕರೆಯುವರು.

★

ದೈವೀಕ ಶಕ್ತಿಯ ಮೂರು ಅವಲೋಕನಗಳನ್ನು ಹಿಂದೂ ಶಾಸ್ತ್ರಗಳಲ್ಲಿ ಬ್ರಹ್ಮ ವಿಷ್ಣು ಮತ್ತು ಶಿವನೆಂದು ತೆರೆಯಲಾಗಿದೆ. ಕ್ರೈಸ್ತ ಶಾಸ್ತ್ರಗಳಲ್ಲಿ ತಂದೆ,ಮಗ ಮತ್ತು ಪವಿತ್ರಾತ್ಮವೆಂದು ನಿರೂಪಿಸಲಾಗಿದೆ.

—ಈ ಮೂರೊಂದರಲ್ಲಿ ಎಲ್ಲಾ ಶಕ್ತಿಗಳೂ ಅಡಕವಾಗಿವೆ–ಹೇಗೆ ಬಿಳಿದಾದ ಪ್ರಕಾಶದಲ್ಲಿ ಎಲ್ಲಾ ವರ್ಣಗಳೂ ಸೇರಿವೆಯೊ ಹಾಗೆ.

ಇಷ್ಟಾದರೂ ಎಲ್ಲಾ ಶಕ್ತಿಗಳೂ ಬೇರೆ ಬೇರೆಯಾಗಿವೆ. ಇವನ್ನು ವಯ್ಯಕ್ತಿಕ ಅವಶ್ಯಕತೆಗಾಗಿ ಬೇರೆ ಬೇರೆಯಾಗಿ ಹೇಗೆ ಸಂಪರ್ಕ ಮಾಡಬಹುದೆಂದು ಹಿಂದೂ ತತ್ವಜ್ಞಾನವು ತಿಳಿಸುತ್ತದೆ. ಈ ಒಂದೇ ಮಹಾ ಶಕ್ತಿಯನ್ನು ಸಂಪರ್ಕ ಮಾಡುವವರಿಗೂ ಅದು ಗ್ರಾಹ್ಯವಾಗುತ್ತದೆ. ವಿಶ್ವದ ಅಗಾಧ ಶಕ್ತಿ ಭಂಡಾರದಿಂದ ಒಂದೊಂದನ್ನೇ ಆದರೂ ಪ್ರತ್ಯಪ್ರತ್ಯೇಕವಾಗಿ ವ್ಯಕ್ತೀಕ ಆವಿರ್ಭವಿಸಿಕೊಳ್ಳಲೂ ಸಾಧ್ಯವಿದೆ.

ಜಗತ್ತಿನಲ್ಲಿನ ಈ ಎಲ್ಲಾ ಶಕ್ತಿಗಳು ಇಲ್ಲವೆ ತತ್ವಗಳೇ 'ದೇವರು'ಗಳು, ಅವರೇ ತೇಜೋಪೂರ್ಣವಾದವು.

ಮನುಷ್ಯನು ಯಾವ ಶಕ್ತಿಯ ಮೇಲೆ ವಿಚಾರವನ್ನು ಕೇಂದ್ರೀಕರಿಸುವನೊ ಆ ಶಕ್ತಿಗಾಗಿ ಅವನ ಮನಸ್ಸಿನ ದ್ವಾರಗಳು ತೆರೆಯಲ್ಪಡುವವು. ಕ್ರಮೇಣ ಅವನು ಆ ಶಕ್ತಿಯೊಡನೆ ಲೀನವಾಗುತ್ತಾನೆ. ಆ ಮೇಲೆಯೇ ಅವನು ಆಶಿಸಿದ ಫಲಗಳು ಅವನಿಗೆ ಸಾಧ್ಯವಾಗುವವು.

★

ವಿಶ್ವದಲ್ಲಿ ಮನುಷ್ಯನು ಹಾರೈಸುವಂತಹುಗಳೆಂದರೆ ಪ್ರೀತಿ, ಸೌಂದರ್ಯ, ವಿವೇಕ, ಐಶ್ವರ್ಯ, ಜ್ಞಾನ, ಇವಲ್ಲದೆ ಮಾನವಾತ್ಮವು ಕೋರುವ ಪ್ರತಿಯೊಂದು ವಿಷಯವೂ ವಿಶ್ವದಲ್ಲಿರುತ್ತದೆ.

ಪ್ರಾಚೀನ ಕಾಲದಲ್ಲಿ ಮನುಷ್ಯನು ಈ ತತ್ವಗಳನ್ನು ಮೂರ್ತೀಕರಿಸಿ ಅವುಗಳಿಗೆ ತಕ್ಕುದಾದ ಸಂಕೇತಗಳನ್ನು ಮಾಡಿದನು. ಈ ಸಂಕೇತಗಳು ಅವನಿಗೆ ಮನಸ್ಸು ಕೇಂದ್ರೀಕರಣಕ್ಕೆ ಸಹಾಯವಾಗುವಂತಹು.

ಈ ಸಂಕೇತಗಳೇ ಶಕ್ತಿಯಲ್ಲ. ಆದರೆ ಶಕ್ತಿ ತತ್ವಗಳು ಕಾರ್ಯಗೈಯ್ಯುವ ಸಾಧನ ಇಲ್ಲವೆ ಮಾಧ್ಯಮಗಳು ಎನ್ನಬಹುದು. ಹೇಗೆ ದನ ಎಂಬ ಶಬ್ದವು ಒಂದು ಪ್ರಾಣಿಯ ಸಂಕೇತವೊ ಅದೇ ರೀತಿ. ಆ ಶಬ್ದವೇ ದನವಲ್ಲ. ದನವೆಂಬ ಪ್ರಾಣಿಯನ್ನು ಮಾತಿನಲ್ಲಿ ನಿರೂಪಿಸುವ ಒಂದೇ ಸಂಕೇತವದು.

ಭಾರತದಲ್ಲಿ ಗಣೇಶನು ವಿವೇಕ ತತ್ವದ ಒಂದು ಸಂಕೇತ. ಅವನು ಎಲ್ಲಾ ಅಡ್ಡಂತರಗಳನ್ನು ನಾಶಮಾಡುತ್ತಾನೆ. ಎಲ್ಲಾ ಕಾರ್ಯಗಳ ಪ್ರಾರಂಭದಲ್ಲಿ ನಾವು ಶ್ರೀ ಗಣಪತಿಯನ್ನು ಆರಾಧಿಸುತ್ತೇವೆ. ಅರ್ಥಾತ್ ಯಾವ ಕಾರ್ಯವನ್ನೆಸಗಬೂ ವಿವೇಕವು ನಮ್ಮಲ್ಲಿ ಉಂಟಾಗಲೆಂದೇ ನಮ್ಮ ಹಾರೈಕೆ.

★

ಹೀಗೆ ಮನುಷ್ಯನು ಒಂದು ಸಂಕೇತದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದವನಾಗಿ ತನ್ನ ಹೃದಯದಲ್ಲಿ ತನ್ನ ಇಚ್ಛೆಗಳು ನೆರವೇರುವಂತೆ ಪ್ರಾರ್ಥಿಸುತ್ತಾನೆ.

ಅವನ ವಿಚಾರವು ಶಕ್ತಿ ಯುಕ್ತವೂ ಶ್ರದ್ಧಾ ಪೂರ್ವಕವೂ ಆಗಿದ್ದರೆ ಅವನನ್ನು ಅದು ನೇರವಾಗಿ ಆ ಶಕ್ತಿಯೊಡನೆ ಹೊಂದಿಸುತ್ತದೆ. ಅಂತೇ ಅವನ ಪ್ರಾರ್ಥನೆಗೆ ತಕ್ಕ ಫಲವೂ ಸಿಗುವುದು. ಅನಂತವಾದ ಶಕ್ತಿ ಮೂಲಕ್ಕೆ ಮನಸ್ಸನ್ನು ಸಂಪರ್ಕಗೊಳಿಸುವುದೆಂದರೆ ಹೀಗೇ.

ಹೃದಯ ಪೀಠದ ಮೇಲೆ ಅಗ್ನಿಯು ಉರಿಸಲ್ಪಟ್ಟಾಗ ದೈವೀಕ ಶಕ್ತಿಗಳಿಂದ ಅದಕ್ಕೆ ತಕ್ಕುದಾದ ಉತ್ತರವು ಹೊಳೆಯುತ್ತದೆ.

ಇಂದು ನಾವು ಪ್ರಕೃತಿ ಶಕ್ತಿಯನ್ನು ವಿವರಿಸುವ ವಿಜ್ಞಾನಕ್ಕೆ ನಾವು ತುಂಬಾ ಗಮನವನ್ನು ಕೊಡುತ್ತೇವೆ. ಆದರೆ ಎಲ್ಲಾ ವಿಜ್ಞಾನಗಳ ವಿಜ್ಞಾನವೆಂದೆಣಿಸಲ್ಪಡುವ ಈ ಮಾನವ ಅಧ್ಯಾತ್ಮದ ಅಭ್ಯಾಸಕ್ಕೆ ನಾವೇಕೆ ಅಲಕ್ಷ್ಯ ತೆರಬೇಕು? ಇದನ್ನಭ್ಯಸಿಸುವುದರಿಂದ ಮಾನವನಿಗೆ ತನ್ನ ಮೇಲೇ ಸ್ವಾಮಿತ್ವವು ಉಂಟಾಗುತ್ತದೆ.

★

ಮನುಷ್ಯನಲ್ಲಿ ಅಗಾಧ ಶಕ್ತಿಗಳಿವೆ. ವಿಶ್ವದಲ್ಲಿರುವಷ್ಟೇ ಶಕ್ತಿ ಅವನ ಈ ಪುಟ್ಟ ರಚನೆಯಲ್ಲಿದೆ. ಮನುಷ್ಯನಲ್ಲಿ ಇಲ್ಲದ್ದು ಯಾವುದೂ ವಿಶ್ವದಲ್ಲಿಲ್ಲ.

ಪೌರ್ವಾತ್ಯರ ಪ್ರಾಚೀನ ವಿವೇಕವು ಇದನ್ನೇ ಕಲಿಸುತ್ತದೆ. ಭಾರತದ ಶ್ರೇಷ್ಠ ಋಷಿಗಳು ಈ ತತ್ವಕ್ಕನುಸಾರವಾಗಿಯೇ ವರ್ತಿಸಿದರು. ಯೋಗಾಭ್ಯಾಸದ ಭವ್ಯ ವಿಜ್ಞಾನವಾದರೂ ಇದರ ಮೇಲೇ ಅವಲಂಬಿಸಿದೆ. ಯೋಗವಾಗುವುದೆಂದರೆ ಲೀನ ಹೊಂದುವುದು. ನಾವು ಯಾವುದರೊಡನೆ ಲೀನವಾಗಬಲ್ಲೆವೂ ಅದೂ ನಮ್ಮೊಡನೆ ಲೀನವಾಗುವುದು.

ಏಕ ಭಾವವನ್ನು ಎಲ್ಲಾ ಧರ್ಮಗಳೂ ಬೋಧಿಸುತ್ತಿವೆ. ಎಲ್ಲಾ ಜೀವರುಗಳ ಮೂಲ ಒಂದೇ. ಎಲ್ಲಾ ಬೆಳಕುಗಳ ಮೂಲವೂ ಒಂದೇ.

ಕ್ರಿಸ್ತನು "ನಿನ್ನನ್ನು ಪ್ರೀತಿಸುವಂತೆ ನಿನ್ನ ನೆರೆಕರೆಯವನನ್ನು ಪ್ರೀತಿಸು" ಎಂದನು.

ಕೃಷ್ಣನು "ಎಲ್ಲದರಲ್ಲಿಯೂ ನಾನು ಒಳಗೊಂಡಿದ್ದೇನೆ" ಎಂದಿರುವನು.

೧ನೇ ಪುಟದಿಂದ

ಇಂದಾದರೊ ಜನಗಣಮನ ಮತ್ತು ವಂದೇ ಮಾತರಂಗಳೊಳಗೆ ಸ್ಪರ್ಧೆ ನಡೆಯುತ್ತಿದೆ. ಎರಡೂ ಒಂದೇ ಪ್ರಾಂತ್ಯದಿಂದ ಬಂದವು. ಎರಡೂ ಸಮಾನ ಜನಪ್ರಿಯವಾಗಿವೆ. ಜನಗಣಮನವು ಒಂದು ಉದಾತ್ತ ಕವಿತೆ. ಕರ್ಣಾನಂದ ಸ್ವರಗಳಿಂದೊಗೂಡಿದೆ. ಆದರೆ ಅದರಲ್ಲಿ ಪಾಶ್ಚಾತ್ಯ ಸಂಗೀತ ಮಿಶ್ರಣವಿದೆ. ಸಾಮಾನ್ಯರಿಂದದನ್ನು ಹಾಡುವುದು ಕಷ್ಟವೆನಿಸುತ್ತದೆ. ಆದರೆ ವಂದೇ ಮಾತರಂ ಗೀತೆಯಲ್ಲಿ ಜನಾಂಗದ ಗತ ಇತಿಹಾಸದ ನಿರೂಪಗಳಿವೆ. ಟಾಗೂರರ ಗೀತೆಯಲ್ಲಿ ಅದಿಲ್ಲ. ಜನಗಣಮನವು ನಮ್ಮ ಹಲವು ರಾಷ್ಟ್ರಗೀತೆಗಳಲ್ಲಿ ಒಂದಾಗಬಲ್ಲುದು ಅಲ್ಲದೆ ಅದು ರಾಷ್ಟ್ರಗೀತೆಯೇ ಆಗಲಾರದು ಎಂದು ಹಲವು ನುರಿತ ದೇಶಭಕ್ತರ ಅಭಿಪ್ರಾಯವಿದೆ. ಕೊಂಗ್ರೆಸಾದರೊ ವಂದೇ ಮಾತರಂ ಗೀತೆಯ ಮೊದಲೆರಡು ಚರಣಗಳನ್ನು ಸ್ವೀಕರಿಸಿದೆ. ಆದರೆ ಜನತೆಯ ಹೃದಯಕ್ಕೆ ಅಂಟಿಕೊಂಡಿದ್ದ ಅದನ್ನು ಸ್ವತಂತ್ರವಾದ ಇಂದಿನ ಪರಿಸ್ಥಿತಿಯಾಗಿ ಪೂರ್ಣವಾದ ರಾಷ್ಟ್ರಗೀತೆಯಾಗಿ ಮಾಡುವುದು ಯೋಗ್ಯವಿದೆ.

ಗಂಟಲು ನೋವು
ನೆಗಡಿ ಮತ್ತು ಶೀತಜ್ವರ

ಇವನ್ನು ತಣಿಸುವ, ರೋಗಾಣು ನಾಶಕ ಪೆಪ್ಸ ನಿಮಗೆ ಅವಶ್ಯವಿದೆ

ಹಿತಕರ ರುಚಿಯ ಪೆಪ್ಸ್ ಮಾತ್ರೆಯೊಂದನ್ನು ಚೀಪಿದರೆ ಅದರ ಔಷಧೀಯ ಸತ್ವಗಳು ನಿಮ್ಮ ಗಂಟಲು ಶ್ವಾಸಕೋಶಗಳಿಗೆ ಅತೀವವಾದ ಸುಖಾನಂದವನ್ನುಂಟುಮಾಡುವುದು. ಅದರೊಳಗಿನ ರೋಗಾಣುನಾಶಕ ಸತ್ವವು ಒಮ್ಮೆಲೆ ಗಂಟಲು, ಎದೆ ಮತ್ತು ಶ್ವಾಸಕೋಶಗಳೊಡನೆ ಸಂಪರ್ಕಕ್ಕೆ ಬರುವುದರಿಂದ ಪೆಪ್ಸ ಅತ್ಯಂತ ಪರಿಣಾಮಕಾರಿ. ಪೆಪ್ಸ ನೋವಾಗುವಿಕೆ, ತುರಿಸುವಿಕೆ ಊರುವಿಕೆಗಳನ್ನು ನಿಲ್ಲಿಸಿ, ರೋಗಾಣುಗಳನ್ನು ನಾಶಮಾಡಿ ಗಂಟಲು ಒತ್ತಡವನ್ನು ಸರಿಪಡಿಸುವುದು.



ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ.

PEPS
ವಿಷಹಾರಿ
ಗಂಟಲು ಮತ್ತು ಎದೆ ಗುಳಿಗೆಗಳು
ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ ಅತ್ಯಂತ ಪರಿಣಾಮಕಾರಿ ಔಷಧಿ.

ನೇಗಿಲಿನಿಂದಲೇ ನಾಗರಿಕತೆ ಪ್ರಾರಂಭ

ಆಧುನಿಕ ಕಾಲಕ್ಕೆ ಯಂತ್ರ ಕೃಷಿ ಉಪಕರಣಗಳು ಅವಶ್ಯವಾಯಿತು

ರೈತನ ಉದ್ಧಾರದಿಂದಲೇ ದೇಶೋಭಿವೃದ್ಧಿ

ಮನುಷ್ಯ ಕಾಡಿನಲ್ಲಿ ವಾಸಮಾಡಿ ಮರದ ಮೇಲೆ ಮಲಗುತ್ತಿದ್ದಾಗ ಅವನಿಗೆ ಆಹಾರ ಬೆಳೆಸುವ ಆವಶ್ಯಕತೆಯಿರಲಿಲ್ಲ. ಪ್ರಾಣಿಗಳನ್ನು ಬೇಟೆಯಾಡಿ, ಅವುಗಳ ಹಸಿ ಮಾಂಸವನ್ನೆ ತಿಂದು ಅವನು ಜೀವಿಸುತ್ತಿದ್ದ. ಮತ್ತೆ ಮನುಷ್ಯ ತನ್ನ ಸೌಕರ್ಯಕ್ಕಾಗಿ ಕಲ್ಲಿನ ಉಪಕರಣಗಳನ್ನು ಮಾಡಿ ಬಳಸಲು ಪ್ರಾರಂಭಿಸಿದ. ಅನಂತರದವನೊಬ್ಬ ಬಾಗಿದ ಕಡ್ಡಿಯೊಂದರಿಂದ ನೆಲವನ್ನಗೆದು ಬೀಜ ಬಿತ್ತಲಾರಂಭಿಸಿದಾಗಲೇ ನಾಗರೀಕತೆಯೂ ಆರಂಭವಾಯಿತು

ಆ ಮನುಷ್ಯನಾರು, ಅವನೆಲ್ಲಿ ಬಿತ್ತಿದನೆಂಬ ಸಂಗತಿಯು ಸ್ಪಷ್ಟವಾಗಿ ತಿಳಿದಿಲ್ಲ. ಆದರೆ ನೂತನ ಶಿಲಾಯುಗದ ನಂತರವೆ ಅದು ಆರಂಭವಾಯಿತೆಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಆಗ ಮನುಷ್ಯನು ತಾನು ಮಾಡಿದ ಕಲ್ಲಿನ ಆಯುಧಗಳನ್ನು ಚೆನ್ನಾಗಿ ತಿಕ್ಕಿ ನಾಜೂಕು ಮಾಡಲು ಅವನು ಕಲಿತಿದ್ದ ಅವನಿಗಿಂತ ಹಿಂದಿನ ಕಾಡು ಮನುಷ್ಯ ಅರಣ್ಯದಲ್ಲಿ ಬೆಳೆಯುತ್ತಿದ್ದ ಕಾಡುಕಾಳುಗಳನ್ನೇ ಮೆದ್ದು ಹೊಟ್ಟೆ ತುಂಬಿಸುತ್ತಿದ್ದನು. ಅವನು ಬಿತ್ತನೆ ಕೊಯ್ಯುವವನಾಗಿದ್ದ

ಮಾನವನು ನೆಲ ಉತ್ತು, ಬೀಜ ಬಿತ್ತಿ ಬೆಳೆ ಕೊಯ್ದು ಕಾಲ ಕಳೆಯುವುದನ್ನು ಕಲಿತಾಗಲೇ ನಾಗರಿಕತೆಯು ಜನ್ಮವೆತ್ತಿತೆಂದು ಹೇಳಬಹುದು ತಾನು ಉತ್ತ ಮಣ್ಣಿನಲ್ಲಿ ಅವನು ತನ್ನ ಪ್ರಥಮ ಲೌಕಿಕ ಸೊತ್ತನ್ನು ಮಾಡಿಕೊಂಡಾಗ ಆ ಸ್ಥಳದಲ್ಲಿ ಪುಟ್ಟ ಹಳ್ಳಿಗಳ ಬೀಡಾಯಿತು

ಹೀಗೆ ನೇಗಿಲಿಂದ ನಾಗರಿಕತೆಯಾರಂಭವಾಗಿ ಕೃಷಿ ಉದ್ಯಮದೊಡನೆ ಅದು ಅಭಿವೃದ್ಧಿಯಾಯಿತು. ಮೊದಮೊದಲಿನ ಪ್ರಗತಿ ಮಂದಗತಿಯದು ಆದರೆ ಕಳೆದೆರಡು ಶತಮಾನಗಳಲ್ಲಿ ಅದ ಕಲ್ಪನಾತೀತ ವೇಗದಲ್ಲಿ ಮುಂದೆ ಧಾವಿಸಿದೆ

ಮೊದಲ ರೈತ ತನ್ನ ಸ್ವಂತ ಕೈಗಳಿಂದಲೇ ಮಣ್ಣನ್ನು ಹದಮಾಡಿದ ತನ್ನಾವಶ್ಯಕತೆಗಿಂತ ಹೆಚ್ಚಿನದನ್ನು ಬೆಳಸಲು ಅವನಿಗೆ ಸಾಧ್ಯವಿರಲಿಲ್ಲ ಕ್ರಮೇಣ ಕಾಡುಪ್ರಾಣಿಗಳನ್ನು ಸಾಧುಗೊಳಿಸಲು ಕಲಿತ ಮೇಲೆ [illegible] ಎತ್ತು ಕೋಣಗಳನ್ನು ನೇಗಿಲಿಗೆ ಕಟ್ಟಲಾರಂಭಿಸಿದ ಇತ್ತೀಚೆಗೆ ಅವನು ಯಂತ್ರಗಳನ್ನು ಕಂಡುಹಿಡಿದು ಅವುಗಳಿಂದ ತನ್ನ ಕೃಷಿ ಕೆಲಸವನ್ನು ಶೀಘ್ರವಾಗಿಯೂ ಸುಲಭವಾಗಿಯೂ ಮಾಡಿಕೊಂಡಿದ್ದಾನೆ

ಇಂದು ನೇಗಿಲು ಕೃಷಿ ಕ್ಷೇತ್ರದಲ್ಲಿ ಅತಿ ಮಹತ್ವದ್ದೂ ಅತ್ಯಂತ ಪರಿಪೂರ್ಣವೂ ದದೊಂದು ಉಪಕರಣವಾಗಿದೆ. ಅದರಿಂದ ನೆಲವು ಸೀಳಲ್ಪಡುವುದು, ಮಣ್ಣು ಚೂರು ಮಾಡಲ್ಪಡುವುದು, ಕೆಳಗಿನ ಮಣ್ಣನ್ನು ಮೇಲಕ್ಕೆ ಹಾಕಲಾಗುವುದು ಇದರಿಂದ ಮೇಲ್ಗಡೆಯಿದ್ದ ಎಲ್ಲಾ ಕಸ ಕೆಸರುಗಳು ಆಚೆಗೆ ಹೋಗುವಂತಾವುದು ಬೇರೆ ಬೇರೆ ಬೆಳೆ, ಕ್ಷೇತ್ರ, ಮಣ್ಣುಗಳಿಗನುಗುಣವಾಗಿ ನೇಗಿಲನ್ನು ಅಳವಡಿಸಿಕೊಳ್ಳಬಹುದಾಗಿದೆ. ಮಾಡಲೆಳೆಸುವ ಬೆಳೆಗೆ ತಕ್ಕದಾದ ನೇಗಿಲನ್ನುಪಯೋಗಿಸುವುದೆಂದರೆ ಒಂದು ಸೂಕ್ಷ್ಮ ಯಂತ್ರವನ್ನು ನಡೆಸುವಷ್ಟು ಚಾಣಾಕ್ಷ್ಯವು ಬೇಕು.

ಇಷ್ಟಾದರೂ ಹತ್ತೊಂಬತ್ತನೆಯ ಶತಮಾನ ತನಕದ ರೈತರು ಜಗತ್ತಿನಲ್ಲೆಲ್ಲಾ ಅವರ ಪೂರ್ವಜರು ಎರಡು ಸಾವಿರ ವರ್ಷಗಳ ಹಿಂದೆ ಉಪಯೋಗಿಸುತ್ತಿದ್ದ ನೇಗಿಲನ್ನೇ ಬಳಸುತ್ತಿದ್ದರು ಹದಿನೆಂಟನೇ ಶತಮಾನದ ಕೊನೆಯಲ್ಲಿಯೂ ಈಗ ಯಂತ್ರ ವಿದ್ಯೆಯಲ್ಲಿ ತುಂಬಾ ಮುಂದರಿದ ದೇಶಗಳಲ್ಲೂ ಮರದ ನೇಗಿಲುಗಳೇ ಉಪಯೋಗಿಸಲ್ಪಡುತ್ತಿದ್ದವು.

ಆದರೆ ನೂತನ ಖಂಡವಾದ ಅಮೇರಿಕದ ಎಳೆ ಜನಾಂಗದವರು ಮಣ್ಣನ್ನು ಒಡೆಯಲೂ, ಹೊಸ ಜಮೀನುಗಳನ್ನು ಉಳಲು ಮರದ ನೇಗಿಲುಗಳು ಅಷ್ಟೊಂದು ಹಿತಕರವಲ್ಲವೆಂಬಭಿಪ್ರಾಯಕ್ಕೆ ಬಂದರು. 1797ರಲ್ಲಿ ನ್ಯೂಜರ್ಸಿಯ (ಸಂ ಅಮೇರಿಕಾದ) ಚಾರ್ಲ್ಸ್ ನ್ಯೂಬೊಲ್ಡ್ ಎಂಬವನು ಕಬ್ಬಿಣ ಎರಕದಿಂದ ಒಂದು ಹೊಸ ನೇಗಿಲನ್ನು ತಯಾರಿಸಿದ ನಂತರ 1808ರಲ್ಲಿ ಉಕ್ಕಿನ ಪ್ರಥಮ ನೇಗಿಲು ತಯಾರಿಸಲ್ಪಟ್ಟಿತು ಇಂತಹ ನೇಗಿಲು ಕಂಡುಹಿಡಿದೊಡನೆ ಉತ್ತರ ಅಮೇರಿಕದ ಬಂಜರು ಪ್ರದೇಶಗಳನೇಕವು ಕೃಷಿ ಯೋಗ್ಯವಾಗಿ ಮಾಡಲ್ಪಟ್ಟವು ಅನಂತರದ 30 ವರ್ಷಗಳ ತನಕ ಕೆಲವು ಕಬ್ಬಿಣ ಕಾರ್ಖಾನೆಗಳು ಸಾಮೂಹಿಕ ಪ್ರಮಾಣದಲ್ಲಿ ಉಕ್ಕಿನ ನೇಗಿಲುಪಕರಣಗಳನ್ನು ಮಾಡುತ್ತಿದ್ದವು 1831ರಲ್ಲಿ ಸಿರಲ್ ಹೋಲ್ ಮೆಕೊರ್ಮಿಕ್ ಎಂಬ ಅಮೇರಿಕನನು ಒಂದು ಬೆಳೆ ಕೊಯ್ಯುವ ಯಂತ್ರವನ್ನು ಸಿದ್ಧಮಾಡಿದ ಈ ಶೋಧನೆಯಿಂದ ಕೃಷಿ ಉದ್ಯಮ ಪ್ರಗತಿಯ ಯುಗದ ಪ್ರಥಮ ಹೆಜ್ಜೆಯಿಟ್ಟಂತಾಯಿತು

ಭಾರತದಲ್ಲಿ ದುರ್ದೈವದಿಂದ ಶತಮಾನಗಳು ಕಳೆದರೂ ಮಹಾಪ್ರಗತಿಯು [illegible] ಉತ್ಕೃಷ್ಟ [illegible] ಗಳಿಂದ ನಮ್ಮ ರೈತ [illegible] ಉಳಲು ಬಳಸುತ್ತಿದ್ದಾನೆ. ತನುವನಧನಗಳಲ್ಲಿ ಕುಸಿದುಹೋಗಿದ್ದ ರೈತ ಯಾವ ನವೀನ ಸುಧಾರಣೆಗಳ ಕಡೆಗೂ ಮನಸ್ಸು ಹಾಕದಾದ ಸಾವಿರಾರು ವರ್ಷಗಳ ಹಿಂದೆ ಅವನ ಪೂರ್ವಜರು ಮಣ್ಣನ್ನು ಕೆರಕೊಳ್ಳುವ ರೀತಿಯಂತೇ ಅವನೂ ತಪ್ಪದೆ ಅನುಸರಿಸುತ್ತ ಬಂದಿದ್ದಾನೆ ಈಗಿನ ನಮ್ಮ ರೈತ ಉಪಯೋಗಿಸುವ ನೇಗಿಲನ್ನೂ ಪ್ರಾಚೀನ ಕಾಲದಲ್ಲಿ ರೋಮಾಯರು ಉಪಯೋಗಿಸುತ್ತಿದ್ದ ನೇಗಿಲನ್ನೂ ನಾವು ಹೋಲಿಸಿದರೆ ನಮ್ಮವನು ಇನ್ನು ಎರಡು ಸಾವಿರ ವರ್ಷಗಳಿಗೆ ಹಿಂದಿದ್ದಾನೆಂದು ಸ್ಪಷ್ಟವಾಗುತ್ತದೆ.

ಕೌತುಕವೇನಿದೆ?

ಅಂದ ಮೇಲೆ ನಮ್ಮ ಕೃಷಿ ಉತ್ಪನ್ನ ಕನಿಷ್ಠ ಪ್ರಮಾಣದಾದುದರಲ್ಲಿ ಏನಾದರೂ ಆಶ್ಚರ್ಯವಿದೆಯೇ? ನಮ್ಮ ಜಮೀನುಗಳು ಎಕ್ರೆಗೆ 600 ರಾತ್ತಲುಗಳ ಧಾನ್ಯವನ್ನು ಮಾತ್ರ ಕೊಡುತ್ತವೆ ಆದರೆ ಇಂಗ್ಲೆಂಡಿನ ಗದ್ದೆಗಳು ಎಕ್ರೆಗೆ 2000 ರಾತ್ತಲು ಧಾನ್ಯವನ್ನು ಬಿಡುತ್ತವೆ ನಮ್ಮ ಗದ್ದೆಗಳು ಎಕ್ರೆಗೆ 40 ಖಂಡಿ ಕಬ್ಬನ್ನು ಕೊಡುತ್ತವೆ ಆದರೆ ಆಧುನಿಕ ವಿಧಾನವನ್ನನುಸರಿಸುವ ಜಾವಾ ದ್ವೀಪದ ಗದ್ದೆಗಳು ಎಕ್ರೆಗೆ 160 ಖಂಡಿ ಕಬ್ಬನ್ನು ಕೊಡುತ್ತವೆ [illegible] ನಮ್ಮವು ಎಕ್ರೆಗೆ 98 ರಾತ್ತಲು ಕೊಡುತ್ತವೆ, ಆದರೆ ಈಜಿಪ್ಟ್ ಮತ್ತು [illegible] ಅಮೇರಿಕದ [illegible] ಗಳು ಎಕ್ರೆಗೆ 200-[illegible] ರಾತ್ತಲುಗಳನ್ನು ಹುಟ್ಟಿಸುತ್ತವೆ [illegible] ಬಿಡುತ್ತವೆ! ಹೀಗಿರುವಾಗ ಮಿತಿಯಾವಧಿ ನಮ್ಮ ಬಾಂಧವರು ದರಿದ್ರತೆಯಾತೆ ಮುಳುಗದೆ ಮತ್ತೇನಾದಾರು?

ಪರಿಹಾರ

ಕೃಷಿ ವಿಧಾನದಲ್ಲಿ ಹೊಸ ದಾರಿಯನ್ನು ತುಳಿಯುವುದೇ ನಮ್ಮೆದುರಿಗಿರುವ ಒಂದೇ ಪರಿಹಾರ. ನಮ್ಮ ಕೆಲ ರೈತರು ಈಗಾಗಲೇ ಲೋಹದ ನೇಗಿಲಿಗೆ ಕೈಯಿಕ್ಕಿರುವರು. ಆದರೆ ನಾವಿನ್ನೂ ದೂರ ಸಾಗಬೇಕಾಗಿದೆ. ಅದಕ್ಕಿಂತಲೂ ಹೊಸದಾದ ಯಂತ್ರ ವಾಹನಗಳಿಂದೆಳೆಯಲ್ಪಡುವ ನೇಗಿಲನ್ನೂ ನಾವು ಬಳಸಬೇಕಾಗಿದೆ ಇವು ಪ್ರಾಣಿಗಳಿಂದೆಳೆಯಲ್ಪಡುವವುಗಳಿಗಿಂತ ಹೆಚ್ಚಿನ ಕಾರ್ಯಗಳನ್ನು ಸಾಧಿಸುವವು

ಈ ಹೊಸ ನೇಗಿಲುಪಕರಣದ ಅನೇಕ ಮೊನೆಗಳು ಗದ್ದೆಯಲ್ಲಿ ಒಂದೇ ಎಳೆತಕ್ಕೆ ಅನೇಕ ಸಾಲುಗಳನ್ನು ಗೀರುವವು ಮಾತ್ರವಲ್ಲ ಗಂಟೆಯೊಂದಕ್ಕೆ ಒಂದು ಎಕ್ರೆಯನ್ನು ಉಳುವುವು ಅತೀ ಬಲಿಷ್ಟವಾದ ಎರಡು ಎತ್ತುಗಳು ಮತ್ತು ತುಂಬಾ ಕಾಯಕಷ್ಟ ಮಾಡುವ ರೈತನೊಬ್ಬ ಮಾತ್ರ ಒಂದು ದಿನದಲ್ಲಿ ಒಂದು ಎಕ್ರೆಯನ್ನು ತನ್ನ ಒಂದು ಮೊನೆಯಿಂದ ಉಳಬಲ್ಲ ಆದರೆ ನಮ್ಮ ರೈತನಿಗಾಗಲಿ ಅವನ ಎತ್ತುಗಳಿಗಾಗಲಿ ಸಿಗುವ ಆಹಾರ ಪ್ರಮಾಣವು ಅದೆಷ್ಟೆಂದು ಸರ್ವವಿಧಿತ ಇಂತಹ ಪರಿಸ್ಥಿತಿಯಲ್ಲಿ ಅವನೆಷ್ಟು ಉತ್ತಾನು?

ಮಾತವಲ್ಲ, ಯಂತ್ರದ ಉಳುವ ಉಪಕರಣವನ್ನು ತರಿಸಲು ಬೇಕಾಗುವಷ್ಟು ಸಾಮರ್ಥ್ಯ [illegible] ಗಳು ನಮ್ಮ ಬಡ ರೈತರ ಕೈಯಿಂದ ಒದಬೇಕು ಅಲ್ಲದೆ ಅವರ ಜಮೀನುಗಳು ಅಲ್ಲೊಂದು ಇಲ್ಲೊಂದು ಚೆಲ್ಲಿ ಬಿದ್ದಿರುವುದರಿಂದ ಯಾಂತ್ರಿಕ ಕೃಷಿಯು [illegible] ಅಸಾಧ್ಯದ ಮಾತೇ ಸರಿ.

ಸಹಕಾರ ಪದ್ಧತಿಯಿಂದ ಅನೇಕ ರೈತರಾಗಲಿ, ಕೆಲವೊಂದು ಹಳ್ಳಿಗಳಾಗಲಿ ಒಟ್ಟು ಸೇರಿ [illegible] ಯಂತ್ರಗಳನ್ನು ತರಿಸಿ [illegible] ಸಾಧಿಸುವ ದಾರಿಯೊಂದ [illegible] [illegible] ಕೃಷ್ಯುಪಕರಣಗಳು [illegible] [illegible] ಯಂತ್ರ ನೇಗಿಲು ಆಳವಾದ [illegible] ನೆಲದಲ್ಲಿರುವ [illegible] [illegible] ಪ್ರದೇಶದಲ್ಲಿ [illegible] ನೇಗಿಲು [illegible] ಕೊಡಲಾಗುತ್ತದೆ ಆದರೆ ಯಂತ್ರದ [illegible] ಎಷ್ಟು ಆಳಕ್ಕೆ [illegible] ಬೇಕಾದರೂ [illegible] ಸಾಧ್ಯವಿದೆ ಯೆಂಬ ಸಂಗತಿಯನ್ನು ನಮ್ಮವರು ಮರೆತಂತಿದೆ

ಮುಖ್ಯವಾದ ಸಂಗತಿಯೆಂದರೆ ಯಂತ್ರ ನೇಗಿಲುಗಳು ಶೀಘ್ರ ಕಾರ್ಯದವು, ಯಾವ ನೆಲದ ಮೇಲೂ ಅವನ್ನು ಉಪಯೋಗಿಸಬಹುದು ಇದಕ್ಕೆ ಪ್ರಾಣಿಗಳ ಅವಶ್ಯಕತೆಯಿಲ್ಲ ಇದರಿಂದ ಅವುಗಳನ್ನು ಸಾಕುವ ಸಮಸ್ಯೆ ಕಡಿಮೆಯಾದಂತಾಗುವುದು. ಯಂತ್ರ ಬಳಸುವುದರಿಂದ ಅನಾದಿ ಕಾಲದಿಂದ ಬವರು ಸುರಿಸಿ ದೇಹ ಸವೆಸಿಕೊಂಡ ರೈತನಿಗೆ ತುಸು ಆರಾಮವೂ ಸಿಗುವುದು. ಈ ಸಮಯವನ್ನವನು ಇತರ ಗುಡಿ ಕೈಗಾರಿಕೆಗಳಿಗೆ ಉಪಯೋಗಿಸಿ ತನ್ನ ಆರ್ಥಿಕ ಅಭಿವೃದ್ಧಿಯನ್ನು ಮಾಡಿಕೊಳ್ಳಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಜವಾಬ್ದಾರಿಕ [illegible])

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ ಹರಡಿಕೊಂಡಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ ಆದರಿಂದ ನಿಮಗೆ ಸಮಯವೂ ಹಣವೂ ಉಳಿವುದು-ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ ದೊರೆವುದು

CANARA BANK, LIMITED.

ESTD: 1906

ಸ್ವದೇಶಾಭಿಮಾನಿ

ತಾರೀಕು 27—8—1948

ಭೂಕಂದಾಯವನ್ನು ಧಾನ್ಯ ರೂಪದಲ್ಲಿ ವಸೂಲು ಮಾಡುವ ಸೂಚನೆ

ಈಗಿನ ಆಹಾರದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರು ವಸೂಲು ಮಾಡುವ ಭೂಕಂದಾಯವನ್ನು ಧಾನ್ಯದ ರೂಪದಲ್ಲಿ ವಸೂಲು ಮಾಡಿದರೆ ಬಹಳ ಸಹಾಯವಾದೀತೆಂದು ಶ್ರೀ ವಿನೋಬಾ ಭಾವೆಯವರು ಒಂದು ಸೂಚನೆ ಕೊಟ್ಟಿರುತ್ತಾರೆ ಶ್ರೀ ಮಶ್ರುವಾಲರು ಹರಿಜನ ಪತ್ರಿಕೆಯ ಅಗ್ರಲೇಖನದಲ್ಲಿ ಇದನ್ನು ಸಮರ್ಥಿಸಿದ್ದಾರೆ. ಈ ಸೂಚನೆಯನ್ನು ಪರಿಶೀಲಿಸುವುದು ಉಚಿತವಿರುತ್ತದೆ

ಆಹಾರ ಧಾನ್ಯಗಳ ಮೇಲಿನ ಕಂಟ್ರೋಲನ್ನು ಸದ್ಯದಲ್ಲೆ ನಮ್ಮ ಸರಕಾರದವರು ತೆಗೆದು ಹಾಕುವುದಾಗಿ ನಿರ್ಧಾರ ಮಾಡಿದ್ದಾರೆ. ಕಂಟ್ರೋಲು ತೆಗೆದರೆ ಕ್ರಯಗಳು ವಿಪರೀತ ಏರಬಹುದೆಂಬ ಹೆದರಿಕೆ ಸಾಮಾನ್ಯವಾಗಿ ಎಲ್ಲ ಬಡವರಲ್ಲಿಯೂ ಈಗ ಇರುತ್ತದೆ. ಈ ಹೆದರಿಕೆಯು ನಿರಾಧಾರವಾದುದೂ ಅಲ್ಲ ಬಟ್ಟೆಯ ಕಂಟ್ರೋಲು ತೆಗೆದುದರ ಪರಿಣಾಮ ನಾವು ನೋಡಿದ್ದೇವೆ. ಹೀಗೆ ಕಂಟ್ರೋಲು ಇಟ್ಟರೂ ತೊಂದರೆ, ತೆಗೆದರೂ ತೊಂದರೆಯೆಂಬ ಪರಿಸ್ಥಿತಿ ನಮ್ಮ ಮುಂದಿರುತ್ತದೆ

ಕಂಟ್ರೋಲು ತೆಗೆದು ಹಾಕಿ ಕ್ರಯ ಏರದಂತೆ ಮಾಡುವ ಉಪಾಯವಿದ್ದರೆ ಅದು ಉತ್ತಮ ದಾರಿಯೆಂಬುದು ನಿರ್ವಿವಾದ.

ಕ್ರಯಗಳು ಏರದಂತಾಗಬೇಕಾದರೆ ನ್ಯಾಯವಾದ ಕ್ರಯಕ್ಕೆ ಆಹಾರ ಧಾನ್ಯಗಳನ್ನು ಒದಗಿಸಲು ಸರಕಾರದವರು ಸಾಕಷ್ಟು ಪ್ರಮಾಣದಲ್ಲಿ ಏರ್ಪಡಿಸಬೇಕು.

ಇದಕ್ಕೆ ಬೇಕಾಗುವ ಅಕ್ಕಿಯನ್ನು ಪ್ರೊಕ್ಯೂರ್‌ಮೆಂಟು ಪದ್ಧತಿಯಿಂದ ಶೇಖರಿಸುವುದರ ಹಾವಳಿ ನಾವು ಕಂಡಿದ್ದೇವೆ ಮಾತ್ರವಲ್ಲ ರೈತರಿಂದ ಕಂದಾಯಕ್ಕೆ ಹಣ ಪಡೆದು ಆ ಹಣ ಅವರಿಗೆ ಕೊಟ್ಟು ಪುನಃ ಅವರಿಂದ ಆಹಾರ ಧಾನ್ಯ ಪಡೆಯಲು ಹೋಗುವ ಸುತ್ತು ದಾರಿಯಲ್ಲಿ ಹೋಗುವುದು ಅನಾವಶ್ಯಕ. ಕಂದಾಯವನ್ನೇ ಧಾನ್ಯ ರೂಪದಲ್ಲಿ ವಸೂಲು ಮಾಡಿದರೆ ಹೇಗೆ?

ಸರಕಾರ ಧಾನ್ಯ ಪಡೆದು ದಾಸ್ತಾನಿಟ್ಟುಕೊಂಡು ಯೋಗ್ಯ ವಿತರಣೆಯ ಏರ್ಪಾಡು ಮಾಡಲು ಈಗಂತೂ ಅಭ್ಯಾಸ ಮಾಡಿಕೊಂಡಿರುತ್ತದೆ. ಈ ಏರ್ಪಾಡುಗಳನ್ನು ಸ್ವಲ್ಪ ಸಮಯ ಕಾಯಮಾಗಿಟ್ಟುಕೊಂಡು ಕಂದಾಯ ವಸೂಲಿಯನ್ನು ಧಾನ್ಯ ರೂಪದಲ್ಲಿ ಮಾಡುವುದು ಪೂರ್ಣ ವ್ಯವಹಾರ್ಯವೇ ಇದೆ ಎಂಬುದಕ್ಕೆ ಈಗ ಸಂಶಯ ಪಡಲು ಕಾರಣವಿಲ್ಲ.

ಟೀಕೆ-ಟಿಪ್ಪಣಿಗಳು

ಸಂಯುಕ್ತ ರಾಷ್ಟ್ರ ಸಭೆಗೆ ಹೈದರಾಬಾದಿನ ದೂರು

ಹೈದರಾಬಾದು ಸರಕಾರದವರು ಭಾರತ ಸರಕಾರದ ಮೇಲೆ ದೂರು ಹೊರಿಸಿ ಈ ಪ್ರಶ್ನೆಯ ತೀರ್ಮಾನದ ಮಧ್ಯಸ್ಥಿಕೆ ಸಂಯುಕ್ತ ರಾಷ್ಟ್ರ ಸಭೆ ವಹಿಸಬೇಕೆಂದೂ ಇಲ್ಲದಿದ್ದರೆ ಇದರಿಂದ ಅಂತರ್‌ರಾಷ್ಟ್ರೀಯ ಶಾಂತಿ ಭಂಗದ ಸಂಭವವಿದೆಯೆಂದೂ ಈ ರೀತಿ ದೂರು ಕೊಡಲು ಹೈದರಾಬಾದಿಗೆ ಅರ್ಹತೆ ಇದೆಯೆಂದೂ ವಾದಿಸಿ ಆ ಸರಕಾರದ ಪರವಾಗಿ ಕಳುಹಿಸಲಾದ ಪತ್ರವು ಸಂಯುಕ್ತ ರಾಷ್ಟ್ರ ಸಭೆಯ ಅಧ್ಯಕ್ಷರಿಗೆ ತಲುಪಿದೆಯಂತೆ ಈ ಕುರಿತು ಅಲ್ಲಿರುವ ಭಾರತ ಸರಕಾರದ ಪ್ರತಿನಿಧಿಯವರು ಒಂದು ಹೇಳಿಕೆಯನ್ನು ಪ್ರಕಟಿಸಿರುತ್ತಾರೆ ಇದರಲ್ಲಿ ಹೈದರಾಬಾದು ಸ್ವತಂತ್ರ ರಾಷ್ಟ್ರವಲ್ಲವೆಂದೂ ಇದರ ಪರಕೀಯ ಧೋರಣೆಯನ್ನು ಭಾರತ ಸರಕಾರಕ್ಕೆ ಒಪ್ಪಿಸಿ ಮಾಡಿದ ಒಡಂಬಡಿಕೆ ಜಾರಿಯಲ್ಲಿದೆಯೆಂದೂ ಈ ರೀತಿ ಸಂಯುಕ್ತ ರಾಷ್ಟ್ರ ಸಭೆಗೆ ದೂರು ಕೊಡುವ ಅರ್ಹತೆ ಹೈದರಾಬಾದು ಸರಕಾರಕ್ಕೆ ಇಲ್ಲವೆಂದೂ ಹೇಳಲಾಗಿದೆ.

ಇತ್ತ ಹೈದರಾಬಾದಿನಲ್ಲಿ ರಜಾಕರ ಮೊದಲಾದವರ ಉಪಟಳವೇನೂ ಕಡಮೆಯಾಗಿಲ್ಲ ಭಾರತ ಸರಕಾರಕ್ಕೆ ಸೇರಬೇಕೆಂದು ಸೂಚಿಸಿದ ಮಾಜಿ ಸರಕಾರೀ ನೌಕರರ ಪೆನ್‌ಶನ್ ನಿಲ್ಲಿಸಲಾಗಿದೆ ಮಾತ್ರವಲ್ಲ ಅವರನ್ನು ಕೈದು ಮಾಡಲಾಗಿದೆ. ಭಾರತ ಸರಕಾರದೊಡನೆ ರಾಜಿ ಮಾಡಬೇಕೆಂಬ ಪ್ರಚಾರ ಮಾಡಿದ ಹೈದರಾಬಾದಿನ ದೈನಿಕ ಪತ್ರಿಕೆಯೊಂದರ ಮುಸ್ಲಿಂ ಸಂಪಾದಕರನ್ನು ಕೊಲೆ ಮಾಡಿದರು ಇತರ ಸಂಪಾದಕರಿಗೂ ಇದೇ ರೀತಿ ಮಾಡುವೆವೆಂದು ಹೆದರಿಸುತ್ತಿದ್ದಾರೆ

ಸಂಸ್ಥಾನದಲ್ಲಿಯ ಸುಮಾರು ೩೦೦ ಗ್ರಾಮುಗಳು ತಮ್ಮ ಸ್ವಾತಂತ್ರ್ಯವನ್ನು ಸಾರಿದರೆಂದು ತಿಳಿದು ಬರುತ್ತದೆ

ಈಗ ಹಣದ ಬೆಲೆ ಬಹಳ ಕಡಮೆಯೆಂಬುದು ಎಲ್ಲರಿಗೂ ಅರ್ಥವಾಗುತ್ತಿದೆ ಈ ಕಡಮೆ ಬೆಲೆಯ ಹಣದ ರೂಪದಲ್ಲಿ ಕಂದಾಯ ವಸೂಲಿ ಮಾಡುವುದರಿಂದ ಸರಕಾರ ಕೂಡಾ ಸಿಜವಾಗಿ ದಿವಾಳಿಯಾಗುವ ಸಂಭವವೇ ಹೆಚ್ಚು

ಹಿಂದೆ ಒಂದು ನೂರು ರೂಪಾಯಿ ತೀರ್ವೆ ವಸೂಲು ಮಾಡುವವನಿಂದ ಈಗ ಒಂದು ನೂರೇ ರೂಪಾಯಿ ವಸೂಲು ಮಾಡುವುದರಿಂದ ಸರಕಾರಕ್ಕೆ ಎಷ್ಟು ನಷ್ಟವಿದೆಯೆಂದು ತಿಳಿಯಲು ಕಷ್ಟವಿಲ್ಲ ಹಿಂದಿನ ಒಂದು ನೂರು ರೂಪಾಯಿಗಳಿಗೆ ಕಡಮೆಯೆಂದರೆ ೨೦ ಮುಡಿ ಅಕ್ಕಿಯ ಬೆಲೆ ಇತ್ತು ಈಗಿನ್ನ ಒಂದು ನೂರು ರೂಪಾಯಿಗಳೆಂದರೆ ಹೆಚ್ಚೆಂದರೆ ೧೦ ಮುಡಿ ಅಕ್ಕಿ ಮಾತ್ರ ಸರಕಾರಕ್ಕೆ ಇದರಲ್ಲಿ ಅರ್ಧಕ್ಕರ್ಧ ನಷ್ಟವಾಗುತ್ತಿದೆ

ಒಂದು ನೂರು ರೂಪಾಯಿ ತೀರ್ವೆ ಕೊಡುವವರಿಂದ ೨೦ ಮುಡಿಯೋ ಅಲ್ಲದಿದ್ದರೆ ೧೫ ಮುಡಿ ಅಕ್ಕಿಯನ್ನಾದರೂ ವಸೂಲು ಮಾಡಿ ನಂತೆ ಅಕ್ಕಿಯ ದರ ಇಟ್ಟುಕೊಂಡು ಸರಕಾರದವರು ತಮ್ಮ ಕಂದಾಯವನ್ನು ಧಾನ್ಯದ ರೂಪದಲ್ಲಿಯೇ ವಸೂಲು ಮಾಡಿದರೆ ಸರಕಾರಕ್ಕೂ ಲಾಭವುಂಟು

ಈ ದಾರಿಯಿಂದ ಧಾನ್ಯದ ಕ್ರಯ ಹಿಡಿತದಲ್ಲಿಟ್ಟುಕೊಳ್ಳಲಿಕ್ಕೆ ಸಾಧ್ಯವುಂಟೆಂಬುದರಿಂದ ಈಗಿನ ಕಂಟ್ರೋಲು ಪದ್ಧತಿ ತೆಗೆದು ಹಾಕಿ ಅದರ ಬದಲು ಈ ಹೊಸ ಪದ್ಧತಿ ಜಾರಿಗೆ ತರುವುದು ಹಿತಕರವೆಂಬ ಸೂಚನೆ ಬಹಳ ಉಪಯುಕ್ತವಿರುತ್ತದೆ

ಕ್ರಯಗಳನ್ನು ಹಿಡಿತದಲ್ಲಿರಿಸಲು ಯಾವ ಏರ್ಪಾಡೂ ಇಲ್ಲದೆ ಕಂಟ್ರೋಲು ತೆಗೆದು ಹಾಕುವುದರಲ್ಲಿ ತುಂಬಾ ಗಂಡಾಂತರವುಂಟೆಂಬುದನ್ನು ಚೆನ್ನಾಗಿ ಯೋಚಿಸಿ ವರ್ತಿಸುವುದು ಅಗತ್ಯ.

ನಮ್ಮ ಶಾಸನ ಸಭಾಸದರೂ ಮಂತ್ರಿಗಳೂ ಈ ಸೂಚನೆಯನ್ನು ಚೆನ್ನಾಗಿ ಪರಿಶೀಲಿಸಬೇಕಾಗಿ ನಾವು ಅತ್ಯಾಗ್ರಹದಿಂದ ಕೋರುತ್ತೇವೆ.

ಕಾಶ್ಮೀರ ಮತ್ತು ಸಂಯುಕ್ತ ರಾಷ್ಟ್ರ ಸಭೆ

ಕಾಶ್ಮೀರ ಪರಿಸ್ಥಿತಿಯ ವಿಚಾರಣೆಗಾಗಿ ಬಂದ ಕಮಿಶನನವರು ಇತ್ತಂಡದವರು ಯುದ್ಧ ನಿಲ್ಲಿಸಬೇಕೆಂಬ ತಮ್ಮ ಸೂಚನೆಗಳನ್ನು ಉಭಯಿತರಿಗೂ ಕೊಟ್ಟಿರುವರಷ್ಟೆ ಅತ್ತಲಾಗಿಂದ ಈ ರೀತಿ ಯುದ್ಧ ನಿಲ್ಲಿಸಿದುದನ್ನು ಪರಿಶೀಲಿಸಲು ೨೦ ಮಂದಿಯಷ್ಟಾದರೂ ದಕ್ಷತೆಯುಳ್ಳ ಪರಿಶೀಲಕರನ್ನು ಇಲ್ಲಿಗೆ ಕಳುಹಿಸಲು ಸಿದ್ಧತೆ ಮಾಡಬೇಕಾಗಿ ಈ ಕಮಿಶನದವರ ಸಂಯುಕ್ತ ರಾಷ್ಟ್ರ ಸಭೆಯ ಅಧ್ಯಕ್ಷರನ್ನು ಕೇಳಿಕೊಂಡಿರುವರಂತೆ ಯುದ್ಧ ನಿಲ್ಲಿಸಲು ಇಲ್ಲ ಸಂಬಂಧಪಟ್ಟ ಸರಕಾರಗಳ ಒಪ್ಪಿಗೆಯಾಗುವ ಮೊದಲೇ ಮುಂದಿನ ಸಿದ್ಧತೆಗೆ ಹೋದ ಈ ಕಮಿಶನದವರು ಬಹಳ ಮುಂದಾಲೋಚನೆಯವರೆಂಬುದಂತೂ ಇದರಿಂದ ಸ್ಪಷ್ಟವಾಗುತ್ತಿದೆ

ಅರಾಬ ಲೀಗಿನ ದೌರ್ಬಲ್ಯ

ಅರಬರ ಏಳು ರಾಷ್ಟ್ರಗಳಿಂದ ಕೂಡಿದ ಈ ಲೀಗು ಪೆಲೆಸ್ತ್ಯಾನಿನ ಅರಬರ ಬಗ್ಗೆ ತಾವು ಯುದ್ಧ ಹೂಡುವುದಾಗಿಯೂ ವಿರೋಧಿಗಳಾದ ಯಹೂದಿಯರಿಗೆ ಬ್ರಿಟನ್ ಅಮೇರಿಕಗಳು ಸಹಾಯ ಮಾಡಿದರೆ ಈ ರಾಷ್ಟ್ರಗಳ ಮೇಲೆ ಆರ್ಥಿಕ ಬಹಿಷ್ಕಾರ ಹೂಡುವುದಾಗಿಯೂ ಸಾರಿದ್ದಿತು ಆದರೆ ಕಾರ್ಯಕ್ಕೆ ಬರುವಾಗ ಇಷ್ಟನ್ನು ಸಾಧಿಸುವುದು ಈ ರಾಷ್ಟ್ರಗಳಿಗೆ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತಿದೆ ಯುದ್ಧದಲ್ಲಿ ಇವರು ಬಹಳ ಯಶಸ್ವಿಯಾಗಲಿಲ್ಲ ಅಮೇರಿಕ ಬ್ರಿಟನುಗಳ ಹಂಗಿನಿಂದ ಇವರು ಬಿಡುಗಡೆ ಹೊಂದುವ ಪರಿಸ್ಥಿತಿಯಲ್ಲಿಯೂ ಇಲ್ಲವೆಂಬುದು ಈಗ ಸ್ಪಷ್ಟವಾಗಹತ್ತಿದೆ

ಇಸ್ರಯೇಲ್ ರಾಷ್ಟ್ರವು ಸ್ಥಿರವಾಗುವ ಲಕ್ಷಣಗಳೇ ಈಗ ಹೆಚ್ಚೆಂದು ಕಾಣುತ್ತದೆ.

ದಕ್ಷಿಣ ಆಫ್ರಿಕ ಹಿಂದೀಯರ ವಿನಂತಿ

ಬರುವ ತಿಂಗಳಲ್ಲಿ ಸಂಯುಕ್ತ ರಾಷ್ಟ್ರ ಸಭೆಯ ಮಹಾ ಸಭೆ ಪೆರೀಸ್ ನಗರದಲ್ಲಿ ಸೇರಲಿದ್ದು ಅದರ ಮುಂದೆ ದಕ್ಷಿಣ ಆಫ್ರಿಕದ ಹಿಂದೀಯರ ಪ್ರಶ್ನೆಯೂ ಬರಲಿದೆ. ಈ ಸಂದರ್ಭದಲ್ಲಿ ಭಾರತ ಸರಕಾರದ ಕಡೆಯಿಂದ ಸ್ವತಃ ಪಂಡಿತ ಜವಾಹರಲಾಲರೇ ಈ ಸಭೆಗೆ ಹೋಗಬೇಕೆಂದು ದಕ್ಷಿಣ ಆಫ್ರಿಕದ ಹಿಂದೀಯರು ವಿನಂತಿ ಮಾಡಿಕೊಂಡಿದ್ದಾರೆ. ಇಲ್ಲಿಯ ಪರಿಸ್ಥಿತಿ ಅನುಕೂಲ ಮಾಡಿ ಕೊಟ್ಟರೆ ನಮ್ಮ ಪ್ರಧಾನ ಸಚಿವರು ಈ ವಿನಂತಿಯನ್ನು ಮನ್ನಿಸುವ ಸಂಭವವಿರುತ್ತದೆ ಇವರು ಸ್ವತಃ ಹೋದರೆ ಸಂಯುಕ್ತ ರಾಷ್ಟ್ರ ಸಭೆಯ ಮೇಲೆ ಇದರಿಂದ ಸಾಕಷ್ಟು ಪರಿಣಾಮ ಆಗಲಿ ಆಗದಿರಲಿ ಪಂಡಿತ ಜವಾಹರಲಾಲರಿಗಾದರೂ ಸಂಯುಕ್ತ ರಾಷ್ಟ್ರ ಸಭೆಯ ಸರಿಯಾದ ಪರಿಚಯವಾಗುವುದರಲ್ಲಿ ಸಂಶಯವಿಲ್ಲವಷ್ಟೆ?

ರಶ್ಯಾ ಅಮೇರಿಕ — ಪರಸ್ಪರ ರಾಯಭಾರಿಗಳ ಮುಕ್ತಾಯ

ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ರಶ್ಯದ ಉಪಾಧ್ಯಾಯಿನಿಯೊಬ್ಬಳು ತನ್ನ ದೇಶದ ರಾಯಭಾರಿ ವಸತಿಯ ಉಪ್ಪರಿಗೆಯ ಕಿಟಿಕಿಯಿಂದ ಕೆಳಕ್ಕೆ ಹಾರಿದಳು ಇವಳನ್ನು ಅಮೇರಿಕನ್ ಸರಕಾರ ಸ್ವಾಧೀನ ಪಡಿಸಿಕೊಂಡು ಇಟ್ಟಿರುತ್ತದೆ ಆಕೆಗೆ ರಶ್ಯಕ್ಕೆ ಹೋಗಲು ಇಷ್ಟವಿಲ್ಲದಿದ್ದರೂ ರಶ್ಯ ರಾಯಭಾರಿ ಬಲಾತ್ಕಾರ ಪಡಿಸುತ್ತಿದ್ದರಂತೆ ಬಲಾತ್ಕಾರದಿಂದ ಒಂದು ಹೇಳಿಕೆ ಪ್ರಕಟಿಸಲೆತ್ನಿಸಿದ್ದಕ್ಕೆ ಅವಳು ಕೆಳಕ್ಕೆ ಹಾರಿದ್ದಂತೆ ಈ ಘಟನೆಯಲ್ಲಿ ಆ ರಾಯಭಾರಿಯ ವರ್ತನೆ ಅಮೇರಿಕದ ಸರಕಾರಕ್ಕೆ ಸರಿಕಾಣದೆ ಅವನನ್ನು ಹಿಂದೆ ಕರೆಯಬೇಕೆಂದು ರಶ್ಯ ಸರಕಾರಕ್ಕೆ ತಿಳಿಸಲಾಯಿತು ಅವನನ್ನು ದೇಶದಿಂದ ಹೊರಗೆ ಹಾಕುವರು. ರಶ್ಯದವರಾದರೂ ತಮ್ಮಲ್ಲಿದ್ದ ಅಮೇರಿಕನ್ ರಾಯಭಾರಿಯ ಹೊರ ಹೋಗುವಂತೆ ಆಜ್ಞೆ ಕೊಟ್ಟಿರುವುದಾಗಿ ತಿಳಿದು ಬರುತ್ತದೆ

ಪ್ರಾಂತ್ಯದ ಉಳಿದೆಡೆಗಳಲ್ಲಿ ಮದ್ಯ ನಿರೋಧ

ಇದುವರೆಗೆ ಮದ್ಯ ನಿರೋಧ ಜಾರಿಯಾಗದ ೯ಂಟು ಜಿಲ್ಲೆಗಳಲ್ಲಿ ಹಾಗೂ ಮದ್ರಾಸು ನಗರದಲ್ಲಿ ಇದೇ ಬರುವ ಅಕ್ಟೋಬರ ತಾ ೧ರಿಂದ ಮದ್ಯ ನಿರೋಧ ಕಾನೂನನ್ನು ಜಾರಿಗೆ ತರುವುದಾಗಿ ನಿರ್ಣಯವಾಗಿರುತ್ತದೆ ಇದನ್ನು ಕೆಲವು ಸಮಯ ಮುಂದರಿಸಬೇಕೆಂಬ ಸೂಚನೆಗೆ ಬೆಂಬಲ ಸಿಕ್ಕಿಲ್ಲ ಈ ಬಗ್ಗೆ ಮದ್ರಾಸಿನ ಕಾಂಗ್ರೆಸ್ ಪಕ್ಷದ ಶಾಸನ ಸಭಾಸದರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ

ಬೇಳ

ಸ್ಥಳೀಯ ರೂರಲ್ ವೆಲ್‌ಫೇರ್ ಆಫೀಸರವರ ನೇತೃತ್ವದಲ್ಲಿ ತಾ, ೧೮-೮-೧೯೪೮ರಲ್ಲು ಒಂದು ಗ್ರಾಮ ಸಂಘ ಸ್ಥಾಪಿತವಾಗಿದೆ ಅದರಲ್ಲಿ ಶ್ರೀಗಳಾದ ಕೆ ಕೇಶವ ಭಟ್ಟರು (ಅಧ್ಯಕ್ಷರು) ಕೊರಗ ಶೆಟ್ಟರು (ಉಪಾಧ್ಯಕ್ಷರು) ಪಿ ಮಹಾಲಿಂಗ ಭಟ್ಟರು (ಕಾರ್ಯದರ್ಶಿಗಳು) ಬಿ ಮಹಾಲಿಂಗ ಭಟ್ಟರು, ಕುಳ್ಳಂಬೆಟ್ಟು ಕೃಷ್ಣ ಭಟ್ಟರು, ಅಬ್ಬಾಸ್ ಬ್ಯಾರಿ, ಯಂ ವೆಂಕಪ್ಪ ಭಟ್ಟರು, ಬಿ ಶಂಕರ ನಾರಾಯಣ ಭಟ್ಟರು, ಥೋಮಸ್ ಶಾಸ್ತ್ರರು, ಮೊದಲಾದವರು ಸದಸ್ಯರಿರುವರು

ಗವರ್ನರ ಜನರಲರ ದಕ್ಷಿಣ ಭಾರತ ಪ್ರವಾಸ

ರಾಜಾಜಿಯವರ ಹಿತೋಕ್ತಿ ಸಂಗ್ರಹ

ಭಾರತದ ಗವರ್ನರ ಜನರಲ್ ಶ್ರೀ ರಾಜಗೋಪಾಲಾಚಾರ್ಯರವರು ಮೈಸೂರು ಬೆಂಗಳೂರುಗಳನ್ನು ಸಂದರ್ಶಿಸಿ ಕೊಚ್ಚಿಯಲ್ಲಿ ಹೊಸ ಮಹಾರಾಜರ ಪಟ್ಟಾಭಿಷೇಕದ ಸಮಯ ಹಾಜರಿದ್ದು ಅಲ್ಲಿಂದ ತಿರುವಾಂಕೂರಿಗೆ ಹೋಗಿ ಇದನ್ನು ಬರೆವಾಗ ತಿರುವಾಂಕೂರಿನಲ್ಲಿರುವರು ಅವರು ಈ ದಕ್ಷಿಣ ಭಾರತ ಪ್ರವಾಸದಲ್ಲಿ ಇದುತನಕ ಮಾಡಿರುವ ಭಾಷಣಗಳಿಂದ ಈ ಕೆಳಗಿನ ಕೆಲವು ಹಿತೋಕ್ತಿಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ

ಸ್ವಾತಂತ್ರ್ಯದ ಅರ್ಥ

ಸ್ವಾತಂತ್ರ್ಯವೆಂದರೆ ರಾತ್ರಿ ಕಳೆದು ಬೆಳಗಾದಂತೆ ನಮ್ಮ ನಮ್ಮ ಕೆಲಸಗಳಲ್ಲಿ ನಿರತರಾಗಿರಲು ಇದು ಒಂದು ಸಂದರ್ಭವನ್ನು ಒದಗಿಸುತ್ತಿದೆ ಸ್ವಾತಂತ್ರ್ಯವು ಪ್ರಜೆಗಳ ಸುಖ ಜೀವನವನ್ನು ಸಾಧಿಸಲು ಅನುಕೂಲ ಸಂದರ್ಭ ಮಾತ್ರವೆಂಬುದನ್ನು ತಿಳಿದುಕೊಳ್ಳಬೇಕು

ಪ್ರಜಾಸತ್ತಾತ್ಮಕ ಪದ್ಧತಿ

ಈ ದೇಶದಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಸ್ಥಾಪಿಸಲು ಹಲವು ವರ್ಷಗಳಿಂದ ಹೋರಾಡಿದೆವು ಈ ಪದ್ಧತಿಯಿಂದ ಜನರು ಸುಖಿಗಳಾಗಿ ಬಾಳುವಂತೆ ಮಾಡುವುದು ಸಾಧ್ಯವೆಂದು ತೋರಿಸುವುದು ಪ್ರಜೆಗಳ ಜವಾಬ್ದಾರಿಯೂ ಇರುತ್ತದೆ ಸರಕಾರಗಳು ಮತ್ತು ಪ್ರಜೆಗಳು ಪರಸ್ಪರ ಸಹಕರಿಸಿ ನಡೆದರೆ ಮಾತ್ರ ಈ ಪದ್ಧತಿ ಯಶಸ್ವಿಯಾಗಬಲ್ಲುದು

ಅಧಿಕಾರ ಸ್ಥಾನಗಳು

ನಮಗೆ ಸ್ವಾತಂತ್ರ್ಯ ಸಿಕ್ಕಿರುತ್ತದೆ ಅಧಿಕಾರದ ಸ್ಥಾನಗಳಲ್ಲಿ ನಮ್ಮವರನ್ನೇ ನೇಮಿಸುತ್ತಿದ್ದೇವೆ ಆದರೆ ಎಲ್ಲರಿಗೂ ಇಂಥ ಸ್ಥಾನಗಳನ್ನು ಕೊಡಲು ಸಾಧ್ಯವಿಲ್ಲ ಇಂಥವರೇ ಆ ಸ್ಥಾನಗಳಲ್ಲಿ ಏಕಿರಬೇಕು? ನಾವೇಕೆ ಇರಬಾರದು ಎಂದು ಅಸೂಯೆಗೆ ಆಸ್ಪದ ಕೊಡುವುದು ಸರಿಯಿಲ್ಲ

ಮಂತ್ರಿ ಮತ್ತು ಮಂತ್ರಿಮಂಡಲಗಳು

ಮಂತ್ರಿಗಳೆಂದರೆ ಗಾಡಿಗೆ ಕಟ್ಟಿದ ಎತ್ತುಗಳಂತೆ ಎತ್ತು ಹಿಂದೆ ಗಾಡಿ ಹೊಡೆಯುವವನ ಬಾರಕೋಲಿನ ಕಡೆಗೂ ಮುಂದೆ ತಾನು ಹೋಗಲಿರುವ ದಾರಿಯ ಕಡೆಗೂ ಏಕಕಾಲದಲ್ಲಿ ಗಮನಕೊಟ್ಟು ಒಂದು ಬಗೆಯ ಅಷ್ಟಾವಧಾನವನ್ನೇ ಆಚರಿಸುತ್ತಿದೆ ಮಂತ್ರಿಯಾದರೂ ತಾನು ನಡೆಯಬೇಕಾದ ದಾರಿ ಹಾಗೂ ಸಾರ್ವಜನಿಕ ಅಭಿಪ್ರಾಯ ವ್ಯಕ್ತಗೊಳಿಸುವ ಪತ್ರಿಕೆಗಳ ಟೀಕೆಯ ಬಾರಕೋಲು ಇವೆರಡರ ಕಡೆಗೂ ಗಮನ ಕೊಟ್ಟು ಅಷ್ಟಾವಧಾನ ಸಾಧಿಸಬೇಕಾಗುತ್ತದೆ

ಎತ್ತು ನಾಲ್ಕು ಕಾಲುಗಳಿಂದ ನಡೆಯಬೇಕು ಎರಡು ಕಾಲುಗಳಿಂದ ನಡೆಯುವುದಕ್ಕಿಂತ ಇದು ಹೆಚ್ಚು ಕಷ್ಟ ನಾಲ್ಕು ಕಾಲುಗಳೂ ಸಮನ್ವಯದಿಂದ ವರ್ತಿಸಬೇಕಾಗುತ್ತದೆ ಮಂತ್ರಿಮಂಡಲವೆಂದರೆ ಅನೇಕ ಕಾಲುಗಳ ಪ್ರಾಣಿ ಅದು ನಡೆಯುವುದು ಎಷ್ಟು ಕಷ್ಟವೆಂದು ಊಹಿಸಬಹುದು.

ಸರಕಾರಕ್ಕೆ ಸಾಕಷ್ಟು ಅವಕಾಶ ಕೊಡಬೇಕು.

ನಮ್ಮವರ ಸರಕಾರ ಸ್ಥಾಪಿಸಿದ್ದೇವೆ ಇವರು ಎಷ್ಟು ಜನಹಿತ ಸಾಧಿಸಿದರೆಂದು ಈಗಲೇ ಪ್ರಶ್ನಿಸುವುದು ಸರಿಯಲ್ಲ ಅವಕಾಶ ಕೊಡಬೇಕು ಒಂದು ಪುಸ್ತಕ ಬ್ಯಾಂಡು ಮಾಡಿ ಹಚ್ಚಿದ ಅಂಟು ಒಣಗಲು ಅವಕಾಶ ಕೊಡಬೇಡವೆ? ಕೂಡಲೇ ಅದನ್ನು ತೆರೆದರೆ ಹಾಳೆಗಳು ಬೀಳುವವು ಒಂದು ಸಸಿಯನ್ನು ನೆಟ್ಟು ಅದು ಬೇರು ಬಿಟ್ಟಿತೆ ಎಂದು ಆಗಾಗ ಕಿತ್ತು ನೋಡಿದರೆ ಹೇಗೆ?

ರಾಜ ಭಕ್ತಿ

ಮೈಸೂರವರು ತಮ್ಮ ರಾಜರಲ್ಲಿ ಅದೇ ರೀತಿ ಭಾರತದ ಪ್ರಜೆಗಳು ತಮ್ಮ ಗವರ್ನರ ಜನರಲರಲ್ಲಿ ರಾಜಭಕ್ತಿ ಇಡುವುದು ಅಗತ್ಯ ಈ ಹುದ್ದೆಗಳು ರಾಷ್ಟ್ರದ ಸಂಕೇತವಾಗಿ ಇವೆ ಈ ಹುದ್ದೆಯುಳ್ಳರ ಪರವಾಗಿ ಅಧಿಕಾರಗಳಿಲ್ಲದಿರುವುದೇ ಲೇಸು ಅಮೇರಿಕದ ಪ್ರೆಸಿಡೆಂಟರಿಗೆ ತುಂಬಾ ಅಧಿಕಾರಗಳಿವೆ ಆದುದರಿಂದ ಅವರನ್ನು ಜನರು ದೂರುವವರೂ ಇದ್ದಾರೆ ಇಂಗ್ಲಾಂಡಿನ ಅರಸರಿಗೆ ಯಾವ ಅಧಿಕಾರಗಳೂ ಇಲ್ಲ ಇವರನ್ನು ಯಾರೂ ದೂರುವುದಿಲ್ಲ ಮಾತ್ರವಲ್ಲ ಎಲ್ಲರೂ ಇವರಲ್ಲಿ ಭಕ್ತಿ ಇಡುತ್ತಾರೆ

ಮಣ್ಣಿನಿಂದ ಶ್ರೀ ಗಣೇಶನ ವಿಗ್ರಹ ಮಾಡುತ್ತೇವೆ ಗಣೇಶ ವಿಗ್ರಹವಾಗಿರುವಾಗ ಆ ಮಣ್ಣನ್ನು ನಾವು ಪೂಜಿಸುತ್ತೇವೆ ಅದೇ ರೀತಿ ಸಾಮಾನ್ಯ ವ್ಯಕ್ತಿಯೊಬ್ಬನನ್ನು ಒಂದು ಗವರ್ನರ್ ಪದವಿಗೆ ಏರಿಸಿದಾಗ ಆ ಪದವಿಯಲ್ಲಿರುವ ತನಕ ಅವನಿಗೆ ಯೋಗ್ಯ ಗೌರವ ತೋರುವುದೇ ಯುಕ್ತವಾಗುತ್ತದೆ

ಸ್ವತಂತ್ರ ಭಾರತದ ಸತತ ಸ್ಮರಣೆ

ಈಗ ನಾವು ಸ್ವತಂತ್ರ ಭಾರತದಲ್ಲಿದ್ದೇವೆಂದ ಪ್ರತಿಯೊಬ್ಬರೂ ಯಾವಾಗಲೂ ಸ್ಮರಣೆಯಲ್ಲಿಟ್ಟುಕೊಂಡ ವರ್ತಿಸಬೇಕು ಪ್ರತಿಯೊಂದು ಬಗೆಯ ಕಾರ್ಯ ಸ್ವತಂತ್ರ ಭಾರತಕ್ಕಾಗಿ ಮಾಡುತ್ತಿದ್ದೇವೆಂದು ತಿಳಿಯಬೇಕು ವ್ಯಾಪಾರಿಯು ಈಗ ವ್ಯಾಪಾರದಲ್ಲಿ ಮೋಸಮಾಡಲಾರನು? ಅವನು ಹಾಗೆ ಮಾಡಿದರೆ ಸ್ವತಂತ್ರ ಭಾರತಕ್ಕೆ ಮೋಸಮಾಡಿದಂತಾಗುತ್ತದೆ ಇದೇ ರೀತಿ ಎಲ್ಲರೂ ಹಿಂದಿಗಿಂತ ಉತ್ತಮ ರೀತಿಯಲ್ಲಿ ವರ್ತಿಸಬೇಕು

ಹಿಂದೂ ಮುಸ್ಲೀಮ ಸ್ನೇಹದ ದಾರಿಯೇ ನಿಜವಾದ ರಾಜಕೀಯ ಮುತ್ಸದ್ದಿತನ

ಭಾರತದ ಇಂದಿನ ಗವರ್ನರ ಜನರಲ್, ಈ ಮೊದಲಿನ ಗವರ್ನರ ಜನರಲರಾದ ಲಾರ್ಡ ಮೌಂಟ್ ಬೇಟನರು ಹಾಗೂ ಭಾರತದ ಪ್ರೀತಿಪಾತ್ರರಿರುವ ಪ್ರಧಾನ ಸಚಿವ ಪಂಡಿತ ಜವಾಹರಲಾಲ ಮೂರು ಮಂದಿಯೂ ಮಹಾತ್ಮಾ ಗಾಂಧಿಯವರು ತಮ್ಮೆಲ್ಲರಿಂದ ಶ್ರೇಷ್ಠ ರಾಜಕೀಯ ಮುತ್ಸದ್ದಿ ಇದ್ದರೆಂದು ಒಪ್ಪಿಕೊಳ್ಳುವುದರಲ್ಲಿ ಸಂಶಯವಿಲ್ಲ ಹಿಂದು ಮುಸ್ಲಿಮರೊಳಗೆ ಪರಸ್ಪರ ಪ್ರೇಮ ಬೆಳೆಸುವುದೇ ಮುಂದಿನ ಸಮಸ್ಯೆಗಳನ್ನು ಬಗೆಹರಿಸಲು ಇರುವ ದಾರಿಯೆಂಬ ಮಾತು ಅತ್ಯಂತ ಶ್ರೇಷ್ಠ ರಾಜಕೀಯ ಮುತ್ಸದ್ದಿತನದ ದಾರಿ ಇರುತ್ತದೆ

ಮಹಾತ್ಮಾ ಗಾಂಧಿ ಸ್ಮಾರಕ

ಈ ಜನಾಂಗದ ಜೀವನವನ್ನು ಮಹಾತ್ಮಾ ಗಾಂಧಿಯವರ ಉಪದೇಶಗಳಿಗನುಗುಣವಾಗಿ ರೂಪಿಸಿದರೆ ಮಾತ್ರ ಅವರಿಗೆ ನಿಜವಾದ ಸ್ಮಾರಕ ರಚಿಸಿದಂತಾಗುವುದು

ಪ್ರತಿಯೊಬ್ಬರೂ ಪ್ರತಿಯೊಂದು ಕೆಲಸದಲ್ಲಿ ಗಾಂಧಿಯವರು ಈ ಕುರಿತು ತಾನು ಹೇಗೆ ವರ್ತಿಸಬೇಕೆಂದು ಸೂಚಿಸುತ್ತಿದ್ದರೆಂದು ಊಹಿಸಿಕೊಳ್ಳುವುದು ಕಷ್ಟವಿಲ್ಲ ಅದಕ್ಕೆ ಸರಿಯಾಗಿ ನಾವು ನಡದರೆ ಗಾಂಧಿಯವರನ್ನು ನಾವು ಜೀವಂತ ಇಟ್ಟುಕೊಂಡಂತೆಯೇ ಆಗುವುದು ಅದಕ್ಕೆ ವಿರುದ್ಧವಾಗಿ ನಡೆದರೆ ನಾವು ಅವರನ್ನು ಕೊಂದಂತೆ ಆಗುವುದು

ಗಾಂಧೀಜಿಯವರು ನಾಶಹೊಂದಿಲ್ಲ ಉಪ್ಪು ನೀರಲ್ಲಿ ಕರೆತುಹೋಗುವಂತೆ ಈ ದೇಶದಲ್ಲಿ ಅವರ ಬೆರೆತು ಹೋಗಿದ್ದಾರೆ

ವಿದ್ಯಾರ್ಥಿಗಳ ಕರ್ತವ್ಯ

ವಿದ್ಯಾರ್ಥಿಗಳು ಸ್ವತಂತ್ರ ಭಾರತದ ಉತ್ತಮ ಪ್ರಜೆಗಳಾಗಲು ತಕ್ಕ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ನಿರತರಾಗಿರಬೇಕು ಮುಷ್ಕರಗಳನ್ನು ಹೂಡಿ ಸಮಯ ಹಾಳು ಮಾಡಬಾರದು

ಸತತ ಉದ್ಯೋಗದ ಆವಶ್ಯಕತೆ

ಸ್ವಾತಂತ್ರ್ಯದಿಂದ ಪ್ರಯೋಜನವಾಗಬೇಕಾದರೆ ಪ್ರತಿಯೊಬ್ಬನೂ ಕಷ್ಟಪಟ್ಟು ಕೆಲಸ ಮಾಡಬೇಕು ಹಿಂದೆ ದೇಶಕ್ಕಾಗಿ ದುಡಿಯುವುದೆಂದರೆ ಸರಕಾರದ ವಿರುದ್ಧ ತಳಮಳ ಮಾಡಿದರೆ ಸಾಕಾಗಿತ್ತು ಈಗ ಪರಿಸ್ಥಿತಿ ಬೇರೆ ದೇಶದ ಜನರ ಸುಖ ಸಂಪತ್ತುಗಳನ್ನು ಹೆಚ್ಚಿಸಲು ಸರಿಯಾದ ದಾರಿ ಕಲ್ಪಿಸಿ ಅವಕ್ಕನುಕೂಲಿಸಿ ಪ್ರತಿಯೊಬ್ಬರು ಸತತವಾಗಿ ದುಡಿಯಬೇಕು ಮುಷ್ಕರಗಳನ್ನು ಹೂಡಲು ಇದು ಸಮಯವಲ್ಲ

ತಾಯ್ತಂದೆಯರು ಮತ್ತು ಮಕ್ಕಳ ಶಿಕ್ಷಣ

ವಿದ್ಯಾವಂತ ತಂದೆಯು ತನ್ನ ಮಕ್ಕಳ ಶಿಕ್ಷಣದಲ್ಲಿ ತಾನೇ ಭಾಗವಹಿಸಿ ಉಪಾಧ್ಯಾಯರಿಗೆ ಸಹಾಯ ಮಾಡಬೇಕು

ತಾಯಿಂದಿರು ಶಿಕ್ಷಣ ಪಡೆದವರಿದ್ದರೆ ಮಕ್ಕಳ ಶಿಕ್ಷಣಕ್ಕೆ ಬಹಳ ಅನುಕೂಲ

ಮಕ್ಕಳೊಡನೆ ತಾಳ್ಮೆಯಿಂದ ವರ್ತಿಸಬೇಕು ತಮ್ಮ ಮಕ್ಕಳನ್ನು ಸುಧಾರಿಸಲು ಕಷ್ಟವೆಂದರೆ ಸರಕಾರವು ದೇಶದ ಆಡಳಿತೆ ಹೇಗೆ ನಡೆಸಬೇಕು?

ಮಾತೃ ಭಾಷೆ

ಮಾತೃಭಾಷೆ ಜೀವಂತ ಭಾಷೆಯಿದ್ದು ಅದು ಸಹಜವಾಗಿ ಬೆಳೆಯುತ್ತದೆ ಅದನ್ನು ಬೆಳೆಸಲು ಪ್ರಯತ್ನ ಮಾಡಲು ಹೋಗಬೇಡಿರಿ. ಎಷ್ಟು ಸಂಸ್ಕೃತ ಪದ ಬೆರೆಸಬೇಕೆಂದು ತೂಕ ಹೇಳಲು ಹೋದರೆ ಇಂಥವರು ತಮ್ಮೊಳಗೆ ಕಲಹ ಮಾಡುವುದು ಮಾತ್ರ ಪರಿಣಾಮ ಮಾತೃಭಾಷೆಯನ್ನು ಕಡ್ಡಾಯವಾಗಿ ಕಲಿಸುವ ಏರ್ಪಾಡು ಅಗತ್ಯವೇ ಇಲ್ಲ ಕಡ್ಡಾಯದ ಏರ್ಪಾಡು ಯಾವಾಗಲೂ ಹಾನಿಕರ ಮಾತೃಭಾಷೆಯಲ್ಲಿ ಉತ್ತಮ ಸಾಹಿತ್ಯ ತುಂಬಿದರೆ ಅದು ತನ್ನಷ್ಟಕ್ಕೆ ಉನ್ನತಿಯನ್ನು ಪಡೆಯುತ್ತದೆ.

ಇಂಗ್ಲೀಷು ಮತ್ತು ಹಿಂದೀಗಳ ಸ್ಥಾನ

ಬ್ರಿಟಿಷರು ಹೋದರೆಂಬುದರಿಂದ ಇನ್ನು ಇಂಗ್ಲೀಷು ಬೇಡವೆಂದು ಹೇಳುವುದು ಸರಿಯಲ್ಲ. ಅವರು ತಂದ ರೈಲು, ತಂತಿ ಮೊದಲಾದುವನ್ನು ಈಗ ಬೇಡವೆಂದು ನಾವು ಹೇಗೆ ಬಿಟ್ಟುಬಿಡುವುದಿಲ್ಲವೋ ಹಾಗೆಯೇ ಇಂಗ್ಲೀಷನ್ನು ಇಟ್ಟುಕೊಳ್ಳಬಹುದು

ಇಂಗ್ಲೀಷು ವಿಮಾನದ ದಾರಿಯಂತಿದೆ ಹಿಂದೀ ನೆಲದ ಪ್ರಯಾಣದ ದಾರಿಯಂತಿದೆ

ಆಮೆಯೂ ಮೊಲವೂ

ಕೊಚ್ಚಿ ಸರಕಾರದವರು ನಡೆಸುವ ಒಂದು ರಾಸಾಯನಿಕ ಗೊಬ್ಬರ ತಯಾರಿಯ ಕಾರಖಾನೆ ಇದೆ ಇದು ಡೆಲ್ಲಿ ಸರಕಾರದ ಇಂಥ ಕಾರಖಾನೆಗಿಂತಲೂ ಹೆಚ್ಚು ಮುಂದರಿದಿದೆ ಆದರೆ ಮುಂದೆ ಹೋದವರು ನಿದ್ರಿಸಿದರೆ ಆಮೆಯು ವಿಜಯಿಯಾಗುವುದು

ಪ್ರತಿಯೊಬ್ಬರೂ ತಮ್ಮ ಕೆಲಸದಲ್ಲಿ ನಿದ್ರಿಸಿದರೆ ಆಮೆ ಮಾತ್ರವಲ್ಲ ಗಂಡಾಂತರವೇ ನಮ್ಮ ಬೆನ್ನು ಹಿಡಿಯುವುದೆಂದು ತಿಳಿಯಬೇಕು

ಸೈನಿಕ ಧರ್ಮ

ಭಾರತದ ಸೈನಿಕರು ಪ್ರಜೆಗಳ ಸೇವಕರು ಪ್ರಜೆಗಳ ರಕ್ಷಣೆಗಾಗಿ ಕಾದಾಡುವರು ಸೈನಿಕರ ಇಂಥ ಕಾರ್ಯಕ್ಕೆ ಕೈಕೊಡಲು ಉತ್ಸಾಹಿತರಾಗಿರುವುದು ಉಚಿತವೇ ಇರುತ್ತದೆ

ಸ್ತ್ರೀಯರ ಮತ್ತು ಮಕ್ಕಳ ಕಡೆಗೆ ಭಾರತದ ಸೈನಿಕರು ಯಾವಾಗಲೂ ಸದ್ಬುದ್ಧಿಯನ್ನೇ ತೋರಬೇಕು ವೈರಿಗಳ ಸ್ತ್ರೀಯರು ಮಕ್ಕಳೊಡನೆ ಭೇದ ತೋರಿಸದೆ ಅವರನ್ನು ಯೋಗ್ಯ ರೀತಿಯಿಂದ ನಡೆಸಬೇಕು ಇದು ಈ ದೇಶದ ಸೈನಿಕ ಧರ್ಮವೆಂಬುದನ್ನು ಮರೆಯಲಾಗದು

ಸರಕಾರೀ ನೌಕರರ ಪತ್ನಿಯರು

ಸರಕಾರೀ ನೌಕರರ ಪತ್ನಿಯರು ತಮ್ಮ ಪತಿಯರ ಸಂಬಳದಲ್ಲಿ ಮಾತ್ರ ಸಹಭಾಗಿಗಳಲ್ಲವೆಂದೂ ಅವರ ಪ್ರಜಾಸೇವೆಯಲ್ಲಿಯೂ ತಾವು ಸಹಭಾಗಿಗಳೆಂದೂ ತಿಳಿಯುವ ಪದ್ಧತಿ ಬಹಳ ಉತ್ತಮ ಪದ್ಧತಿ ಭಾರತದಲ್ಲಿ ದುಡಿದ ಬ್ರಿಟಿಷ್, ಅಧಿಕಾರಿಗಳ ಪತ್ನಿಯರು ಈ ಕುರಿತು ಒಳ್ಳೆಯ ಉದಾಹರಣೆ ಹಾಕಿಕೊಟ್ಟಿದ್ದಾರೆ ಲೇಡಿ ನ್ಯಾಯವರು ಇಂಥ ಒಂದು ಆದರ್ಶ ಉದಾಹರಣೆ ಎನ್ನಬಹುದು

ರಾಜಾಜಿಯವರು ಮದ್ರಾಸ್ ನಗರದಲ್ಲಿ ಮಾಡಿದ ಭಾಷಣಗಳಲ್ಲಿಯ ಹಿತೋಕ್ತಿಗಳನ್ನು ಇನ್ನೊಮ್ಮೆ ಕೊಡಬೇಕಾಗಿದೆ.

[illegible] ಏಕೀಕರಣ ಸಂಘ

ಘಟನೆಯ ಸಮಿತಿಯಿಂದ ನೇಮಿಸಲ್ಪಟ್ಟ ಭಾಷಾವಾರು ಪ್ರಾಂತ ರಚನಾ ಸಮಿತಿಯ ಸದಸ್ಯರು ಮದ್ರಾಸು, ಬೆಂಗಳೂರು, ಕೊಯಮುತ್ತೂರು, ಮಂಗಳೂರು ಪಟ್ಟಣಗಳನ್ನು ಸೆಪ್ಟಂಬರ ಮೊದಲನೆಯ ವಾರದಲ್ಲಿ ಸಂದರ್ಶಿಸಲಿರುವರು. ದಿನಾಂಕ ೩೧-೮-೪೮ರ ಮೊದಲು ಸಮಿತಿಯ ಪ್ರಶ್ನಾವಳಿಗೆ ಉತ್ತರಗಳನ್ನು ಕಳುಹಿಸಿದ ಸಂಘ ಸಂಸ್ಥೆಗಳು ಸಮಿತಿಯ ಸದಸ್ಯರನ್ನು ಮೇಲ್ಕಂಡ ಸ್ಥಳಗಳಲ್ಲಿ ಭೆಟ್ಟಿಯಾಗಿ ಮನವಿಗಳನ್ನು ಒಪ್ಪಿಸಬಹುದು.

ಅಂತರ್ಜಾತೀಯ ವಿವಾಹ

ಕಳೆದ ಶುಕ್ರವಾರ ಮಲಬಾರಿನ ಶ್ರೀಮಾನ್ ಹರಿರಾಜನ್‌ರವರಿಗೂ ಪುತ್ತೂರಿನ ಪಿ. ಗಣಪತಿರಾಯರ ತಂಗಿ ಶ್ರೀಮತಿ ಕಮಲಾ ಬಾಯಿಯವರಿಗೂ ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ವೈದಿಕ ವಿಧಿ ಪ್ರಕಾರ ಶ್ರೀ ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಲ್ಲಿ ವಿವಾಹ ಸಂಸ್ಕಾರವೂ ಜರಗಿತು. ವಧೂವರರನ್ನು ಆಶೀರ್ವದಿಸಲು ಅನೇಕ ಹಿಂದೂ ಮುಸಲ್ಮಾನ ಗೃಹಸ್ಥರು ಅತಿಥಿಗಳಾಗಿ ಬಂದಿದ್ದರು.

ಹಿಂದೀ ಪ್ರಚಾರ ಸಭೆ

ಈ ಸಭೆಯ "ರಾಷ್ಟ್ರ ಭಾಷಾ" ಪರೀಕ್ಷೆಗೆ ಪಠ್ಯ ಪುಸ್ತಕವಾಗಿರುವ, "ರಾಮು ಚರ್ಚಾ" ಎಂಬ ಪುಸ್ತಕವು ಸಿಗದಿರುವುದರಿಂದ, ಈ ಪುಸ್ತಕದ ಪ್ರಶ್ನೆಗಳಲ್ಲದೆ ಹಿಂದೀ ಮಾಧುರಿ ಒಂದನೇ ಭಾಗ, ಮೇವಾಡ ಪತನಗಳಿಂದ ಹೆಚ್ಚಿಗೆ ವೈಕಲ್ಪಿಕ ಪ್ರಶ್ನೆಗಳು ಸದ್ಯವೇ ನಡೆಯುವ ಪರೀಕ್ಷೆಯಲ್ಲಿ ಕೇಳಲ್ಪಡುವುವು. ರಾಮುಚರ್ಚಾ ಪುಸ್ತಕ ಓದದವರು ಈ ಹೆಚ್ಚಿಗೆ ವೈಕಲ್ಪಿಕ ಪ್ರಶ್ನೆಗಳ ಉತ್ತರ ಬರೆಯಬೇಕು ಎಂದು ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರಕ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ

ದ. ಕ. ಜಿಲ್ಲಾ ವಾಣಿಜ್ಯ ಸಂಘ

ಸಹಕಾರಿ ಸಂಘಗಳಿಗೆ, ೧೦ ಸಾವಿರ ಬೇಲ್ ಮಿಲ್ ಬಟ್ಟೆಗಳನ್ನು ಹಂಚಲು ಏರ್ಪಾಡಾಗಿದೆ, ಇದು ಸರಿಯಲ್ಲ ಎಂಬುದಕ್ಕೆ ತಮ್ಮ ಕಾರಣಗಳನ್ನು ವಿವರಿಸಿ ಮೇಲ್ಕಂಡ ವಾಣಿಜ್ಯ ಸಂಘದವರು, ಮದ್ರಾಸಿನ ಪ್ರಾಂತಿಕ ಟೆಕ್ಸ್ ಟೈಲ್ ಕಮಿಶನರರಿಗೊಂದು ಬಿನ್ನಹ ಪತ್ರವನ್ನು ಬರೆಯುತ್ತ, ಮದ್ರಾಸ್ ಸರಕಾರದ ಈ ರೀತಿಯ ಧೋರಣೆಯು ಕೇಂದ್ರ ಸರಕಾರದ ಮನೋಗತಿಗೆ ವಿರೋಧವಾಗಿದೆ, ಹಿಂದೆ ಆಯಾ ಜಿಲ್ಲೆಗಳಿಗೆ ಒದಗಿಸಲು ಈ ಆಧಿಪತ್ಯದಿಂದ ೪೦ ಮಂದಿ ರಖಂ ವ್ಯಾಪಾರಿಗಳನ್ನು ನೇಮಿಸಲಾಗಿತ್ತು, ಹಾಗೇ ಈಗಲೂ ಈ ಬಟ್ಟೆ ಸರಬರಾಯಿ ಕಾರ್ಯವನ್ನು ಸಹಕಾರಿ ಏಜನ್ಸಿಗಳಿಗೆ ಕೊಡದೆ, ಹಿಂದಿನಂತೆ, ರಖಂ ವ್ಯಾಪಾರಿಗಳಿಗೂ, ಚಿಲ್ಲರೆ ವ್ಯಾಪಾರಿಗಳಿಗೂ ಅಂದರೆ ಇದುವರೆಗೆ ಆ ವ್ಯಾಪಾರ ನಡೆಸಿಕೊಂಡು ಬಂದವರಿಗೆ – ಒಪ್ಪಿಸಿ ಕೊಡಬೇಕು ಎಂದು ಮುಂತಾಗಿ ಸೂಚಿಸಿದೆ

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ

ಸ್ಥಳೀಯ "ತಾಜ ಮಹಾಲ್" ಹೋಟೇಲಿನ ವ್ಯಾಲಕರಾದ ಶ್ರೀ ಕುಡ್ವಿ ಶ್ರೀನಿವಾಸ ಶೆಣೈಯವರು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ತಮ್ಮದಾಗಿ ೧೦೦೫- ರೂಪಾಯಿ ಅಲ್ಲದೆ ತಾಜಮಹಾಲು ಹೋಟೇಲುಗಳ ಎಲ್ಲಾ ನೌಕರರು ಒಟ್ಟು ಕೂಡಿಸಿ ಕೊಡುವಷ್ಟು ಹಣವನ್ನು ಪುನಃ ತಾವು ಕೊಡುವುದಾಗಿ ವಾಗ್ದಾನವಿತ್ತಿರುವರಂತೆ.

ದ. ಕ. ಜಿಲ್ಲಾ ವಿದ್ವಾನ್ ನಾಗಸ್ವರ ಭೂಷಣ ಕಾರ್ಕಳ ಪಿ. ನಾರಾಯಣ ಸ್ವಾಮಿಯವರ ನಾಗಸ್ವರ ಕಚೇರಿಯು ತಾ 2-9-48ನೇ ಗುರುವಾರ ಸಾಯಂಕಾಲ ಗಂಟೆ 5-30ರಿಂದ 6ರ ವರೆಗೆ ಮದ್ರಾಸು ರೇಡಿಯೋದಲ್ಲಿ ಜರಗಲಿರುವುದು.

ಮಂಗಳೂರು ಡಿ. ಸಿ. ಮಿಶ್ಯನಿನ ಸಹಕಾರ ಸಂಘದ ಮಹಾಸಭೆ

ಈ ಸಂಘದ ಮಹಾಸಭೆಯು ತಾ ೧೫-೮-೪೮ಕ್ಕೆ ಸರಿಯಾಗಿ ಡಿ. ಸಿ. ಮಿಶ್ಯನಿನಲ್ಲಿ ಜರಗಿ ಶ್ರೀಮಾನ್ ಯಸ್ ಜಿ ಹಾಲೆಣ್ಣರನ್ನು ಗತವರ್ಷದ ಅಧ್ಯಕ್ಷರನ್ನಾಗಿಯೂ ಜೆ. ವಾಮನವರನ್ನು ಕಾರ್ಯದರ್ಶಿಯನ್ನಾಗಿಯೂ, ಕೆ ಕೃಷ್ಣ ಮಾಸ್ತರ್, ಯಂ ದಯಾನಂದ ಮತ್ತು ಪಿ ನರಸಿಂಹರನ್ನು ಡೈರೆಕ್ಟರರನ್ನಾಗಿಯೂ ಆರಿಸಲಾಯಿತು.

ಆ ಮೇಲೆ ಹಳೆ ಸಾಲಗಾರರಿಗೆ ಬಡ್ಡಿಯಲ್ಲಿ ಶೇಕಡಾ ೫೦ ಮಾಫಿ ಮಾಡುವದಾಗಿ ಮತ್ತು ಅಂಥ ಸಾಲಗಾರರನ್ನು ವಸೂಲು ಮಾಡುವ ಬಗ್ಗೆ ನೋಟೀಸು ಕೊಡುವದಾಗಿಯೂ ತೀರ್ಮಾನವಾಯಿತು

ಉಡುಪಿ

ನೆರೆಗೆ ಆಹುತಿ

ಉಡುಪಿ ಪ್ರಾಂತದಲ್ಲಿ ಕೆಲ ದಿನಗಳ ಹಿಂದೆ ಬಂದ ನೆರೆಯಲ್ಲಿ ಅಲೆವೂರು ಬಳಿಯ ಕಲ್ಮಂಜೆ ಗ್ರಾಮದಲ್ಲಿನ ಸುಮಾರು ೧೦ ಸಾವಿರ ಬಾಳುವ ಒಂದು ದೊಡ್ಡ ಮನೆ ಜರಿದು ಬಿದ್ದು ಒಂದು ಗೋವೂ ಒಂದು ದನದ ಕರುವೂ ಮೃತಪಾದಂತೆ ತಿಳಿದು ಬಂದಿದೆ

ಹರಿಜನ ಪ್ರವೇಶ ಪ್ರಶ್ನೆ

ಶ್ರೀ ಕೃಷ್ಣ ದೇವಾಲಯಕ್ಕೆ ಹರಿಜನ ಪ್ರವೇಶದ ಕುರಿತ ಮಠಾಧಿಪತಿಗಳ ಅಭಿಪ್ರಾಯವನ್ನು ಪಡೆಯುವರೆ ದಿನಾಂಕ ೧೧ರಲ್ಲಿ ಶ್ರೀಗಳಾದ ವಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಬಾಳ್ಕಟ ಬೀಡು ಕೃಷ್ಣಯ್ಯ ಹೆಗ್ಡೆ ಎನ್ ಎಸ್ ಕಿಲ್ಲೆ ಕೆ ಸರಿ ಹರಿ ಕಾಮತ್ ಮೊದಲಾದ ಕಾಂಗ್ರೆಸ್ ಹಾಗೂ ಹರಿಜನಸೇವಕರು ಶ್ರೀ ಸೋದೆ ಮಠಕ್ಕೆ ಹೋದರು ಅಲ್ಲಿ ಶ್ರೀ ಪುತ್ತಿಗೆ, ಕಣೂರು, ಸೋದೆ ಸ್ವಾಮಿಗಳವರನ್ನು ಅದ ಮಾರು ಪೇಜಾವರ, ಸೋದೆ ಮಠದ ವಿಬುಧರನ್ನು ಕಂಡರು ಹರಿಜನ ದೇವಾಲಯ ಪ್ರವೇಶದ ಪ್ರಶ್ನೆಯು ಉಡುಪಿಯಲ್ಲಿ ಬೇಗನೆ ಕೈಗೂಡುವಂತೆ ಧರ್ಮಾಧಿಕಾರಿಗಳು ಮೇಲ್ಪಂಕ್ತಿಯನ್ನು ಹಾಕಿ ಇತರರಿಗೆ ಆದರ್ಶವಾಗಬೇಕೆಂದು ಶ್ರೀ ಕಿಲ್ಲೆಯವರು ಸೂಚಿಸಿದರು ಶ್ರೀ ಕೃಷ್ಣ ಮಠವು ಖಾಸಗಿ ಮಠವೆಂದು ಸಮರ್ಥಿಸಿ ಮದ್ರಾಸು ಸರಕಾರಕ್ಕೆ ಮನವಿಯನ್ನು ಮಾಡಿದ್ದೇವೆಂದೂ ಅದರ ಪರಿಣಾಮವೇನಾಗುವುದೆಂದು ಬೇಗನೆ ತಿಳಿಯಲಿರುವದೆಂದೂ ಅದಾದ ಬಳಿಕ ತಮ್ಮ ಒಮ್ಮತದ ಅಭಿಪ್ರಾಯವನ್ನು ಎಂಟು ಮಠಗಳವರ ಪರವಾಗಿ ಕೊಡಲಾಗುವದೆಂದೂ ಶ್ರೀ ಕಿಲ್ಲೆಯವರ ವಿನಂತಿಗೆ ಧರ್ಮಾಧಿಕಾರಿಗಳ ಉತ್ತರ ದೊರೆಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿ ಕಡೆಯಿಂದ ಈಗಾಗಲೇ ಹರಿಜನ ದೇವಾಲಯ ಪ್ರವೇಶದ ಪೂರ್ವ ಸಿದ್ಧತೆಗಳಾಗಹತ್ತಿವೆ ಸಪ್ಟಂಬರ ತಾ ೨೮ ಅಥವಾ ಅಕ್ಟೋಬರ್ ಎರಡನೇ ತಾರೀಕು ಇವೆರಡು ದಿವಸಗಳು ತಾರಾನುಕೂಲ ಸರಿಯಿದೆಯಾದುದರಿಂದ ಆ ದಿವಸಗಳ ಪೈಕಿ ಒಂದು ದಿನದಲ್ಲಿ ಉಡುಪಿಯಲ್ಲಿ ಹರಿಜನ ದೇವಾಲಯ ಪ್ರವೇಶ ಪ್ರಶ್ನೆಯು ಇತ್ಯರ್ಥವಾಗಲಿರುವದು ಈ ಸುಮುಹೂರ್ತ ಕಾಲದಲ್ಲಿ ಸಹಭಾಗಿಗಳಾಗುವಂತೆ ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳೇ ಮೊದಲಾದವರಿಗೆ ಆಮಂತ್ರಣ ಕಳುಹಿಸಲ್ಪಡುವದು ಜಿಲ್ಲಾಧಿಕಾರಿಗಳು ಕೂಡಾ ಹಾಜರಿರುವಂತೆ ಅವರನ್ನು ಪ್ರತ್ಯೇಕ ವಿನಂತಿಸಲಾಗುವದು

ಕಾರ್ಕಳ

ಗಾಂಧಿ ಸ್ಮಾರಕ ನಿಧಿಗೆ ಸಹಾಯ

ಅಖಿಲ ಭಾರತ ಗಾಂಧಿ ಸ್ಮಾರಕ ನಿಧಿಗೆ ಕಾರ್ಕಳದಿಂದ ಶ್ರೀ ಕೆ ವೆಂಕಟೇಶ ಪ್ರಭುಗಳವರು ೧೦೦೫ ರೂಪಾಯಿ ಮತ್ತು ಕೆ ... ಶೇಷಗಿರಿ ಪ್ರಭುಗಳು ೧೦೦೦ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು ಆಗಸ್ಟ ೧೫ರಿಂದ ಕಾರ್ಕಳದಲ್ಲಿ ಈ ನಿಧಿಗೆ ಧನ ಸಂಗ್ರಹ ಕಾರ್ಯವು ನಡೆಯುತ್ತಾ ಇದೆ

ರಕ್ಷಾ ಬಂಧನ!

ಇದೇ ತಾ ೧೯ರಂದು ಸಾಯಂಕಾಲ ಕಾರ್ಕಳದಲ್ಲಿಯ ಕೆಲವು ಪ ಮುಖರು ಸೇರಿದ ಹಿಂದುಗಳ ಒಂದು ಸಾರ್ವಜನಿಕ ಸಭೆಯು ಇಲ್ಲಿಯ ಗಾಂಧಿ ಮೈದಾನಿನಲ್ಲಿ ಕೂಡಿ "ರಕ್ಷಾ ಬಂಧನ" ವಿಧಿಯು ನಡೆದು ಸಂದರ್ಭೋಚಿತ ಭಾಷಣಗಳಾದುವು.

ಕಾರ್ಕಳ ತಾಲೂಕಿನ ನಾರಾವಿಯಲ್ಲಿ

ಈ ಬಾರಿ ಕಾರ್ಕಳ ತಾಲೂಕಿನ ಹಳ್ಳಿ ಹಳ್ಳಿಗಳಲ್ಲಿಯೂ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟ ಸುದ್ದಿ ಬಂದಿದೆ, ನಾರಾವಿಯು ಮಲೆನಾಡಿನ ಒಂದು ಚಿಕ್ಕ ಪ್ರದೇಶವಾಗಿದ್ದರೂ ಸಹ ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಈ ದಿನವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಪ್ರಭಾತ ಫೇರಿ ಧ್ವಜಾರೋಹಣ, ಸಾಯಂಕಾಲ ಸಾರ್ವಜನಿಕ ಸಭೆ, ಸಂದರ್ಭೋಚಿತ ಭಾಷಣ, ಚಿಕ್ಕ ಮಕ್ಕಳಿಗೆ ಸಕ್ಕರೆ ಮಿಠಾಯಿಯ ವಿತರಣ ಮೊದಲಾದ ಕಾರ್ಯಕ್ರಮಗಳಿದ್ದುವು ಈ ಉತ್ಸವದ ಸಂಚಾಲಕರಾದ ಶ್ರೀ ಓಬೋಜರಾಯರ ಉತ್ಸಾಹವು ಪ್ರಶಂಸನೀಯವಾಗಿತ್ತು

NOTICE

It is hereby given that the firm known as Messrs Ullal Deva Rau & Co Bunder, Mangalore stands dissolved as from 15—8—1948 Former partners of the firm are trading separately Neither of them have got the power to bind the other in respect of any dealing

U Venkatraya Kini
Ullal Deva Rau

Mangalore 15 8-1948



ಶೀಘ್ರ ಶಮನಿಸಲ್ಪಟ್ಟು ಪರಿಹರಿಸಲ್ಪಡುತ್ತವೆ.

ಜಾಂಬಕಿನ ಲಘು ತಿಕ್ಕುವಿಕೆಯಿಂದ ನೋವು ಹೆಚ್ಚು ಕಡಿಮೆ ತಕ್ಷಣವೆಂಬಂತೆ ಪರಿಹಾರವಾಗುವುದು ಜಾಂಬಕಿನಲ್ಲಿರುವ ಅಮೂಲ್ಯ ಔಷಧೀಯ ತೈಲಗಳು ಉಳುಕಿದ ಬಿಗಿತವನ್ನು ಸಡಿಲಿಸುವುದು, ದಣಿದ ಯಾ ಸೆಳೆಸಲ್ಪಟ್ಟ ಮಾಂಸಖಂಡಗಳನ್ನು ಶಮನಿಸಿ ದಣಿದು ಬೇನೆಪಡುವ ಕಾಲಿಗೆ ಶೀಘ್ರ ಸುಖವನ್ನುಂಟುಮಾಡುತ್ತದೆ

ಶಮನಿಸಿ ಪರಿಹಾರ ಮಾಡಿ ಶುದ್ಧಿಸುವ ಜಾಂಬಕು ಕಡಿತ, ವಿಷಗೊಂಡ ಗಾಯ ಸುಡತ, ಕಿಮಿಕಚ್ಚು, ಮಡವೆ, ಚರ್ಮಹುಣ್ಣು, ಮೂಲವ್ಯಾಧಿ, ಉಷ್ಣಕುರು ಮೊದಲಾದುದಕ್ಕೆ ಅಮೂಲ್ಯ ಔಷಧಿಯಾಗಿದೆ

ಜಾಂಬಕ್ ಉಪಯೋಗಿಸಿರಿ.

Zam-Buk

ವಿಶ್ವಖ್ಯಾತಿಯ ವನಸ್ಪತಿ ಮುಲಾಮು.

ಖಂಡಿತ ಪ್ರಾಣಿಕೊಬ್ಬು ರಹಿತವಾದುದು.

ಪ್ರಕೃತಿ ತಯಾರಿಯೊಂದರ ವಿಶಿಷ್ಟ ಗುಣಶಕ್ತಿ

ಶೃಂಗಾರ ಪ್ರಿಯನಾದ ಫ್ರಾನ್ಸಿನ ಅರಸ ಹದಿನಾಲ್ಕನೆ ಲೂಯಿಯು ತನ್ನ ವೈಭವ ಶಿಖರಕ್ಕೆ ಮುಟ್ಟಿದ ಕಾಲ, ಅವನ ಮಂತ್ರಿಗಳ ನಿರ್ದೇಶಕತ್ವದಲ್ಲಿ ಫ್ರಾನ್ಸ್‌ದೇಶ, ಶ್ರೀಯೋಭಿವೃದ್ಧಿ ಹೊಂದಿತು. ಅವನ ಸೈನ್ಯಗಳು ಅನೇಕ ವಿಜಯಗಳನ್ನು ಹೊಂದಿದ್ದವು. ಇಡೀ ಯುರೋಪು ಆ ಶ್ರೇಷ್ಟವೂ ಸಂಪತ್ಭರಿತವೂ ಆದ ದೇಶವನ್ನು ಮೆಚ್ಚುಗೆಯಿಂದ ಈಕ್ಷಿಸುತಿದ್ದವು.

ಆದರೆ ಅಲ್ಲೊಬ್ಬ ಮನುಷ್ಯನಿದ್ದ. ಅವನೊಬ್ಬ ಮಾತ್ರ ಈ ಅರಸನಿಗೆ ಇತರರಂತೆ ಗೌರವ ಸಲ್ಲಿಸುತ್ತಿರಲಿಲ್ಲ. ಶಬ್ದಾಡಂಬರದ ಇಲ್ಲವೆ ಸಿಂಹನಿರೂಪದ ಆಜ್ಞೆಗಳಿಗಾಗಲಿ ಬೆದರಿಕೆಗಾಗಲಿ ಸೊಪ್ಪುಹಾಕದೆ ಈ ವ್ಯಕ್ತಿ ಅರಸನ ಎಲ್ಲಾ ಯೋಜನೆಗಳನ್ನು ವಿರೋಧಿಸುತಿದ್ದ ಇವನೇ ಸಂತನಾದ ಪೀಟರನು. ಈತ ರೋಮ್ ನಗರದ ಶಕ್ತಿಯುಕ್ತ ಆವಾರಗಳ ಹಿಂದೆ ಕೂತಿರುತಿದ್ದ ಇವನ ರಕ್ಷಣೆಗೆ ಆ ಕೋಟೆ ಗೋಡೆಗಳಿಗಿಂತ ಅದರ ಸುತ್ತಲಿರುವ ಜವುಗು ಸ್ಥಳಗಳು ಹೆಚ್ಚಿನ ಸಹಾಯಕ್ಕಿದ್ದವು. ಕಾರಣ ಅಲ್ಲಿ ಮುತ್ತಿಗೆಗಾಗಿ ಬೀಡು ಬಿಡುತಿದ್ದ ಯಾವದೇ ಶತ್ರು ಸೈನ್ಯವಾದರೂ ಅಲ್ಲಿ ನಿರಂತರವಾಗಿ ಹಬ್ಬಿಕೊಂಡಿದ್ದ ಮಲೇರಿಯಾ ಜ್ವರದ ಬಾಧೆಗೂ ಮತ್ತಾನಂತರ ಹಿಂಬಾಲಿಸುತಿಪ್ಪ ಮರಣಕ್ಕೂ ತುತ್ತಾಗುತಿದ್ದರು

ಆದರೆ ಹದಿನಾಲ್ಕನೆ ಲೂಯಿಯು ಈ ಅಪಾಯವು ಎಷ್ಟು ಗಂಭೀರತೆಯದೆಂದೂ ಗಣಿಸಲಿಲ್ಲ ಅಮರ ನಗರವೆನ್ನಿಸಿಕೊಳ್ಳುತಿದ್ದ ಆ ರೋಮ್ ನಗರವನ್ನು ಹಿಂದೆ ಅನೇಕ ದಾಳಿಗಾರರು ಸುತ್ತುಗಟ್ಟಿ ಅದರ ಮಹಾದ್ವಾರಗಳೆದುರು ದುರಂತವನ್ನೂ ಅಪಕೀರ್ತಿಯನ್ನೂ ಆದ ಅಂತ್ಯವನ್ನು ಕಂಡಿದ್ದರು

1687ರಲ್ಲಿ ತೇಜೋವಂತನಾದ ಲೂಯಿಯು ಈ ಮಹಾ ಸಾಹಸಕೃತ್ಯವನ್ನು ಕೈಕೊಂಡನು. ಲಿವರ್ಡೈನ್ನಿನ ಡ್ಯೂಕನ ಕೈಕೆಳಗೆ ಅವನೊಂದು 800 ಸೈನಿಕರ ದಳವನ್ನು ರೋಮ್ ನಗರದ ಅಭಿಕ್ರಮಣಕ್ಕೆ ಕಳುಹಿಸಿ, ಪೋಪ್ ಸ್ವಾಮಿಯ ಸಂಸ್ಥಾನದ ವಿರೋಧಿಗಳ ಆಶ್ರಯಕ್ಕಾಗಿ ಅಲ್ಲಿನ ಫ್ರೆಂಚ್ ರಾಯಭಾರಿ ಕಛೇರಿಯನ್ನು ಬಲಿಷ್ಟವಾದ ಕೋಟೆಯಂತೆ ಭದ್ರಪಡಿಸಬೇಕೆಂದವನು ಆಜ್ಞೆ ಇತ್ತನು

ಆದರೆ ತಪ್ಪುದಾರಿ ತುಳಿದ ಉತ್ಸಾಹಿ ಫ್ರೆಂಚ್ ದಳಗಳು ರೋಮಿನ ಕೆಂಪಾಗ್ನಾ ಬಡಾವಣೆಯ ಮಲೇರಿಯಾ ಜ್ವರಪೀಡೆಯಿಂದ ಪ್ರತಿಕಾರಕೊಳ್ಳುವ ಶತ್ರುವಿನಂತೆ ಕ್ರೂರವಾಗಿ ಶಿಕ್ಷಿಸಲ್ಪಟ್ಟವು. ಫ್ರೆಂಚ್ ದಳವು ತೀವ್ರ ಜ್ವರಬಾಧೆಗೆ ಬಲಿಯಾಗಿ ಅನೇಕ ಸೈನಿಕರು ಅದರ ದುಷ್ಪರಿಣಾಮಕ್ಕೆ ಆಹುತಿಯಾದರು ಪೋಪ್ ಸ್ವಾಮಿಯ ಶತ್ರುಗಳು-ರೋಮನ್ ಕೆಂಪಾಗ್ನಾ ಬಡಾವಣೆಯ ಈ ಅನಿಷ್ಟ ಮೃತ್ಯುಕಾಟವೊಂದರಿಂದಲೇ ಜಯಿಸಲ್ಪಟ್ಟರು

ಎಲ್ಲಾ ಫ್ರೆಂಚ್ ಸೈನಿಕರು ಮಲೇರಿಯದಿಂದ ಸಾಯಲಿಲ್ಲ, ಕಾರಣ ಜ್ವರಕ್ಕೆ ರಾಮಬಾಣದಂತಿರುವುದೆಂದು ನಾಲ್ವತ್ತು ವರ್ಷಗಳಿಂದ ರೋಮನ್ನರಲ್ಲಿ ಬಳಕೆಯಲ್ಲಿದ್ದ ಕ್ವಿನಾ-ಕ್ವಿನಾ ಎಂಬೊಂದು ಔಷಧಿಯನ್ನವರು ಉಪಯೋಗಿಸಿದ್ದರು.

ಈ ಔಷಧಿಯನ್ನು ತುಂಬಾ ಮೆಚ್ಚಿದ್ದ ಕಾರ್ಡಿನಲ್ ಡಿ ಲ್ಯೂಗೊ ಎಂಬೊರ್ವ ಪಾದ್ರಿಯು ಅದನ್ನು ಎಲ್ಲಾ ಬಡಬಗ್ಗರಿಗೂ, ಜ್ವರಪೀಡಿತರಿಗೂ ಅದನ್ನು ಹಂಚಿದ್ದನು ಆದರಿಂದ ಅದಕ್ಕೆ 'ಜೆಸುವಿಟ್ ಚೂರ್ಣ' ವೆಂಬ ಹೆಸರೂ ಉಂಟಾಯಿತು. ಬಹು ಕಾಲದ-ವರೇಗೆ ಆ ಹೆಸರೇ ಇತ್ತು.

ಈ ಜೆಸುವಿಟ್ ಚೂರ್ಣದಲ್ಲಿನ ಶಕ್ತಿಯುಕ್ತ ವಸ್ತುಗಳನ್ನೊಳಗೊಂಡ ಈ ಔಷಧಕ್ಕೆ ಇಂದು ಕ್ವಿನೀನ್ ಎಂದು ಹೆಸರಿದೆ 'ಇದೇ ರೋಮನ್ನೂ ಅದರ ಆಸುಪಾಸಿನ ಪ್ರದೇಶವನ್ನೂ ಸರ್ವನಾಶದಿಂದ ರಕ್ಷಿಸಿತು

ಮಲೇರಿಯದಿಂದ ನರಳುವ ಜಗತ್ತಿನ ಪ್ರತಿಯೊಂದು ಕಡೆಯಲ್ಲೂ (ವರ್ಷಂಪ್ರತಿ 80 ಕೋಟಿ ಜನರು ಇದರಿಂದ ನರಳುತ್ತಾರೆ) ಕ್ವಿನೀನು ಒಂದು ದೈವದತ್ತ ವರದಂತೆ ಪರಿಗಣಿಸಲ್ಪಡುತ್ತದೆ ಮಲೇರಿಯವನ್ನು ತಡೆಗಟ್ಟಲೂ ಮತ್ತು ನಿವಾರಿಸಲೂ ಇದು ಅತ್ಯುತ್ತಮವಾದೊಂದು ಶುದ್ಧವಾದ ಪ್ರಕೃತಿ ತಯಾರಿಯಾಗಿದೆ

ಜ್ವರಬಾಧೆಯ ಕಾಲದಲ್ಲಿ ಅದನ್ನು ತಡೆಗಟ್ಟಲು ದಿನಂಪ್ರತಿ 6 ಕಾಳುಗಳಷ್ಟು ಕ್ವಿನೀನನ್ನೂ, ಜ್ವರ ಬಂದರೆ 15-20 ಕಾಳುಗಳಷ್ಟನ್ನೂ ದಿನಂಪ್ರತಿ 5-7 ದಿನಗಳವರೆಗೆ ಸೇವಿಸಬೇಕೆಂದೂ ಮಲೇರಿಯಾ ತಜ್ಞರ ಸಮಿತಿಯು ನಿರ್ಧರಿಸುತ್ತದೆ ಜ್ವರ ನಿಂತ ಮೇಲೆ ಸೇವಿಸುವ ಆವಶ್ಯಕತೆಯಿಲ್ಲ ಪುನ ಜ್ವರ ಬಂದರೆ ಹಿಂದಿನಂತೆಯೇ ಸೇವಿಸುವುದು

M Eng 69

ಭಾರತದ ತೇಜೋವಂತ ತ್ರಿಮೂರ್ತಿಗಳು

ರಾಜಾಜಿ, ನೆಹರು, ಪಟೇಲ್

ಹೈದರಾಬಾದಿನ ಸಾರ್ವಜನಿಕ ಸಂಬಂಧ ಖಾತೆಯ ಮುಖ್ಯಾಧಿಕಾರಿಯಾಗಿದ್ದು ಕೆಲ ಸಮಯದ ಹಿಂದೆ ತಮ್ಮ ಹುದ್ದೆಗೆ ರಾಜಿನಾಮೆಯಿತ್ತು ನಂತರ ಉತ್ತರಹಿಂದೂಸ್ಥಾನವನ್ನು ಸಂಚರಿಸಿ ಬಂದ ಶ್ರೀ. ಕೆ. ಈಶ್ವರ್ ದತ್ ಇವರು ಹೀಗೆ ಬರೆಯುತ್ತಾರೆ

ತ್ರಿಗುಣ: ರಾಜಾಜಿ, ನೆಹರು ಮತ್ತು ಪಟೇಲ್ ಪ್ರಭೃತಿಗಳು ಭಾರತದ ತೇಜೋವಂತ ತ್ರಿಮೂರ್ತಿಗಳೇ ಸರಿ. ಉತ್ತರ ಹಿಂದೂಸ್ಥಾನದ ಯಾವ ಕಡೆ ಹೋದರೂ ಅಲ್ಲಿನ ಜನತೆಯ ಮನಸ್ಸಿನಲ್ಲಿ ರಾಜಾಜಿಯ ಕುರಿತು ಸಂಪ್ರೀತಿಯುದೂ ಮತ್ತು ಉದಾತ್ತವಾದುದೂ ಆದ ಭಾವನೆಯಿದೆ ಅವರಲ್ಲಿ ನೆಹರುಗಳ ಧ್ಯೇಯ ಪ್ರಿಯತೆಯೂ, ಸರ್ದಾರ್ ಪಟೇಲರ ನಿಜಸ್ಥಿತಿಯನ್ನರಿವ ಭಾವದ ಬಿಗುವೂ, ಮತ್ತು ಗಾಂಧಿಜಿಯ ಮಧುರವಾದ ತತ್ವಾಭಿಮಾನವೂ ಒಟ್ಟುಗೂಡಿವೆ. ಇದರಿಂದವರು ತಮ್ಮ ಸುತ್ತಲೂ ಪ್ರಕಾಶವನ್ನು ಬೀರುತ್ತ ಅಪೂರ್ವ ಮನ್ನಣೆಯನ್ನು ಪಡೆಯುತ್ತಾರೆ.

ಭಾರತ: ಪಂಡಿತ್ ನೆಹರುಗಳನ್ನು ದೂರದಿಂದ ಈಕ್ಷಿಸುವುದಾದರೂ ಸಂತಸದ ಕೆಲಸ. ಅವರ ಪ್ರತಿಯೊಂದು ಹಾವಭಾವದಲ್ಲೂ ಅತ್ಯಾಕರ್ಷಕವಾದ ಚೈತನ್ಯವಿದೆ, ವಿಶಾಲ ಅರ್ಥದಲ್ಲಿ ಹೇಳುವುದಾದರೆ ಅವರೇ ಭಾರತವಾಗಿರುವರು.

ಭಯ: ಸರ್ದಾರ್ ಪಟೇಲರ ಬಳಿ ಹೋಗುವಾಗ ಒಂದು ತರದ ಅಂಜಿಕೆಯು ಉಂಟಾಗುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ ಅವರು ಯಾರಿಂದಲೂ ಸೋಲಿಸಲಾಗದವರು ಕೆಲವೇ ಮಾತುಗಳ ಮನುಷ್ಯರವರು. ಉಚ್ಚರಿಸಿದ ಪ್ರತಿಯೊಂದು ಶಬ್ದಕ್ಕೂ ಆಳವಾದ ಅರ್ಥವುಳ್ಳ ಸಂಕೇತಗಳಿವೆ. ಭಾರತದಲ್ಲಿ ಅವರಿಗೆ ಹೆದರುವಷ್ಟು ಇನ್ನಾರಿಗೂ ಇಲ್ಲ

ಕಡಿತ ಘಾಯ ಚರ್ಮ ಘಾತಗಳಿಗೆ

ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನರ್ನಿರ್ಮಿಸುತ್ತದೆ ಊದ ಬಿಳಿ ನೋವನ್ನು ಕಡಿಮೆ ಮಾಡುತ್ತದೆ



556

ಕುಟಿಕೂರಾ ಮುಲಾಮು

CUTICURA OINTMENT

ಪೆಸೆಂಜರರ ಅವಗಾಹನೆ ಬಗ್ಗೆ

G. O. ನಂಬ್ರ 4237ಕ್ಕೆ ಅನ್ವಯಿಸಿ R. T. O. ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R. 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1-0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತ್ತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಚಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜೊಂಯಿಂಟ್ ಮೆನೇಜರ್ಸ್,

ಮಂಗಳೂರು.
23-12-1947.

ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B
General Manager

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಮ್ಯೂಚ್ಯುಅಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(1908 ರಲ್ಲಿ ಸ್ಥಾಪಿತವಾದುದು)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಟ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬ್ಬಾ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 3—9—1948 [ಸಂಚಿಕೆ 35]

ಅಂತರ್ರಾಷ್ಟ್ರೀಯ ವಿಚಾರ ಪ್ರಣಾಲಿ

ಜರ್ಮನಿಯು ಇಂದೊಂದು ಮೃತ ಶತ್ರುವೆ?

ಹೊರ ತೋರುವಿಕೆಗೆ ಜರ್ಮನಿಯು ಇಂದು ಒಂದು ಮೃತ ಜನಾಂಗವಾಗಿರುವಂತೆ ಭಾಸವಾಗುತ್ತಿದೆ. ಒಂದು ಕಾಲದಲ್ಲಿ ತನ್ನ ಅದ್ವಿತೀಯ ಔದ್ಯೋಗಿಕ ಶ್ರೇಷ್ಠತೆಯಿಂದ ಇಡೀ ಜಗತ್ತಿನ ಆದರಭಿಮಾನಗಳಿಗೆ ಪಾತ್ರವಾಗಿದ್ದ ದೇಶವಿಂದು ವಿಜಯಿಗಳಾದ ಶಕ್ತಿ ರಾಷ್ಟ್ರಗಳ ದುರುದ್ದೇಶದ ಸ್ವಾರ್ಥ ಸೇಡಿಗೊಳಗಾಗಿ ತನ್ನ ಪ್ರತಿಭಾ ಸಂಪನ್ನವಾದ ವ್ಯಕ್ತಿತ್ವವನ್ನು ಕಳಗೊಂಡು ವಿಶ್ವ ಭ್ರಷ್ಟವೆಸಿಸಿದೆ. ತನ್ನ ವಿದ್ವತ್ಪೂರ್ಣ ವೈಜ್ಞಾನಿಕ ಮತ್ತು ಕಲಾ ಸಾಹಿತ್ಯಗಳ ಪರಿಶೋಧನ ಪುನರುದ್ಧಾರಗಳಿಂದ ವಿಶ್ವ ಸಂಸ್ಕೃತಿಯನ್ನೇ ಬೆಳಗಿನ ನಾಡಿಂದು ಸಾಮ್ರಾಜ್ಯಶಾಹಿ ಲಾಲಸೆಗಳ ದುಶ್ಶಕ್ತಿಗಳಿಗೆ ಬಲಿಯಾಗಿದೆ.

ಆದರೆ ಇಂದು ಜರ್ಮನಿಯ ಸುತ್ತು ಹಾಕಲ್ಪಟ್ಟಿರುವ ಕಬ್ಬಿಣದ ಪರದೆಯೊಳಗೆ ಆ ಮೃತ ಜನಾಂಗದ ನಿರ್ಜೀವ ಶರೀರದ ಮೇಲೆ ಅದನ್ನು ಪುನಃಚೇತರಿಸುವ ಪ್ರಯತ್ನದ ಶಸ್ತ್ರಕ್ರಿಯೆ ಜರಗಿಸಲ್ಪಡುತ್ತದೆಂದು ರಾಜಕೀಯ ನಿರೀಕ್ಷಕರ ಅಭಿಪ್ರಾಯವಿದೆ. ಆದರೆ ಕಳೆದೆರಡು ಯುದ್ಧಗಳ ನಂತರ ಆ ಜನಾಂಗದ ಚೈತನ್ಯವು ಸಂಪೂರ್ಣ ನಶಿಸಿದ್ದು ಅದನ್ನಿಂದು ಪುನರುಜ್ಜೀವನಗೊಳಿಸುವ ಆಶೆಯಿಲ್ಲವೆಂದು ದಿವಂಗತ ಡಾ। ಗುಸ್ತಾವ್ ಸ್ಟೋಲ್ಪರ್ ಎಂಬ ಅದೇ ದೇಶದ ಆರ್ಥಿಕ ಶಾಸ್ತ್ರಜ್ಞರು ತಮ್ಮೊಂದು ಗ್ರಂಥದಲ್ಲಿ ತಿಳಿಸಿದ್ದರು. (ಡಾ। ಸ್ಟೋಲ್ಪರರು ಹಿಟ್ಲರನ ದಬ್ಬಾಳಿಕೆಯ ಕಾಲದಲ್ಲಿ ಸ್ವದೇಶವನ್ನು ತ್ಯಜಿಸಿ ಅಮೇರಿಕೆಗೆ ಬಂದು ಅಧ್ಯಕ್ಷ ಟ್ರೂಮನ್ನರಿಗೆ ಎಡ್ವರ್ ಹೂವರರು ತಯಾರಿಸಿದ 'ಜರ್ಮನಿಯ ವರದಿ'ಯನ್ನು ಸಿದ್ಧಗೊಳಿಸಲು ನೆರವಾಗಿದ್ದರು.)

ಡಾ। ಸ್ಟೋಲ್ಪರರ ಗಣನೆಯ ಪ್ರಕಾರ ಮುಂದಿನ ಐವತ್ತು ವರ್ಷಗಳಲ್ಲಿ ಜರ್ಮನಿಯ ಜನಸಂಖ್ಯೆಯು 30 ಮಿಲಿಯಗಳಷ್ಟು ಕಡಿಮೆಯಾಗುವುದೆಂದು ನಿರೂಪಿಸಲ್ಪಟ್ಟಿದೆ. ಈಗ ಅಲ್ಲಿನ ಜನಸಂಖ್ಯೆ 72 ಮಿಲಿಯದಷ್ಟಿದೆ.

ಈ ಅಂಕೆ ಸಂಖ್ಯೆಗೆ ಶಾಸ್ತ್ರೀಯವಾದ ಆಧಾರಗಳೂ ಕೊಡಲಾಗಿವೆ. ಇಂದು ಜರ್ಮನಿಯಲ್ಲಿ 37 ಮಿಲಿಯ ಸ್ತ್ರೀಯರೂ

ಜನಸಂಖ್ಯೆಯಲ್ಲಿ ಕುಂದುತ್ತಿರುವ ಜನಾಂಗ

29 ಮಿಲಿಯ ಪುರುಷರೂ ಇರುವರು. ಸ್ತ್ರೀಯರ ಸಂಖ್ಯೆ ಪುರುಷರಿಗಿಂತ 8 ಮಿಲಿಯ ಹೆಚ್ಚಾಗಿರುವುದು ಮಾತ್ರವಲ್ಲ ಪುರುಷ ಸಂಖ್ಯೆಯ ಹೆಚ್ಚಿನಂಶ ಅತೀ ವೃದ್ಧರಿಂದಲೂ, ಅತೀ ಚಿಕ್ಕವರಿಂದಲೂ ಒಡಗೂಡಿದೆ. ಜನಾಂಗಾಭಿವೃದ್ಧಿಗೆ ಅವಶ್ಯವಾದ ತರುಣರ ಜನಸಂಖ್ಯೆ ಅಲ್ಲಿ ಅತ್ಯಂತ ಕನಿಷ್ಠ ಪ್ರಮಾಣದ್ದಿರುವುದು ಅತ್ಯಂತ ಖೇದಾಸ್ಪದ ಸಂಗತಿಯಾಗಿದೆ. ಕಳೆದ ಯುದ್ಧದಲ್ಲಿ ಅಲ್ಲಿನ ಒಳ್ಳೆ ಅಂಶ ವೃದ್ಧರು ಮತ್ತು ತರುಣರು ಯುದ್ಧದ ಹೊರೆಯನ್ನು ಹೊತ್ತುದರ ಪರಿಣಾಮವಾಗಿ 2 ಲಕ್ಷದ 50 ಸಾವಿರದಷ್ಟು ಜರ್ಮನರು ಆ ಸರಹದ್ದಿನ ತುತ್ತಾದರು. ಇಂದು ಅಲ್ಲಿ ಜನಸಂಖ್ಯೆಯ ಸ್ಥಿತಿ ಸ್ಥಾಪಿಸಲು ಅವಶ್ಯವಾದ ತರುಣ ಮತ್ತು ಮಧ್ಯವಯಸ್ಕರು ಕೇವಲ ಶೇಕಡಾ 50ರಷ್ಟಾದರೂ ಇದ್ದರೆ ಮಾತ್ರ ಜನಾಂಗವು ಕ್ಷೇಮಸ್ಥಿರವಾಗಿ ಬಾಳಬಲ್ಲದು. 1915ರಿಂದ 1927ರೊಳಗೆ ಹುಟ್ಟಿದ್ದು ಸಂಸಾರ ಸಾಗಿಸಲು ಸಮರ್ಥರಾಗಿದ್ದವರಲ್ಲಿ ಹೆಚ್ಚಿನ ಮಂದಿ ಯುದ್ಧದಲ್ಲಿ ಮಡಿದರು, ಉಳಿದವರಲ್ಲಿ ಸಶಕ್ತರಾಗಿ ಉಳಿದವರ ಕೇವಲ ಅತ್ಯಲ್ಪ ಮಂದಿ.

30 ಲಕ್ಷ ಜರ್ಮನರು ಕಳೆದ ಯುದ್ಧದ ಸಂಪೂರ್ಣ ಅಂಗಹೀನರಾಗಿದ್ದು ಇಂದು ಅವರು ಜನಾಂಗದ ವೃದ್ಧಿಗೆ ಹೊರತಾಗಿದ್ದಾರೆ. ಉಳಿದವರಲ್ಲಿ ಹೆಚ್ಚಿನ ಮಂದಿ ನಿರುದ್ಯೋಗಿಗಳಾಗಿರುವರು. ಜೀವನ ಸೌಕರ್ಯಗಳ ಭದ್ರತೆಯಿಲ್ಲದಿರುವುದರಿಂದ ಈಗಿನ ಜರ್ಮನರು ಸಂಸಾರವನ್ನು ಕಟ್ಟಿಕೊಳ್ಳಲು ಇಷ್ಟಪಡುವುದಿಲ್ಲ. ಅಲ್ಲಿ ಅತಿ ಹೆಚ್ಚಾಗಿರುವ ಸ್ತ್ರೀಯರ ಸಮಸ್ಯೆಯನ್ನು ಪರಿಹರಿಸಲು ಬಹುಪತ್ನಿತ್ವವನ್ನು ನ್ಯಾಯಬದ್ಧವಾಗಿ ಮಾಡುವುದರಿಂದಲೂ ಪ್ರಯೋಜನವಿಲ್ಲ. ಕಾರಣ ಪರಕೀಯರ ಹೊಣೆಗಾರಿಕೆಯಿಲ್ಲದ ಆಡಳಿತದಿಂದಾಗಿ ಜೀವನಾವಶ್ಯಕತೆಯ ವಸ್ತುಗಳ ಬೆಲೆ ವಿಪರೀತಕ್ಕೇರಿದ್ದು ಸಂಸಾರವನ್ನು ಸಾಗಿಸಲು ಅತಿ ಕಠಿಣವೆಂಬ ಭಾವನೆಯು ಜರ್ಮನ್ ಜನತೆಯಲ್ಲಿ ಬೇರೂರಿದೆ. ಹೀಗಾದರೆ ಮುಂದೆ ಜನಸಂಖ್ಯೆ ಬೆಳೆಯುವ ಲಕ್ಷಣಗಳಿಲ್ಲ.

ಕಳೆದ ಯುದ್ಧದಿಂದಲೇ ಜರ್ಮನಿಯ ಪಾಲಿಗೆ ಈ ದುಷ್ಪರಿಣಾಮವಾಗಿಲ್ಲ. 1914ರ ಮೊದಲ ವಿಶ್ವ ಯುದ್ಧಕ್ಕಿಂತ ಮುಂಚೆ ಪ್ರಪಂಚದಲ್ಲೇ ಶಕ್ತಿಯುಕ್ತವಾಗಿದ್ದ ಜರ್ಮನ್ ಜನಾಂಗದ ಜನಸಂಖ್ಯಾಭಿವೃದ್ಧಿ ಪ್ರಮಾಣವು ಯುರೋಪಿನ ಇತರ ಹೆಚ್ಚಿನ ಜನಾಂಗಗಳಿಗಿಂತ ಹೆಚ್ಚಾಗಿತ್ತು. 1875ರಿಂದ 1910 ತನಕದ ಅವಧಿಯಲ್ಲಿ ಅಲ್ಲಿನ ಜನಸಂಖ್ಯೆ 25 ಮಿಲಿಯದಷ್ಟು ಹೆಚ್ಚಾಗಿತ್ತು. ವರ್ಷಕ್ಕೆ ಸರಾಸರಿ 18 ಲಕ್ಷ 40 ಸಾವಿರದಂತೆ. (ಹೋಲಿಕೆಗಾಗಿ ಅದೇ ಕಾಲದ ಭಾರತದ ಜನಸಂಖ್ಯೆ ವರ್ಷಕ್ಕೆ ಸರಾಸರಿ 50 ಲಕ್ಷದಂತೆ ಹೆಚ್ಚುತ್ತಿತ್ತೆಂದು ತಿಳಿದಿದೆ.) ಆದರೆ 1910ರಿಂದ 1945ರೊಳಗಿನ ಅವಧಿಯಲ್ಲಿ ಜರ್ಮನಿಯ ಜನಸಂಖ್ಯೆ ವರ್ಷಕ್ಕೆ ಕೇವಲ 10 ಲಕ್ಷದಂತೆ ಮಾತ್ರ ಹೆಚ್ಚಾಗಿದೆ. ಮುಂದೆ ಇದೇ ರೀತಿ ಖಂಡಿತವಾಗಿ ಅಲ್ಲಿನ ಜನಸಂಖ್ಯೆಯ ಪ್ರಮಾಣ ಕ್ಷೀಣವಾಗುವುದು.

ಜರ್ಮನಿಯು ಸೋತು ಸಂಪೂರ್ಣವಾಗಿದೆಂದು ತೋರಿಸುವ ಇತರ ಕೆಲ ಸಂಖ್ಯೆ ಸಂಗತಿಗಳು ಈ ಕೆಳಗಿನಂತಿವೆ.

ಬರ್ಲಿನಿನ ಅಮೇರಿಕನ್ ವಿಭಾಗದಲ್ಲಿ ಮರಣದ ಸಂಖ್ಯೆಗಳು ಜನನದ ಸಂಖ್ಯೆಗಿಂತ ಮೂರು ಪಾಲಿನಷ್ಟು ಮಿಗಿಲಾಗಿವೆ.

ಅಲ್ಲಿ ಶಿಶು-ಮರಣದ ಸಂಖ್ಯೆಯು ಯುರೋಪಿನ ಇತರ ಎಲ್ಲಾ ದೇಶಗಳಿಗಿಂತ ಹೆಚ್ಚಾಗಿದೆ.

ಆಹಾರ ಕೊರತೆಯಿಂದ [illegible] ಶಾರೀರಿಕ ಚೈತನ್ಯವೂ ಕ್ಷೀಣವಾಗುತ್ತಿದೆ.

ಈಗಿರುವ ಅಂತರ್ರಾಷ್ಟ್ರೀಯ ಅಡೆತಡೆಗಳು ತೆಗೆಯಲ್ಪಟ್ಟಕ್ಷಣ ಜರ್ಮನಿಯು

(ಮುಂದೆ ಪುಟ ನೋಡಿ)

THE

UNITED INDIA LIFE ASSURANCE CO., LTD.

ESTD 1906 — H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to.—

INSPECTORATE OFFICE

K. S. Rao Road, Mangalore.

ವೃತ್ತ ವೈವಿಧ್ಯ

ರಾಜೆನ್ ಬಾಬುಗಳು ಪುನಃ ಕೇಂದ್ರ ಮಂತ್ರಿಗಳು?

ಈ ತಿಂಗಳಾಂತ್ಯದಲ್ಲಿ ಕಾಂಗ್ರೆಸ್ ಅಧ್ಯಕ್ಷ ರಾಜೆನ್ ಬಾಬುಗಳು ಮತ್ತೊಮ್ಮೆ ಕೇಂದ್ರ ಸರಕಾರದಲ್ಲಿ ಸೇರಿಸಲ್ಪಡುವರೆಂದು ಸುದ್ದಿಯಿದೆ. ಈ ಸಲ ಅವರಿಗೆ ಆರ್ಥಿಕ ವ್ಯವಹಾರ ಖಾತೆಯನ್ನು ಕೊಡಲಾಗುವುದೆಂದು ದಿಲ್ಲಿ ಕೇಂದ್ರಗಳಲ್ಲಿ ಹೇಳಲಾಗುತ್ತಿದೆ. ಅಂಥ ಸಂದರ್ಭದಲ್ಲಿ ಸಂಯುಕ್ತ ಪ್ರಾಂತ್ಯದ ಪುರುಷೋತ್ತಮ್ ದಾಸ್ ಟಂಡನ್ನರು ಕಾಂಗ್ರೆಸ್ ಅಧ್ಯಕ್ಷಪದಕ್ಕೇರಿಸಲ್ಪಡಬಹುದೆಂದೂ ಹೇಳಲಾಗಿದೆ.

ಲಾಹೋರಿನಲ್ಲಿ ಗೂಂಡಾ ರಾಜ್ಯ

ಪಾಕಿಸ್ತಾನದ ಲಾಹೋರಿನಲ್ಲಿ ಪುಂಡ ಜನರು ನಾಗರೀಕ ಜೀವನವನ್ನು ಕೆಡಿಸಹತ್ತಿರುವರು. ಟಿಕೇಟಿಲ್ಲದೆ ರೈಲು, ಮೋಟಾರು, ಸಿನೇಮಾಗಳಲ್ಲಿ ನುಗ್ಗುವುದು ದಿನನಿತ್ಯದ ವ್ಯವಹಾರವಾಗಿದೆ. ತಡೆದರೆ ಚೂರಿಗಳನ್ನು ಹೊರತೆಗೆವರು. ಅಲ್ಲಿ ಚಿಕಾಗೊ ನಗರದ ಪುಂಡರ ಪಾಳಯವಾಗಿದೆಂದು ಲಾಹೋರಿನ ಸಿವಿಲ್ ಎಂಡ್ ಮಿಲಿಟರಿ ಗಜೆಟ್ ಎಂಬ ಪತ್ರಿಕೆ ವರದಿ ಮಾಡಿದೆ.

ಸಿಂಹಳ ಸ್ತ್ರೀಯರು ಕೃಷಿ ಕೆಲಸಕ್ಕೆ

ಈ. ಎಚ್. ಕ್ರಾತರ್ ಎಂಬ ಆಂಗ್ಲ ಕೃಷಿ ತಜ್ಞೆಯ ನಿರ್ದೇಶಕತ್ವದಲ್ಲಿ ಸಿಂಹಳದ ನೂರು ಮಂದಿ ವಿದ್ಯಾವತಿ ಮಹಿಳೆಯರು ಇತ್ತೀಚೆಗೆ ಕೃಷಿ ಕೆಲಸವನ್ನು ಕಲಿಯಲಾರಂಭಿಸಿರುವರು. ಜನತೆಯಲ್ಲಿ ಹೆಚ್ಚು ಆಹಾರದ ಹುಮ್ಮಸ್ಸನ್ನು ಹೆಚ್ಚಿಸಲು ನಡೆಸಲ್ಪಡುವ ಪ್ರಯತ್ನಗಳಲ್ಲಿ ಇದೊಂದೆಂದು ಹೇಳಲಾಗಿದೆ.

ಮಹಿಳಾ ಕಂಡಕ್ಟರರುಗಳು

ಮದ್ರಾಸ್ ನಗರದ ಸಿಟಿಬಸ್ಸು ಮತ್ತು ಟ್ರಾಮುಗಳಲ್ಲಿ ಮಹಿಳೆಯರನ್ನು ಕಂಡಕ್ಟರ್ ಕೆಲಸಕ್ಕೆ ನೇಮಿಸಿದರೆ ಈಗಿನ ಬಲಾತ್ಕಾರದ ನುಗ್ಗುವಿಕೆ, ಹದಮೀರಿ ತುಂಬುವಿಕೆಗಳು ಕಡಿಮೆಯಾಗಬಹುದೆಂದು ಪರ್ಯಾಲೋಚಿಸಿ ಈ ಪ್ರಯೋಗವನ್ನು ಸದ್ಯದಲ್ಲೇ ಮಾಡಿ ನೋಡಲಿಕ್ಕಿದೆಂದು ತಿಳಿದುಬರುತ್ತದೆ. ಹಸುರು ಮತ್ತು ಬಿಳಿ ಪೋಷಾಕಿನ ಸ್ತ್ರೀ ಕಂಡಕ್ಟರರುಗಳು ಅಲ್ಲಿನ ಕೆಲವು ಬಸ್ಸುಗಳಲ್ಲಿ ನೇಮಿಸಲ್ಪಡಲಿದ್ದಾರೆ.

ಹೈದರಾಬಾದು ಪಾಕಿಸ್ತಾನಕ್ಕೆ ಸೇರಿದರೆ!

ಮುಸ್ಲಿಂ ಸಾಮ್ರಾಜ್ಯದ ಕನಸ್ಸು

ಕೊನೆಯ ಹಂತದಲ್ಲಿ ನಿಜಾಮರು ಪಾಕಿಸ್ತಾನಕ್ಕೆ ಸೇರುವರೆಂದು ಲಂಡನಿನ ಮುಸ್ಲಿಂ ಕೇಂದ್ರಗಳಲ್ಲಿ ಮಾತನಾಡಿಕೊಳ್ಳಲಾಗುತ್ತಿದೆ. ಈಗ ನವಂಬರದ ವರೆಗೆ ಭಾರತ ಹೈದರಾಬಾದುಗಳೊಳಗೆ ಇದ್ದ ಯಥಾಸ್ಥಿತಿ ಒಪ್ಪಂದದ ಅವಧಿ ಮುಗಿದಾಕ್ಷಣ ಭಾರತ ಸರಕಾರವನ್ನು ತೊರೆದರೆ ಗೀಡು [illegible]ಮರು ಈ ಧೋರಣೆ ವಹಿಸಬಹುದೆಂದು ಹೇಳಲಾಗಿದೆ. ಪಾಕಿಸ್ತಾನವನ್ನು ಒಂದು ಸಾಮ್ರಾಜ್ಯವನ್ನಾಗಿ ಮಾಡಿ ಜಿನ್ನರು ನಿಜಾಮನನ್ನು ಅದರ ಚಕ್ರವರ್ತಿಯಾಗಿ ಘೋಷಿಸುವರೆಂದೂ, ಬ್ರಿಟಿಷರು ತಮ್ಮಿಂದ ಕಿತ್ತುಕೊಂಡ ಮುಸ್ಲಿಂ ಸಾಮ್ರಾಜ್ಯವನ್ನು ಪುನರ್ ಸ್ಥಾಪಿಸುವುದಕ್ಕೆ ಇದೊಂದೇ ಯೋಗ್ಯ ಮಾರ್ಗವೆಂದೂ ಲಂಡನ್ ಮುಸ್ಲಿಮರ ಅಭಿಪ್ರಾಯವಿರುವುದಾಗಿ ತಿಳಿದುಬರುತ್ತದೆ. ಅಂತೇ ಭಾರತದಲ್ಲಿನ ಹೆಚ್ಚಿನ ಪತ್ರಿಕೆಗಳು ನವಂಬರದೊಳಗೆ ಹೈದರಾಬಾದನ್ನು ವಶಪಡಿಸಿ ಅಲ್ಲಿ ಶಾಂತಿ ಶಿಸ್ತುಗಳನ್ನು ಸರಿಪಡಿಸಬೇಕೆಂದು ಒಕ್ಕೊರಲ್ಲಿ ಸಾರುತ್ತಿವೆ.

ಚಿತ್ರಗಾರ ರಾಜಾಜಿ

ಮದ್ರಾಸಿನ ಗೋಕುಲಂ ಹರಿಜನ ವಸಾಹತನ್ನು ಸಂದರ್ಶಿಸಿದಾಗ ರಾಜಾಜಿಯ ಬಳಿ ಓರ್ವ ಚಿತ್ರಗಾರನು ತಾನು ಬಿಡಿಸಿದ ಅವರ ಒಂದು ಭಾವಚಿತ್ರದ ಮೇಲೆ ಸಹಿ ಹಾಕಲು ಭಿನ್ನವಿಸಿದನು. ರಾಜಾಜಿ ಚಿತ್ರವನ್ನು ಕೈಯಲ್ಲಿ ತೆಗೆದುಕೊಂಡು 'ತಲೆ ಆಕೃತಿ ಸ್ವಲ್ಪ ಬದಲಾಗಬೇಕು' ಎನ್ನುತ್ತ ಒಂದು ಪೆನ್ಸಿಲಿನಿಂದ ಅದನ್ನು ತಿದ್ದಿದರು. ಮತ್ತೆ ರಾಜಾಜಿ ಗಾಂಧೀಜಿಯಂತೆ ಐದು ರೂಪಾಯಿ ಕೇಳಿದರು. ಚಿತ್ರಗಾರ ಅದನ್ನು ಕೊಟ್ಟ. ರಾಜಾಜಿ ಆ ಹಣವನ್ನು ಹರಿಜನ ನಿಧಿಗೆ ಕೊಟ್ಟರು.

ಹಿಂದಿ ವಿರೋಧಿಗಳ ಹೇಡಿತನ

ಕಾರ್ಪೊರೇಶನ್ ಸ್ಟೇಡಿಯಮ್‌ದಲ್ಲಿ ರಾಜಾಜಿಯ ಭಾಷಣ ಏರ್ಪಡಿಸಿದ್ದಾಗ ಕೆಲ ಹಿಂದೀ ವಿರೋಧಿಗಳು ಕಿರುಕುಳ ಮಾಡಲು ಪ್ರಯತ್ನಿಸಿದರು. ಹಸಿ ಸೆಗಣಿ ಮುದ್ದೆಗಳ ಒಂದು ರಾಶಿಯನ್ನು ಸಿದ್ಧ ಮಾಡಲಾಗಿತ್ತು. ಇದನ್ನು ಕಂಡ ಇತರ ಜನರು ರೊಚ್ಚಿಗೆದ್ದು 'ಸೆಗಣಿಗೆ ಕೈ ಹಾಕಿದರೆ ಕತ್ತು ಹಿಚುಕುವುದೇ ಖಂಡಿತ'ವೆಂದು ನಿರ್ಧಾರ ಸೂಚಿಸಿದರು. ಮತ್ತೆ ಹಿಂದೀ ವಿರೋಧಿಗಳಿಗೆ ಅದನ್ನು ಮುಟ್ಟಲು ಧೈರ್ಯ ಸಾಲಲಿಲ್ಲ.

ಗವರ್ನರ್ ಪತ್ನಿಗೆ ಕುಂಕುಮಾಕ್ಷಿತ

ತಂಬಾರಮಿನಲ್ಲಿ ರಾಜಾಜಿ ಕ್ಷಯರೋಗ ಚಿಕಿತ್ಸಾಲಯದ ಶಂಖು ಸ್ಥಾಪನೆ ಮಾಡಿದರು ಆ ಸಮಯದಲ್ಲಿ ನೆರೆದ ಮಹಿಳೆಯರು ಅವರಿಗೆ ಅವರಿಗೊಂದು ತೆಂಗಿನ ಕಾಯನ್ನು ಕೊಟ್ಟರು. ರಾಜಾಜಿ ಅದನ್ನು ಶಂಬು ಕಲ್ಲಿನ ಮೇಲೆ ಒಡೆದು ಅದರ ನೀರಿನಿಂದ ಅಭಿಷೇಕ ಮಾಡಿದರು. ನಂತರ ಮಹಿಳೆಯರು ಅವರಿಗೆ ಕುಂಕುಮಾಕ್ಷಿತಗಳನ್ನು ಕೊಟ್ಟರು. ಅದನ್ನು ರಾಜಾಜಿ ಗವರ್ನರ್ ಪತ್ನಿಯಾದ ಲೆಡಿ ನ್ಯಾ ಅವರ ತಲೆಮೇಲೆರೆಚಿ ಶುಭ ಕೋರಿದರು.

ಇನ್ನೊಬ್ಬ ಶ್ರೀಮಂತ ಭಾರತೀಯರು

ಶ್ರೀಮಂತ ಗಿರಿಯಲ್ಲಿ ನಿಜಾಮರಿಗೆ ಜಗತ್ತಿನಲ್ಲೇ ಪ್ರಥಮ ಸ್ಥಾನ ಸಲ್ಲುವುದಾದರೂ ಈಗವರ ಹೆಚ್ಚಿನ ಹಣವು ಇಂಗ್ಲೆಂಡಿನಿಂದ ಕಪ್ಪು ಸಂತೆಯ ಬೆಲೆಗೆ ಶಸ್ತ್ರಾಸ್ತ್ರಗಳನ್ನು ಕೊಳ್ಳುವುದರಲ್ಲಿ ಕರಗುತ್ತ ಬಂದಿದೆ. ಅದೇ ರೀತಿ ಎರಡನೆಯವರಾದ ಬರೋಡೆಯ ನವಾಬನು ತನ್ನ ಧನವನ್ನು ಕುದುರೆ ಕೊಳ್ಳುವುದರಲ್ಲೇ ವ್ಯಯಿಸುತ್ತಲಿದ್ದಾರೆ. ಬಿಹಾರಿನ ದರ್ಭಾಂಗಾ ಸಂಸ್ಥಾನದ ಮಹಾರಾಜರು ಭಾರತದಲ್ಲಿನ ಅತೀ ದೊಡ್ಡ ಜಮೀನ್ದಾರರು. ಜಮೀನ್ದಾರೀ ರದ್ದತಿಯ ಶಾಸನವು ಬರಲಿರುವುದರಿಂದ ಈ ಮಹಾರಾಜರಿಗೆ ತುಂಬಾ ನಷ್ಟವಾಗಲಿದೆಯಂತೆ. ಆದರೂ ವರ್ಷಕ್ಕೆ ಸುಮಾರು 40 ಲಕ್ಷ ರೂಪಾಯಿಗಳಿಗೆ ಮೋಸವಿಲ್ಲ. ಇದನ್ನು ಕಟ್ಟಿಕೊಂಡು ಮಹಾರಾಜರು ಇಂಗ್ಲೆಂಡಿನಲ್ಲೊ ಸ್ವಿಟ್ಜರ್ಲೆಂಡಿನಲ್ಲೊ ಹೋಗಿ ವಾಸಿಸುವರಂತೆ.

ಪಾಶ್ಚಿಮಾತ್ಯರಿಗೆ ಯೋಗಾಭ್ಯಾಸ

ಯುಕ್ತ ರಾಷ್ಟ್ರ ಸಂಘದ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಉಪಸಂಸ್ಥೆಯ ನಿರ್ದೇಶಕರಾದ ಡಾ। ಜ್ಯೂಲಿಯನ್ ಹಕ್ಸ್‌ಲಿ ಅವರು 'ಮಾನಸಿಕ ಚಿಕಿತ್ಸೆಯ ವಿಶ್ವ ಸಂಸ್ಥೆ'ಯೊಂದನ್ನು ಸ್ಥಾಪಿಸಬೇಕೆಂದೂ ಅದರಲ್ಲಿ ಭಾರತೀಯ ಯೋಗಾಭ್ಯಾಸದ ಸಾಧನಗಳನ್ನು ಕಲಿಸಬೇಕೆಂದೂ ಸೂಚಿಸಿರುವರು.

'ನಾವೀ ಅಭ್ಯಾಸದ ವೈಜ್ಞಾನಿಕ ಉಪಯೋಗವನ್ನು ಅರಿತುಕೊಂಡರೆ ತುಂಬಾ ಸಹಾಯವಾಗುವುದು' ಎಂದವರು ತಿಳಿಸುತ್ತಾರೆ.

ಐಸ್ ಕ್ರೀಮ್, ನರ್ತಕ ಪ್ರಿಯ ನಿಜಾಮರು

ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಚೀಸ್ ರ್‍ಯಾಟ್ ಎಂಬ ಲೇಖಕರು ಹೀಗೆ ಬರೆಯುತ್ತಾರೆ: ಇಂದಿಗೆ 37 ವರ್ಷಗಳಿಂದ ಈಗಿನ ನಿಜಾಮರು ಹಣ ಸಂಗ್ರಹಿಸುತಿದ್ದಾರೆ. ತಮ್ಮ ತಂದೆ ದುಂದುಗಾರಿಕೆ ಮಾಡುತಿದ್ದಂತೆ ಇವರದನ್ನು ಉಳಿಸುತ್ತಾರೆ. ಇಷ್ಟಾದರೂ ಪರ್ಶಿಯದಿಂದ ಸುಂದರ ನರ್ತಕಿಯರು ಬಂದರೆ ನಿಜಾಮರ ಅಂತಃಪುರದಲ್ಲಿ ಅವರಿಗೆ ಸ್ವಾಗತವಿದೆ. ಇಂದಿಗೆ ಮೂರು ವರ್ಷಗಳ ಹಿಂದಿನ ತನಕ ನಿಜಾಮರಿಗೆ ಮಕ್ಕಳು ಹುಟ್ಟಿವೆ. ಅವರ ಅರಮನೆಯ ಒಂದೊಂದು ಕೋಣೆಯಲ್ಲಿ ಓರ್ವೋರ್ವಳು ಅವರ ಮಕ್ಕಳನ್ನು ಆರೈಕೆ ಮಾಡುತ್ತಿರುವರು. ಈ ಮುದಿಯರು ಬಾಹ್ಯ ಪ್ರಪಂಚವನ್ನು ನೋಡುವಂತಿಲ್ಲ. ಹೈದರಾಬಾದನ್ನು ಹೊರಗಡೆಯಿಂದ ಭಾರತ ಸರಕಾರವು ಒಳಗಡೆಯಿಂದ ರಜ್ವಿಯು ಗೊಂದಲಕ್ಕೀಡು ಮಾಡಿದರೂ ಇವೆರಡರಿಂದ ನಿಜಾಮರ ಅತಿ ಪ್ರೀತಿಯ ಐಸ್ ಕ್ರೀಮ್ ಮತ್ತು ಹಣ್ಣು ಹಂಪಲಿನ ರಸಾಯನಕ್ಕೆ ಕೊರತೆಯುಂಟು ಮಾಡಲಿಕ್ಕಾಗಲಿಲ್ಲ.

ಕನಸ್ಸಿನ ರಾಜ್ಯದಲ್ಲಿ ಕಷ್ಟ

ಪಾಕಿಸ್ತಾನದಲ್ಲಿ ನಿರಾಶ್ರಿತರ ಉಪಟಳದಿಂದ ಗಂಭೀರ ಪರಿಸ್ಥಿತಿ ಉಪಸ್ಥಿತವಾಗಿದೆಂದು ಗವರ್ನರ್ ಜನರಲ್ ಜಿನ್ನರೇ ಸಾರಿರುವರು. ಜಿನ್ನರ ತಲೆಶೂಲೆಗೆ ಅಲ್ಲಿನ ಪುಂಡಹೂರರೂ ಕಾರಣವಾಗಿರುವರು. ಸಿಂಧ್ ಪ್ರಾಂತ್ಯದಲ್ಲಿ ಅವರ ಕಾಟ ಮಿತಿ ಮೀರಿದೆ. ಸಿಂಧವನ್ನು ಹೂರರ ತೊಂದರೆಯಿಂದ ತಪ್ಪಿಸಲು ಈಗ ವಿಚಾರಣೆಗೊಳಗಾದ ಖುರೊ ಅವರಿಂದ ಮಾತ್ರ ಸಾಧ್ಯವಂತೆ. ಆದರೆ ಗವರ್ನರ್ ಹಿದಾಯಿತುಲ್ಲರು ಸಿಂಧದ ಗವರ್ನರ್ ಪದದಿಂದ ಕೆಳಗಿಳಿಯದೆ ತಾನು ಅದರಲ್ಲಿ ಕೈ ಹಾಕುವುದಿಲ್ಲವಾಗಿ ಖುರೋರು ತಿಳಿಸಿದ್ದಾರಂತೆ.

ಸುದ್ದಿ ಸಂಗ್ರಹ

ಅಮೇರಿಕದ ಇಂಡಿಯಾನಾ ಪ್ರಾಂತ್ಯದ ಎಂಡರ್ಸನ್ ಎಂಬಲ್ಲಿನ ಪೀಸ್ ಮೇಕರ್ (ಶಾಂತಿ ಮಾಡುವವನೆಂಬರ್ಥ) ಎಂಬವನು ತನ್ನ ಹೆಂಡತಿಯೊಡನೆ ಜಗಳಾಡಿ ವಿವಾಹ ವಿಚ್ಛೇದ ಮಾಡಿಕೊಂಡಿರುವನು.

✠

ಇಂಗ್ಲೆಂಡಿನ ಸ್ತ್ರೀ ಕೈದಿಗಳಿಗೆ ವಿಶೇಷ ತರದ ಬಂಧಿವಾಸ ಯೋಜನೆಯನ್ನು ಏರ್ಪಡಿಸಲು ಸಿದ್ಧತೆ ಮಾಡಿದೆ. ಅಂಥವರನ್ನು ಬೆಳಗ್ಗಿನ ಹೊತ್ತಿನಲ್ಲಿ ಬೇಕಾದಲ್ಲಿ ಮನೆ ಕೆಲಸಕ್ಕಾಗಲಿ, ಇಲ್ಲವೆ ಕಾರ್ಖಾನೆ ಕೆಲಸಕ್ಕಾಗಲಿ ಬಿಡಲಾಗುವುದು. ಕ್ಲಪ್ತ ಸಮಯಕ್ಕೆ ಅವರು ಹಿಂದಿರುಗಬೇಕು.

✠

ಮುಖ ಒರಸುವ ಕೈವಸ್ತ್ರವನ್ನು ಶುದ್ಧವಾಗಿಸದಿದ್ದರೆ ಅಧರ ರೋಗಾಣುಗಳುತ್ಪನ್ನವಾಗುವವು. ಚೀಲದಲ್ಲಿ ಎರಡು ದಿವಸ ಇರಿಸಿದ ಒಂದು ಕೈವಸ್ತ್ರವನ್ನು ಗಾಳಿಯಲ್ಲಿ ಕುಲುಕಿದರೆ ಅದರಿಂದ 15 ಸಾವಿರ ರೋಗಾಣುಗಳು ಹೊರ ಬೀಳುತ್ತವೆಂದು ಕಂಡು ಹಿಡಿಯಲಾಗಿದೆ. ಮಾತ್ರವಲ್ಲ ಈ ಅವಧಿಯಲ್ಲಿ ಅವು ಗಾಳಿ ಬಿಸಿಲಿನ ರೋಗಾಣುನಾಶಕ ಶಕ್ತಿಯಿಂದಲೂ ನಾಶವಾಗದಷ್ಟು ಕೊಬ್ಬುವುವಂತೆ.

✠

ಯುದ್ಧ ಕಾಲದಲ್ಲಿ ಸೊಫಿಕೊಂಟೊಸ್ ಎಂಬ ಗ್ರೀಕ್ ತರುಣಿಯೋರ್ವಳು ಓರ್ವ ಅಮೇರಿಕನನನ್ನು ವರಿಸಿದ್ದಳು. ಅವಳು ತನ್ನ ಗಂಡನ ದೇಶಕ್ಕೆ ಹೋದಾಗ ಗಂಡ ಅವಳನ್ನು ಸಮುದ್ರ ಸ್ನಾನಕ್ಕೆ ಬರಲು ಒತ್ತಾಯಪಡಿಸಿದ. ಅವಳು ಒಪ್ಪೆನೆಂದಳು. ಕಾರಣ: "ನನಗೆ ಅಮೇರಿಕನ್ ಸ್ತ್ರೀಯರಂತೆ ಅತಿ ಬತ್ತಲೆ ಪೋಷಾಕಿನಲ್ಲಿರಲು ಅಸಹ್ಯವೆನಿಸುತ್ತದೆ."

✠

೧ನೇ ಪುಟದಿಂದ

ಹೆಚ್ಚಿನ ಜನರು ಇತರ ದೇಶಗಳಿಗೆ ಸ್ಥಳಾಂತರವಾಗುವರು.

ಈಗಾಗಲೇ ಜರ್ಮನಿಯು ತರುಣರ ಕೊರತೆಯ ಪರಿಣಾಮವನ್ನು ಅನುಭವಿಸಹತ್ತಿದೆ. 1945ರಲ್ಲಿ ರ್‍ಹೂರ್ ಕಲ್ಲಿದ್ದಲು ಪ್ರದೇಶದಲ್ಲಿ ಕೆಲಸ ಮಾಡುವ ಗಣಿಗಾರರಲ್ಲಿ ಶೇಕಡಾ 65ರಷ್ಟು ಮಂದಿಗಳು 40 ವರ್ಷಕ್ಕೆ ಮಿಕ್ಕಿದವರಿದ್ದರು. 1915ರಲ್ಲಿ ಈ ವಯಸ್ಸಿನವರ ಸಂಖ್ಯೆ ಶೇಕಡಾ 25ಕ್ಕಿಂತಲೂ ಕಡಿಮೆಯಿತ್ತು.

ಸದ್ಯದಲ್ಲಿ ಜರ್ಮನಿಯನ್ನು ಎರಡು ಜನಾಂಗವಾಗಿ ವಿಭಾಗಿಸುವುದರಲ್ಲಿ ಸಂದೇಹವಿಲ್ಲ.

ರಕ್ಕಸನಂತೆ ಇಂದಿಗೆ 30 ವರ್ಷಗಳಿಂದ ಜಗತ್ತನ್ನು ಪೀಡಿಸುತಿದ್ದ ಜರ್ಮನಿಯು ಖಂಡಿತ ಮೃತಪಟ್ಟಿದೆ. ಆದರೆ ಅದರ ಅದೃಶ್ಯ ಪಿಶಾಚವೊಂದು ಯುರೋಪಿನ ದೇಶಗಳ ಗಗನದಲ್ಲಿ ಸಂಚರಿಸುವಂತಿದೆ. ಆದರೆ ಒಂದು ವಿಷಯವನ್ನು ಗಮನಿಸಬೇಕು. ಜಗತ್ತು ಶಾಂತಿ ಪಥದಲ್ಲಿ ಪುನಃರ್ರಚನೆ ಹೊಂದಿದರೆ ಮಾತ್ರ ಜರ್ಮನಿಯ ಸೋಲು ಶಾಶ್ವತವಾಗುವುದು ಮಾತ್ರವಲ್ಲ ಅದು ಸಾರ್ಥಕದ್ದೂ ಆಗುವುದು. ಜರ್ಮನಿಯು ಅಪರಾಧ ಮಾಡಿರುವುದೆಂದು ಸಮಾನ ಅಕೃತ್ಯಗಳಿಂದ ಅದರ ಮೃತ ಶರೀರದ ಮೇಲೇ ಶಾಂತಿಯನ್ನೆಂದಿಗೂ ರಚಿಸಲಾಗುವುದಿಲ್ಲ.

ರಶ್ಯಾದಲ್ಲಿನ ಕಾರ್ಖಾನೆಯ ಜೀವನ ಸೌಕರ್ಯಗಳು

ಯಾವ ಪದ್ಧತಿಯಿಂದಲೂ ಉತ್ತಮ ವಿಧಾನ

ಭಾರತ ಸರಕಾರದ ಪ್ರಗತಿಪರ ಮಜೂರ ಧೋರಣೆ

ಕೈಗಾರಿಕೆಗಳು ಅಭಿವೃದ್ಧಿ ಹೊಂದಿದರೆ ದೇಶದ ಸಂಪತ್ತು ಹೆಚ್ಚುವುದು. ಆಧುನಿಕ ಜಗತ್ತಿನಲ್ಲಿ ಯಾವ ದೇಶವೂ ಕೈಗಾರಿಕೆಯಲ್ಲಿ ಹಿಂದೆ ಬೀಳುವುದು ಹಿತಕರವಲ್ಲ. ಮಜೂರರ ಹಿತವಾದರೂ ಅಷ್ಟೇ ಮಹತ್ವದ್ದೆಂಧು ಪ್ರತ್ಯೇಕ ಹೇಳಬೇಕಾಗಿಲ್ಲ ಕಾರಣ ದೇಶದ ರಥಕ್ಕೆ ಕೈಗಾರಿಕೆ ಮತ್ತು ಮಜೂರ ರೆಂಬೆರಡು ಗಾಲಿಗಳು. ಯಾವದಾದರೊಂದು ಅವ್ಯವಸ್ಥಿತವಾದರೆ ರಥ ಸುಗಮವಾಗಿ ಸಾಗದು.

ಈ ಸಂಗತಿಯನ್ನು ನಮ್ಮ ಸರಕಾರಗಳು ಆಳವಾಗಿ ಮನಗಂಡಂತಿದ್ದು ಮಜೂರ ಸಚಿವರಾದ ಮಾನ್ಯ ಜಗಜೀವನರಾಮರವರು ತಮ್ಮ ಇತ್ತೀಚಿಗಿನ ಹೇಳಿಕೆಗಳಲ್ಲಿ ಮಜೂರ ಅಭ್ಯುದಯವನ್ನು ಒತ್ತಿ ಹೇಳಿದ್ದು ಸಂತೋಷದ ಸಂಗತಿ. ಆದರೆ ಕೈಗಾರಿಕೆ ಪ್ರಭೃತಿಗಳು ಮಜೂರ ಶ್ರೇಯಸ್ಸಿನ ಕುರಿತು 'ಒಡೆತನದ ನಿಷ್ಕ್ರಿಯೆ, ಅಲಕ್ಷ್ಯ'ಗಳನ್ನು ತೋರಿಸುವುದು ಖೇದಾಸ್ಪದ ಸಂಗತಿಯಾದರೂ ದೇಶದ ಮಜೂರ ವರ್ಗದ ಚೇತನವು ಅವರನ್ನು ಶೀಘ್ರದಲ್ಲಿ ಸರಿದಾರಿಗೆ ತರುವುದರಲ್ಲಿ ಸಂದೇಹವಿಲ್ಲ ಈ ಸಂದರ್ಭದಲ್ಲಿ ನಾವು ರಶ್ಯದಲ್ಲಿನ ಕಾರ್ಖಾನೆ ಜೀವನವು ಹೇಗಿದೆಂಬುದನ್ನು ಸ್ವಲ್ಪ ತಿಳಕೊಳ್ಳುವುದು ಅತ್ಯಾವಶ್ಯಕ ರಶ್ಯದ ರಾಜಕೀಯವನ್ನು ನಾವು ಸದ್ಯಕ್ಕೆ ಒತ್ತಟ್ಟಿಗಿರಿಸೋಣ. ಎಲ್ಲಾ ಸಂಸ್ಕೃತಿಗಳಲ್ಲಿನ ಉತ್ತಮವಾದುದನ್ನು ಮಾತ್ರ ನಾವು ಆರಿಸಿ ನಮ್ಮದನ್ನು ಪರಿಪೂರ್ಣಗೊಳಿಸಬೇಕಾದುದು ಧ್ಯೇಯವಾಗಿಟ್ಟುಕೊಂಡಿದ್ದೇವೆಯಲ್ಲವೆ?

ಆಧುನಿಕ ಸೌಕರ್ಯಗಳು

ರಶ್ಯದಲ್ಲಿನ ಕಾರ್ಖಾನೆ ಕೆಲಸಗಾರರಿಗೆ ಪ್ರತ್ಯೇಕ ವಸತಿಗೃಹಗಳಿವೆ ಈ ಮಜೂರ ವಸಾಹತುಗಳು ಆನಂದದಾಯಕವಾದ ಪ್ರಕೃತಿ ಸೌಂದರ್ಯದ ವಿಶಾಲ ಬಯಲು ಪ್ರದೇಶದಲ್ಲಿ, ಆರೋಗ್ಯಕರವಾದ ಗಾಳಿ ಬೀಸುವಲ್ಲಿ ನಿರ್ಮಿಸಲ್ಪಡುತ್ತವೆ ಹೆಚ್ಚಾಗಿ ಮನಮೋಹಕವಾದ ಗ್ರಾಮ ಪ್ರದೇಶದಲ್ಲಿ ಅವುಗಳು ಸ್ಥಾಪಿಸಲ್ಪಡುವುದಾದರೂ ಆಧುನಿಕ ನಗರ ಜೀವನಾವಶ್ಯಕತೆ, ಸೌಕರ್ಯಗಳೆಲ್ಲವೂ ಅಲ್ಲಿ ಒದಗಿಸಲ್ಪಡುತ್ತವೆ ನಮ್ಮ ದೇಶದ ದೊಡ್ಡ ಕೈಗಾರಿಕೆ ಕೇಂದ್ರಗಳಲ್ಲಿರುವಂತೆ ಸುತ್ತುವ ಅಗಲಕಿರಿದು ಗಲ್ಲಿಗಳನ್ನಾಗಲಿ, ಕೊಳೆತುನಾರುವ ರಸ್ತೆ ಬದಿಗಳನ್ನಾಗಲಿ ಬಳಸಿಕೊಂಡು ಮಜೂರನು ಗಾಳಿ ಬೆಳಕಿಲ್ಲದ ತನ್ನ ಅನಾರೋಗ್ಯಕರ ಬಿಲಗಳಿಗೆ ನುಸುಳುವ ದುರಂತ ಪರಿಸ್ಥಿತಿ ಅಲ್ಲಿಲ್ಲ ರಶ್ಯನ್ ಮಜೂರನ ಮನೆ ಶುಚಿತ್ವ, ಚೊಕ್ಕಟತನದ ಮಾದರಿಯೇ ಆಗಿದೆಯೆಂದರೆ ಅತಿಶಯವಲ್ಲ. ರಶ್ಯನ್ ಮಹಿಳೆಯು ಕಾರ್ಖಾನೆಗೆ ಹೋಗುವ ಮುನ್ನ ಬೆಳಿಗ್ಗೆ ಎದ್ದು ಮನೆ ನೆಲ ತೊಳೆದು ಅಡಿಗೆ ಮಾಡಿ ಮಕ್ಕಳ ಆರೈಕೆಯನ್ನು ನೋಡಿಕೊಳ್ಳುವಳು ಹೀಗೆ ರಶ್ಯನ್ ಮಜೂರನ ಗೃಹ ಜೀವನವು ಸಂತೃಪ್ತಿಯದೂ ಶಾಂತಿಮಯವಾದುದೂ ಮತ್ತು ಆನಂದದಾಯಕವೂ ಆಗಿದೆ

ಜೀವನೋನ್ನತ್ಯ

ರಶ್ಯನ್ ಕಾರ್ಖಾನೆಗಳಲ್ಲೂ ಅವರ್ಣನೀಯವಾದ ಸೌಕರ್ಯಗಳು ಮಜೂರನಿಗಾಗಿ ಕಲ್ಪಿಸಲ್ಪಟ್ಟಿವೆ ಮಜೂರನ ಸಾಮಾಜಿಕ ಆವಶ್ಯಕತೆಗಳನ್ನೆಲ್ಲ ಅಲ್ಲಿನ ಕಾರ್ಖಾನೆಗಳು ಪೂರೈಸುವವು. ಹೀಗೆ ಅಲ್ಲಿನ ಕಾರ್ಖಾನೆಗಳು ಜೀವನ ಯೋಗ್ಯವೂ ಜೀವಿತಪೋಷಕವೂ ಆಗಿವೆಯಾಗಿವೆಯೆಂದರೆ ಕಿಂಚಿತ್ತಾದರೂ ಉತ್ಪ್ರೇಕ್ಷೆಯಾಗಲಾರದು.

ಅಲ್ಲಿನ ಔದ್ಯೋಗಿಕ ಸಂಸ್ಥೆಗಳ ಆಡಳಿತಗಾರನು ಮಜೂರರ ಮಾನಸಿಕ ಪರಿಸ್ಥಿತಿಯನ್ನೂ, ಅವರ ಗುಣಗಳನ್ನೂ, ದೋಷಗಳನ್ನೂ ತಿಳಕೊಳ್ಳಲು ಪ್ರಯತ್ನಿಸುತ್ತಾರೆ ಪ್ರತಿಯೊಂದು ವಿಧಾನದಲ್ಲೂ ಮಜೂರರ ಜೀವನ ಸ್ಥಿತಿಗಳನ್ನು ಸುಧಾರಿಸುತ್ತ ಜನಜೀವನದೊಡನೆ ನಿಕಟವಾದ ಸಂಬಂಧವನ್ನಿರಿಸಿಕೊಳ್ಳುವುದು ಅಲ್ಲಿನ ವ್ಯವಸ್ಥಾಪಕರ ಉದ್ದೇಶವಿರುತ್ತದೆ

ಹೀಗೆ ರಶ್ಯನ್ ಕಾರ್ಖಾನೆಯು ಕೇವಲ ಒಂದು ತಯಾರಿ ಸಂಸ್ಥೆ ಮಾತ್ರವೇ ಅಲ್ಲ ಅದು ತನ್ನ ಮಜೂರರಿಗೆ ಶಿಕ್ಷಣವನ್ನೂ, ಮನರಂಜನೆಯನ್ನೂ ಕೊಡುವಂತಹದಾಗಿದೆ ಮಜೂರ ವರ್ಗದವರು ತಮ್ಮ ಮಕ್ಕಳನ್ನು ಆರೈಕೆ ಮಾಡಲು ಕಾರ್ಖಾನೆಗಳು ಸಹಾಯಮಾಡುತ್ತವೆ ತನ್ನಲ್ಲಿನ ಮಜೂರರನ್ನು ಅಲ್ಲಿನ ಕಾರ್ಖಾನೆಗಳು ಅತ್ಯಂತ ಸಹಾನುಭೂತಿಯಿಂದಲೂ, ಶ್ರದ್ಧೆಯಿಂದಲೂ ಕಾಣುವುದರಿಂದ ಜನಾಂಗದ ಆಪತ್ಕಾಲದಲ್ಲಿ ಅವರು ಎಂತಹ ಸಾಹಸ ತ್ಯಾಗ, ಬಲಿದಾನಗಳಿಗೂ ಸಿದ್ಧರಾಗುವಂತೆ ಪ್ರೋತ್ಸಾಹಿತರಾಗುವರು. ರಶ್ಯದ ಮಹತ್ತಾದ ಸೈನಿಕ ಶಕ್ತಿಗೆ ಇದೊಂದು ಪ್ರಬಲವಾದ ಕಾರಣವಾಗಿದೆ

ಮನರಂಜನೆಗಳು

ರಶ್ಯನ್ ಮಜೂರರಿಗೆ ಕಾರ್ಖಾನೆಗಳಲ್ಲಿ ಮನರಂಜನೆಗೆ ಬೇಕಾದ ವಿನೋದ, ವಿಹಾರ ಪ್ರದರ್ಶನಗಳೆಲ್ಲವೂ ಒದಗಿಸಲ್ಪಡುವುದು. ಇನ್ನೊಂದು ಅತೀ ಮಹತ್ವದ ಸಂಗತಿ ದೇಶದ ಪ್ರಖ್ಯಾತ ಸಂಗೀತಗಾರರೂ, ನರ್ತಕರೂ, ನಟನಿಪುಣರೂ ತಮ್ಮ ಕಲಾ ಪ್ರತಿಭೆಯನ್ನು ರಶ್ಯನ್ ಮಜೂರರ ಮುಂದೆ ಪ್ರದರ್ಶಿಸಿ ಉದಾತ್ತ ಸಾಂಸ್ಕೃತಿಕ ಮನೋಭಾವನೆಯನ್ನುಂಟುಮಾಡುವರು. ನಾಟಕ, ಸಿನೇಮಾ ಗೃಹಗಳು, ಆಟಪಾಠದ ಸಂಘ ಸಂಸ್ಥೆಗಳೂ ಮಜೂರ ಕೇಂದ್ರಗಳಲ್ಲಿ ಸ್ಥಾಪಿಸಲ್ಪಟ್ಟಿದ್ದು ಅವು ಆಗಿಂದಾಗ್ಗೆ ಮನೋಲ್ಲಾಸಕರವಾದ ಕಾರ್ಯಕ್ರಮಗಳಿಂದ ಅಲ್ಲಿನ ಮಜೂರರನ್ನು ತೃಪ್ತಿಪಡಿಸುತ್ತಿವೆ ಇವಲ್ಲದೆ ಸಾಹಿತ್ಯ ಸಂಬಂಧವಾದ, ರಾಜಕೀಯ, ವೈಜ್ಞಾನಿಕ, ಕಲಾತ್ಮಕವಾದ ಪ್ರತಿಯೊಂದು ತರದ ಕಾರ್ಯಕ್ರಮಗಳೂ ಕಾರ್ಖಾನೆಗಳೊಳಗಿನ ಯಂತ್ರಗಳಷ್ಟೇ ಮಹತ್ವದ್ದೆಂದು ಅಲ್ಲಿ ಎಣಿಸಲ್ಪಡುತ್ತವೆ.

ಆಟ ಸೌಕರ್ಯಗಳು ರಶ್ಯನ್ ಕೆಲಸಗಾರನಿಗೆ ವಿಪುಲವಾಗಿ ಒದಗಿಸಲ್ಪಡುತ್ತವೆ ರಶ್ಯನ್ನರಿಗೆ ವೊಲ್ಲಿಬೊಲ್, ಬಾಸ್ಕೆಟ್‌ಬೊಲ್, ಫೂಟ್‌ಬೊಲ್, ಹೊಕ್ಕಿ, ಮುಷ್ಟಿಯುದ್ಧ, ಕುಸ್ತಿ ಕಾಳಗ, ಹಿಮದಲ್ಲಿ ಜಾರಿ ಓಡಾಡುವುದು ಈ ಆಟಗಳೆಂದರೆ ತುಂಬಾ ಪ್ರೀತಿ ರಶ್ಯದ ಕೋಲೇಜುಗಳಲ್ಲಿರುವ ಕ್ರೀಡಾ ಸೌಕರ್ಯಗಳಿಗಿಂತ ಮಿಗಿಲಾದ ಸೌಕರ್ಯಗಳು ಅಲ್ಲಿನ ಕಾರ್ಖಾನೆಗಳಲ್ಲಿವೆಯೆಂದರೆ ಕೌತುಕವನ್ನುಂಟುಮಾಡುವ ಸಂಗತಿಯಾಗಿದೆ

ಮಜೂರ ಮಕ್ಕಳಿಗೆ ಪ್ರತಿಯೊಂದು ಶಿಕ್ಷಣದ ಸೌಕರ್ಯಗಳು ಕೊಡಲ್ಪಡುತ್ತವೆ ಅಲ್ಲದೆ ಅತ್ಯಾಧುನಿಕ ವೈದ್ಯಕೀಯ ಅನುಕೂಲತೆಗಳನ್ನು ಒದಗಿಸಲಾಗುತ್ತದೆ ಅದೇ ರೀತಿ ಕೆಲಸಗಾರರಿಗೆ ಶ್ರೇಷ್ಠ ತರಗತಿಯ ಆಹಾರ ಪಾನೀಯಗಳನ್ನು ಒದಗಿಸುವ ಸೈನ್ಯಬದ್ಧವೇ ಮೂಲವಾಗಿರುವ ಕೆಂಟೀನುಗಳು ಅಲ್ಲಿನ ಪ್ರತಿಯೊಂದು ಕಾರ್ಖಾನೆಯ ಹೆಮ್ಮೆಯ ವಿಷಯಗಳಾಗಿವೆ ಇಷ್ಟಲ್ಲದೆ ಕೆಲಸಗಾರರ ಶರೀರದಲ್ಲಿ ಲೋಪವಾಗಿರುವ ಪೋಷಕ ಸತ್ವಗಳನ್ನು (ವಿಟಮಿನ್) ಪ್ರತ್ಯೇಕವಾಗಿ ವೈದ್ಯಕೀಯ ಆಹಾರ ಮೇರೆಗೆ, ಸಿದ್ಧಮಾಡಿ ಸರಬರಾಯಿ ಮಾಡುವ ವಿಶೇಷ ಪ್ರಯೋಗಾಲಯಗಳು ಪ್ರತಿಯೊಂದು ಕಾರ್ಖಾನೆಯ ಮುಖ್ಯ ಅಂಗವಾಗಿದೆ. ಈ ಸಂಗತಿಯು ನಿಜವಾಗಿಯೂ ಪ್ರಶಂಸನೀಯವೇ ಸರಿ

ನವಜೀವ

ಇವೆಲ್ಲವುಗಳ ಸತ್ಪರಿಣಾಮವ ಉಪಶ್ರೀ ರಶ್ಯನ್ ಮಜೂರನು ಅದೆಂತಹ ಪಿಗುವಾದ ಸರ್ವಾಧಿಕಾರತ್ವವನ್ನು ವ ನಸ್ಸಿಗೆ ತಗೆದುಕೊಳ್ಳುವುದಿಲ್ಲ ಸೋವಿಯಟ್ ಕೆಲಸಗಾರರು ಜಗತ್ತಿನಲ್ಲೇ ವಿಶಿಷ್ಟವಾದೊಂದು ವರ್ಗವೆನ್ನಬೇಕು ಆಧರೆ ನಮ್ಮ ಮಜೂರ ಹೇಗಿದ್ದಾನೆ? ಒಂದು ಚಿತ್ರ ಹೀಗಿದೆ

"ತಲೆಗೆ ತಗಲುವ ಬಾಗಿಲುಗಳಲ್ಲಿ ಬಗ್ಗಿ ನಮ್ಮ ಮಜೂರ ವಸತಿಯೊಳಗಿಣಕಿರಿ. ಒಂದು ಮಿಣುಕು ದೀಪ ಸಂಸಾರದ ಮೇಲೆ ತನ್ನ ನಮ್ರ ಪ್ರಕಾಶವನ್ನು ಬೀರುತ್ತದೆ. ಒಂದು ಮಗು ತನ್ನ ಸಣಕಲು ಕಾಲುಗಳಲ್ಲಿ ನಿಂತು ತನ್ನನ್ನು ಪೋಷಿಸಲು ಅಸಮರ್ಥವಾದ ಜಗತ್ತಿನ ಕಡೆ ಕೌತುಕದಿಂದ ನೋಡುತ್ತದೆ ತಂದೆ ದುಃಖದಿಂದಲೂ ಶೂನ್ಯವಾದ ನಿರಾಶೆಯಿಂದಲೂ ಬಗ್ಗಿದ ಶರೀರದವನಾಗಿ ಒಂದು ಮುದ್ರಿಕೆ ಹುಳಿ ಕೀಂದಿಯಿಂದ ಮೈಮುರಿತು ತನ್ನ ಕುಟುಂಬಕ್ಕೊಂದು ಭೀಕರ ಸ್ವರೂಪದ ಪ್ರಾಣಿಯಾಗಿ ಪರಿವರ್ತನ ಹೊಂದಿದ್ದಾನೆ. ಸಾವಿರಾರು ಆವಶ್ಯಕತೆಗಳ ಕೊರತೆಯನ್ನು ಪೂರೈಸಲಾಗದ ತನ್ನ ಕೃಶವಾದ ಕೈಗಳಿಂದ ತಾಯಿ ಸೊರಗುತ್ತಿರುವ ಸಂಸಾರದ ಆರೈಕೆ ನೋಡಲೆತ್ನಿಸುತಿದ್ದಾಳೆ ಬೀಕರ ಕಾರ್ಗತ್ತಲೆಯಿಂದ ತುಂಬಿದ ಭವಿಷ್ಯವುಳ್ಳವರಾಗಿ ಆಶೆ ಆಕಾಂಕ್ಷೆಗಳ ಲವಲೇಶವಿಲ್ಲದೆ ವಿಧಿಲೀಲೆಯ ಬೀಭತ್ಸ ದೃಶ್ಯವೋ ಎಂಬಂತೆ ಪುಟ್ಟ ಮಾನವ ಹುಳುಗಳು ನೆಲದಲ್ಲಿ ಹರಿಯುತ್ತಿವೆ ಇದನ್ನು ಜೀವನವೆನ್ನುವುದಕ್ಕಿಂತಲೂ ಮರಣವೆನ್ನುವುದೇ ಲೇಸು" ಈ ವಿಷಯದಲ್ಲಾದರೂ ನಾವು ರಶ್ಯನ್ನರಿಂದ ಪಾಠ ಕಲಿಯಬಾರದೆ?

ಹಿಂದಿನಕಾಲದಲ್ಲಿ ತುರ್ಕಿಯಲ್ಲಿ ಹೊಡ್ಜಾ ಎಂಬವನು ವಿನೋದ ಚಮತ್ಕೃತಿಗಳನ್ನು ಮಾಡಿ ಅಲ್ಲಿನ ಜನತೆಯ ಕಟ್ಟುಕತೆಗಳ ನಾಯಕನಾಗಿದ್ದಾನೆ ಆಧುನಿಕ ಹೊಡ್ಜಾ ನಿಸ್ರುನ್ ಬುರ್ಸಾ ಎಂಬಲ್ಲಿಂದ ರಾಜಧಾನಿ ಇಸ್ತಾಂಬುಲ್‌ಗೆ ಮೋಟಾರಿನಲ್ಲಿ ಒಯ್ಯಲ್ಪಡುತಿದ್ದ ಒಂದು ಶವದ ಪೆಟ್ಟಿಗೆಯಲ್ಲಿ ಅಡಗಿ ಕೂತು ಅರ್ಧದಾರಿಯಲ್ಲಿ ಮುಚ್ಚಳ ತೆರೆದು ಎದ್ದುಬಿಟ್ಟ ಹೆದರಿ ಕಂಗಾಲಾದ ಇವನ ಪ್ರಯಾಣಿಕರು ಓಡುವ ಮೋಟಾರಿನಿಂದ ಕಳಗೆ ಧುಮುಕಿ ಆಸ್ಪತ್ರೆಗೆ ಒಯ್ಯಲ್ಪಟ್ಟರು

✠

ಅಮೇರಿಕದ ಪಿಟ್ಸ್‌ಬರ್ಗ ನಗರದ ಪಾಲ್ ಜೆನ್ನಿಂಗ್ಸ್ ಎಂಬವನು ಈ ವರ್ಷದ 'ಅತೀ ಅಚ್ಚುಕಟ್ಟಿನ ಚೋರ'ನೆಂಬ ಖ್ಯಾತಿಗೊಳಗಾಗಿದ್ದಾನೆ ಒಂದು ಕ್ಷೌರದಂಗಡಿಯನ್ನು ಹೊಕ್ಕು ಅವನು ಎಲ್ಲವನ್ನೂ ತನ್ನ ಬೆರಳೊತ್ತುಗಳನ್ನು ಬಿಟ್ಟು, ಮಾತ್ರವಲ್ಲ ತನ್ನ ವಿಳಾಸ ಪತ್ರವೊಂದನ್ನು, ತನ್ನ ಪ್ರಿಯತಮೆಯ ಭಾವಚಿತ್ರವೊಂದನ್ನು ಅಲ್ಲೇ ಬಿಟ್ಟು ಹೋಗಿದ್ದನು

✠

ಶ್ರೀಮತಿ ಬೊಬ್ಬಿ ರೋಜರ್ಸ್ ಎಂಬ ಪ್ರಖ್ಯಾತ ಬ್ರಿಟಿಷ್ ವೇಷಭೂಷಣ ತಜ್ಞೆ ಇತ್ತೀಚೆಗೆ ಭಾರತ, ಸಿಂಹಳ ದ್ವೀಪಗಳ ಪ್ರವಾಸ ಮುಗಿಸಿ ಸ್ವದೇಶಕ್ಕೆ ಬಂದಿರುವಳು. ಅವಳು ತನ್ನ ದೇಶದ ಸ್ತ್ರೀಯರಿಗೆ ಸೀರೆಯೇ ಒಪ್ಪುವ ಉಡುಪಾಗಬಲ್ಲುದೆಂಬ ಅಭಿಪ್ರಾಯವನ್ನು ಸೂಚಿಸಿರುವಳು ಸೀರೆಯ ಉಡುಪಿನಲ್ಲಿ ಕಲಾಪೂರ್ಣ ಸೊಬಗು, ಶೃಂಗಾರಗಳೂ, ಘನಗಂಭೀರ ಸರಳತೆಯೂ ಇದೆಯೆಂದವಳಿಗೆ ಮನವರಿಕೆಯಾಗಿದೆ.

✠

ಮಗುವಿನ ಮೃದು ಚರ್ಮಕ್ಕೆ ಹೆಚ್ಚು ರಕ್ಷಣೆಬೇಕು.

ಕುಟಿಕುರಾ ಸಾಬೂನು ಮಗುವಿನ ಮೃದು ಚರ್ಮರಕ್ಷಣೆ ಮಾಡುತ್ತದೆ ಅದನ್ನು ನಿಜ ಆರೋಗ್ಯದಲ್ಲಿರಿಸಿ ಅದರ ಸಹಜ ತೇವವನ್ನು ಕಾಪಾಡುತ್ತದೆ-ಉಷ್ಣ ಪ್ರದೇಶಗಳಲ್ಲಿ ಇದು ಅವಶ್ಯ

554

ಕುಟಿಕೂರಾ ಸಾಬೂನು

CUTICURA SOAP

ಸ್ವದೇಶಾಭಿಮಾನಿ

ತಾರೀಕು 3—9—1948

ಬಟ್ಟೆಯ ಕ್ರಯ ನಿಯಂತ್ರಣ

ಬಟ್ಟೆಯ ಮೇಲಿನ ನಿಯಂತ್ರಣ ತೆಗೆದು ಹಾಕಿದಂದಿನಿಂದ ಬಟ್ಟೆ ಗಿರಣಿಯವರೂ ಬಟ್ಟೆ ವ್ಯಾಪಾರಿಗಳೂ ಚೆನ್ನಾಗಿ ಹಣ ಮಾಡಿದರೆಂಬುದನ್ನು ಕಂಡು ಹಾಗೂ ಕ್ರಯಗಳನ್ನು ಸಾಮಾನ್ಯ ಜನರ ದೃಷ್ಟಿಯಿಂದ ವಿಪರೀತ ಏರಿಸಲಾಗಿದೆಯೆಂಬುದನ್ನು ಕೂಡಾ ಕಂಡು ಕೇಂದ್ರ ಸರಕಾರದವರು ಬಟ್ಟೆಯ ಕ್ರಯಗಳನ್ನು ಪುನಃ ನಿಯಂತ್ರಣಕ್ಕೊಳಪಡಿಸಿರುತ್ತಾರಷ್ಟೆ.' ಗಿರಣಿಗಳಲ್ಲಿದ್ದ ಮಾಲುಗಳನ್ನು ಸರಕಾರದವರು ಸ್ವಾಧೀನಪಡಿಸಿಕೊಂಡು ಅವುಗಳ ಮೇಲೆ ಕ್ರಯದ ಮೊಹರು ಹಾಕಿ ತಾವೇ ಈ ಬಟ್ಟೆಯನ್ನು ಬೇರೆ ಬೇರೆ ಪ್ರಾಂತಗಳಿಗೆ ಒದಗಿಸುವ ಏರ್ಪಾಡನ್ನು ಕೈಕೊಂಡರು. ಹೀಗೆ ಒದಗಿಸಲಾಗುವ ಬಟ್ಟೆ ಹಾಗೂ ಗಿರಣಿ ನೂಲನ್ನು ವಿತರಣೆ ಮಾಡುವ ಕಾರ್ಯ ಆಯಾ ಪ್ರಾಂತಿಕ ಸರಕಾರ ನಿರ್ವಹಿಸಬೇಕು.

ನಮ್ಮ ಮದ್ರಾಸ್ ಸರಕಾರದವರು ತಮ್ಮ ಪಾಲಿಗೆ ಬರುವ ಗಿರಣಿ ಬಟ್ಟೆಯಲ್ಲಿ ಶೇಕಡಾ 50ರಷ್ಟನ್ನು ಸಹಕಾರೀ ಸಂಸ್ಥೆಗಳ ಮೂಲಕವೂ ಉಳಿದುದನ್ನು ಬಟ್ಟೆ ವ್ಯಾಪಾರಿಗಳ ಮೂಲಕವೂ ವಿತರಣೆ ಮಾಡಿಸುವುದಾಗಿ ತೀರ್ಮಾನಿಸಿರುತ್ತದೆ. ಗಿರಣಿ ನೂಲನ್ನು ನೇಕಾರ ಸಂಘಗಳಿಗೂ ಇತರ ನೇಕಾರರಿಗೂ ಸಹಕಾರೀ ಸಂಸ್ಥೆಯ ಮೂಲಕವೇ ವಿತರಣೆಯಾಗುವ ಏರ್ಪಾಡು ಮಾಡಲಾಗಿದೆ.

ಬಟ್ಟೆ ವ್ಯಾಪಾರಿಗಳು ಪೂರ್ಣ ಬಟ್ಟೆ ತಮ್ಮ ಮೂಲಕವೇ ಒದಗಿಸಲ್ಪಡಬೇಕೆಂದೂ ಅನುಭವವಿಲ್ಲದ ಸಹಕಾರೀ ಸಂಸ್ಥೆಗಳಿಗೆ ಈ ಕೆಲಸ ಕೊಡುವುದು ಯುಕ್ತವಲ್ಲವೆಂದೂ ತಮ್ಮ ಎಂದಿನ ಚಳವಳ ಹೂಡಿರುತ್ತಾರೆ. ನಿಯಂತ್ರಣ ತೆಗೆದಾಗಿನಿಂದ ಗಿರಣಿಯ ಮಾಲಿಕರಂತೆಯೇ ಈ ವ್ಯಾಪಾರಿಗಳೂ ತಮ್ಮ ಲಾಭ ಬೆಳೆಸುವುದರಲ್ಲಿ ನಿರತರಿದ್ದರೆಂಬ ಮಾತು ನಿರ್ವಿವಾದ. ಈಗ ಕ್ರಯ ನಿಯಂತ್ರಣದ ಎಲ್ಲ ಮಾಲುಗಳನ್ನು ಇವರ ಕೈಗಳಲ್ಲೇ ಹಾಕಿದರೆ ಕಳ್ಳ ಸಂತೆಗೆ ಸ್ವಲ್ಪ ಹೆಚ್ಚಿನ ಪ್ರೋತ್ಸಾಹ ಕೊಟ್ಟ ಪರಿಣಾಮ ಮಾತ್ರ ಪ್ರಾಪ್ತಿಯಾಗುವುದೆಂಬುದನ್ನು ಮನಗಂಡೇ ಸರಕಾರದವರು ಸರಿ ಅರ್ಧಾಂಶವನ್ನು ಸಹಕಾರೀ ಸಂಸ್ಥೆಯವರಿಗೆ ಒಪ್ಪಿಸಿರುತ್ತಾರೆ. ಯಾರು ಹೆಚ್ಚು ಯೋಗ್ಯ ರೀತಿಯಲ್ಲಿ ಈ ಕಾರ್ಯವನ್ನು ನೆರವೇರಿಸುವರೆಂಬುದು ಪ್ರತ್ಯಕ್ಷ ಕಂಡುಬರಲಿದೆ.

ಇಷ್ಟೆಲ್ಲ ಏರ್ಪಾಡು ಮಾಡಿರುವರಿಂದ ಮೇಲೆ ಇನ್ನು ಗಿರಣಿ ಬಟ್ಟೆ ಅಗ್ಗದಲ್ಲಿ ಸಾಮಾನ್ಯ ಜನರಿಗೆ ಅಗತ್ಯವಿದ್ದಷ್ಟು ಸಿಕ್ಕುತ್ತದೆಂದು ಆಶಿಸುವುದು ಸಹಜವೇ ಇರುತ್ತದೆ. ಆದರೆ ಈ ಆಸೆ ಬಹಳ ಮಟ್ಟಿಗೆ ಪೂರೈಸಲ್ಪಡುವಂತೆ ಕಾಣುವುದಿಲ್ಲ.

ಬಟ್ಟೆಗಳಿಗೆ ಕ್ರಯಗಳನ್ನು ನಿರ್ಣಯಿಸುವಾಗ ಗಿರಣಿ ಮಾಲಿಕರೊಡನೆ ಮಾತುಕತೆ ನಡೆಸಿಯೇ ನಿರ್ಧರಿಸಲಾಗುವುದೆಂಬುದರಿಂದ ಇವು ಬಹಳ ಅಗ್ಗವಾಗುವಂತಿಲ್ಲ. ಸಾಹುಕಾರರ ವಶ ಕೊಡುವ ಬಟ್ಟೆಯ ವಿತರಣ ಸರಿಯಾಗಿ ನಡೆದೀತೆಂದು ನಂಬಲು ಬರುವುದಿಲ್ಲ. ಸಹಕಾರಿಗಳಂತೂ ಅನುಭವವಿಲ್ಲದವರೆಂದೂ ಸಾಹುಕಾರರು ಈಗಲೇ ಹೇಳುತ್ತಿರುವ ಮಾತುಗಳಲ್ಲಿ ಸ್ವಲ್ಪ ಸತ್ಯಾಂಶವಿದ್ದೇ ಇದೆ. ಹೀಗೆ ಈ ಬಾರಿಯ ನಿಯಂತ್ರಣವಾದರೂ ವಿಶೇಷ ಫಲಕಾರಿಯಾದೀತೆನ್ನುವಂತಿಲ್ಲ. ಬೆಲೆ ನಿಯಂತ್ರಣದೊಟ್ಟಿಗೆ ರೇಶನ್ ಪದ್ಧತಿ ಕೂಡಾ ಇದ್ದರೆ ಮಾತ್ರ ಆ ನಿಯಂತ್ರಣ ಸರಿಯಾಗುವುದೆಂದು ಅನೇಕ ಅರ್ಥ ಶಾಸ್ತ್ರ ಪಂಡಿತರೂ ತಜ್ಞರೂ ಹೇಳುವ ಮಾತನ್ನು ಸಾಮಾನ್ಯ ಜನರೂ ತಿಳಿಯಲು ಕಷ್ಟವಿಲ್ಲ. ಆದರೆ ರೇಶನ್ ಪದ್ಧತಿ ಜಾರಿಗೆ ತರುವ ಆಲೋಚನೆ ಸರಕಾರದವರು ಕೈಕೊಂಡಿಲ್ಲ. ಒಂದು ವೇಳೆ ಇದು ಯಶಸ್ವಿಯಾಗಿ ನಡೆದರೂ ಎಲ್ಲಿಯ ತನಕ ಈ ನಿಯಂತ್ರಣ ಇರಿಸಬೇಕು? ನಿಯಂತ್ರಣ ಕಾಯಮಾಗಿ ಇರಿಸಬೇಕೆ? ತೆಗೆದರೆ ಪುನಃ ಇದೇ ಪರಿಸ್ಥಿತಿ ಬಂದರೆ?

ಇವೆಲ್ಲ ರಗಳೆಗಳಿಗಿಂತ ಗಿರಣಿಗಳ ರಾಷ್ಟ್ರೀಯಕರಣ ಮಾಡುವುದೇ ಹೆಚ್ಚು ಉಪಯುಕ್ತವಾಗಬಹುದು. ರಾಷ್ಟ್ರೀಯಕರಣವೆಂದರೆ ಸರಕಾರದವರು ಈ ಗಿರಣಿಗಳನ್ನು ತಾವೇ ವಹಿಸಿಕೊಂಡು ತಾವೇ ನಡೆಸುವುದು. ಇದರಿಂದ ಬಟ್ಟೆಗಳನ್ನು ನ್ಯಾಯವಾದ ಕ್ರಯದಲ್ಲಿ ಒದಗಿಸಲು ಸಾಧ್ಯವಾದೀತು.

ಪ್ರಜೆಗಳಾದರೂ ಖಾದಿ ತಯಾರಿಯ ಕಡೆಗೆ ಹೆಚ್ಚಿನ ಲಕ್ಷ್ಯ ಕೊಟ್ಟಲ್ಲಿ ಈ ಬಟ್ಟೆಯ ಪ್ರಶ್ನೆಯನ್ನು ಬಿಡಿಸಲು ಇನ್ನಷ್ಟು ಸುಲಭವಾಗುವುದೆಂಬ ಬಗ್ಗೆ ಸಂಶಯವಿಲ್ಲ. ಹೀಗೆ ಗಿರಣಿಗಳ ರಾಷ್ಟ್ರೀಯಕರಣ ಹಾಗೂ ಖಾದಿ ಉತ್ಪತ್ತಿ ಇವುಗಳ ಮೂಲಕ ಈ ಬಟ್ಟೆಯ ಪ್ರಶ್ನೆಯ ತೀರ್ಮಾನ ಮಾಡಬೇಕು. ಬೇರೆ ದಾರಿ ಇಲ್ಲ.

ಟೀಕೆ-ಟಿಪ್ಪಣಿಗಳು

ಎರಡೆರಡು ಹೆಂಡಂದಿರನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ

ಮದ್ರಾಸು ಸರಕಾರದ ಶಾಸನಸಭೆಯಲ್ಲಿ ಶ್ರೀ ಎ. ಕಾಳೇಶ್ವರರಾಯರು ತಂದ ವಿವಾಹ ಸುಧಾರಣಾ ಮಸೂದೆಯು ಶಾಸನಸಭೆಯಲ್ಲಿ ಮಂಜೂರಾಗಿರುತ್ತದೆ. ಇದಕ್ಕೆ ಗವರ್ನರ ಜನರಲರ ಸಮ್ಮತಿ ದೊರೆತೊಡನೆ ಇದು ಕಾನೂನಾಗುತ್ತದೆ. ಒಬ್ಬ ಹೆಂಡತಿ ಜೀವ ಇರುವಾಗ ಇನ್ನೊಬ್ಬಳನ್ನು ಮದುವೆ ಮಾಡಿಕೊಳ್ಳುವುದನ್ನು ಈ ಕಾನೂನಿನಂತೆ ತಕ್ಷೀರನ್ನಾಗಿ ಮಾಡಲಾಗಿದೆ. ಅಂಥವರೆ ಹಾಗೆ ಮಾಡಿದರೆ ಶಿಕ್ಷೆಯಾಗುತ್ತದೆ. ಇದು ಹಿಂದೂ ಸಮಾಜಕ್ಕೆ ಮಾತ್ರ ಅನ್ವಯಿಸುವ ಕಾನೂನು.

ಶ್ರೀ ಕಾಳೇಶ್ವರರಾಯರು ಈ ಬಗೆಯ ಮಸೂದೆ ಮುಂದೆ ತಂದು ಬಹಳ ಪ್ರಯತ್ನ ಮಾಡಿ ಇದನ್ನು ಕಾನೂನನ್ನಾಗಿ ಮಾಡಿಸಿದ ಬಗ್ಗೆ ಹಿಂದೂ ಸಮಾಜವು ಅದರಲ್ಲಿ ಸ್ತ್ರೀ ವರ್ಗವು ಅವರಿಗೆ ಚಿರಋಣಿಯಾಗಿರುತ್ತದೆ.

ಹಿಂದು ಸಮಾಜದಲ್ಲಿಯ ಒಂದು ದೊಡ್ಡ ಅನ್ಯಾಯವನ್ನು ಈ ಹೊಸ ಕಾನೂನು ಹೋಗಲಾಡಿಸುತ್ತಿದೆ. ಮದುವೆ ಮಾಡಿಕೊಳ್ಳುವುದು ಮತ್ತೆ ಹುಡುಗಿ ತನ್ನ ಮನಸ್ಸಿಗೆ ಹಿಡಿಯುವುದಿಲ್ಲವೆಂದಾದರೆ ಅಥವಾ ಬೇರೊಬ್ಬ ಹುಡುಗಿ ಸಿಕ್ಕಿದರೆ ಮೊದಲನೆಯವಳನ್ನು ಬಿಟ್ಟು ಇನ್ನೊಂದು ಮದುವೆ ಮಾಡಿಕೊಳ್ಳುವುದು ಇಂಥ ಅತ್ಯಾಚಾರ ನಮ್ಮಲ್ಲಿ ಎಷ್ಟೋ ನಡೆಯುತ್ತದೆ. ಮುಂದೆ ಮದುವೆಯಾದ ಹುಡುಗಿಯನ್ನು ಇಷ್ಟು ಸುಲಭದಲ್ಲಿ ಬಿಟ್ಟು ಬೇರೆ ಮದುವೆಯಾಗುವುದು ಸಾಧ್ಯವಿಲ್ಲ.

ಈ ಬಗೆಯ ಕಾನೂನಿನಲ್ಲಿ ವಿವಾಹ ರದ್ದತಿಯ ಬಗ್ಗೆ ಯೋಗ್ಯವಾದ ಅಸ್ಪದ ಇಡದೆ ನಿವೃತ್ತಿ ಇಲ್ಲವೆಂಬುದನ್ನು ಕಂಡು ನ್ಯಾಯವಾದ ಕೆಲವು ಕಾರಣಗಳ ಬಗ್ಗೆ ವಿವಾಹ ರದ್ದತಿಯ ಅನುಕೂಲತೆ ಕೂಡಾ ಇದರಲ್ಲಿ ಸೇರಿಸಲಾಗಿದೆ. ಇದಕ್ಕಾಗಿ ಈ ಕಾನೂನನ್ನು ದೂರಬೇಕಾಗಿಲ್ಲ. ನ್ಯಾಯವಾದ ಕಾರಣಗಳಿಂದಾಗಿ ವಿವಾಹ ರದ್ದತಿ ಮಾಡುವ ಅಸ್ಪದ ಮನುವು ಕೂಡಾ ಹೇಳಿರುವನೆಂದ ಮೇಲೆ ಇದರಲ್ಲಿ ಯಾವ ದೋಷವೂ ಇರುವುದಿಲ್ಲ.

ವಿವಾಹದ ಕನಿಷ್ಠ ಪ್ರಾಯ ಏರಿಸಲಾಯಿತು

ನಮ್ಮ ಕೇಂದ್ರ ಶಾಸನ ಸಭೆಯಲ್ಲಿಯೂ ವಿವಾಹ ಸುಧಾರಣಾ ಸಂಬಂಧದ ಒಂದು ಮಸೂದೆ ಮಂಜೂರಾಯಿತು. ಶಾರದಾ ಕಾನೂನಿನಂತೆ ಹುಡುಗಿಯರ ಮದುವೆ ಮಾಡಬೇಕಾದರೆ ಕನಿಷ್ಠ ಪ್ರಾಯ 14 ವರ್ಷಗಳಾದರೂ ಇರಬೇಕೆಂದಿತ್ತಷ್ಟೆ. ಈ ಹೊಸ ಕಾನೂನಿನಂತೆ ಹುಡುಗಿಯರ ಮದುವೆಯ ಕನಿಷ್ಠ ಪ್ರಾಯ 15 ಮತ್ತು ಹುಡುಗರ ಕನಿಷ್ಠ ಪ್ರಾಯ 18 ಇದ್ದುದನ್ನು 20 ಎಂಬುದಾಗಿ ಏರಿಸಲಾಯಿತು. ಬಾಲ್ಯ ವಿವಾಹದ ದೋಷ ಪರಿಹಾರ ಇದರ ಉದ್ದೇಶವೆಂದು ಪುನಃ ಹೇಳಬೇಕಾಗಿಲ್ಲ. ನ್ಯಾಯವಾಗಿ ಹುಡುಗಿಯರಿಗೆ 18 ವರ್ಷ ಹುಡುಗರಿಗೆ 24 ವರ್ಷ ಪ್ರಾಯದೊಳಗೆ ವಿವಾಹ ಮಾಡಕೂಡದು. ಒಮ್ಮೆಗೇನೆ ಇದನ್ನು ಸಾಧಿಸಲು ಹೋಗದೆ ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಏರಿಸೋಣವೆಂದು ಶಾಸನ ಕರ್ತರು ಭಾವಿಸಿದಂತಿದೆ.

ಈ ಕಾನೂನಿನಲ್ಲಿ 18 ವರ್ಷಕ್ಕೆ ಕೆಳಗಿನ ಹುಡುಗಿಯನ್ನು 45 ವರ್ಷಕ್ಕೆ ಮೇಲ್ಪಟ್ಟ ಪುರುಷನು ಮದುವೆಯಾಗುವುದನ್ನು ನಿಷೇಧಿಸಲಾಗಿದೆ. ವಿಷಮ ವಿವಾಹಗಳನ್ನು ನಿಲ್ಲಿಸಲು ಮಾಡಿದ ಈ ನಿಯಮವೂ ನ್ಯಾಯವಾಗಿಯೇ ಇರುತ್ತದೆ.

ಶಾರದಾ ಕಾನೂನಿಗೂ ಈ ಕಾನೂನಿಗೂ ಮುಖ್ಯ ವ್ಯತ್ಯಾಸವೆಂದರೆ ಹಿಂದೆ ಕಾನೂನು ಮುರಿದರೆ ಯಾರಾದರೂ ಖಾಸಗಿ ಜನರು ಈ ಕುರಿತು ನಂಬ್ರ ನಡೆಸಲು ಮುಂದಾಗಬೇಕಿತ್ತು. ಈಗಿನ ಕಾನೂನು ಮುರಿದರೆ ಸರಕಾರದವರೇ ನಂಬ್ರ ಮಾಡುವರು. ಕಾನೂನು ಸರಿಯಾಗಿ ಜಾರಿಗೆ ಬರಬೇಕಾದರೆ ಈ ಬದಲಾವಣೆ ಬಹಳ ಅಗತ್ಯವಿತ್ತು.

ಕೇಂದ್ರ ಶಾಸನ ಸಭೆಯ ಈ ಹೊಸ ಕಾನೂನನ್ನು ಹಿಂದೂ ಸಮಾಜವು ನಿಜವಾಗಿಯೂ ಸ್ವಾಗತೀಕರಿಸಬೇಕು ಮತ್ತು ಇದು ಯಶಸ್ವಿಯಾಗಿ ಜಾರಿಗೆ ಬರುವಂತೆ ಯತ್ನಿಸಬೇಕು.

ಭಾಷಾವಾರು ಪ್ರಾಂತ ರಚನಾ ಕಮಿಶನು

ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಪರಿಶೀಲಿಸಲು ಘಟನಾ ಸಮಿತಿಯ ಅಧ್ಯಕ್ಷರಿಂದ ನೇಮಿಸಲ್ಪಟ್ಟ ಸಮಿತಿಯವರು ಈ ತಿಂಗಳಲ್ಲಿ ದಕ್ಷಿಣ ಭಾರತವನ್ನು ಸಂದರ್ಶಿಸಲಿರುವರು. ಇದೇ ಸಪ್ಟಂಬರ ತಾ 21, 22ರಷ್ಟಕ್ಕೆ ಈ ಕಮಿಶನದವರು ಮಂಗಳೂರನ್ನು ಸಂದರ್ಶಿಸಲಿರುವರು. ಈ ಪ್ರಶ್ನೆಯ ಕುರಿತು ತಮ್ಮ ಅಭಿಪ್ರಾಯಗಳನ್ನು ಈ ಕಮಿಶನಿಗೆ ತಿಳಿಸಲು ಇದು ಅನುಕೂಲ ಸಂದರ್ಭ.

ಬೊಂಬಾಯಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ಪ್ರಶ್ನೆಯನ್ನು 10 ವರ್ಷಗಳ ಮಟ್ಟಿಗೆ ಮುಂದರಿಸಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ.

ಭಾಷಾವಾರು ಪ್ರಾಂತ್ಯ ರಚನೆಯನ್ನು ಈಗ ಕೈಕೊಳ್ಳುವುದರಲ್ಲಿ ಸ್ವಲ್ಪ ರಗಳೆ ಇರಬಹುದೆಂಬುದು ಸತ್ಯವಾದರೂ ಈ ಪ್ರಶ್ನೆಯನ್ನು ಹಿಂದೆ ಹಾಕುವುದು ಉಚಿತವಲ್ಲ. ಎಷ್ಟು ತ್ವರಿತದಲ್ಲಿ ಈ ಕಾರ್ಯ ಸಾಧಿಸಲಾಗುವುದೊ ಅಷ್ಟು ದೇಶಕ್ಕೆ ಹಿತವಾಗುವುದು.

ಒಬ್ಬನಿಗೆ ಹಲವು ಕಾಯಿಲೆಗಳು ಒಮ್ಮೆಗೇನೆ ಪ್ರಾಪ್ತವಾದರೆ ಒಂದು ಕಾಯಿಲೆ ಪೂರ್ಣ ಗುಣವಾದ ಮೇಲೆ ಇನ್ನೊಂದಕ್ಕೆ ಮದ್ದು ಕೊಡೋಣವೆನ್ನುವುದು ಸರಿಯಲ್ಲ. ಆಯಾ ಕಾಯಿಲೆಗಳ ಚಿಕಿತ್ಸೆಗಳನ್ನು ಎಲ್ಲ ಕೈಕೊಳ್ಳುವುದೇ ವಿಹಿತ. ಭಾಷಾವಾರು ಪ್ರಾಂತ್ಯ ರಚನೆಯ ಕುರಿತು ಹೇಳಲಾಗುವ ಈ ಮಾತು ಪೂರ್ಣ ಸತ್ಯವಿರುತ್ತದೆ.

ನಮ್ಮ ಜಿಲ್ಲೆಯ ಕಾಸರಗೋಡು ತಾಲೂಕು, ಕೊಡಗು ಮತ್ತು ನೀಲಗಿರಿ ಜಿಲ್ಲೆ ಇಷ್ಟು ಕನ್ನಡ ಪ್ರಾಂತ್ಯಗಳನ್ನು ನಮ್ಮ ಕೇರಳ ಬಂಧುಗಳು ಕೇರಳ ಪ್ರಾಂತ್ಯಕ್ಕೆ ಸೇರಿಸಬೇಕೆನ್ನುತ್ತಾರೆ. ಈ ಕುರಿತು ತಮ್ಮ ಅಭಿಪ್ರಾಯಗಳನ್ನು ಬರಲಿರುವ ಕಮಿಶನರಿಗೆ ತಿಳಿಸಬಹುದು.

ರಾಜಾಜಿಯವರ ಕೊನೆಯ ಪ್ರಯತ್ನ

ಹೈದರಾಬಾದು ಪ್ರಶ್ನೆಯನ್ನು ರಾಜಿಯಿಂದ ತೀರಿಸುವ ಕೊನೆಯ ಯತ್ನವಾಗಿ ರಾಜಾಜಿಯವರು ನೈಜಾಮರಿಗೆ ಒಂದು ಪತ್ರ ಕಳುಹಿಸಿದ್ದಾರೆ. ಇದರಲ್ಲಿ ನಿರ್ದಿಷ್ಟ ಸೂಚನೆಗಳಿಲ್ಲವೆಂದೂ ರಾಜಿಯ ಅವಶ್ಯಕತೆ ಒತ್ತಿ ಹೇಳಲಾಗಿದೆಯೆಂದೂ ತಿಳಿದು ಬರುತ್ತದೆ. ಪತ್ರಕ್ಕೆ ನೈಜಾಮರು ಉತ್ತರ

ಕಳುಹಿಸಿದ್ದಾರಂತೆ. ಅದು ಅವರ ಎಂದಿನ ಶೈಲಿಯಲ್ಲಿಯೇ ಇರುವ ಸಂಭವವೇ ಹೆಚ್ಚು.

ರಾಜಾಜಿಯವರು ರಾಜನಮಾಡುವುದರಲ್ಲಿ ಬಹಳ ಪ್ರಸಿದ್ಧಿ ಪಡೆದವರು. ಆದರೆ ಈ ಬಾರಿ ಅವರೂ ಯಶಸ್ವಿಯಾಗುವ ಲಕ್ಷಣಗಳಿಲ್ಲವೆಂದೇ ಹೇಳಬೇಕು

ಹೆಚ್ಚಾದ ಹಣ ಕಡಿಮೆ ಮಾಡುವ ಪ್ರಯತ್ನ

ಊರಲ್ಲಿ ಹಣ ಹೆಚ್ಚಾಗಿದೆಯಂತೆ. ಸಾಮಾನ್ಯ ಜನರಿಗೆ ಸಾರದ ಅಕ್ಕಿ ತರಲಿಕ್ಕೆ ಹಣಕ್ಕೆ ತೊಂದರೆಪಡುವುದು ತಪ್ಪುವುದಿಲ್ಲವಾದರೂ ಹಣ ಹೆಚ್ಚಾಗಿದೆಯೆಂಬ ಮಾತೇನೋ ನಿಜವಿರಬೇಕು. ಯಾಕೆಂದರೆ ಈಗ ಮಾಲುಗಳಿಗೆಲ್ಲ ಕ್ರಯ ಜಾಸ್ತಿಯಾಗಲು ಇದೇ ಮುಖ್ಯ ಕಾರಣವೆನ್ನಲಾಗಿದೆ ಕ್ರಯಗಳು ವಿಪರೀತ ಇವೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತಿದೆ

ಊರಲ್ಲಿರುವ ಹಣ ಕಡಮೆ ಮಾಡಿದರೆ ಕ್ರಯಗಳು ಕಡಮೆಯಾಗುತ್ತವೆ ಹಣ ಕಡಮೆ ಮಾಡುವುದಾದರೂ ಹೇಗೆ?

ಕೇಂದ್ರ ಸರಕಾರದವರು ಈ ಪ್ರಶ್ನೆಯನ್ನು ಬಿಡಿಸಲು ಯೋಗ್ಯ ಸಲಹೆ ಪಡಕೊಳ್ಳಲಿಕ್ಕೆ ಅರ್ಥ ಶಾಸ್ತ್ರ ಪಂಡಿತರ ಸಭೆಯೊಂದನ್ನು ನೆರವೇರಿಸಿದರು ಈ ತಜ್ಞರು ಒಂಭತ್ತು ಪುಟ ಸೂಚನೆಗಳನ್ನು ಕೊಟ್ಟಿದ್ದಾರೆ ಇದರಲ್ಲಿ ಮುಖ್ಯ ಸೂಚನೆಯೆಂದರೆ ಆಹಾರ ಹಾಗೂ ಇತರ ಆವಶ್ಯಕ ಮಾಲುಗಳ ಕಂಟ್ರೋಲು ಜಾರಿ ಮಾಡುವುದು ಆವಶ್ಯಕವೆಂಬುದು

ಈಗ ಸರಕಾರದವರು ದೊಡ್ಡ ಕೈಗಾರಿಕೆಗಳ ಮಾಲಿಕರ ಅಭಿಪ್ರಾಯ ಕೇಳುತ್ತಿದ್ದಾರೆ ಕಂಟ್ರೋಲುಗಳನ್ನು ತೆಗೆಯುವುದೇ ದಾರಿ ಎಂದು ಅವರು ಸಲಹೆ ಕೊಡದೆ ಇರಲಿಕ್ಕಿಲ್ಲ.

ಈ ಸಂದರ್ಭದಲ್ಲಿ ನಮ್ಮ ಸೋಶಿಯಲಿಸ್ಟ್ ಬಂಧುಗಳಾದರೂ ತಮ್ಮ ಸೂಚನೆಗಳನ್ನು ಕೇಳದೇನೆ ಮುಂದೆ ಇಟ್ಟಿದ್ದಾರೆ ನಿರ್ದಿಷ್ಟ ಮಿತಿಗೆ ಮಿಕ್ಕಿ ಬೇಂಕುಗಳಲ್ಲಿ ಹಣ ಇಟ್ಟವರಿಗೆ ಬೇಂಕಿನಿಂದ ಈ ಹಣ ತೆಗೆಯಲು ಬಿಡದಿರುವುದೇ ಯೋಗ್ಯವೆಂಬುದು ಇವರ ಹೇಳಿಕೆ

ಅಂತೂ ಕೇಂದ್ರ ಸರಕಾರದವರು ಈ ಕುರಿತು ತಮ್ಮ ನಿರ್ಧಾರ ಸದ್ಯದಲ್ಲೇ ತಿಳಿಸಲಿದ್ದಾರೆ ನಮಗಂತೂ ಮಾಲುಗಳ ಕ್ರಯಗಳು ಕಡಿಮೆಯಾದರೆ ತೃಪ್ತಿಯೆನ್ನಬಹುದು.

ಬಡೋದೆ ಮಹಾರಾಜರು ಪ್ರಜಾ ಸ್ವಾತಂತ್ರ್ಯ ಕೊಟ್ಟರು

ಪ್ರಜಾ ಸ್ವಾತಂತ್ರ್ಯ ಕೊಡುವುದಾಗಿ ಈ ರಾಜರು ಮೊದಲೇ ವಾಗ್ದಾನ ಮಾಡಿದ್ದರು. ಆದರೆ ಜಾರಿಗೆ ತರಲು ಸಮಯ ಬಂದಾಗ ವಿಲಾಯತಿಗೆ ಹೋಗಿ ಸಂಸ್ಥಾನದ ಹಣ ಖರ್ಚು ಮಾಡುತ್ತ ಕುಳಿತರೂ ಅಲ್ಲಿಯ ಶಾಸನ ಸಭೆಯವರು ಈ ರಾಜರು ರಾಜ್ಯ ಬಿಟ್ಟು ಬಿಡುವುದೇ ಯುಕ್ತವೆಂದು ನಿರ್ಣಯ ಮಾಡಿದರು ಆಗ ರಾಜರಿಗೆ ಕಣ್ತೆರದು ತಮ್ಮ ರಾಜ್ಯಕ್ಕೆ ಬಂದರು. ಸರ್ದಾರ ವಲ್ಲಭಭಾಯಿಯವರೊಡನೆ ಮಾತುಕತೆ ನಡಸ್ಸಿ ಪೂರ್ಣ ಜವಾಬ್ದಾರಿ ಸರಕಾರ ಈಗಲೇ ಕೊಡಲು ಒಪ್ಪಿದರು ಸರಕಾರೀ ಖಜಾನೆಯಿಂದ ತೆಗೆದ ಹಣ ಮರುಪಾವತಿ ಮಾಡಲು ಒಪ್ಪಿದರು ತಾನು ರಾಜ್ಯದಿಂದ ಹೊರಗೆ ಹೋಗುವಾಗ ಅಂದರೆ ವಿಲಾಯತಿಗೆ ಹೋಗುವಾಗ ರಾಜರ ಅಧಿಕಾರ ನಡೆಸಲು ಮಹಾ ರಾಣಿ ಮುಖ್ಯ ಸಚಿವ ಮತ್ತು ಶಾಸನ ಸಚಿವರ ಒಂದು ಸಮಿತಿ ಏರ್ಪಡಿಸಿಕೊಂಡರು. ಅಂದರೆ ಈ ಮಹಾರಾಜರಿಗೆ ತಮ್ಮ ಊರಲ್ಲಿ ನಿಲ್ಲುವುದೆಂದರೆ ತೃಪ್ತಿ ಇಲ್ಲ. ಅಂತೂ ರಾಜರಿಗೆ ಒಪ್ಪಿ ರಾಜಪಟ್ಟ ಒಂದು ತನಗೆ ಉಳಿಸಿಕೊಂಡರು.

ಬಹಿರಂಗ ಏಲಮು ಅಥವಾ ಖಾಸಗಿ ನಿರ್ಣಯ

ಮಂಗಳೂರು ಮಾರ್ಕೆಟ್ ರೋಡಿನಲ್ಲಿ ವೆಬ್‌ಸ್ಟರ್ ಮಾರ್ಕೆಟಿಗೆ ತಾಗಿ ಇರುವ ಕೆಲವು ಅಂಗಡಿ ಕಟ್ಟಡಗಳು ನಮ್ಮ ಮುನಿಸಿಪಾಲಿಟಿಗೆ ಸೇರಿದವುಗಳಿದ್ದು ಇವನ್ನು ಬಾಡಿಗೆಗೆ ಕೊಡುವಾಗ ಬಾಡಿಗೆ ನಿರ್ಣಯದ ಬಗ್ಗೆ ಬಹಿರಂಗವಾಗಿ ನೋಟೀಸು ಕೊಟ್ಟು ಏಲಮ್ ಮಾಡಿ ಹೆಚ್ಚು ಬಾಡಿಗೆ ಕೊಡುವವರಿಗೆ ಈ ಅಂಗಡಿಗಳನ್ನು ಬಾಡಿಗೆಗೆ ಕೊಡಬೇಕೋ ಅಥವಾ ಈಗ ಹಲವು ವರ್ಷಗಳಿಂದ ಆ ಅಂಗಡಿಗಳಲ್ಲಿ ವ್ಯಾಪಾರ ನಡೆಸಿಕೊಂಡಿದ್ದವರಿಗೇನೆ ಈ ಅಂಗಡಿಗಳನ್ನು ಖಾಸಗಿಯಿಂದ ಅವರೊಡನೆ ಮಾತುಕತೆ ನಡೆಸಿ ನ್ಯಾಯ ಕಂಡ ಬಾಡಿಗೆಗೆ ಕೊಡಬೇಕೊ ಎಂಬೊಂದು ಪ್ರಶ್ನೆ ನಮ್ಮ ಮುನಿಸಿಪಲ್ ಕೌನ್ಸಿಲಿನಲ್ಲಿ ಈಗ ಸ್ವಲ್ಪ ಸಮಯದಲ್ಲಾಗ್ಯಾತು ಚರ್ಚಿಸಲ್ಪಡುತ್ತಿದೆ

ಈ ಕುರಿತು ಮುನಿಸಿಪಲ್ ಕಾನೂನಿನಲ್ಲಿ ಏನಿದೆಯೆಂಬುದನ್ನು ವಿಚಾರಿಸುವುದು ಮೊದಲ ಕೆಲಸ ಸಾಮಾನ್ಯವಾಗಿ ಇಂಥ ಪ್ರಸಂಗಗಳಲ್ಲಿ ಬಹಿರಂಗ ಏಲಮಿನ ದಾರಿಯನ್ನೇ ಅನುಸರಿಸಬೇಕು ಆದರೆ ಹಿಂದೆ ಇದ್ದವರಿಗೇನೆ ಬಾಡಿಗೆ ಚೀಟು ಮುಂದರಿಸುವುದಾದರೆ ಮಾತ್ರವಲ್ಲ ಈ ರೀತಿ ಮುಂದರಿಸುವುದರಿಂದ ಮುನಿಸಿಪಾಲಿಟಿಗೆ ಏಲಮ್ ಮಾಡುವುದಕ್ಕಿಂತ ಹೆಚ್ಚು ಪ್ರಯೋಜನ ಎಂದು ಕಂಡು ಬಂದರೆ ಏಲಮಿನ ದಾರಿ ಬಿಟ್ಟು ಖಾಸಗಿಯಿಂದ ಬಾಡಿಗೆಗೆ ಕೊಡಬಹುದೆಂಬುದಾಗಿಯೂ ಈ ನಿಯಮಗಳಲ್ಲಿ ಹೇಳಲಾಗಿದೆ

ನಮ್ಮ ಕೌನ್ಸಿಲಿನವರು ಒಮ್ಮೆ ಏಲಮೆಂದೇ ನಿರ್ಣಯಿಸಿದರು ಮತ್ತು ಪುನ ಖಾಸಗಿ ದಾರಿಯೇ ಉತ್ತಮವೆಂದ ಇವರಿಗೆ ತೋಚಿತು ಹೀಗಾಗಿ ಒಂದೇ ಮನಸ್ಸಿನ ನಿರ್ಧಾರ ಮಾಡದ ಸ್ವಲ್ಪ ಗೊಂದಲಕ್ಕೆ ಬಿತ್ತು ಅಂತೂ ಈ ಏಚಾಂದ ನಿರ್ಣಯ ಸರಕಾರಕ್ಕೆ ಹೋದಾಗ ಏಲಮಿಲ್ಲದೆ ಖಾಸಗಿಯಿಂದ ಕೊಡಲು ಹೊಸ ನಿರ್ಣಯ ಮಾಡಿ ಕಳುಹಿಸಿರಿ ಮತ್ತು ಅದಕ್ಕೆ ಲೋಕಲ್ ಬೋರ್ಡು ಮತ್ತು ಮುನಿಸಿಪಲ್ ಇನ್ಸ್‌ಪೆಕ್ಟರರ ಸಮ್ಮತಿ ಪಡೆಯಬೇಕು ಈ ಕುರಿತು ಸಂಬಂಧಪಟ್ಟ ನಿಯಮ ನೋಡಿಕೊಳ್ಳಿರಿ ಎಂಬುದಾಗಿ ಆಜ್ಞೆ ಬಂದಿತು.

ಮೇಲೆ ಕಾಣಿಸಿದ ಸರಕಾರೀ ಆಜ್ಞೆ ಕಳೆದ ಸೋಮವಾರ ನಡೆದ ಕೌನ್ಸಿಲ ಸಭೆಯ ಮುಂದೆ ಇಡಲಾಯಿತು. ಸರಕಾರದವರು ಸೂಚಿಸಿದಂತೆ ಏಲಮ್ ಇಲ್ಲದೆ ಈಗ ಇದ್ದವರಿಗೇನೆ ನ್ಯಾಯವಾದ ಬಾಡಿಗೆಗೆ ಖಾಸಗಿಯಿಂದ ಕೊಡಬೇಕಾಗಿ ನಿರ್ಣಯವಾಯಿತು

ಶ್ರೀ ಬಿ ದಾಮೋದರ ಬಾಳಿಗರು ಒಬ್ಬರು ಮಾತ್ರ ಈ ನಿರ್ಣಯಕ್ಕೆ ತಮ್ಮ ಆಕ್ಷೇಪ ಸೂಚಿಸಿದರು ಈ ಪ್ರಶ್ನೆಗೆ ಸಂಬಂಧಪಟ್ಟವರೆಂಬುದರಿಂದ ಶ್ರೀ ಎಮ್ ರಾಘವೇಂದ್ರ ಪೈಯವರು ಈ ವಿಷಯದ ಚರ್ಚೆಗಳಲ್ಲಾಗಲಿ ನಿರ್ಣಯದಲ್ಲಾಗಲಿ ಭಾಗವಹಿಸಲಿಲ್ಲ

ಮುಖ್ಯವಾದ ಪ್ರಶ್ನೆಯೆಂದರೆ ಏಲಮಿಗಿಂತ ಹೀಗೆ ಖಾಸಗಿ ರೀತಿ ಬಾಡಿಗೆಗೆ ಕೊಡುವುದು ಮುನಿಸಿಪಾಲಿಟಿ ದೃಷ್ಟಿಯಿಂದ ಹೆಚ್ಚು ಲಾಭದಾಯಕವೋ ಎಂಬುದು ಲಾಭದಾಯಕವೆಂದರೆ ಏಲಮಿಗಿಂತ ಹೆಚ್ಚಿನ ಬಾಡಿಗೆ ಸಿಕ್ಕುತ್ತದೊ ಎಂಬುದು ಮಾತ್ರ ನೋಡಿದರೆ ಸಾಲದು ಒಬ್ಬ ಖಾಲಿ ಕೂಳುವಾರು ಏಲಮಿನಲ್ಲಿ ವಿಪರೀತ ಬಾಡಿಗೆಗೆ ವಹಿಸಿಕೊಂಡು ಮೂರು ತಿಂಗಳ ಒಳಕ ಅಂಗಡಿ ಖಾಲಿ ಹಾಕಿದರೆ ಅಥವಾ ಬಾಡಿಗೆ ಕೊಡದೆ ವ್ಯಾಜ್ಯ ವಗ್ಯೆರೆ ಖರ್ಚಿಗೆ ಕಾರಣವಾಗಿ ನಷ್ಟವಾಗುವಂತಿದ್ದರೆ ಅದಕ್ಕಿಂತ ಖಾತ್ರಿ ಜನರಿಗೆ ಸ್ವಲ್ಪ ಕಡಮೆಯಾದರೂ ನ್ಯಾಯವಾದ ಬಾಡಿಗೆಗೆ ಕೊಡುವುದನ್ನೇ ಹೆಚ್ಚು ಲಾಭದಾಯಕವೆಂದು ತಿಳಿಯಲು ಅಡ್ಡಿಯಿಲ್ಲ

ಈಗ ಇದ್ದವರಿಗೇನೆ ನ್ಯಾಯವಾದ ಬಾಡಿಗೆಗೆ ಕೊಡುವುದೇ ಕೌನ್ಸಿಲಿನ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯೆಂದ ಕೌನ್ಸಿಲಿನ ಮೆಂಬರರಲ್ಲಿ ಹೆಚ್ಚಿನವರು ಅಭಿಪ್ರಾಯ ಪಡುತ್ತಿದ್ದಾರೆಂಬುದ ಅವರು ಮಾಡಿರುವ ನಿರ್ಣಯದಿಂದ ಸ್ಪಷ್ಟವಾಗುತ್ತದೆ ಇದಕ್ಕೆ ಸಂಬಂಧಪಟ್ಟ ಪ್ರಾಂತಿಕ ಇನ್ಸ್‌ಪೆಕ್ಟರರ ಒಪ್ಪಿಗೆ ಸಿಕ್ಕಿದರೆ ಈ ಪ್ರಶ್ನೆ ಇಲ್ಲಿಗೆ ತೀರ್ಮಾನವಾಗುತ್ತದೆ

ಈ ಅಂಗಡಿಗಳಿಗೆ ಸಂಬಂಧಪಟ್ಟ ಕೆಲವರು ಕೌನ್ಸಿಲರುಗಳನ್ನು ತಮ್ಮ ಕಡೆಗೆ ಒಲಿಸಿಕೊಂಡು ಈ ರೀತಿ ಕೌನ್ಸಿಲಿಗೆ ನಷ್ಟ ಮಾಡಿ ತಮಗೆ ಲಾಭ ಮಾಡಿಕೊಳ್ಳಲು ಯತ್ನಿಸಿದುದರ ಪರಿಣಾಮವಿದೆಂದು ದೂರುವುದರಲ್ಲಿ ಅರ್ಥವಿಲ್ಲ ಕೌನ್ಸಿಲಿನ ಹೆಚ್ಚಿನ ಸಭಾಸದರು ಕೌನ್ಸಿಲಿನ ಹಿತಕ್ಕೆ ವಿರುದ್ಧ ವರ್ತಿಸುವರೆಂದು ನಾವೆಂದೂ ನಂಬಲಾರೆವು ಮಾತ್ರವಲ್ಲ ಇಂಥ ಆರೋಪಕ್ಕೆ ಯಾವ ಆಧಾರವೂ ಇರುವುದಿಲ್ಲ. ಯಾವುದು ಹೆಚ್ಚು ಹಿತಕರವೆಂಬ ಕುರಿತು ಸಹಜವಾಗಿ ಭಿನ್ನಾಭಿಪ್ರಾಯವಿರಲು ಎಡೆಯುಂಟು. ಬಹುಮತದ ಅಭಿಪ್ರಾಯದಂತೆ ವರ್ತಿಸುವುದೇ ಯುಕ್ತವಾದ ದಾರಿ ಇರುತ್ತದೆ.

ಸ್ವೀಕಾರ ಮತ್ತು ವಿಮರ್ಶೆ

ಪ್ರಣಯ ದರ್ಶನ-ಲೇಖಕ ಅಮ್ಮೆಂಬಳ ಶಂಕರನಾರಾಯಣ ವಿದ್ವಾನ್, ಮಂಗಳೂರು—ಸಾಹಿತ್ಯಾಂಜಲಿ ಗ್ರಂಥಮಾಲೆ ಬೋಳಾರ, ಮಂಗಳೂರು ಇದರ ಪ್ರಥಮ ವರ್ಷದ ಮೂರನೆಯ ಪುಸ್ತಕ ಬೆಲೆ 1—8—0.

ಇದೊಂದು ನಾಟಕ ಸಂಕಲನ. ಮೂರು ನಾಟಕಗಳಿವೆ "ಪ್ರಣಯ ದರ್ಶನ"ವೆಂಬ ಮೊದಲನೆಯ ನಾಟಕವು ಕಳಿದಾಸ ಶಕುಂತಲೆಯ ಮೊದಲ ಅಂಕದ ಪದ್ಯಾನುವಾದ. ಎರಡನೆಯ "ಮೋಹಾಂಧೆ" ಎಂಬುದು ತಿಷ್ಯ ರಕ್ಷಿತೆಯ ಕಥೆ ಮೂರನೆಯ "ಕರುಣೆಯ ಬೆಳಕು" ಬುದ್ಧನ ಪೂರ್ವ ಜನ್ಮದ ಒಂದು ಜಾತಕ ಕಥೆ.

ಈ ಮೂರು ನಾಟಕಗಳೂ ಸರಳ ರಗಳೆಯಲ್ಲಿ ಬರೆಯಲ್ಪಟ್ಟಿವೆ ಈ ಗ್ರಂಥಕ್ಕೆ ಮುನ್ನುಡಿ ಬರೆದ ಬೆಟಗೇರಿ ಕೃಷ್ಣಶರ್ಮರು ಕೆಲಕೆಲವು ತೀರ ಅಪರಿಚಿತ ಸಂಸ್ಕೃತ ಶಬ್ದ ಪ್ರಯೋಗ ಬಿಟ್ಟರೆ ಈ ನಾಟಕಗಳ ಭಾಷೆ—ಸಾಹಿತ್ಯದ ಸಾಮಾನ್ಯ ಸಂಸ್ಕಾರವಿದ್ದವರಿಗೂ—ಚೆನ್ನಾಗಿ ತಿಳಿಯುವಂತಿದೆ—ಸಂಭಾಷಣೆಗಳು ಸಹಜವಾಗಿವೆ-ಐತಿಹಾಸಿಕ ವಾತಾವರಣದ ಹಿನ್ನೆಲೆ ಔಚಿತ್ಯದಿಂದ ಕೂಡಿದುದಾಗಿದೆ— ಸರಳ ರಗಳೆಯ ಛಂದೋಗತಿಯು ನಿರ್ದುಷ್ಟವಾಗಿದೆ ಎಂದು ಬರೆದಿದ್ದಾರೆ

ಈ ಮೂರು ನಾಟಕಗಳಲ್ಲಿ ಮೊದಲನೆಯ "ಪ್ರಣಯ ದರ್ಶನ"ವೇ ನಿಜವಾಗಿ ಮಹತ್ವವುಳ್ಳದ್ದು ಇದು ಸಂಸ್ಕೃತ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವ ಒಂದು ಯತ್ನ. ಇಂಥ ಯತ್ನ ಈಗ ಅತ್ಯಗತ್ಯವಿದೆ ಈಗಿನವರಿಗೆ ಸಂಸ್ಕೃತ ಸಾಹಿತ್ಯವನ್ನು ಹೀಗೆ ಪದ್ಯದಲ್ಲಿ ಕೊಡುವುದಕ್ಕಿಂತ ಸರಳವಾದ ಗದ್ಯದಲ್ಲಿ ಕೊಟ್ಟರೆ ಹೆಚ್ಚು ಪ್ರಯೋಜನವಾದೀತೆಂದು ಅನ್ನಿಸುತ್ತದೆ ಆದುದರಿಂದ ಇದೇ ಲೇಖಕರು ಕಾಳಿದಾಸನ ಮಾಲವಿಕಾಗ್ನಿಮಿತ್ರ ಗದ್ಯದಲ್ಲಿ ಕೊಡುವರೆಂಬುದನ್ನು ಕಂಡು ನಮಗೆ ಆನಂದವಾಗಿದೆ

ರನ್ನನ ರಸಘಟ್ಟಿ—ಲೇಖಕ ಜಿ ಪಿ ರಾಜರತ್ನಂ ಪ್ರಕಾಶಕರು ಹಿಂದ್ ಕಿತಾಬ್ಸ್ ಲಿಮಿಟೆಡ್—ಜೋಂಬೇ—ಬೆಂಗಳೂರು ಬೆಲೆ 1—4—0

ಇದು ರನ್ನನ ಗದಾಯುದ್ಧ ಕಾವ್ಯ ಸಂಗ್ರಹದ ಹೊಸಗನ್ನಡ ಗದ್ಯಾನುವಾದ. ಮೂಲದಲ್ಲಿಯ ಹಳೆಗನ್ನಡ ಪದ್ಯಗಳಿಗೂ ಗದ್ಯ ಭಾಗಗಳಿಗೂ ಅನುಸಾರವಾದ ಹೊಸಗನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದೆ ಅಲ್ಲಿಗೂ ಅರ್ಥವು ಕಷ್ಟವಾಗಿ ನಿಂತ ಹಲವಾರು ಪದಗಳಿಗೆ ಅರ್ಥ ವಿವರಣೆಯನ್ನು ಪುಸ್ತಕದ ಕೊನೆಯಲ್ಲಿ ಸೇರಿಸಿದೆ ಈ ಅನುವಾದವನ್ನು ಓದಿ ಏನಾದರೂ ಮೂಲದ ಬಗೆಗೆ ಕುತೂಹಲವುಂಟಾದರೆ ಅದನ್ನು ಕೊಂಚ ಮಟ್ಟಿಗೆ ತೀರಿಸುವುದಕ್ಕಾಗಿ 'ಗದಾಯುದ್ಧ'ದ ಹೆಚ್ಚು ಪ್ರಸಿದ್ಧವಾದ ಕೆಲವು ಖಂಡಗಳನ್ನು ಪುಸ್ತಕದ ಕೊನೆಗೆ ಕೊಟ್ಟಿದೆ.

ಈ ಗ್ರಂಥವು ಒಂದು ಹೊಸ ಪ್ರಯೋಗ ಹಳೆಗನ್ನಡ ಗ್ರಂಥಗಳನ್ನು ಆ ಭಾಷೆ ಹೆಚ್ಚು ತಿಳಿಯದವರು ತಿಳಿಯುವಂತೆ ಮಾತ್ರವಲ್ಲ ಮೂಲವನ್ನು ಮುಂದೆ ಓದಲು ಅನುಕೂಲವಾಗುವಂತೆ ಮಾಡುವುದು ಈ ಪ್ರಕಟನೆಯ ಉದ್ದೇಶ.

ಈ ಪ್ರಕಟನೆಯು ತನ್ನ ಉದ್ದೇಶವನ್ನು ಪೂರ್ಣ ಸಾಧಿಸುವಂತೆ ಅತ್ಯುತ್ಕೃಷ್ಟ ರೀತಿಯಲ್ಲಿ ಸಿದ್ಧವಾಗಿದೆಯೆಂದು ಕಂಠೋಕ್ತವಾಗಿ ಹೇಳಬಹುದು.

ಜಿಲ್ಲಾ ಸಮಾಚಾರ

ಹೆಚ್ಚು ಆಹಾರ ಬೆಳೆಸಲು ಗೊಬ್ಬರ ವಿತರಣೆ

ನೆಲಗಡಲೆ ಹಿಂಡಿಯನ್ನು ಕೃಷಿಕರಿಗೆ ಹಂಚಲು ತಮ್ಮ ಪರವಾಗಿ ಸರಕಾರವು ಎಸ್. ಕೆ. ಸಿ. ಸಿ. ಹೋಲ್‌ಸೇಲ್ ಸ್ಟೋರ್ಸ್ ಲಿಮಿಟೆಡ್ ಇವರನ್ನು ಅಧಿಕೃತರನ್ನಾಗಿ ಮಾಡಿರುವುದರಿಂದ ಸದ್ರಿ ಸ್ಟೋರ್ಸಿನವರು ಈ ಕೆಳಗಿನ 22 ಕೇಂದ್ರಗಳಲ್ಲಿ ಹಿಂಡಿ ಹಂಚುವಿಕೆಯನ್ನು ಈಗಾಗಲೇ ವ್ಯವಸ್ಥೆ ಪಡಿಸುವರು: ಕುಂದಾಪುರ, ಮೂಡಬಿದ್ರಿ, ಗುರುಪುರ, ಪುತ್ತೂರು, ಬೆಳ್ತಾರೆ, ಕುಂಬ್ಳೆ, ಉಡುಪಿ, ಅಜೆಕಾರು, ಕೋಟೆಕಾರು, ಬೆಳ್ತಂಗಡಿ, ಉಪ್ಪಿನಂಗಡಿ, ಮಂಜೇಶ್ವರ, ಬ್ರಹ್ಮಾವರ, ಮಂಗಳೂರು, ಫರಂಗಿಪೇಟೆ, ವಿಟ್ಲ, ಕಾಸರಗೋಡು, ಕಾರ್ಕಳ, ಮೂಲ್ಕಿ, ಬಂಟ್ವಾಳ, ಸುಳ್ಯ, ಹೊಸದುರ್ಗ. ಸದ್ಯಕ್ಕೆ ಬೋನಸ್ ಕೂಪನುಗಳಿದ್ದವರಿಗೆ ಮಾತ್ರ ಹಂಚಲಾಗುವುದು. ಬೆಲೆ 160 ರಾತ್ತಲಿನ ಚೀಲಕ್ಕೆ ರೂ. 10-8-0.

ದೇಶಿಯ ಆಟ ಪ್ರದರ್ಶನ

ಕಳೆದ ಆದಿತ್ಯವಾರ ಇಲ್ಲಿಯ ಕೇಂದ್ರ ಮೈದಾನಿನಲ್ಲಿ ಸ್ಥಳೀಯ ತರುಣರು ಒಟ್ಟು ಗೂಡಿ ಹುತ್ತುತ್ತು ಮೊದಲಾದ ದೇಶಿಯ ಆಟಗಳನ್ನು ಒಳ್ಳೆ ಆಕರ್ಷಕ ರೀತಿಯಿಂದ ಆಡಿ ತೋರಿಸಿದರೆಂದೂ ಸಾಧಾರಣ 400 500 ಜನರು ಒಟ್ಟು ಕೂಡಿದ್ದರೆಂದೂ, ನೆರೆದವರು ಅವರಿಗೆ ಒಳ್ಳೆ ಉತ್ಸಾಹವನ್ನು ನೀಡಿದರೆಂದೂ ಪ್ರಕಟವಾಗಿದೆ

ಪ್ರಾಣಿದಯಾ ಸಂಘ ಪ್ರಬಂಧ ಸ್ಪರ್ಧೆಯ ಫಲಿತಾಂಶ

ಸ್ಥಳೀಯ ಪ್ರಾಣಿದಯಾ ಸಂಘದವರು ಶಾಲಾ ವಿದ್ಯಾರ್ಥಿಗಳಿಗಾಗಿ 'ಪ್ರಾಣಿಯ' ದಯೆಯ ಕುರಿತು 1947ರಲ್ಲಿ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಹ್ಯಾಸ್ಕೂಲಿನ ವಿದ್ಯಾರ್ಥಿಗಳಲ್ಲಿ ಪ್ರಥಮ ಬಹುಮಾನವು ಸ್ಥಳೀಯ ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿ ಶ್ರೀ ಪರಮೇಶ್ವರ ಹೆಂದೆ ಇವರಿಗೂ ಲೋವರ್ ಸೆಕೆಂಡರಿ ವಿದ್ಯಾರ್ಥಿಗಳವುಗಳಲ್ಲಿ ಮೂರು ಬಹುಮಾನಗಳು ಉಚ್ರೆ ಹ್ಯಾಸ್ಕೂಲಿನ ವಿದ್ಯಾರ್ಥಿಗಳಿಗೂ ಸಿಕ್ಕಿರುವುದಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

ಬಟ್ಟೆ ಧೋರಣೆ ಚರ್ಚೆ

ಜಿಲ್ಲಾ ವಾಣಿಜ್ಯಸಂಘದ ಪ್ರತಿನಿಧಿಗಳು, ಸಹಕಾರಿ ಸಂಘಗಳ ಡಿ। ರೆಜಿಸ್ಟ್ರಾರರು, ಶ್ರೀ ಎಲ್. ಸಿ ಪಾಯಸ್, ಎಂ ಎಲ್ ಎ ಸಹಕಾರಿ ಸಂಘದ ಪ್ರತಿನಿಧಿಗಳೂ, ಇವರೆಲ್ಲರೂ ಸೇರಿ ಕೆಲದಿನಗಳ ಹಿಂದೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸರಕಾರದ ಬಟ್ಟೆ ಧೋರಣೆಯನ್ನು ಚರ್ಚಿಸಿದರು

ಮೋಸದ ಮತ

ಶ್ರೀ ಕಮಲಾಕ್ಷ ಶೆಟ್ಟಿ ಎಂಬವರು ಕಳೆದ ಮುನಿಸಿಪಲ್ ಚುನಾವಣೆಯಲ್ಲಿ ತಮ್ಮ ಹೆಸರಿನ ವೋಟಿಲ್ಲದ ಇನ್ನೊಬ್ಬರ ಪರವಾಗಿ ವೋಟು ಕೊಟ್ಟರೆಂಬ ಅಪಾದನೆಯ ವಿಚಾರಣೆಯಾಗಿ ಅವರಿಗೆ ರೂ. 100 ಜುಲ್ಮಾನೆಯಾಗಿದೆ.

ಮನೆ ಮಾಲಕರಿಗೆ ಎಚ್ಚರಿಕೆ

ಕದ್ರಿ ಭಾಗದ ಶ್ರೀಮತಿ ಗೊನ್ಸಾಲ್ವಿಸ್ ಮತ್ತವರ ಮಕ್ಕಳು ತಮ್ಮಲ್ಲಿನ ಬಾಡಿಗೆ ಮನೆಯಲ್ಲಿ ಇದ್ದ ಶ್ರೀ ಶರ್ದಾ ಬಾಯಿ ಎಂಬವಳನ್ನು ಮನೆ ಬಿಡಿಸಲು ಹಿಂಸೆ ಕೊಟ್ಟರೆಂಬ ಆರೋಪಕ್ಕೆ ಸ್ಟೇ। ಸ। ಮೆಜಿಸ್ಟ್ರೇಟರಲ್ಲಿ ರುಜುವಾತಾಗಿ ಆರೋಪಿಗಳಿಗೆ ರೂ. 30 ಜುಲ್ಮಾನೆ ವಿಧಿಸಲಾಗಿದೆ.

ಹಿಂದುಸ್ಥಾನೀ ಮಜಲಿಸ್ ಮಂಗಳೂರು

ಹಿಂದೂಸ್ಥಾನೀ ಮಜಲೀಸ್, ಮಂಗಳೂರು, ಈ ಸಂಸ್ಥೆಯ ಮಹಾ ಸಭೆಯು ಇದೇ ಸಪ್ಟೆಂಬರ ತಿಂಗಳ 12ನೇ ತಾರೀಕು ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಸರಿಯಾಗಿ ಕೆನರಾ ಹ್ಯಾಸ್ಕೂಲಿನ ಕಸ್ತೂರಬಾ ಸ್ಮಾರಕ ಸದನದಲ್ಲಿ ಕೂಡಲಿರುವುದು

ಮಜಲಿಸಿನ ಎಲ್ಲಾ ಸದಸ್ಯರೂ ಮತ್ತು ರಾಷ್ಟ್ರಭಾಷಾ ಪ್ರೇಮಿಗಳೂ ಈ ಸಭೆಯ ಕಾರ್ಯದಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಮಜಲಿಸಿನ ಸದಸ್ಯರಿಗೆ ಸಭೆಯ ಮುಂದೆ ತರಲಿರುವ ಠರಾವುಗಳನ್ನು ಒಂದು ವಾರಕ್ಕೆ ಮುಂಚಿತವಾಗಿ ಅಂದರೆ 5-9-48ರ ಒಳಗೆ ಕಾರ್ಯದರ್ಶಿಗಳಿಗೆ ಒಪ್ಪಿಸಬೇಕಾಗಿ ಈ ಮೂಲಕ ಸೂಚಿಸುತ್ತೇನೆ

ಕಳ್ಳರ ಕೂಟದ ಕೈದು

ಕೆ ಡಿ ಇದ್ದಿನೆಬ್ಯಾರಿ, ಬೋರಿ ಇದ್ದಿನ ಬ್ಯಾರಿ, ಕುಟ್ಟಿಯಾಂ ಬ್ಯಾರಿ, ಅಹಮ್ಮದೆ ಬ್ಯಾರಿ ಎಂಬ ನಾಲ್ವರನ್ನು ಇಲ್ಲಿನ ಕ್ರೈಮ್ ಬ್ರೇಂಚಿನವರು ಕೈದು ಮಾಡಿದ್ದಾರೆ ಇವರಲ್ಲಿ ಅಹಮ್ಮದೆ ಬ್ಯಾರಿ ಕುಂದಾಪುರ ತಾಲೂಕಿನ ಕುಂಬಾಸಿಯಲ್ಲಿ ಸುಮಾರು 2200 ರೂಗಳ ಸೊತ್ತನ್ನು ಕದ್ದಿರುವನೆಂದೂ, ಮಿಕ್ಕವರು ತಣ್ಣೀರುಬಾವಿ, ಕುಳಾಯಿ, ಕೋಟೆಕಾರು, ಮಂಗಳೂರು ಮೊದಲಾದ ೬-೭ ಸ್ಥಳಗಳಲ್ಲಿ ಕಳವು ಮಾಡಿದರೆಂದಿದ್ದು ಅವರ ವಿಚಾರಣೆ ಬೇಗನೆ ನಡೆಯಲಿದೆ

ಸೊತ್ತು ಸಹಿತ ಕೈದು

ಇಲ್ಲಿಯ ಗ। ಕೋಲೇಜಿನ ಬಳಿಯ ಅಬ್ದುಲ್ ಸಾಹೇಬರ ವಾಚಿನ ಅಂಗಡಿಯಿಂದ ಸುಮಾರು ೧೩೦೦ ರೂಪಾಯಿಗಳಷ್ಟು ಪದಾರ್ಥಗಳನ್ನೂ, ಕೃಷ್ಣಭವನ ಭೋಜನ ವಸತಿಯಿಂದ ಒಬ್ಬರ ೫೦ ರೂಪಾಯಿ ಪದಾರ್ಥಗಳನ್ನೂ ಕಳವು ಮಾಡಿದ ಬಜ್ಪೆಯ ಸಿಲ್ವೆಸ್ಟರ್ ಸೋಜಾ ಎಂಬವನನ್ನು ಇಲ್ಲಿಯ ಕ್ರೈಮ್ ಬ್ರೇಂಚಿನವರು ಸೊತ್ತು ಸಹಿತ ಹಿಡಿದಿರುವರು

ಇತರ ವಿಶೇಷ ಮೊಕದ್ದಮೆಗಳು

ಪುತ್ತೂರು ತಾಲೂಕಿನ ಅಮರ ಪಡ್ನೂರು ಗ್ರಾಮದ ಕುಂಞಮ್ಮ ಮಣಿಯಾಣಿ ಎಂಬಾಕೆ ತನ್ನ ಐದು ದಿನದ ಮಗುವನ್ನು ಕೊಂದಳೆಂಬ ಆರೋಪಕ್ಕೆ ಒಳಗಾಗಿದ್ದು, ಅವಳು ತನ್ನ ಮೂರನೇ ಗಂಡನೇ ತನ್ನ ಮೇಲಿನ ವ್ಯಭಿಚಾರದ ಸಂದೇಹದಿಂದ ಆ ಅಕೃತ್ಯವನ್ನು ನಿರ್ವಹಿಸಿದನೆಂದು ಪ್ರತಿಪಾದಿಸಿದ್ದರಿಂದ ಆರೋಪ ಸಂದೇಹಾಸ್ಪದವಾದ್ದರಿಂದ ಸೆಶ್ಯನ್ ಜಡ್ಜರು ಆರೋಪಿಯನ್ನು ದೋಷಮುಕ್ತ ಮಾಡಿದರು.

ಫಾಸಿ ಸಜೆ

ಮಂಜೇಶ್ವರದ ಮಾಂಕು ಪೂಜಾರಿ ಎಂಬವ ಚೋಮು ಎಂಬ ತನ್ನ ಅತ್ತಿಗೆಯನ್ನು ಕೊಂದನೆಂದೂ, ಶಿವಪ್ಪ ಪೂಜಾರಿಯೆಂಬವನನ್ನು ಇರಿದನೆಂದೂ ಆರೋಪಕ್ಕೊಳಗಾಗಿ ಎರಡು ಆರೋಪದಲ್ಲೂ ಅಪರಾಧಿಯೆಂದು ನಿರ್ಧರಿತವಾಗಿ ಆರೋಪಿಗೆ ಫಾಸಿ ಶಿಕ್ಷೆ ವಿಧಿಸಲ್ಪಟ್ಟಿದೆ

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಕಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಘೋಷಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ನಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಕಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿ ತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಆದರಿಂದ ನಿಮಗೆ ಸಮಯವೂ ಹಣವೂ ಉಳಿವುದು-ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಕಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ ದೊರೆವುದು

CANARA BANK, LIMITED.

ESTD: 1906

ಉಪ್ಪಿನಂಗಡಿ

ಕೆಲದಿನಗಳ ಹಿಂದೆ ಇಲ್ಲಿಯ ನಟ್ಟಬೈಲು ತೋಡಿನ ಬಳಿ ವಸ್ತ್ರ ತೊಗೆಯಲು ಹೋದ ಓರ್ವ ಸುಮಾರು ೭೦ ವರ್ಷ ಪ್ರಾಯದ ಮುಸಲ್ಮಾನ್ ಸ್ತ್ರೀಯ ಮೇಲೆ ಒಂದು ತೆಂಗಿನ ಮರವು ಅಕಸ್ಮಾತಾಗಿ ಬಿದ್ದುದರ ಪರಿಣಾಮವಾಗಿ ಮುದುಕಿಯು ತಕ್ಷಣ ಮೃತಪಟ್ಟಳು. ಗ್ರಾಮಾಧಿಕಾರಿಗಳು ಅಗತ್ಯವುಳ್ಳ ಪಂಚಾಯತು ಮಹಾಜರ್‌ಗಳನ್ನು ಮಾಡಿರುವರು

ಪುತ್ತೂರು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಜ। ಹುಸೇನ್ ಅವರ ಅಧ್ಯಕ್ಷತೆಯಲ್ಲಿ ಇಲ್ಲಿ ತಾ ೨೬ರಂದು ಸಸಿ ನೆಡುವ ದಿನಾಚರಣೆಯನ್ನು ಜರಗಿಸಲಾಯಿತು

ಬಂಗ್ರ ಮಂಜೇಶ್ವರ

ಕಳೆದ ತಾ ೩೧ರಂದು ಬಿ ಇ. ಎಂ. ಶಾಲೆಯಲ್ಲಿ ಕಾಸರಗೋಡು ತಾಲೂಕು ರೂರಲ್ ವೆಲ್ಫೇರ್ ಆಫೀಸರರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರ ಸಭೆಯೊಂದು ಜರಗಿ ಹನ್ನೆರಡು ಮೆಂಬರರನ್ನೊಳಗೊಂಡ 'ಗ್ರಾಮೋದ್ಧಾರಕ ಸಂಘ' ವೊಂದನ್ನು ಸ್ಥಾಪಿಸಲಾಗಿದೆ.

ದನಗಳಿಗೆ ಪೆನಿಸಿಲಿನ್

ಆಧುನಿಕ ಸಂಶೋಧಿಸಿ ಎಂದೆನಿಸಲ್ಪಡುವ ಪೆನಿಸಿಲಿನ್ ಔಷಧಿಯ ಹೇರಳ ಸಂಗ್ರಹವು ಇಂಗ್ಲೆಂಡಿನಿಂದ ನ್ಯೂಜಿಲೇಂಡಿಗೆ ಒಯ್ಯಲ್ಪಡುತ್ತಿದೆ ಕಾರಣ, ಹಾಲು ಉತ್ಪತ್ತಿಗೆ ಪ್ರಖ್ಯಾತಿಪಟ್ಟ ನ್ಯೂಜಿಲೆಂಡಿನ ದನಗಳಿಗೆ ಒಂದು ವ್ಯಾಧಿ ತಗಲಿದ್ದು ಪೆನಿಸಿಲಿನಿಂದಲೇ ಅದನ್ನು ಗುಣಪಡಿಸಬಹುದೆಂದು ಪಶುವೈದ್ಯ ತಜ್ಞರು ಅಭಿಪ್ರಾಯಪಟ್ಟಿರುವರು.

NOTICE

THE BOMBAY LIFE ASSURANCE COMPANY, LIMITED

Notice having been given of the loss of Policy No 38795 Jt life of Mr & Mrs Sujeer Anantha Nayak a duplicate policy will be issued unles objection is lodged with us within one month from this date

K Balasubrahmanyam
Manager & Actuary

Bombay 3-9-48

NOTICE

In the matter of the India Coffee Plantations Co Ltd
Mangalore

To whomsoever concerned

Please take notice that at the Extra ordinary general meeting of the members of The India Coffee Plantations Co Ltd held on 22-8-1948, the aforesaid Company has been wound up voluntarily

(Signed) B V N Prabhu,
Director in Charge.

30-8-48.

ಇವರು ವಿಶ್ವ ಪ್ರಭೃತಿಗಳಂತೆ

ಒಂದು ಆಂಗ್ಲ ದೃಷ್ಟಿ ಕೋನ

ರಾಜಕೀಯ ಮುತ್ಸದ್ದಿಗಳಲ್ಲಿ ನೆಹರು ಒಬ್ಬರು

ಲಂಡನಿನ ನ್ಯೂಸ್ ಕ್ರೊನಿಕಲ್ ಪತ್ರಿಕೆಯಲ್ಲಿ ಆಯನ್ ಮೆಕೆ ಎಂಬ ಪತ್ರಿಕೋದ್ಯೋಗಿಗಳು ಹೀಗೆ ಬರೆದಿದ್ದಾರೆ:

ನಾವು ಕಾಸುಗಟ್ಲೆ ಚರ್ಚೆ ಮಾಡಿದ ಮೇಲೂ ಜಗತ್ತಿನ ವೃತ್ತ ಪತ್ರಿಕೆಗಳಲ್ಲಿ ಮರಣಾನಂತರ ಐವತ್ತು ಗೆರೆಯ ಶ್ಲಾಘನೆ ಹೊಂದಲು ಯೋಗ್ಯರಾದ ಅರ್ಧ ಡಜನ್ ಜೀವಂತ ವ್ಯಕ್ತಿಗಳನ್ನು ಆರಿಸಲು ನಮಗೆ ಸಾಧ್ಯವಾಗಲಿಲ್ಲ

ಈ ಪಂಚೆ ಪ್ರಭೃತಿಗಳಂತು ಗಣನೀಯರು ಚರ್ಚಿಲ್, ಸ್ಟೆಲಿನ್, ಸ್ಮಟ್ಸ್, ಮೊಂಟ್‌ಗೊಮರಿ ಮತ್ತು ಬರ್ನಾಡ್ ಶೊ.

ಯುದ್ಧ ಅನುಭವದಿಂದ ನಾವು ಐಸನ್ ಹಾರ್, ಮೌಂಟ್ ಬೆಟನ್ ಇವರನ್ನೂ, ಶಾಂತಿಯ ಅನುಭವದಿಂದ ಬೆವಿನ್, ಮೊಲೊಟೊಲ್ ಮತ್ತು ಮಾರ್ಶಲ್ಲರೂ ಪರಿಗಣಿಸಬೇಕಾಗಿದೆ ಎಟ್ಲಿ ಮತ್ತು ಅಧ್ಯಕ್ಷ ಟ್ರೂಮನ್ನರು ಅಧಿಕಾರದಲ್ಲಿದ್ದಾಗ ಮೃತಪಟ್ಟರೆ ಮಾತ್ರ ಗಣನೆಗೆ ಬರಬಹುದೆಂದು ಒಪ್ಪಿದೆವು

ರಾಜಕೀಯ ಕ್ಷೇತ್ರದಲ್ಲಿ ಇವರಿಗೆ ಸಮಾನರಾಗಿ ಸ್ಪರ್ಧಿಸಬಲ್ಲವರೆಂದರೆ ಫ್ರಾನ್ಸಿನ ಅಧ್ಯಕ್ಷ ಬ್ಲುಮ್, ಡಿಗಾಲ್, ಪಿಟ್ಸೆನರು, ಜಕೊಸ್ಲೊವೆಕಿಯದ ಡಾ। ಬೆನಿಷರು ಐರ್ಲೆಂಡಿನ ಡಿವೆಲೆರಾ, ಇಂಗ್ಲೆಂಡಿನ ಸರ್ ಬೊಯ್ಡ್ ಓರರು ಭಾರತದ ನೆಹರುಗಳು ಮತ್ತು ಚೀನದ ಚಿಯಾಂಗರು

ಓರ್ವ ಮಹಿಳೆಯೂ ಇಲ್ಲ!

ಈಗಿರುವ ನಟ ಶ್ರೇಷ್ಠರಲ್ಲಿ ಚಾರ್ಲಿ ಚಾಪ್ಲಿನ್ನರು ಅಗ್ರಗಣ್ಯರು ಹೆರಿ ಲಾಡರ್ ಎಂಬ ಆಂಗ್ಲ ವಿನೋದ ನಟನಿಗೂ ತಜ್ಞರ ಬೆಂಬಲವಿತ್ತು ಅಲ್ಲದೆ ಲಾರೆನ್ಸ್ ಒಲಿವಿಯರ್ ಇವನಿಗೂ ಉಚ್ಚ ಸ್ಥಾನ ಕೊಡಬಹುದು

ಬರ್ನಾರ್ಡ್ ಶೊನನ್ನು ಬಿಟ್ಟರೆ 50 ಗರೆಯ ವೃತ್ತ ಪತ್ರಿಕಾ ಶ್ಲಾಘನೆಗೆ ಅರ್ಹರಾಗುವವರೆಂದರೆ ಆಂಗ್ಲ ಆಸ್ಥಾನ ಕವಿ ಮೆಸ್‌ಫೀಲ್ಡರು, ಕಾದಂಬರಿಗಾರರಾದ ಸೊಮರ್ಸೆಟ್ ಮೊಗಾಮರು, ಆಂಗ್ಲ ಸಾಹಿತಿ ಜೆ ಬಿ. ಪ್ರೀಸ್ಟ್ಲಿ, ಟೆವರ್ಲಿನ್, ಓನಿಲ್, ಒಕೆಸ್ಸಿ, ಮತ್ತು ಥೊಮಸ್ ಮನ್ನರು

ವಿಜ್ಞಾನದ ಮಟ್ಟಿಗೆ ಯಹೂದಿಗಳಾದ ಪ್ರೊ। ಇನ್‌ಸ್ಟಿನ್ನರೇ ಶ್ರೇಷ್ಠರೆಂಬುದಕ್ಕೆ ಎರಡಭಿಪ್ರಾಯಗಳಿಲ್ಲ. ತತ್ವಜ್ಞಾನಿಗಳಲ್ಲಿ ಕ್ರೋಸ್ ಮತ್ತು ಬರ್ಟ್ರಾಂಡ್ ರಸೆಲ್ಲರು ಪ್ರಮುಖರು

ಪಿಕೊಸೊ, ಮೆಟಿಸೆ, ಮತ್ತು ಜೋನ್ ಎಂಬವರು ಜಗದ್ವಂದ್ಯ ಚಿತ್ರಕಾರರೆಂಬುದು ನಿರ್ವಿವಾದ ಕ್ರೀಡಾ ಪ್ರಪಂಚದಲ್ಲಿ ಕ್ರಿಕೆಟಿನ ಜೇಕ್ ಹೊಬ್ಸರು, ಬ್ರೆಡ್ ಮೇನರು, ನಿಗ್ರೊ ಮುಷ್ಟಿಮಲ್ಲ ಜೋ ಲೂಯಿಸ್, ಮತ್ತು ಕುದುರೆ ಓಡಿಸುವ ನಿಪುಣ ಗೊರ್ಡನ್ ರಿಚಾರ್ಡರು ಶೋಭಿಸುತ್ತಾರೆ.

"ಅತ್ಯಂತ ಗಣನೀಯವಾದ ಸಂಗತಿಯೆಂದರೆ ನಾವೆಷ್ಟು ಪರ್ಯಾಲೋಚಿಸಿದರೂ ಮೇಲಿನವರ ಕೀರ್ತಿಗೆ ಸರಿಸಮಾನ ಸ್ಥಾನ ಪಡೆಯಲರ್ಹಳಾದ ಓರ್ವ ಮಹಿಳೆಯನ್ನೂ ನಾವು ಕಂಡು ಹಿಡಿಯದಾದೆವು."

ನಾರದ ವಿಜ್ಞಾನ ವರದಿ

ಗಾಜು ನಳಿಗೆಯ ಶಿಶು

ಕಡೆಗೆಂತೂ ವಿಜ್ಞಾನಿಗಳ ಕನಸು ನನಸಾಗುತ್ತ ಬರುತ್ತಿದೆ ಒಂದು ಅಮೆರಿಕನ್ ಪ್ರಯೋಗಾಲಯದಲ್ಲಿ ತಜ್ಞವೈದ್ಯರು ತಾಯಿಯೋರ್ವಳ ಗರ್ಭದಿಂದ ಗರ್ಭಾಣುಗಳನು ಶೇಖರಿಸಿ ಪುರುಷ ವೀರ್ಯದೊಡನದನ್ನು ಸಂಯೋಗಿಸಿದಾಗ ಒಬ್ಬ ಆರೋಗ್ಯವಂತ ವ್ಯಕ್ತಿಯ ರಕ್ತದಾವಣವೊಂದರಲ್ಲಿ ಡಲ್ಪಟ್ಟ ಗರ್ಭಾಣುಗಳು ಜೀವಭರಿತವಾಗಿ ಬೆಳವಣಿಗೆಯನ್ನಾರಂಭಿಸಿದುವು ಇದು ತನಕದ ಪ್ರಯೋಗಗಳಿಂದ ಬೆಳೆಸಿದ ಶಿಶುಗಳ ಅಂಗಾಂಗಗಳಲ್ಲಿ ವಿಕಾರವಾದ ನ್ಯೂನತೆಗಳು ಕಂಡುಬಂದಿದ್ದವು ಅದಕ್ಕೆ ಗರ್ಭಾಶಯದ ವಾತಾವರಣದ ಕೊರತೆಯೇ ಕಾರಣವೆಂದೆನ್ನಲಾಗಿದೆ

ಖಡ್ಗ ಮೃಗಕ್ಕಿಂತ ಮನುಷ್ಯ ಮೇಲು!

ಪ್ರೊ। ಎಚಲ್ ಉರ್ಬೈನ್ ಎಂಬ ಫ್ರೆಂಚ್ ವೈಜ್ಞಾನಿಕರು ತಮ್ಮ ಜೀವಮಾನದರ್ಧವನ್ನು ಮಾನವ ಬುದ್ಧಿಶಕ್ತಿ ಪ್ರಮಾಣವನ್ನು ಕಂಡು ಹಿಡಿಯಲಿಕ್ಕೆ ವ್ಯಯಿಸಿದ್ದಾರೆ ಅವರ ಅನುಭವ ಪ್ರಕಾರ ಮನುಷ್ಯನು ಖಡ್ಗ ಮೃಗ, ಜಿರಾಫೆ, ಕಾಡು ಕರಡಿಗಳಿಗಿಂತ ಹೆಚ್ಚಿನ ಮೇಧೋಶಕ್ತಿಯುಳ್ಳವನೆಂದು ತಿಳಿದಿದೆ ಮಿದುಳಿನ ಗಾತ್ರಕ್ಕೂ ಬುದ್ಧಿಸಾಮರ್ಥ್ಯಕ್ಕೂ ಯಾವ ಸಂಬಂಧವಿಲ್ಲವೆ ದವರ ಅಭಿಪ್ರಾಯ. ಸ್ಥೂಲ ನಿದರ್ಶನ ತಿಮಿಂಗಿಲವು ಇಲಿಯೊಂದಕ್ಕಿಂತ ಸಾವಿರಾರು ಪಾಲು ಗಾತ್ರವುಳ್ಳದ್ದಾದರೂ ಇಲಿಯೊಂದರಷ್ಟು ಪಾಲು ಬುದ್ಧಿಶಕ್ತಿ ಅದಕ್ಕಿಲ್ಲ ಹೆಚ್ಚಿನ ಸಂದರ್ಭಗಳಲ್ಲಿ ಅದು ಮಿದುಳಿನಿಂದ ವರ್ತಿಸುವುದು ಮಿದುಳಿನ ನರಿತ ಕೂದಲು ಬಣ್ಣವಿದ್ದವಿದ್ದರೆ ಹೆಚ್ಚು ಸಾಮರ್ಥ್ಯದ ಸಂಕೇತವೆಂಬೊಂದು ತತ್ವವಿತ್ತು ಆದರೆ ಕರಿಗಳ ಮಿದುಳ ಮನ ಷ್ಯನಿಗಿಂತ ಹೆಚ್ಚು ನರತ ಬಣ್ಣವುಳ್ಳದ್ದಾಗಿದೆ ಆದರೆ ... ಹೊಂಡದಲ್ಲಿ ಹಾರಿದರೆ ಎಲ್ಲವೂ ಅದನ್ನು ಹಿಂಬಾಲಿಸುವುದೇಕೆ?

ಉಕ್ಕಿನ ಕಾಗದ

ಮನೆಯ ಶೃಂಗಾರಕ್ಕಾಗಿ ಕೋಣೆಯೊಳಗಿನ ಗೋಡೆಗಳಿಗೆ ಬಣ್ಣದ ಕಾಗದಗಳನ್ನು ಅಂಟಿಸುವುದೊಂದು ಆಧುನಿಕ ಗೃಹ ಶೃಂಗಾರ ಪದ್ಧತಿ. ಆದರೆ ಇಂಥ ಕಾಗದಕ್ಕೆ ಅನೇಕ ಅನಾನುಕೂಲತೆಗಳಿವೆ. ಅಮೇರಿಕದ ಒಂದು ಉಕ್ಕಿನ ಕಾರ್ಖಾನೆಯವರು ಒಂದು ಇಂಚಿನ ನೂರನೇ ಒಂದಂಶದಷ್ಟು ತೆಳ್ಳಗಾಗಿರುವ ಉಕ್ಕಿನ 'ಕಾಗದ'ಗಳನ್ನು ಸಿದ್ಧಗೊಳಿಸಿರುವರು ಇದಕ್ಕೆ ಮೇಲಿನಿಂದ ತೆಳ್ಳಗಾದ ಪ್ರೊಸಿಲಿನ್ (ಪಿಂಗಾಣಿ) ಮಣ್ಣಿನ ಪದರಿದೆ ಗೋಡೆಗಳಿಗಂಟಿಸಿದರೆ ಇದನ್ನು ಬೇಕಾದಾಗ ತೊಳೆಯಬಹುದು, ಉಜ್ಜಿ ಸ್ವಚ್ಛ ಮಾಡಬಹುದು

ಭಾರತದ ಅತೀ ಉದ್ದ ದುರ್ಬೀನು

ಶ್ರೀ ಜೆ ದಾಸ್ ಗುಪ್ತಾ ಎಂಬ ಬಂಗಾಳಿ ಸಂಗೀತಗಾರರೊಬ್ಬರು ಮದ್ರಾಸಿನಲ್ಲಿರುವರು ಅವರ ಬಳಿ 13½ ಇಂಚು ಅಗಲದ ಭೂತಗನ್ನಡಿಯಿರುವ, ಭಾರತದಲ್ಲಿ ಅತೀ ದೊಡ್ಡದೆನಿಸಲ್ಪಡುವ ಒಂದು ದುರ್ಬೀನು ಇದೆ ಇದರ ಭೂತಕನ್ನಡಿಯನ್ನು ಶ್ರೀ ಗುಪ್ತರೇ ತಯಾರಿಸಿದರಂತೆ ಅವರ ಬಳಿ ಭೂತಗನ್ನಡಿಗಳನ್ನು ಸಿದ್ಧಗೊಳಿಸುವ ಒಂದು ಯಂತ್ರ ಅವರ ರಚನೆಯದೇ ಇದೆಯಂತೆ ತಾವು 50 ಇಂಚು ಅಗಲದ ಭೂತಗನ್ನಡಿಯನ್ನು ಬೇಕಾದರೂ ತಯಾರುಮಾಡಿ ಕೊಡುವೆನೆಂದವರು ಭಾರತ ಸರಕಾರಕ್ಕೆ ತಿಳಿಸಿರುವರಂತೆ ಅವರ ದುರ್ಬೀನನ್ನು ನೋಡಿದ ಕೊಡೈಕೆನಾಲಿನ ನಕ್ಷತ್ರ ಅವಲೋಕನಾಲಯದವರು ತೃಪ್ತಿ ಸೂಚಿಸಿರುವರು.

ಬೆರಳು ಚೀಪುವ ಸುಲಕ್ಷಣ

ನಿಮ್ಮ ಮಗು ಹೆಬ್ಬೆರಳನ್ನು ಬಾಯಿಯಲ್ಲಿ ಹಾಕಿ ಚೀಪುವುದೇ ... ವಿರಾ? ಅದು ಅವಶ್ಯವಿಲ್ಲ, ಕಾರಣ ಮಕ್ಕಳು ಬೆರಳು ಚೀಪುವುದು ಆನಂದಭರಿತ ಕುಟುಂಬದ ಲಕ್ಷಣವೆಂದು ಶಿಶು ಮನಶ್ಶಾಸ್ತ್ರಜ್ಞರು ತಿಳಿಸುತ್ತಾರೆ ಸ್ವಭಾವದಲ್ಲಿ ಸೌಮ್ಯರಾಗಿದ್ದ ಹೆತ್ತವರು ಬೆರಳು ಚೀಪುವ ಮಗುವಿನ ಈ ಲಕ್ಷಣವನ್ನು ಸಂತೋಷದಿಂದ ಕಾಣುತ್ತಾರೆ. ಆದರೆ ಶೀಘ್ರಕೋಪಿ ಹೆತ್ತವರು ಮಗುವನ್ನು ಹೆದರಿಸಿ ಆ ಅಭ್ಯಾಸವನ್ನು ನಿಲ್ಲಿಸಲು ಪ್ರಯತ್ನಿಸುತ್ತಾರೆ ಇದು ತಪ್ಪು ಎಂದು ತಜ್ಞರ ಅಭಿಪ್ರಾಯ

ಐಸಿನಿಂದ ಶಸ್ತ್ರಕ್ರಿಯೆ

ಪೊಪರೇಶನ್ ಇಲ್ಲವೆ ಶಸ್ತ್ರಕ್ರಿಯೆ ಜರಗಿಸಲು ಹಿಮಗಡ್ಡೆ (ಐಸ) ಯನ್ನುಪಯೋಗಿಸುವುದುತ್ತಮವೆಂದು ವೈದ್ಯ ಪ್ರಪಂಚವು ಅಭಿಪ್ರಾಯ ಪಡುತ್ತಿದೆ ಅಶಕ್ತಿಯಿದ್ದವರಿಗೆ ವೃದ್ಧರಿಗೆ ಕ್ಲೊರೊಫೋರ್ಮ್, ಮೊರ್ಫಿನ್ ಮೊದಲಾದ ಬೋಧ ತಪ್ಪಿಸುವ ಔಷಧಿ ಸತ್ವಗಳು ದುಷ್ಪರಿಣಾಮವನ್ನುಂಟುಮಾಡಬಹುದು ಆದರೆ ಹಿಮಗಡ್ಡೆಯನ್ನುಪಯೋಗಿಸಿದರೆ ಬಾಧಕವಿಲ್ಲ, ಮಾತ್ರವಲ್ಲ ಗಾಯಗಳು ವಿಷ ಕ್ರಿಮಿಗಳಿಗೆ ತುತ್ತಾಗುವ ಸಂಭವವಿರುವುದಿಲ್ಲವಂತೆ

ಮಸಿ ಒರಸುವ ಯಂತ್ರ

ವೃತ್ತ ಪತ್ರಿಕೆಗಳಲ್ಲಿನ ಅಕ್ಷರಗಳನ್ನು ಸಂಪೂರ್ಣ ಅಳಿಸಿ ಅವನ್ನು ಪುನಃ ಒಮ್ಮೆ ಉಪಯೋಗಿಸಲಾಗುವಂತೆ ಮಾಡುವ ವಿಧಾನವೊಂದು ಕಂಡು ಹಿಡಿಯಲ್ಪಟ್ಟಿದೆ ವೃತ್ತ ಪತ್ರಿಕೆಯ ಕಾಗದವನ್ನು ಚೂರು ಮಾಡಿ ಪುನಃ ಕಾಗದವಾಗಿ ಮಾಡಲು, ಇಲ್ಲವೆ ಅದರಮೇಲಿನ ಅಕ್ಷರಗಳನ್ನು ಅಳಿಸಿ ಶುದ್ಧ ಮಾಡಲು, ಡ್ಯಾನೊಪ್ಲೆಯರ್ ಎಂಬ ಯಂತ್ರ ಈ ಸಂಬಂಧದಲ್ಲಿ ತಯಾರಿಸಲ್ಪಟ್ಟಿದೆ ... ಈ ಯಂತ್ರ ... ಅಮೇರಿಕದ 44 ಕಾಗದ ಕಂಪೆನಿಗಳಲ್ಲಿ ತನ್ನ ಯಂತ್ರವನ್ನಿಟ್ಟಿದ್ದಾನೆ

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019-A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0 1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಯೆ ರನ್ನಾಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡುಪಿ ಎಕ್ಸಪ್ರೆಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡುಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಯೆ ರನ್ನಾಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಜ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ.

ಜೊಯಿಂಟ್ ಮೆನೇಜರ್ಸ್,

ಮಂಗಳೂರು. 23-12-1947. ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B A L L B
General Manager.



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ, ಶಾಖಾ ಕಂಪೆನಿಯಲ್ಲಿ ದೊರೆಯುವುದು

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ., ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿರಿ ಇಲ್ಲವೆ ಬರೆಯಿರಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು.. ಸೂತಿಕಾ ರೋಗಗಳನ್ನು ಹಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ· ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತ...

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 42] ತಾರೀಖು 10—9—1948 [ಸಂಚಿಕೆ 36]

ಮಾನವ ಜೀವನದಲ್ಲಿ ಸಸ್ಯಾಹಾರದ ಹಿರಿಮೆ

ಶಕ್ತಿಯುಕ್ತವಾದುದು—ಆದರೆ ಮಿತಿ ಮಿಕ್ಕಬಾರದು

ಲಂಡನಿನಲ್ಲಿ ಗಾಂಧೀಜಿ ಕೊಟ್ಟ ಭಾಷಣ

1931ರಲ್ಲಿ ದುಂಡು ಮೇಜಿನ ಪರಿಷತ್ತಿಗೆ ಹೋದಾಗ ಮಹಾತ್ಮಾಗಾಂಧಿಯವರು ಲಂಡನಿನ ಸಸ್ಯಹಾರಿಗಳ ಸಂಘದಲ್ಲಿ ಕೊಟ್ಟ ಒಂದು ಭಾಷಣವು ಆ ಸಂಪಾದವರು ತಮ್ಮ 'ಸಸ್ಯಹಾರ ವಾರ್ತೆ' ಎಂಬ ಪತ್ರಿಕೆಯ 'ಗಾಂಧಿಸ್ಮಾರಕ' ವಿಶೇಷಾಂಕದಲ್ಲಿ ಪ್ರಕಟವಾಗಿದೆ ಅದರ ಸಾರಾಂಶ ಹೀಗಿದೆ

ನಾನು ಸಸ್ಯಹಾರವನ್ನನುಸರಿಸುವುದರ ಮರ್ಮವನ್ನು ಇಂದು ನಿಮಗೆ ತಿಳಿಸಬೇಕೆಂದಿದ್ದೇನೆ ಸುಮಾರು ನಲ್ವತ್ತು ವರ್ಷಗಳ ಹಿಂದೆ ನಾನಿಲ್ಲಿ ಕಲಿಯುತ್ತಿದ್ದಾಗ ಸಸ್ಯಹಾರಿಗಳೊಡನೆಯೇ ಹೆಚ್ಚಾಗಿ ಬೆರೆಯುತ್ತಿದ್ದೆ ಆಗ ನಾನು ಲಂಡನಿನಲ್ಲಿರುವ ಹೆಚ್ಚು ಕಡಿಮೆ ಎಲ್ಲಾ ಸಸ್ಯಹಾರ ಉಪಹಾರ ಗೃಹಗಳನ್ನೂ ಸಂದರ್ಶಿಸಿದ್ದೆ ಸಸ್ಯಹಾರ ಮತ್ತು ಸಸ್ಯಹಾರ ಉಪಹಾರಗೃಹಗಳ ಕುರಿತು ಸರ್ವಾಂಗೀಣವಾದ ಪರಿಶೀಲನೆಗಳನ್ನು ಮಾಡಬೇಕೆಂಬ ಉದ್ದೇಶವೇ ನನ್ನನ್ನು ಹಾಗೆ ಪ್ರೇರಿಪಿಸಿತು. ಸಸ್ಯಹಾರ ತತ್ವಕ್ಕೆ ಒಟ್ಟಾಗಿ ಅಂಟಿಕೊಂಡಿರಲು ಮನುಷ್ಯನಲ್ಲಿ ನೈತಿಕ ತಳಹದಿಯೊಂದಿರುವುದು ಅವಶ್ಯವೆಂದು ಆಗ ನನಗೆ ಖಚಿತವಾಯಿತು.

ಆಹಾರ ಮತ್ತು ಆರೋಗ್ಯ

ನನ್ನ ಮಟ್ಟಿಗೆ ಸತ್ಯಾನ್ವೇಷಣೆಯ ಮಾರ್ಗದಲ್ಲಿ ಅದೊಂದು ಸಂಶೋಧನೆಯೆ ಆಯಿತು ಮಾನವನ ಉದಾತ್ತೀಕರಣದ ಉತ್ಕ್ರಾಂತಿಯಲ್ಲಿ ಸ್ವಾರ್ಥವು ಔನತ್ಯಕ್ಕೊಯ್ಯಲು ಸಹಕಾರಿಯಾಗದ ಒಂದು ಅಭ್ಯಂತರವೆಂದು ಸ್ಪಷ್ಟವಾಯಿತು ನಮಗೆ ಅವಶ್ಯವಾಗಿ ಬೇಕಾದುದೆಂದರೆ ಒಂದು ಸತ್ಯ ಧೋರಣೆ ಮತ್ತು ಉದ್ದೇಶ ಆರೋಗ್ಯವಂತರಾಗಿರುವುದು ಕೇವಲ ಸಸ್ಯಹಾರಿಗಳದ್ದೇ ಆದ ಒಂದು ಲಕ್ಷಣವಲ್ಲವೆಂದೂ ನನಗೆ ತಿಳಿಯಿತು. ಆ ಆಹಾರ ಈ ಆಹಾರ ಎಂಬ ಶ್ರದ್ಧಾಬದ್ಧವಾದ ಯಾವ ನಿರ್ದಿಷ್ಟ ಧೋರಣೆಯಿಲ್ಲದವರೂ, ಸಸ್ಯೇತರಹಾರಿಗಳೂ ಸರ್ವಸಾಧಾರಣವಾಗಿ ಉತ್ತಮ ಆರೋಗ್ಯವುಳ್ಳವರೇ ಇರುವರು ಸಸ್ಯಹಾರಿಗಳು ತಮ್ಮ ಆಹಾರದ ಕುರಿತು ದೊಡ್ಡ ವಿಕಲ್ಪವನ್ನೇ ಮಾಡುತ್ತಿರುವುದರಿಂದಲೂ ಮತ್ತು ತಾವು ಸಸ್ಯಹಾರಿಗಳಾದ ಮಾತ್ರಕ್ಕೆ ಅದೆಷ್ಟು ಆಹಾರ ಪ್ರಮಾಣವನ್ನಾದರೂ ಸ್ವೀಕಾರ ಮಾಡಬಹುದೆಂಬ ತಪ್ಪು ಕಲ್ಪನೆಯುಳ್ಳವರಾಗುವುದೂ ನನ್ನ ಗಮನಕ್ಕೆ ಬಂದಿದೆ ಇಂಥ ಸಸ್ಯಹಾರಿಗಳೆಂದಿಗೂ ಆರೋಗ್ಯವಂತರಾಗುಳಿಯಲಾರರು

ಹದವಿರಲಿ

ಈ ದೃಷ್ಟಿಯಿಂದ ಈಕ್ಷಿಸುತ್ತಾ ಹೇಳುವುದಾದರೆ ಒಬ್ಬನು ಆದಷ್ಟು ಕಡಿಮೆ ಪ್ರಮಾಣವನ್ನೇ ಸೇವಿಸಬೇಕು ಮಾತ್ರವಲ್ಲ ಆಗಿಂದಾಗ್ಗೆ ಉಪವಾಸಗಳನ್ನು ಮಾಡುವುದೂ ಹಿತಕರ ಶರೀರಕ್ಕೆ ಬೇಕಾದಷ್ಟನ್ನೇ ತಿನ್ನುವವರೇ ಕಡಿಮೆ ನಾವು ನಾಲಗೆಯ ರುಚಿಗೆ ಬಲಿ ಬೀಳುತ್ತೇವೆ ಹೀಗೆ ನಮಗೊಂದು ವಸ್ತುವು ರುಚಿಕರವಾಗಿ ಕಂಡರೆ ನಾವು ಒಂದೆರಡು ತುತ್ತು ಹೆಚ್ಚಾಗಿಯೇ ತಿನ್ನುತ್ತೇವೆ ಇಂತಹ ಪರಿಸ್ಥಿತಿಯಲ್ಲಿ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳುವುದಾದರೂ ಹೇಗೆ? ಆದುದರಿಂದ ಆರೋಗ್ಯವಂತರಾಗಿರಲು ನಾವೇನನ್ನಾದರೂ ತಿಂದರೂ, ಆಹಾರ ಪ್ರಮಾಣವು ಕಡಿಮೆ ಇರಬೇಕಾದುದು ಅತ್ಯಗತ್ಯವೆಂದು ನಾನು ಸಂಶೋಧಿಸಿದೆ. ಹದ ಆಹಾರ ಸೇವನೆಯಿರಲಿ, ಒಂದು ವೇಳೆ ಹೆಚ್ಚು ತಿನ್ನುವುದಕ್ಕಿಂತ ಕಡಿಮೆ ಭುಂಜಿಸಿದರೆ ಬಾಧಕವಿಲ್ಲ. ನಾನು ಸ್ನೇಹಿತರನ್ನು ಔತಣಕ್ಕೆ ಆಮಂತ್ರಿಸಿದರೆ ಅವರು ಬೇಕಾದುದನ್ನು ಮತ್ತು ಬೇಕಾದಷ್ಟನ್ನು ಮಾತ್ರ ತಿನ್ನಬೇಕೆಂದೂ ಒತ್ತಾಯವಿಲ್ಲವೆಂದು ಸ್ಪಷ್ಟ ತಿಳಿಸುತ್ತಿದ್ದೆ.

ನೈತಿಕ ತಳಹದಿ

ಮಾಂಸಹಾರಿಗಳನ್ನು ತಮ್ಮ ಪಂಥಕ್ಕೆ ಪರಿವರ್ತಿಸಿಕೊಳ್ಳಲೆಳೆಸುವ ಸಸ್ಯಹಾರಿಗಳಲ್ಲಿ ತುಂಬಾ ತಾಳ್ಮೆಯಿರಬೇಕು ಸ್ವಲ್ಪ ಕ್ಷಮೆ, ದಯೆ ಕರುಣೆಗಳನ್ನು ಅವರು ಹೊಸದಾಗಿ ತಮ್ಮ ಸಾಲಿಗೆ ಸೇರಿದವರ ವಿಷಯದಲ್ಲಿ ತೋರಿಸಬೇಕಾದುದು ಅತ್ಯಾವಶ್ಯಕ ನಾವು ನಮ್ಮೊಡನೆ ಅಭಿಪ್ರಾಯಭೇದ ಪಡುವವರ ನೈತಿಕ ಬುದ್ಧಿಗೆ ವಿನಂತಿ ಮಾಡಿಕೊಳ್ಳಬೇಕು

ಸಸ್ಯಹಾರಿಯು ಅಸಾಮಾನ್ಯ ಮನೋಶಕ್ತಿಯುಳ್ಳವನಾಗಬೇಕು ಅವನು ಅನಾರೋಗ್ಯಕ್ಕೆ ತುತ್ತಾದಾಗ ಡಾಕ್ಟರರು ಅವನಿಗೆ ಮಾಂಸದ ಕಷಾಯ ಮಾಡಿ ಕುಡಿಯೆಂದು ಹೇಳಿದರೆ ಮತ್ತು ಡಾಕ್ಟರ ಹೇಳಿದಂತೆ ಅವನು ಮಾಡಿದರೆ ಅವನೊಬ್ಬ ಸಸ್ಯಹಾರಿಯೆಂದು ಕರೆಯಲು ಯೋಗ್ಯನಲ್ಲ ಸಸ್ಯಹಾರವು ಶರೀರವನ್ನು ಬೆಳೆಸುವ ಉದ್ದೇಶದ್ದಲ್ಲ ಅದು ಅಧ್ಯಾತ್ಮ ಶಕ್ತಿವರ್ಧಕವಾದ ಸಾಧನ ಆದುದರಿಂದಲೆ ಸಸ್ಯಹಾರಿಗಳಲ್ಲಿ ಆ ನೈತಿಕ ಶಕ್ತಿಯಿರಬೇಕೆನ್ನುವುದು

ಮನುಷ್ಯನು ಜನ್ಮತಃ ಮಾಂಸಹಾರಿಯಲ್ಲ ಭೂಮಿಯ ಮೇಲೆ ಬೆಳೆಯುವ ಹಣ್ಣುಹಂಪಲು, ಗಿಡ ಗೆಡ್ಡೆಗಳನ್ನು ತಿಂದು ಬದುಕಲು ಅವನು ಹುಟ್ಟಿದನು ಇಷ್ಟಾದರೂ ನಾವು ಒಂದಲ್ಲ ಒಂದು ತಪ್ಪನ್ನು ಮಾಡುತ್ತಲೇ ಇರುತ್ತೇವೆ ಸಾಧ್ಯವಾಗುತ್ತಿದ್ದರೆ ನಾನು ಹಾಲನ್ನು ಬಿಟ್ಟುಬಿಡುತ್ತಿದ್ದೆ ಆದರೆ ನನಗದು ಅಸಾಧ್ಯವಾಗಿದೆ ನಾನೀ ಪ್ರಯೋಗವನ್ನು ಅಸಂಖ್ಯಾತ ಸರ್ತಿ ಮಾಡಿ ನೋಡಿದ್ದೇನೆ. ಒಂದು ತೀಕ್ಷ್ಣ ವ್ಯಾಧಿಗೆ ತುತ್ತಾದ ನಾನು ಹಾಲನ್ನು ತಿನ್ನದೆ ನನ್ನ ಶಕ್ತಿಯನ್ನು ಪುನರ್ ಸಂಪಾದಿಸಲಾರದಾದೆ. ಅದೇ ನನ್ನ ಜೀವನದೊಂದು ಘೋರ ದುರಂತವಾಗಿದೆ.

ಅಭ್ಯಾಸಗಳೂ ಕಟ್ಟಳೆಗಳೂ

ಇಷ್ಟಾದರೂ ನನ್ನ ಸಸ್ಯಾಹಾರಕ್ಕೆ ತಳಹದಿ ಶಾರೀರಿಕವಾಗಿರದೆ ಅದು ನೈತಿಕವಾಗಿದೆ ಮಾಂಸದ ಕಷಾಯ ಸೇವಿಸದಿದ್ದರೆ ನಾನು ಸಾಯುವುದೇ ಖಂಡಿತವೆಂದು ವೈದ್ಯರು ನಿಯಮಿಸಿದರೆ ನಾನು ಮರಣವನ್ನೇ ಒಪ್ಪುತ್ತೇನೆ ಅದೇ ನನ್ನ ಸಸ್ಯಾಹಾರತ್ವದ ತಳಹದಿ ಎಷ್ಟೋ ಸಾವಿರ ಮಂದಿ ಮಾಂಸಹಾರಿಗಳು ಕೊನೆತನಕ ಹಾಗೇ ಉಳಿಯದವರಿದ್ದಾರೆ ಸಸ್ಯಹಾರಿಗಳೆನಿಸಿಕೊಳ್ಳುವ ನಮ್ಮೆಲ್ಲರಲ್ಲೂ ಅಂತಹ ಭದ್ರ ತಳಹದಿಯೊಂದಿರಲೇ ಬೇಕು ನಮ್ಮ ತತ್ವದಲ್ಲಿ ಒಂದಿಷ್ಟು ಬದಲಾವಣೆ ಮಾಡಬೇಕಾದರೆ ಅದಕ್ಕೆ ತಕ್ಕುದಾದ ಪ್ರಬಲ ಕಾರಣವೂ ಇರಬೇಕು. ಕೆಲವೊಂದು ಸಲ ನಮ್ಮ ಪರಿವರ್ತನದಿಂದ ನಮ್ಮ ಸುತ್ತಮುತ್ತಲಿದ್ದವರಿಗೆ ಆಘಾತವಾಗುವುದೆಂಬ ಹೆದರಿಕೆಯೂ ಇರುತ್ತದೆ ಆದರೆ ಜಗತ್ತಿನ ಅಂಜಿಕೆಗಾಗಿ ನಾವು ನೈತಿಕ ತತ್ವಗಳನ್ನು ಬಲಿ ಕೊಡಬಾರದು

ಆದುದರಿಂದ ಸಸ್ಯಹಾರಿಗಳಾಗಿದ್ದು ಸಸ್ಯಹಾರಿಗಳ ಸಮಾಜವೊಂದನ್ನು ಕಟ್ಟಲೆಳಿಸುವವರೆಲ್ಲರ ತಳಹದಿಯೂ ನೈತಿಕವಾಗಿರಬೇಕು. ಜಗತ್ತಿನ ಹಲವು ಕಡೆಗಳಲ್ಲಿ ಸಂಚರಿಸಿದ್ದ ನನ್ನ ಅನುಭವದಿಂದ ನನಗೆ ಸಸ್ಯಾಹಾರಿಗಳು ಮಾಂಸಹಾರಿಗಳಿಗಿಂತ ಹೆಚ್ಚು ಆರೋಗ್ಯ ಸುಖವನ್ನನುಭವಿಸುತ್ತಿರುವರೆಂದು ಅನುಭವಕ್ಕೆ ಬಂದಿದೆ ಅಭ್ಯಾಸ ಇಲ್ಲವೆ ಅವಶ್ಯಕತೆಯಿಂದ ಬಹು ಸಂಖ್ಯಾಕರು ಸಸ್ಯಾಹಾರಿಗಳಾಗಿರುವ ದೇಶಕ್ಕೇ ನಾನೂ ಸೇರಿದವನಿರುತ್ತೇನೆ ಇಷ್ಟಾದರೂ ನನ್ನಲ್ಲಿ ಹೆಚ್ಚಿನ ತಾಳ್ಮೆ, ಸ್ಥೈರ್ಯ ಮತ್ತು ವ್ಯಾಧಿಯಿಲ್ಲದಿರುವಿಕೆಗಳಿವೆಯೆಂದು ನಾನು ಪ್ರತಿಪಾದಿಸಲಾರೆ. ಕಾರಣ ಈ ವಿಷಯಗಳು ವ್ಯಯುಕ್ತಿಕವಾದವುಗಳು. ನಾವು ನೈಸರ್ಗಿಕವಾದ ತತ್ವಗಳಿಗನೆಷ್ಟು ಅಂಟಿಕೊಂಡಿರುತ್ತೇವೊ ಅಷ್ಟು ಆರೋಗ್ಯವಂತರು ನಾವಾಗಿರಬಹುದು.

ಮೈಸೂರೂ ಹೊರಗುಳಿದರೂ ಒಕ್ಕೂಟ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಾಗಬೇಕು

(ಪ್ರೊ. ಟಿ. ಎಸ್. ಹಾಲಪ್ಪ, ಮೈಸೂರು ವಿಶ್ವವಿದ್ಯಾಲಯ.)

ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿರುವ ಶ್ರೀ ಟಿ. ಎಸ್. ಹಾಲಪ್ಪನವರು ಭಾಷಾವಾರು ಪ್ರಾಂತರಚನಾ ಸಮಿತಿಯ ಪ್ರಶ್ನಾವಳಿಯಲ್ಲಿ ಸಂಸ್ಥಾನಗಳಿಗೆ ಸಂಬಂಧಿಸಿದ ೧೫ನೆಯ ಪ್ರಶ್ನೆಗೆ ಕೊಟ್ಟ ಉತ್ತರವು ಗಮನಾರ್ಹವಾಗಿದೆ.

ಬ್ರಿಟಿಷ್ ಪ್ರಭುತ್ವದಿಂದ ರಚಿಸಲ್ಪಟ್ಟ ಕೃತಕ ರಾಜಕೀಯ ಗಡಿಗಳಿಂದಾಗಿ ತಮ್ಮ ಭಾಷಾ ಸಹೋದರರಿಂದ ಪ್ರತ್ಯೇಕಿಸಲ್ಪಟ್ಟ ಎಲ್ಲಾ ಸಂಸ್ಥಾನಿ ಸಹೋದರರಿಗೆ ಈ ಪ್ರಶ್ನೆಯು ಅತಿ ಸಮಂಜಸ ಹಾಗು ವಿಚಾರಾರ್ಹವಾದುದಾಗಿದೆ. ಮೈಸೂರಿನವನಾದ ನಾನು ಮೈಸೂರು ಹಾಗು ಒಕ್ಕೂಟ ಕರ್ನಾಟಕದ ಭಾಗಗಳ ಸಂಯೋಜನೆಯ ವಿಷಯವಾಗಿ ಈ ರೀತಿಯಾಗಿ ನನ್ನ ಅಭಿಪ್ರಾಯ ಕೊಡಬಯಸುತ್ತೇನೆ.

ಚಾರಿತ್ರಿಕವಾಗಿ ಹೇಳುವುದಿದ್ದರೆ, ೧೮೮೧ನೆಯ ಇಸವಿಯ ವಿಭಜನೆಯಲ್ಲದಿರುತ್ತಿದ್ದರೆ ಇಂದು ಮೈಸೂರು ಸಂಸ್ಥಾನವು ಮುಂಬಯಿ ಅಥವಾ ಮದ್ರಾಸು ಪ್ರಾಂತದ ಒಂದು ಭಾಗವಾಗಿರುತ್ತಿತ್ತು. ಈ ವಿಭಜನೆಯಾಗಿದ್ದರೂ ಕೂಡ ಇಂದು ಎಲ್ಲ ಕನ್ನಡಿಗರಲ್ಲಿರುವ ಸಹೋದರ ಪ್ರೇಮವು ಅಳಿದು ಹೋಗಿಲ್ಲ. ಒಕ್ಕೂಟ ಕರ್ನಾಟಕ ಮತ್ತು ಮೈಸೂರಿನ ಕನ್ನಡಿಗರು ಒಂದೇ ಆಡಳಿತೆಯೊಳಗೆ ಬರುವ ತಮ್ಮ ಇಚ್ಛೆಯನ್ನು ಅನೇಕ ಸಲ ಪ್ರಚುರಪಡಿಸಿರುವರು. ಈಗ ಮೈಸೂರಿನಲ್ಲಿ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟಿದ್ದರಿಂದ ಒಂದು ದೊಡ್ಡ ತೊಂದರೆಯು ನಿವಾರಿಸಲ್ಪಟ್ಟಿದ್ದು, ಮೈಸೂರು ಸಹಿತವಾದ ಅಖಂಡ ಕರ್ನಾಟಕ ಪ್ರಾಂತರಚನೆಯು ಈ ಮೊದಲಿಗಿಂತ ಸುಲಭವಾದುದೂ, ಸಾಧ್ಯವಾದುದೂ ಆಗಿದೆ. ಎಲ್ಲ ಕನ್ನಡಿಗರು ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣಕ್ಕಾಗಿ ಪ್ರಯತ್ನಿಸಬೇಕು. ಒಕ್ಕೂಟ ಕರ್ನಾಟಕ ಮತ್ತು ಮೈಸೂರನ್ನು ಸಂಯೋಜಿಸುವ ಬಗ್ಗೆ ಎರಡು ದಾರಿಗಳಿವೆ. ಹೊಸ ಕರ್ನಾಟಕ ಪ್ರಾಂತವು ಏಕೀ ರೀತಿ, (Unitary Type) ಅಥವಾ ಅಂತರಿಕ ಸ್ವಾತಂತ್ರ್ಯ ರೀತಿ (Federal Type) ಇವುಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಬಹುದು.

೧ ಒಕ್ಕೂಟ ಕರ್ನಾಟಕದ ಜನತೆಯು ಮೈಸೂರಿನ ರಾಜರ ಘಟನಾತ್ಮಕ ಅರಸೊತ್ತಿಗೆಯನ್ನು ಒಪ್ಪಿಕೊಂಡರೆ, ಮತ್ತು ಹೆಚ್ಚಾಗಿ ಅಭಿವೃದ್ಧಿ ಹೊಂದಿದ ಮೈಸೂರು ಕಡಿಮೆ ಅಭಿವೃದ್ಧಿ ಹೊಂದಿದ ತನ್ನ ಸಹೋದರರೊಡನೆ ಸೇರಬಯಸಿದರೆ ಒಂದೇ ಭಾಷೆಯ ಒಂದೇ ರೀತಿಯ ಆಡಳಿತೆಯ ಘಟಕವನ್ನು ರಚಿಸಬಹುದು.

೨ ಮೇಲಿನ ಯೋಜನೆಯು ಸಾಧ್ಯವಾಗದಿದ್ದಲ್ಲಿ, ಕರ್ನಾಟಕ ಪ್ರಾಂತದೊಳಗೆ ಮೈಸೂರನ್ನು ಅಂತರಿಕ ಸ್ವಾತಂತ್ರ್ಯವುಳ್ಳ ಉಪಪ್ರಾಂತವನ್ನಾಗಿ ಮಾಡಬಹುದು. ಆದರೆ ಹೀಗೆ ವ್ಯವಸ್ಥೆ ಮಾಡುವಾಗ ಅದನ್ನು ಬೇಕಾದಾಗ ಬದಲಾಯಿಸುವಂತಿರಬೇಕು. ಹೀಗೆ ಮಾಡಿದರೆ, ಕರ್ನಾಟಕವು ಹಿಂದಿ ಒಕ್ಕೂಟದ ಪ್ರಧಾನ ಅಂತರಿಕ ಸ್ವಾತಂತ್ರ್ಯ ಘಟಕವಾಗಿದ್ದು, ಮೈಸೂರು ಸಹಾಯಕ ಉಪಪ್ರಾಂತವಾಗಿದ್ದಂತಾಗುವುದು. ಮೈಸೂರಿನ ಹೊರತಾದರೂ ಒಕ್ಕೂಟ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ರಚಿಸುವುದು ಸಾಧ್ಯವಿದೆ ಮತ್ತು ಅದನ್ನು ಪ್ರತಿಭಟಿಸುವುದು ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಸಂಸ್ಥಾನಗಳನ್ನು ವಿಲೀನೀಕರಿಸಿ ಅವುಗಳನ್ನು ಪ್ರಧಾನ ಅಂತರಿಕ ಸ್ವಾತಂತ್ರ್ಯ ಘಟಕಗಳನ್ನಾಗಿ ರಚಿಸುವುದೇ ಯೋಗ್ಯವಾಗಿದೆ. ಈಗಿನ ರಾಜಕೀಯ ಪರಿಸ್ಥಿತಿಯಿಂದಾಗಿ ಇದು ಅಸಾಧ್ಯವಾದಲ್ಲಿ ಎರಡನೆಯದಾದ ಪ್ರಧಾನ ಅಂತರಿಕ ಸ್ವಾತಂತ್ರ್ಯ ಘಟಕದಲ್ಲಿ ಉಪಪ್ರಾಂತವೊಂದನ್ನು ರಚಿಸುವ ಯೋಜನೆಯನ್ನು ಸ್ವೀಕರಿಸಬಹುದು.

(ಅ. ಕ. ಏ. ಸಂಘ)

ಅತ್ಯದ್ಭುತ ಪರಿಹಾರ

ಮೋವಾರನು ಆಫ್ರಿಕದ ನಿವಾಸಿ. ಅವನು ತನ್ನ ಗುಡಿಸಿಲಿನಲ್ಲಿ ಆನಂದದಿಂದ ವಾಸಿಸುತ್ತಿದ್ದಾನೆ. ಅವನು ಸದಾ ಆರೋಗ್ಯವಂತನಿದ್ದು ಯಾವ ನ್ಯೂನ್ಯತೆಗಳಿಂದಲೂ ಅವನು ನರಳುವುದಿಲ್ಲ. ಅಲ್ಲದೆ ಅವನು ತುಂಬಾ ಕಾಯಕಷ್ಟ ಸಮರ್ಥ. ಇಕ್ವಿಟೋರಿಯಲ್ ಆಫ್ರಿಕಾ ಪಾವರ್ ಆಯಿಲ್ ಕಂಪೆನಿಯವರ ತಾಳೆ ಎಣ್ಣೆ ಕಾರ್ಖಾನೆಯಲ್ಲಿ ಅವನು ಸೂರ್ಯೋದಯದಿಂದ ಸೂರ್ಯಾಸ್ತದ ತನಕ ದುಡಿಯುತ್ತಾನೆ. ಮಾಲಕರು ಅವನ ಕೆಲಸಕ್ಕೆ ಮೆಚ್ಚಿ ಅವನನ್ನು ಕೆಲಸಗಾರರ ಮುಖಂಡನನ್ನಾಗಿ ನೇಮಿಸಿದ್ದಾರೆ.

ಮೋವಾರನು ತುಂಬಾ [illegible] ಯುಳ್ಳವನು. ಸಿಕ್ಕಾಬಟ್ಟೆ ತನ್ನ ಕಷ್ಟ ದುಡಿತದ ಹಣವನ್ನವನು ವ್ಯಯಿಸುವುದಿಲ್ಲ. ಅವನು ಜಿಪುಣನೆಂದರೂ ಸರಿಯೆ. [illegible] ಆಟದಲ್ಲಿ ಅವನು ತನ್ನ [illegible] ದಿಗೂ [illegible] ಯೋಜಕವಾದ ವಸ್ತುಗಳನ್ನವನು [illegible] ಕೊಳ್ಳುವುದಿಲ್ಲ. [illegible] ವಶ್ಯಕವಾದುದನ್ನು ಅವನು ತೆಗೆದುಕೊಳ್ಳುತ್ತಾನೆ. ಮಿಕ್ಕುಳಿದ ಹಣವನ್ನು [illegible] ಕಿನಲ್ಲಿಡುತ್ತಾನೆ. ಹೀಗೆ [illegible] ತನ್ನ ಕುಟುಂಬದೊಡನೆ ಸುಖ [illegible] ತ್ತಾನೆ.

ಆದರೆ ಒಂದು ದಿನ [illegible] ಅಸೌಖ್ಯ [illegible] ಗಿದ್ದು ಚಳಿಯು ನಡುಕಗಳು [illegible] ಅಂದವನು ಕೆಲಸಕ್ಕೆ ಹೋಗದೆ ತನ್ನ [illegible] ಯ ಮೇಲೆ [illegible] ದುದು ಮಲೇರಿಯಾ ಜ್ವರವೆಂದು [illegible] ಡೊಡನೆ ಅವನು ದಿನಕ್ಕೆ 20 ಕಾಳುಗಳಂತೆ 7 ದಿನಗಳ ಕ್ವಿನೀನನ್ನು ತೆಗೆದುಕೊಳ್ಳುತ್ತಾನೆ. ಆ ವೇಳೆ ಅತ್ಯಾಶ್ಚರ್ಯಕರವಾದ ಸಂಗತಿ—ಏಳನೆಯ ದಿನಾಂತ್ಯದಂದು ಮೋವಾರನು ಸಂಪೂರ್ಣ ಗುಣಹೊಂದಿದ್ದಾನೆ. ಸಂತೋಷದಿಂದ ಅವನು ಕೆಲಸಕ್ಕೆ ಹೋಗುತ್ತಾನೆ.

ಕ್ವಿನೀನು ನಿಜವಾಗಿಯೂ ಒಂದು ಅತ್ಯದ್ಭುತವಾದ ಪರಿಹಾರ. ಮಲೇರಿಯಾದಿಂದ ಹಾಸಿಗೆ ಹಿಡಿದ ಮಿಲಿಯಾಂತರ ಜನರನ್ನದು ಈಗಾಗಲೇ ಗುಣಪಡಿಸಿದೆ.

ಹಿಂದಿನ ಲೀಗ್ ಆಫ್ ನೇಶನ್ಸನ ಮಲೇರಿಯಾ ತಜ್ಞರ ಸಮಿತಿಯು ಹೀಗೆ ಶಿಫಾರಸು ಮಾಡಿದೆ. ಜ್ವರ ಭಾಧೆಯ ಕಾಲದಲ್ಲಿ ದಿನಂಪ್ರತಿ 6 ಕಾಳು ಕ್ವಿನೀನನ್ನು ಸೇವಿಸಬೇಕು. ಜ್ವರ ಬಂದರೆ 15–20 ಕಾಳುಗಳಷ್ಟನ್ನು 5–7 ದಿನಗಳ ತನಕ ದಿನಂಪ್ರತಿ ಸೇವಿಸಬೇಕು. ನಂತರ ಸೇವನೆಯ ಅವಶ್ಯಕತೆಯಿಲ್ಲ. ಒಂದು ವೇಳೆ ಜ್ವರ ಪುನಃ ಉಂಟಾದರೆ ಮುಂಚಿನಂತೆ ಕ್ವಿನೀನನ್ನು ತೆಗೆದುಕೊಳ್ಳುವುದು.

ಕರ್ನಾಟಕದಲ್ಲಿ ಕಾರವಾರದ ಸ್ಥಾನ

ಮಹಾರಾಷ್ಟ್ರಕ್ಕೆ ಸೇರುವದರಿಂದ

೧. ಕಾರವಾರಕ್ಕಿರುವ ಜಿಲ್ಲೆಯ ಮುಖ್ಯ ಸ್ಥಳದ ಮಹತ್ವವು ಮಾಯವಾಗಿ, ಮುಂದೆ ನಿರ್ಮಾಣವಾಗಲಿರುವ, ಹೊಸ ಜಿಲ್ಲೆಯ ಎಷ್ಟೋ ಅಂತರದ ಮೇಲಿರುವ ಪಟ್ಟಣಕ್ಕೆ ಎಡೆಮಾಡುವ ಪ್ರಸಂಗವು ಕಾರವಾರದ ಜನರಿಗೆ ಒದಗದೆ ಇರಲಾರದು.

೨ ಈ ದಿನ ಮುಂಬಯಿ ಪ್ರಾಂತಕ್ಕೆ ತುದಿ ಮೂಲೆಯಾದ ಭಟಕಳಕ್ಕಿಂತ ಕಾರವಾರದ ಸ್ಥಿತಿಯು ನಿಕೃಷ್ಟವಾಗುವದು.

೩ ಕಾರವಾರದ ಬದಲು ಭಟಕಳವನ್ನು ಕರ್ನಾಟಕ ಪ್ರಾಂತದ ಮುಖ್ಯ ಬಂದರವನ್ನಾಗಿ ಮಾಡಬೇಕಾಗುವುದು. ಮಾರ್ಮುಗೋವಾ ಬಂದರವು ಮೊದಲೇ ಇದ್ದುದರಿಂದ, ಕಾರವಾರವು ಬಂದರವಾಗದೆ ಹಾಗೇ ಉಳಿಯುವುದು.

೪ ಮುಂಬಯಿ ವ್ಯಾಪಾರಿಗಳ ಹಿತಸಂರಕ್ಷಣೆಯ ಉದ್ದೇಶದಿಂದ ಇಷ್ಟು ದಿನ ಉಪೇಕ್ಷಿಸಲ್ಪಟ್ಟಂತೆ ಮಹಾರಾಷ್ಟ್ರ ಸರಕಾರದಿಂದಾದರೂ ಉಪೇಕ್ಷಿಸಲ್ಪಡುವದೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಕಾರವಾರ [illegible] ಕರ್ನಾಟಕಕ್ಕೆ ಹೆಚ್ಚು [illegible]

೫ [illegible] ದಕ್ಷಿಣ [illegible] ಮಹಾರಾಷ್ಟ್ರಕ್ಕೆ [illegible] ಬೇಕಾಗುವದು.

[illegible] ಮಹತ್ವ [illegible] ಕಾಗುತ್ತದೆ. ಮಹಾರಾಷ್ಟ್ರಕ್ಕೆ ಸೇರುವದರಿಂದ [illegible] ದೊರೆಯದೆ [illegible] ಕಾರವಾರವನ್ನು ಪ್ರಯತ್ನದಿಂದ ಕರ್ನಾಟಕಕ್ಕೆ ಸೇರಿಸುವದ ಸರ್ವವಿಧದಿಂದ [illegible] ಗೆ [illegible]

೭ ಈ ಜಿಲ್ಲೆಯ [illegible] ರಸ್ತೆಗಳನ್ನು ಕೂಡ ಒದಗಿಸಿಕೊಡದೆ ಜಿಲ್ಲೆಯ [illegible] ಅಹಮ್ಮದನಗರ, ಪುಣೆ [illegible] ನಗರಗಳ ಜನರ ಸುಖಸೌಕರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು. ಕಾರವಾರವು ಮಹಾರಾಷ್ಟ್ರಕ್ಕೆ ಸೇರುವದರಿಂದ [illegible] ಸ್ಥಿತಿಯಾಗುವದರಲ್ಲಿ ಸಂದೇಹವಿಲ್ಲ.

೮ ಸುಪ್ರಸಿದ್ಧ ಜೋಗ ಜಲಪಾತದ ಮತ್ತು ಕಾಳೀನದಿಯ ವಿದ್ಯುತ್ ಶಕ್ತಿಯ ಉಪಯೋಗವು ಕರ್ನಾಟಕಕ್ಕೆ ಸಾಕಷ್ಟು ದೊರೆಯುವಂತಿದೆ. ಕಾರವಾರವು ಮಹಾರಾಷ್ಟ್ರಕ್ಕೆ ಸೇರಿದರೆ ಕಾಳೀನದಿಯ ವಿದ್ಯುತ್ ಶಕ್ತಿಯ ಯೋಜನೆಯು ಕಾರ್ಯರೂಪಕ್ಕೆ ಬರುವದು ಅತಿ ಪ್ರಯಾಸದ್ದಾಗುವದು. ಇಲ್ಲವೆ ಕಾರ್ಯರೂಪಕ್ಕೆ ಬರದೇ ಹೋಗಬಹುದು.

(ಕ. ಏ. ಸಮಿತಿ)

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: ೧೯೦೬)

(ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು)

ಸಂಗ್ರಹ (ಕಲೆಕ್ಷನ್)—ಸೇವೆ

ನಮ್ಮ ಕಲೆಕ್ಷನ್ (ವಸೂಲಿ ಅಥವಾ ಸಂಗ್ರಹ) ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆ ಕ್ಷೇತ್ರದಲ್ಲಿ—ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷ ವಾಟಿಕೆಗಳಿರುವಲ್ಲಿ—ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಒಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ [illegible]ವನ್ನು ರೂಪಿಸಿ ತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳ ಬರುತ್ತದೆ. ಅದರಿಂದ ನಿಮಗೆ ಸಮಯವೂ ಹಣವೂ ಉಳಿವುದು-ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

CANARA BANK, LIMITED.

ESTD: 1906

ಭಾರತದ ಪ್ರಖ್ಯಾತ ಮಸ್ಲಿನ್ ಬಟ್ಟೆ

ಪೌರ್ವಾತ್ಯ ಕಲಾಕೌಶಲ್ಯದ ಅಮೋಘ ಮಾದರಿ

ಮಸ್ಲಿನ್ ಬಟ್ಟೆ ಜಗತ್ತಿನ ಅನೇಕ ಖಂಡಗಳ ಕೌತುಕಕ್ಕೆ ಪಾತ್ರವಾಗಿದ್ದು ಅದನ್ನು ತಯಾರಿಸುವ ನಿಪುಣ ಕೆಲಸಗಾರರು ಅದ್ಭುತ ಮಾನವ ವ್ಯಕ್ತಿಗಳೆಂದು ತಿಳಿಯಲ್ಪಡುತ್ತಿತ್ತು. ಸಂಪತ್ಸೌಂದರ್ಯಗಳಿಂದ ಕೂಡಿದ ಈ ಶತಮಾನದ ಅತ್ಯಾಧುನಿಕ ವೈಜ್ಞಾನಿಕ ಮತ್ತು ಯಾಂತ್ರಿಕ ನೈಪುಣ್ಯವನ್ನು ಮೀರಿಸಿದ ಬಟ್ಟೆಯೊಂದನ್ನು ತಯಾರಿಸಿದ ಹೆಮ್ಮೆ ಅವರ ಪಾಲಿನದಾಗಿತ್ತು. ಇಂದಿಗೂ ಪಾಶ್ಚಾತ್ಯರು ಮಸ್ಲಿನ್ ಬಟ್ಟೆಯಷ್ಟು ನಾಜೂಕಾದ ವಸ್ತ್ರವನ್ನು ಸಿದ್ಧಗೊಳಿಸಲು ಅಸಮರ್ಥರಾಗಿರುವರು. 'ಸಂಜೆ ಇಬ್ಬನಿ' ಇಲ್ಲವೆ 'ಹರಿಯುವ ನೀರು' ಎಂದು ಶ್ಲಾಘನೀಯವಾಗಿ ಕೊಂಡಾಡಲ್ಪಟ್ಟ ಈ ಬಟ್ಟೆಯೊಳಗಿನ ದೋಷಗಳನ್ನು ಸಾಮಾನ್ಯ ಕಣ್ಣಿನಿಂದ ಕಂಡುಹಿಡಿಯಲು ಸಾಧ್ಯವಿಲ್ಲ. ಅದಕ್ಕಾಗಿ ಒಂದು ಸೂಕ್ಷ್ಮದರ್ಶಕ ಕನ್ನಡಿಯನ್ನೇ ಉಪಯೋಗಿಸಬೇಕು. ಮಾನವ ಇತಿಮಿತಿಗಳಿಗೆ ಮಿಕ್ಕಿದ ಸ್ಪರ್ಶಶಕ್ತಿಯುಳ್ಳ ಆ ಕೆಲಸಗಾರರು ತಮ್ಮ ಕೈಬೆರಳುಗಳಿಂದಲೇ ಅದನ್ನು ರಚಿಸುತ್ತಿದ್ದರು.

ಹತ್ತಿಯು ಭಾರತದೇಶದ್ದೇ ಆದ ಒಂದು ಗಿಡ. 30 ಸಾವಿರ ವರ್ಷಗಳ ಹಿಂದಿನದೆಂದು ಹೇಳಲ್ಪಟ್ಟ ಮೊಹೆಂಜೊದಾರೊದಲ್ಲಿ ಸಿಕ್ಕಿದ ಬಟ್ಟೆ ವಸ್ತ್ರ ಅವಶೇಷಗಳನ್ನು ಸೂಕ್ಷ್ಮ ಪರೀಕ್ಷೆಗೊಳಪಡಿಸಿದಾಗ ಅವು ಹತ್ತಿಯಿಂದ ನೆಯ್ದವೆಂದು ತಿಳಿದುಬಂದಿದೆ. ಈಜಿಪ್ತಿನ ಪುರಾತನ ಶವಗಳನ್ನು ಸುತ್ತಿಟ್ಟ ಬಟ್ಟೆಗಳೂ ಹತ್ತಿಯವೆಂದು ಹೇಳಲ್ಪಟ್ಟಿದ್ದುವು. ಆದರೆ ಈಗ ಅದು ತಪ್ಪೆಂದು ಸಿದ್ಧವಾಗಿದೆ. ಇದರಿಂದ ಹತ್ತಿ ಬಟ್ಟೆಗಳು ಕೇವಲ ಭಾರತ ದೇಶದಲ್ಲಿ ಮಾತ್ರ ಮೊಟ್ಟಮೊದಲು ಸಿದ್ಧಗೊಳಿಸಲ್ಪಟ್ಟವೆಂದು ಹೇಳಬಹುದು.

ಪ್ರಾಚೀನ ಕಾಲದಲ್ಲಿ

"ಭಾರತದಲ್ಲಿನ ಕಾಡುಮರಗಳು ಉಣ್ಣೆಯನ್ನೇ ತಮ್ಮ ಫಲವಾಗಿ ಬಿಡುತ್ತವೆ. ಈ ಉಣ್ಣೆ ಸೌಂದರ್ಯದಲ್ಲಿ ಮತ್ತು ಮೃದುತ್ವದಲ್ಲಿ ಕುರಿಯ ಉಣ್ಣೆಯನ್ನೂ ಮೀರಿಸುವವು" ಹೀಗೆಂದು ಕ್ರಿ. ಪೂ. 450ರಲ್ಲಿದ್ದ 'ಇತಿಹಾಸಜನಕ'ನೆಂದು ಪ್ರಖ್ಯಾತನಾದ ಗ್ರೀಕ್ ತತ್ವಜ್ಞಾನಿಯಾದ ಹೆರೊಡೋಟಸನು ಬರೆದಿದ್ದಾನೆ. ಬೆಬಿಲೋನ್, ಈಜಿಪ್ತ ದೇಶದ ಜನರು ನಾರು, ಸಣಬುಗಳಿಂದ ಬಟ್ಟೆಗಳನ್ನು ಮಾಡುತ್ತಿದ್ದರೆಂದೂ ಅವನು ಉಲ್ಲೇಖಿಸಿದ್ದಾನೆ. ಇದರಿಂದಲೂ ಹತ್ತಿಯು ಭಾರತದಲ್ಲಿ ಮಾತ್ರ ಉತ್ಪತ್ತಿಸಲ್ಪಡುತ್ತಿತ್ತೆಂಬ ಸಂಗತಿಯು ಸ್ಪಷ್ಟವಾಗುತ್ತದೆ.

ಪ್ರಾಚೀನ ಭಾರತೀಯ ಕಾವ್ಯಗಳಲ್ಲಿ ಹತ್ತಿಯ ಕುರಿತಾದ ನಿರೂಪಗಳು ಸಿಕ್ಕುತ್ತವೆ. ಸುಶ್ರುತನು ತನ್ನ ಕೃತಿಗಳಲ್ಲಿ ಹತ್ತಿಯ ಹಲವು ಉಪಯೋಗಗಳನ್ನು ಬಣ್ಣಿಸಿರುವನು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹತ್ತಿ ಬಟ್ಟೆಯನ್ನು ತಯಾರಿಸುವ ಸವಿಸ್ತಾರ ಟಿಪ್ಪಣಿ ಕೊಡಲ್ಪಟ್ಟಿದೆ. ಸ್ಟ್ರಾಬೊ ಎಂಬ ಐರೋಪ್ಯ ಇತಿಹಾಸಗಾರನು ಭಾರತದಲ್ಲಿ ಹತ್ತಿ ಬಟ್ಟೆ ತಯಾರಾಗುತ್ತಿದೆ ಮಾತ್ರವಲ್ಲ, ಅಲ್ಲಿ ಅವುಗಳಿಗೆ ತರತರದ ಬಣ್ಣಗಳೂ ಕೊಡಲ್ಪಡುತ್ತವೆಯೆಂದೂ, ಚಿತ್ರವಿಚಿತ್ರವಾದ ಹೂಬಳ್ಳಿಗಳು ಬಟ್ಟೆಯ ಮೇಲೆ ಅಚ್ಚು ಹಾಕಲ್ಪಡುತ್ತಿವೆಯೆಂದೂ ಬರೆದಿದ್ದಾನೆ. ಅರಬಿ ವ್ಯಾಪಾರಿಗಳು ಭಾರತೀಯ ಬಟ್ಟೆಗಳನ್ನು ಕೆಂಪು ಸಮುದ್ರದ ಬಂದರಾದ ಅಡಾಲಿಗೆ ಒಯ್ದು ಅಲ್ಲಿಂದ ಪಾಶ್ಚಾತ್ಯ ದೇಶಗಳಿಗೆ ಕಳುಹಿಸುತ್ತಿದ್ದರು. ನರ್ಮದಾ ನದಿಯ ದಂಡೆಯ ಮೇಲಿನ ಬಾಹಿಗಾಜೆ ಮತ್ತು ಸಿಂಧೂ ನದಿ ಮೇಲಿನ ಪಾಟಾಲಾ ಬಂದರುಗಳಿಂದ ಮಸ್ಲಿನ್ ಬಟ್ಟೆಗಳು ಪರದೇಶಕ್ಕೆ ಒಯ್ಯಲ್ಪಡುತ್ತಿದ್ದವು.

ವಿದೇಶಿಯರ ಮೆಚ್ಚಿಗೆ

ಹದಿಮೂರನೇ ಶತಮಾನದ ಸಾಹಸಿ ಸಂಚಾರಕನಾದ ಇಟೆಲಿಯ ಮಾರ್ಕೊ ಪೊಲೋನು "ಸುಂದರವೂ ನಾಜೂಕಾದುದೂ ಆದ ಭಾರತೀಯ ಮಸ್ಲೀನುಗಳಂತಹ ಬಟ್ಟೆಗಳು ಜಗತ್ತಿನಲ್ಲೆಲ್ಲೂ ಸಿಗಲಾರವು" ಎಂದು ಬಣ್ಣಿಸಿದ್ದಾನೆ. ಬಂಗಾಲದ ಡಾಕಾ ಬಳಿ ಮಸ್ಲಿನ್ ತಯಾರಿಯ ದೊಡ್ಡ ಕೇಂದ್ರವಿದ್ದಿತು. "ಇಲ್ಲಿ ತಯಾರಾಗುತ್ತಿದ್ದ ಕೆಲವು ಬಟ್ಟೆಗಳು ಸ್ಪರ್ಶಕ್ಕೆ ಅರಿವಾಗುತ್ತಿರಲಿಲ್ಲ. ಇವುಗಳ ನೂಲನ್ನು ತೆಗೆಯುವಾಗಲೂ ಅವು ಕಣ್ಣಿಗೇ ಕಾಣುತ್ತಿರಲಿಲ್ಲ. ಕೆಲವು ಮಸ್ಲೀನಗಳು [illegible] ಹಾಕಿಕೊಂಡ ಮೇಲೆ ಶರೀರವು ನಗ್ನವಿದ್ದಂತೆ ಕಾಣುತ್ತಿತ್ತು." [illegible] ಶತಮಾನಗಳ ಇತಿಹಾಸ [illegible] 1851ರಲ್ಲಿ ಲಂಡನಿನಲ್ಲಿ ಏರ್ಪಡಿಸಲಾದ ವಿಶ್ವ ವಸ್ತು ಪ್ರದರ್ಶನದಲ್ಲಿ ಭಾರತೀಯ ಮಸ್ಲಿನ್ [illegible] ಇತಿಹಾಸದಲ್ಲಿ [illegible] "[illegible] ಮಸ್ಲಿನಗಳು ಜೇಡನ ಬಲೆಯ [illegible] ಒಂದು ಇಡೀ ಥಾನ [illegible] ಗುರದಿಂದ [illegible] ಸೂಕ್ಷ್ಮವಾಗಿವೆ. ಭಾರತೀಯ [illegible] ಕೌಶಲ್ಯವು ವೈಜ್ಞಾನಿಕ ಯಂತ್ರಗಳನ್ನು ಮೀರಿಸಿದೆ" ಹೀಗೆಂದು ಮೋರ್ನಿಂಗ್ ಪೋಸ್ಟ್ [illegible] ಆಗಿನ ಪತ್ರಿಕೆ [illegible]. "ಒಂದು ಗಜ ಅಗಲವೂ ಹತ್ತು ಗಜ ಉದ್ದವೂ ಆಗಿರುವ ಒಂದು ಥಾನು ಮಸ್ಲಿನು ಅತೀ ಚಿಕ್ಕ ಲಗ್ನದ ಉಂಗುರದಿಂದ ನುಸುಳಿಸಬಹುದು. ಅದರ ಭಾರ ಕೇವಲ ಏಳು ತೊಲೆಗಳಷ್ಟಿದೆ" ಎಂದು ಮೋರ್ನಿಂಗ್ ಹೆರಾಲ್ಡ್ ಪತ್ರಿಕೆ ಮೆಚ್ಚಿಗೆ ಸೂಚಿಸಿತು. "ಇನ್ನೂ ಸ್ವಲ್ಪ ಹೆಚ್ಚು ಸೂಕ್ಷ್ಮವಾಗಿದ್ದರೆ ಈ ಬಟ್ಟೆ ದೃಷ್ಟಿಗೆ ಮಾಯವೇ ಆಗುತ್ತಿತ್ತು" ಹೀಗೆಂದೂ ಅದೇ ಪತ್ರಿಕೆ ಬರೆದಿದೆ.

ಕೊರಳು ಹಿಡುಕು

ಭಾರತದ ಸಂಪರ್ಕ ಹೆಚ್ಚಿದಂತೆ ಪಾಶ್ಚಾತ್ಯರಿಗೆ ಭಾರತೀಯ ಮರಗಳಲ್ಲಿ ಬೆಳೆಯುವ ಉಣ್ಣೆ ಕೇವಲ ಹತ್ತಿಯೆಂದು ತಿಳಿಯಿತು. ಅದೇ ಸಮಯಕ್ಕೆ ಅವರ್ಣನೀಯವಾದ ಅಪಾಯವೂ ಈ ಭಾರತೀಯ ನಾಜೂಕು ವಸ್ತ್ರಗಳೆಂದು ಐರೋಪ್ಯರ ಶ್ರೇಷ್ಠ ತರಗತಿಯ ವಸ್ತ್ರಗಳಿಗೆ ಗಿರಾಕಿಯಿಲ್ಲದಾದಾಗ ಅಲ್ಲಿನ ಸರಕಾರಗಳು ಮಸ್ಲೀನ್ ಬಟ್ಟೆಗಳನ್ನು ತರಿಸುವುದಕ್ಕೆ ನಿರ್ಬಂಧವನ್ನು ಹಾಕಿದುವು. "ಬಂಗಾಲವು ಮಸ್ಲೀನುಗಳಿಗೆ ಪ್ರಖ್ಯಾತಿಪಟ್ಟಿದೆ. ಅಲ್ಲಿ ಅವು ದೇವತೆಗಳಿಂದಲೂ, ಕೆಲವೊಂದು ಕ್ರಿಮಿಗಳಿಂದಲೂ ತಯಾರಿಸಲ್ಪಡುತ್ತವೆಂಬ ನಂಬಿಗೆ ಹರಡಿತ್ತು" ಹೀಗೆಂದು ಇತಿಹಾಸಕಾರ ಟೈಲರನು ಬರೆಯುತ್ತಾನೆ. ಒಂದು ರಾತಲ್ಲು ಭಾರತ ಬಟ್ಟೆಯಲ್ಲಿ 250 ಮೈಲು ಉದ್ದದ ನೂಲಿರುತ್ತದೆಂದೂ, ಆ ನೂಲಿನ ಗಾತ್ರ ಇಂಚಿನ ಸಾವಿರದ ಒಂದು ಅಂಶದಿಂದ, 15 ಸಾವಿರದ ಒಂದಂಶದಷ್ಟು ಇರುವುದೆಂದೂ, ಈಗಿನ ಗಿರಣಿಗಳಲ್ಲಿ ಅತೀ ಹೆಚ್ಚೆಂದರೆ ಇಂಚಿನ 480ನೇ ಒಂದಂಶಕ್ಕಿಂತ ಸೂಕ್ಷ್ಮವಾದ ದಾರವನ್ನು ತೆಗೆಯಲಿಕ್ಕಾಗುವುದಿಲ್ಲವೆಂದೂ ನೂಲುತಜ್ಞರಾದ ವಿ. ಉರೆ ಅವರು ತಿಳಿಸುತ್ತಾರೆ. "ಹಿಂದೂ ಜೇಡನ ಜಾಣಾಕ್ಷ ಬೆರಳುಗಳು ಮೆಂಚಸ್ಟರಿನ ಗಿರಣಿಗಳಲ್ಲಿ ತಯಾರಾಗುವಂತೆ ಸರಿಸಮಾನವಾದ ಗಾತ್ರದ ನೂಲನ್ನು ತೆಗೆಯಲು ಅಸಮರ್ಥವಾಗಿವೆ ಎಂಬಂಶವನ್ನು ಸಿದ್ಧಾಂತಗೊಳಿಸಬೇಕಾದರೆ ಸೂಕ್ಷ್ಮದರ್ಶಕ ಕನ್ನಡಿಯಿಂದಲೇ ಪರಿಶೀಲಿಸಬೇಕಾಗುವುದು." ಹೀಗೆಂದು ಟೈಲರರು ಬರೆದಿದ್ದಾರೆ.

ಮೊಗಲರ ಕಾಲದಲ್ಲಿ ಮಸ್ಲೀನ್ ತಯಾರಿಯ ವ್ಯವಸ್ಥೆಯನ್ನು ನೋಡಿಕೊಳ್ಳಲು ಪ್ರತ್ಯೇಕ ಒಂದು ಖಾತೆಯೇ ಇತ್ತು. ದಿಲ್ಲಿ ಬಾದಶಹನಿಗಾಗಿ ಅತೀ ನಾಜೂಕಾದ ಬಟ್ಟೆಗಳೇ ತಯಾರಿಸಲ್ಪಡುತ್ತಿದ್ದವು! ಇಂಥ ಮಸ್ಲೀನುಗಳಿಗೆ 'ನೇಯ್ದ ಗಾಳಿ' ಎಂಬ ಚಮತ್ಕಾರಸೂಚಕ ಹೆಸರು ಇಡಲ್ಪಟ್ಟಿತ್ತು. ಈ ಒಂದು ಸಂಗತಿಯಿಂದಲೇ ಭಾರತೀಯ ಕೆಲಸಗಾರನ ಹಸ್ತ ನೈಪುಣ್ಯ ಅದೆಷ್ಟು ಉನ್ನತ ಮಟ್ಟದಿತ್ತೆಂಬ ಸಂಗತಿಯೂ, ಮಾತ್ರವಲ್ಲ ಜಗತ್ತಿನಲ್ಲಿ ಹಿಂದೆಯೂ, ಇಂದೂ ಅದಕ್ಕೆ ಸರಿಗಟ್ಟುವವರೇ ಇರಲಿಲ್ಲವೆಂಬ ಸಂಗತಿಯೂ ನಮಗೊಂದು ಹೆಮ್ಮೆಯಾಗಿದೆ.

ಕಡಿತ ಗಾಯ ಚರ್ಮ ಘಾತಗಳಿಗೆ
ಕುಟಿಕೂರಾ ಅವಶ್ಯ.

ಭದ್ರತೆಗಾಗಿ ಪ್ರತಿಯೊಂದು ಚರ್ಮ ಹಾನಿಯನ್ನು ಕುಟಿಕೂರಾ ಮುಲಾಮಿನಿಂದ ಲೇಪಿಸಿರಿ. ಅದರ ವಿಷಹಾರಿ ಶಮನಿಸುವ ಶಕ್ತಿ ಚರ್ಮ ಆರೋಗ್ಯ ಪುನಃ ನಿರ್ಮಿಸುತ್ತದೆ ಊದುವಿಕೆ ನೋವನ್ನು ಕಡಿಮೆ ಮಾಡುತ್ತದೆ.



556

ಕುಟಿಕೂರಾ ಮುಲಾಮು
CUTICURA OINTMENT

ಬ್ರೊಂಕ್ಯಾಟಿಸ್,
ಕೆಮ್ಮು ಮತ್ತು ಇತರ
ಶ್ವಾಸಕೋಶ
ಬಾಧೆಗಳಿಗೆ
ಪೆಪ್ಸ್ ಅಗತ್ಯ



ಪೆಪ್ಸಿನ ಒಂದು ಮಾತ್ರೆಯನ್ನು ಬಾಯಿಯಲ್ಲಿ ಹಾಕಿರಿ. ಅದು ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧಿಯ ಸಾರವು ನೀವು ಒಳಸೇರಿಸಿಕೊಳ್ಳುವ ವಾಯುವಿನೊಡನೆ ಸೇರಿ ಶ್ವಾಸಕೋಶಗಳನ್ನು ಸೇರುವುದು. ಅಲ್ಲಿ ಅದು ನಿಮ್ಮ ಕೆಮ್ಮನ್ನು ನಿವಾರಿಸಿ ಅಲ್ಲಿ ಸೇರಿರುವ ಕಫವನ್ನು ಹೊರಡಿಸಿ ಸುಖವನ್ನುಂಟುಮಾಡುವುದು.

ಪೆಪ್ಸಿನ ಔಷಧೀಯ ಸತ್ವಗಳು ಶ್ವಾಸಕೋಶ ವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಹೇಗೆ ಮುಟ್ಟುತ್ತವೆಂದು ತೋರಿಸುವ ಚಿತ್ರ

ವಿಷಹಾರಿ ಪೆಪ್ಸನ್ನೇ
ಉಪಯೋಗಿಸಿರಿ

PEPS

ಗಂಟಲು ಮತ್ತು ಎದೆ ಗುಳಿಗೆಗಳು
ಗಂಟಲು ಎದೆ ಮತ್ತು ಶ್ವಾಸಕೋಶ ತೊಂದರೆಗಳಿಗೆ
ಅತ್ಯಂತ ಪರಿಣಾಮಕಾರಿ ಔಷಧಿ.

ಸ್ವದೇಶಾಭಿಮಾನಿ

ತಾರೀಕು 10—9—1948

ಆಹಾರ ಸಚಿವರ ಪರಿಷತ್ತು

ಬೇರೆ ಬೇರೆ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಆಹಾರ ಖಾತೆಯ ಮಂತ್ರಿಗಳ ಪರಿಷತ್ತೊಂದು ಹೊಸ ದಿಲ್ಲಿಯಲ್ಲಿ ಸಮಾವೇಶವಾಗಿರುತ್ತದೆ.

ಈ ಪರಿಷತ್ತಿನಲ್ಲಿ ಕೇಂದ್ರ ಸರಕಾರದ ಆಹಾರ ಸಚಿವ ಜೈರಾಮದಾಸ್ ದೌಲತರಾಮ ಇವರು ಮಾತನಾಡುತ್ತ ಈ ದೇಶದಲ್ಲಿ ಆಹಾರದ ಉತ್ಪತ್ತಿ ಹೆಚ್ಚಿಸುವುದರ ಅತ್ಯಾವಶ್ಯಕತೆಯನ್ನು ವಿವರಿಸಿದರು ಈ ಬಗ್ಗೆ ಕೇಂದ್ರಸರಕಾರವು ಈಗ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆಯೆಂದೂ ಪ್ರಾಯಶಃ ಪ್ರಾಂತಿಕ ಸರಕಾರಗಳೂ ಇಷ್ಟೇ ಹಣ ತಾವೂ ಖರ್ಚು ಮಾಡುತ್ತಿವೆಯೆಂದೂ ಈ ಉತ್ಪನ್ನ ಹೆಚ್ಚಿಸುವ ಕಾರ್ಯಕ್ರಮ ಸರಿಯಾಗಿ ಯಶಸ್ವಿಯಾಗಬೇಕಾದರೆ ಇದಕ್ಕಿಂತ ಎಷ್ಟೋ ಹೆಚ್ಚಿನ ಹಣ ಖರ್ಚು ಮಾಡಬೇಕಾಗುವುದೆಂದೂ ಹೇಳಿದರು

ಉತ್ಪನ್ನ ಹೆಚ್ಚಿಸುವಿಕೆ, ಕೃಷಿ ಉತ್ಪತ್ತಿಗಳ ಕ್ರಯಗಳ ಸ್ಥಿರೀಕರಣ, ಗಣನೇ ಇಸ್ತಿಯಲ್ಲಿ ಕೃಷಿಯು ಸರಿಯಾದ ಅಂಕೆ ಸಂಖ್ಯೆಗಳ ಸಂಗ್ರಹಕ್ಕೆ ಏರ್ಪಾಡು ಹಾಗೂ ಕೇಂದ್ರ ಸರಕಾರದ ಕಾಡುಗಳ ಕುರಿತಾದ ಧೋರಣೆ– ಈ ನಾಲ್ಕು ಪ್ರಶ್ನೆಗಳನ್ನು ಪರಿಶೀಲಿಸಲು ಪರಿಷತ್ತಿನಲ್ಲಿ ನಾಲ್ಕು ಕಮಿಟಿಗಳನ್ನು ಏರ್ಪಡಿಸಲಾಯಿತು ಇವುಗಳು ಆಯಾ ವಿಷಯಗಳನ್ನು ಪರಿಶೀಲಿಸಿ ಕೂಡಲೆ ವರದಿಯೊಪ್ಪಿಸುವವು ಮತ್ತು ಈ ಕುರಿತು ಈ ಸಚಿವ ಪರಿಷತ್ತು ತೀರ್ಮಾನಿಸಲಿದೆ

ಪ್ರಾಯಶಃ ಮುಂದಿನ ವರ್ಷದ ಬೆಳೆಯ ಪ್ರೋಕ್ಯೂರ್‌ಮೆಂಟ್ ಹಾಗೂ ರೇಶನಿಂಗ್ ಮಾಡಬೇಕೆ ಅಥವಾ ಬೇಡವೆ ಎಂಬ ಪ್ರಶ್ನೆಯೂ ಈ ಪರಿಷತ್ತಿನಲ್ಲಿ ತೀರ್ಮಾನವಾಗಲಿದೆ ಈ ಪರಿಷತ್ತು ಮುಗಿದೊಡನೆ ಈ ಪ್ರಶ್ನೆಯ ಕುರಿತು ತಾವು ತೀರ್ಮಾನಿಸಲಿರುವುದಾಗಿ ಮದ್ರಾಸು ಸರಕಾರವಂತೂ ಹೇಳಿರುತ್ತದೆ ಅರ್ಥ ಶಾಸ್ತ್ರ ಪಂಡಿತರಂತೂ ಆವಶ್ಯಕ ವಸ್ತುಗಳ ಕಂಟ್ರೋಲುಗಳನ್ನು ಜಾರಿಯಲ್ಲಿಡುವುದು ಅತ್ಯಗತ್ಯವೆಂದು ಭಾರತ ಸರಕಾರಕ್ಕೆ ಸಲಹೆ ಕೊಟ್ಟಿರುವರೆಂಬುದನ್ನು ಈಗ ಎಲ್ಲರೂ ಬಲ್ಲರು

ಕೃಷಿ ಉತ್ಪತ್ತಿಯನ್ನು ಹೆಚ್ಚಿಸಲು ನಡೆಸಲ್ಪಡುತ್ತಿರುವ ಚಳವಳ ಈಗ ಹೆಚ್ಚು ಪರಿಣಾಮಕಾರಿಯಾದಂತೆ ತೋರುವುದಿಲ್ಲ. ಈ ಚಳವಳದ ಬಗ್ಗೆ ಸರಕಾರಗಳು ಖರ್ಚು ಮಾಡುತ್ತಿರುವ ನಾಲ್ಕು ಕೋಟಿ ರೂಪಾಯಿಗಳ ಮೌಲ್ಯದಷ್ಟು ಉತ್ಪತ್ತಿ ಕೂಡಾ ಹೆಚ್ಚಾಗುತ್ತಿದೆಯೋ ಎಂಬ ವಿಷಯಗಳ ಸಂಶಯ ಕಾಣುತ್ತದೆ.

ಕೃಷಿಕರಲ್ಲಿ ಈ ಬಗ್ಗೆ ಸಾಕಷ್ಟು ಉತ್ಸಾಹ ಬರುವಂತೆ ಮಾಡದೆ ಈ ಪ್ರಶ್ನೆ ಯಶಸ್ವಿಯಾಗಿ ಬಿಡಿಸುವುದು ಅಸಾಧ್ಯ.

ಈ ಪ್ರಶ್ನೆಯನ್ನು ಯಾರು ಅತ್ಯಂತ ಯಶಸ್ವಿಯಾಗಿ ಬಿಡಿಸಬಲ್ಲರೋ ಆ ಪಂಗಡದವರೇ ಈ ರಾಷ್ಟ್ರದ ಸರಕಾರಗಳ ಪದವಿಗಳನ್ನು ನಡೆಸಲು ಯೋಗ್ಯತೆಯುಳ್ಳವರೆನ್ನಿಸುವರೆಂಬ ಬಗ್ಗೆ ಸಂಶಯ ಬೇಡ

ಕೃಷಿಕರು ಸುಧಾರಿತ ಕ್ರಮಗಳಲ್ಲಿ ಕೃಷಿ ಮಾಡಿದರೆ ಮಾತ್ರ ಉತ್ಪತ್ತಿ ಹೆಚ್ಚಾಗುವ ಸಂಭವವಿರುತ್ತದೆ ಹೊಸ ಭೂಮಿಗಳನ್ನು ಕೃಷಿಗೆ ಒಳಪಡಿಸುವುದರಿಂದಲೂ ಉತ್ಪತ್ತಿ ಹೆಚ್ಚಾಗುವುದು ಇವೆರಡಕ್ಕೂ ಸಾಕಷ್ಟು ಹಣ ವಿನಿಯೋಗಿಸದೆ ನಿವೃತ್ತಿ ಇಲ್ಲ ಈಗ ಸಾಗುವಳಿ ಮಾಡುತ್ತಿರುವ ಒಕ್ಕಲುಗಳು ಈ ಬಗ್ಗೆ ಆಗತ್ಯವಿರುವ ಹಣ ಖರ್ಚು ಮಾಡಲು ಸಮರ್ಥರಿಲ್ಲ ಧನಿಗಳಿದ್ದವರು ಅಗತ್ಯವುಳ್ಳ ಹಣ ವಿನಿಯೋಗಿಸಬೇಕು. ಕೇವಲ ಹಣ ಖರ್ಚು ಮಾಡುವುದು ಮಾತ್ರ ಸಾಲದು ಒಕ್ಕಲುಗಳ ಜೀವನದ ಪರಿಸ್ಥಿತಿಯೂ ಸುಧಾರಿಸಲ್ಪಡದಿದ್ದಲ್ಲಿ ಅವರು ಈ ಬಗ್ಗೆ ಅಗತ್ಯವಿರುವ ಉತ್ಸಾಹದಿಂದ ದುಡಿಯಲಾರರು

ಸಹಕಾರೀ ಪದ್ಧತಿಯಿಂದ ಸಾಗುವಳಿ ಸಾಧಿಸಿದರೆ ಸುಧಾರಿತ ಕ್ರಮದ ಸಾಗುವಳಿ ಮಾಡಲು ಬಹಳ ಸಹಾಯವಾಗುವ ಸಂಭವವಿರುತ್ತದೆ

ಗ್ರಾಮ ಪಂಚಾಯತುಗಳ ಸುಧಾರಣೆಯೂ ಇದಕ್ಕೆ ಅತ್ಯಾವಶ್ಯಕವಿರುತ್ತದೆ ಗ್ರಾಮ ಜೀವನ ಪುನರುಜ್ಜೀವನಗೊಳಿಸದೆ ಕೃಷಿಕರ ಜೀವನದಲ್ಲಿ ಉತ್ಸಾಹ ತಲೆದೋರುವಂತಿಲ್ಲ

ನಮ್ಮ ಗ್ರಾಮಾಂತರಗಳಲ್ಲಿ ನಿದ್ರಾವಸ್ಥೆ ಇನ್ನೂ ಹೋಗಿಲ್ಲ ಅದರಿಂದ ಹುಟ್ಟಿರುವ ಅನೇಕ ಹಾವಳಿಗಳೂ ಹಾಗೆಯೇ ಇವೆ ಮಹಾತ್ಮಾಗಾಂಧಿಯವರು ಹಾಕಿ ಕೊಟ್ಟ ವಿಧಾಯಕ ಕಾರ್ಯಕ್ರಮ ಮುಂದೊತ್ತಿ ಸಮಗ್ರ ಗ್ರಾಮ ಸೇವೆಯನ್ನು ಸರಿಯಾಗಿ ಸಾಧಿಸಿದರೆ ಮಾತ್ರ ಗ್ರಾಮಸ್ಥರಲ್ಲಿ ನಿಜವಾದ ಜಾಗ್ರತಿ ತಲೆದೋರುವ ಸಂಭವವಿರುತ್ತದೆ.

ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಹಲವು ಪ್ರಶ್ನೆಗಳ ತೀರ್ಮಾನವಾಗದೆ ಕೃಷಿ ಉತ್ಪತ್ತಿ ಹೆಚ್ಚಾಗುವುದು ಅಸಂಭವವಿರುತ್ತದೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳುವುದು ಎಲ್ಲಕ್ಕೂ ಮುಖ್ಯವಿರುತ್ತದೆ

ಟೀಕೆ-ಟಿಪ್ಪಣಿಗಳು

ವಿದ್ಯುತ್‌ಶಕ್ತಿ ಸರಬರಾಯಿ

ಗೆರಸೊಪ್ಪೆ ಜೋಗಿನಿಂದ ಮದ್ರಾಸ್ ಸರಕಾರಕ್ಕೆ 4000 ಕಿಲೊವಾಟ್ಸ್ ವಿದ್ಯುತ್ ಶಕ್ತಿಯನ್ನು ಒದಗಿಸಲು ಮೈಸೂರು ಸರಕಾರ ಒಪ್ಪಿರುವುದಾಗಿಯೂ ಇದನ್ನು ತುಂಗಭದ್ರಾ ಆಣೆಕಟ್ಟಿನ ಸಮೀಪದ ಬಳ್ಳಾರಿ, ಹೊಸಪೇಟೆ, ಅಡೋನಿ ಮೊದಲಾದ ಕಡೆಯವರಿಗೆ ಒದಗಿಸಲಾಗುವುದೆಂದೂ ತಿಳಿದು ಬರುತ್ತದೆ.

ದಕ್ಷಿಣ ಕನ್ನಡಕ್ಕಾಗಿ ಬೇರೆ ಒದಗಿಸುವರೆ? ಅಥವಾ ಎಂದಿನ ಕ್ರಮದಂತೆ ಈ ಜಿಲ್ಲೆಯ ಕಡೆಗೆ ಗಮನ ಕೊಡುವವರೆ ಇಲ್ಲವೆ? ಈ ವಿಷಯದ ಮಾಹಿತಿ ಪಡೆದು ನಿಜ ಸಂಗತಿಯನ್ನು ಇಲ್ಲಿಯ ಮಹಾ ಜನರಿಗೆ ತಿಳಿಸುವ ಕೆಲಸವನ್ನಾದರೂ ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರು ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ

ಡಾಕ್ಟರ್ ಬೆನೆಸರ ನಿಧನ

ಜೆಕೊಸ್ಲೊವೊಕಿಯಾ ರಾಷ್ಟ್ರ ಸಂಸ್ಥಾಪಕರೂ ಇತ್ತೀಚೆಗಿನ ವರೆಗೆ ಅದರ ಅಧ್ಯಕ್ಷರೂ ಆಗಿದ್ದ ಡಾಕ್ಟರ್ ಎಡ್ವರ್ಡ್ ಬೆನೆಸರು ತಮ್ಮ 64ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು ಇಂಥ ಅನುಭವಸ್ಥ ಹಾಗೂ ಉಜ್ವಲ ದೇಶಾಭಿಮಾನಿಯ ನಿಧನಕ್ಕಾಗಿ ಆ ಜನಾಂಗದೊಡನೆ ನಮ್ಮ ಸಹಾನುಭೂತಿಯನ್ನು ನಮ್ಮ ಪ್ರಧಾನ ಸಚಿವ ಪಂಡಿತ ಜವಾಹರಲಾಲರೂ ನಮ್ಮ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರ್ಯರೂ ಆ ದೇಶದ ರಾಯಭಾರಿಯ ಮೂಲಕ ಕಳುಹಿಸಿದ್ದಾರೆ

ಪ್ರಥಮ ಮಹಾ ಯುದ್ಧದಲ್ಲಿ ಆಸ್ಟ್ರಿಯಾ ಹಂಗೇರಿ ಸಾಮ್ರಾಜ್ಯವು ಒಡೆದ ಗ ಜೆಕೊಸ್ಲೊವೊಕಿಯಾ ರಾಷ್ಟ್ರ ಸ್ಥಾಪನೆಯಾಯಿತು. ಅಂದು ರಾಷ್ಟ್ರ ಸ್ಥಾಪನೆಗಾಗಿ ಅಗತ್ಯವಿದ್ದ ಸೈನಿಕ ನಿಧಿಗೆ ಡಾ। ಬೆನೆಸರು ತನ್ನ ಸರ್ವಸ್ವವನ್ನು ಅರ್ಪಿಸಿದರು ಅಂದಿನಿಂದ ಇದೇ ಜೂನ್ ತಾ 7ರ ತನಕ ಇವರು ತಮ್ಮ ರಾಷ್ಟ್ರಕ್ಕಾಗಿ ಸತತ ದುಡಿದರು 17 ವರ್ಷ ರಾಷ್ಟ್ರದ ಪರದೇಶೀ ಖಾತೆಯ ಮಂತ್ರಿಯಾಗಿ ಆ ಬಳಿಕ ಅಧ್ಯಕ್ಷರಾಗಿದ್ದರು - ಕಳೆದ ಫೆಬ್ರವರಿಯಲ್ಲಿ ಆ ರಾಷ್ಟ್ರದಲ್ಲಿ ಕಮ್ಯೂನಿಸ್ಟ್ ಪಂಗಡ ಬಲವಾದಾಗ ಹಿಂದಿನ ಸರಕಾರದ ರಾಜಿನಾಮೆ ಇವರು ಸ್ವೀಕರಿಸಿ ರಾಷ್ಟ್ರವು ಇತ್ತಂಡವಾಗಿ ಒಡೆದು ಹೋಗುವುದನ್ನು ನಿಲ್ಲಿಸಿದರು ಈ ಬಾರಿಯ ಮಹಾ ಯುದ್ಧದ ಕಾಲದಲ್ಲಿ ಇವರ ಸರಕಾರ ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದು ಯುದ್ಧಾಂತ್ಯದಲ್ಲಿ ಇವರು ಪುನಃ ತಮ್ಮ ರಾಷ್ಟ್ರದ ಅಧಿಕಾರ ಪಡೆದಿದ್ದರು ಜೆಕೊಸ್ಲೊವೊಕಿಯಾ ರಶ್ಯ ಪಂಗಡಕ್ಕೆ ಸೇರಬೇಕೊ ಅಮೇರಿಕದ ಪಂಗಡಕ್ಕೆ ಸೇರಬೇಕೊ ಎಂಬ ಪ್ರಶ್ನೆಗೆ ಇವರು ಕೊಡುತ್ತಿದ್ದ ಉತ್ತರ ರಶ್ಯ ಮತ್ತು ಅಮೇರಿಕಗಳೊಡನೆ ಸೇರೋಣವೆಂದೇ ಇತ್ತು

ಗಂಗಾನದಿಯಲ್ಲಿ ನೆರೆ

ಗಂಗಾ ಯಮುನಾನದಿಗಳ ನೆರೆ ಈ ಬಾರಿ ಹಲವು ವರ್ಷಗಳಲ್ಲಿ ಕಾಣದಷ್ಟು ವಿಪರೀತ ಹೆಚ್ಚಾಗಿದೆಯೆಂದು ತಿಳಿದುಬರುತ್ತದೆ ಬೆನಾರಸ್ ನಗರದ ಬೀದಿಗಳಲೆಲ್ಲ ನೀರು ನಿಂತಿದೆ ಅದೆಷ್ಟೋ ಹಳ್ಳಿಗಳು ಮುಳುಗಿ ಹೋಗಿವೆ ಅಲ್ಲಲ್ಲಿಯ ಸರಕಾರದವರು ಜನರನ್ನು ಬೇರೆಡೆಗಳಿಗೆ ಸಾಗಿಸುತ್ತಿದ್ದಾರೆ. ಈ ನೆರೆಯಿಂದ 150,000 ಜನರು ನಿರಾಶ್ರಿತರಾಗುವಂತಾಗಿದೆಯಾದರೂ ಹೆಚ್ಚಿನ ಜೀವನಷ್ಟ ಆಗಿಲ್ಲವೆನ್ನುತ್ತಾರೆ ಈಗ ರಾಷ್ಟ್ರೀಯ ಸರಕಾರಗಳೇ ಜಾರಿಯಲ್ಲಿರುವುದರಿಂದ ಜನರಿಗೆ ಅಗತ್ಯವುಳ್ಳ ಸಹಾಯವನ್ನು ಇವು ಸಕಾಲದಲ್ಲಿ ಒದಗಿಸುವರೆಂದು ನಿರೀಕ್ಷಿಸಬೇಕಾಗಿದೆ.

ಮದ್ರಾಸು ಗವರ್ನರರು

ಸರ್ ಆರ್ಚಿಬಾಲ್ಡ್ ನ್ಯಾ ಮತ್ತು ಲೇಡೀ ನ್ಯಾಯವರು ಇದೇ 7ನೇ ತಾರೀಕಿನ ಪ್ರಾತಃಕಾಲ ಮದ್ರಾಸನ್ನು ಬಿಟ್ಟು ತೆರಳಿದರು. ಅದೇ ದಿನ ಭಾವನಗರದ ಮಹಾರಾಜರು ಗವರ್ನರ ಪದವಿಯನ್ನು ಸ್ವೀಕರಿಸಿದರು.

ನ್ಯಾ ದಂಪತಿಗಳು ಈ ಪ್ರಾಂತ್ಯದ ಜನರೊಡನೆ ಯೋಗ್ಯ ರೀತಿಯಲ್ಲಿ ವರ್ತಿಸಿ ಇಡೀ ಪ್ರಾಂತ್ಯದಲ್ಲಿ ಜನಪ್ರಿಯ ಗವರ್ನರರಾಗಿದ್ದರು ಲೇಡಿ ನ್ಯಾಯವರು ಕೂಡಾ ಇಲ್ಲಿಯ ಸಾರ್ವಜನಿಕ ಜೀವನದಲ್ಲಿ ಹೃತ್ಪೂರ್ವಕ ದುಡಿಯುತ್ತಿದ್ದರು

ಇವರು ಬ್ರಿಟನಿನ ಹೈ ಕಮಿಶನರಾಗಿ ದಿಲ್ಲಿಗೆ ಪುನಃ ಬರುವರೆಂಬುದು ತುಂಬಾ ಸಂತೋಷದ ಸಂಗತಿ

ಹೊಸ ಗವರ್ನರರಾದರೂ ಇದೇ ರೀತಿ ಜನಪ್ರಿಯರಾಗಲೆಂದು ಹಾರೈಸುತ್ತೇವೆ.

ಹಿಂದೀ ವಿರೋಧಿ ಚಳವಳ

ದ್ರಾವಿಡ ಸ್ಥಾನ ಬೇಕೆಂದು ಚಳವಳ ನಡೆಸುವ ಮುಖಂಡ ಶ್ರೀ ಇ ವಿ ರಾಮಸ್ವಾಮಿ ನಾಯಕರರು ಇತ್ತೀಚೆಗೆ ಶಾಲೆಗಳಲ್ಲಿ ಹಿಂದೀ ಭಾಷೆ ಕಲಿಸುವ ಏರ್ಪಾಡನ್ನು ವಿರೋಧಿಸಿ ಒಂದು ಚಳವಳ ನಡೆಸುತ್ತಿದ್ದಾರೆ ಹಿಂದೀ ಕಲಿಸುವ ಶಾಲೆಗಳ ಪಿಕೆಟಿಂಗ್ ನಡೆಸುವುದು ಈ ಚಳವಳದ ಕಾರ್ಯಕ್ರಮ ಸರಕಾರದವರು ಇಂಥವರನ್ನು ಕೈದು ಮಾಡುವುದರಿಂದ ಇದೊಂದು ಬಗೆಯ ಸತ್ಯಾಗ್ರಹ ಚಳವಳವೇ ಆಗಿ ಪರಿಣಮಿಸಿರುತ್ತದೆ ತಮಿಳರಿಗೆ ಹಿಂದೀ ಬೇಡವೆಂಬುದು ಇವರ ಮುಖ್ಯವಾದವಿರುತ್ತದೆ

ಇದೊಂದು ಹೊಸ ವೇಶದ ಇವರ ರಾಜಕೀಯ ಚಳವಳವೇ ಇರುತ್ತದೆಂಬುದು ಸ್ಪಷ್ಟ ಇವರು ನಿಜವಾಗಿ ಹಿಂದೀ ಕಲಿಯುವುದನ್ನು ಮಾತ್ರ ವಿರೋಧಿಸುವುದಿರದೆ ಈಗಿನ ಸರಕಾರವನ್ನು ವಿರೋಧಿಸುವುದೇ ಈ ಚಳವಳದ ಗುರಿ ಇರುತ್ತದೆಂದು ಸರಕಾರೀ ಕಡೆಯಿಂದ ಸಾರಲಾಗುತ್ತಿದೆ

ಅಂತೂ ನಮ್ಮ ಸರಕಾರಕ್ಕೆ ತೊಂದರೆ ಕೊಡುವ ಹಲವು ಕಿರುಕುಳಗಳಲ್ಲಿ ಇದೂ ಒಂದು ಇದ್ದು ಈ ರಗಳೆ ನಿಲ್ಲಿಸುವ ಸರಕಾರೀ ಯತ್ನಗಳಿಗೆ ಪ್ರಜೆಗಳೆಲ್ಲರೂ ಯೋಗ್ಯ ಸಹಾನುಭೂತಿ ಸಹಕಾರಗಳನ್ನು ಸರಕಾರಕ್ಕೆ ಒದಗಿಸಬೇಕಾಗಿದೆ

ಪದವು ಸಹಕಾರೀ ಪಟ್ಟಣದ ಗತಿಯೇನು?

ಪದವು ಸಹಕಾರೀ ಪಟ್ಟಣ ಸಂಘವನ್ನು ಸಹಕಾರೀ ಇಲಾಖೆಯವರು ರಿಜಿಸ್ಟರ್ ಮಾಡಿರುತ್ತಾರಾಗಿ ತಿಳಿದುಬರುತ್ತದೆ ಈ ಯೋಜನೆಯನ್ನು ಸರಕಾರದವರೂ ಮಂಜೂರು ಮಾಡಿದ್ದರು ಇದೇ ರೀತಿ ಈ ಜಿಲ್ಲೆಯ ವಿವಿಧ ಭಾಗಗಳಲ್ಲಿಯೂ ಹಲವು ಕಟ್ಟಡ ಸಹಕಾರೀ ಸಂಘಗಳನ್ನು ರಿಜಿಸ್ಟರು ಮಾಡಲಾಗಿದೆ

ಈಗ ಸರಕಾರದ ಧೋರಣೆ ಸ್ವಲ್ಪ ಬದಲಾವಣೆ ಹೊಂದಿರುತ್ತವೆ. "ಸಿ" ತರಗತಿಯ ಕಟ್ಟಡ ಕಟ್ಟಿಸುವವರಿಗೆ ಮಾತ್ರ ಸರಕಾರೀ ಸಾಲ ಒದಗಿಸತಕ್ಕದೆಂಬ ತೀರ್ಮಾನವಾದಂತೆ ತಿಳಿದುಬರುತ್ತದೆ. ಬಡ ಜನರಿಗೆ ಈ ರೀತಿ ಪಥಮದಲ್ಲಿ ಸಹಾಯ ಒದಗಿಸಬೇಕೆಂಬ ಈ ತೀರ್ಮಾನ ನ್ಯಾಯವೆಂಬುದನ್ನು ಒಪ್ಪಿಕೊಳ್ಳಬೇಕಾದರೂ ರಿಜಿಸ್ಟರಾದ ಈ ಸಂಘಗಳ ಗತಿಯೇನೆಂದು ವಿಚಾರಿಸುವುದೂ ಅಗತ್ಯವೆಂಬುದರಿಂದ ಈ ಕುರಿತು ಸರಕಾರದವರು ತಮ್ಮ ಇತ್ಯರ್ಥವನ್ನು ಸ್ಪಷ್ಟಗೊಳಿಸುವುದು ಅಗತ್ಯ ನಮ್ಮ ಶಾಸನ ಸಭಾ ಸದಸ್ಯರು ಈ ಪ್ರಶ್ನೆಯ ಕುರಿತು ಅಗತ್ಯವುಳ್ಳ ಮಾಹಿತಿಯನ್ನು ಮಹಾಜನರಿಗೆ ತಿಳಿಸುವರೆಂದು ಹಾರೈಸುತ್ತೇವೆ

ಮಲಯಾಳೀ ಮಹಾಜನ ಸಭೆ ಮತ್ತು ಮಹಿಳಾ ಸಮ್ಮೇಳನ

ಮಂಗಳೂರಿನಲ್ಲಿರುವ ಮಲಯಾಳಿಗಳು ತಮ್ಮದೊಂದು ಮಹಾಜನ ಸಭೆಯನ್ನು ಹಲವು ವರ್ಷಗಳಿಂದ ಇಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ ಇದರ ಹದಿನೆರಡನೆಯ ವಾರ್ಷಿಕೋತ್ಸವವು ತಾ 5ರಂದು ಗಣಪತಿ ಹೈಸ್ಕೂಲಿನಲ್ಲಿ ನಮ್ಮ ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಪಿ ಕೃಷ್ಣ ಮೂಸಯವರ ಅಧ್ಯಕ್ಷತೆಯಲ್ಲಿ ನಡೆಯಿತು ಈ ಸಮಾರಂಭಕ್ಕಾಗಿಯೇ ಮಲಬಾರಿನಿಂದ ಆಮಂತ್ರಿತರಾಗಿ ಬಂದಿದ್ದ ಶಿರೋಮಣಿ ನಾರಾಯಣ ಪುದುವಾಳರೂ ಶ್ರೀಮತಿ ಒ ಟಿ ಶಾರದಾ ಕೃಷ್ಣನ್ ಇವರೂ ಸಭೆಯಲ್ಲಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು ಭಾಷಾವಾರು ಪ್ರಾಂತ್ಯ ರಚನೆಯನ್ನು ಬೇಗನೆ ಜಾರಿಗೆ ತರಬೇಕೆಂಬ ನಿರ್ಣಯವೂ ಮಂಜೂರಾಯಿತು

ಅಂದು ಮಧ್ಯಾಹ್ನ ನಂತರ ಮಲಯಾಳೀ ಮಹಿಳೆಯರ ಸಮ್ಮೇಳನವೂ ನಡೆಯಿತು ಶ್ರೀಮತಿ ಕೆ ಸಂಗಮ್ಮ ಬಿ ಎ ಎಲ್ ಟಿ ಇವರು ಅಧ್ಯಕ್ಷರಾಗಿದ್ದರು ಮಿಸ್ ಗ್ರೇಸ್ ಮೆಥ್ಯೂ ಬಿ ಎಸ್ ಸಿ ಇವರು ಸಮ್ಮೇಳನದ ಉದ್ಘಾಟನೆ ನಡೆಸಿದರು ಶ್ರೀಮತಿ ಒ ಟಿ. ಶಾರದಾ ಕೃಷ್ಣನರ ಭಾಷಣವೂ ಇದ್ದಿತು ಇದು ಈ ಮಹಿಳೆಯರ ಪ್ರಥಮ ಸಮ್ಮೇಳನವಿದ್ದು ಇಲ್ಲಿ ಇವರದೊಂದು ಮಹಿಳಾ ಸಂಘವನ್ನು ವ್ಯವಸ್ಥೆಗೊಳಿಸುವ ಏರ್ಪಾಡನ್ನು ಈ ಸಮ್ಮೇಳನದಲ್ಲಿ ಮಾಡಲಾಯಿತು

ಮಂಗಳೂರಲ್ಲಿ ಬಂದು ನೆಲಸಿರುವ ಈ ಮಲಯಾಳೀ ಬಂಧುಗಳು ತಮ್ಮ ಊರಿನ ಪ್ರೇಮವನ್ನು ಈ ರೀತಿ ವ್ಯಕ್ತಗೊಳಿಸುವುದರಲ್ಲಿ ಅನುಚಿತವಾದುದೇನೂ ಇರುವುದಿಲ್ಲ ಮಾತ್ರವಲ್ಲ ಇವರ ಈ ಚಟುವಟಿಕೆಯು ಸಹಜವೂ ಉಪಯುಕ್ತವೂ ಇರುತ್ತದೆ. ಯಶಸ್ವಿಯಾಗಿ ಈ ಸಮಾರಂಭಗಳನ್ನು ಜರಗಿಸಿದ ಬಗ್ಗೆ ಇದರ ಕಾರ್ಯನಿರ್ವಾಹಕರನ್ನು ನಾವು ಕೃತಜ್ಞತಾಪೂರ್ವಕ ಅಭಿನಂದಿಸುತ್ತೇವೆ.

ಹಿಂದೂ ಮುಸ್ಲಿಂ ಐಕ್ಯ

ಹೈದರಾಬಾದಿನಲ್ಲಿ ಭಾರತದ ಪ್ರಧಾನ ಸಚಿವ ಪಂಡಿತ ಜವಾಹರಲಾಲರು ಹೇಳಿದ ಸೈನಿಕ ಶಿಸ್ತು ಜ್ಯಾರಿಯ ಸಮಯವು ಬಂದಿರುತ್ತದೆ ಈಗ ಶಸ್ತ್ರ ಚಿಕಿತ್ಸೆಯನ್ನು ಕೈಕೊಳ್ಳುವ ಸಂದರ್ಭ ಬಂದಿದೆಯೆಂದು ವಲ್ಲಭ ಭಾಯಿ ಪಟೇಲರು ನಿರ್ಧರಿಸಿರುವರೆಂದು ಕಾಣುತ್ತದೆ ಈ ಸಂದರ್ಭದಲ್ಲಿ ಇಲ್ಲಿಯ ಪ್ರಜೆಗಳ ಕರ್ತವ್ಯವನ್ನು ಸೂಚಿಸುವುದು ನಮ್ಮ ಪಾಲಿನ ಕೆಲಸವಿರುತ್ತದೆ

ಹೈದರಾಬಾದಿನಲ್ಲಿಯ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ದೇಶದ ಉಳಿದೆಡೆಗಳಲ್ಲಿ ಪೂರ್ಣ ಶಾಂತಿಯನ್ನು ರಕ್ಷಿಸಿಕೊಳ್ಳುವುದು ಅತ್ಯಾವಶ್ಯಕವಿರುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ

ಭಾರತ ರಾಷ್ಟ್ರದಲ್ಲಿಯ ಹಿಂದೂ ಮುಸ್ಲೀಮರು ಪರಸ್ಪರ ಸೌಹಾರ್ದತೆಯಿಂದ ವರ್ತಿಸುವುದಕ್ಕೆ ಇದರಿಂದ ಯಾವ ತೊಡಕೂ ಇಲ್ಲ ಹೈದರಾಬಾದಿನಲ್ಲಿಯ ರಜಾಕರ ಪಂಗಡದ ಮುಸ್ಲೀಮರು ಮಾಡುತ್ತಲಿರುವ ಅತ್ಯಾಚಾರ ಅನಾಚಾರಗಳ ಕಡೆಗೆ ನಿಜವಾದ ಸಹಾನುಭೂತಿ ಯಾವ ನ್ಯಾಯಪ್ರಿಯ ಮುಸ್ಲೀಮರಲ್ಲಿಯೂ ಇರುವಂತಿಲ್ಲ ಭಾರತದಲ್ಲಿಯೂ ಮುಸ್ಲೀಮ ಮುಂದಾಳುಗಳು ಈ ಅತ್ಯಾಚಾರಗಳನ್ನು ಮೇಲಿಂದ ಮೇಲೆ ಖಂಡಿಸಿರುತ್ತಾರೆ ಮಾತ್ರವಲ್ಲ ಹೈದರಾಬಾದಿನಲ್ಲೆ ಇರುವ ನ್ಯಾಯಪ್ರಿಯರಾದ ಎಷ್ಟೋ ಮುಸ್ಲೀಮರು ಈ ಅತ್ಯಾಚಾರಗಳನ್ನು ಖಂಡಿಸಿ ರಜಾಕರರ ಕೋಪಕ್ಕೆ ಪಾತ್ರರಾಗಿದ್ದಾರೆ ತಮ್ಮ ಜಾತಿಯವರೆಂಬ ಮಾತ್ರಕ್ಕೆ ಇವರು ಮಾಡುವ ದುಷ್ಕೃತ್ಯಗಳನ್ನು ಸಜ್ಜನರ್ಯಾರೂ ಮೆಚ್ಚಲಾರರು ಭಾರತದ ಮುಸ್ಲೀಮರು ಉಪಾಯವಿಲ್ಲದೆ ಬಾಯಿಯಿಂದ ಮಾತ್ರ ಈ ಅತ್ಯಾಚಾರಗಳನ್ನು ಖಂಡಿಸುತ್ತಿರುವರೆಂದೂ ಇವರ ಸಹಾನುಭೂತಿಯು ನಿಜವಾಗಿ ರಜಾಕರರ ಕಡೆಗೇನೆ ಇದೆಯೆಂದೂ ಸಂಶಯಪಡಲು ಸಾಕಷ್ಟು ಕಾರಣಗಳಿಲ್ಲ ಅಕಾರಣವಾಗಿ ಈ ರೀತಿ ಸಂಶಯದಿಂದ ಒಂದು ಆರೋಪ ಹೊರಿಸುವುದಾದರೂ ನ್ಯಾಯವಲ್ಲ.

ಅಲ್ಲಲ್ಲಿ ಕೆಲಮಂದಿ ಮುಸ್ಲೀಮ ವ್ಯಕ್ತಿಗಳು ಹೈದರಾಬಾದಿನ ರಜಾಕರರ ಪರವಾಗಿ ದುಡಿದಿರಬಹುದು ಇಂಥವರ ತಕ್ಕ ಶಾಸ್ತಿಯನ್ನು ಸರಕಾರದವರೇ ಕೈಕೊಳ್ಳುವರು ಪ್ರಜೆಗಳು ಹಿಂದು ಮುಸ್ಲೀಮ್ ಭೇದವಿಲ್ಲದೆ ಎಲ್ಲ ಪ್ರಜೆಗಳು—ಇಂಥವರ ಕಾರ್ಯಕಲಾಪಗಳ ಮಾಹಿತಿಯನ್ನು ಸರಕಾರಕ್ಕೆ ಒದಗಿಸಿದರೆ ಅವರ ಕರ್ತವ್ಯ ಪೂರೈಸಿದಂತಾಗುವುದು ಇಂಥ ಕೆಲಮಂದಿ ಇರಬಹುದೆಂಬ ಕಾರಣದಿಂದ ಹಿಂದುಗಳು ಮುಸ್ಲಿಮ್ ವರ್ಗವನ್ನೇ ಸಂಶಯದಿಂದ ನೋಡಲು ನ್ಯಾಯವಿಲ್ಲ

ಭಾರತದಲ್ಲಿಯ ಮುಸ್ಲೀಮರು ಹಿಂದುಗಳೊಡನೆ ಮೈತ್ರಿಯಿಂದಲೂ ಶಾಂತಿಯಿಂದಲೂ ಜೀವಿಸಲು ಬಯಸುತ್ತಿದ್ದಾರೆಂಬ ಬಗ್ಗೆ ಸಂಶಯ ಬೇಡ. ಈ ಧೋರಣೆಯು ಅವರ ಹಿತದ ದೃಷ್ಟಿಯಿಂದಲೇ ಅಗತ್ಯವೆಂದು ಹೆಚ್ಚಿನ ಮುಸ್ಲಿಮ ಬಂಧುಗಳಿಗೆ ಈಗ ಚೆನ್ನಾಗಿ ಗೊತ್ತಿದೆ ಇಲ್ಲಿಯ ಮುಸ್ಲೀಮರು ಈಗ ಕಡಮೆ ಸಂಖ್ಯಾಕರು ಮಾತ್ರವಲ್ಲ ಕಡಮೆ ಸಂಖ್ಯಾಕರನ್ನು ನ್ಯಾಯವಿಲ್ಲದ ರೀತಿ ಸಮರ್ಥಿಸುವ ಬ್ರಿಟಿಷ ಸರಕಾರವಾದರೂ ಈಗ ಇಲ್ಲ ಇಷ್ಟು ಸಂಗತಿಗಳನ್ನು ಅವರು ಸಹಜವಾಗಿ ತಿಳಿದುಕೊಳ್ಳಬಲ್ಲರು

ಬಹು ಸಂಖ್ಯಾಕರಾದ ಹಿಂದುಗಳು ಈ ಸಂದರ್ಭದಲ್ಲಿ ತಲೆ ಹಾಳು ಮಾಡಿಕೊಳ್ಳದೆ ಯೋಗ್ಯ ರೀತಿಯಿಂದ ವರ್ತಿಸಬೇಕಾದುದು ಮುಖ್ಯ ಸಂಗತಿ

ಬ್ರಿಟಿಷ್ ಆಡಳಿತದ ಕಾಲದಲ್ಲಿ ಸರಕಾರವು ಮುಸ್ಲಿಮರನ್ನು ಎತ್ತಿ ಹಿಡಿಯುತ್ತಿದ್ದಾಗ ಹಿಂದೂ ಮಹಾಸಭೆ ಹಾಗೂ ಆರ್ ಎಸ್ ಎಸ್ ಮೊದಲಾದ ಸಂಸ್ಥೆಗಳಿಗೆ ಒಂದು ಬಗೆಯ ನ್ಯಾಯವಿತ್ತೆಂದು ಎಣಿಸುವವರು ಕೂಡಾ ಈಗ ಪರಿಸ್ಥಿತಿಯು ಪೂರ್ಣ ಬದಲಾವಣೆಯಾಗಿದೆಯೆಂಬುದನ್ನು ವಿಚಾರಿಸಿ ತಿಳಿದುಕೊಂಡರೆ ತಮ್ಮ ಹಿಂದಿನ ಧೋರಣೆ ಈಗ ಎಷ್ಟು ಮಾತ್ರಕ್ಕೂ ಅಗತ್ಯವಿಲ್ಲವೆಂದು ತಿಳಿದುಕೊಳ್ಳಬಲ್ಲರು.

ಕಡಮೆ ಸಂಖ್ಯಾಕರೂ ಅಸಹಾಯರೂ ಇರುವ ಮುಸ್ಲಿಮರ್ ಬಂಧುಗಳು ಈ ಭಾರತ ರಾಷ್ಟ್ರದಲ್ಲಿ ಯಾವ ತೊಂದರೆಗೂ ಒಳಗಾಗದೆ ಕ್ಷೇಮದಿಂದ ಇರಬಹುದೆಂಬ ಬಗ್ಗೆ ಅವರಲ್ಲಿ ಯೋಗ್ಯ ವಿಶ್ವಾಸ ಬರುವಂತೆ ಸಹಾನುಭೂತಿ ಸಹಕಾರಗಳನ್ನು ನೀಡಿ ಅವರೊಡನೆ ಸೌಹಾರ್ದತೆ ಬೆಳೆಸುವುದು ಇಂದಿನ ಭಾರತದಲ್ಲಿಯ ಹಿಂದೂ ಸಮಾಜದ ಪರಮ ಪವಿತ್ರ ಕರ್ತವ್ಯವಿರುತ್ತದೆ

ಪಾಕಿಸ್ಥಾನದಲ್ಲಿ ಅಲ್ಪ ಸಂಖ್ಯಾಕರಿರುವ ಹಿಂದುಗಳ ಮೇಲೆ ಅನ್ಯಾಯ ಮಾಡುತ್ತಿರುವರು ಹೈದರಾಬಾದಿನ ಮುಸ್ಲೀಮ್ ರಜಾಕರರು ಅಲ್ಲಿಯ ಹಿಂದುಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ ಆದರೆ ಇದಕ್ಕೆಲ್ಲ ಭಾರತದಲ್ಲಿಯ ಮುಸ್ಲೀಮರು ಹೊಣೆಯಲ್ಲವೆಂಬುದನ್ನು ಮರೆಯಬಾರದು ಯಾರೋ ಅನ್ಯಾಯ ಮಾಡುತ್ತಿರುವರೆಂದು ನಿರಪರಾಧೀ ಜನರ ಮೇಲೆ ರೇಗಿಬೀಳುವುದಕ್ಕೆ ಯಾವ ನ್ಯಾಯವೂ ಇಲ್ಲ

ಭಾರತದಲ್ಲಿ ಹಿಂದು ಮುಸ್ಲೀಮರು ಐಕ್ಯದಿಂದ ಪರಸ್ಪರ ಪ್ರೇಮದಿಂದ ವರ್ತಿಸಿ ಯೋಗ್ಯ ಮಾದರಿಯನ್ನು ತೋರಿಸಿ ಪಾಕಿಸ್ಥಾನ ಹಾಗೂ ರಜಾಕರರನ್ನು ಸುಧಾರಿಸುವಂತೆ ಯತ್ನಿಸುವುದೇ ಯೋಗ್ಯ ದಾರಿ ಇರುತ್ತದೆ

ಭಾರತ ರಾಷ್ಟ್ರದಲ್ಲಿ ಮುಸ್ಲಿಮ ಜನರ ಮನಸ್ಸು ನೋಯಿಸುವ ಯಾವ ಕಾರ್ಯವೂ ಹಿಂದುಗಳಿಂದ ಆಗದಿರಲೆಂದು ನಾವು ಆಶಿಸುತ್ತೇವೆ ಹೈದರಾಬಾದಿನ ಪ್ರಸಂಗದಿಂದಾಗಿ ಭಾರತದಲ್ಲಿ ಹಿಂದು ಮುಸ್ಲಿಮರೊಳಗೆ ಶಾಂತಿಭಂಗವಾಗದಂತೆ ಎಚ್ಚರವಿರಲೆಂದು ಎಚ್ಚರಿಸಬಯಸುತ್ತೇವೆ

ಸ್ವೀಕಾರ ಮತ್ತು ವಿಮರ್ಶೆ

ರತ್ನರಾಶಿ:— ಲೇಖಕರು — ಕಯ್ಯಾರ ಕಿಞ್ಞಣ್ಣ ರೈ ಪಿದ್ವಾನ್ ನವಜೀವನ ಹೈಸ್ಕೂಲು ಪೆರಡಾಲ ಇಲ್ಲಿಯ ಅಧ್ಯಾಪಕರು. ಇದನ್ನು ಮುದ್ರಿಸಿ ಪ್ರಕಟಿಸಿದವರು—ಶಾರದಾ ಛಾಪಖಾನೆಯವರು ಬೆಲೆ 0—14—0

ಭಾರತದ ಜಾಗೃತಿಗೆ ನೆರವಾದ ಮಹಾಪುರುಷರಲ್ಲಿ ಅಗ್ರಗಣ್ಯರೆನಿಸಿದ ಕೆಲವು ಮಹನೀಯರ ಜೀವನ ಚಿತ್ರಗಳ ಸಂಗ್ರಹವಿದು—ರತ್ನರಾಶಿ ಎಂದು ಲೇಖಕರೇ ತಿಳಿಸುತ್ತಾರೆ ನಮ್ಮ ನಾಡಿನ ಬಾಲಕ ಬಾಲಕಿಯರಿಗೆ ಹಾಗೂ ಎಲ್ಲಾ ಸ್ತ್ರೀ ಪುರುಷರಿಗೆ ಈ ಆದರ್ಶ ವ್ಯಕ್ತಿಗಳ ಜೀವನ ಚಿತ್ರಗಳು ಸ್ಫೂರ್ತಿದಾಯಕವಾಗಿ, ಅದರಿಂದ ಮುಂದಿನ ಜನಾಂಗವು ಶಕ್ತಿಪೂರ್ಣವಾಗಿ, ಆ ಮೂಲಕ ನಾವಿಂದು ಪಡೆದ ಸ್ವಾತಂತ್ರ್ಯವು ನಮ್ಮಲ್ಲಿ ಶಾಶ್ವತವಾಗಿ ನೆಲೆನಿಲ್ಲುವಂತಾಗಲೆಂಬುದು ಇದನ್ನು ಬರೆದ ಉದ್ದೇಶವೆಂದೂ ಲೇಖಕರು ಹೇಳುತ್ತಾರೆ.

ಈ ಚಿಕ್ಕ ಗ್ರಂಥದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರಾಜಾರಾಮಮೋಹನರಾಯ, ಗೋಪಾಲಕೃಷ್ಣ ಗೋಖಲೆ, ಮಾನ್ಯ ಶ್ರೀನಿವಾಸ ಶಾಸ್ತ್ರಿ, ಲೋಕಮಾನ್ಯ ತಿಲಕ, ಚಿತ್ತರಂಜನ ದಾಸ, ಮಹಾಕವಿ ಇಕ್ಬಾಲ, ಕವೀಂದ್ರ ರವೀಂದ್ರರು, ಜಗದೀಶ ಚಂದ್ರ ಬೋಸ್, ನೇತಾಜಿ ಸುಭಾಸ ಬೋಸ್ ಮಹಾದೇವ ದೇಸಾಯಿ, ಮೋತೀಲಾಲ ನಹರು ದೇಶಭಕ್ತ ಕಾರ್ನಾಡು ಸದಾಶಿವರಾವ ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರು, ವಲ್ಲಭಭಾಯೀ ಪಟೇಲ, ಗಡಿನಾಡಿನ ಗಾಂಧಿ, ಮೌಲಾನಾ ಆಜಾದ್, ಮಹರ್ಷಿ ಅರವಿಂದ ಘೋಷ್, ಜಯಪ್ರಕಾಶ ನಾರಾಯಣ ಮತ್ತು ಹರಯೋಗಿ ಭನ್ಸಾಲಿ ಇವರಿಷ್ಟು ಮಂದಿಯ ಜೀವನ ಚಿತ್ರಗಳಿರುತ್ತವೆ

ಈ ಜೀವನ ಚಿತ್ರಗಳಲ್ಲಿ ಆಯಾ ವ್ಯಕ್ತಿಗಳ ಜೀವನ ಚರಿತ್ರೆಯ ಮಾಹಿತಿಯನ್ನು ಉತ್ತಮ ರೀತಿಯಿಂದ ಸಂಗ್ರಹಿಸಿ ಕೊಡಲಾಗಿದೆ. ಶೈಲಿಯು ಸರಳವಾಗಿಯೂ ನಿರ್ದಿಷ್ಟವಾಗಿಯೂ ಇರುತ್ತದೆ

ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಓದಲಿಕ್ಕೆ ಕೊಡಲು ಅತ್ಯುಪಯುಕ್ತವಾದ ಪುಸ್ತಕ ಕೆಲವು ಮಂದಿ ಸ್ತ್ರೀ ವ್ಯಕ್ತಿಗಳ ಚಿತ್ರವನ್ನು ಸೇರಿಸಿದರೆ ಸ್ತ್ರೀ ವಾಚಕರಿಗೆ ಇನ್ನಷ್ಟು ಉಪಯುಕ್ತವಾಗುತಿತ್ತು.

ಭಾರತದ ರಾಜ್ಯ ಘಟನೆಯ ಕರಡು — ಘಟನಾ ಸಮಿತಿಯಿಂದ ಸಿದ್ಧವಾದುದು— ಅನುವಾದಕರು ಶ್ರೀ ನಾಡಿಗೇರ ಶಿವರಾಯರು, ಎಂ. ಎ. ಮತ್ತು ಶ್ರೀ ಶಂಕರ ವೆಂಕಟೇಶ ಪಾಟೀಲ—ಕಿತಾಬ ಮಿನಾರ ಪ್ರಕಾಶನ ಧಾರವಾಡ. ಬೆಲೆ 1—8—0.

ಭಾರತ ಘಟನಾ ಸಮಿತಿಯವರು ಘಟನೆಯ ಕರಡನ್ನು ಸಿದ್ಧಗೊಳಿಸಲು ನೇಮಿಸಿದ ಡಾ। ಅಂಬೇಡ್ಕರ ಕಮಿಟಿಯವರು ತಯಾರಿಸಿದ ಆ ಘಟನೆಯನ್ನು ಮುಂದಿನ ನವಂಬರ ತಿಂಗಳಲ್ಲಿ ಘಟನಾ ಸಮಿತಿಯು ಪರಿಶೀಲಿಸಿ ಮಂಜೂರು ಮಾಡಲಿಕ್ಕಿದೆ ಇದನ್ನು ಕನ್ನಡದಲ್ಲಿ ಅನುವಾದಿಸಿ ಸಕಾಲದಲ್ಲಿ ಒದಗಿಸಿದ ಈ ಯತ್ನ ಅಭಿನಂದನೀಯವಿರುತ್ತದೆ

ಪ್ರಕಾಶಕರು ತಮ್ಮ ಮಾತುಗಳಲ್ಲಿ ಈ ಘಟನೆಯ ಕುರಿತು ಕೆಲವು ಟೀಕೆಗಳನ್ನು ಕೊಟ್ಟಿದ್ದಾರೆ ಇವುಗಳ ಕುರಿತು ಭಿನ್ನಾಭಿಪ್ರಾಯವಿರುವುದು ಸಹಜ ಅಂತೂ ಪ್ರತಿಯೊಬ್ಬರು ತಮ್ಮ ಅಭಿಪ್ರಾಯಗಳನ್ನು ಸಕಾಲದಲ್ಲಿ ವ್ಯಕ್ತಗೊಳಿಸಲು ಅನುಕೂಲವಾಗಬೇಕೆಂಬುದೇ ಪ್ರಕಾಶಕರ ಮೂಲ ಉದ್ದೇಶವೆನ್ನಬಹುದು.

ಈ ಬರೆಹದ ಕೆಲವು ಶಬ್ದಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿ ಅರ್ಥವಾಗಲು ಸ್ವಲ್ಪ ತೊಡಕಾಗಬಹುದು. ಉದಾಹರಣೆಗೆ 'ತಂಟೆ' ಎಂಬ ಶಬ್ದ ಯಾವ ಅರ್ಥದಲ್ಲಿ ಉಪಯೋಗಿಸಲಾಗಿದೆಯೋ ಅದು ಇಲ್ಲಿಯವರಿಗೆ ತಿಳಿಯುವಂತಿಲ್ಲ.

ಅಂತೂ ಉಪಯುಕ್ತ ಪ್ರಕಟನೆಯೆಂಬುದು ನಿರ್ವಿವಾದ.

ಜಿಲ್ಲಾ ಬೋರ್ಡಿನ ವರದಿ

ನಮ್ಮ ಜಿಲ್ಲಾ ಬೋರ್ಡಿನ 1947–48ರ ಆಡಳಿತ ವರದಿಯು ಪ್ರಕಟವಾಗಿದೆ. ಅದರಲ್ಲಿನ ಕೆಲ ಮುಖ್ಯಾಂಶಗಳು ಹೀಗಿವೆ: ವರದಿ ವರ್ಷದಲ್ಲಿ 717 ಪಂಚಾಯತ್ ಬೋರ್ಡುಗಳು ಕೆಲಸಮಾಡಿವೆ; ಸುಮಾರು 708 ಮೈಲುಗಳಷ್ಟು ರಸ್ತೆಯನ್ನು ನೋಡಿಕೊಳ್ಳಲಾಗಿದೆ; ಬೋ. ಎ. ಶಾಲೆಗಳಲ್ಲಿ 62,603 ವಿದ್ಯಾರ್ಥಿಗಳಿದ್ದರು, ಜಿ. ಬೋ. ಕ್ಷೇತ್ರದಲ್ಲಿ ಶಾಲಾ ವಯಸ್ಸಿನ ಮಕ್ಕಳು 2,21,805 ಇದ್ದಾರೆ; 1,07,251 ಮಕ್ಕಳಿಗೆ ಇನ್ನೂ ಶಿಕ್ಷಣ ಸೌಕರ್ಯವೊದಗಿಸಬೇಕಾಗಿದೆ. ಜಿಲ್ಲೆಯ 31 ಗ್ರಾಮಗಳಲ್ಲಿ ಕಡ್ಡಾಯ ಶಿಕ್ಷಣವಿದೆ; ಹಿಂದುಳಿದವರಿಗಾಗಿ ಬೋರ್ಡಿನ 5 ಶಾಲೆಗಳಿವೆ. 953 ಹರಿಜನ ವಿದ್ಯಾರ್ಥಿಗಳಿಗೆ ರೂ. 1934 ರಷ್ಟು ರಿಯಾಯತಿ ಗ್ರೇಂಟು ಕೊಡಲಾಗಿದೆ; ಬಜೆಟಿನಲ್ಲಿ ಒದಗಿಸಲಾದ ರೂ. 46020ರಲ್ಲಿ ರೂ. 17,348ರಷ್ಟು ಖರ್ಚಾಗಿದೆ. ಬೋರ್ಡಿನ ಸೆಕೆಂಡರಿ ಶಾಲೆಗಳಲ್ಲಿ 3427 ವಿದ್ಯಾರ್ಥಿಗಳಿದ್ದರು, ಅದರಲ್ಲಿ 461 ವಿದ್ಯಾರ್ಥಿನಿಯರು – 638 ಹಿಂದುಳಿದವರು 4012 ಚದರ ಮೈಲುಗಳ ಈ ಜಿಲ್ಲೆಯಲ್ಲಿ ಎರಡು ಮುನ್ಸಿಪಾಲಿಟಿಗಳ ಹೊರತು ಬೋರ್ಡಿನ 3 ಆಸ್ಪತ್ರೆ, 9 ಡಿಸ್ಪೆನ್ಸರಿ, 22 ಹಳ್ಳಿ ಔಷಧಾಲಯಗಳನ್ನು ಬೋರ್ಡು ಕಾಪಾಡಿ ಬಂದಿದೆ. ಮಲೇರಿಯಾ, ಕ್ಷಯರೋಗಗಳ ಹಾವಳಿ ಜಿಲ್ಲೆಯಲ್ಲಿ ಹೆಚ್ಚಿದೆ. ಶ್ವಾಸಕೋಶ ಸಂಬಂಧ ವ್ಯಾಧಿಗಳಿಂದ 1947ರಲ್ಲಿ ಮೃತರಾದವರ ಸಂಖ್ಯೆ 11977, 14 ಹೆರಿಗೆ ಮತ್ತು ಮಕ್ಕಳ ಹಿತಚಿಂತನೆಯ ಕೇಂದ್ರಗಳನ್ನು ಬೋರ್ಡು ನಡೆಸುತ್ತಲಿದೆ.

ಹಿಂದೀ ವರ್ಗಗಳು

ಮಂಗಳೂರು ಪ್ರಾದೇಶಿಕ ಹಿಂದೂಸ್ತಾನಿ ಪ್ರಚಾರ ಸಮಿತಿಯ ಆಶ್ರಯದಲ್ಲಿ ಪ್ರಾಥಮಿಕ ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳ ವರ್ಗಗಳು ಹೊಸದಾಗಿ ಇದೇ 15ಕ್ಕೆ ಪ್ರಾರಂಭವಾಗಲಿವೆ ಸೇರಲಿಚ್ಛಿಸುವವರು ಸಮಿತಿಯ ಕಾರ್ಯಾಲಯದಲ್ಲಿ (ಕೊಂಗ್ರೆಸ್ ಕಚೇರಿ) ಬೆಳಿಗ್ಗೆ ಗಂಟೆ 8ರಿಂದ 11ರ ವರೆಗೂ, ಕೆನೆರಾ ಗರ್ಲ್ಸ್ ಸ್ಕೂಲಿನ ಪದ್ಮಾವತಿ ಬಾಯಿ ಕಟ್ಟಡದಲ್ಲಿ ತಾ 10 ಮತ್ತು 11ರಂದು ಸಂಜೆ 5ಕ್ಕೂ ತಮ್ಮ ಹೆಸರುಗಳನ್ನು ಕೊಡಬಹುದು ಹೆಚ್ಚಿನ ವಿವರಗಳನ್ನು ಪ್ರಚಾರಕ ಶ್ರೀ ಕೆ ಆರ್ ಕಾರಂತರನ್ನು ವಿಚಾರಿಸತಕ್ಕದ್ದು

ಇದೇ ನವಂಬರದಲ್ಲಿ ನಡೆಯಲಿರುವ ಪ್ರಾರಂಭಿಕ ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರು ತಮ್ಮ ಆವೇದನ ಪತ್ರಗಳನ್ನು ಇದೇ ತಾ 10ರೊಳಗೆ ಸಮಿತಿಯ ಕಚೇರಿಗೆ ಕಳುಹಿಸಿಕೊಡತಕ್ಕದ್ದು ನಂತರ ಬರುವ ಆವೇದನ ಪತ್ರಗಳಿಗೆ ತಾ. 24ರ ವರೆಗೆ ನಾಲ್ಕಾಣೆ ವಿಲಂಬ ಶುಲ್ಕ ವಸೂಲ್ಮಾಡಲಾಗುವುದು.

ಬಿನ್ನಿ ಬಟ್ಟೆಗಳ ಬೆಲೆ

ಮಂಗಳೂರಿಗೆ ಈಗ ಬಂದಿರುವ ಬಿನ್ನಿ ಕಂಪೆನಿ ಬಟ್ಟೆಗಳ ಮೇಲೆ ಮುದ್ರಿತವಾಗಿರುವ ಬೆಲೆಯೊಡನೆ ಸೇಕಡಾ 30ರ ಹೆಚ್ಚಿನ ಬೆಲೆಯನ್ನು ಸೇರಿಸಿ ಗಿರಾಕಿಗಳಿಂದ ಪಡೆಯುವಂತೆ ಬಿನ್ನಿ ಕಂಪೆನಿಯವರು ಚಿಲ್ಲರೆ ವ್ಯಾಪಾರಿಗಳಿಗೆ ಸೂಚಿಸಿರುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಜಿಲ್ಲಾ ಸಮಾಚಾರ

ಹೊಸ ಸ್ಟೇ। ಸ। ಮೆಜಿಸ್ಟ್ರೇಟರು

ನಮ್ಮ ಹೊಸ ಸ್ಟೇ। ಸ। ಮೆಜಿಸ್ಟ್ರೇಟರಾಗಿ ಜ। ಎ. ರಹ್ಮಾನ್ ಸಾಹೇಬರು ಶ್ರೀ ಎಂ. ಶ್ರೀನಿವಾಸರಾಯರಿಂದ ಕಳೆದ ತಾ. 2ರಲ್ಲಿ ಚಾರ್ಜು ವಹಿಸಿಕೊಂಡರು.

ಹವಾಮಾನ

ಮಳೆಯು ಸಮಾಪನಗೊಂಡಿದ್ದು ಬಿಸಿಲುಗಳು ಬೀಳಲಾರಂಭಿಸಿವೆ. ನಗರದಲ್ಲಿ ಶಾಲೆ ಮೈದಾನುಗಳಲ್ಲಿ ಕ್ರಿಕೆಟ್ ಹಾಕ್ಕಿ ಆಟದ ಅಭ್ಯಾಸಗಳಾರಂಭವಾಗಿವೆ ಜಿಲ್ಲೆಯ ಕೆಲವು ಕಡೆಗಳಲ್ಲಿ ಬೆಳೆ ಕಟಾವಿಗೆ ಆರಂಭವಾಗಿದೆಂದು ತಿಳಿದುಬರುತ್ತದೆ.

ಆಢ್ಯರ ನಿಧನ

ಶ್ರೀಮಾನ್ ಕಸ್ತೂರಿ ನಾಗೇಶ್ ಪೈ ಅವರು ಇಂದು ತಾ 10–9–48ನೇ ರಾತ್ರಿ ಸುಮಾರು 9-30ಕ್ಕೆ ತಮ್ಮ ರಥಬೀದಿಯ ನಿವಾಸದಲ್ಲಿ, ಕೆಲವೇ ದಿನಗಳ ಅಸ್ವಸ್ಥದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ದಿವಂಗತರು ಗೌ। ಸಾ। ಬ್ರಾಹ್ಮಣ ಸಮಾಜದ ಸುಪ್ರಸಿದ್ಧ ಕುಟುಂಬಸ್ಥರೂ, ಅಗ್ರ ಮುಖಂಡರೂ, ಉದಾರ ದಾನಿಗಳೂ, ಅಲ್ಲದೆ ಅನುಭವಸ್ಥ ವ್ಯಾಪಾರ ವ್ಯವಹಾರಿಗಳೂ ಆಗಿದ್ದು ತಮ್ಮ ನಯ ವಿನಯಾದಿ ಸದ್ಗುಣಗಳಿಂದಲೂ, ಹೃತ್ಪೂರ್ವಕವಾದ ಸೇವಾಶಕ್ತಿಯಿಂದಲೂ ವಿಶಾಲ ಸಮಾಜದೆಲ್ಲಾ ಕಡೆಗಳಲ್ಲೂ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು ಶ್ರೀಯುತರ ನಿಧನದಿಂದ ಗೌ। ಸಾ। ಸಮಾಜಕ್ಕೆ ಅಪಾರವಾದ ನಷ್ಟವಾಗಿರುತ್ತದೆ ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೂ, ಅವರ ಶೋಕಿತ ಕುಟುಂಬಕ್ಕೆ ಸಮಾಧಾನವನ್ನೂ ಕೊಡಲೆಂದು ಪ್ರಾರ್ಥಿಸುವೆವು

ಮದ್ಯವಿಧಿ ಉಲ್ಲಂಘನೆ ಮೊತ್ತಿತರ ಮೊಕದ್ದಮೆಗಳು

ಅತ್ತಾವರ ಕೆತರಿನ್ ಸೋಜಾ ಬಾಯಿ ಬಳಿ 4 ಗೆಲನ್ ತಾಳೆ ಬೆಲ್ಲದ ಶರಾಬೂ, ಸೆಬೆಸ್ಟಿನ್ ಕೊರೆಯ ಎಂಬಾತನಲ್ಲಿ 1 ಗೆಲನ್ ಅದೇ ಶರಾಬೂ ಸಿಕ್ಕಿರುವುದು. ಪದವು ಕೃಷ್ಣ ಸೆಟ್ಟಿಗಾರನ ಬಳಿ ತಾಳೆಬೆಲ್ಲ ಶರಾಬು ಸಿಕ್ಕಿದ್ದಕ್ಕೆ ಆತನಿಗೆ 6 ತಿಂಗಳ ಕಠಿಣ ಸಜೆಯಾಗಿದೆ ಹಂಪನ್‌ಕಟ್ಟೆ ಪಾಸ್ಕಲ್ ಅಂತೋನಿ ಹಾಲಿಗೆ ಸೇಕಡಾ 41ರಷ್ಟು ನೀರು ಸೇರಿಸಿದಕ್ಕೆ 60 ರೂಪಾಯಿ ಜುಲ್ಮಾನೆಗೊಳಗಾಗಿದ್ದಾನೆ

ಸಣ್ಣಪುಟ್ಟ ಕಳವು ಮಾಡಿದ ಕೊಂಚಾಡಿಯ ದೂಜೆ ಪೆರ್ನಾಂದಿಸ್ ಎಂಬವನಿಗೆ 6 ವಾರಗಳ ಕಠಿಣ ಸಜೆಯಾಗಿದೆ

ಆದಂ ಸಾಹೇಬ್ ಎಂಬವರ ಆಡು ಕದ್ದ ಹುಸೇನ್ ಬ್ಯಾರಿ ಎಂಬಾತನಿಗೆ 1 ತಿಂಗಳ ಕಠಿಣ ಸಜೆಯಾಗಿದೆ

ಗೋಳಿಕಟ್ಟೆ ಬಜಾರಿನ ಮರ್ಕೇರಿ ಬ್ಯಾರಿ ಎಂಬಾತನ ವಶ ಒಂದು ಮುಡಿ ಕುಚ್ಚಿಗೆ ಅಕ್ಕಿ ಇದ್ದು ಅದು ಮೋಸದಿಂದ ಅವನ ಕೈಸೇರಿದ್ದರಿಂದ ಅವನಿಗೆ 25 ರೂ ಜುಲ್ಮಾನೆ, ಅಕ್ಕಿ ಸರಕಾರ ವಶವಾಯಿತು.

ಕಳೆದ ತಾ 4ರಲ್ಲಿ ಬಂಟ್ವಾಳದಿಂದ ದೋಣಿಯಲ್ಲಿ ತಂದು ಧಕ್ಕೆಯಲ್ಲಿ ಗಾಡಿಗೆ ಹಾಕುವಾಗ ಸುಮಾರು 14 ಮುಡಿ ಅವಲಕ್ಕಿ 2 ಮುಡಿ ಅರಳು ಸಿಕ್ಕಿದ್ದು ಇದರೊಂದಿಗೆ ಮೂರು ಮಂದಿಯನ್ನು ಕೈದು ಮಾಡಲಾಗಿದೆ.

ಪಡಪಣಂಬೂರು

ಕಳೆದ ತಾ. ೧ರಂದು ಇಲ್ಲಿಯ ಬೋ. ಹಾ ಎಲಿಮೆಂಟರಿ ಶಾಲಾ ಹೊಸ ಕಟ್ಟಡದ ಶಂಕು ಸ್ಥಾಪನಾ ಕಾರ್ಯವು ಮಂಗಳೂರು ಸಾಹುಕಾರ್ ಎಚ್ ಸೋಮಸುಂದರರವರಿಂದ ನೆರವೇರಿಸಲ್ಪಟ್ಟಿತು ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ಅವರೇ ವಹಿಸಿದ್ದು ಕಟ್ಟಡಕ್ಕೆ ಬೇಕಾಗುವ ಹೆಂಚನ್ನು ನಾವು ಕೊಡುವುದಾಗಿ ಅವರು ವಾಗ್ದಾನ ಮಾಡಿದರು

ವಿಟ್ಲ

ಕಳೆದ ತಾ 2ರಂದು ಸ್ಥಳೀಯ ಕೊಂಗ್ರೆಸ್ ಕಾರ್ಯಕರ್ತರ ಕೂಡುವಿಕೆಯಲ್ಲಿ ಇಲ್ಲಿಯ ಹೋಟೆಲು ಕೆಲಸಗಾರರ ಒಂದು ಸಂಘವು ಸ್ಥಾಪಿಸಲ್ಪಟ್ಟಿತು ಈ ಸಂಘವು ಯಾವ ರಾಜಕೀಯ ಪಂಗಡಕ್ಕೆ ಸೇರದೆ ಸ್ವತಂತ್ರವಾಗಿದ್ದು ಕಾಂಗ್ರೆಸಿನ ತತ್ವಗಳಂತೆ ನಡೆಯುವಂತಾದ್ದಾಗಬೇಕೆಂದೂ, ನಗರಗಳಲ್ಲಿಂತೆ ಇಲ್ಲಿಯ ಮಾಲಕರು ಕೆಲಸಗಾರರಿಗೆ ಒಂದು ದಿನ ಸಂಬಳ ಸಹಿತ ರಜೆ ಕೊಡಬೇಕೆಂದು ವಿನಂತಿಕೊಳ್ಳುವ ಠರಾವುಗಳಾದುವು

ತಾಳಿಬೆಲ್ಲ ಸಹಕಾರ ಸಂಘ ವಿಟ್ಲ

ಕಳೆದ ತಾ 2ರಂದು ಈ ಸಂಘದ ಮಹಾಸಭೆ ಅದರ ಆಫೀಸಿನಲ್ಲಿ ಸ್ಥಳೀಯ ಕೊಂಗ್ರೆಸ್ ಕಾರ್ಯದರ್ಶಿ ಶ್ರೀ ಎ ಜಿ ತಿರುಮಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಈ ಸಂಘಗಳ ಸುಪ್ರವೈಸರರು ಸಂಘಗಳ ಆವಶ್ಯಕತೆ, ಇವುಗಳಿಂದಾಗಿ ಬಿಲ್ಲವರ ಏಳಿಗೆಯ ದಾರಿಗಳ ವಿಚಾರ ಮೊದಲಾದ ವಿಷಯಗಳ ಕುರಿತು ತುಳುವಿನಲ್ಲಿ ಮುಂದಟ್ಟಾಗುವಂತೆ ಮಾತನಾಡಿದರು

ಸುಳ್ಯದಲ್ಲಿ ಸಂತೆ

ಸುಳ್ಯ ಬಸ್ಸು ಆಫೀಸಿನ ಬಳಿಯಲ್ಲಿ ಬರುವ ಅಕ್ಟೋಬರ 2ನೇ ತಾರೀಕಿನ ಆದಿತ್ಯವಾರದಿಂದ ಪ್ರತಿ ಆದಿತ್ಯವಾರ ಸಂತೆ ಆಗುವುದೆಂಬುದಾಗಿ ತಿಳಿದು ಬಂದಿದೆ

ವಸತಿಗೃಹ ಸೌಕರ್ಯ

ಸಿಲೀಶ್ವರದ 50ನೇಯಿಗೆ ಕುಟುಂಬದವರಿಗೆ ವಸತಿಗೃಹಗಳನ್ನು ಕಟ್ಟಿಸುವ ಒಗ್ಗೆ ಅಲ್ಲಿಯ ಸಹಕಾರ ಸಂಘದವರು ರೂ 50 ಸಾವಿರ ಖರ್ಚು ಮಾಡಲು ನಿಶ್ಚಯಿಸಿರುವರಲ್ಲದೆ ಅಷ್ಟೇ ಮೊಬಲಗನ್ನು ಸರಕಾರದಿಂದ 20 ವರ್ಷಗಳಲ್ಲಿ ಮರುಪಾವತಿ ಮಾಡುವ ಶರ್ತದ ಮೇಲೆ ಪಡಕೊಳ್ಳಲಿರುವರು ಎಂದು ತಿಳಿದುಬರುತ್ತದೆ

ಕುರುಕಾಲು

ಈ ಗ್ರಾಮಸ್ಥರು ಡಾ। ಪಿ ಶ್ರೀನಿವಾಸ ಭಟ್ರ ಅಧ್ಯಕ್ಷತೆಯಲ್ಲಿ ಸಭೆಗೂಡಿ ವಿವಿಧ ಜಾತಿಯ ಸಸಿಗಳನ್ನು ನೆಡುವ ಸಮಾರಂಭವನ್ನು ಜರಗಿಸಿದರು ಇಲ್ಲಿಯ ಗ್ರಾಮಾಭಿವೃದ್ಧಿ ಸಂಘದವರು ಸಸಿ ಸಪ್ತಾಹದ ಕಾಲದಲ್ಲಿ ತಮ್ಮ ಗ್ರಾಮದಲ್ಲಿ ನಡಲ್ಪಟ್ಟ ಗಿಡ ಮರಗಳ ಸಂಖ್ಯೆ ಜಾತಿವಾರುಗಳ ಖಾನೇಸುಮಾರಿಯನ್ನು ತಯಾರಿಸುತ್ತಿರುವರು.

ಪುತ್ತೂರು

ದಿಲ್ಲಿಯಲ್ಲಿ ಶ್ರೀ ಮಿರಚ್‌ಕಾರರಲ್ಲಿ ಅಡಿಗೆ ಕೆಲಸಕ್ಕೆ ನಿಂತು ಅಲ್ಲಿಂದ ಚಿನ್ನದ ಗಡಿಯಾರ (ರೂ. 750 ಬೆಲೆಯ) ಮತ್ತು ನಗದಿ ಹಣ ಇತ್ಯಾದಿ ಕಳುವು ಮಾಡಿ ತಪ್ಪಿಸಿ ಇಲ್ಲಿಗೆ ಬಂದು ಇಲ್ಲಿ ಒಂದು ಅಂಗಡಿಯಿಟ್ಟುಕೊಂಡಿದ್ದ ಬ್ರಾಹ್ಮಣ ತರುಣನೊಬ್ಬನು ಆರೋಪಿಯೆಂದು ಗೊತ್ತುಹಚ್ಚಿ ತಾ 30ರಲ್ಲು ಅವನನ್ನು ಇಲ್ಲಿಯ ಪೋಲೀಸರು ಸೆರೆಹಿಡಿದು ರಿಮಾಂಡಿನಲ್ಲಿಟ್ಟಿರುವರು. ಕಳುವಿನ ಕೆಲವೊಂದು ವಸ್ತುಗಳೂ ಅವನ ಬಳಿ ದೊರಕಿದ್ದು ಮುಂದಿನ ವ್ಯವಹರಣೆಯ ಏರ್ಪಾಡು ನಡೆಯುತ್ತಲಿದೆಯೆಂದು ತಿಳಿದುಬರುತ್ತದೆ.

ಪೈವಳಿಗೆ
ಕಳವು ಪತ್ತೆ

ಈಗ ಸುಮಾರು ಎರಡು ಮೂರು ತಿಂಗಳುಗಳಿಂದೀಚೆ ಕೆಲವು ಭೂತಸ್ಥಾನ, ದೇವಸ್ಥಾನ, ಮಸೀದಿ, ಮಗ್ಗೆಶಿಗಳ ಕಳವು ನಡೆಯುತ್ತಾ ಇದ್ದು ಪತ್ತೆ ಹಚ್ಚಲು ಅಸಾಧ್ಯವಾಗಿತ್ತು, ದೈವವಶಾತ್ ಈ ಪುಣ್ಯ ಕಾರ್ಯದಲ್ಲಿ ಪೈವಳಿಕೆ ಪಟೇಲರಾದ ಶ್ರೀ ಕೆ ಆರ್. ಬಲ್ಲಾಳರು ಕೈಹಚ್ಚಿ ಪೈವಳಿಕೆ ಮಂಗಲ್ಪಾಡಿಯಲ್ಲಿ ಬಿಕರಿಯಾಗಿದ್ದ ಚಿನ್ನ ಬೆಳ್ಳಿ ಸೊತ್ತುಗಳು ಕಳವು ಮಾಲೆಂದು ಅನುಮಾನದಿಂದ ಹಿಡಿದು ಮಂಜೇಶ್ವರ ಪೋಲೀಸ್ ಸ್ಟೇಶನಿಗೆ ತಿಳಿಸಿ ಬಿಕರಿ ಮಾಡಿದ ವ್ಯಕ್ತಿಗಳನ್ನು ಹಿಡಿಯಲು ಕೂಡಾ ಸಹಾಯ ಮಾಡಿ ಸರಕಾರದ ಪ್ರೀತಿಗೆ ಪಾತ್ರರಾಗಿರುತ್ತಾರೆ ಸ್ಟೇಶನಿನವರು ಕೂಡಾ ತುಂಬಾ ಮೋಸನತ್ತು ವಹಿಸಿ ಗುಮಾಸಿಗಳಾದ ವಿಂಚಿ ಕುಂಞಾಂಣ ಒಂಟಿ ಮತ್ತು ಶೇಣಿ ತಮ್ಮಂಣ್ಣ ಒಂಟಿ ಎಂಬಿಬ್ಬರನ್ನು ಕೈದುಮಾಡಿ ಮುಂದಿನ ಪತ್ತೆ ನಡೆಸುದಲ್ಲಿ ಕಳವಿನ ಹೆಚ್ಚಿನ ಸೊತ್ತು ಸಿಕ್ಕಿರುತ್ತದೆ ಸದರಿ ಚಿನ್ನ ಬೆಳ್ಳಿ ಮುಂತಾದುವು ಕಾಸರಗೋಡು ಕಸಬೆಯ ಕೊರಕೋಡ್ಲು ಮಹಾಗಣಪತಿ ಅಮ್ಮನವರ ಮತ್ತು ಕುಂಬಳೆ ಸವಿಸಾಪದ ಪುತ್ತಿಗೆ ದೇವಸ್ಥಾನದ ಸೊತ್ತುಗಳೆಂದು ತಿಳುವಳಿಕೆ ಬಂದಿರುತ್ತದೆ ಇನ್ನು ಪತ್ತೆ ಹಚ್ಚುವ ಕೆಲಸವು ಭರದಿಂದ ಸಾಗುತ್ತಿದೆ ಇಂತಹ ಸ್ತುತ್ಯ ಕಾರ್ಯಗಳಲ್ಲಿ ಇನ್ನಷ್ಟು ಕೆಲಸ ಮಾಡಲು ದೇವರು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ

೧೦೦ ರೂ ಬಹುಮಾನ

ಆಶ್ಚರ್ಯಕಾರಕ

ಸಿದ್ಧ ಕವಚ

ಈ ಕವಚ ಧಾರಣೆಯಿಂದ ಅಸಾಧ್ಯಗಳೆಲ್ಲ ಸಾಧಿಸಿಕೊಳ್ಳಬಹುದು ಇದರ ಸಿದ್ಧಿಗೆ ಯಾವ ಸಂಕಷ್ಟವೂ ಇಲ್ಲ, ಯಾವ ಸಿದ್ಧತೆಯೂ ಬೇಕಾಗಿಲ್ಲ ನಿಮಗೆ ಬೇಕಾದ ವ್ಯಕ್ತಿ ಅವಳಾಗಲಿ ಅವನ (ನಿಮ್ಮ ವಶವರ್ತಿಯಾಗುವುದು) ದುಷ್ಟ ಗ್ರಹಬಾಧೆಗಳನ್ನು ನಿವಾರಿಸುವುದು ವೈರಿಗಳನ್ನು ಸೋಲಿಸಿ ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಸೋದ್ಯ, ಉದ್ಯೋಗ ಐಶ್ವರ್ಯಾದಿಗಳಲ್ಲಿ ಜಯವನ್ನೊದಗಿಸುವುದು ರೋಗದಿಂದ ಮತ್ತು ಸಾವಿನಿಂದ ಉದ್ಧರಿಸುವುದು ಅದೃಷ್ಟಶಾಲಿಗಳಾಗಿ ಮಾಡುವುದು ಇದು ಸುಳ್ಳೆಂದು ಸಿದ್ಧಪಡಿಸಿದವರಿಗೆ ೧೦೦ ರೂ ಬಹುಮಾನ.

ತಾಮ್ರ, ರೂ ೨–೮–೦ ಬೆಳ್ಳಿ, ರೂ. ೩–೦–೦ ಚಿನ್ನ, ರೂ ೧೫–೦–೦

Shree Panchvati Ashram No 2.
P O Katri Sarai (Gaya)

ವೃತ್ತ ವೈವಿಧ್ಯ

ಮಂತ್ರಿಗಳನ್ನೇಕೆ ಕೋರ್ಟಿಗೆಳೆಯಬಾರದು?

ಸರಕಾರದ ಮಂತ್ರಿಗಳನ್ನು-ಅವರು ಮಂತ್ರಿಗಳಾಗಿರುವಾಗ ಮಾತ್ರ-ಯಾವ ಕಾರಣದಿಂದಲೂ ನ್ಯಾಯಸ್ಥಾನಕ್ಕೆ ಬರುವಂತೆ ಮಾಡಲಾಗುವುದಿಲ್ಲವೆಂಬ ಮಧ್ಯ ಪ್ರಾಂತ್ಯ ಸರಕಾರದ ಆಜ್ಞೆಯೊಂದನ್ನು ಟೀಕಿಸುತ್ತ 'ಹಿತವಾದ' ಪತ್ರಿಕೆಯು 'ಪ್ರಜಾಪ್ರಭುತ್ವದ ನ್ಯಾಯಾಲಯದೆದುರು ಎಲ್ಲರೂ ಸಮಾನರು' ಎಂದು ಪ್ರತಿಪಾದಿಸಿ ಕೆಲವು ನಿದರ್ಶನಗಳನ್ನು ಕೊಟ್ಟಿದೆ:

ಐದನೇ ಜೋರ್ಜ್ ಅರಸರು ರಾಜಕುಮಾರರಾಗಿರುವಾಗ ಒಂದು ಸಲ ಸಾಕ್ಷಿದಾರರಾಗಿ ನ್ಯಾಯಾಲಯದಲ್ಲಿ ನಿಲ್ಲಿಸಲ್ಪಟ್ಟಿದ್ದರು ಆಗವರು ಸ್ಥಾನಮಾನದ ದೆಸೆಯಿಂದ ವಿಶೇಷ ಹಕ್ಕನ್ನು ಪ್ರತಿಪಾದಿಸದೆ ನೇರವಾಗಿ ಸಾಕ್ಷಿ ಹೇಳಲು ಬಂದಿದ್ದರು

ಬ್ರಿಟಿಷ್ ಮಂತ್ರಿಗಳು ಕೂಡ ಈ ಹಕ್ಕು ಬೇಕೆನ್ನುವುದಿಲ್ಲ ಚರ್ಚಿಲ್ಲರು ಮಂತ್ರಿಗಳಾಗಿದ್ದಾಗ ಒಂದು ಸಲ ಐದು ಗಂಟೆಗಳ ಕಾಲ ಸಾಕ್ಷಿದಾರರಾಗಿ ನ್ಯಾಯಾಲಯದ ಚೌಕಟ್ಟಿನಲ್ಲಿ ನಿಲ್ಲಿಸಲ್ಪಟ್ಟಿದ್ದು ಎದುರುಪಕ್ಷದ ವಕೀಲರು ಅವರನ್ನು ತೀಕ್ಷ್ಣ ಮರುಸವಾಲುಗಳಿಂದ ಮೇಲೆ ಕೆಳಗೆ ಮಾಡಿದ್ದರಂತೆ "ನ್ಯಾಯ ನಿರ್ವಹಣೆಯು ಸುಗಮವಾಗಿ ಸಾಗಬೇಕಾದರೆ ಯಾರಿಗೂ ಸ್ಥಾನಮಾನ ರಕ್ಷಣೆಯ ವಿಶೇಷ ಹಕ್ಕುಗಳಿರಬಾರದು ಹೀಗೆಂದು ಹಿತವಾದ ಪತ್ರಿಕೆಯು ಸೂಚಿಸುತ್ತದೆ

ದೇಶಿ ಅರಸನ ಬಂದೂಕು ಹೆದರಿಕೆ

ಮಧ್ಯ ಪ್ರಾಂತ್ಯದ ಸಂಸ್ಥಾನಗಳಲ್ಲಿ ಒಂದಾದ ಇಲ್ಲಿಯ ಮಹಾರಾಜರು ಪಿಸ್ತೂಲುಗಳು-ಮಾತನಾಡಿದರೆ ಪಿಸ್ತೂಲನ್ನು ಹೊರಗೆಳೆಯುವರು ಇದುತನಕ ಇಪ್ಪತ್ತೈದು ಸಲಕ್ಕೂ ಮಿಕ್ಕಿ ಈ ಮಹಾರಾಜರ ತಮ್ಮ ಪಿಸ್ತೂಲಿನಿಂದ ಹೊಡೆದು ಹಾಕುವೆನೆಂಬ ಬೆದರಿಕೆ ಹಾಕಿದ್ದಾಯಿತು ಇತ್ತೀಚೆಗೆ ಫುಟ್‌ಬಾಲ್ ಪ್ರಿಯರಾದ ಈ ಅರಸರು ಒಂದು ಪಂದ್ಯಾಟದಲ್ಲಿ ನಿರೀಕ್ಷಕರಾಗಿ (ಅಂಪಾಯರ್) ನಿಂತಿದ್ದರು ಇವರು ಕೊಟ್ಟ ತೀರ್ಪನ್ನು ಹೀಯಾಳಿಸಿ ಪ್ರೇಕ್ಷಕರೊಳಗಿನ ಚಿಕ್ಕಪುಟ್ಟ ಬಾಲಕರು ಕಾಟೆಬ್ಬಿಸಲು ಇವರು ಪುನಃ ಪಿಸ್ತೂಲು ತೆಗೆದು ಹೊಡೆಯಲೋಡಿದರಂತೆ ಕಡೆಗಂತೂ ಕೆಲವರು ಇವರನ್ನು ಸಮಾಧಾನಿಸಿ ಈ ವಿಷಯವನ್ನು ಪೋಲಿಸರಿಗೆ ದೂರೊಯ್ಯಲು ಚತ್ತೀಸ್ ಘರ್ ಸಂಸ್ಥಾನಗಳ ಕಮಿಶನರರು ಇವರ ಬಳಿ ಇದ್ದ 50 ಪಿಸ್ತೂಲುಗಳನ್ನು ಅವುಗಳ ಲ್ಯಾಸೆನ್ಸಿನೊಂದಿಗೆ ಹಿಂದಕ್ಕೆ ತರಿಸಿದರು.

ರಾಜಾಜಿಯ ಸಾವಕಾಶದ ಊಟ

ಲಂಡನಿನ ಟಿಟ್ ಬಿಟ್ಸ್ ಪತ್ರಿಕೆ ಭಾರತದ ಪ್ರಥಮ ಹಿಂದೀ ಗವರ್ನರ್ ಜನರಲ್ಲರ ಕುರಿತು ಹೀಗೆ ಬರೆದಿದೆ

"ಮೌಂಟ್ ಬೇಟನ್ನರಿಂದ ಕಳೆದ ಜೂನ್ ಅಂತ್ಯದಲ್ಲಿ ಗವರ್ನರ್ ಜನರಲ್ ಪದವನ್ನು ಸ್ವೀಕರಿಸಿದ ತೆಳ್ಳಗಿನ ಕಪ್ಪು ಕನ್ನಡಕಧಾರಿಗಳಾದ ಚಕ್ರವರ್ತಿ ರಾಜಗೋಪಾಲಾಚಾರ್ಯರು ಒಂದು ಸಲ ವಿನೋದವಾಗಿ ತಮ್ಮ ಹೆಸರು ಪತ್ರಿಕೆಗಳ ಶಿರೋನಾಮೆಯನ್ನಲಂಕರಿಸುವುದಿಲ್ಲ. ಯಾಕೆಂದರೆ ಸಾಮಾನ್ಯ ಪತ್ರಿಕೆಯ ಅಗಲಗಲ್ಲಿ 'ಅದು ಹಿಡಿಯುವುದಿಲ್ಲ'ವೆಂದಿದ್ದರು.

"ಇಷ್ಟೊಂದು ಉದ್ದದ ನಾಮಧೇಯವಲ್ಲದಿದ್ದರೆ ನಾನು ಹೆಸರು ವಾಸಿಯಾಗುತಿದ್ದೆ" ಹೀಗೆಂದವರು ತಿಳಿಸಿದ್ದರು ಅವರು ಮಹತ್ವಾಕರ್ಷಣೆಯ ವ್ಯಕ್ತಿಗಳು, ಮಾದಕ ಪದಾರ್ಥಗಳ ಸಂಪೂರ್ಣ ತ್ಯಾಗಿಗಳು, ಮಾತ್ರವಲ್ಲ ಸಂಪೂರ್ಣ ಸಸ್ಯಾಹಾರಿಗಳೂ ಆಗಿರುವರು. ಮೌಂಟ್‌ಬೇಟನ್ನರ ಸ್ಥಾನದಲ್ಲಿ ಒಂದು ಸಲ ಇವರು ಹಂಗಾಮಿಯಾಗಿ ನೇಮಿಸಲ್ಪಟ್ಟಾಗ ಒಂದು ಔತಣ ಕೂಟವನ್ನೇರ್ಪಡಿಸಿದ್ದರು ಸ್ನೇಹಿತರಿಂದ 'ಸಿ ಆರ್' ಎಂದು ಕರೆಯಲ್ಪಡುವ ಇವರು ಉಣ್ಣುವುದು ಮೆಲ್ಲಗೆ, ಇಷ್ಟಾದರೂ ಹತ್ತಿರ ಕೂತ ಸ್ನೇಹಿತರು ಇವರಿಗಿಂತ ಮುಂಚಿತವಾಗಿ ತಮ್ಮ ಊಟವನ್ನು ಮುಗಿಸದಾದರು. ಕಡೆಗೆ ಇದರ ಕಾರಣ ತಿಳಿಯಿತು, ಅವರು ಉಣ್ಣುವುದು ಕೇವಲ್ ಒಂದು ತಟ್ಟೆಯಷ್ಟು ಮಾತ್ರ

ಪಾಕಿಸ್ಥಾನದಲ್ಲಿ ವಿವಾಹ ಕುಂದು

ಲಾಹೋರಿನಲ್ಲಿ ಜನನದ ಸಂಖ್ಯೆಗಳು ಹೆಚ್ಚುತ್ತಿವೆ ಆದರೆ ವಿವಾಹಗಳ ಸಂಖ್ಯೆ ಶೇಕಡಾ 70ರಷ್ಟು ಕಡಿಮೆಯಾಗಿದೆಯಂತೆ ಪಾಕಿಸ್ತಾನದ ಗಂಡಸರು ಹೆಚ್ಚೆಚ್ಚಾಗಿ ಬ್ರಹ್ಮಚಾರಿಗಳಾಗಿ ಉಳಿಯಲು ಆಶಿಸುವರಂತೆ. ಪಾಕಿಸ್ತಾನದಲ್ಲಿ ವಿವಾಹ ವಯಸ್ಸಿನ ಸ್ತ್ರೀಯರ ಸಂಖ್ಯೆ ಗಂಡಸರಿಗಿಂತಲೂ ಹೆಚ್ಚಾಗಿದ್ದರೂ ಅಲ್ಲಿನ ಪುರುಷರ ಈ ಧೋರಣೆಯಿಂದ ಸರಕಾರಕ್ಕೆ ವಿಮಂಚನೆಯುಂಟಾಗಿರುವುದಂತೆ. ಇದಕ್ಕೆ ಅಲ್ಲಿನ ಸ್ತ್ರೀಯರು ಅಶಿಕ್ಷಿತರಾಗಿರುವುದೇ ಕಾರಣವೆಂದು ನಿರೀಕ್ಷಕರು ತಿಳಿಸುತ್ತಾರೆ ಇಷ್ಟಾದರೂ 'ಡೋನ್' ಪತ್ರಿಕೆಯಲ್ಲಿನ ಒಂದು ಲೇಖದಲ್ಲಿ "ಪ್ರತಿಯೊಬ್ಬ ಪಾಕಿಯು ನಾಲ್ಕರು ಹೆಂಡರನ್ನು ಕಟ್ಟಿಕೊಂಡು ಜನಸಂಖ್ಯೆಯನ್ನು ಹೆಚ್ಚಿಸಬೇಕು" ಎಂದು ಸೂಚಿಸಲಾಗಿದೆ ಅಲ್ಲಿನ ಸೀಖ್ ಜನರಲ್ಲಿ 40 ಲಕ್ಷ ಸ್ತ್ರೀಯರು ಹೆಚ್ಚಾಗಿರುವುದನ್ನು ಆ ಲೇಖನದಲ್ಲಿ ತೋರಿಸಲಾಗಿದೆ.

ಕಿ ವಿನಾಶಕ ಜಾಂಬಕು ಉತ್ತಮ ಮುಲಾಮು ಜಾಂಬಕಿನಲ್ಲಿರುವ ಶುದ್ಧವಾದ ಗಿಡಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ಕಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಯಾವತ್ತೂ ಚರ್ಮ ವ್ಯಾದಿಯನ್ನು ಗುಣಪಡಿಸಿ ಆರೋಗ್ಯದಲ್ಲಿರಿಸುವುದು

ಜಗತ್ಪ್ರಸಿದ್ಧ ಜಾಂಬಕು ಮುಲಾಮು ಚರ್ಮ ವ್ಯಾದಿಯನ್ನು ಮುದ್ದಣವನ್ನು ತುರಿಕಜ್ಜಿ ಕಾಲುಕುಂಟು ಮೊದಲಾದ ಯಾವತ್ತೂ ರೋಗವನ್ನು ಗುಣಪಡಿಸುವುದು

ಜಾಂಬಕನ್ನೇ ಉಪಯೋಗಿಸಿರಿ



Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು

ವಿಷ್ಯ್ತಕ ವಸ್ತು ವಿರಹಿತವಾದ್ದು

ಪೆಸೆಂಜರರ ಅವಗಾಹನೆ ಬಗ್ಗೆ

G O ನಂಬ್ರ 4237ಕ್ಕೆ ಅನ್ವಯಿಸಿ R T O ಕೊಯಂಬುತ್ತೂರು, ಇವರಿಂದ ಬಂದ ನಂಬ್ರ R 25019 A-47ನೇ ಹುಕುಮಿನಲ್ಲಿ, ಘಾಟಿ ರಸ್ತೆಗಳಲ್ಲಿ, ಮೈಲಿಗೆ 0-1 0 ಪ್ರಕಾರವೂ, ಎಕ್ಸಪ್ರೆಸು ಸರ್ವಿಸುಗಳಿಗೆ ಮತ್ತು ಜಾತ್ರೆ, ಉತ್ಸವ ಸಮಾರಂಭಗಳ ಬಗ್ಗೆ ರವಾನೆಗುವ ಸ್ಪೆಶ್ಯಲುಗಳಿಗೆ ಯುಜುವಲ್ ಸರ್ವಿಸು ರೇಟಿಗಿಂತ 50% ಜಾಸ್ತಿ ಹಿಡಿದು ಟಿಕೇಟು ಬುಕ್ ಮಾಡಬಹುದೆಂಬುದಾಗಿ ತಿಳಿಸಿದಂತೆ, ಇದೇ ತಾರೀಕು 25—12—1947ರ ಲಾಗಾಯ್ತು ಘಾಟಿ ಸೆಕ್ಷನುಗಳಲ್ಲಿ ಅಂದರೆ ಚಾರ್ಮಾಡಿ, ಬಾಳೆ ಬರೆ, ಶಿರಾಡಿ ಗಡಿ ಮತ್ತು ಸಂಪಾಜೆ, ಮಡಿಕೇರಿ ಘಾಟಿ ರಸ್ತೆಗಳಲ್ಲಿ ಮೈಲು ಒಂದರ 0—1—0ರಂತೆ ಟಿಕೇಟು ಬುಕ್ ಮಾಡಲಾಗುವುದಲ್ಲದೆ, ಮಂಗಳೂರು, ಕಾರ್ಕಳ, ಉಡ್ಪಿ ಎಕ್ಸಪ್ರೆಸ್ಸ್ ಸರ್ವಿಸುಗಳಿಗೆ ಮತ್ತು ಮುಲ್ಕಿ ಪ್ರತಿಷ್ಠೆ ಹುಣ್ಣಿಮೆ, ಉಡ್ಪಿ ಪರ್ಯಾಯ ಇತ್ಯಾದಿ ಜಾತ್ರೆಗಳ ಬಗ್ಗೆ ರವಾನೆಗುವ ಸ್ಪೆಶಲು ಸರ್ವಿಸುಗಳಿಗೆ ಕೂಡಾ ಯುಜುವಲ್ ಸರ್ವಿಸು ರೇಟಿಗಿಂತ 50% ಅಂದ್ರೆ ಪ್ರಕೃತ ಚ್ಯಾರಿಯಲ್ಲಿರುವ ಟಿಕೇಟು ಚಾರ್ಜಿನ ಒಂದುವರೆ ಪಾಲಷ್ಟು ಜಾಸ್ತಿ ರೇಟಿನಲ್ಲಿ ಟಿಕೇಟು ಬುಕ್ ಮಾಡಲ್ಪಡುತ್ತದೆಂಬ ಸಂಗ್ತಿಯನ್ನು ತಿಳಿಸಲಪೇಕ್ಷಿಸುತ್ತೇವೆ

ಜೊಯಿಂಟ್ ಮೆನೇಜರ್ಸ್,

ಮಂಗಳೂರು.
23-12-1947.

ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD
(Incorporated in British India)
Estd: 1906.
Head Office: UDIPI, South India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves	Rs. 8,66,715

BANKING BUSINESS OF EVERY DESCRIPTION TRANSACTED.

V. R. Kamath, B.A., L.L.B.
General Manager.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(1908 ರಲ್ಲಿ ಸ್ಥಾಪಿತವಾದುದು.)

ಅತೀ ಕಡಿಮೆ ವೆಚ್ಚದಲ್ಲಿ ಅತೀ ಹೆಚ್ಚಿನ ಸೌಕರ್ಯಗಳನ್ನೊದಗಿಸಿಕೊಡುವ ಶ್ರೇಷ್ಠ ವಿಮಾ ಸಂಸ್ಥೆಗಳಲ್ಲೊಂದು.

ಪ್ರಾಮುಖ್ಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಆಫೀಸುಗಳು:

ಬೊಂಬಾಯಿ, ಮದ್ರಾಸು, ಮಧುರೆ, ಬೆಂಗಳೂರು, ಕೊಯಮುತ್ತೂರು, ಟ್ರಿವೆಂಡ್ರಂ, ಕಲ್ಲಿಕೋಟೆ ಮತ್ತು ಮಂಗಳೂರುಗಳಲ್ಲಿವೆ.

ವಿಮಾ ವ್ಯವಹಾರ ಕ್ಷೇತ್ರದಲ್ಲಿ ಕಳೆದ 38 ವರ್ಷಗಳಿಂದ ಇದ್ದವರಾದ್ದರಿಂದ ಜನಾಂಗದ ಭೌತಿಕ ಶ್ರೇಯೋಭಿವೃದ್ಧಿಗೆ ಸಲ್ಲಿಸಿದ ನಮ್ಮ ನಮ್ರ ಸೇವೆಗಾಗಿ ನಾವು ಹೆಮ್ಮೆ ಪಡುತ್ತೇವೆ.

ಪ್ರಾತಿನಿಧ್ಯಕ್ಕಾಗಲಿ ಇಲ್ಲವೆ ವಿಮೆ ಇಳಿಸಲಿಕ್ಕಾಗಲಿ ಯಾವದಾದರೊಂದು ನಮ್ಮ ಆಫೀಸಿಗೆ ಪ್ರತ್ಯಕ್ಷ ಸಂಪರ್ಕ ಮಾಡಿ ಇಲ್ಲವೆ ಬರೆಯಿರಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಟ್ಟಿಸುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

WANTING
17, SEPTEMBER
TO
DECEMBER